ಬರೀ ನಾಟಕ ಅಲ್ಲ



ಪದ್ಮಾ ಶ್ರೀಧರ್

ಬರೀ ನಾಟಕ ಅಲ್ಲ..

ಶ್ರೀಮತಿ ಪದ್ಮಾ ಶ್ರೀಧರ್

ಕಣಿವೆ ಪ್ರಕಾಶನ
192, 12ನೇ ಮೇಯಿನ್, ಕಾಮಾಕ್ಷಿ ಆಸ್ಪತ್ರೆ ರಸ್ತೆ,
ಸರಸ್ವತಿಪುರಂ, ಮೈಸೂರು–570009

BAREE NATAKA ALLA- A collection of short stories by Smt. Padma Shreedhar, 'Chiguru', 1248, 7th B Cross, New town, Yalahanka Upanagara, Bangaloru 560 106 and published by M/S KANIVE PRAKASHANA, 192, 12th Main, Kamakshi Hospital road, Saraswathipuram, Mysore-570009

No. of pages: Demi 324
Printed on 70 GSM Maplitho Paper
Year of First Edition: 2010

Price: Rs. 160/-

DTP: Smt. H L Sheela, Mysore.

Impression at: Harshini Printers, Bangalore.

ಮುನ್ನುಡಿ

ಓದುಗರೇ ನಮಸ್ಕಾರಗಳು,

'ಬರೀ ನಾಟಕ ಅಲ್ಲ...' ಕಥಾ ಸಂಕಲನದ ಹೆಸರು. ನಾಟಕದ ರೀತಿಯಲ್ಲಿ ಪಾತ್ರಗಳಿವೆ, ದೃಶ್ಯಗಳಿವೆ, ಸಂಭಾಷಣೆಗಳಿವೆ.. ಓದುಗರನ್ನು ಓದುವುದರ ಮೂಲಕ ತಲುಪುತ್ತವೆ.

ಈ ಕಥಾ ಸಂಕಲನದಲ್ಲಿ ಹಲವಾರು ಸಣ್ಣ ಕತೆಗಳಿವೆ; ವಿಚಿತ್ರ ಎನಿಸುವ ಪಾತ್ರಗಳಿವೆ; ಅಪರೂಪದ ವಸ್ತುಗಳಿವೆ. ಆದರೂ, ಎಲ್ಲೋ ಕಾಡಿರಬಹುದಾದ, ಕೇಳಿರುವಂಥ ಅನುಭವಗಳಾಗುತ್ತವೆ. ಜನಸಾಮಾನ್ಯರಲ್ಲಿ ಆಗಬಹುದಾದ ಕಥಾ ವಸ್ತುಗಳಾದ್ದರಿಂದ, ಅತಿ ಸಮೀಪದ್ದು ಎನಿಸಬಹುದು. ದಿನ ನಿತ್ಯದ ಆಗು ಹೋಗುಗಳಲ್ಲಿ ಚಟುವಟಿಕೆಗಳಲ್ಲಿ ಕಾಣಬಹುದಾದ ಸಂಗತಿಗಳನ್ನು ಆಯ್ದುಕೊಂಡು ಬರೆದಿರುವ ಕತೆಗಳಿವು; ಓದುಗರ ಹೃದಯವನ್ನು ತಟ್ಟುತ್ತವೆ ಎಂಬ ಭಾವನೆ ನನ್ನದು. ಕಲ್ಪನೆಯ ಪರದೆಯ ಮೇಲೆ ಮೂಡಿ ಬಂದ ಪಾತ್ರಗಳನ್ನು ಶಾಯಿಯಲ್ಲಿ ಅದ್ದಿ, ಹಾಳೆಗಳ ಮೇಲೆ ಬರೆದು, ಕತೆಯಂತೆ ಬರೆದಿರುವ ಪರಿಶ್ರಮ ನನ್ನದು. ನನ್ನ ಪರಿಶ್ರಮಕ್ಕೆ ಎಂದಿನಂತೆ ಪ್ರೋತ್ಸಾಹವನ್ನು ಅಭಿಮಾನಿ ಓದುಗರಿಂದ ಬಯಸುತ್ತೇನೆ. ವಿಶ್ವಾಸ ಇದೇ ರೀತಿಯಲ್ಲಿ ಮುಂದುವರೆಯಲಿ ಎಂದು ಆಶಿಸುತ್ತೇನೆ.

ವಂದನೆಗಳೊಂದಿಗೆ,

ಇತಿ,

ತಮ್ಮ ವಿಶ್ವಾಸಿ,

– ಪದ್ಮಾಶ್ರೀಧರ್

ಅರ್ಪಣೆ

ನವದೆಹಲಿಯ **'ಕರ್ನಾಟಕ ಸಂಘ'** ಸಂಸ್ಥೆಯಲ್ಲಿ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ, ಬಂಧು, ಬಳಗ, ಸ್ನೇಹಿತರೊಂದಿಗೆ ಕಲೆತು ಬೆರೆತು, ಹಾಸ್ಯದ ಚಟಾಕಿಗಳನ್ನು ಹಾರಿಸುತ್ತಾ ನಕ್ಕು ನಗಿಸುವ ಚತುರತೆಯನ್ನು ಹೊಂದಿದ್ದು, ಎಲ್ಲರ ನೆನಪಿನಲ್ಲಿ ಎಂದೆಂದಿಗೂ ನೆಲೆಗೊಳ್ಳುವ ವ್ಯಕ್ತಿತ್ವವನ್ನು ಹೊಂದಿದ್ದ, ನನ್ನ ಭಾವ ದಿ॥ ಬಿ.ಕೆ.ಸೀತಾರಾಮ್ ರವರಿಗೆ, ಗೌರವಪೂರ್ವಕವಾಗಿ, ಈ ಕಥಾಸಂಕಲನ ವನ್ನು ಸಮರ್ಪಣೆ ಮಾಡುತ್ತೇನೆ.

- ಪದ್ಮಾ ಶ್ರೀಧರ್

ಪರಿವಿಡಿ

೧. ಜನನೀ ಜನ್ಮ ಭೂಮಿ

" ಹತ್ತು ದಿನಗಳಿಂದ ಹಿಡಿದ ಮಳೆ ಕಡಿಮೆ ಆಗಿಯೇ ಇಲ್ಲ. ಜೇಷ್ಠ ಮಾಸದ ಸೋನೆ ಮಳೆ ಸುಯ್ ಅಂತ ಸುರಿಯುತ್ತಲೇ ಇದೆ. ಬಿಸಿಲಿನ ಹೆಸರೇ ಇಲ್ಲ ಸೂರ್ಯನ ದರ್ಶನವಿಲ್ಲ." ಮಾವ ಸುದರ್ಶನ ಹೇಳುತ್ತಿದ್ದ.

" ಈ ವರ್ಷದಂತಹ ಮಳೆ ಯಾವ ವರ್ಷವೂ ಇರಲಿಲ್ಲ. ಅದೇನು ವಿನಾಶ ಕಾಲದ ಮಳೆಯೋ! ಪ್ರವಾಹ, ಎಲ್ಲೆಲ್ಲೂ ದುರಂತ, ದಿನ ಪತ್ರಿಕೆಗಳಲ್ಲಿ ಅದೇ ಸುದ್ದಿ."

ರಾಜೀವನ ಮನಸ್ಸು ಈ ಸುದ್ಧಿಯ ಮೇಲಿರಲೇ ಇಲ್ಲ. ಅಮೆರಿಕಾದಲ್ಲಿರುವ ತನ್ನ ಹೆಂಡತಿ ಹಾಗೂ ಮಕ್ಕಳನ್ನು ನೆನೆಯುತ್ತಿತ್ತು. ತಾಯಿ ತೀರಿಹೋದ ಸುದ್ದಿಯನ್ನು ಕೇಳಿ ಎಲ್ಲಾ ಕೆಲಸಕಾರ್ಯಗಳನ್ನು ಬದಿಗೊತ್ತಿ ತನ್ನ ದೇಶಕ್ಕೆ ಹಾರಿಬಂದಿದ್ದ. ಇಲ್ಲಿ ಬಂದು ಇಲ್ಲಿಯ ಕೆಲಸಗಳಲ್ಲಿ ಸಿಕ್ಕಿಕೊಂಡು ಬಿಟ್ಟಿದ್ದ.

ಇವತ್ತಿಗೆ ತಾಯಿ ಸರೋಜಮ್ಮ ಸತ್ತು ಹದಿಮೂರು ದಿನಗಳು. ಈ ದಿನ ಆಕೆಯ ವೈಕುಂಠ ಸಮಾರಾಧನೆ. ಯಥೇಚ್ಛವಾಗಿ ದಾನಧರ್ಮಗಳನ್ನು ಕೊಟ್ಟು ತಾಯಿಯನ್ನು ವೈಕುಂಠಕ್ಕೆ ಕಳಿಸಿಕೊಟ್ಟಿದ್ದ. ಇಲ್ಲಿಗೆ ಬಂದು ಹನ್ನೊಂದು ದಿನ ಗಳಾಗಿದ್ದವು. ಆ ಮೊದಲ ದಿನದ ಬೇಗುದಿ ಸ್ವಲ್ಪ ಮಟ್ಟಿಗೆ ಕಡಿಮೆ ಆಗಿತ್ತು.

ಆ ದಿನ, ಮಾವ ಫ಼ೋನು ಮಾಡಿ ವಿಷಯ ತಿಳಿಸಿದಾಗ, ಒಂದು ನಿಮಿಷ ಕಲ್ಲಿನಂತೆ ನಿಂತುಬಿಟ್ಟಿದ್ದ. ಆ ವಾರ್ತೆ ಅನಿರೀಕ್ಷಿತ, ಕೇವಲ ಆರು ತಿಂಗಳ ಹಿಂದಷ್ಟೆಯೇ ಸಂಸಾರ ಸಮೇತನಾಗಿ ಇಂಡಿಯಾಕ್ಕೆ ಬಂದು ಹೋಗಿದ್ದ. ತಾಯಿಯೊಡನೆ ಮಾತು ಕತೆ, ಊಟ ಉಪಚಾರ ಪ್ರತಿಸಲದಂತೆ ನಡೆದಿತ್ತು. ಮಗನಿಗೆ ಮೊಮ್ಮಕ್ಕಳಿಗೆ ಬೇಕು ಬೇಕಾದ ತಿಂಡಿಗಳನ್ನು ಮಾಡಿಸಿಕೊಟ್ಟಿದ್ದಳು ಸರೋಜ. ಆ ನೆನಮುಗಳೊಂದಿಗೆ ಮತ್ತೆ ಇಂಡಿಯಾಕ್ಕೆ ಹೊರಟಿದ್ದ,

ಮನೆಗೆ ಬರುವಷ್ಟರಲ್ಲಿ ಎರಡು ದಿನಗಳಾಗುತ್ತ ಬಂದಿದ್ದವು. ತಾಯಿಯ ಅಂತಿಮ ದರ್ಶನವು ಇಲ್ಲ. ಬೆಂಕಿ ಅಪಘಾತದಲ್ಲಿ ಅರೆಬರೆ ಬೆಂದ ಶರೀರಗಳನ್ನು ಇಟ್ಟುಕೊಳ್ಳುವಂತಿಲ್ಲ. ಮಾವ ತಾನೇ ಅಂತ್ಯ ಕ್ರಿಯೆಗಳನ್ನು ಮುಗಿಸಿದ್ದ. ವಿಪರೀತ

ದುಃಖದಿಂದ ಮಾವನನ್ನು ತಬ್ಬಿಕೊಂಡು ಅತ್ತಿದ್ದ. ಸ್ವಲ್ಪ ಸಮಾಧಾನಗೊಂಡನಂತರ ಮಾವ ನಡೆದ ವಿಷಯವನ್ನು ತಿಳಿಸಿದ.

ಸರೋಜ ತನ್ನ ಗೆಳತಿಯರೊಂದಿಗೆ, ಉತ್ತರ ಭಾರತದ ಪ್ರವಾಸಕ್ಕೆ ಹೋಗಿದ್ದಳು ಯಾತ್ರೆ ಮುಗಿಸಿಕೊಂಡು ಬರುತ್ತಿರುವಾಗ ಬಸ್ಸಿಗೆ ಬೆಂಕಿ ಹತ್ತಿಕೊಂಡಿತ್ತು. ಯಾರೋ ದುಷ್ಕರ್ಮಿಗಳ ಕೈವಾಡವೇ ಇರಬೇಕು. ಸುಟ್ಟು ಕರಕಲಾಗಿ ಸತ್ತವರು ಕೆಲವರು, ಉಸಿರುಕಟ್ಟಿ ಸತ್ತವರು ಕೆಲವರು, ಗಡಿಬಿಡಿಯಲ್ಲಿ ತುಳಿತದಲ್ಲಿ ಗಾಯಗೊಂಡು ಸತ್ತವರು ಕೆಲವರು. ಸಣ್ಣಪುಟ್ಟಗಾಯಗಳಿಂದ ಉಳಿದವರು ಕೆಲವರು. ಅವರುಗಳ ಪೈಕಿಯಲ್ಲಿ ನಮ್ಮ ಸರೋಜ ಇರಲಿಲ್ಲ. "ಸರಿಯಾಗಿ ನೋಡಿದ್ಯಾ ಮಾವ?" ರಾಜೀವನಿಗೆ ಇನ್ನು ಏನೋ ಆಸೆ.

" ಹೂಂ ಎಲ್ಲಾ ನೋಡಿದ್ದಾಯಿತು. ತನಿಖೆ ಮಾಡಿಸಿದ್ದಾಯಿತು. ಅಸ್ಪತ್ರೆಗಳಲ್ಲಿ ಹೋಗಿ ವಿಚಾರಿಸಿದ್ದಾಯಿತು. ಅಲ್ಲಿ ನಮ್ಮ ಸರೋಜ ಸಿಗಲಿಲ್ಲ."

" ಬಾಡಿ ಕೂಡಾ ಸಿಗಲಿಲ್ವಾ ಮಾವ"?

"ಗುರುತಿಸುವುಕ್ಕೆ ಆಗದಷ್ಟು ಸುಟ್ಟು ಹೋಗಿತ್ತು. ಅಂತಹ ಹತ್ತಾರು ದೇಹಗಳಲ್ಲಿ ಇವಳ ದೇಹ ಯಾವುದು ಅಂತ ಗುರುತಿಸೋದು? ದೇಹವನ್ನು ಮುಟ್ಟುವಂತೆಯೆ ಇರಲಿಲ್ಲ. ಇನ್ನು ಇಲ್ಲಿಗೆ ತರುವ ಮಾತೆಲ್ಲಿ? ಒಂದು ವೇಳೆ ತಂದಿದ್ದರೂ ನೀನು ಅವಳನ್ನು ಅಮ್ಮ ಅಂತ ಹೇಗೆ ಕಂಡು ಹಿಡಿಯುತ್ತಿದ್ದೆ?"

ರಾಜೀವ ಮತ್ತೊಮ್ಮೆ ಬಿಕ್ಕಿ ಬಿಕ್ಕಿ ಅತ್ತ. ಅಮ್ಮ ತುಂಬಾ ಲಕ್ಷಣವಾಗಿದ್ದಳು. ಸುಂದರ ಮೈಕಟ್ಟು, ಸುಂದರವಾದ ಮುಖ. ಅದಕ್ಕೆ ಒಪ್ಪುವ ಸರಳವಾದ ಅಲಂಕಾರ ನೀಳವಾದ ತಲೆಕೂದಲನ್ನು ಓರಣವಾಗಿ ಬಾಚಿ, ಹೆರಳು ಹಾಕಿಕೊಂಡಿರುತ್ತಿದ್ದಳು. ಹಣೆಯಲ್ಲಿ ಸಣ್ಣ ಕುಂಕುಮದ ಬೊಟ್ಟು. ಯಾವಾಗಲು ತಿಳಿಬಣ್ಣದ ನೂಲಿನ ಸೀರೆ ಯನ್ನೇ ಉಡುತ್ತಿದ್ದುದು. ತಂದೆ ಬದುಕಿದ್ದಾಗ ಅವಳು ಹೇಗೆ ಅಲಂಕರಿಸಿಕೊಳ್ಳುತ್ತಿದ್ದಳು ಎನ್ನುವುದು ಇವನಿಗೆ ನೆನಪಿಲ್ಲ. ತಂದೆ ಸತ್ತು ಹೋಗಿ ಬಹಳಷ್ಟು ವರ್ಷಗಳಾಗಿ ಹೋಗಿದ್ದವು. ಇವನ ಉಪನಯನವಾದ ಮೇಲೆ ಮಾವನೇ ಗಯಾಕ್ಕೆ ಕರೆದುಕೊಂಡು ಹೋಗಿ ಗಯಾ ಶ್ರಾದ್ದವನ್ನು ಮಾಡಿಸಿದ್ದ. ಆದಾಗ ಅಮ್ಮನಿಗೂ ಶ್ರಾದ್ಧ ಮಾಡಬೇಕು.

ಅಮೆರಿಕಾದಲ್ಲಿ ಕೆಲಸ ಸಿಕ್ಕಿ ಅವನು ಹೊರಡುತ್ತೇನೆಂದಾಗ ತಾಯಿ ಬೇಡ ವೆಂದಿರಲಿಲ್ಲ. ಅಥವಾ ಖುಷಿಯನ್ನೂ ಪ್ರಕಟಗೊಳಿಸಿರಲಿಲ್ಲ.

" ಒಂದೆರಡು ವರ್ಷಗಳಾಗ್ತಿದ್ದ ಹಾಗೇ ನಿನ್ನನ್ನು ಕರೆಸಿಕೊಳ್ತಿನಿ." ಎಂದು ಹೇಳಿದಾಗ ತಾಯಿ ಸುಮ್ಮನೆ ನಕ್ಕಿದ್ದಳು. ಅನಂತರ ಇವನ ಮದುವೆಯಾಗಿತ್ತು. ಮಕ್ಕಳಾಗಿದ್ದವು. ಮಕ್ಕಳಿಬ್ಬರು ಅಲ್ಲೇ ಹುಟ್ಟಿದ್ದರು. ಆಗ ಅವನ ಅತ್ತೆಯೇ ಸಹಾಯ ಕ್ಕೆಂದು ಬಂದಿದ್ದರು. ಸರೋಜ ಬರುವುದಿಲ್ಲವೆಂದು ಹೇಳಿ ಬಿಟ್ಟಿದ್ದಳು.

ಎಲ್ಲರು ಮಕ್ಕಳ ಮನೆಗೆ ಹೋಗುವ ನೆವದಲ್ಲಿ ಅಮೆರಿಕಾ ನೋಡಿ ಬರ್ತಾರೆ ನೀವೇಕೆ ಹೋಗಿ ಬರಬಾರದು ಎಂದು ಕೇಳಿದವರಿಗೆ ತೇಲಿಸಿ ಉತ್ತರ ಕೊಟ್ಟಿದ್ದಳು.

"ನೋಡೋಣ ನನಗೆ ಈಗಂತು ಹೋಗುವ ಮನಸ್ಸಿಲ್ಲ." ಅಂತ. ಸೊಸೆ ಕೂಡಾ ಒಮ್ಮೆ ಆಕ್ಷೇಪಣೆ ಮಾಡಿದ್ದಳು. "ಅತ್ತೆ ಎಲ್ಲರು ಕೇಳ್ತಾರೆ ನೀವು ಯಾಕೆ ಬಂದೇ ಇಲ್ಲ ಅಂತ. ಈ ಸಾರಿ ವೀಸಾ ಟಿಕೆಟ್ ಎಲ್ಲಾ ಕಳಿಸ್ತೀವಿ. ಖಂಡಿತಾ ಬರಬೇಕು."

" ನಾನು ಬಂದರೆ, ನನಗೋಸ್ಕರ ನೀವುಗಳು ರಜ ಹಾಕುವುದು ಕಷ್ಟವಾಗುತ್ತೆ. ಮಕ್ಕಳು ಸ್ಕೂಲಿಗೆ ಹೋಗುತ್ತವೆ. ನನ್ನಿಂದ ನಿಮ್ಮಗಳಿಗೆ ತೊಂದರೆಯೇ ಹೊರತು, ಬೇರೆ ಏನಿಲ್ಲ." ಎಂದು ಹೇಳಬೇಕೆಂದುಕೊಂಡರು ಹಾಗೆ ಹೇಳಲಿಲ್ಲ.

"ವರ್ಷಕ್ಕೊಂದು ಸಲ ನೀವುಗಳೇ ಬರ್ತೀರಲ್ಲ. ಈ ನೆವದಿಂದಲಾದರು ಮಗ ಮನೆಗೆ ಬರ್ತಾನೆ. ಇಲ್ಲದಿದ್ದರೆ ಅದೂ ತಪ್ಪಿ ಹೋಗುತ್ತದೆ. " ನಗುನಗುತ್ತಾ ನುಡಿದಿದ್ದಳು.

"ಯಾಕಮ್ಮ ನಿನಗೂ ನಿನ್ನ ಮಗನ ಮನೆ ಸಂಸಾರ ಹೇಗಿದೆ ಅಂತ ನೋಡೋ ಆಸೆ ಇಲ್ಲವಾ?"

"ನಾನೆಲ್ಲಿ ಬರುಲ್ಲ ಅಂತಂದೆ? ವಯಸ್ಸಾದ ಮೇಲೆ ಕೈಲಾಗದಂತೆ ಆದಾಗ ನಿನ್ನ ಮನೆಯೇ ನನಗೆ ಗತಿ. ನೀನು ಬೇಡ ಅಂದ್ರು ನಾನು ಬರ್ತೀನಿ." ಮತ್ತೆ ತಮಾಷೆ ಮಾಡಿದ್ದಳು.

"ನಿನಗೆ ನನ್ನ ಮೇಲೆ ಕೋಪ. ಅದಕ್ಕೆ ಬರೋಲ್ಲ ಅಂತೀಯ. ಅಲ್ಲಿ ಎಂತೆಂತಹ ಪ್ರೇಕ್ಷಣೀಯ ಸ್ಥಳಗಳಿವೆ ಗೊತ್ತಾ? ನೀನು ಬಂದಾಗ ನಿನ್ನ ಜೊತೆ ಹೋಗಿ ಬರೋಣ ಅಂತ, ಎಷ್ಟೋ ಕಡೆಗೆ ನಾನು ಹೊಗಿಯೇ ಇಲ್ಲ."

"ನಮ್ಮ ದೇಶದಲ್ಲೇನು ಕಡಿಮೆ ಪ್ರೇಕ್ಷಣೀಯ ಸ್ಥಳಗಳಿವೆಯೆ? ನಾವು ನೋಡಿರದ ಸ್ಥಳಗಳೇ ಅನೇಕ. ವರ್ಷಕ್ಕೊಮ್ಮೆ ಬಂದು, ತಿಂಗಳ ಮೇಲೆ ಷಾಪಿಂಗೋ ಷಾಪಿಂಗು. ಅದೇನ ಷಾಪಿಂಗೊ? ಅದಕ್ಕೇ ಬೇಕಾದಷ್ಟು ಹಣ ಸುರೀತೀರಿ, ಸುಮ್ಮನೇ ತಿರುಗ್ತೀರಿ. ಮನೇಲೇ ಇದ್ದು, ನೆಂಟರಿಷ್ಟರೊಡನೆ ಮಾತುಕತೆ ಓಡಾಟ ಏನೂ ಇಲ್ಲ. ಯಾರೋ ಅಮೆರಿಕಾದಿಂದ ನಿಮ್ಮ ಹಾಗೆ ಬಂದಿರೋರ ಜೊತೆ ಪಾರ್ಟಿ ಅಂತ ನಾಲ್ಕು ಕಡೆ ಸುತ್ತುತ್ತೀರಿ. ಅಲ್ಲಿಗೆ ಮುಗಿಯಿತು ನಿಮ್ಮ ವಿಸಿಟ್. ಹೊರಡುವ ದಿನದ ತನಕ ಪ್ಯಾಕಿಂಗ್. ಮೂರು ಗಂಟೆ ಮುಂಚಿತವಾಗಿ ಏರ್‌ಪೋರ್ಟಿಗೆ ಹೊರಡ್ತೀರಿ. ನನ್ನ ಜೊತೆ ಕುಳಿತು ಒಂದರ್ಧಗಂಟೆ ಮಾತನಾಡುವ ವ್ಯವಧಾನ ನಿನಗಿದೆಯಾ?" ರಾಜೀವ ತಾಯಿಯ ಮಾತಿನಿಂದ ಪೆಚ್ಚಾಗಿದ್ದ, ಅವನ ಹೆಂಡತಿ ಸವಿತಾ ಸಹಾಯಕ್ಕೆ ಬಂದಳು.

"ಏನ್ ಮಾಡೋದು ಅತ್ತೆ ಕಾಲವೇ ಹೀಗಿದೆ. ನಾನು ಅಮ್ಮನ ಮನೆಗೆ

ಕೂಡ ಹೋಗೊಲ್ಲ. ಈ ಮೊಮ್ಮಕ್ಕಳಿಗೆ ಅಜ್ಜಿ ಅಂದರೆ ನೀವು ಮಾತ್ರ, ಆ ಮನೆಯೇ ಸರಿ ಹೊಗೊಲ್ಲ. ನಾನೇನಾದ್ರು ಅಂತೀನಾ ನೀವೇ ಕೇಳಿ, ನಿಮ್ಮ ಮಗನ್ನ. ಅಮೆರಿಕಾದವರು ಇಂಡಿಯಾದ ಕೆಲವು ವಸ್ತುಗ್ಗಳಿಗೆ ಬಾಯಿಬಾಯಿ ಬಿಡ್ತಾರೆ ಅವರಿಗಳಿಗೋಸ್ಕರ ಷಾಪಿಂಗ್ ಮಾಡಲೇಬೇಕು. ಗಿಫ್ಟ್ ಅಂತ ಕೊಡ್ತೀವಿ. ನಮ್ಮ ದೇಶದಲ್ಲಿ ಎಂತೆಂಥ ಒಳ್ಳೇಯ ವಸ್ತುಗಳು ಸಿಗುತ್ತವೆ ಅಂತ ಅವರಿಗೂ ಗೊತ್ತಾಗಲಿ." ದೇಶವನ್ನು ಹೊಗಳಿ ಕೊಳ್ಳುತ್ತಾ ತನ್ನನ್ನು ತಾನು ಸಮರ್ಥಿಸಿ ಕೊಂಡಿದ್ದಳು.

"ನಾನೇನು ತಲೆಮೇಲೆ ಕಷ್ಟಪಟ್ಟು ಹೊತ್ಕೊಂಡು ಹೋಗಬೇಕೆ? ಪ್ಲೇನ್ ಹೊತ್ಕೊಂಡು ಹೋಗಿ ಇಳಿಸುತ್ತೆ. ಅಲ್ಲಿ ಯಾವುದಕ್ಕೂ ಕಷ್ಟಪಡಬೇಕಾಗಿಲ್ಲ, ಇಲ್ಲಿಯ ಹಾಗೆ. ಕೂತಕಡೆಯಿಂದಲೇ ಎಲ್ಲಾದಕ್ಕು ಆರ್ಡರ್ ಕೊಡಬಹುದು." ತಮಗೆ ಯಾವುದು ಕಷ್ಟವಿಲ್ಲವೆಂದು ಒತ್ತಿ ಹೇಳಿಕೊಂಡಿದ್ದಳು.

ಹತ್ತಾರು ಬಗೆಯ ಪುಡಿಗಳು ಸೀರೆಗಳು, ಡ್ರೆಸಸ್‌ಗಳು, ಚಪ್ಪಲಿ, ಶೂಗಳು, ಒಂದೇ ಎರಡೇ, ಹತ್ತು ಹಲವು ಬಗೆಯ ವಸ್ತುಗಳನ್ನು ಷಾಪಿಂಗ್‌ನಲ್ಲಿ ಖರೀದಿಸಿ ಪ್ಯಾಕಿಂಗ್‌ಮಾಡಿ ತೂಕವನ್ನು ನೋಡಿಸುವುದರಲ್ಲೇ ಮುಕ್ಕಾಲು ಸಮಯ ಕಳೆಯುತ್ತಿತ್ತು.

ತಾಯಿ ಯಾವುದನ್ನೂ ನೋಡುತ್ತಿರಲಿಲ್ಲ. ಬೆಲೆ ಎಷ್ಟು ಎಂದು ವಿಚಾರಿಸುತ್ತಿರಲಿಲ್ಲ. ಅದಕ್ಕೂ ತನಗೂ ಸಂಬಂಧವಿಲ್ಲವೇನೊ ಅಂತ ಸುಮ್ಮನಿರುತ್ತಿದ್ದಳು. ಹೊರಡುವ ಮೊದಲು ಸೊಸೆ ಬಂದು ಕೈಗೆ ಒಂದು ಕವರನ್ನು ಕೊಡುತ್ತಿದ್ದಳು. 'ಇದರಲ್ಲಿ ಸ್ವಲ್ಪ ಹಣ ಇದೆ ಅತ್ತೆ. ಇಲ್ಲಿಯ ರೂಪಾಯಿಗಳು ಅಲ್ಲಿ ನಮಗೇಕೇ, ಅಲ್ಲಿ ಉಪಯೋಗಕ್ಕೆ ಬರುವುದಿಲ್ಲ. ಇಲ್ಲಿ ನಿಮಗೆ ಖರ್ಚಿಗೆ ಅಗುತ್ತದೆ, ಇಟ್ಟುಕೊಳ್ಳಿ' ಎನ್ನುತ್ತಿದ್ದಳು. ಸರೋಜ ಬೇಡ ಎನ್ನುತ್ತಿರಲಿಲ್ಲ. ಅದನ್ನು ಹಾಗೇ ಲಾಕರಿನಲ್ಲಿಡುತ್ತಿದ್ದಳು.

" ಅಮ್ಮ ವಿಲ್ ಮಾಡಿದಾಳಾ? " ರಾಜೀವ ಕೇಳಿದಾಗ ಮಾವ ತಲೆಯಾಡಿಸಿದ್ದ ಬ್ಯಾಂಕಿನಲ್ಲಿ ಸ್ವಲ್ಪ ಬ್ಯಾಲೆನ್ಸ್ ಇರಬಹುದು. ಮನೇನ ಏನು ಮಾಡೋದು?"

" ನನಗೆ ಅದಕ್ಕೆಲ್ಲ ಸಮಯವೇ ಇಲ್ಲ ಮಾವ ಇನ್ನೊಂದು ವಾರದೊಳಗೆ ಅಲ್ಲಿ ನಾನು ಇರಬೇಕು. ನಾನು ನಿನಗೆ ಪವರ್ ಆಫ್ ಅಟಾರ್ನಿ ಬರೆದು ಕೊಡ್ತೀನಿ ಎಲ್ಲಾ ನೀವೇ ಮಾಡಬೇಕು."

"ಮನೇನ್ನ ಅಳಿಯ ಕೊಂಡ್ಕೋತಾನಂತೆ. ಪಾಪ ಅವನಿಗೂ ಸ್ವಂತ ಮನೆಯಿಲ್ಲ ಕಷ್ಟದಲ್ಲಿದ್ದಾನೆ." ಸುದರ್ಶನ ಅಗಲೇ ನಿರ್ಧರಿಸಿ ಅಗಿತ್ತು.

"ಸರಿ ಕಾಗದ ಪತ್ರ ಎಲ್ಲಾ ರೆಡಿ ಮಾಡಿಸಿ. ಈ ಮನೇಲಿ ಯಾರಿರುತ್ತೀರಿ? ನಾವೇನು ಮತ್ತೆ ಇಲ್ಲಿಗೆ ಬರೊಲ್ಲ."

"ನಾವುಗಳು ಇದೀವಲ್ಲಪ್ಪಾ ಮನಸ್ಸು ಮಾಡಿದ್ರೆ ಮೂರು ವರ್ಷಕ್ಕೊಮ್ಮೆ ಬಂದು ಹೋಗಬಹುದು. ಅದರೇನು ತಾಯಿಯಿದ್ದ ಹಾಗೆ ಆಗುತ್ಯೇ? ಹೋದವಸ್ತು

ಹೋದದ್ದೇ. ಮತ್ತೇ ಬೇಕು ಅಂದ್ರೆ ಸಿಗತ್ಯೇ? ಅದೂ ತಾಯಿಯಂತಹ ವಸ್ತು." ಮಾವ ವೇದಾಂತದ ಮಾತನ್ನಾಡಿದಾಗ ಬೇಸರವಾಗಿತ್ತು.

" ನಾಳೆ ಕೈ, ಮಂಡೆ, ತಲೆಗೆ ಒಂದು ಬೊಟ್ಟು ಎಣ್ಣೆ ಒತ್ತಿಕೊಂಡು ನೀರು ಹಾಕ್ಕೋ. ಪಾಯಸದ ಅಡಿಗೆ ಮಾಡಿ ಬಡಿಸ್ತೀನಿ. ಅಕ್ಕ ತಂಗಿಯರು ಅಣ್ಣತಮ್ಮಂದಿರಿಗೆ ಇಂತಹ ದಿನಗಳಲ್ಲಿ ಮಾಡಬೇಕಾದ ಶಾಸ್ತ್ರ. ಅಕ್ಕ ತಂಗಿ ಯಾರು ಇದಾರೆ?" ನಾನೇ ಮಾಡ್ತೀನಿ. ಸೋದರ ಮಾವನ ಹೆಂಡತಿ ಶೀಲಾ ನುಡಿದಳು. ವೈಕುಂಠ ಸಮಾರಾಧನೆಗೆಂದು ಬಂದ ನೆಂಟರಿಷ್ಟರಲ್ಲಿ ಹಿರಿಯರು ಕೆಲವರು ಹೊಸ ಬಟ್ಟೆಯನ್ನು ಹೊದಿಸಿದ್ದರು. ಅದನ್ನೇಲ್ಲ ನೋಡಿ ಮನಸ್ಸು ಕಲಕಿತ್ತು.

"ಇದನ್ನೆಲ್ಲಾ ನಾನೆಲ್ಲಿಗೆ ತೆಗೆದುಕೊಂಡು ಹೋಗಲಿ, ಇಲ್ಲೇ ಬಿಟ್ಟು ಹೋಗ್ತೀವಿ. ನಿಮಗೆ ಬೇಕಾದ್ರೆ ಉಪಯೋಗಿಸಿ. ಇಲ್ಲದಿದ್ದರೆ ಯಾರಿಗಾದ್ರೂ ಕೊಟ್ಟುಬಿಡಿ." ಎಲ್ಲವನ್ನು ಸೋದರ ಮಾವನ ಪತ್ನಿ ಜೋಡಿಸಿ ತೆಗೆದಿಟ್ಟುಕೊಂಡಳು. ಮನೆಯಲ್ಲಿ ಏನಿದೆ ಏನಿಲ್ಲ ಎಂದು ಯಾವುದನ್ನು ನೋಡು ಆಸಕ್ತಿ ಅವನಿಗಿಲ್ಲ. ಹೆಂಡತಿ ಫೋನಿನಲ್ಲಿ ಹೇಳಿದ್ದಳು.

" ನಿಮ್ಮ ಅಮ್ಮನ ಒಡವೆ, ಬೆಳ್ಳಿ ಎಲ್ಲಾ ಲಾಕರ್‌ನಲ್ಲಿರಬಹುದು. ಅವುಗಳನ್ನೆಲ್ಲ ತೆಗೆದುಕೊಂಡು ಬನ್ನಿ. ನಮ್ಮ ನೀತೂಗೆ ಆಗುತ್ತೆ." ಅಂತ.

"ಅಜ್ಜಿದೊಂದು ಪೋಟೋ ತಗೊಡು ಬನ್ನಿ ಡ್ಯಾಡಿ." ಮಗ ನುಡಿದಿದ್ದ.

ಮಗನಿಗೆ ಒಂಭತ್ತು ವರ್ಷ. ಜನವರಿಯಲ್ಲಿ ಹುಟ್ಟಿದವನು. ಮುದ್ದಿಗೆ ಜಾನ್ ಅಂತ ಕರೆದು, ಅವನು ಜಾನಿಯಾಗಿದ್ದ. ನಿಜವಾದ ಹೆಸರು ನಿಶಾಂತ್. ಹಾಗೇ ಮಗಳು ನೀತಾ ಡೇಸಿಯಾಗಿದ್ದಳು. ಅವಳು ಡಿಸೆಂಬರ್‌ನಲ್ಲಿ ಹುಟ್ಟಿದ್ದಳು. ಅದೇನು ಹೆಸರುಗಳೋ. ಲಕ್ಷಣವಾಗಿ ಇಟ್ಟಿರುವ ಹೆಸರಿನಲ್ಲೇ ಮಕ್ಕಳನ್ನು ಕರೆಯ ಬಾರದಾ? ತಾಯಿ ಆಕ್ಷೇಪಣೆ ಮಾಡಿದಾಗ ಸವಿತಾ ತುಟಿ ಸೊಟ್ಟಗೆ ಮಾಡಿದ್ದಳು.

"ಅತ್ತೇ ನೀವು ಅಲ್ಲಿಗೆ ಬಂದರೆ ಗೊತ್ತಾಗುತ್ತೆ ಎಂತೆಂತಹ ವಿಚಿತ್ರವಾದ ಪೆಟ್ ನೇಮ್‌ಗಳಿವೆ ಅಂತ ನಿಮಗೇ ಗೊತ್ತಾಗುತ್ತೆ."

"ಅದಕ್ಯಾಕೆ ಅಜ್ಜಿ ಅಲ್ಲಿಗೆ ಬರಬೇಕು? ನಾನೇ ನನ್ನ ಫ್ರೆಂಡ್ಸ್ ಪೆಟ್ ನೇಮ್ಸ್ ಹೇಳ್ತೀನಿ." ಅಂತ ನಿಶಾಂತ ಅರ್ಧಂಬರ್ಧ ಕನ್ನಡದಲ್ಲಿ ನುಡಿದಾಗ ಅಜ್ಜಿ ನಕ್ಕಿದ್ದಳು.

"ಮೊದಲು ನಿನಗೆ ಸರಿಯಾದ ಕನ್ನಡ ಕಲಿಸಿಕೊಡ್ತೀನಿ ಕಲಿತ್ಕೋ."

"ಅಯ್ಯೋ ಕನ್ನಡ ಯಾಕೆ? ನೀವು ಇಂಗ್ಲೀಷ್ ಕಲಿತ್ಕೊಳ್ಳೀ, ಅಲ್ಲಿಗೆ ಬಂದಾಗ ಉಪಯೋಗವಾಗುತ್ತೆ." ಮತ್ತೇ ಸವಿತಾ ನುಡಿದಾಗ ರಾಜೀವ ನಕ್ಕಿದ್ದ.

"ಅಮ್ಮನಿಗೆ ಬರೋಕೇ ಇಷ್ಟವಿಲ್ಲ ಇನ್ನು ಇಂಗ್ಲೀಷ್ ಯಾಕೆ?"

ಮಾವನ ಹೆಸರಿಗೆ ಪವರ್ ಆಫ್ ಅಟಾರ್ನಿ ಲೆಟರನ್ನು ಬರೆದು ಕೊಡುತ್ತಿದ್ದಾಗ

ಈ ಮಾತುಗಳು ನೆನಪಿಗೆ ಬಂದವು. ಅಂತೂ ಅಮ್ಮ ಕಡೆಗೂ ನಮ್ಮ ಮನೆಗೆ ಬರಲೇ ಇಲ್ಲ ಕಣ್ಣಂಚು ಒದ್ದೆಯಾಯಿತು.

" ಯಾರೋ ಬಂದ್ರು." ಮಾವನ ಮೊಮ್ಮಗಳು ಓಡಿ ಬಂದು ಹೇಳಿದಾಗ, ಎಲ್ಲರೂ ಮುಂಬಾಗಿಲಿಗೆ ಬಂದರು. ಮನೆಯ ಮುಂದೆ ಒಂದು ಟ್ಯಾಕ್ಸಿ ನಿಂತಿತ್ತು. ಮೊದಲು ಒಬ್ಬ ಗಂಡಸು ಇಳಿದ. ಅವನನ್ನು ಈ ಮುಂಚೆ ನೋಡಿದ ನೆನಪೇ ಇಲ್ಲ. ನಂತರ ಇಳಿದ ಹೆಂಗಸನ್ನು ಎಲ್ಲಿಯೋ ನೋಡಿದಂತೆ ಅನ್ನಿಸಿತ್ತು.

" ರಾಜು ಬಾಯಿಲ್ಲಿ, ಈ ಹೆಂಗಸು ಯಾರೂಂತ ಗೊತ್ತಾ? ರಾಜೀವ ಬರೆಯುತ್ತಿದ್ದುದನ್ನು ನಿಲ್ಲಿಸಿ ಬಾಗಿಲ ಬಳಿಗೆ ಬಂದ, ಮುಂಬಾಗಿಲಿಗೆ ಎದುರಾಗಿ, ದೊಡ್ಡ ಗೇಟು. ಅದನ್ನು ಒಳಗೆ ಕತ್ತೆತ್ತಿ ನಡೆದು ಬರುತ್ತಿರುವ ಈ ಹೆಂಗಸು ಯಾರು? ಈ ಮುಂಚೆ ಈಕೆಯನ್ನು ತುಂಬಾ ನೋಡಿದ್ದೇನೆ. ಯಾರು ಯಾರು ಅಮ್ಮನನ್ನೇ ತುಂಬಾ ಹೋಲುತ್ತಿರುವ ಈ ಹೆಂಗಸು ಯಾರು? ಅಮ್ಮನಿಗೆ ಸ್ವಂತ ಸೋದರಿಯರು ಯಾರು ಇರಲಿಲ್ಲ.

" ನಮ್ಮ ಸರೂ ಇದ್ದ ಹಾಗೇ ಇದಾಳೆ ಅಲ್ವಾ?"

" ಹೌದು ಮಾವ ಅಮ್ಮನೇ ಎದ್ದು ಬಂದ ಹಾಗೆ ಇದಾಳೆ. ಯಾರು? ನಿಮಗೂ ಗೊತ್ತಿಲ್ಲವಾ?" ಆದರೆ ಈಕೆಯ ಮುಖದಲ್ಲಿ ಸುಟ್ಟ ಕಲೆಗಳಿವೆ. ಎನ್ನುವುದು ಕಂಡಿತ್ತು.

" ತಡೀ ಅವರನ್ನೇ ಕೇಳೋಣ." ಅಷ್ಟರಲ್ಲಿ ಅವರಿಬ್ಬರೂ ಮುಂಬಾಗಿಲನ್ನು ಸಮೀಪಿಸಿದ್ದರು.

" ಏನೋ ಸುದೀ ಚೇನ್ನಾಗಿದಿಯೇನೋ? ರಾಜೀವ ಯಾವಾಗ ಬಂದೆ?" ಇಬ್ಬರೂ ಹಿಮ್ಮೆಟ್ಟಿದರು. ಎಲ್ಲೋ ಕೇಳಿರುವ ಪರಿಚಿತ ಧ್ವನಿ.

" ಯಾಕ್ರೋ ಹೀಗೆ ಬೆರಗಾಗಿ ನೋಡ್ತಿದೀರಿ? ನಾನು ಸರೋಜ. ನಿನ್ನ ಅಕ್ಕ, ನಿನ್ನ ತಾಯಿ." ಇಬ್ಬರು ಗೋಡೆಯನ್ನು ಒರಗಿ ಬೀಳುವುದನ್ನು ತಪ್ಪಿಸಿಕೊಂಡರು. ಅಷ್ಟರಲ್ಲಿ ಅತ್ತಿಗೆಯು ಬಂದು ನಿಂತಿದ್ದಳು. ಅವಳೂ ಬಿಳುಪಾಗಿದ್ದಳು, ಮೈ ಬೆವತಿತ್ತು..

" ನಾನು ಬದುಕಿ ಬಂದದ್ದೇ ಒಂದು ದೊಡ್ಡ ಕತೆ. ಒಳಗೆ ಬಂದು ಹೇಳ್ತೀನಿ." ಅವರುಗಳ ನಡುವೆ ನುಸುಳಿಕೊಂಡು ಒಳಬಂದಳು. ಆ ವ್ಯಕ್ತಿ ಅವಳ ಹಿಂದೆ ಬಂದ.

" ಇವರು ಗೋಪಿನಾಥ್ ಅಂತ ಡೆಲ್ಲಿಯವರು. ನಮ್ಮ ಬಸ್‌ನಲ್ಲಿ ಬೆಂಕಿ ಹೊತ್ತಿಕೊಂಡಾಗ ಬದುಕಿ ಉಳಿದವರ ಪೈಕಿ ನಾನು ಒಬ್ಬಳು. ನಮ್ಮ ಜ್ಹೊತೆ ಇದ್ದ ಶಾರದಮ್ಮ ಈತನಿಗೆ ಚಿಕ್ಕಮ್ಮ, ಆಕೆಯನ್ನು ಕರೆದುಕೊಂಡು ಹೋಗಲು ಬಂದಿದ್ದವನಿಗೆ ಕಂಡಿದ್ದು ಅಕೆಯ ಶವವಲ್ಲ; ನನ್ನ ದೇಹ. ನನ್ನನ್ನೇ ಚಿಕ್ಕಮ್ಮನೆಂದು ತಿಳಿದು, ಆಸ್ಪತ್ರೆಗೆ ಸೇರಿಸಿ, ಶುಶ್ರೂಷೆ ಮಾಡಿಸಿದ. ನನ್ನ ಮುಖ ಸಹ ಸುಟ್ಟು ಗುರುತಿಸಲಾಗದಂತೆ ಆಗಿತ್ತು. ಈಗಲೂ ನೋಡು ಕಲೆಗಳಿವೆ. ಗಾಯಗಳು ವಾಸಿಯಾಗುವವರೆಗೂ

ನಾನು ಅಸ್ಪತ್ರೆಯಲ್ಲಿದ್ದೆ. ಹೇಗೂ ಜೀವಂತ ವಾಗಿದೀನಲ್ಲ ಯಾರಿಗೂ ತಿಳಿಸುವುದು ಬೇಡ ಅಂತ ಅಂದ್ಕೊಂಡೆ."

" ಫೋನನ್ನಾದರೂ ಮಾಡಿಸಬಹುದಾಗಿತ್ತು?"

" ಲೈನೇ ಸಿಗುತ್ತಿರಲಿಲ್ಲ. ಅಲ್ಲಿಯೂ ಮಳೆ ಇಲ್ಲಿಯೂ ಮಳೆ. ಅಲ್ಲದೇ ನನ್ನ ಪರ್ಸು ಸೂಟ್‌ಕೇಸ್ ಯಾವುದೂ ನನ್ನ ಬಳಿ ಇರಲಿಲ್ಲ. ನನ್ನ ಮೈ ಮೇಲಿದ್ದ ಚೂರು ಪಾರು ಒಡವೆಯನ್ನು ಸಹ ಯಾರೋ ತೆಗೆದುಬಿಟ್ಟಿದ್ದರು."

" ಸಧ್ಯ ಬದುಕಿ ಬಂದೆಯಲ್ಲ." ಮಾವ ಹಾಗೆ ಹೇಳಿದರೂ ಧ್ವನಿ ನಡುಗಿತ್ತು..

" ಎಂಥಾ ಕೆಲಸವಾಯಿತಲ್ಲಮ್ಮ." ರಾಜೀವ ತಾಯಿಯನ್ನು ತಬ್ಬಿಕೊಂಡು ಅತ್ತ.

" ನಿನ್ನೆ ವೈಕುಂಠ ಸಮಾರಾಧನೆ ಮಾಡಿ, ನಿನ್ನನ್ನು ವೈಕುಂಠಕ್ಕೆ ಕಳಿಸಿಬಿಟ್ಟ ನಮ್ಮ ರಾಜೀವ. " ಅತ್ತೆ ಮೊಸಳೆ ಕಣ್ಣೀರು ಸುರಿಸಿದಳು.

"ವೈತರಣೀ ದಾಟಿ, ಪರಲೋಕಕ್ಕೆ ಹೋಗಿ, ಮತ್ತೆ ವಾಪಸ್ಸು ಬಂದಿದೀನಿ. ಇದೆಲ್ಲಾ ಈ ವ್ಯಕ್ತಿಯಿಂದ ಸಾಧ್ಯವಾಯಿತು. ಇಲ್ಲದಿದ್ದರೆ, ನನ್ನ ಗತಿ ಏನಾಗುತ್ತಿತ್ತೋ?"

" ಥ್ಯಾಂಕ್ ಯು ವೆರಿಮಚ್ ಮಿ!! ಗೋಪಿನಾಥ್. ನಮ್ಮ ತಾಯಿಯನ್ನು ಕ್ಷೇಮವಾಗಿ ಮನೆ ತಲುಪಿಸಿದ್ದೀರಿ ಇದುವರೆಗಿನ ಖರ್ಚು ಎಷ್ಟಾಯಿತು ಅಂತ ದಯವಿಟ್ಟು ಹೇಳಿ."

" ಆಗಲಿ ಆ ಮಾತನ್ನು ನಿಧಾನವಾಗಿ ಆಡೋಣ. ನಿಮ್ಮ ತಾಯೀನ ಚೆನ್ನಾಗಿ ನೋಡಿಕೊಳ್ಳಿ. ಅವರಿಗೂ ಆಘಾತವಾಗಿದೆ. ನಿಮ್ಮೂರಿಗೇ ಕರೆದುಕೊಂಡು ಹೋಗಿ." ರಾಜೀವ ಚಿಂತೆಗೊಳಗಾದ. ತಕ್ಷಣಕ್ಕೆ ಕರೆದೊಯ್ಯುವಂತಿಲ್ಲ. ಬಿಟ್ಟು ಹೋಗುವಂತಿಲ್ಲ. ಸವಿತನಿಗೆ ಪೋನ್ ಮಾಡಿ ವಿಷಯವನ್ನು ತಳಿಸಿದಾಗ, ಅವಳು ಲೊಚಗುಟ್ಟಿದಳು. ಅವಳು ಸಂತೋಷವನ್ನೇನು ಪ್ರಕಟಿಸಲಿಲ್ಲ.

" ಇನ್ನೇನು ಮಾಡ್ತೀರಿ? ಅಲ್ಲೇ ಯಾವುದಾದರು ವೃದ್ಧಾಶ್ರಮಕ್ಕೆ ಸೇರಿಸಿ ಬನ್ನಿ. ಅಲ್ಲಾದ್ರೆ ಇಂಥ ವಯಸ್ಸಾದವರು ಇರುತ್ತಾರೆ. ಒಂದಿಷ್ಟು ಡಾಲರ್ಸ್ ಖರ್ಚಾಗ ಬಹುದು. ಆದರೆ ಇಲ್ಲಿಗೆ ಮಾತ್ರ ಕರೆದುಕೊಂಡು ಬರಬೇಡಿ. ಅವರನ್ನ ಎಂಟರ್ ಟೈನ್ ಮಾಡೋಕೆ ನನಗೆ ಟೈಮಿಲ್ಲ." ಮಾವನೂ ಸವಿತಾಳ ಮಾತನ್ನೇ ಅನು ಮೋದಿಸಿದ. ಅವನೂ ಒಪ್ಪಿಕೊಂಡ.

ಅವನಿಗೆ ಪೇಚಾಟಕ್ಕಿಟ್ಟುಕೊಂಡಿತು. ಅಮ್ಮ ಈಗ ಯಾರಿಗೂ ಬೇಡವಾದವಳು. ಮತ್ತೆ ಈ ಲೋಕಕ್ಕೆ ಬಂದಳು. ನಮ್ಮೆಲ್ಲರ ಜವಾಬ್ದಾರಿ ಹೆಚ್ಚಿತು. ವರ್ಷಕ್ಕೊಮ್ಮೆ ಬರಬೇಕು. 'ವೃದ್ಧಾಶ್ರಮ' ದ ನಂಬರನ್ನು ಡಯಲ್ ಮಾಡಿದ.

* * *

೨. ಕಾಲಕ್ಕೆ ತಕ್ಕಂತೆ ಬದಲಾಗು

ಕಾಲಿಂಗ್ ಬೆಲ್ ಸದ್ದಾಯಿತು. ಬೇಸರಿಸಿಕೊಂಡು ಬಂದು ಬಾಗಿಲು ತೆಗೆದೆ. ಎದುರಿಗೆ ನಿಂತಿದ್ದವಳನ್ನೇ ದಿಟ್ಟಿಸಿ ನೋಡಿದೆ " ಯಾರು? ಏನಾಗಬೇಕು ಅಂತ ಸ್ವಲ್ಪ ಗಡುಸಾಗಿಯೇ ಕೇಳಿದೆ.

" ಮನೆ ಕೆಲ್ಸಕ್ಕೆ ಎಂಗಸ್ರು ಬೇಕಾಗೈತ್ರಿ ಅಂತ ಹೇಳಿದ್ರಂತೆ, ನಮ್ಮ ಫ್ರೆಂಡ್ ಪಮಕಜಮ್ಮನ ಕಳಿಸತ್ರೀ " ನಾನು ಮೇಲಿನಿಂದ ಕೆಳಗೆ ಮತ್ತೆ ಅವಳನ್ನೇ ನೋಡಿದೆ. ಅವಳು ಕೆಲಸದವಳಂತೆ ಕಾಣಿಸಲಿಲ್ಲ. ಅವಳ ಜೊತೆ ಇನ್ನಾರಾದ್ರೂ ಬಂದಿರಬಹು ದೇನೋ ಅಂತಂದ್ಕೊಂಡು, ಅವಳ ಅಕ್ಕ ಪಕ್ಕ ಕಣ್ಣು ಹಾಯಿಸಿ ಅವಳ ಬೆನ್ನ ಹಿಂದೆ ಯಾರು ಇಲ್ಲದುದ್ದನ್ನು ಗಮನಿಸಿದೆ.

" ಮನೆ ಎಷ್ಟೈತೆ ಅಂತ ನೋಡೋದ್ರಾ? ಅವಳಾಗಲೇ ಹೊಸ್ತಿಲು ದಾಟಿ ಒಳ ಬಂದಿದ್ದಳು. ಓ ಮನೆ ಶಾನೇ ದೊಡ್ಡೇನಲ್ಲ, ಎಷ್ಟು ರೂಮೈತೆ? ಅವಳಾಗಲೇ ನನ್ನ ಸ್ಥಿತಿಗತಿಗಳನ್ನು ಅಳತೆ ಮಾಡಲಾರಂಭಿಸಿದ್ದಳು. ನನಗೆ ಇಷ್ಟವಾಗಲಿಲ್ಲ.

"ನಿನ್ಹೆಸ್ರು?" ಮಾತನ್ನು ಬದಲಾಯಿಸಲು ನೋಡಿದೆ. " ನನ್ಹೆಸ್ರ ಶೃತಿ ಅಂತ" ಅವಳು ಸಿನಿಮೀಯವಾಗಿ ನಕ್ಕು ನುಡಿದಾಗ ನಾನು ತಬ್ಬಿಬ್ಬು. ಅವಳ ವೇಷ, ಭೂಷಣ ಪ್ರಸಾಧನ, ನಾಮಧೇಯ ಎಲ್ಲಾ ಅಧುನಿಕ. ಯಾವ ಹಿಂದಿನ ಒಕ್ಕಲುಗಿತ್ತಿ ಯಂತಿರಲಿಲ್ಲ. ರಂಗಿ, ನಿಂಗಿ, ಕೆಂಪ, ರತ್ನಿ ಇಂಥಾ ಹೆಸರುಗಳಾಗಿದ್ದರೇ, ನನಗೂ ಸಲೀಸಾಗಿರುತ್ತಿತ್ತು. ಅಂತೂ ಒಕ್ಕಲುಗಿತ್ತಿಯರ ಕಾಲವೂ ಬದಲಾಗಿದೆ. ನಾಲ್ಕಾರು ಮನೆಗಳಲ್ಲಿ ಮೈ ಬಗ್ಗಿಸಿ ಕೆಲಸ ಮಾಡುತ್ತಾರೆ ಸಂಪಾದಿಸುತ್ತಾರೆ. ಬಣ್ಣದ ಅಕರ್ಷಕ ಸೀರೆಗಳನ್ನುಡುತ್ತಾರೆ. ಅದರದ್ದೇ ಮ್ಯಾಚಿಂಗ್ ಬ್ಲೌಸ್‌ಗಳನ್ನು ಫ್ಯಾಷನ್ನಗೆ ತಕ್ಕಂತೆ ಹೊಲಿಸಿಕೊಂಡು ಧರಿಸುತ್ತಾರೆ. ಘಂ ಎನ್ನುವ ಹೇರ್ ಅಯಿಲ್‌ನ್ನು ಹಚ್ಚಿಕೊಂಡು ತಲೆ ಬಾಚಿಕೊಂಡು, ಮುಡಿಗೆ ಹೂ ಮುಡಿದೇ ಅವರುಗಳು ಕೆಲಸಕ್ಕೆ ಹೊರಡುವುದು. ಹೇಗೆ ಅಂದ್ರೆ ಹಾಗೆ ಇರೋಕೆ ಆಗುತ್ಯೇ? ಅವರ ಸಂಪಾದನೇಗೆ ತಕ್ಕಂತೆ ಕಾಲಕ್ಕೆ ತಕ್ಕಂತೆ ಇರಬೇಡ್ವೆ? ಅವರಿಗೂ ಅಸೆ ಆಕಾಂಕ್ಷೆಗಳಿರುವುದಲ್ಲವೆ? ಅವರುಗಳ ಮನೇಲೂ ಟಿ.ವಿ.ಇರುತ್ತೆ. ಟ್ರಾನ್ಸಿಸ್ಟರ್ ಇರುತ್ತೆ. ಯಜಮಾನರ ಕತ್ನಲ್ಲಿ ಚಿನ್ನದ ಚೈನು ಇರುತ್ತೆ.

ಕೈನಲ್ಲಿ ರಿಸ್ಟ್ ವಾಚ್ ಇರುತ್ತೇ. ಎಷ್ಟೊ ಜನರ ಮನೇಲಿ ಗ್ಯಾಸ್ ಸ್ಟೌವ್ ಇರುತ್ತೆ. ಮದುವೆಯಾದ ಹೊಸದರಲ್ಲಿ ತೆಗೆಸಿಕೊಂಡ ಪೋಟೋ ಗೋಡೆಯ ಮೇಲೆ ಕುಳಿತಿರುತ್ತೆ. ಬಾಡಿಗೆಯ ಮನೆಯೇ ಆದರೂ ಮನೆತುಂಬಾ ಸ್ಟೀಲ್ ಪಾತ್ರೆಗಳು, ತೂಗಾಡುವ ಬಟ್ಟೆಗಳು, ಒಂದೆರಡು ಪ್ಲಾಸ್ಟಿಕ್ ಛೇರ್‌ಗಳು ಹೀಗೇ ಎಲ್ಲಾ ಅನುಕೂಲ ಗಳಿರುತ್ತವೆ. ಪಾಪ, ಅವರುಗಳಿಗೂ ಆಸೆ ತಪ್ಪಲ್ಲ ಬಿಡಿ. ನಾಲ್ಕಾರು ಶ್ರೀಮಂತರ ಮನೆಗಳಲ್ಲಿ ಮನೆಗೆಲಸ ಮಾಡುವ ಅವರಿಗೆ, ತಮಗೂ ಷೋ ಮಾಡಬೇಕೆಂದೆನಿಸಿದ್ದರೆ, ಅದು ಸಹಜವೇ.

" ಒಂದ್ಲೋಟ ನೀರ್ಕೊಡಿ" ಅವಳ ಧ್ವನಿ ಎಚ್ಚರಿಸಿತು ಟೇಬಲ್ ಮೇಲಿದ್ದ ಗಾಜಿನ ಗ್ಲಾಸ್ ಗೆ ನೀರನ್ನು ಬಗ್ಗಿಸಿ ಕೊಟ್ಟೆ. ಅವಳು ನನ್ನನ್ನು ವಿನಯವಾಗಿ ನೋಡಿದಂತೆನಿಸಿತು ತಣ್ಣಗಾದೆ. ನಿಮ್ಮನೇಲಿ ಫ್ರಿಜ್ ಇಲ್ಲವ್ರಾ?."

" ಇಲ್ಲ ನಾವ್ಯಾರೂ ಫ್ರಿಜ್ ನೀರು ಕುಡಿಯುಲ್ಲ. " ಅವಳು ನೀರಿನ ಲೋಟವನ್ನು ಬದಿಗಿಟ್ಟಳು.

"ನಂಗೆ ನೀವೇನೂ ಕಾಪಿ ಟೀ ಕೊಡದಿದ್ರೂ ಬೇಸ್ರವಿಲ್ಲ. ಬ್ಯಾಸ್ಗೆಲಿ ಮಾತ್ರ ಫ್ರಿಜ್ ನೀರು ಬೇಕೇ ಬೇಕು." ತನ್ನ ಮೊದಲ ಕಂಡೀಷನ್ನನ್ನು ನನ್ನ ಮುಂದಿಟ್ಟಳು. ನಾನೇನಾದ್ರು ಹೇಳುವ ಮೊದಲೇ, ಹಂಗಾರೆ, ಒಂದ್ನೇ ತಾರೀಖಿನಿಂದ ಕೆಲ್ಸಕ್ಕೆ ಬಂದುಬಿಡ್ತೀನಿ ಎಂಟ್ನೂರು ರೂಪಾಯಿ ಸಂಬಳ ಕೊಟ್ಬಿಡಿ."

ಎಲಾ ಇವಳಾ ನನಗೆ ಅವಕಾಶ ಕೊಡದೇ ತಾನೇ ಎಲ್ಲಾ ಹೇಳ್ತಿದಾಳಲ್ಲ ಎಂದ್ಕೊಂಡು

" ವಿಪರೀತ ಜಾಸ್ತಿ ನಮ್ಮನೇಲಿ ಅಷ್ಟು ಕೊಡಕ್ಕಾಗುಲ್ಲ."

ಅಂಗಂದ್ರೆ ಎಂಗ್ರವ್ವಾ ನಮ್ಗೂ ಗಿಟ್ಟ ಬೇಡವ್ರಾ? ಎಲ್ಡೋ ಮೂರೋ ಮನೆಗೆಲ್ಸಕ್ಕೆ ಮಾತ್ರ ನಾನೊಪ್ಗಳಾದು. ಸಂಬಳ ತಗೊಂಡ್ಮೇಲೆ ಚೆನ್ನಾಗಿ ಮಾಡ್ಬೇಡವ್ರಾ? ಇಲ್ದಿದ್ರೆ ಶಿವ ಮೆಚ್ಚ್ಯಾನಾ ನೋಡ್ರಿ, ಎಂಗೆ ಸುಬ್ರವಾಗಿ ಮಾಡ್ತೀನಿ ಅಂತ ನೀವೇ ಮೆಚ್ಕೊಂಡು ಬೋನಸ್ ಅಣ ಕೊಡ್ತೀರಿ.

" ಬೋನಸ್ ಗೀನಸ್ ಏನಿಲ್ಲ ಇದೇ ಜಾಸ್ತಿ ಅಂತೀನಲ್ಲ."

" ಅಂಗಾರೆ ಬಿಟ್ಬಿಡಿ ನಂಗೆ ನಿಮಗೆ ಸೆಟ್ ಅಗಾಕಿಲ್ಲ."

" ಏನ್ಕೆಲ್ಸ ಮಾಡ್ಬೇಕು ಅಂತ ತಿಳ್ಕೊಳ್ದೆ ನೀನೇ ಎಲ್ಲಾ ಹೇಳ್ತಿಯಲ್ಲ. " ನಾನೂ ಸ್ವಲ್ಪ ಗಡುಸಾಗಿ ಹೇಳ್ದೆ.

" ಅಯ್ಯೋ ಸಿವ್ನೇ ಕ್ವಾಪಾ ಯಾಕ್ರವ್ವಾ ಏನೇನ್ಕೆಲ್ಸ ಮಾಡ್ಬೇಕೂಂತ ನಂಗ್ಗಿ ಳೀದಾ? ಎಲ್ಲಾ ಮಾಮೂಲೇ ಅಲ್ಲವ್ರ ? ಮಾಮೂಲು ರೇಟು." ದಂತ ಪಂಕ್ತಿಗಳನ್ನು ತೋರಿದಳು. ನಾನು ನಗಲಿಲ್ಲ. ಅವಳು ಮುಂದುವರೆಸಿದಳು.

" ಮುಂಬಾಗಿಲ್ಗೆ ನೀರ್ಹಾಕಿ, ರಂಗೋಲಿ ಆಕೋದು, ಅದಕ್ಕೆ ನೂರೈವತ್ತು ರೂಪಾಯಿ ಮನೆ ಕಸ ಗುಡ್ಸಿ ಒರೆಸಕ್ಕೆ ಇನ್ನೂರು ರೂಪಾಯಿ, ಬಟ್ಟೆ, ಪಾತ್ರೆಗೆ ನಾನ್ನೂರು ರೂಪಾಯಿ ನಾನು ಕುಸಿದು ಬೀಳುವುದೊಂದು ಬಾಕಿ. ನನ್ನ ಕಂದಿದ ಮುಖ ಕಂಡು ಸ್ವಲ್ಪ ರಿಯಾಯಿತಿ ತೋರಿದಳು.

" ಓಗ್ಲಿ ಬಿಡ್ರವ್ವಾ ನಿಮ್ಯಾಕೆ ಬೇಸ್ರ. ಮನೆ ವರ್ಸಿ ಗುಡ್ಸೋಕೆ ನೂರು ರುಪಾಯಿ ಕೊಟ್ಬಿಡಿ. ದಿನ ಬಿಟ್ಟು ದಿನ ಗುಡಸ್ತೀನಿ."

" ಹಾಗಾಗುಲ್ಲ ದಿನಾ ಗುಡ್ಸಿ ಒರಸ್ಲೇ ಬೇಕು. ಅದಕ್ಯಾಕೆ ಡಬ್ಬಲ್ ರೇಟು" ಅವಳು ಕಿಲ ಕಿಲನೆ ನಕ್ಕಳು.

" ಡಬ್ಬಲ್ ಕೆಲ್ಸಕ್ಕೆ ಡಬ್ಬಲ್ ರೇಟು. ಒಂದಿನ ಗುಡಿಸ್ತಿನಿ. ಒಂದಿನ ವರೇಸ್ತೀನಿ. ನೂರು ರುಪಾಯಿ ಕೊಟ್ಬಿಡಿ. ಚೌಕಾಸಿ ಮಾಡ್ಬೇಡಿ"

" ಎಲ್ಲಾ ಮಾತನ್ನಾಡ್ತಾ ಇರೋಳು ನೀನು, ನಾನೆಲ್ಲಿ ಚೌಕಾಸಿ ಮಾಡ್ದೆ?

" ಹೋಗ್ಲೀ ಬಿಡ್ರವ್ವಾ ಎಲ್ರೂ ನಿಮ್ಮಂಗೇನೇ, ಗೊತ್ಮಾಡೋವಾಗ ಇಂಗೇನೇ. ಆಮೇಲೆ ನಾನಿಲ್ದೇ ಇದ್ರೆ ನಡ್ಯೋದೇ ಇಲ್ಲ ಅಂಗಾಗುತ್ತೆ."

" ಇವಳ್ ಹತ್ರ ಮಾತು ಸಾಕೆನಿಸಿತ್ತು. ಹೋಗ್ಲಿ ಬಿಡು ನಂಗೆ ನಿಂಗೆ ಸೆಟ ಅಗಲ್ಲ." ಕಡೇ ಮಾತು ಎಂಬಂತೆ ಹೇಳಿದೆ.

" ಅಯೋ ಸಿವ್ನೇ ಅಂಗಂದ್ರೆ ಎಂಗೆ? ಒಂದ್ರೇಟು ಫಿಕ್ಸ್ ಮಾಡಿದ್ರಾಯಿತು. ಅಣಾ ಮುಖ್ಯಾನಾ? ನಿಯತ್ತು ಮುಖ್ಯ. ನಮ್ ಪ್ರೆಂಡು ಸಿಪಾರ್ಸು ಮಾಡಿ ಕಳಿಸವ್ರೆ ನಂಗೂ ನಿಮ್ಮಂತೋರು ಬೇಕು. ನಿಮ್ಗು ನನ್ನಂತೋಳು ಬೇಕು.

" ನಾನು ನನ್ನ ಫ್ರೆಂಡ್ ಹತ್ರ ಮಾತ್ನಾಡ್ತೀನಿ ಬೇಕಾಗಿದ್ರೆ ಮತ್ತೆ ಹೇ. ಕಳಿಸ್ತೀನಿ. ಅಮೇಲೆ ಬರೂವಂತೆ."

" ಈಗ್ಲೇ ಮಾತಾಡಿ. ನನ್ನತ್ರ ಅವ್ರ ಪೋನು ನಂಬರ್ರು ಐತೆ. ಕೊಡ್ಲಾ ಅವಳ ಕೈ ರವಿಕೆಯ ಕೊರಳಿನ ಬಳಿಗೆ ಹೋಯಿತು.

" ಏನೂ ಬೇಡ ನನ್ನತ್ರ ಇದೆ. ನಾನು ಮಾತಾಡ್ತೀನಿ ನೀನು ಈಗ ಹೋಗು.

" ಇಲ್ರವ್ವಾ ಈಗ್ಲೇ ಪೈಸ್ಲ್ ಅಗ್ಬೇಕು ನಿಮ್ಮನೇಗೇ ಸೇರ್ಕ್ಯೋಬೇಕೂಂತ ನಾ ಈಗಾಗ್ಲೇ ಎಲ್ಡು ಮನೇನ ಬಿಟ್ಟು ಬಿಟ್ಟಿದೀನಿ. ನನ್ಹೊಟ್ಟೇ ಮೇಲೆ ಬಡೀಬೇಡಿ ನನ್ನನ್ನೇ ಮಡಿಕ್ಕಳಿ".

" ಅಗ್ಲೀ ನೋಡೋಣ ನೀನು ನಾಳೆ ಬಾ"

" ನಂಗೊಂದಿಸ್ಟು ಅಡ್ವಾನ್ಸ್ ಬೇಕಾಗಿತ್ತು. ನೂರು ರುಪಾಯ ಕೊಡಿ ಮೊದಲ್ನೇ ತಿಂಗ್ಳಲ್ಲೇ ಸಂಬಳ್ದಲ್ಲಿ ಮುರ್ಕ್ಕೊಳ್ಳೋರಂತೆ " ಅಷ್ಟರಲ್ಲಿ ಪೋನು ರಿಂಗಾಯಿ.. ನಾನು ರಿಸೀವರ್ ನೆತ್ತಿಕೊಂಡೆ. ಅತ್ತಲಿಂದ ನನ್ನ ಫ್ರೆಂಡೇ ಮಾತಾಡ್ತಿರೊದು.

ಅದು ಕೆಲಸದವಳ ಬಗ್ಗೇನೆ. ಇವಳ ಎದುರಿಗೇ ಎಲ್ಲಾ ಜೋರು ಜೋರಾಗಿ ಮಾತಾಡುವಂತಿಲ್ಲ. ಹ್ಯಾಂಡ್ ಸೆಟ್‌ನೆತ್ತಿಕೊಂಡು ಬಳಗಡೆಗೆ ಹೋಗಿ ಮಾತಾಡು ವಂತಿಲ್ಲ. ಅಯ್ತ ಅಯ್ತು ಎಂದಷ್ಟೇ ಉತ್ತರ ಹೇಳಿ ಮಾತು ಮುಗಿಸಿದೆ.

" ನನ್ನತ್ರ ಚಿಲ್ರೆ ಇಲ್ಲ. ಐನೂರು ರುಪಾಯಿ ನೋಟೇ ಇದೆ ಅಂತ ಹೇಳಿದ್ರೆ, ಅದನ್ನೇ ಕೊಡಿ ಅಂತ ಕೇಳಿದ್ರೆ ಎನ್ಮಾಡೋದು ಅಂತ ಅಂದ್ಕೊಂಡು ಅಲ್ಲಿಯೇ ಬಿದ್ದಿದ್ದ ಪರ್ಸ್‌ನಿಂದ ಐವತ್ತರ ನೋಟೊಂದನ್ನು ತೆಗೆದು ಅವಳ ಕೈಗಿತ್ತೇ. ಅವಳು ತಿರಸ್ಕಾರದ ನೋಟವನ್ನು ಬೀರಿ, ಕೈಗೆತ್ತಿಗೊಡಳು. ಮತ್ತೆ ಹೆಚ್ಚು ಮಾತನಾಡದೇ ಹೊರಟು ಹೋದಳು. ಅಲ್ಲಿಗೆ ಎಲ್ಲಾ ಮುಗಿದಿತ್ತು. ನನಗೆ ಬೆನ್ನು ತಿರುಗಿಸಿ ಹೋದವಳು ಇತ್ತ ಮತ್ತೆ ತಿರುಗಿರಲಿಲ್ಲ. ಉಪಾಯವಾಗಿ ನನ್ನಿಂದ ಐವತ್ತು ರೂಪಾಯಿಗಳನ್ನು ಕಸಿದವಳು ಯಾರೆಂದು ಪತ್ತೆಯಾಗಲೇ ಇಲ್ಲ. ಶುಭ್ರವಾಗಿ ನನ್ನ ಕೈ ಚೊಕ್ಕಟ ಮಾಡಿ ಕೈ ಬೀಸಿಕೊಂಡು ಹೊರಟು ಹೋಗಿದ್ದಳು.

ಎರಡು ದಿನಗಳಾದರೂ ಅವಳು ಬರದೇ ಇದ್ದಾಗ, ನಾನು ಮೋಸ ಹೋದುದು ಖಚಿತವಾಗಿತ್ತು. ಗಂಡನಿಗೆ ಹೇಳಿದರೆ, ಇಂಥೋರ್‍ನೆಲ್ಲ ನಂಬಬಾರ್‍ದು ಅಂತ ನನ್ನನೇ ಬೈತಾರೆ ಎಂದುಕೊಡು ಅವರಿಗೆ ಹೇಳಿರಲಿಲ್ಲ. ನೀತಿ ನಿಯಮ, ನಿಯತ್ತು ಅಂತ ಹೇಳಿ ನನ್ನನ್ನು ಮರುಳು ಮಾಡಿ ಐವತ್ತು ರುಪಾಯಿಗಳನ್ನು ಕಸಿದು ಕೊಂಡು ಹೋದಳಲ್ಲ ಅಂತ ವ್ಯಥೆಯಾಗಿತ್ತು. ಜೊತೆಗೆ ಬೇರೆ ಕೆಲಸದವರ್‍ಯಾರು ಸಿಕ್ಕಿರಲಿಲ್ಲ. ಆ ಬೇಸರವೂ ಸೇರಿತ್ತು. ಮಾತು ಮಾತಿಗೂ ರೇಗುವಂತಾಗಿತ್ತು.

ಅದೇ ಸಮಯದಲ್ಲಿ ತಾನಾಗಿಯೇ ಮನೆ ಬಾಗಿಲಿಗೆ ಬಂದು ಕೆಲಸಕ್ಕೆ ಬೇಕಾ ಅಂತ ಕೇಳಿಕೊಂಡವಳನ್ನು ಗೊತ್ತು ಮಾಡಿಕೊಡಿದ್ದೆ. ಅವಳ ಹೆಸರು ಪಮ್ಮಿ ಅಂತ. ಅವಳು ಕೇಳಿದ್ದು ಆರುನೂರೈವತ್ತು ರುಪಾಯಿಗಳನ್ನು ಮಾತ್ರ. ನನಗೆ ಅಶ್ಚರ್ಯ ಹಾಗು ಸಂದೇಹ ಇವಳಿನ್ನೆಂಥ .ಚತುರೇನೋ? ನನಗೇನು ನಷ್ಟ ಕಾದಿದೆಯೋ ಅಂತ ಅನ್ನಿಸ್ತಾನೇ ಇತ್ತು. ಹಿಂದಿನಂತೆ ಸ್ನೇಹಿತೆಯನ್ನು ದೂಷಿಸುವಂತೆಯು ಇರಲಿಲ್ಲ.

" ನಂಗೇನ್ಗೊತ್ತಿತ್ತು ಅವಳು ನಿಂಗೆ ಮೋಸ ಮಾಡ್ತಾಳಾಂತೆ. ನೀನು ಅವಳ್ಗೆ ಕೊಡ್ಲೇ ಬಾರ್‍ದಾಗಿತ್ತು. ನನ್ನನ್ನೇ ಅಕ್ಷೇಪಿಸಿದ್ದಳು. ಅಲ್ಲದೇ ಅವಳು ಅವರ ಮನೆಯಲ್ಲೂ ಕೆಲಸವನ್ನು ಬಿಟ್ಟು ಬಿಟ್ಟಿದ್ಲಂತೆ. ಸ್ವಲ್ಪ ಸ್ವಲ್ಪ ನಮ್ಮಿಬ್ಬರಲ್ಲಿ ಅಸಮಾಧಾನ ತಲೆ ಹಾಕಿತ್ತು. ಕೆಲ್ಸದವಳು ಇಲ್ದಿದ್ರು ಪರವಾಗಿಲ್ಲ. ಸ್ನೇಹಿತಯರ ಮನೆಯವಳನ್ನು ಮಾತ್ರ ಕೇಳಬಾರ್‍ದು ಅಂತ ಅಂದ್ಕೊಂಡೆ.

" ಪಮ್ಮಿ ಬರ್ತಿದ್ದದ್ದು ದಿನಕ್ಕೆ ಒಂದೇ ಹೊತ್ತು ಹೆಚ್ಚು ಮಾತಾಡದೇ ತನ್ನ ಕೆಲಸಗಳನ್ನು ಮುಗಿಸಿಕೊಂಡು ಹೋಗುತ್ತಿದ್ದದು ನನಗೆ ಹಿತವಾಗಿತ್ತು. ಎರಡು ತಿಂಗಳು ಕಳೆಯುವಷ್ಟರಲ್ಲಿ ಅವಳು ಅಪ್ತಳಾಗಿದ್ದಳು. ಅವಳು ಕೇಳದಿದ್ದರು ನಾನೇ

ಅವಳಿಗೆ ಕಾಫಿ ತಿಂಡಿಯನ್ನು ಕೊಡುತ್ತಿದ್ದೆ. ಅಂಗಡಿ ಸಾಮಾನುಗಳನ್ನು ತರಿಸಿ ಕೊಂಡಾಗ ಕೈ ಮೇಲೆ ಕಾಸು ಕೊಡುತ್ತಿದ್ದೆ. ಸ್ವಲ್ಪ ಅವಳ ವಿಷಯಗಳನ್ನು ಕೇಳಿ ಕೇಳಿ ತಿಳಿದು ಕೊಳ್ಳುತ್ತದ್ದೆ. ಅವಳನ್ನು ಅವಳ ಗಂಡ ಬಿಟ್ಟು ಬಿಟ್ಟಿದ್ದನಂತೆ. ಒಂದು ಗಳಿಗೆ ಅಧೈರ್ಯವುಂಟಾಯಿತು. ಇಂಥೋಳನ್ನ ಕೆಲ್ಸಕ್ಕೆ ಇಟ್ಟುಕೊಂಡಿದೀನಲ್ಲ. ಇವಳಿಂದ ನನ್ನ ಸಂಸಾರಕ್ಕೆ ಏನಾದರೂ ತೊಂದರೆ ಉಂಟಾದರೇ ಅಂತ ಅನ್ನಿಸದೇ ಇರಲಿಲ್ಲ. ಯಾಕಾದ್ರೂ ಕೇಳಿದ್ನೋ ಅಂತಂದುಕೊಂಡು ಪೆಚ್ಚಾದೆ.

ಈ ಮಧ್ಯೆ ನನ್ನ ಒಂದೆರಡು ಸೀರೆಗಳು ಕಣ್ಮರೆಯಾದಾಗ ನನಗೆ ಮೊದಲು ಅನುಮಾನ ಬಂದುದು ಅವಳ ಮೇಲೇ. ಅದರೆ ಕೇಳುವುದು ಹೇಗೆ? ಇವಳೇ ಕದ್ದಿರಬಹುದು ಅಂತ ಪತ್ತೆ ಹಚ್ಚುವುದು ಹೇಗೆ? ಇವಳಿಗೇನು ಕಡಿಮೆ ಮಾಡಿರಲಿಲ್ಲ. ಇನ್ನೇರಡು ತಿಂಗಳು ಕಳೆದಿದ್ದರೆ, ನಾನೇ ಅವಳಿಗೆ ಒಂದು ಸೀರೆಯನ್ನು ಕೊಟ್ಟಿರುತ್ತಿದ್ದೆ. ಈಗ ನೋಡಿದರೆ ಎರಡು ಸೀರೆಗಳು ಮಾಯ.

ಒಂದು ಕಡೆ ಸೀರೆಗಳು ಕಾಣಲಿಲ್ಲವಲ್ಲ ಅಂತ ವ್ಯಥೆ. ಮತ್ತೊಂದು ಕಡ ಅವಳನ್ನು ಕೇಳಲಾಗದ ಅಸಹಾಯಕತೆ. ಕಡೆಗೆ ತಡೆಯಲಾರದೇ ನನ್ನ ಸ್ನೇಹಿತೆಗೆ ನನ್ನ ಸಮಸ್ಯೆಯನ್ನು ಹೇಳಿ, ಏನಾದರು ಉಪಾಯವನ್ನು ಸೂಚಿಸುವಂತೆ ಹೇಳಿದೆ.

“ ಬೀರುವಿನಲ್ಲಿರೋ ನಿನ್ನ ಸೀರೆಗಳನ್ನೇಲ್ಲ ಹೊರತೆಗೆದು, ಅವಳನ್ನು ಕೂರಿಸಿ ಕೊಂಡು ನೀಟಾಗಿ ಮಡಿಸಿ ಕೊಡುವಂತೆ ಹೇಳು. ಅವಳು ಅಸೆಗಣ್ಣುಗಳಿಂದ ಸೀರೆಗಳನ್ನು ಸವರಿ ಸವರಿ ನೋಡಿ ಮಡಿಸಿದರೆ, ಅವಳು ಕಳ್ಳಿಯಲ್ಲ. ಯಾವ ಮಾತೂ ಅಡದೆ ಸರಸರನೆ ಸೀರೇನ ಮಡಿಸಿಕೊಟ್ರರೆ ಅವಳೇ ಕಳ್ಳಿ.”

ನನಗೆ ಉಪಾಯ ಹಿಡಿಸಲಿಲ್ಲ. ಇದೆಂತಹ ಸೈಕಾಲಜಿ? ಅವಳು ಕಳ್ಳಿ ಹೌದೋ ಅಲ್ಲವೋ? ಅವಳಿಗೆ ಕಳ್ಳತನದ ಅಸೆಯನ್ನು ನಾನೇ ಹುಟ್ಟಿಸಿದಂತಾಗುತ್ತದೆ ಎಂದು ಕೊಂಡು ಸುಮ್ಮನಾಗಿಬಿಟ್ಟೆ. ನನ್ನ ಹತ್ತಿರ ಸಾಕಷ್ಟು ಸೀರೆಗಳಿದ್ದವು. ನಾನು ಕೆಲಸಕ್ಕೆ ಹೋಗುತ್ತಿದ್ದಾಗ ಸಾಕಷ್ಟು ಸೀರೆಗಳನ್ನು ಕೊಂಡು ಕೊಂಡಿದ್ದೆ. ಈಗ ಬೀರುವಿನಿಂದ ಬೇರೆ ಬೇರೆ ಸೀರೆಯನ್ನು ಹೊರತೆಗೆದು ಉಡುವ ಉತ್ಸಾಹವೂ ಇಲ್ಲವಾಯಿತು.

ಮನೆಯಲ್ಲಿ ಯಾವುದಾದರೂ ವಸ್ತು ಕಾಣೆಯಾದರೆ, ಕೆಲಸದವರ ಮೇಲೇ ಮೊದಲ ಅನುಮಾನ, ಇದು ಸಹಜ. ಅದರೆ ಇದು ತಪ್ಪು ಕೂಡಾ ಅವರು ಬಡವರು ಅನ್ನೋ ಕಾರಣದಿಂದ, ಅವರ ಮೇಲೆ ಅಪವಾದ ಹೊರಿಸುವುದು ಸರಿಯಲ್ಲ ಅಂತ ನನ್ನ ಅಭಿಪ್ರಾಯ. ಅಲ್ಲದೇ ಈಗಿನ ಕೆಲಸದವರು ಯಾರು. ಹರಕು ಸೀರೆಯನ್ನುಟ್ಟುಕೊಂಡು ಬಂದು, ಸೀರೆಯನ್ನು ಬೇಡುವುದಿಲ್ಲ. ಅವರುಗಳೇ ದಿನಕ್ಕೊಂದು ಒಳ್ಳೇಯ ಸೀರೆಗಳನ್ನುಟ್ಟು ಬರುತ್ತಾರೆ. ಚಪ್ಪಲೆ ಧರಿಸಿ ಬೀದಿಯಲ್ಲಿ ಟಪ್ ಟಪ್ ಅಂತ ಅವರು ನಡೆದು ಬರುವ ಠೀವಿಯನ್ನು ನೋಡಿದರೆ ಯಾರಿಗೂ

ಅವರು ಮನೆ ಕೆಲಸದವರೆಂದು ಅನುಮಾನ ಬರುವುದಿಲ್ಲ. ಪಮ್ಮಿ ಸಹ ನೀಟಾಗಿ ಬರುತ್ತಿದ್ದಳು. ನೋಡಲು ಚೆನ್ನಾಗಿದ್ದಳು. ಅವಳ ಮೇಲೆ ಅಪರಾಧ ಹೊರಿಸಲು ನನ್ನ ಮನ ಒಪ್ಪಲಿಲ್ಲ.

ನನ್ನ ಸ್ನೇಹಿತೆಯ ಮನೆಯಲ್ಲಿ ಏನೋ ಸಮಾರಂಭ ನಮಗೆಲ್ಲಾ ಅಹ್ವಾನವನ್ನು ಇತ್ತಿದ್ದಳು. ಅಟೋದಿಂದ ಇಳಿದು ಮನೆಯೊಳಗೆ ಹೋದೆ. ಹಲೋ ಹಲೋ ಗಳ ನಂತರ, ಅಲ್ಲಿದ್ದ ಸೋಫಾದ ಮೇಲೆ ಕುಳಿತೆವು. ನಾನು ಅತ್ತಿತ್ತ ಕಣ್ಣು ಹಾಯಿಸುತ್ತಿದ್ದಾಗ ನನ್ನ ಗಮನ ಅಲ್ಲಿಯೇ ಓಡಾಡುತ್ತಿದ್ದ ಯುವತಿಯ ಮೇಲೆ ಬಿತ್ತು ಹಾಗೇ ಅವಳುಟ್ಟಿದ್ದ ಸೀರೆಯ ಕಡೆ ಏನೋ ಒಂದು ರೀತಿಯ ವಿಚಿತ್ರ ಅನುಭವ ಮೈಯೊಳಗೆ ಹರಿದಾಡಿ, ನನ್ನನ್ನು ಸುಸ್ತು ಮಾಡಿತು. ಅವಳು ನನ್ನ ಕಳುವಾದ ಸೀರೆಯನ್ನು ಉಟ್ಟಿದ್ದಳು.

ಇವಳ್ಯಾರು ಇವಳಿಗೆ ಈ ಸೀರೆ ಹೇಗೆ ಸಿಕ್ತು? ಮತ್ತೇ ಅವಳನ್ನು ನೋಡಿದೆ. ಇವಳನ್ನು ಈ ಹಿಂದೆ ಎಂದೂ ನೋಡಿದ ನೆನಪಿಲ್ಲ. ಚಡಪಡಿಕೆಯಿಂದ ಅಲ್ಲಿ ಕೂತಿರುವ ಮನಸಾಗಲಿಲ್ಲ. ಅದರೆ ಎದ್ದು ಹೊಗುವುದೂ ಚೆನ್ನಲ್ಲ. ಅಲ್ಲದೇ ಅವಳ್ಯಾರು? ಅವಳಿಗೆ ನನ್ನ ಸೀರೆ ಹೇಗೆ ಸಿಕ್ತು? ಅಂತ ತಿಳಿದುಕೊಳ್ಳ ಬೇಕಾಗಿತ್ತು. ಪೆಚ್ಚಾಗಿ ಕುಳಿತ್ತಿದ್ದ ನನ್ನ ಕಡೆ ಗಮನವಿಲ್ಲದೇ ಉಳಿದವರು ಹರಟುತ್ತಿದ್ದರು. ನನ್ನ ಗಮನವೆಲ್ಲಾ ಆ ಹುಡುಗಿಯ ಕಡೆ.

ಸ್ನೇಹಿತೆಯ ಮನೆಯವರಲ್ಲಿ ಒಬ್ಬಳಂತೆ ಓಡಾಡಿಕೊಂಡಿದ್ದ ಅ ಹುಡುಗಿ ಯಾವ ಅಳುಕು ಇಲ್ಲದೇ ಸಹಾಯಕಳಾಗಿ ಮನೆ ಕೆಲಸದಲ್ಲಿ ನಿರತಳಾಗಿದ್ದಳು. ನಮಗೆಲ್ಲ ಕಾಫಿ ತಿಂಡಿಯ ಉಪಚಾರವಾಯಿತು. ಎಲೆ ಅಡಿಕೆಯೊಂದಿಗೆ ಹೊರಬಂದೆವು. ಅ ಹುಡುಗಿಯ ಬಗ್ಗೆ ನನಗೆ ವಿಚಾರಿಸಲು ಆಗಿರಲೇ ಇಲ್ಲ. ಮನೆಗೆ ವಾಪಸ್ಸು ಬಂದಾಗಲೇ ನನಗೆ ಅರಿವಾದದ್ದು, ನಾನು ನನ್ನ ಪರ್ಸನ್ನು ಅವರ ಮನೇಲೇ ಬಿಟ್ಟು ಬಂದಿದ್ದೆ. ನನ್ನ ಅವಿವೇಕಕ್ಕೆ ಬೇಸರವಾದರೂ ಒಳ್ಳೇಯದೇ ಅಯ್ತು ಎಂದುಕೊಂಡು ನನ್ನ ಸ್ನೇಹಿತೆಗೆ ಪೋನು ಮಾಡಿ ಅವಳ ಮನೆಯಲ್ಲೇ ಪರ್ಸನ್ನು ಬಿಟ್ಟು ಬಂದಿರುವ ವಿಷಯವನ್ನು ತಿಳಿಸಿದೆ.

" ನೀನೇನೂ ಚಿಂತಿಸ್ಬೇಡ ಜೋಪಾನವಾಗಿ ಪರ್ಸನ್ನು ಎತ್ತಿಟ್ಟಿದೀನಿ. ನಾಳೆ ನಾಡಿದರಲ್ಲಿ ಅತ್ತಾಕಡೆ ಬರುವುದಿದೆ ನಾನೇ ತಂದ್ಕೋಡ್ತಿನಿ." ಸ್ನೇಹಿತೆ ಹೇಳಿದಾಗ ಅವಳ ಬರುವನ್ನೇ ನಿರೀಕ್ಷಿಸಿದೆ.

ಹೇಳಿದ್ದಂತೆ ಸ್ನೇಹಿತೆ ಬಂದಳು. ಕುಡಿಯಲು ಶರಬತ್ತು ಮಾಡಿ ಕೊಟ್ಟೆ. ಅನುಮಾನಿಸುತ್ತಾ ಪ್ರಶ್ನಿಸಿದೆ. "ನಿನ್ನ ಮನೆ ಕೆಲಸದವಳು ಹೊಸಬಳಾ? ಅವ[illegible] ಹೇಗೆ?"

" ಅಂದ್ರೆ? ಯಾಕ್ಹಾಗೆ ಕೇಳ್ತಿದೀಯ? "

" ಅವಳುಟ್ಟಿದ್ದ ಸೀರೆ ತಂಬಾ ಚೆನ್ನಾಗಿತ್ತು " ಸ್ನೇಹಿತೆ ಪಕಪಕನೆ ನಕ್ಕಳು.

" ಚೆನ್ನಾಗಿದೆ. ಎಲ್ಲಾ ಬಿಟ್ಟು ನಮ್ಮನೇ ಕೆಲ್ಸದವಳ ಸೀರೇನ ಮೆಚ್ಕೊಂಡಿದೀಯಲ್ಲ. ನಗು ಬರುತ್ತೆ."

" ಯಾಕೇಂದ್ರೆ ಅದು ನನ್ನ ಸೀರೆ" ನಾನು ಗಂಭೀರವಾಗಿ ನುಡಿದೆ.

" ಏನ್ಹೇಳ್ತಿದೀಯ ನೀನು? ನಿಮ್ಮನೇಲಿ ಕೆಲ್ಸಕ್ಕೆ ಈ ಮುಂಚೆ ಬರ್ತಿದ್ಲಾ?"

" ಇಲ್ಲ ಅವಳನ್ನು ನೋಡಿದ್ದು ಇದೇ ಮೊದಲು. ಅದರೆ ಅವಳುಟ್ಟಿದ್ದು ಮಾತ್ರ ನಂದೇ ಸೀರೆ.

ನೀನು ಹೀಗೆಲ್ಲಾ ಮಾತಾಡಿದ್ರೆ ನಂಗೆ ಭಯ ಅಗುತ್ತೆ. ನನ್ಮೇಲೆ ನಿಂಗೆ ಅನುಮಾನ ಇಲ್ಲ ತಾನೇ

" ಛೆ ಸಾರಿ ಕಣೇ ನಂಗೊಂದು ಸಹಾಯ ಮಾಡ್ತಿಯಾ ಅವಳಿಗೆ ಆ ಸೀರೆ ಹೇಗೆ ಸಿಕ್ತು ಅಂತ ಪತ್ತೆ ಹಚ್ಚಿ ಹೇಳ್ತೀಯ ?"

" ನಾನ್ಹೇಗೇ ಕೇಳ್ಲಿ? ನೋಡೋಣ ಪ್ರಯತ್ನ ಪಡ್ತೀನಿ. ಒಂದ್ವರ್ಷದಿಂದ ನಮ್ಮ ನೇಲಿ ಅವರಮ್ಮ ಕೆಲ್ಸ ಮಾಡ್ತಿತಿದ್ದಾಳೆ. ಆಗ ಈಗ ಇವಳು ಬರ್ತಾಳೆ ಈಗ ನೀನು ಹೀಗೆ ಹೇಳ್ತಿರೋದನ್ನ ನೋಡಿದ್ರೆ ನನ್ನ ಸೀರೆಗಳೆಲ್ಲ ಜೋಪಾನವಾಗಿದೆಯ ಅಂತ ಮೊದ್ಲು ನೋಡ್ಬೇಕು. ತಗೋ ನಿನ್ನ ಪರ್ಸ್‌ನ್ನ, ಎಲ್ಲಾ ಸರಿಯಾಗಿದೆಯಾ ಅಂತ ಚೆಕ್ ಮಾಡ್ಕೊ. " ಅವಳು ತಮಾಷೆ ಮಾಡಿದಳು.

" ಸಾರಿ ಕಣೇ ಬೇಸ್ರ ಮಾಡ್ಕೊಬೇಡ. ನನ್ನ ಎರಡು ಸೀರೆಗಳು ಕಳೆದು ಹೋಗಿದ್ದು. ಅದರಲ್ಲಿ ನೆನ್ನೆ ಒಂದನ್ನು ಕಂಡೆ. ಇನ್ನೊಂದು ಯಾರ ಬಳಿ ಇದ್ಯೋ?"

" ಪತ್ತೆ ಹಚ್ಚೋಣ ನಾವು ಕೆಲ್ಸದವರನ್ನು ತುಂಬಾ ನಂಬಿ ಬಿಡ್ತೀವಿ. ಅಲ್ಲದೇ ಅವರಿಲ್ಲದೇ ನಮ್ಮ ಮನೆ ಕೆಲ್ಸ ನಡೆಯೋಲ್ಲ ಅನ್ನೋತರಹ ಮಾತಾಡ್ತೀವಿ. ಈಗೆಲ್ಲ ಅವರದ್ದೇ ಮೇಲುಗೈ ಒಬ್ಬೊಬ್ಬರ ಮನೆ ಅನಭವ ಒಂದೊಂದು ಥರ ಇರುತ್ತೆ. ನೀನ್ಯಾವಳ್ಗೋ ಐವತ್ತು ರುಪಾಯಿ ಕೊಟ್ಟೆ ಅಂತಂಥೆಯಲ್ಲ ಸಿಕ್ತಾ?.

" ಎಲ್ಲಿ ಸಿಕ್ತು ಅವಳೇ ಪತ್ತೇ ಇಲ್ಲ ನೀನು ಹೇಳೋದು ಸರಿ ನಾವು ಅವ್ರುಗಳನ್ನು ತುಂಬಾ ನಂಬಿಬ್ತೀವಿ.

" ಅವಳ್ಹೆಸ್ರೇನಂದೆ ? ಶೃತಿ ಅಲ್ವ, ತಡಿ ತಡಿ ನಮ್ಮನೆ ಎದುರ್ಗಡೆ ಮನೇಲಿ ಶೃತಿ ಅಂತ ಒಬ್ಬಳು ಕೆಲ್ಸ ಮಾಡ್ತಾಳೆ ನಾನು ಪತ್ತೇ ಹಚ್ತೀನಿ. "

" ನಾನು ನಾಳೆ ನಿಮ್ಮನೇಗೆ ಬರ್ಲಾ?"

"ಬೇಡ ಬೇಡ ನೀನು ಬಂದ್ರೆ ಅವಳಿಗೆ ಅನುಮಾನ ಬರತ್ತೆ" ನನ್ನ ಸ್ನೇಹಿತೆ

ಹೊರಟು ಹೋದಳು. ಒಂದೆರಡು ದಿನಗಳ ನಂತರ ಫೋನು ಮಾಡಿದ್ದಳು.

" ನಿನಗೆ ಬಿಡುವಾಗಿದ್ರೆ ಈಗ್ಲೇ ಬಾ ನಾನು ನಿನ್ನನ್ನು ಒಂದ್ಕಡೆಗೆ ಕರ್‍ಕೊಂಡ್ಹೋಗ್ತೀನೀಂತ "

ಕೇಳಿದ್ದಕ್ಕೆ " ಸಸ್ಪೆನ್ಸ್ ಎಂದಿದ್ದಳು ಆಟೋ ಹಿಡಿದು ಅವಳ ಮನೆಗೆ ಹೋದೆ. ಅಲ್ಲಿಂದ ಸೀದಾ ನಾವಿಬ್ಬರೂ, ಒಂದೆರಡು ಕಿಲೋ ಮೀಟರುಗಳ ಆಚೆ ಯಾವುದೋ ಬಡಾವಣೆಯಲ್ಲಿದ್ದ ಒಂದು ಮನೆಗೆ ಬಂದೆವು. ಮನೆಯ ಒಡತಿ ಸುಶೀಲಮ್ಮ ಕಟ್ಟು ಮಸ್ತಾಗಿದ್ದಾಳೆ. ನಮ್ಮನ್ನ ಒಳಬರ ಮಾಡಿಕೊಂಡಳು. ನನ್ನ ಸ್ನೇಹಿತೆಯೇ ಮಾತನಾಡಿದಳು. ನನಗೆ ಸುಮ್ಮನಿರುವಂತೆ ಸಂಜ್ಞೆ ಮಾಡಿದ್ದಳು. ನಮ್ಮಿಬ್ಬರ ಹೆಸರನ್ನು, ವಿಳಾಸವನ್ನು ಮರೆಮಾಚಿ ಬೇರೆಯೇ ತಿಳಿಸಿದ್ದಳು.

" ನಮಗೆ ಮನೆ ಕೆಲಸಕ್ಕೆ ಹೆಂಗಸ್ರು ಬೇಕು ನೀವು ಏಜೆಂಟ್ ಅಂತ ತಿಳೀತು."

ಸಧ್ಯಕ್ಕೆ ಕೆಲಸದ ಹೆಂಗಸರು ಇಲ್ಲ. ಸಿಕ್ಕ ಕೂಡ್ಲೇ ತಿಳಿಸ್ತೀವಿ. ನಿಮಗೆ ಎಂಥೋರು ಬೇಕು. ಎಷ್ಟು ಸಂಬಳ ಕೊಡುತ್ತೀರಿ. ಇತ್ಯಾದಿ ತಿಳಿಸಿ. ನಾನು ನೋಟ್ ಮಾಡ್ಕೋತೀನಿ" ಎನ್ನುತ್ತಾ ಅವಳು ಒಂದು ರಿಜಿಸ್ಟರ್ ಬುಕ್‌ನ ತೆಗೆದಳು.

" ಹೌದು ಇಂಥಾ ಕೆಲಸಕೆ ಇಳಿದ ಮೇಲೆ ಎಲ್ಲಾ ಸರಿಯಾಗಿ ನಿರ್ವಹಿಸಬೇಕು. ನನ್ನ ಈ ಸಮಾಜ ಸೇವೆಗೆ ಒಂದು ಸಂಘದವರು ಅವಾರ್ಡ್ ಸಹ ಕೊಟ್ಟಿದಾರೆ ಇದರಲ್ಲಿ ನಿಮ್ಮ ಹೆಸರು ವಿಳಾಸ ವಿವರಣೆ ಎಲ್ಲಾ ಬರೆದಿಡಿ. ನಾನು ಈಗ ಬರ್ತೀನಿ" ಅಕೆ ಅತ್ತ ಹೋದ ಕೂಡಲೇ ಅಲ್ಲಿಯೇ ಇದ್ದ ಇನ್ನೊಂದು ರಿಜಿಸ್ಟರ್ ಬುಕ್ ನ ಎತ್ತಿಕೊಂಡೆ. ಅದರಲ್ಲಿ ಕೆಲಸದವರ ಹೆಸರು ವಿಳಾಸ ಇತ್ತು. ಸರಸರನೆ ಪುಟಗಳನ್ನು ತಿರುಗಿಸಿದೆ. ಅದರಲ್ಲಿ ಶೃತಿ, ಪಮ್ಮಿ, ಹಾಗು ನನ್ನ ಸ್ನೇಹಿತೆಯ ರನೇಕರ ಮನೆಯಲ್ಲಿ ಕೆಲಸ ಮಾಡುವವರ ಹೆಸರುಗಳಿದ್ದವು. ಅಷ್ಟರಲ್ಲಿ ಅಕೆ ಎರಡು ಲೋಟಗಳಲ್ಲಿ ರಸ್ನಾ ತಂದಿತ್ತಳು. " ಇದೆಲ್ಲ ಯಾಕೆ?" ಸಂಕೋಚದಿಂದ ನುಡಿದೆವು.

" ಇರಲಿ ತಗೊಳ್ಳಿ ಹೊರಗಡೆ ಬಿಸಿಲು ಒಳಗೆ ಶೆಖೆ ಫ್ಯಾನು ಕೆಟ್ಹೋಗಿದೆ.' ಆಕೆ ಉಪಚರಿಸಿದಳು.

" ಇದೆಲ್ಲ ಏನು? ಇನ್ನು ಏನಾದ್ರು ಬಿಸಿನೆಸ್ ಮಾಡ್ತಿರಾ?" ನಾನು ಕೇಳಿದೆ.

" ಹುಂ. ಸೆಕೆಂಡ್ ಹ್ಯಾಂಡ್ ಸಾಮಾನುಗಳನ್ನು ಸೇಲ್ ಮಾಡ್ತೀನಿ"

ಮತ್ತೆ ಈ ಸೀರೇಗಳು?

" ಇವಾ? ಇದನ್ನೆಲ್ಲ ಈ ಕೆಲಸದ ಹೆಂಗಸ್ರು ತಂದು ಕೊಡ್ತಾರೆ ಹೀಗೇ ನಿಮ್ಮಂಥೋರು ಕೊಟ್ಟಿರ್ತೀರಲ್ಲ. ಹಾಗೇ ಹಳೇ ನಿರಾಜಿಯ ಸೀರೆಗಳನ್ನು ಪಾತ್ರೆ ಮಾರುವವನು ತಂದು ಕೊಡ್ತಾನೆ. ಅವರುಗಳ ಮನೆ ಚಿಕ್ಕದು ಇಲಿ ಕಾಟ ಇಲ್ಲಿ ಸೇಫ್ ಅಗಿರುತ್ತೆ ನಾನು ಕಡಿಮೆ ರೇಟಿಗೆ ಮಾರ್ತೀನಿ. ಎಷ್ಟೋ ಸೀರೆಗಳು ತುಂಬಾ

ಚೆನ್ನಾಗಿವೆ ತೋರಿಸ್ಲಾ ನೀವುಗಳು ಬೇಕಾದ್ರೆ ಕೊಂಡ್ಕೊಂಡು ಬಡಬಗ್ಗರಿಗೆ ದಾನ ಮಾಡಬಹುದು."

ಆಕೆಯ ಮಾತು ಕೇಳಿ ನಾನು ದಂಗಾದೆ. ೨ ರೂ. ಅಂದು ಬಿಸಿನೇಸ್ ನೀವು ಈ ಹಗಾನ ಏನು ಮಾಡ್ತೀರಿ?" ಉಗುಳು ನುಂಗಿ ಕೇಳಿದೆ.

" ಇಪ್ಪತ್ತು ರುಪಾಯಿಗೆ ಒಂದು ಸೀರೆ ಅಂತ ತಗೋತೀನಿ. ನಾನೇ ಒಂದು ರೇಟ್ ಫಿಕ್ಸ್ ಮಾಡಿ ಮಾರ್ತೀನಿ. ಅವರುಗಳೇ ಕೊಂಡ್ಕಂಡ್ರೆ ಸ್ವಲ್ಪ ರಿಯಾಯಿತಿ ಸಹ ಕೊಡ್ತೀನಿ. ನೋಡಿ. ಎಷ್ಟು ಚೆನ್ನಾದ ಸೀರೆಗಳಿವೆ. ಈಗಿನ ಕಾಲದೋರು ಹೊಸ ಹೊಸ ಸೀರೆಗಳನ್ನು ಕೊಂಡ್ಕಳ್ತಾನೆ ಇರ್ತಾರೆ. ಹಾಗೇ ಧಾರಾಳವಾಗಿ ಕೆಲ್ಸದೋರ್ಗೆ ಕೊಡ್ತಾರೆ. ಹಿಂದಿನ ಕಾಲದಲ್ಲಿ ಪಾಪ, ಹೆಂಗಸ್ರಿಗೆ ಮೈ ಮೇಲೋಂದು ಗಳು ಮೇಲೊಂದು ಸೀರೆ ಅಷ್ಟೇ" ಲೊಚ ಗುಟ್ಟಿದಳು.

ನನ್ನ ಧ್ಯಾನ ಕಪಾಟೀನಲ್ಲಿದ್ದ ಸೀರೆಗಳ ಮೇಲಿತ್ತು. ನನ್ನ ಸೀರೆ ಏನಾದರು ಕಣ್ಣಿಗೆ ಬೀಳಬಹುದೇನೋ ಎಂಬ ಚಪಲ. ಅದರೆ ಕೈಯಲ್ಲಿ ಮುಟ್ಟಿ ನೋಡುವ ಮನಸ್ಸಾಗಲಿಲ್ಲ.

" ನಿಮ್ಮ ಬಳಿ ಎಷ್ಟು ಜನ ಕೆಲ್ಸದವರಿದಾರೆ?"

" ಬೇಕಾದಷ್ಟು ಜನರಿದ್ದಾರೆ. ಗಂಡಸು ಕೆಲಸದಾಳು ಸಹ ಸಿಗ್ತಾರೆ" ಆಕೆಯ ಬಿಸಿನೆಸ್ ಬಗ್ಗೆ ಬೇಸರ ಬಂತು.

" ಎಲ್ಲಾಮಾಡುಕ್ಕೆ ತೊಂದರೆ ಆಗುಲ್ವಾ?"

" ತೊಂದ್ರೆ ಅಗ್ದೇ ಏನು? ಈ ಕೆಲ್ಸದೋರ ಗಂಡಸ್ರು ಕುಡಿದು ಬಂದು ಗಲಾಟೆ ಮಾಡ್ತಾರೆ. ಹೆದರಿಸಿ ಬೆದರಿಸಿ ಹಣ ಕೀಳೋಕೆ ನೋಡ್ತಾರೆ. ಪೋಲಿಸ್ನೋರ ಸಹಾಯನು ಬೇಕಾಗುತ್ತೆ."

"ಮತ್ಯಾಕೆ ಇಂಥ ಬಿಸಿನೇಸ್ ಗೆ ಇಳ್ದಿದ್ದೀರಿ?"

"ಸಮಾಜಸೇವೆ" ಅಕೆ ಮೆಲುನಗೆ ನಕ್ಕಳು ನಿಮ್ಗೆ ಕೆಲ್ಸದವರನ್ನ ಒದಗಿಸಿ ಕೊಡ್ತೀನಿ ಹಾಗೇ ಕೆಲ್ಸದ ಹೆಂಗಸ್ರಿಗೆ ಸಹಾಯ ಮಾಡ್ತೀನಿ.."

"ಇದ್ರಿಂದ ನಿಮಗೆ ಲಾಭ ಏನಾದ್ರು ಇದೆಯಾ ಮೇಡಂ?"

"ಇಲ್ಲದೇ ಏನು? ಕಮೀಷನ್ ಇಸ್ಕೋತೀನಿ ಇಲ್ದಿದ್ರೆ ನಡೀ ಬೇಕಲ್ಲ."

"ನೀವು ಎಷ್ಟು ಸಂಬಳ ಫಿಕ್ಸ್ ಮಾಡ್ತೀರೋ ಒಂದು ತಿಂಗಳ ಸಂಬಳದಲ್ಲಿ ನನಗೆ ಕಮಿಶನ್ ಹಾಗೆ ಅವರಹತ್ರ ಇಪ್ಪತ್ತೈದು ಪರ್ಸೆಂಟ್ ತಗೋತೀನಿ ವರ್ಷವಿಡೀ ಸೀರೆಗಳು ಅದು ಇದೂ ಸ್ಟೀಲ್ ಪಾತ್ರೆಗಳು ಎಂತೆಂಥದನ್ನೋ ತಂದು ಕೊಡ್ತಾರೆ. ಸಾಲ ತಗೋತಾರೆ ಬಡ್ಡಿ ಕೊಡ್ತಾರೆ."

" ಬಡ್ಡಿ ಹಣಾನ ಸರ್ಯಾಗಿ ಕೊಡ್ತಾರಾ?"

" ಎಲ್ಲಿ ಕೊಡ್ತಾರೆ. ಒದ್ದು ವಸೂಲು ಮಾಡ್ತೀನಿ. ಒಂದೊಂದ್ಸಲ ಎಲ್ಲಾ ಬಿಟ್ಟು ಬಿಡೋಣ ಅಂತನ್ನಿಸುತ್ತೇ. ಆದರೆ ನಿಮ್ಮಂಥೋರಿಗೆ ತೊಂದ್ರೆ ಆಗುತ್ತಲ್ಲ ಅಂತ. ಇನ್ನೊಂದೆರಡು ಬ್ರ್ಯಾಂಚ್ ತೆಗೆಯೋಣ ಅಂತ ತಕ್ಕ ಸಮಯ, ತಕ್ಕ ಸ್ಥಳಾನ ಹುಡುಕ್ತಿದ್ದೀನಿ"

"ಇನ್ನು ಸಾಕೆಂದು ಅಲ್ಲಿಂದ ಹೊರಟವು. ಕೆಲಸದವರ ಸಣ್ಣ ಪುಟ್ಟ ಕಳ್ಳತನ ದಲ್ಲಿ ಈಕೆಯೂ ಶಾಮೀಲಾಗಿದಾಳೆಂದೆನಿಸಿತ್ತು. ಅದರೆ ಇವಳ ಬಿಸಿನೆಸ್ಸಿನ ಕೈಗಳು ಎಲ್ಲಿವರೆಗೆ ಚಾಚಿಕೊಂಡಿದೆಯೋ" ಎಂದುಕೊಂಡು ಸುಮ್ಮನಾದೆವು.

ಪಮ್ಮಿಯ ಕೈಗೆ ನೂರು ರುಪಾಯ ಹಾಕಿ, ಅವಳ ಬಾಯಿಬಿಡಿಸಿದೆ. ಶೃತಿ ನನ್ನ ಅಕ್ಕ ಅವಳ ನಿಜವಾದ ಹೆಸರು ಶಾಂತ. ಅವಳೇ ನಿಮ್ಮ ಮನೆಗೆ ನನ್ನನ್ನು ಕಳಿಸಿದ್ದು. ಸೀರೇನ ಕದೀದೇ ಇದ್ರೆ ಮನೆಯಿಂದಾಚೆ ತಳ್ತೀನಿ ಅಂತ ಹೆದರಿಸಿದ್ಲು. ತಪ್ಪಾತಮ್ನೋರೆ ಇನ್ನೇಲೆ ಇಂಥ ಕೆಲಸಾನ ಮಾಡುಲ್ಲ."

"ಬೀರುವಿನಲ್ಲಿದ್ದ ಸೀರೆ ನಿಂಗೆ ಹೇಗೆ ಸಿಕ್ತು?"

" ನಿಮ್ಮಜಮಾನ್ರು ಬೀರು ಬಾಗಿಲನ್ನು ಸರಿಯಾಗಿ ಹಾಕಿರಲಿಲ್ಲ. ಸಮಯ ನೋಡಿ ಎರಡು ಸೀರೇನ ಎಳೆದು ಮಂಚದ ಕೆಳಗೆ ಮುಚ್ಚಿಟ್ಟದ್ದೆ. ಅ ಮೇಲೆ ನಿಮ್ಗೆ ಕಾಣ್ದಂಗೆ ಹೊರಕ್ಕೊಯ್ದು ನಮ್ಮಕ್ಕಂಗೆ ಕೊಟ್ಟೆ. ಅವಳು ಮಾರ್ಕೊಂಡ್ಲು " ಪಮ್ಮಿ ಅಳತೊಡಗಿದ್ದಳು.

" ನಾನೀಗ ನಿನ್ನನ್ನ ಪೋಲಿಸ್ನೋರ್ಗೆ ಹಿಡ್ಕೊಡ್ತೀನಿ."

" ಬೇಡ್ರವ್ವಾ ಹಾಗೆ ಮಾಡ್ಬೇಡಿ " ಅವಳು ಕಾಲನ್ನು ಹಿಡಿದುಕೊಂಡಳು.

" ಸರಿ ಪೋಲಿಸರಿಗೆ ತಿಳಿಸುಲ್ಲ. ಅದ್ರೆ ನೀನು ನಂಗೆ ಸಹಾಯ ಮಾಡ್ಬೇಕು"

ಅವಳು ಏನು ಮಾಡಬೇಕೆಂಬುದನ್ನು ತಿಳಿಸಿದೆ. ಅವಳು ಒಪ್ಪಿಕೊಂಡಳು.

ಆದರೆ ಅವಳು ಮಾರನೇ ದಿನ ಕೆಲಸಕ್ಕೆ ಬರಲಿಲ್ಲ. ನನ್ನ ಅನುಮಾನ ಹೆಚ್ಚಾಯಿತು. ನನ್ನ ಸ್ನೇಹಿತೆಗೆ ಪೋನು ಮಾಡಿದೆ. ಇಬ್ಬರು ಪೋಲಿಸ್ ಸ್ಟೇಷನ್ ಗೆ ಬಂದು ಪೋಲಿಸ್ ಕಂಪ್ಲೇಂಟ್ ಕೊಟ್ಟೆವು. ಅಲ್ಲಿಂದ ಆ ಮನೆಗೆ ಪೋಲಿಸರೊಡನೆ ಹೋದೆವು. ಅಲ್ಲಿ ನಮಗೆ ಒಂದು ಅಶ್ಚರ್ಯ ಕಾದಿತ್ತು. ಅಲ್ಲಿ ಯಾವ ಸುಶೀಲಮ್ಮನು ಇರಲಿಲ್ಲ. ಯಾವ ಸೆಕೆಂಡ್ ಹ್ಯಾಂಡ್ ವಸ್ತುಗಳು ಇರಲಿಲ್ಲ. ಒಂದು ರಾತ್ರಿಯೊಳಗೆ ಎಲ್ಲಾ ಮಾಯ? "ಇದ್ಹೇಗೆ ಸಾಧ್ಯವಾಯಿತು?"

* * *

೩. ಒಡಲ ಆಳದಲ್ಲಿ

ತೀರ್ಥ ಪ್ರಸಾದವನ್ನು ತೆಗೆದುಕೊಂಡು, ಮತ್ತೊಮ್ಮೆ ದೇವರಿಗೆ ಕೈಮುಗಿದು, ಹೂವು ಹಣ್ಣುಗಳಿದ್ದ ಬುಟ್ಟಿಯನ್ನು ಕೈಯಲ್ಲಿ ಹಿಡಿದು ಹೊರಬಂದಳು ಯಶೋದ. ಮೆಟ್ಟಿಲ ಬಳಿ ಕುಳಿತ್ತಿದ್ದ ಹೆಂಗಸನ್ನು ಕಂಡಳು. ಈ ಮುಂಚೆ ಎಲ್ಲಿಯೋ ನೋಡಿರಬಹುದು ಎಂಬ ಶಂಕೆ ಕಾಡಿತು. ಅವಳ ಪಕ್ಕದಲ್ಲಿ ಕುಳಿತಿದ್ದ ಯುವತಿಯನ್ನು ಕಂಡಳು. ಏನನ್ನೋ ಕೆದಕಿ ನೋಡಿದ ಅನುಭವವಾಯಿತು. ದುಡುದುಡನೆ ಮೆಟ್ಟಿಲುಗಳನ್ನಿಳಿದು ಕಾರುಗಳನ್ನು ನಿಲ್ಲಿಸಿದ್ದ ಸ್ಥಳಕ್ಕೆ ಬಂದಳು. ಮತ್ತೊಮ್ಮೆ ಹಿಂತಿರುಗಿ ಆ ತಾಯಿ ಮಗಳನ್ನೇ ನೋಡಿದಳು ತಳಮಳಗೊಂಡಳು. ತನ್ನನ್ನು ಯಾರಾದರೂ ಗಮನಿಸುತ್ತಿರಬಹುದೇ ಎಂದು ತನ್ನ ಸುತ್ತಮುತ್ತ ನೋಡಿದಳು. ಮಗ ಕಾರಿನ ಹಾರನ್ ಮಾಡಿ ಎಚ್ಚರಿಸಿದ ಕಾರಿನ ಬಾಗಿಲನ್ನು ತೆರೆದು ಹತ್ತುವ ಮೊದಲು ಮತ್ತೊಮ್ಮೆ ಮೆಟ್ಟಿಲು ಕಡೆ ನೋಡಿದಳು. ಅಲ್ಲಿ ಅವರಿಬ್ಬರೂ ಇರಲಿಲ್ಲ. ಹೊಟು ಹೋಗಿದ್ದರು.

ಈ ದಿನ ಮಗನ ಇಪ್ಪತ್ತೈದನೆಯ ವರ್ಷದ ಹುಟ್ಟಿದ ಹಬ್ಬ ದೇವರಿಗೆ ಅಭಿಷೇಕ ಮಾಡಿಸಲೆಂದು ಕೊಟ್ಟಿದ್ದಳು. ಮಗನನ್ನು ಬಲವಂತವಾಗಿ ಹೊರಡಿಸಿದ್ದಳು. ಅವನು ಗೊಣಗುಟ್ಟಿದರೂ, ಕಾರನ್ನು ಓಡಿಸಲು ಡ್ರೈವರ್ ಇಲ್ಲದಿದುದರಿಂದ ಹೊರಟಿದ್ದ ಪಕ್ಕದಲ್ಲಿ ಕುಳಿತ್ತಿದ್ದ ಮಗನನ್ನೇ ಕಣ್ತುಂಬಾ ನೋಡಿದಳು. ಈ ಹಿಂದ ತಾನೆಂದು ಅವನನ್ನು ನೋಡಿಯೇ ಇರಲಿಲ್ಲವೆಂಬಂತೆ ಮತ್ತೆ ಮತ್ತೆ ನೋಡಿದಳು. ಆ ಹೆಂಗಸು ತನ್ನನ್ನು ತನ್ನ ಮಗನನ್ನು ನೋಡಿರಬಹುದೇ ಅಂತಂದು ಕೊಂಡಾಗ ಎದೆ ಭಾರ ವಾಗಿತ್ತು. ಆದರೆ ಅವಳಾಗಲೀ ಅವಳ ಬಳಿ ಕುಳಿತಿದ್ದ ಯುವತಿಯಾಗಲಿ ತನ್ನ ಕಡೆ ನೋಡಲಿಲ್ಲವೆಂದು ತನಗೆ ತಾನೇ ಸಮಾಧಾನ ಹೇಳಿಕೊಂಡಳು.

"ಅಮ್ಮಾ.. ಮನೆ ಬಂತು ಇಳಿ" ಮಗ ಜಬರ್‌ದಸ್ತಿನಿಂದ ನುಡಿದಾಗ ಎಚ್ಚೆತ್ತು ಕಾರಿನಿಂದ ಇಳಿದಳು.

"ನೀನು ಈಗ ಮತ್ತೆ ಎಲ್ಲಿಯೂ ಹೋಗ್ಬೇಡ. ಇವತ್ತು ನಿನ್ನ ಹುಟ್ಟಿದ ಹಬ್ಬ. ಹಬ್ಬದ ಅಡಿಗೆ ಮಾಡಿರ್ತಾರೆ. ಎಲ್ಲರೂ ಊಟಕ್ಕೆ ಬರ್ತಾರೆ.. " ನೆನಪಿಸುವವಳಂತೆ ಹೇಳಿದಳು.

"ಶಾಲು, ಮಾಲೀ ಬರ್ತಾರಾ?... ನಾನು ಫ್ರೆಂಡ್ ಮನೆಗೆ ಹೋಗ್ತೀನಿ." ಅವನು ಬೇಸರದಿಂದ ನುಡಿದಾಗ ನಯವಾಗಿ ಗದರಿದಳು.

"ನಿನ್ನ ಹುಟ್ಟಿದ ಹಬ್ಬ ಅಂತ, ನಾನೇ ಅವರಿಗೆ ಫೋನು ಮಾಡಿ ಕರೆದಿದೀನಿ. ನೀನೇ ಇಲ್ಲದಿದ್ರೆ ಬೇಸರ ಮಾಡ್ಕೋತಾರೆ. ಸುಮ್ಮನೇ ಇಳಿದುಬಾ" ತಾನು ಮನೆಯ ಕಡೆಗೆ ತಿರುಗಿದಳು.

ಹೆಣ್ಣು ಮಕ್ಕಳಿಬ್ಬರೂ, ಬಂದು ತಮ್ಮನಿಗೆ ಉಡುಗೊರೆಯನ್ನು ಕೊಟ್ಟು ವಿಶ್ ಮಾಡಿ, ಸಿಹಿ ಊಟವನ್ನು ಮಾಡಿ ಹೊರಟು ಹೋಗಿದ್ದರು. ನವೀನ ತನ್ನ ರೂಮಿಗೆ ಹೊರಟು ಹೋಗಿದ್ದ. ಯಶೋದ ತನ್ನ ರೂಮಿಗೆ ಬಂದು ಕಿಟಕಿಯ ಬಳಿ ನಿಂತಳು. ಹೊರಗೆ ಬೀದಿಯಲ್ಲಿ ಜನರ ಓಡಾಟ ಎಂದಿನಂತೆ ಇತ್ತು. ಈ ಜನ ಜಂಗುಳಿಯ ನಡುವೆ ಆ ಹೆಂಗಸು, ಹಾಗೂ ಆ ಯುವತಿ ತನ್ನ ಮನೆಯ ಕಡೆಯೇ ನೋಡುತ್ತಿರಬಹುದೇ ಎಂಬ ಅನುಮಾನ ಮತ್ತೆ ಕಾಡಿತು. ಸರ್‍ರನೆ ಕಿಟಕಿಯ ಪರದೆಯನ್ನು ಸರಿಸಿ ಮಂಚದ ಮೇಲೆ ಕುಳಿತಳು. ಪೋನು ರಿಂಗಾಯಿತು ಬೆಚ್ಚಿ ಬಿದ್ದಳು... ಇಷ್ಟು ಹೊತ್ನಲ್ಲಿ ಯಾರು ಪೋನು ಮಾಡಿರಬಹುದು! ಕೊಲ್ಕತ್ತಾಕ್ಕೆ ಹೋಗಿರುವ ಗಂಡ ಬೆಳಿಗ್ಗೆಯೇ ಮಾತನಾಡಿದ್ದ... ಎದ್ದು ಹೋಗಿ ನೋಡಲು ಬೇಸರಿಸಿ ಹಾಗೇ ಸುಮ್ಮನೆ ಕುಳಿತಳು.

"ಅಮ್ಮಾ ನಿಂಗೆ ಪೋನು... ನಂದಿನಿ ಆಂಟಿಯಂತೆ...?" ಮಗ ಬಾಗಿಲ ಬಳಿ ನಿಂತು ಹೇಳಿದಾಗ, ಪಿಚ್ ಎಂದಳು.

"ಅಮ್ಮ ಮಲಗಿದಾಳೆ ಅಂತ ಹೇಳೋ ನವೀನ... ನನಗೆ ಈಗ ಮಾತನಾಡುವ ಮೂಡ್ ಇಲ್ಲ" ನವೀನ ಹಾಗೆಯೇ ಹೇಳಿದ. ಆದರೂ ಇವಳಿಗೆ ಸಮಾಧಾನವಾಗಿರಲಿಲ್ಲ. ನೆಮ್ಮದಿ ಕಲಕಿತ್ತು. ಇವತ್ತು ನನಗೆ ಏನಾಗಿದೆ? ಎಂದೂ ಈ ಭಯ ಕಾಡಿರಲಿಲ್ಲ. ಬಾಗಿಲನ್ನು ಓರೆ ಮಾಡಿ, ಮಂಚದ ಮೇಲೆ ಉರುಳಿದಳು. ದಿಂಬಿಗೆ ತಲೆ ತಾಗಿದಾಗ ಅಭ್ಯಾಸ ಬಲದಂತೆ ನಿದ್ದೆ ಹತ್ತಿತ್ತು. ಕಾಲಿಂಗ್ ಬೆಲ್‌ನ ಸದ್ದು ಕೇಳಿ ಬೆಚ್ಚಿ ಎದ್ದಳು. ಅರೆನಿದ್ದೆಯಲ್ಲಿದ್ದವಳಿಗೆ ತಕ್ಷಣಕ್ಕೆ ಗೊತ್ತಾಗಲಿಲ್ಲವಾದರೂ ಮತ್ತೆ ಕಾಲಿಂಗ್ ಬೆಲ್ ಬಾರಿಸಿದಾಗ ಎದ್ದಳು.

ಹೊರ ಬಾಗಿಲಲ್ಲಿ ನಂದಿನಿ ನಿಂತಿದ್ದಳು. ಸ್ವಲ್ಪ ಬೇಸರವೆನಿಸಿದರೂ ನಗು ಮುಖವನ್ನು ತೋರಿದಳು. ಅವಳು ಇವಳಿಗೆ ಓರಗಿತ್ತಿ.

"ಮಲಗಿದ್ರಾ ಅತ್ತಿಗೆ? ಸಾರಿ ಡಿಸ್ಟರ್ಬ್ ಮಾಡಿದೆ" ಎನ್ನುತ್ತಾ ನಂದಿನಿ ಒಳಗೆ ಬಂದಳು. ಇವತ್ತು ನವೀನನ ಬರ್ತ್‌ಡೇ ಅಲ್ವಾ? ವಿಶ್ ಮಾಡಿ ಸ್ವೀಟ್ಸ್ ಕೊಟ್ಟು ಹೋಗೋಣಾಂತ ಬಂದೆ. ಯಶೋದಾಳ ಚಿತ್ತ ಅವಳ ಮಾತಿನ ಮೇಲಿರಲಿಲ್ಲ, ತನ್ನ ಮಗನಿಗೆ ಇಪ್ಪತ್ತೈದು ವರ್ಷಗಳು ತುಂಬಿದೆ. ಆ ದಿನಗಳು ನೆನಪಾಗಿದ್ದವು.

"ಅತ್ತಿಗೆ ಏನಾಗಿದೆ ನಿಮಗೆ ಇವತ್ತು? ಭಾವ ಊರಿನಲ್ಲಿಲ್ಲ ಅಂತ ಬೇಸರಾನಾ?.. ಇವತ್ತು ಏನು ಸ್ಪೆಶಲ್ ಅಡಿಗೆ?"

"ಹೆಚ್ಚಿಗೆ ಏನೂ ಮಾಡಿಸ್ಲಿಲ್ಲ ನಂದಿನಿ. ದೇವಸ್ಥಾನದಲ್ಲಿ ಅಭಿಷೇಕಕ್ಕೆ ಕೊಟ್ಟಿದ್ದೆ, ಕೂತ್ಕೋ ಪ್ರಸಾದಾನ ಕೊಡ್ತೀನಿ."

ನಿಧಾನವಾಗಿ ಕೊಡೋರಂತೆ. ನೀವು ಎಂದಿನಂತೆ ಇಲ್ಲ, ಡಲ್ ಆಗಿದೀರಿ. ನವೀನ ಏನಾದ್ರೂ ಬೇಸರ ಮಾಡಿದ್ನಾ?.. ಮಾಲಿನಿ, ಶಾಲಿನಿ ಬರಲಿಲ್ವಾ!...

" ಏಕೋ ಗೊತ್ತಿಲ್ಲ ನಂದಿನಿ. ದೇವಸ್ಥಾನಕ್ಕೆ ಹೋಗಿ ಬಂದಾಗ್ನಿಂದ ಸಣ್ಣಗೆ ತಲೆ ನೋಯ್ತಿದೆ. ಮಾಲಿ, ಶಾಲೂ ಬಂದು ಊಟ ಮಾಡ್ಕೊಂಡು ಹೋದ್ರು... ನಾನು ಏನೂ ಕೆಲಸ ಇರಲಿಲ್ಲವಲ್ಲ ಮಲಗಿದ್ದೆ ಅಷ್ಟೆ. ಕಾಫಿ ಮಾಡ್ತಿನಿ. ಅಲ್ಲೇ ಮಾತನಾಡೋಣ ಬಾ..

ನೀವು ಮಲಗಿರಿ ಅತ್ತಿಗೆ ನಾನೇ ಕಾಫಿ ಮಾಡ್ಕೊಂಡು ಬರ್ತಿನಿ ನಂದಿನಿ ಎದ್ದು ಅಡಿಗೆ ಮನೆಗೆ ಹೊರಟಳು. ಯಶೋದ ಅವಳನ್ನು ಹಿಂಬಾಲಿಸಿದಳು. ನಂದಿನಿ ಸ್ಟವ್ ಹೊತ್ತಿಸಿ ಹಾಲನ್ನು ಬಿಸಿ ಮಾಡಲು ಇಟ್ಟಳು. ಯಶೋದಾ ತಿಂಡಿಯ ಡಬ್ಬಗಳನ್ನು ತೆಗೆದಳು.

"ಏನೇನೋ ಕರಿದ ತಿಂಡಿಗಳಿವೆ. ನೀವು ಏನಾದ್ರೂ ತಿಂಡಿಗಳನ್ನು ಮಾಡಿಸ್ತಾನೇ ಇರ್ತೀರಿ." ಎನ್ನುತ್ತಾ ಯಶೋದಾ ತಟ್ಟೆಗೆ ಹಾಕಿಕೊಟ್ಟ ಕುರುಕುಲು ತಿಂಡಿಗಳನ್ನು ತಿನ್ನತೊಡಗಿದಳು.

"ಅತ್ತಿಗೆ ನಾನೊಂದು ವಿಚಾರ ಹೇಳ್ಬೇಕಾಗಿತ್ತು. ನೀವು ನಗ್ಬಾರ್ದು."

"ನಾಸ್ಯಾಕೆ ನಗ್ಲೀ ಹೇಳು..?"

"ನಾನು ಜ್ಯೋತಿಷಿ ಹತ್ತಿರ ಹೋಗ್ಬೇಕಾಗಿತ್ತು. ನಂಜೊತೆಗೆ ಬರ್ತೀರಾ?"

"ಏನು ಕೇಳ್ಬೇಕಾಗಿತ್ತು?... ನಿನ್ನ ಮಕ್ಕಳು ಇನ್ನು ಚಿಕ್ಕೋರು ಮದುವೆ ಮಾತು ಈಗಲೇ ಏನಿಲ್ಲವಲ್ಲ.?"

"ನನ್ನ ಬಗ್ಗನೇ ಕೇಳ್ಬೇಕಾಗಿತ್ತು... ನನಗೀಗ ಎರಡು ತಿಂಗಳಾಗಿದೆ..." ದೃಷ್ಟಿ ಕೆಳಕ್ಕೆ ಜಾರಿತು.

"ಹೌದಾ ನಂದಿನಿ!.. ಈಗ ಹೇಳ್ತಾ ಇದೀಯಲ್ಲ. ನಂಗೆ ಗೊತ್ತಾಗ್ಲಿಲ್ಲ.. ಇದನ್ನು ಜ್ಯೋತಿಷಿ ಹತ್ರ ಯಾಕೆ ಹೇಳ್ಬೇಕು? ಡಾಕ್ಟರ ಹತ್ರ ಹೋಗು.. "

ಡಾಕ್ಟರ ಹತ್ರ ಹೋಗಿದ್ದೆ ಅತ್ತಿಗೆ. ಕನ್‌ಫರ್ಮ್ ಆಗಿದೆ.. ಆದರೆ ಏನೋ ಒಂದು ಅಸೆ.. ಈಸಾರಿಯಾದ್ರೂ ಗಂಡು ಮಗುವಾಗಲಿ ಅಂತ. ಯಶೋ಼ ಗೋಡೆಯನ್ನಾಧರಿಸಿ ನಿಂತಳು.. ಇಪ್ಪತ್ತೈದು ವರ್ಷಗಳ ಕೆಳಗೆ ತನ್ನಾಸೆಯೂ ಇದೇ ಆಗಿತ್ತಲ್ಲವೇ? ಯಾಕತ್ತಿಗೆ ಏನನ್ನು ಹೇಳ್ತಿಲ್ಲ... ಗಂಡು ಮಗು ಆಗುತ್ತೆ ಅಂತ

ಗೊತ್ತಾದ್ರೆ.. ಒಳ್ಳೇದಲ್ವಾ?"

"ಇಲ್ದಿದ್ರೆ..? ತೆಗೆಸಿ ಬಿಡ್ತೀಯಾ? "

"ಮತ್ತಿನ್ನೇನು? ಈಗಾಗ್ಲೆ ಇಬ್ಬರು ಹೆಣ್ಣು ಮಕ್ಕಳಿದಾರೆ. ನಾನು ಈ ವಿಷಯವನ್ನು ಇನ್ನು ನಿಮ್ಮ ಮೈದುನನಿಗೆ ತಿಳಿಸಿಲ್ಲ.. ತಿಳಿಸಿದ್ರೆ ಏನಂತಾರೋ?"

"ಏನಂತಾನೆ?.. ಅವನೇ ತಾನೇ ತಂದೆ.. ಅವನಿಗೆ ಮೊದಲು ತಿಳಿಸು ಅವನು ಹೇಳಿದ ಹಾಗೆ ಕೇಳಿ ಬಿಡು. ಈ ವಿಷಯದಲ್ಲಿ ಜ್ಯೋತಿಷಿ ಏನ್ಮಾಡ್ತಾನೆ?"

"ನವೀನ ಹುಟ್ಟುವ ಮೊದಲು, ನೀವೂ ಜ್ಯೋತಿಷಿ ಹತ್ರ ಹೋಗಿದ್ರಂತೆ. ಅವರು ಗಂಡು ಮಗೂನೆ ಹುಟ್ಟುತ್ತೆ ಅಂತ ಹೇಳಿದ್ರಂತೆ."

"ಹಾಗಂತ ನಿಂಗೆ ಯಾರು ಹೇಳಿದ್ರು?" ಯಶೋದಾ ಗಾಬರಿಗೊಂಡವಳಂತೆ ತಕ್ಷಣ ಕೇಳಿದಳು.

ಶಾಲಿನಿ ಹೇಳಿದ್ಲು..

"ಇಲ್ಲ ನಂದಿನಿ, ನಾನು ಯಾವ ಜ್ಯೋತಿಷಿಯ ಬಳಿಗೆ ಹೋಗಲಿಲ್ಲ. ಅವಳ ದನಿ ನಡುಗಿತ್ತು.... "ಕಾಫಿ ನಾನೇ ಮಾಡ್ತಿನಿ. ನೀನು ಇತ್ಲಾಗೆ ಬಾ.. ಹುಶಾರಾಗಿದೀಯ ತಾನೆ? ನಿನ್ನ ಗಂಡಂಗೆ ಇನ್ನು ವಿಷಯ ಗೊತ್ತಾಗಿಲ್ಲ ಅಂತಂದ್ರೆ ನಾನು ನಂಬುಲ್ಲ."

"ಕೀರ್ತಿಗಾಗ್ಲೇ ಹನ್ನೊಂದು ವರ್ಷ ಇದುವರೆಗೂ ಪ್ಲಾನ್ ಮಾಡಿದೆವು... ಅದೇನಾಯ್ತೋ.. ಈಗ ಹೀಗಾಯ್ತು...?" ಅವಳು ತಲೆ ತಗ್ಗಿಸಿದಳು.

"ಆದದ್ದಾಯ್ತು ಹೆಣ್ಣು ಗಂಡು ಅಂತ ಏನನ್ನು ಚಿಂತಿಸಬೇಡ... ಇಷ್ಟು ವರ್ಷಗಳ ಮೇಲೆ ಮತ್ತೆ ಬಸಿರಿ ಆಗಿದೀಯ.. ನೀನು ಆರೋಗ್ಯವಾಗಿದ್ದರೆ ಮಗೂ ಸಹ ಆರೋಗ್ಯವಾಗಿರುತ್ತೆ." ಅವಳು ವಿಶ್ವಾಸದಿಂದ ಓರಗಿತ್ತಿಯ ಭುಜದ ಮೇಲೆ ಕೈಯನ್ನಿರಿಸಿದಳು. ನಂದಿನಿ ಗಂಟಲು ಉಬ್ಬಿ ಬಂತು.

"ಯಾಕೋ ಭಯ ಆಗುತ್ತೆ ಅತ್ತಿಗೆ. ಆದರೆ ಗಂಡು ಮಗು ಆದರೆ ಆಗಲಿ ಅನ್ನೋ ಆಸೆ ಕೂಡಾ ಆಗುತ್ತೆ.. ಅದಕ್ಕೆ ಜ್ಯೋತಿಷಿ ಹತ್ರ ಹೋಗಿ ಬರೋಣ ಅಂತ.. ಪ್ಲೀಸ್ ಬನ್ನಿ ಅತ್ತಿಗೆ.."

"ನಿನ್ನ ಮನಸ್ಸಮಾಧಾನಕ್ಕೋಸ್ಕರ ಬರ್ತೀನಿ. ಆದರೆ.. ನನಗೆ ನಂಬಿಕೆ ಇಲ್ಲ. ಅವರು ಪೂರ್ತಿ ಸತ್ಯ ಹೇಗೆ ಕಂಡು ಹಿಡೀತಾರೆ ನೀನೇ ಹೇಳು...? ದೇವರ ಮೇಲೆ ಭಾರ ಹಾಕು. ಗಂಡಾಗಲೀ ಹೆಣ್ಣಾಗಲೀ ಅದು ನಿಮ್ಮ ಮಗು ನೀವೇ ಸ್ವಂತ ತಂದೆ ತಾಯಿ.."

"ನೀವೇನೋ ಸುಲಭವಾಗಿ ಹೇಳ್ತೀರಿ ಅತ್ತಿಗೆ.. ಒಂದು ವೇಳೆ ನವೀನ ಹೆಣ್ಣಾಗಿ ಹುಟ್ಟಿದ್ದಿದ್ದರೆ...?" ಆ ಮಾತಿಗೆ ಯಶೋದ ಉತ್ತರಿಸಲಿಲ್ಲ. ಅವಳ ಎದೆ ನಡುಗಿತ್ತು. ಬಿಸಿ ಕಾಫಿಯನ್ನು ಬಟ್ಟಲುಗಳಿಗೆ ಬಗ್ಗಿಸಿದಳು.

"ಸರಿ, ಜ್ಯೋತಿಷಿ ಹತ್ರ ಯಾವಾಗ ಹೋಗೋಣಾ?"

ತಲೆ ನೋವು ಇಲ್ಲದಿದ್ರೆ ಇವತ್ತೇ ಹೋಗಿ ಬರಬಹುದಾಗಿತ್ತು.. ಹೇಗೂ ಭಾವ ಊರಿನಲ್ಲಿಲ್ಲ. ಅವರು ಬಂದ ಮೇಲೆ ಆಗುತ್ತೋ ಇಲ್ಲವೋ?

"ಸರಿ. ನವೀನಂಗೆ ಕಾಫಿ ಕೊಟ್ಟು, ಹೇಳ್ಬಿಟ್ಟು ಬರ್ತೀನಿ..."

"ಅವನಿಗೆ ಏನೂ ಹೇಳ್ಬೇಡಿ ಅತ್ತಿಗೆ. ಆಟೋ ರಿಕ್ಷಾದಲ್ಲಿ ಹೋಗೋಣ" ಯಶೋದಾ ಕಾಫಿಯ ಬಟ್ಟಲನ್ನು ಹಿಡಿದು ಮಗನ ರೂಮಿಗೆ ಬಂದಳು.

"ನಾನೂ, ನಿನ್ನ ಚಿಕ್ಕಮ್ಮ ಇಬ್ಬರೂ ಇಲ್ಲೇ ಒಬ್ಬರ ಮನೆಗೆ ಹೋಗಿ ಬರ್ತೀವಿ. ನೀನು ಮನೇಲೇ ಇರು ಎಲ್ಲಿಗೂ ಹೋಗ್ಬೇಡ."

"ನಂದಿನಿ ಆಂಟಿ ಮನೆಗೆ ಬಂದಿದಾರಾ? ನಾನು ಕಾರ್‌ನಲ್ಲಿ ಬಿಡ್ಲಾ?"

"ಏನೂ ಬೇಡ ಆಟೋದಲ್ಲಿ ಹೋಗ್ತೀವಿ. "ಮಗನಿಗೆ ಕೆಲವು ಸಲಹೆಗಳನ್ನಿತ್ತು ಹೊರ ಬಂದಳು."

ತಮ್ಮ ಸರದಿ ಬಂದಾಗ, ಇಬ್ಬರೂ ಶಾಸ್ತ್ರಿಗಳ ರೂಮಿನೊಳಕ್ಕೆ ಬಂದು ಕೈ ಮುಗಿದು, ಅವರ ಎದುರಿಗೆ ಹಾಸಿದ್ದ ಚಾಪೆಯ ಮೇಲೆ ಕುಳಿತರು. ತಮ್ಮ ಸಮಸ್ಯೆಯನ್ನು ಮುಂದಿಟ್ಟರು. ಅವರು ಗಂಡ ಹೆಂಡತಿಯರ ಜಾತಕಗಳನ್ನು ಪರಿಶೀಲಿಸಿ ಮುಗುಳ್ನಕ್ಕು ನುಡಿದರು.

"ನಿಮ್ಮ ಆಸೆಯಂತೆ, ಈ ಬಾರಿ ನಿಮಗೆ ಹುಟ್ಟುವುದು ಗಂಡು ಮಗುವೇ, ನಿಶ್ಚಿಂತೆಯಾಗಿರಿ. ಆದರೆ, ನಿಮ್ಮ ಆರೋಗ್ಯದ ಮೇಲೆ ಗಮನ ಇರಲಿ. ಡಾಕ್ಟರ ಸಲಹೆ ಇಲ್ಲದೇ ನೀವೇ ಏನೇನೋ ವೈದ್ಯ ಮಾಡ್ಕೋಬೇಡಿ." ನಂದಿನಿಯ ಮುಖದ ಮೇಲೆ ನಿರಾತಂಕದ ಚಿಹ್ನೆಯನ್ನು ಕಂಡು ಯಶೋದಾ ತನ್ನ ಸಮಸ್ಯೆಯ ಬಗ್ಗೆ ಕೇಳಬೇಕೆಂದುಕೊಂಡಳು.

"ನನ್ನ ಮಗನಿಗೆ ಈಗ ಇಪ್ಪತ್ತೈದು ವರ್ಷಗಳು ತುಂಬಿದೆ. ಆದರೆ ಇನ್ನೂ ಡಿಗ್ರಿ ಮುಗಿಸಿಲ್ಲ. ವಿದ್ಯಾರೇಖೆ ಹೇಗಿದೆ ಅಂತ ಸ್ವಲ್ಪ ಹೇಳ್ತೀರಾ?" ಎನ್ನುತ್ತಾ ತನ್ನ ಬಳಿ ಇದ್ದ ಜಾತಕದ ಪ್ರತಿಯನ್ನು ಅವರ ಮುಂದಿಟ್ಟಳು. ನೋಡು ನೋಡುತ್ತಾ ಅವರ ಮುಖ ಗಂಭೀರವಾಯಿತು. ಅವಳನ್ನು ಉದ್ದೇಶಿಸಿ ಪ್ರಶ್ನೆಯನ್ನು ಕೇಳಿದರು.

"ನಾನು ಕೆಲವು ಪ್ರಶ್ನೆಗಳನ್ನು ಕೇಳ್ತೀವಿ. ನೀವು ತಪ್ಪು ತಿಳ್ಕೋಬೇಡಿ. ಇವನು ನಿಮ್ಮ ಸ್ವಂತ ಮಗನಾ? ಅಥವಾ ದತ್ತು ಪುತ್ರನೋ?" ಅವಳ ಮುಖದ ಬಣ್ಣ ಕೆಟ್ಟಿತು. ನಂದಿನಿಯ ಕಡೆ ನೋಡಿದಳು.

"ಯಾಕೆ ಹೀಗೆ ಕೇಳ್ತೀದೀರಾ ಶಾಸ್ತ್ರಿಗಳೇ.. ನವೀನ ಇವರ ಸ್ವಂತ ಮಗ ಇಬ್ಬರು ಹೆಣ್ಣು ಮಕ್ಕಳ ನಂತರ ಹುಟ್ಟಿದವನು."

"ಈ ಕುಂಡಲಿಯ ಪ್ರಕಾರ, ಹುಟ್ಟಿದ ಮಗುವಿಗೆ ತಂದೆ ತಾಯಿಗಳ ಜೊತೆಯಲ್ಲಿ

ಬೆಳೆಯುವ ಯೋಗವಿರುವಂತೆ ಅನ್ನಿಸುವುದಿಲ್ಲ. ಈ ಜಾತಕದ ಗಳಿಗೆ ಸರಿ ಇಲ್ಲದಿರಬಹುದು. ಅನ್ಯಥಾ ಭಾವಿಸಬೇಡಿ. ಸರಿಯಾದ ಸಮಯಗೊತ್ತಿದ್ದರೆ ತಿಳಿಸಿ, ನಾನು ಜಾತಕವನ್ನು ಬರೆದು ಕೊಡುತ್ತೇನೆ."

"ನನಗೆ ಆಸ್ಪತ್ರೆಯಲ್ಲಿ ತಿಳಿಸಿದ ಪ್ರಕಾರ, ಅದೇ ಸಮಯವನ್ನು ಕೊಟ್ಟು ಹೆಸರಾಂತ ಜ್ಯೋತಿಷಿಗಳ ಕೈಯಲ್ಲಿ ನಮ್ಮವರು ಬರೆಸಿರುವ ಜಾತಕ ಇದು." ಅವಳ ಕಣ್ಣುಗಳಲ್ಲಿ ಭಯದ ಕಳೆ ಎದ್ದಿತು.

"ನೀವು ಗಾಬರಿ ಪಡಬೇಕಾದ್ದೇನಿಲ್ಲ. ಕೆಲವೊಮ್ಮೆ ಹಾಗಾಗುವ ಸಾಧ್ಯತೆಗಳಿರುತ್ತವೆ. ಸುಮ್ಮನೇ ಕೊರಗಬೇಡಿ. ನಿಮ್ಮ ಮಗನಿಗೆ ಮುದ್ದು ಹೆಚ್ಚಾಗಿ ಬೇಜಾವಾಬ್ದಾರಿಯೂ ಹೆಚ್ಚಿರುವಂತಿದೆ. ಅವನು ವಿದ್ಯಾವಂತನೇ ಆದರೂ ಡಿಗ್ರಿ ಸಿಗಲು ಸ್ವಲ್ಪ ಕಷ್ಟ ಪಡಬೇಕಾಗುತ್ತದೆ. ಆದರೆ ಹೊಟ್ಟೆ ಬಟ್ಟೆಗೇನೂ ಕೊರತೆ ಇಲ್ಲ. ಆರಾಮವಾಗಿರುತ್ತಾನೆ. ನಾನು ಒಂದು ಶ್ಲೋಕವನ್ನು ಬರೆದು ಕೊಡುತ್ತೇನೆ. ಅದನ್ನು ದಿನಕ್ಕೆ ಎಂಟು ಬಾರಿ, ಬೆಳಗಿನ ಹೊತ್ತು ಪಠನೆ ಮಾಡಲಿ ಎಲ್ಲಾ ಒಳ್ಳೆಯದಾಗುತ್ತದೆ.

ಶಾಸ್ತ್ರಿಗಳಿಗೆ ದಕ್ಷಿಣೆಯನ್ನು ಕೊಟ್ಟು ಇಬ್ಬರು ಹೊರಬಂದರು.

"ಅತ್ತಿಗೆ, ಶಾಸ್ತ್ರಿಗಳು ಅಂದದ್ದನ್ನೇ ತಲೆಗೆ ಹಚ್ಕೋಬೇಡಿ... ನವೀನನ ಕಿವಿಗೆ ಈ ವಿಷಯ ಬಿದ್ದರೆ ಆಯ್ತು ಗತಿ." ದೇವಸ್ಥಾನದಲ್ಲಿ ಕಂಡ ಹುಡುಗಿಯ ಬಗ್ಗೆ ಯೋಚಿಸುತ್ತಿದ್ದ ಯಶೋದಾ ಮಾತನಾಡಲಿಲ್ಲ. "ನೋಡಿದ್ರಾ ಅತ್ತಿಗೆ, ನೀವು ಸೀರಿಯಸ್ ಆಗಿ ಬಿಟ್ರಿ.. ಅವರೇ ಹೇಳಿದ ಹಾಗೆ, ಏನೋ ತಪ್ಪಾಗಿರಬಹುದು." ಯಶೋದಾ ಏನೋ ಎಣಿಕೆ ಹಾಕುತ್ತಿದ್ದಳು.

ನಂದಿನಿಯನ್ನು ಅವಳ ಮನೆಯ ಹತ್ತಿರ ಇಳಿಸಿ, ತಾನು ಬೆಳಿಗ್ಗೆ ಬಂದಿದ್ದ ದೇವಸ್ಥಾನಕ್ಕೆ ಬಂದಳು. ಅಲ್ಲಿಯ ಅರ್ಚಕರ ಬಳಿ ಮಾತನಾಡಿ, ಆ ದಿನ ಬೆಳಿಗ್ಗೆ ಅಭಿಷೇಕಕ್ಕೆ ಕೊಟ್ಟವರ ಹೆಸರಿನ ಪಟ್ಟಿಯನ್ನು ಕೇಳಿ ಪಡೆದಳು. ಆ ದಿನದ ಅಭಿಷೇಕಕ್ಕೆ ಐದಾರು ಜನ ಹೆಸರನ್ನು ಬರೆಸಿದ್ದರು. ಅದರಲ್ಲಿದ್ದ ಹೆಂಗಸರ ಹೆಸರನ್ನು ಬರೆದಿಟ್ಟುಕೊಂಡು, ಅವರುಗಳ ಬಗ್ಗೆ ವಿಚಾರಿಸಿದಳು. ಅರ್ಚಕರು ಸರಿಯಾದ ಮಾಹಿತಿಯನ್ನು ಕೊಡಲಿಲ್ಲ. ಚೀಟಿ ಬರೆಯುವವರ ಬಳಿ ಮಾತನಾಡಿದಳು.

"ಬೆಳಿಗ್ಗೆ ನಾನು ದೇವಸ್ಥಾನಕ್ಕೆ ಬಂದಾಗ, ಅದೇ ಸಮಯದಲ್ಲಿ ಒಬ್ಬ ತಾಯಿ ತನ್ನ ಮಗಳೊಡನೆ ಬಂದಿದ್ದಳು. ಆಕೆಯ ವಸ್ತು ಒಂದು ನನ್ನ ಬಳಿ ಇದೆ. ನಾನು ಆಕೆಯನ್ನು ಕಾಣಬೇಕು. ಅವರ ವಿಳಾಸ ತಿಳಿದಿದ್ದರೆ ಹೇಳ್ತೀರಾ?" ಕೇಳಿಕೊಂಡಳು.

ಆತ ವಿವರಗಳನ್ನು ಕೇಳಿ ತಿಳಿದುಕೊಂಡು, ಆಕೆಯ ವಿಳಾಸವನ್ನು ತಿಳಿಸಿದ. "ನಾನು ವಿಳಾಸವನ್ನು ಕೊಟ್ಟೆ ಅಂತ ಆಕೆಗೆ ಹೇಳ್ಬೇಡಿ. ಆಕೆ ದೇವಸ್ಥಾನಕ್ಕೆ ಹೆಚ್ಚಿಗಿ ಬರುವುದಿಲ್ಲ. ಆಕೆ ವಿಪರೀತ ನೊಂದಿದಾಳೆ. ಮನೆಯಲ್ಲಿ ನೂರೆಂಟು ತಾಪತ್ರಯಗಳು

ಇರಬಹುದು.."

"ಸರಿ, ನಾನು ನಿಮ್ಮ ಹೆಸರನ್ನು ಹೇಳುವುದಿಲ್ಲ." ಎಂದು ಹೇಳಿ ಎರಡು ರಸ್ತೆಗಳ ಹಿಂದೆ ಇದ್ದ ಆಕೆಯ ಮನೆಯನ್ನು ಹುಡುಕಿಕೊಂಡು ಹೊರಟಳು. ಮನೆ ಸುಲಭವಾಗಿ ಸಿಕ್ಕಿತು. ಗೇಟನ್ನು ತೆಗೆಯುವಾಗ ಅವಳ ಕೈಗಳು ನಡುಗಿದವು. ಕಾಲುಗಳು ಸೋತಂತೆ ಅನ್ನಿಸಿತು. ಮುಂಬಾಗಿಲನ್ನು ತೆರೆದವಳು ಬೆಳಿಗ್ಗೆ ಕಂಡ ಹುಡುಗಿಯೇ. ಆ ಹುಡುಗಿಯನ್ನೇ ದಿಟ್ಟಿಸಿದಳು. ಆದರೆ ಆ ಹುಡುಗಿ ಅವಳ ಎದುರಿಗೆ ಹೆಚ್ಚು ಹೊತ್ತು ನಿಲ್ಲಲಿಲ್ಲ. ಒಳಗೆಲ್ಲೋ ಮಾಯವಾದಳು. ಆನಂತರ ಒಳಗಿನಿಂದ ಬಂದ ಯುವಕನೊಬ್ಬ ದರ್ಪದಿಂದ ಕೇಳಿದ.

"ಯಾರು ನೀವು? ಏನು ಬೇಕಾಗಿತ್ತು?"

"ನಿಮ್ಮ ತಾಯಿ ಇಲ್ವಾ? " ಅವನನ್ನೇ ನೋಡುತ್ತಾ ಪ್ರಶ್ನಿಸಿದಳು.

"ಇಲ್ಲ... " ಅವನು ಹುಬ್ಬು ಗಂಟಿಕ್ಕಿದ.

"ಎಷ್ಟು ಹೊತ್ತಿಗೆ ಬರಬಹುದು?"

"ಏನೋ ಗೊತ್ತಿಲ್ಲ." ಅವನು ಒರಟಾಗಿ ನುಡಿದಾಗ ಬೇಸರವಾಗಿತ್ತು.

"ನಾನು ಅವರ ಫ್ರೆಂಡ್ ಯಶೋದಾ ಅಂತ ನನ್ನ ಪೋನು ನಂಬರನ್ನು ಕೊಡ್ತೀನಿ. ನಾನು ಮಾತಾಡ್ಬೇಕು. ಮರೆಯದೇ ಪೋನು ಮಾಡ್ಬೇಕಂತೆ ಅಂತ ಹೇಳಿ ಬಿಡಪ್ಪಾ..."

"ಹುಂ. ಸರಿ." ಅವನು ಅವಳು ಕೊಟ್ಟ ಪೋನು ನಂಬರಿನ ಚೀಟಿಯನ್ನು ತೆಗೆದುಕೊಂಡು, ಅಲ್ಲಿದ್ದ ಟೀಪಾಯ್ ಮೇಲಿಟ್ಟ, ಅವಳು ಹೋದರೆ ಸಾಕು ಎಂಬಂತೆ ಕಾಯುತ್ತಾ ನಿಂತ. ಇವಳು ಮತ್ತೊಮ್ಮೆ ಮನೆಯ ಒಳಭಾಗದಲ್ಲಿ ಕಣ್ಣು ಹಾಯಿಸಿದಳು. ಆ ಹುಡುಗಿ ಮತ್ತೆ ಕಾಣಲಿಲ್ಲ. ನಿರಾಸೆಯಿಂದ ಹಾಗೇ ಹಿಂತಿರುಗಿದಳು. ಗೇಟಿನ ಬಳಿ ಇದ್ದ ಫಲಕದಲ್ಲಿದ್ದ ಹೆಸರನ್ನು ನೆನಪಿನಲ್ಲಿಟ್ಟುಕೊಂಡಳು. ಅವಳು ಮನೆಗೆ ಬಂದವಳು ಪೋನಿಗಾಗಿ ಕಾದಳು. ಆದರೆ ಯಾವುದೇ ಪೋನು ಬಾರದಿದ್ದಾಗ ನಿರಾಶೆಯಾಗಿತ್ತು.

ಊಟ ಮಾಡುವಾಗಲೂ ಯಾವುದೇ ಆಲೋಚನೆಯಲ್ಲಿ ಮುಳುಗಿದ್ದಳು. ಮಗ ಎಂದಿನಂತೆ ತನ್ನ ಪಾಡಿಗೆ ತಾನು ಊಟ ಮುಗಿಸಿ ಎದ್ದು ಹೋಗಿದ್ದ. ತನ್ನ ಅನ್ಯ ಮನಸ್ಕತೆಯನ್ನು ಮಗ ಗಮನಿಸಲಿಲ್ಲವೆನ್ನುವುದು ಅರಿವಿಗೆ ಬಂತು. ದುಃಖ ಒತ್ತಿಕೊಂಡು ಬಂದಂತಾಗಿತ್ತು. ಪೋನು ರಿಂಗಾಗುವುದನ್ನು ಕೇಳಿ, ತಟ್ಟೆಯಲ್ಲೇ ಕೈ ತೊಳೆದುಕೊಂಡು ಹೊರ ಬಂದಳು. ಅಷ್ಟರಲ್ಲಿ ಮಗ ಪೋನನ್ನೆತ್ತಿಕೊಂಡಿದ್ದ.

"ಅಮ್ಮಾ ನಿಂಗೆ...." ಎನ್ನುತ್ತಾ ಇವಳ ಕೈಗೆ ಕೊಟ್ಟ ಹಲೋ ಎನ್ನುವಾಗ ಇವಳ ಧ್ವನಿ ನಡುಗಿತ್ತು.

"ನಾನು ಶ್ರೀದೇವಿ ಅಂತ.. ನೀವ್ಯಾರೋ ನನಗೆ ತಿಳೀಲಿಲ್ಲ. ನೀವು ನಮ್ಮ ಮನೆಗೆ ಬಂದಿದ್ದರಂತೆ...." ಆಕೆ ಹೇಳಿದಾಗ ಮಗನೆಡೆಗೆ ಕಳ್ಳ ನೋಟವನ್ನು ಬೀರಿದಳು.

"ಹೌದು.... ನಾನು ಯಶೋದಾ ಅಂತ.... ನಾನು ನಿಮ್ಮ ಹತ್ತಿರ ಮುಖ್ಯವಾದ ವಿಷಯವನ್ನು ಮಾತನಾಡಬೇಕಾಗಿತ್ತು."

"ಈಗಲೇ ಆಡಬಹುದಲ್ಲ...

"ಇಲ್ಲ. ಹಾಗೆಲ್ಲ ಆಗುವುದಿಲ್ಲ. ಅತಿ ಮುಖ್ಯವಾದ ವಿಚಾರ.. ನಾಳೆ ನೀವು ಭೇಟಿಯಾಗೋಕೆ ಆಗುತ್ತಾ?"

"ಬರಬಹುದು. ಆದರೆ ನೀವು ಯಾರು ಅಂತ ತಿಳೀಲಿಲ್ಲವಲ್ಲ. ನಿಮ್ಮನ ನಂಬೋದು ಹೇಗೆ?"

ಇವಳ ಮೈ ನಡುಗಿದಂತಾಯಿತು. ಒಂದುಗಳಿಗೆ ತಡೆದಳು. "ಸರಿ. ಬೆಳಿಗ್ಗೆ ಹತ್ತು ಗಂಟೆಯ ಹೊತ್ತಿಗೆ ದೇವಸ್ಥಾನಕ್ಕೆ ಬನ್ನಿ. ಅಲ್ಲೇ ಕೂತು ಮಾತನಾಡೋಣ... ಬರ್ತೀರಿ ತಾನೇ..?"

"ಬರ್ತೀನಿ ನನ್ನನ್ನ ಯಾವುದೇ ತೊಂದರೆಗೆ ಸಿಕ್ಕಿಸುವುದಿಲ್ಲ ಅಂತ ಅಂದ್ಕೊಂಡಿದೀನಿ."

"ಇಲ್ಲ ಶ್ರೀದೇವಿಯವರೇ ಹೆದರಬೇಡಿ. ಹಾಗೆಲ್ಲಾ ಏನೂ ಇಲ್ಲ." ಅತ್ತಲಿಂದ ರಿಸೀವರ್‌ನ್ನಿಟ್ಟ ಧ್ವನಿ ಕೇಳಿಸಿತು. ತಾನೂ ರಿಸೀವರ್‌ನ್ನಿಟ್ಟು ಮಗನ ಕಡೆ ತಿರುಗಿದಳು..

"ನವೀನ.. ನಿನ್ನ ರಿಸಲ್ಟ್ ಯಾವಾಗ ಬರುತ್ತೆ? ಮುಂದೆ ಏನು ಮಾಡ್ಬೇಕು ಅಂತ ಇದೀಯ?"

"ಯಾಕಮ್ಮ ಇದ್ದಕ್ಕಿದ್ದ ಹಾಗೆ ಹೀಗೆ ಕೇಳ್ತೀದೀಯ? ಎಂದೂ ನನ್ನ ರಿಸಲ್ಟ್ ಬಗ್ಗೆ ಕೇಳಿಲ್ಲ ನೀನು." ಅವನು ಆಕ್ಷೇಪಣೆ ಮಾಡಿದ.

"ಈ ಸಾರಿಯಾದರೂ ಪಾಸಾಗಿರ್ತೀಯ ಅನ್ನೋ ಆಸೆಯಿಂದ ಕೇಳ್ತಿದೀನಿ.. ನಿನಗೂ ಇಪ್ಪತ್ತೈದು ವರ್ಷ ತುಂಬಿತು. ಇನ್ನಾದರೂ ಜವಾಬ್ದಾರಿ ಬರುತ್ತೇನೋ ಅಂತ.."

"ನನಗ್ಯಾಕಮ್ಮ ಜವಾಬ್ದಾರಿ? ನೀವಿಬ್ರೂ ಇದೀರಲ್ಲ."

"ನಾವಿಬ್ರೂ ನಿನ್ನ ಜೊತೇಲಿ ಶಾಶ್ವತವಾಗಿ ಇರ್ತೀವೇನೋ? ಮೊದಲೇ ನಿಮ್ಮಪ್ಪಂಗೆ ಬಿ.ಪಿ. ಹೆಚ್ಚು ಕೋಪವೂ ಹೆಚ್ಚು.."

"ಇನ್ನೇನು ಹೆಚ್ಚು ಹೆಚ್ಚು ಅಂತಂದ್ರೆ, ಬೈಗುಳ ಹೆಚ್ಚಾಗಬಹುದು. ನಾನು ರೆಡಿ.. ಆನೆ ಹೊಟ್ಟೇಲಿ ಲದ್ದಿ ಬಿದ್ದ ಹಾಗೆ ಅಂತಲೋ.. ಅಥವಾ ನಿನ್ನ ಅಕ್ಕಂದಿರ ಕಾಲ ಕೆಳಗೆ ನುಸಿ ಅಂತಲೋ ಬೈತಾರೆ.. ನಾನು ಅದಕ್ಕೆ ರೆಡಿ."

"ಥೂ ನಾಚಿಕೆ ಅನ್ನೋದೇ ಇಲ್ಲವಲ್ಲ ನಿನಗೆ..."

"ನಾಚಿಕೆ ಯಾಕೆ? ನೀನು ನನಗೆ ಸಪೋರ್ಟ್ ಆಗಿ ಇರುವವರೆಗೂ ನಾನು ಬೈಗುಳಕ್ಕೆ ಹೆದರುಲ್ಲ." ಎನ್ನುತ್ತಾ ತಾಯಿಯ ಕಡೆ ನೋಡಿ ನಸುನಕ್ಕ. ಇವಳು ಮುಖವನ್ನು ಅತ್ತ ತಿರುಗಿಸಿ ನುಡಿದಳು.

"ನಿಮ್ಮ ಅಪ್ಪ ಹೇಳೋದು ನಿಜ.. ನಿನಗೆ ನನ್ನ ಮುದ್ದು ಹೆಚ್ಚಾಯಿತು. ಗಂಡು ಹುಡುಗ ಅಂತ ಸ್ವಲ್ಪ ಜಾಸ್ತಿ ಪ್ರೀತಿ ತೋರಿಸಿದ್ದಕ್ಕೆ ಹೀಗೆ. ನೀನೂ ಬೈಸಿಕೊಳ್ತೀಯ ನನ್ನನ್ನು ಬೈಯಸ್ತೀಯ..."

"ಈ ಸಾರಿ ಅಪ್ಪ ಏನಾದ್ರೂ ಬೈದರೆ, ನಾನು ಮನೆ ಬಿಟ್ಟು ಹೊರಟು ಹೋಗ್ತೀನಿ. ನೀನೂ ನನ್ನ ಜೊತೇಲಿ ಬಂದು ಬಿಡು... ನಾವು ಬೇರೆ ಇರ್ಬೋಣ. ಅಪ್ಪ ಒಬ್ಬರೇ ಇರಲಿ. ಅವರಿಗೆ ಬುದ್ಧಿ ಬರುತ್ತೆ."

"ನವೀನ... ಕೈಗೆ ಬಂದ ಮಗ ಆಡೋ ಮಾತಾ ಇದು? ಅವರು ನಿನ್ನ ತಂದೆ ಕಣೋ... ಅವರಿಗೂ ವಯಸ್ಸಾಗ್ತಿದೆ..."

"ಹಾಗಾದರೆ, ಅವರ ಬಿಸಿನೆಸ್ ವ್ಯವಹಾರನ್ನೆಲ್ಲ ನನಗೆ ವಹಿಸಿ ಕೊಡಲಿ... ನಾನು ನೋಡಿಕೊಳ್ತೀನಿ. ಆದರೆ ಅವರು ಯಾವುದಕ್ಕೂ ತಲೆ ಹಾಕಿಕೊಂಡು ಬರಬಾರದು.."

"ನಿನ್ನ ಕಂಡೀಷನ್‌ಗಳಿಗೆ ಅವರು ಒಪ್ಪಬೇಕಾಗಿಲ್ಲ. ಅವರು ಮೊದಲ್ನಿಂದಲೂ ಸ್ವತಂತ್ರವಾಗಿ ವ್ಯವಹಾರ ಮಾಡಿದೋರು...."

"ಸರಿ, ಹಾಗಾದರೆ, ನನ್ನ ಪಾಡಿಗೆ ನನ್ನನ್ನು ಬಿಟ್ಟು ಬಿಡಲಿ ಯಾವ ವಿಷಯಕ್ಕೂ ಬೈಯ ಬೇಡಿ ಅಂತ ಹೇಳು.. ನನ್ನ ಭಾಗದ ಹಣವನ್ನು ಕೊಡಿಸು.. ನಾನೇ ಸ್ವಂತ ಬಿಸಿನೆಸ್ ಮಾಡ್ತೀನಿ. ನಂಗೆ ಅವರ ಹಂಗೇ ಬೇಡ." ಮಗ ದಿಟ್ಟತನದಿಂದ ನುಡಿದಾಗ, ಅವನ ಕಪಾಲಕ್ಕೆ ಹೊಡೆಯಬೇಕೆನ್ನಿಸಿತ್ತು.

" ನವೀನ.. ಇಷ್ಟು ವರ್ಷ ಸಾಕಿ ಬೆಳೆಸಿದ್ದಕ್ಕೆ ಸಾರ್ಥಕವಾಯಿತು. ನಿನ್ನ ಅಕ್ಕಂದಿರು ಒಂದು ದಿನವೂ ಹೀಗೆ ನಿಮ್ಮಪ್ಪನ್ನ ಕುರಿತು ಮಾತನಾಡಿದವರಲ್ಲ... "

" ಬಿಡಮ್ಮ.. ಅವರು ಹುಡುಗೀರು. ಅಲ್ಲದೇ ಮದುವೆಯಾಗಿ ಅವರವರ ಮನೇಲಿ ಇದಾರೆ.. ಇದು ನನ್ನು ಮನೆ.. ಈ ಆಸ್ತಿಪಾಸ್ತಿಗೆಲ್ಲಾ ನಾನೇ ಹಕ್ಕುದಾರ.."

" ನವೀನ... ಅದೇನು ಇವತ್ತು ಬಹಳ ದೊಡ್ಡ ದೊಡ್ಡ ಮಾತುಗಳನ್ನಾಡ್ತಿದೀಯ.. ಆಸ್ತಿ ಅಧಿಕಾರ ಹಕ್ಕು ಅಂತೆಲ್ಲ.. ನನಗೆ ಇದೆಲ್ಲ ಇಷ್ಟವಾಗುಲ್ಲ."

" ನೀನೇ ಹೇಳ್ದೆ ಇಪ್ಪತ್ತೈದು ವರ್ಷಗಳಾಯ್ತು ಅಂತ. ನನಗೆ ವಿದ್ಯೆ ಹತ್ತಲಿಲ್ಲ. ಹಾಗಂತ, ಆಸ್ತೀನ ಉಢಾಯಿಸಲ್ಲ. ನೀನು ಹೆದರಬೇಡ. ಆದರೆ, ಮಾತು ಮಾತಿಗೂ ನವೀನ.. ನವೀನ ಅಂತ ನನ್ನನ್ನ ಮಾತ್ರ ಹೆದರಿಸಬೇಡ." ಅವನು ನಗುತ್ತಾ ನುಡಿದಾಗ ಅವಳು ಗಂಭೀರಳಾದಳು. ತಾಯಿ ಮಗ, ಈ ಮೊದಲು ಎಂದೂ

ಹೀಗೆ ಎದುರು ಬದುರಿಗೆ ಕುಳಿತು ಮಾತನಾಡಿರಲಿಲ್ಲ. ಅಲ್ಲದೇ ಗಂಡನ ಎದುರಿಗೆ ಮಗನನ್ನು ಹೆಚ್ಚು ಮಾತಿಗೆಳೆಯುತ್ತಿರಲಿಲ್ಲ. ಅವ್ಯಕ್ತ ಭಯ ಕಾಡುತ್ತಿತ್ತು. ಯಾಕೋ ಈ ದಿನವೇ ಸರಿ ಇಲ್ಲ ಎನಿಸಿತ್ತು. ಈ ರಾತ್ರಿ ಬೇಗ ಕಳೆದು ನಾಳೆ ಬೆಳಿಗ್ಗೆ ಬೇಗ ಬರಬಾರದೇ ಎನಿಸಿ ಎದ್ದಳು.

" ಏನಮ್ಮ ಆಸ್ತಿ ವಿಚಾರ ಬಂದ ಕೂಡಲೇ ಸೀರಿಯಸ್ ಆಗ್ಬಿಟ್ಟೆ.. ಏನೇ ಇರಲಿ ಈ ಸಮಸ್ತ ಆಸ್ತಿಗೂ ಮುಂದೆ ನಾನೇ ಒಡೆಯ.. ಈಗ ಸ್ವಲ್ಪ ಎಂಜಾಯ್ ಮಾಡ್ತಿದೀನಿ... ಮುಂದೆ ಫುಲ್ ಎಂಜಾಯ್ ಮಾಡ್ತೀನಿ ಅಷ್ಟೇ." ಕೈ ಉಜ್ಜಿ ನಕ್ಕ.

" ಇಲ್ಲ ನವೀನ, ಎಲ್ಲಾ ಆಸ್ತಿ ನಿನ್ನದಲ್ಲ. ಈ ಆಸ್ತಿಯಲ್ಲಿ ನಿನ್ನ ಅಕ್ಕಂದಿರಿಗೂ ಪಾಲು ಇದೆ..."

"ಹೆಣ್ಣು ಮಕ್ಕಳಿಗೆ ಪಾಲು ಅಂತ ಕೊಟ್ರೆ ಅದು ಅಳಿಯಂದಿರ ಪಾಲು ಆಗುತ್ತೆ. ಅವರಿಗ್ಯಾಕೆ ಕೊಡ್ಬೇಕು...? ಅವರೇ ಸಂಪಾದಿಸಿಕೊಳ್ಳಲಿ."

" ಅದೆಲ್ಲಾ ನಮ್ಮ ಇಷ್ಟ ನವೀನ ನೀನು ಈ ವಿಷಯಕ್ಕೆ ಬಾಯಿ ಹಾಕಬೇಡ. ಇದು ನಿಮ್ಮಪ್ಪನ ಕಿವಿಗೆ ಬಿದ್ದರೆ ದೊಡ್ಡ ರಂಪ ಆಗುತ್ತೆ. ಇನ್ನೆಂದೂ ಇಂಥಾ ಮಾತುಗಳನ್ನಾಡ್ಬೇಡ." ಎಚ್ಚರಿಸಿದಳು.

" ಅಪ್ಪನಿಗೆ ಅಕ್ಕಂದಿರನ್ನ ಕಂಡರೇ ಇಷ್ಟ.. ನೀನಾದರೂ ನನ್ನ ಕಡೆಗೆ ಇದೀಯ ಅಂತ ಅಂದ್ಕೊಂಡಿದ್ದೆ. ಆದರೆ ನೀನೂ ಅಕ್ಕಂದಿರ ಕಡೆಗೆ ಅಂತ ಅನ್ನಿಸ್ತಿದೆ. ಏನು ವಿಷಯ? ಇವತ್ತು ನಿಂಗೆ ಏನಾಯ್ತು? ಇಪ್ಪತ್ತೈದು ವರ್ಷ ಆದ ಕೂಡಲೇ ನಾನು ನಿಂಗೆ ಬೇಡ ಆದ್ನಾ?... ಮಗನ ಮೇಲಿನ ಪ್ರೀತಿ ಕಡಿಮೆ ಆಯ್ತಾ?"

ಅವಳಿಗೆ ಮಾತನ್ನು ಮುಂದುವರೆಸುವ ಇಷ್ಟವಿರಲಿಲ್ಲ, " ಇವತ್ತು ಯಾಕೋ ನನ್ನ ಮೂಡ್ ಚೆನ್ನಾಗಿಲ್ಲ. ನಾನು ಮಲಕ್ಕೋತೀನಿ. ನೀನೂ ಮಲಕ್ಕೋ.."

"ನಂದಿನಿ ಆಂಟಿ ಬಂದು ನಿನ್ನ ತಲೆಗೆ ಏನೋ ತುಂಬಿದ್ದಾರೆ. ಇಲ್ದಿದ್ರೆ ನೀನು ಎಂದೂ ಹೀಗೆಲ್ಲಾ ಮಾತನಾಡಿದವಳಲ್ಲ." ಯಶೋದಾ, ಅವನ ಮಾತುಗಳು ಕೇಳಿಸಲಿಲ್ಲವೆಂಬಂತೆ ರೂಮಿಗೆ ಹೋದಳು. ಅಷ್ಟು ಹೊತ್ತಿನ ಮೇಲೆ ಫೋನು ಬರುವ ನಿರೀಕ್ಷೆ ಇರಲಿಲ್ಲವಾದುದರಿಂದ ಮಲಗಿದಳು.

ಬೆಳಿಗ್ಗೆ, ಕಾಫಿ ತಿಂಡಿಯ ನಂತರ, ನವೀನ ಹೊರಗೆಲ್ಲೋ ಹೊರಟು ಹೋಗಿದ್ದ. ಮನೆಯಲ್ಲಿ ಸಮಯವನ್ನು ಕಳೆಯುವುದು ದುಸ್ತರವೆನಿಸಿತ್ತು. ಮನೆಗೆ ಬೀಗ ಹಾಕಿ ದೇವಸ್ಥಾನದ ಕಡೆಗೆ ಹೆಜ್ಜೆ ಹಾಕಿದಳು. ಆ ಹೆಂಗಸನ್ನು ನಿರೀಕ್ಷಿಸಿರಲಿಲ್ಲವಾದರೂ, ಕಾಣುವಳೇನೋ ಎಂಬ ಕಿರು ಆಸೆ. ಅತ್ತಿತ್ತ ದೃಷ್ಟಿಯನ್ನು ಹಾಯಿಸಿದಳು. ದೇವಸ್ಥಾನದ ಬಾಗಿಲನ್ನು ಹಾಕುವವರೆಗೂ ಅಲ್ಲಿಯೇ ಕುಳಿತಿದ್ದು ನಂತರ ಹೊರಟಳು. ರಸ್ತೆಯ ತಿರುವಿನಲ್ಲಿ ಆ ಹೆಂಗಸು ಎದುರಾದಾಗ ತಬ್ಬಿಬ್ಬುಗೊಂಡಳು. ಪೆಚ್ಚು

ಪೆಚ್ಚಾಗಿ ಮುಗುಳ್ನಕ್ಕಳು. ಆ ಹೆಂಗಸು ನಕ್ಕಂತೆ ಮಾಡಿ ಮುಂದುವರೆದಳು. ಇವಳು ಆಕೆಯನ್ನು ನಿಲ್ಲಿಸಿದಳು.

ಸಮೀಪಿಸಿ, "ನನ್ನ ಗುರುತು ಸಿಕ್ಕಲಿಲ್ವಾ?" ಆಕೆ ಗಲಿಬಿಲಿಗೊಂಡಳು.

"ಇಲ್ಲ ನೀವ್ಯಾರೋ ಗೊತ್ತಾಗಿಲ್ಲ."

"ನಾನು ನೆನ್ನೆ ದಿನ ನಿಮ್ಮ ಮನೆಗೆ ಬಂದಿದ್ದೆ ನಿಮ್ಮ ಮಗನ ಕೈಗೆ, ನಮ್ಮ ಮನೆಯ ಪೋನು ನಂಬರನ್ನು ಕೊಟ್ಟಿದ್ದೆ."

"ಹೌದಾ, ನಂಗೊತ್ತಿಲ್ಲ. ಎಲ್ಲೋ ಮರೆತು ಬಿಟ್ಟ ಅಂತ ಕಾಣುತ್ತೆ. ಏನು ವಿಷಯ?" ಸಂಶಯದ ನೋಟವನ್ನು ಬೀರಿದಳು.

" ಈ ಮುಂಚೆ ನಾನು ನಿಮ್ಮನ್ನು ನೋಡಿದೀನಿ ಅಂತ ಅನ್ನಿಸುಲ್ಲ."

" ಪರವಾಗಿಲ್ಲ ಬಿಡಿ. ನಾನು ನಿಮ್ಮನ್ನು ನಿಮ್ಮ ಮಗಳೊಂದಿಗೆ ಈ ದೇವಸ್ಥಾನದಲ್ಲಿ ನೋಡಿದೆ... ಮಾತನಾಡಿಸಬೇಕು ಅಂತ ಅನ್ನಿಸ್ತು. ಇಲ್ಲೇ ಹತ್ತಿರದಲ್ಲಿ ನಮ್ಮ ಮನೆ ಇದೆ. ಅಲ್ಲಿ ಮಾತನಾಡೊಣ ಬರ್ತೀರಾ?"

"ಇಲ್ಲ ನನಗೆ ಈಗ ಬಿಡುವಿಲ್ಲ. ನೀವೇ ಬನ್ನಿ."

"ನಾನು ಬಂದರೆ ನಿಮ್ಮ ಮನೇಲಿ ತೊಂದರೆ ಆಗ ಬಹುದು ಅಲ್ಲದೇ ನಾನು ಒಂದು ಮುಖ್ಯವಾದ ವಿಷಯವನ್ನು ಕೇಳಬೇಕಾಗಿತ್ತು.."

"ಯಾವ ವಿಷಯ? ನನ್ನ ಮಗಳಿಗೆ ಸಂಬಂಧಿಸಿದ್ದೇ ತಾನೇ?"

ಅವಳ ಎದೆ ಗುಂಡಿಗೆ ನಿಂತಂತಾಯಿತು. ಮುಖ ಬೆವರಿಟ್ಟಿತು. "ನಿಮಗೆ ಯಾಕೆ ಹಾಗೆನ್ನಿಸಿತು?" ನಿಧಾನಿಸುತ್ತಾ ಕೇಳಿದಳು.

"ನನ್ನ ಮಗಳನ್ನು ನೋಡಿದವರೆಲ್ಲಾ ಕೇಳ್ತಾರೆ. ಅದಕ್ಕೆ ಕೇಳಿದೆ. ಹಾಗಾದರೆ ಏನು ವಿಷಯ?"

"ಬೀದಿಯಲ್ಲಿ ಮಾತನಾಡುವುದು ಬೇಡ. ನಿಮ್ಮ ಮನೆಗೇ ಹೋಗೋಣ ಪರವಾಗಿಲ್ಲ ತಾನೇ?"

"ಏನೂ ಪರವಾಗಿಲ್ಲ ಬನ್ನಿ." ಇಬ್ಬರೂ ಆಕೆಯ ಮನೆಗೆ ಬಂದರು. ಮುಂಬಾಗಿಲಿನ ಬೀಗವನ್ನು ಆಕೆಯೇ ತೆರೆದಳು. ಮನೆಯಲ್ಲಿ ಯಾರೂ ಇಲ್ಲವೇನೋ ಅಂತಾದುಕೊಂಡಳು. ಇಬ್ಬರೂ ಒಳಬಂದರು. ಆಕೆ ಇವಳನ್ನು ಕುಳ್ಳಿರಿಸಿ, ಚೀಲಗಳನ್ನು ಒಳಗಿಟ್ಟು ಮತ್ತೆ ಬಂಧಳು.

"ಜ್ಯೂಸ್ ತಗೋತೀರಾ!" ಆಕೆ ಕೇಳಿದಳು ಬೇಡವೆನ್ನುವಂತೆ ತಲೆಯಾಡಿಸಿದಳು.

"ಮನೇಲಿ ಯಾರೂ ಇಲ್ವಾ?..."

"ಇದಾಳೆ. ಮಗಳು ಮೇಲಿನ ರೂಮಿನಲ್ಲಿ ಮಲಗಿದ್ದಾಳೆ. "

"ಓ... ಮಗಳ ಹೆಸರೇನು? ಏನ್ಮಾಡ್ತಿದಾಳೆ?. "

"ಸ್ಮಿತಾ ಅಂತ ಓದು ಮುಗಿದಿಲ್ಲ ಡಿಗ್ರಿ ಸಿಕ್ಕಿಲ್ಲ. "

"ಹೌದಾ?... ಯಾವ ಸಬ್ಜೆಕ್ಟು? ಅವಳಿಗೀಗ ಎಷ್ಟು ವರ್ಷ?... " ಆಕೆಯನ್ನೇ ದಿಟ್ಟಿಸುತ್ತಾ ಕೇಳಿದಳು.

"ಅವಳಿಗೀಗ ಇಪ್ಪತ್ತೈದು ವರ್ಷಗಳು. ಸಧ್ಯಕ್ಕೆ ಅವಳಿಗೆ ಮದುವೆ ಮಾಡುವ ಆಲೋಚನೆ ಇಲ್ಲ. " ಆಕೆ ಎತ್ತಲೋ ನೋಡುತ್ತಾ ಹೇಳಿದಾಗ ಇವಳಿಗೆ ಕಸಿವಿಸಿಯಾಗಿತ್ತು.

"ನೀವು ತಪ್ಪು ತಿಳಿದುಕೊಂಡಿದೀರಿ. ನಾನು ಯಾವ ಗಂಡಿನ ಪ್ರಸ್ತಾಪವನ್ನು ತೆಗೆದುಕೊಂಡು ಬಂದಿಲ್ಲ."

"ಹಾಗಾದ್ರೆ ಮತ್ಯಾಕೆ ಬಂದಿದೀರಿ! ನಾನು ನಿಮಗೆ ಪರಿಚಿತಳಲ್ಲ. ನನ್ನ ಮಗನಿಗೂ ಈಗಲೇ ಮದುವೆ ಮಾಡುವುದಿಲ್ಲ."

"ಪರವಾಗಿಲ್ಲ ಬಿಡಿ. ನನಗೆ ಮದುವೆಗಿರುವ ಹೆಣ್ಣುಮಕ್ಕಳಿಲ್ಲ. ಹಿರಿಯ ಹೆಣ್ಣು ಮಕ್ಕಳಿಬ್ಬರಿಗೂ ಮದುವೆ ಆಗಿದೆ. ನನ್ನ ಮಗನಿಗೆ ಇಪ್ಪತ್ತೈದು ವರ್ಷಗಳು ತುಂಬಿತು. ನೆನ್ನೆ ಅವನ ಹುಟ್ಟಿದ ಹಬ್ಬ. ದೇವಸ್ಥಾನದಲ್ಲಿ ಅಭಿಷೇಕಕ್ಕೆ ಕೊಟ್ಟಿದ್ದೆ. ಪ್ರಸಾದ ತೆಗೆದುಕೊಳ್ಳಲು ಬಂದಾಗ ನಿಮ್ಮಿಬ್ಬರನ್ನು ಕಂಡೆ. ಈ ಮುಂಚೆ ನಿಮ್ಮನ್ನು ನೋಡಿದೀನಿ ಅಂತ ಭಾಸವಾಯಿತು. ಅದೇ ಕಾರಣದಿಂದ ನಿಮ್ಮ ಪರಿಚಯವನ್ನು ಮಾಡಿಕೊಳ್ಳುವ ಮನಸ್ಸಾಯಿತು ಮೊದಲ್ನಿಂದ ಇದೇ ಮನೇಲಿದೀರ?

"ಇಲ್ಲ. ಈ ಮನೆಗೆ ಬಂದು ಎರಡು ತಿಂಗಳಾಯಿತು ಅಷ್ಟೇ."

"ಸರಿ, ಹಾಗಾದ್ರೆ ನಾನಿನ್ನು ಬರ್ತೀನಿ. ನನ್ನಿಂದ ನಿಮಗೆ ತೊಂದರೆ ಆಯ್ತೇನೋ? "

"ಹಾಗೇನಿಲ್ಲ, ಕುಂಕುಮ ಕೊಡ್ತೀನಿ." ಆಕೆ ಒಳ ಮನೆಗೆ ಹೋಗಿದ್ದಾಗ ಮಹಡಿ ಮೇಲಿನಿಂದ ಸ್ಮಿತಾ ಕೆಳಗಿಳಿದು ಬಂದಳು. ಯಶೋದಾ ಅವಳನ್ನೇ ದಿಟ್ಟಿಸಿ ನೋಡಿದಳು. ಹೊಟ್ಟೆ ಕಲಕಿದಂತಾಯಿತು. ಕೆದರಿದ ತಲೆಗೂದಲು, ಹಾಕಿದ್ದ ನೈಟಿ ಮೈಗೆ ಅಂಟಿಕೊಂಡಂತ್ತಿತ್ತು. ಮುಖದಲ್ಲಿ ನಿಸ್ತೇಜವಾದ ಕಳೆ. ಅವಳು ಇವಳನ್ನು ನೋಡಿಯೂ ನೋಡದವಳಂತೆ ಅಡಿಗೆ ಮನೆಯ ಕಡೆ ನಡೆದಿದ್ದಳು. ಆಕೆ ಅರಿಶಿನ ಕುಂಕುಮದೊಂದಿಗೆ ಬಾಳೆ ಹಣ್ಣುಗಳನ್ನಿಟ್ಟು, ಎಲೆ ಅಡಿಕೆಯನ್ನು ಕೊಟ್ಟಳು. ಅನುಮಾನಿಸುತ್ತಾ ಕೇಳಿದಳು.

"ನಿಮ್ಮ ಹೆಸರೇನು ಅಂತ ನಾನು ಕೇಳೇ ಇಲ್ಲ. "

"ನನ್ನ ಹೆಸರು ಸುಜಾತಾ ಅಂತ. " ಅವಳು ನಿಮ್ಮ ಹೆಸರು ಏನೆಂದು ಕೇಳಲಿಲ್ಲವೆನ್ನುವುದನ್ನು ಗಮನಿಸಿ ಪಿಚ್ಚೆನ್ನಿಸಿತ್ತು. ಆದರೂ ತಾನೇ ನುಡಿದಳು.

"ನನ್ನ ಹೆಸರು ಯಶೋದಾ ಅಂತ. ನನಗೆ ಇಬ್ಬರು ಹೆಣ್ಣು ಮಕ್ಕಳು, ನಂತರದವನು ಮಗ.. ನೆನ್ನೆ ನೀವು ಅವನನ್ನ ನೋಡಿದಿರಿ ಅಂತ ಅನ್ನಿಸುತ್ತೆ ಹೌದಾ?"

"ಇಲ್ಲ, ನಾನು ನೋಡ್ಲಿಲ್ಲ..." ಸ್ವಲ್ಪ ಸಮಾಧಾನವಾಗಿತ್ತು.

"ಹೋಗ್ಲಿ ಬಿಡಿ ನಿನ್ನೆ ನೀವೂ ಅಭಿಷೇಕಕ್ಕೆ ಕೊಟ್ಟಿದ್ರಿ ಅಂತ ಕಾಣುತ್ತೆ. ನಿಮ್ಮ ಮಗಳ ಹುಟ್ಟಿದ ಹಬ್ಬಾನಾ?"

"ಹುಂ. ಹೌದು... "

ಯಶೋದಾ ಪರ್ಸಿನಿಂದ ನೂರರ ನೋಟೊಂದನ್ನು ತೆಗೆದು ತಟ್ಟೆಯಲ್ಲಿರಿಸಿದಳು. "ನಿಮ್ಮ ಮಗಳನ್ನು ಕರೀರಿ. ಕುಂಕುಮ ಕೊಡ್ತೀನಿ."

"ಛೆ. ಛೆ. ಇದೆಲ್ಲಾ ಯಾಕೆ? ನಮಗೆ ಇದೆಲ್ಲ ಅಭ್ಯಾಸವಿಲ್ಲ. " ಆಕೆ ಸಂಕೋಚಗೊಂಡಳು.

" ಹಾಗೆಲ್ಲ ಅಂದ್ಕೊಬೇಡಿ. ಸ್ಮಿತಾ ನನಗೂ ಮಗಳಿದ್ದ ಹಾಗೆ. ಹುಟ್ಟಿದ ಹಬ್ಬದ ಶುಭಾಶಯಗಳನ್ನು ಹೇಳಿ, ಆಶೀರ್ವಾದ ಮಾಡ್ತೀನಿ. ದೇವರು ಅವಳನ್ನು ಸದಾ ಕಾಲಕ್ಕೂ ಚೆನ್ನಾಗಿಟ್ಟಿರಲಿ." ಧ್ವನಿ ನಡುಗಿತ್ತು.

ಸುಜಾತಾ ಮಗಳನ್ನು ಹೊರಕ್ಕೆ ಕರೆತಂದಳು. "ನಿದ್ದೆ ಮಾಡಿ ಎದ್ದಿದಾಳೆ... " ಯಶೋದಾ ಕೈಯಲ್ಲಿ ತಟ್ಟೆ ಹಿಡಿದು ಮಗಳನ್ನೆ ನೋಡುತ್ತಾ ನಿಂತು ಬಿಟ್ಟಳು. ಆಕೆಯೇ ಎಚ್ಚರಿಸಿದಳು. "ಏನೋ ಯೋಚಿಸ್ತಿದೀರಿ... ಏನಾದ್ರೂ ಬೇಕಾಗಿತ್ತಾ?"

"ಏನಿಲ್ಲ" ಎನ್ನುತ್ತಾ ಅವಳು ಸ್ಮಿತಾಳ ಹಣೆಗೆ ಕುಂಕುಮವನ್ನಿಟ್ಟು ಎಲೆ ಅಡಿಕೆಯ ತಟ್ಟೆಯನ್ನು ಮುಂದೆ ಹಿಡಿದಳು. "ಹುಟ್ಟಿದ ಹಬ್ಬದ ಶುಭಾಶಯಗಳು. ದೇವರು ಚೆನ್ನಾಗಿಟ್ಟಿರಲಿ" ಎಂದು ಹೇಳಿ ತಲೆಯನ್ನು ಸವರಿದಳು. ಅವಳು ಅನುಮಾನಿಸುತ್ತಾ ತಾಯಿಯ ಕಡೆ ನೋಡಿದಳು.

" ತಗೋ.. ಅವರು ಪ್ರೀತಿಯಿಂದ ಕೊಡ್ತಿದಾರೆ. " ಎಂದು ಸುಜಾತಾ ಹೇಳಿದ ಮೇಲೆ ಅವಳು ತೆಗೆದುಕೊಂಡು ತಾಯಿಯ ಕೈಗೆ ಕೊಟ್ಟಳು.

" ಅವಳಿಗೆ ಇಷ್ಟವಾದ ಪುಸ್ತಕವನ್ನು ತೆಗೆಸಿಕೊಡಿ... " ಹೇಳುತ್ತಾ ಹೇಳುತ್ತಾ ಅವಳ ಕಣ್ಣುಗಳು ನೀರಾಡಿದವು. ಅದನ್ನು ಸುಜಾತಾ ಗಮನಿಸಿದಳು.

" ಸ್ಮಿತಾ.. ನೀನು ಮೇಲೆ ಹೋಗು. ನಾನು ಆಮೇಲೆ ಕರೀತೀನಿ." ಅವಳು ವಿಧೇಯಳಂತೆ ಮಹಡಿಯ ಮೆಟ್ಟಿಲುಗಳನ್ನು ಹತ್ತಿದಾಗ ಯಶೋದಾ ವಿಸ್ಮಯಗೊಂಡಳು. ಆಕೆ ಮತ್ತೆ ಅವಳನ್ನು ಕುಳ್ಳಿರಿಸಿದಳು.

" ನೀವ್ಯಾಕೆ ವಿಚಲಿತಗೊಂಡಿದೀರಿ ಅಂತ ನಾನು ಊಹಿಸಬಲ್ಲೆ.. ಆದರೆ ನಾನು ನಿಮ್ಮನ್ನು ಯಾವ ಪ್ರಶ್ನೆಯನ್ನು ಕೇಳುವುದಿಲ್ಲ. ಯಾಕೆಂದರೆ ಈಗ ಇಪ್ಪತ್ತೈದು ವರ್ಷಗಳು ಕಳೆದು ಹೋಗಿವೆ.. ಆಗ ನಡೆದು ಹೋದ ಅಚಾತುರ್ಯವನ್ನು ನಾವು

ಸರಿಪಡಿಸಲು ಸಾಧ್ಯವಿಲ್ಲ ಅಲ್ಲವೇ?"

" ಏನು ಹೇಳ್ತಿದೀರಿ ನೀವು!..." ಉಸಿರು ಕಟ್ಟಿದ ಅನುಭವವಾಗಿತ್ತು.

ಈಗ್ಗೆ ಇಪ್ಪತ್ತೈದು ವರ್ಷಗಳ ಹಿಂದೆ, ನಾನು ಹೆರಿಗೆಗೆಂದು ಆಸ್ಪತ್ರೆಗೆ ಸೇರಿದ್ದೆ. ಸಿಸೇರಿಯನ್ ಆಪರೇಷನ್ ಮಾಡಿ ಮಗುವನ್ನು ಹೊರತೆಗೆದರು. ಜ್ಞಾನ ಬಂದ ಮೇಲೆ ವಾರ್ಡ್‌ಗೆ ಕರೆತಂದು ಮಗುವನ್ನು ತೋರಿಸಿದರು. ಮಗು ಮುದ್ದಾಗಿತ್ತು. ಹೆಣ್ಣು ಮಗು ಹುಟ್ಟಿದ್ದು, ನಮಗ್ಯಾರಿಗೂ ಬೇಸರ ಎನಿಸಲಿಲ್ಲ. ಈ ಮೊದಲೇ ಒಂದು ಗಂಡು ಮಗು ಇದ್ದುದರಿಂದ, ಆಪರೇಷನ್ ಸಹ ಮಾಡಿಬಿಟ್ಟಿದ್ದರು...

ಮಗು ಬೆಳೆಯಿತು. ದೊಡ್ಡದಾಯಿತು. ಸ್ಕೂಲಿಗೆ ಹೋಗಲಾರಂಭಿಸಿತು. ಆದರೆ ನಮಗ್ಯಾರಿಗೂ ಅವಳು ನಮ್ಮ ಮನೆಯವಳು ಅಂತ ಅನ್ನಿಸದಷ್ಟು ಅವಳ ಪಾಡಿಗೆ ಅವಳು ಇರುತ್ತಿದ್ದಳು. ಅವಳ ಈ ವರ್ತನೆ ನಮಗೆಲ್ಲರಿಗೂ ಪ್ರಶ್ನೆಯಾಗಿರುತ್ತಿತ್ತು. ಒಮ್ಮೊಮ್ಮೆ ಇವಳು ನನ್ನ ಸ್ವಂತ ಮಗಳೇ ಅಲ್ಲವೇನೋ ಎನ್ನುವ ಅನುಮಾನ ಅಧಿಕವಾಗುತ್ತಿತ್ತು. ಅವಳು ಸಮಸ್ಯೆಯ ಮಗುವಾಗಿದ್ದಳು. ಜ್ಯೋತಿಷಿಗಳ ಬಳಿ ಅವಳ ಜಾತಕವನ್ನು ತೋರಿಸಿದಾಗ, ಅವರು ಹೇಳಿದ ಮಾತು ನನ್ನನ್ನು ತಲ್ಲಣ ಗೊಳಿಸಿತ್ತು."

" ಈ ಮಗು ತನ್ನ ತಂದೆ ತಾಯಿಯರಿಂದ ದೂರ ಇದ್ದು ಬೆಳೆಯುವ ಯೋಗ ಇದೆ. ಇದು ನಿಮ್ಮ ಸ್ವಂತ ಮಗಳೋ? ಸಾಕು ಮಗಳೋ ಅಂತ ಕೇಳಿದ್ದರು. ನನಗೆ ಯಾಕೋ ಅವರ ಪ್ರಶ್ನೆ ಸಮಂಜಸವೆನಿಸಲಿಲ್ಲ. ಮಾನಸಿಕ ವೈದ್ಯರ ಬಳಿ ಕರೆದುಕೊಂಡು ಹೋಗಿದ್ದೆವು. ಅವರು ಖಿನ್ನತೆ ಎಂದರು. ಮತ್ತೆ ಇನ್ಯಾರೋ ಸರ್ಪದೋಷ ಇದ್ದರೆ ಹೀಗಾಗುತ್ತೆ ಎಂದರು. ನಾವು ಎಲ್ಲದಕ್ಕೂ ಪರಿಹಾರವನ್ನು ಮಾಡಿದ್ದಾಯಿತು. ಆದರೆ ಪರಿಣಾಮ ಮಾತ್ರ ಬದಲಾಗಿರಲಿಲ್ಲ."

" ಈಗ್ಗೆ ಮೂರು ವರ್ಷಗಳ ಕೆಳಗೆ ಅವಳ ಬ್ಲಡ್ ಟೆಸ್ಟ್ ಮಾಡಿಸಿದೆವು. ನಮ್ಮಿಬ್ಬರ ಬ್ಲಡ್ ಗ್ರೂಪ್ ಒಂದೇ. ಆದರೆ ಇವಳ ಗ್ರೂಪ್ ಬೇರೆಯಾಗಿತ್ತು. ಆಗ ಅನುಮಾನ ಬಲವಾಗಿ ಡಿ.ಎನ್.ಎ. ಟೆಸ್ಟ್ ಮಾಡಿಸಿದೆ. ನನ್ನ ಅನುಮಾನ ನಿಜವಾಗಿತ್ತು. ಆದರೆ ಈ ನಿಜಾಂಶವನ್ನು ಈಗ ನಿಮಗೆ ಮಾತ್ರ ತಿಳಿಸುತ್ತಿದ್ದೇನೆ. ಬೇರೆಯಾರಿಗೂ, ನನ್ನ ಗಂಡನಿಗೂ, ಮಗನಿಗೂ ಸಹ ತಿಳಿಸಿಲ್ಲ."

"ಅಂದ್ರೇ.. ಅಂದ್ರೇ.. ಇವಳು ನಿಮ್ಮ ಸ್ವಂತ ಮಗಳು ಅಲ್ವಾ?"

ಆಕೆ ವಿಚಿತ್ರವಾಗಿ ನಕ್ಕಳು. "ಇನ್ನು ನಾಟಕ ಸಾಕು ಯಶೋದಾರವರೇ. ಸತ್ಯ ಏನು ಅಂತ ನಿಮಗೂ ಭಾಸವಾಗಿದೆ. ಆದರೆ ಹೆದರ ಬೇಡಿ. ನಾನು ನಿಜವನ್ನು ಯಾರಿಗೂ ತಿಳಿಸುವುದಿಲ್ಲವೆಂದು ನಿರ್ಧರಿಸಿದ್ದೇನೆ. ಇವಳು ನನ್ನ ಹೊಟ್ಟೆಯಲ್ಲಿ ಹುಟ್ಟದಿದ್ದರೇನಂತೆ! ನಾನು ಸಾಕಿದ್ದೇನೆ, ಬೆಳೆಸಿದ್ದೇನೆ.. ಅವಳ ವರ್ತನೆ ಹೇಗೇ

ಇರಲಿ ಅವಳು ನನ್ನ ಮಗಳೇ..."

ಯಶೋದಾ ಎದ್ದು ನಿಂತಳು. "ನನಗೆ ಎಂಥಾ ಮಗು ಹುಟ್ಟಿತ್ತೊ? ಯಾಕೆ ಅದಲು ಬದಲಾಯಿತು ಅಂತ ತಿಳಿದುಕೊಳ್ಳುವ ಕುತೂಹಲ ನನಗಿಲ್ಲ. ಬಹುಶಃ ಗಂಡು ಮಗುವೇ ಹುಟ್ಟಿರಬೇಕು. ಯಾಕೆಂದರೆ ಯಾರೂ ಹೆಣ್ಣು ಮಗುವನ್ನು ಅದಲು ಬದಲು ಖಂಡಿತಾ ಮಾಡುವುದಿಲ್ಲ ಅಂತ ನನ್ನ ಭಾವನೆ. ಆ ಮಗು ಎಲ್ಲೇ ಇದ್ದರೂ, ತಂದೆ ತಾಯಿಗಳು ಚೆನ್ನಾಗಿ ನೋಡಿಕೊಂಡಿರುತ್ತಾರೆಂಬ ನಂಬಿಕೆ ನನಗಿದೆ. ಇಷ್ಟರ ಮೇಲೆ ಆ ಮಗುವಿನ ಹಣೆಯಲ್ಲಿ ಹೇಗೆ ಬರೆದಿದೆಯೋ ಹಾಗೇ ನಡೆಯುತ್ತೆ."

"ಹಾಗಾದ್ರೆ ಸ್ಮಿತಾಳಿಗೆ, ನೀವು ಸ್ವಂತ ತಾಯಿ ಅಂತ ತಿಳಿದಿಲ್ಲವಾ?"

"ಇಲ್ಲ. ತಿಳಿದರೆ ಆಘಾತವಾಗುವುದಿಲ್ಲವೆ? ಅದನ್ನೆಲ್ಲ ತಡೆದುಕೊಳ್ಳುವ ಚೈತನ್ಯ ಅವಳಲ್ಲಿಲ್ಲ. ಹೆತ್ತ ತಂದೆ ತಾಯಿಗಳಿಗೆ ಬೇಡದ ಮಗುವಾಗಿ, ಎಲ್ಲೋ ಬೆಳೆದೆ ಎನ್ನುವ ಸತ್ಯ ತಿಳಿದರೆ, ಅವಳು ಬದುಕಿರುತ್ತಾಳೆ ಅಂತ ಅಂದ್ಕೊಂಡ್ರಾ? ಇದುವರೆಗೂ ಸ್ವಂತ ಮಗಳಂತೆ ನೋಡಿಕೊಂಡಿದ್ದೇನೆ. ಅದರಲ್ಲಿ ಯಾವ ಕಪಟವೂ ಇಲ್ಲ. ಇದು ಸತ್ಯ."

"ಹಾಗಾದ್ರೆ, ಆ ಡಿ.ಎನ್.ಎ. ರಿಪೋರ್ಟ್?"

"ಅದನ್ನು ಎಂದೋ ಹರಿದು ಬಿಸಾಡಿದೆ... ನನ್ನಂತೆ, ನನ್ನ ಗಂಡನಾಗಲೀ, ಮಗನಾಗಲೀ ಭಾವಿಸುವುದಿಲ್ಲ.. ಈಗ ಇಷ್ಟು ವರ್ಷಗಳ ನಂತರ ನಿಜ ತಿಳಿದರೆ ಆಗುವುದು ಅನಾಹುತವೇ... ಹೌದು ತಾನೇ?"

ಯಶೋದಾ ಪೆಚ್ಚಾದಳು. ಇಪ್ಪತ್ತೈದು ವರ್ಷಗಳ ಕೆಳಗೆ ಇದೇ ಆಸ್ಪತ್ರೆಯಲ್ಲಿ ನರ್ಸ್ ಒಬ್ಬಳ ಸಹಾಯದಿಂದ ತಾನು ಹೆತ್ತ ಕಂದನನ್ನು ಈಕೆಯ ಮಗ್ಗುಲಲ್ಲಿ ಮಲಗಿಸಿ, ಅವಳು ಹೆತ್ತಿದ್ದ ಮಗುವನ್ನು ತನ್ನ ಬಳಿಗೆ ಕರೆತರಿಸಿಕೊಂಡಿದ್ದು ನೆನಪಾಗಿತ್ತು. ಆ ರಹಸ್ಯವನ್ನು ತಾನೂ ಹೊರಗೆಡವಿರಲಿಲ್ಲ... ಆದರೆ ತನ್ನದು ಸ್ವಾರ್ಥವಾಗಿತ್ತು... ಆದರೆ ಈಕೆ ಮಹಾನ್. ಕೈ ಎತ್ತಿ ಮುಗಿಯಬೇಕೆನ್ನಿಸಿತೂ ಆದರೆ, ರಹಸ್ಯ ಎಲ್ಲಿ ಹೊರಬಿದ್ದು ಬಿಡುವುದೋ ಎಂದು ಹೆದರಿದಳು. ಆಕೆ ಮನದಲ್ಲಿ ನಕ್ಕಿದ್ದು, ಇವಳಿಗೆ ಬಹಿರಂಗವಾಗಿ ಗೋಚರಿಸಿತ್ತು. ತನ್ನ ಸಣ್ಣತನ ಒಳಗೊಳಗೇ ಚುಚ್ಚಿತ್ತು. ಆದರೆ ಕಾಲ ಮಿಂಚಿತ್ತು.

ನಾನಿನ್ನು ಬರ್ತೀನಿ. ನಿಮಗೆ ತೊಂದರೆ ಆಯ್ತು. ಸುಜಾತ ಉತ್ತರಿಸಲಿಲ್ಲ. ಇವಳು ಮತ್ತೆ ತನ್ನ ಮನೆಗೆ ಬರಲಾರಳು ಎಂದುಕೊಂಡಳು. ತನ್ನ ಬೆನ್ನ ಹಿಂದೆ ಅವಳು ನಗುತ್ತಿರಬಹುದೆನ್ನಿಸಿತ್ತು. ಆದರೆ ತಿರುಗಿ ನೋಡುವ ಧೈರ್ಯವಿರಲಿಲ್ಲ.

ನವೀನ ನನ್ನ ಮಗ ಹೆತ್ತ ತಾಯಿ ತಾನಲ್ಲದಿರಬಹುದು. ಆದರೆ ದೈವ

ನಿಯಮದಂತೆ ನನ್ನ ಮಗನಾಗಿ ಬೆಳೆದಿದ್ದಾನೆ. ಅವನಿಗೆಂದೂ ನಿಜ ತಿಳಿಯಬಾರದು.. ಇನ್ನೆಂದೂ ಈ ಮನೆಯ ಕಡೆ ಸುಳಿಯಬಾರದು ಎಂದುಕೊಂಡಳು. ಆದರೆ!.. ಸ್ಮಿತಾಳ ಮುಖ ಕಣ್ಣೆದುರಿಗೆ ತೇಲಿ ಬಂತು.. ಬಹುಶಃ ಸ್ವಂತ ತಾಯಿಯ ಬೇಗುದಿ ಸಾಕು ತಾಯಿಯ ಅಳಲು, ತಿಳಿಯದೆ ನಿರಾಳವಾಗಿದ್ದಾಳೆ ಎಂದುಕೊಂಡು, ಭಾರವಾದ ನಿಟ್ಟುಸಿರೊಂದನ್ನು ಹೊರಗೆಡವಿದಳು.

ಸುಮಾರು ಎರಡು ತಿಂಗಳುಗಳಿಂದ ಖಾಯಿಲೆಯಿಂದ ನರಳುತ್ತಿದ್ದ ಆಕೆ ಇದ್ದಕ್ಕಿಂದಂತೆ ಒಂದುದಿನ ತೀರಿಹೋದಳು ಆಕೆಯ ಸಾವು ಅನಿರೀಕ್ಷಿತವಲ್ಲದಿದ್ದರೂ, ಅನಂತರ ಆ ಸಾವಿನ ಹಿಂದೆ ಏನೋ ಕೈವಾಡವಿದೆ ಎಂದೆನಿಸತೊಡಗಿತ್ತು.

* * *

೫. ಸುರುಳಿಯ ಸುತ್ತ

ಬಸ್ಸು ಹೊರಟು ನಿಂತಿತ್ತು. ಜನರು ತುಂಬಿದ್ದರು. ಕಿಟಕಿಯ ಬಳಿ ಕುಳಿತಿದ್ದ ಶಾರದಾ ಬಸ್ಸು ಹೊರಟರೆ ಸಾಕು ಎಂದು ಕಾಯುತ್ತಿದ್ದಳು. ಕಿಟಕಿಯಿಂದಾಚೆ ನೋಡುತ್ತಿದ್ದವಳ ಸಮೀಪಕ್ಕೆ ಒಬ್ಬ ವ್ಯಕ್ತಿ ಬಂದ. ನೋಡಲು ಸಭ್ಯನಂತೆ ಕಾಣುತ್ತಿದ್ದ. ಇವಳ ಕಡೆ ನೋಡಿ ಗಂಭೀರದಿಂದ ಕೇಳಿದ.

"ನೀವೂ ಶಿವಮೊಗ್ಗಾಕ್ಕೆ ಹೋಗ್ತಾ ಇದೀರಾ?"

ಉತ್ತರ ಕೊಡಲು ಅನುಮಾನಿಸಿದವಳನ್ನು ಕಂಡು ಮತ್ತೊಮ್ಮೆ ಹೇಳಿದ. ನಾನ್ಯಾಕೆ ಕೇಳ್ತೀನಿ ಅಂತಂದ್ರೆ, ತನ್ನ ಅಣ್ಣನ ಮಗಳೂ ಶಿವಮೊಗ್ಗಾಕ್ಕೆ ಹೊರಟಿದಾಳೆ ಎನ್ನುತ್ತಾ ತನ್ನ ಮುಂದಿನ ಸೀಟಿನಲ್ಲಿ ಕುಳಿತಿದ್ದ ಹುಡುಗಿಯ ಕಡೆ ನೋಡಿದ. ಶಾರದಾಳ ದೃಷ್ಟಿ ಅತ್ತ ಹರಿಯಿತು. ಸುಮಾರು ಹತ್ತು ಹನ್ನೆರಡರ ವಯಸ್ಸಿನ ಬಾಲಕಿ, ಸೌಮ್ಯ ಮುಖದವಳಾಗಿದ್ದು ಲಕ್ಷಣವಾಗಿದ್ದಳು. ಯಾವ ಗಮನವೂ ಇಲ್ಲದಂತೆ ತನ್ನ ಪಾಡಿಗೆ ತಾನು ಕುಳಿತಿದ್ದವಳನ್ನು ಕಂಡು ಅಚ್ಚರಿಯೆನಿಸಿತು. ಅಷ್ಟರಲ್ಲಿ ಆ ವ್ಯಕ್ತಿ ಮತ್ತೆ ಮಾತನಾಡಿದ್ದ...

"ಅಲ್ಲಿ ಬಸ್ಸ್ಟಾಂಡ್ಗೆ ನನ್ನ ಅಣ್ಣನೋ ತಮ್ಮನೋ ಯಾರಾದ್ರೂ ಕರೆದುಕೊಂಡು ಹೋಗಲು ಬಂದಿರ್ತಾರೆ... ಸ್ವಲ್ಪ ಹುಡುಗಿಯ ಕಡೆ ಗಮನವಿಟ್ಟಿರಿ ಮೇಡಂ." ಅವನು ವಿನಯದಿಂದ ಕೇಳಿಕೊಂಡಾಗ ಇವಳಿಗೆ ಇಲ್ಲವೆನ್ನಲಾಗಲಿಲ್ಲ.

"ಓ.... ಅದಕ್ಕೇನಂತೆ ನಾನು ನೋಡ್ಕೋತೀನಿ. ನೀವು ಚಿಂತಿಸ್ಬೇಡಿ... ನಿನ್ನ ಹೆಸರೇನು ಪುಟ್ಟೀ" ಹುಡುಗಿಯ ಕಡೆಗೆ ತಿರುಗಿ ಕೇಳಿದಳು. ಹುಡುಗಿ ಉತ್ತರಿಸಲಿಲ್ಲ. ಇತ್ತ ತಿರುಗಲೂ ಇಲ್ಲ.

"ಶಾರಿಕಾ ಅಂತ... ಶಾರೀ ಅಂತ ಕೂಗ್ತಿವಿ." ಅವನು ನಸುನಕ್ಕು ನುಡಿದಾಗ ಇವಳು ಮುಗುಳ್ನಕ್ಕಳು. ಅವನು ತನ್ನ ಕೈಯಲ್ಲಿದ್ದ ಬಿಸ್ಕತ್ತಿನ ಹಾಗೂ ಚಾಕ್ಲೇಟಿನ ಪ್ಯಾಕ್ಗಳನ್ನು ಆ ಹುಡುಗಿಯ ಕೈಗಿತ್ತ. ಶಾರೀ... "ಹೊಟ್ಟೆ ಹಸ್ದಾಗ ತಿನ್ನು.. ಕೆಳಗೆ ಎಲ್ಲಿಯೂ ಇಳಿದು ಹೋಗ್ಬೇಡ... ನಿಂಗೆ ಏನಾದ್ರು ಬೇಕಾದ್ರೆ ಈ ಆಂಟಿನ ಕೇಳು.." ಅವನು ಅವಳ ಕಡೆ ತಿರುಗಿ ನುಡಿದ. ಆ ಹುಡುಗಿ ನಿಧಾನವಾಗಿ ಕತ್ತನ್ನಾಡಿಸಿತು.

ಬಸ್ಸು ಹೊರಟಿತ್ತು. ಅವನು ಆ ಹುಡುಗಿಯ ಕೈಯಾಡಿಸಿ ಬೈ ಬೈ ಎಂದು ಹೇಳಿ, ಇವಳ ಕಡೆ ತಿರುಗಿ, " ಥ್ಯಾಂಕ್ ಯು ಮೇಡಂ " ಎಂದಿದ್ದ. ಆ ಹುಡುಗಿ ಕಿಟಕಿಯಿಂದಾಚೆ ಸುಮ್ಮನೇ ನೋಡುತ್ತಿತ್ತು. ಬಸ್ ಸ್ಟ್ಯಾಂಡ್‌ನ್ನಾ ದಾಟಿ, ಬಸ್ಸು ಮುಖ್ಯ ರಸ್ತೆಯನ್ನು ಸೇರಿದಾಗ, ಶಾರದಾ ಆ ಹುಡುಗಿಯ ಕಡೆ ಬಾಗಿ ಕರೆದಳು.

ಶಾರಿಕಾ... ಇಲ್ಲಿ ಬರ್ತೀಯಾ?" ತನ್ನ ಪಕ್ಕದ ಸೀಟಿಗೆ ಬಾ ಎಂಬಂತೆ ಕರೆದಳು. ಆದರೆ ಆ ಹುಡುಗಿ ಇಲ್ಲ ಎಂಬಂತೆ ತಲೆಯಾಡಿಸಿತು ಸುಮ್ಮನಾದಳು. ಆದರೂ ಆಗ್ಗಾಗೆ ಆ ಹುಡುಗಿಯ ಕಡೆ ಇವಳ ನೋಟ ಹರಿಯುತ್ತಿತ್ತು. ಎಲ್ಲಿಯೋ ನೋಡಿದಂತಿದೆ ಎಲ್ಲಿರಬಹುದು! ಇದೇ ಹೋಲಿಕೆಯವರು ಯಾರಿರಬಹುದು?... ಯೋಚಿಸಿದರೂ ಯಾರಿರಬಹುದೆಂದು ಗೋತ್ತಾಗಲಿಲ್ಲ. ಸುಮ್ಮನೇ ಕಿಟಕಿಯಿಂದಾಚೆ ನೋಡುತ್ತಾ ಕುಳಿತಿದ್ದ ಹುಡುಗಿಯ ಮುಗ್ಧತೆಗೆ ಅಯ್ಯೋ ಎನ್ನಿಸಿತ್ತು.

ಎಷ್ಟು ಅಂದವಾಗಿದೆ ಹುಡುಗಿ, ಆದರೆ ವಯಸ್ಸಿಗೆ ತಕ್ಕ ಚುರುಕುತನವಿಲ್ಲ. ಕಣ್ಣುಗಳಲ್ಲಿ ಚಂಚಲತೆ ಇಲ್ಲ. ಎಷ್ಟು ಧೈರ್ಯವಾಗಿ, ಈ ಹುಡುಗಿಯೊಬ್ಬಳನ್ನೇ ಬಸ್ಸಿನಲ್ಲಿ ಕೂರಿಸಿದಾರಲ್ಲ. ಸುಮಾರು ಆರೇಳು ಗಂಟೆಗಳ ಪ್ರಯಾಣ. ಈ ಹುಡುಗಿಯ ಜವಾಬ್ದಾರಿ ನನ್ನ ತಲೆಗೆ ಬಿದ್ದಿತಲ್ಲ ಅಂತ ಒಂದು ಗಳಿಗೆ ಬೇಸರವೆನಿಸಿದರೂ, ಮರುಕ್ಷಣವೇ ಸರಿ ಮಾಡಿಕೊಂಡಳು.

ಬಸ್ಸಿನಲ್ಲಿನ ಬೇರೆ ಯಾವ ಪ್ರಯಾಣಿಕರಿಗೂ ಹೇಳದೇ, ತನಗೇ ಆ ವ್ಯಕ್ತಿ ಹೇಳಿದನಲ್ಲ. ಈ ಮುಂಚೆ ನನ್ನ ಪರಿಚಯವಿರಬಹುದೇ, ನನ್ನ ಬಗ್ಗೆ ತಿಳಿದುಕೊಂಡಿರಬಹುದೇ, ಅಥವಾ ತನ್ನ ಬಗ್ಗೆ ಒಳ್ಳೆಯ ಅಭಿಪ್ರಾಯ ಮೂಡಿ, ಹುಡುಗಿಯ ಯೋಗಕ್ಷೇಮವನ್ನು ನನಗೆ ವಹಿಸಿರಬಹುದೇ, ಹ್ಞಾ.. ಇದೇ ಸರಿ ಎಂದು ತನಗೆ ತಾನೇ ಹೇಳಿಕೊಂಡಾಗ, ತನ್ನ ಬಗ್ಗೆಯೇ ಅಭಿಮಾನ ಮೂಡಿತು. ಆಗಾಗ್ಗೆ ಆ ಹುಡುಗಿಯ ಕಡೆ ನೋಡುತ್ತಿದ್ದಳು. ಆ ಹುಡುಗಿ ತೂಕಡಿಸಲಾರಂಭಸಿದ್ದಳು. ಒಂದೆರಡು ಬಾರಿ, ಕತ್ತು ವಾಲಿತ್ತು. ತಕ್ಷಣವೇ ಆ ಹುಡುಗಿ ಎಚ್ಚರಗೊಳ್ಳುತ್ತಿದ್ದಳು. ತಟ್ಟನೆ ಬಸ್ಸಿಗೆ ಬ್ರೇಕು ಹಾಕಿದರೆ ಹುಡುಗಿ ಬೀಳುವುದು ಖಂಡಿತಾ ಎಂದುಕೊಂಡು, ತಾನೇ ಎದ್ದು, ಆ ಹುಡುಗಿಯ ಪಕ್ಕದಲ್ಲಿ ಕುಳಿತಿದ್ದ ವ್ಯಕ್ತಿಯನ್ನು ಎಬ್ಬಿಸಿ, ತಾನು ಆ ಹುಡುಗಿಯ ಪಕ್ಕದಲ್ಲಿ ಕುಳಿತಳು. ಎಚ್ಚರಗೊಂಡ ಶಾರಿಕ ಇತ್ತ ನೋಡಲಿಲ್ಲ. ಶಾರಾದಾಳೇ ಮಾತನಾಡಿಸಿದಳು...

"ಕುಡಿಯೋಕೆ ನೀರು ಬೇಕಾ? ಬಿಸ್ಕತ್ತನ್ನು ತಿಂತೀಯಾ?" ಇಲ್ಲ ಎನ್ನುವಂತೆ ತಲೆಯಾಡಿಸಿತು. ಕಿಟಕಿಯಿಂದಾಚೆಗೆ ನೋಟ ಹರಿಸಿತು. ಶಾರದಾ ಸರಿಯಾಗಿ ಕುಳಿತು ಸೀಟಿನ ಹಿಂಭಾಗಕ್ಕೆ ತಲೆಯನ್ನು ಆನಿಸಿದಳು... ಮತ್ತೆ ನೋಟ ಹುಡುಗಿಯತ್ತ ಹರಿಯಿತು.

ಬಸ್ಸಿನ ವೇಗಕ್ಕೆ ಕುಲುಕಾಡುವ ಪುಟ್ಟ ದೇಹ, ಭರೋ ಎಂದೂ ಬೀಸುವ ಗಾಳಿಗೆ ಹಾರಾಡುವ ಮುಂಗುರುಳು, ಆಗಾಗ್ಗೆ ಕೂದಲನ್ನು ಹಿಂದಕ್ಕೆ ಸರಿಸಿಕೊಳ್ಳುವ ಪರಿ ಏನನ್ನೋ ನೆನಪಿನ ಸುಳಿಯಿಂದ ಎಳೆದುಕೊಳ್ಳುವ ಸಾಹಸ ಮಾಡಿದಳು ಶಾರದಾ. ಬಸ್ಸು ದಾರಿಯನ್ನು ಕಬಳಿಸುತ್ತಾ ಮುಂದಕ್ಕೆ ಹೋಗುತ್ತಿತ್ತು. ಮನದ ವೇಗ ಅದನ್ನು ಮೀರಿಸಿತ್ತು...

ಇದೇ ರೂಪದ, ಇಂಥದೇ ಮುಗ್ಧತೆಯ ಹುಡುಗಿಯೊಬ್ಬಳು ತನಗೆ ಪರಿಚಿತ ಳಾಗಿದ್ದಳು ಎನ್ನುವುದನ್ನು ಕೆಲವೇ ಕ್ಷಣಗಳಲ್ಲಿ ಪತ್ತೆ ಮಾಡಿತು. "ಮೂಕಾಂಬಿಕಾ!" ತಾನು ಪತ್ತೆ ಮಾಡಿದುದಕ್ಕೆ ತನಗೆ ತಾನೆ ಶಾಭಾಸ್ ಗಿರಿಯನ್ನು ಹೇಳಿಕೊಂಡು ಹುಡುಗಿಯ ಕಡೆ ತಿರುಗಿದಳು. ಹೌದು ಈ ಹುಡುಗಿ ಮೂಕಾಂಬಿಕಾಳ ತದ್ರೂಪು. ಅವಳ ಮಗಳಿರಬಹುದೇ.... ಈ ಹುಡುಗಿಯ ತಾಯಿಯ ಹೆಸರು ಏನಿರಬಹುದು ಅಂತ ವಿಚಾರಿಸಿದರೇ ತಕ್ಷಣವೇ ಮನಸ್ಸು ಬೇಡ ಎಂದಿತು. ಈ ಹುಡುಗಿ ಇದುವರೆಗೂ ಮಾತನ್ನೇ ಆಡಿಲ್ಲ... ಹೆಸರನ್ನು ಕೇಳಿದರೆ ಹೇಳುವಳೇ..? ಹೆಸರು ಶಾರಿಕಾ. ಶಾರಿಕಾ ಎಂಬ ಪಕ್ಷಿ ಸೊಗಸಾಗಿ ಹಾಡಬಲ್ಲದು. ಆದರೆ ಈ ಶಾರಿಕಾ, ಮೂಕಾಂಬಿಕಾ... ಆದರೆ ಮರುಕ್ಷಣವೇ ತನ್ನ ಬಗ್ಗೆ ಹೀನಾಯವೆನಿಸಿತ್ತು. ಛೆ.. ನನ್ನ ಆಲೋಚನೆಗಳು ಸರಿಯಿಲ್ಲ ಅಂತೆನ್ನಿಸಿದರೂ, ನೆನಪಿನ ಲಹರಿಯೊಳಗೆ ಮೂಕಾಂಬಿಕಾಳ ಮುಖ ತೇಲಿ ಬಂತು.

ಹುಡುಗಿಯರ ಪ್ರೌಢಶಾಲೆಗೆ ಹೊಸದಾಗಿ ಸೇರಿಕೊಂಡ ದಿನಗಳು ಅದು ಎಲ್ಲರೂ, ಸುಮಾರು ಹದಿಮೂರು ಹದಿನಾಲ್ಕು ವಯಸ್ಸಿನ ಹುಡುಗಿಯರೇ, ಬಣ್ಣ ಬಣ್ಣದ ಉಡುಪುಗಳನ್ನು ಹಾಕಿ ರಿಬ್ಬನ್ನುಗಳನ್ನು ಕಟ್ಟಿ, ಕಿಸಿಕಿಸಿ ನಗುತ್ತಾ, ಪಿಸು ಮಾತು ಗಳನ್ನಾಡುತ್ತಾ, ಶಾಲೆಯ ಅಂಗಳದಲ್ಲಿ ಆಟವಾಡುತ್ತಾ, ಹರಟೆ ಹೊಡೆಯುತ್ತಾ, ಒಬ್ಬರನ್ನೊಬ್ಬರು ರೇಗಿಸುವ, ಚುಡಾಯಿಸುವ ಹುಡುಗಿಯರದ್ದೇ ಸಾಮ್ರಾಜ್ಯ...

ಹೈಸ್ಕೂಲಿನ ಮೊದಲನೇ ವರ್ಷದ ತರಗತಿಯಲ್ಲಿ ಶಾರದಾ ಸೇರ್ಪಡೆ ಹೊಂದಿ ದ್ದಳು. ಎರಡು ವರ್ಗಗಳಿದ್ದವು. ಒಂದು "ಎ" ಸೆಕ್ಷನ್. ಅಲ್ಲಿ ಸುಮಾರು ಮೂವತ್ತೈದು ಜನ ವಿಜ್ಞಾನವನ್ನು ಐಚ್ಛಿಕವಾಗಿ ಆಯ್ದುಕೊಂಡ ವಿದ್ಯಾರ್ಥಿನಿಯರು. ಅವರೊಂದಿಗೆ, ಸಂಗೀತವನ್ನು ಐಚ್ಛಿಕವಾಗಿ ತೆಗೆದುಕೊಂಡ ಆರು ಮಂದಿ ಹುಡುಗಿಯರು. ಸೆಕ್ಷನ್ "ಬಿ" ನಲ್ಲಿನ ಹುಡುಗಿಯರು ಇತಿಹಾಸ ಹಾಗೂ ಭೂಗೋಳ ಶಾಸ್ತ್ರವನ್ನು ಐಚ್ಛಿಕ ವಿಷಯವನ್ನಾಗಿ ಆಯ್ದುಕೊಂಡಿದ್ದವರು.

ಹಕ್ಕಿಗಳಂತೆ ನಾನಾ ವಿಧವಾದ ಸ್ವರಗಳಲ್ಲಿ ಮಾತನಾಡುತ್ತಿದ್ದ ಹುಡುಗಿಯರು, ಕನ್ನಡ ಪಂಡಿತರು ತರಗತಿಯೊಳಕ್ಕೆ ಬರುತ್ತಿದ್ದಂತೆ ಎದ್ದುನಿಂತರು. ನಮಸ್ಕಾರ ಸಾರ್." ಎಂದರು ಒಕ್ಕೊರಲಿನಿಂದ. ಸದ್ದು ಅಡಗಿತ್ತು.. "ಕೂತ್ಕೊಳ್ಳಿ" ಎಂದು ಹೇಳಿ, ಹಾಜರಿಯ ಪುಸ್ತಕವನ್ನು ತೆರೆದರು. ಒಂದೊಂದೇ ಹೆಸರನ್ನು ಕರೆದಾಗ,

ಆ ವಿದ್ಯಾರ್ಥಿನಿ ಎದ್ದು ನಿಂತು, "ಪ್ರೆಸೆಂಟ್ ಸಾರ್" ಎಂದು ಅವರಿಗೆ ಕೇಳುವಂತೆ ಹೇಳುತ್ತಿದ್ದರು.

"ಮೂಕಾಂಬಿಕಾ" ಕನ್ನಡ ಪಂಡಿತರು ಹೆಸರನ್ನು ಕರೆದರು. ಸದ್ದಿಲ್ಲ. ಮತ್ತೊಮ್ಮೆ ಕರೆದರು. ಹಿಂದಿನ ಬೆಂಚಿನಲ್ಲಿ ಕುಳಿತಿದ್ದ ಹುಡುಗಿಯೊಬ್ಬಳು,"ಬಂದಿದ್ದಾಳೆ" ಎಂದಳು. ಎಲ್ಲರ ಕತ್ತೂ ಅತ್ತ ತಿರುಗಿತು. ಕನ್ನಡ ಪಂಡಿತರು ಕತ್ತೆತ್ತಿ ನೋಡಿದರು. ಮೂಕಾಂಬಿಕಾ ಎದ್ದು ನಿಂತಿದ್ದಳು. ಎಲ್ಲರೂ ಅವಳನ್ನೇ ದಿಟ್ಟಿಸಿದರು.

ಕನ್ನಡ ಪಂಡಿತರು ಮತ್ತೊಮ್ಮೆ ಮೂಕಾಂಬಿಕಾ ಎಂದರು. ಅವಳ ಮಗ್ಗುಲಲ್ಲಿ ಕುಳಿತಿದ್ದ ಹುಡುಗಿ ಎದ್ದು ನಿಂತು, ಇವಳೇ ಸಾರ್ ಮೂಕಾಂಬಿಕಾ ಎಂದಳು.. ಎಲ್ಲರಿಗೂ ನಗು ಬಂದಿತು. ಕನ್ನಡ ಪಂಡಿತರು ಗದರಿದರು.

"ಯಾಕಮ್ಮಾ ನೀನು ಉತ್ತರ ಕೊಡ್ತಿದೀಯ ಅವಳೇ ಹೇಳಲಿ... ಏನಮ್ಮಾ... ನಿನ್ನ ಹೆಸರೇನು?" ಮೂಕಾಂಬಿಕಾಳ ತುಟಿಗಳು ಅಲುಗಾಡಿದ್ದವು. ಆದರೆ ದನಿ ಹೊರಟಿರಲಿಲ್ಲ. ಅವಳು ನಾಚಿಕೆಯಿಂದ ಕೆಂಪಾಗಿದ್ದಳು. ದುಂಡನೆಯ ಮುಖ. ಗುಂಡನೆಯ ಕೆನ್ನೆಗಳು.. ಒಳ್ಳೆಯ ದಂತವರ್ಣ, ಗುಂಗುರು ಕೂದಲು, ಮೋಟು ಜಡೆ... ಲಕ್ಷಣವಾಗಿಟ್ಟ ಹಣೆಯ ಮೇಲಿನ ಕೆಂಪು ಕುಂಕುಮ. ಒಳ್ಳೆ ಮುತ್ತೈದೆಯಂತೆ ಕಂಡು ಬಂದಿದ್ದಳು. ಮೈತುಂಬಾ ಬಿಗಿಯಾಗಿ ಹೊದ್ದ ಸೀರೆಯ ಸೆರಗು, ರವಿಕೆ ಒಂದಿಂಚೂ ಕಾಣುವಂತಿರಲಿಲ್ಲ. ಕೈ ತುಂಬಾ ತೊಟ್ಟ ಗಾಜಿನ ಬಳೆಗಳು, ದೊಡ್ಡ ಹೆಂಗಸಿನಂತೆ ಕಾಣುತ್ತಿದ್ದಳು. ಫ್ಯಾನ್ಸಿ ಡ್ರೆಸ್ ಮಾಡಿಕೊಂಡು ಬಂದವಳಂತೆ ಕಂಡು ಬಂದಳು. ಉಳಿದ ಹುಡುಗಿಯರಿಗೆ ಮೋಜು ಎನಿಸಿತ್ತು. ನಿಂತಿದ್ದವಳನ್ನು ಕೂತ್ಕೊ ಎಂದು ಹೇಳಿದ್ದರು ಪಂಡಿತರು.

ಕನ್ನಡ ಪಂಡಿತರು ಪಾಠವನ್ನು ಮುಗಿಸಿ, ಹೊರಟು ಹೋದರು. ಮತ್ತೆ ಗುಜುಗುಜು ಗಲಾಟೆ ಪ್ರಾರಂಭವಾಗಿತ್ತು. ಎಲ್ಲರ ಕುತೂಹಲದ ನೋಟಕ್ಕೆ ಮಾತಿಗೆ ಮೂಕಾಂಬಿಕಾ ವಸ್ತುವಾಗಿದ್ದಳು. ತಮ್ಮೊಡನೆ ತಮಗಿಂತ ವಯಸ್ಸಿನಲ್ಲಿ ದೊಡ್ಡವಳಾದ ವಳೊಬ್ಬಳು ಇದಾಳೆ ಎನ್ನುವುದೇ ಸೋಜಿಗದ ಸುದ್ದಿಯಾಗಿತ್ತು. ಇದಕ್ಕಿಂತ ಅಚ್ಚರಿಯ ವಿಷಯವೆಂದರೆ, ಅವಳು ಸಂಗೀತವನ್ನು ಐಚ್ಛಿಕ ವಿಷಯವನ್ನಾಗಿ ಆರಿಸಿಕೊಂಡಿದ್ದಳು! ಅಂದರೆ ಅವಳು ಮೂಕಿಯಂತೂ ಅಲ್ಲ.

ಗೌರಮ್ಮನಂತೆ ಸಿಂಗರಿಸಿಕೊಂಡು, ವಾಯಿಲ್ ಸೀರೆಯನ್ನುಟ್ಟು, ಮೈತುಂಬಾ ಸೆರಗನ್ನು ಹೊದ್ದು, ತನ್ನ ಪಾಡಿಗೆ ತಾನು ಇರುತ್ತಿದ್ದವಳೊಡನೆ, ಯಾರೂ ಸ್ನೇಹವನ್ನು ಬಯಸಲಿಲ್ಲ. ಅಷ್ಟೂ ಜನ ವಿದ್ಯಾರ್ಥಿನಿಯರ ನಡುವೆಯೂ ಏಕಾಂಗಿಯಾಗಿ ಕುಳಿತು, ಪುಸ್ತಕವನ್ನು ಬಿಡಿಸಿಟ್ಟುಕೊಂಡು ಕುಳಿತಿರುತ್ತಿದ್ದಳು. ಅದೇನು ಓದುತ್ತಿದ್ದಳೋ, ಓದುವಂತೆ ನಟಿಸುತ್ತಿದ್ದಳೋ ಅವಳಿಗೇ ಗೊತ್ತು. ಆದರೆ ಅದರ ಬಗ್ಗೆ ಯಾರೂ ಕೇಳುವ ಗೋಜಿಗೆ ಹೋಗಿರಲಿಲ್ಲ. ಕೇಳಿದ್ದರೂ ಬಹುಶಃ ಉತ್ತರ ಸಿಗುತ್ತಿರಲಿಲ್ಲ.

ಕನ್ನಡ ಪಂಡಿತರು, ಹಾಸ್ಯ ಪ್ರಕೃತಿಯವರು. ಉಳಿದ ಹುಡುಗಿಯರು ಗಲಾಟೆ ಮಾಡುವಾಗ ಹೇಳುತ್ತಿದ್ದರು. ನೋಡಿ, ಆ ಹುಡುಗಿಯನ್ನು ನೋಡಿ ಕಲಿತ್ಕೊಳ್ಳಿ.. ನೀವೂ ಇದೀರಾ.. ಬರೀ ಗಲಾಟೆ ಮಾಡಿಕೊಂಡು ಒಂದು ಹತ್ತು ನಿಮಿಷ ಮೌನ ವಾಗಿರುಕ್ಕೆ ಸಾಧ್ಯವಿಲ್ಲ.. ಎಂದು ಬೈದು ನಗಿಸುತ್ತಿದ್ದರು. ಹಾಜರಿ ಕೂಗುವಾಗ, ಮೂಕಾಂಬಿಕಾ ಎಂದು ಹೆಸರನ್ನು ಕೂಗಿ, ಕತ್ತೆತ್ತಿ ನೋಡಿ, ಅವಳು ಬಂದಿರುವುದನ್ನು ಗಮನಿಸುತ್ತಿದ್ದರು. ಹಾಜರಿಯನ್ನು ಗುರುತಿಸುತ್ತಿದ್ದರು.

ಅವಳು ಯಾರ ಮನೆಯವಳೋ, ಎಲ್ಲಿಂದ ಬರುತ್ತಾಳೋ, ಎಷ್ಟೋ ಜನ ಹುಡುಗಿಯರಿಗೆ ಗೊತ್ತೇ ಇರಲಿಲ್ಲ, ತಿಳಿದುಕೊಳ್ಳುವ ಪ್ರಯತ್ನವನ್ನು ಪಟ್ಟಿರಲಿಲ್ಲ. ಶಾಲೆಯ ಗಂಟೆ ಹೊಡೆದು, ಪ್ರಾರ್ಥನೆ ಪ್ರಾರಂಭವಾಗುವ ಸಮಯಕ್ಕೆ ಸರಿಯಾಗಿ, ಕಾರಿನಲ್ಲಿ ಬಂದು ಇಳಿಯುತ್ತಿದ್ದಳು. ಅಷ್ಟೇ ಎಲ್ಲರಿಗೂ ತಿಳಿದ್ದುದುದು.. ಸಾಯಂಕಾಲ ಅವಳಿಗಾಗಿ ಕಾರು ಬಂದು ಕಾದಿರುತ್ತಿತ್ತು.

ಎಲ್ಲರಿಗಿಂತ ದೊಡ್ಡವಳಂತೆ ಕಾಣುತ್ತಿದ್ದಳೆಂದೋ, ಅಥವಾ ಎಲ್ಲರೊಡನೆ ಬೆರೆಯುತ್ತಿರಲಿಲ್ಲವೆಂದೋ, ಅವಳು ಏಕಾಂಗಿಯಾಗೇ ಉಳಿದು ಬಿಟ್ಟದ್ದಳು. ಅವಳನ್ನು ಯಾರೂ ಚುಡಾಯಿಸುತ್ತಿರಲಿಲ್ಲ, ರೇಗಿಸುತ್ತಿರಲಿಲ್ಲ ಅಥವಾ ಸ್ನೇಹದಿಂದ ಮಾತನ್ನಾಡಿ ಸುತ್ತಲೂ ಇರಲಿಲ್ಲ. ಆದರೆ ಎಲ್ಲರಿಗೂ ಇದ್ದ ಒಂದು ಕುತೂಹಲವೆಂದರೆ, ಬಾಯಿ ಬಿಟ್ಟು ಮಾತನ್ನೇ ಆಡದಿರುವ ಹುಡುಗಿ, ಹಾಡನ್ನ ಹೇಗೆ ಹಾಡುತ್ತಾಳೆಂದು!

ಸಂಗೀತದ ಟೀಚರ್ ಗೌರಿದೇವಿಗೆ ಅವಳ ಬಗ್ಗೆ ಅಕ್ಕರೆ.. ಅದೇನು ಅನುಕಂಪ ವೋ, ಮರುಕವೋ, ತಿಳಿಯಿದು. ಅವಳೊಬ್ಬಳಿಗೇ ಸಂಗೀತದ ಪಾಠವನ್ನು ಹೇಳಿ ಕೊಡುತ್ತಿದ್ದರು. ಬೇರೆ ಯಾರನ್ನು ಅವಳೊಂದಿಗೆ ಸೇರಿಸುತ್ತಿರಲಿಲ್ಲ. ಉಳಿದ ಎಲ್ಲಾ ಹುಡುಗಿಯರಿಗೂ ಶನಿವಾರದ ದಿನ ಸಂಗೀತದ ತರಗತಿ ಇರುತ್ತಿತ್ತು. ಆಗ ಎಲ್ಲರಿಗೂ ಗುಂಪಿನಲ್ಲಿ ಹೇಳಿಸಿ ಬಿಡುತ್ತಿದ್ದರು. ಆದರೆ ಬಾಗಿಲ್ಲನ್ನು ಭದ್ರ ಪಡಿಸಿಕೊಂಡು ಮೂಕಾಂಬಿಕಾಳಿಗೆ ಸಂಗೀತ ಪಾಠವನ್ನು ಮಾಡುತಿದ್ದುದರಿಂದ ಅವಳ ಧ್ವನಿ ಹೇಗಿದೆ ಹೇಗೆ ಹಾಡುತ್ತಾಳೆಂಬುದು ರಹಸ್ಯವಾಗಿಯೇ ಉಳಿದುಬಿಟ್ಟಿತು.

ಹಾಗೇ ಎರಡು ವರ್ಷ ಕಳೆದವು. ಹೈಸ್ಕೂಲಿನ ಮೂರನೇ ವರ್ಷ, ಅಂದರೆ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕಟ್ಟಿದುದರಿಂದ ಹುಡುಗಿಯರೆಲ್ಲರಿಗೂ ಪರೀಕ್ಷೆಯದೇ ಚಿಂತೆ. ಪಬ್ಲಿಕ್ ಪರೀಕ್ಷೆ, ಚೆನ್ನಾಗಿ ತಯಾರಿ ನಡೆಸಬೇಕು. ಫಸ್ಟ್ ಕ್ಲಾಸ್‌ನಲ್ಲಿ ಪಾಸಾಗ ಬೇಕು ಇದೇ ಧ್ಯಾನ.. ದಿನಗಳು, ತಿಂಗಳುಗಳು ಕಳೆದು ಪರೀಕ್ಷೆಯೂ ಮುಗಿದು ರಜವೂ ಪ್ರಾರಂಭವಾಗಿತ್ತು.. ಮೂರು ವರ್ಷ ಜೊತೆ ಜೊತೆಯಲ್ಲಿ ಓದು, ವ್ಯಾಸಂಗ, ಹರಟೆ, ಆಟ ಪಾಠಗಳಲ್ಲಿ ಕಳೆದ ಸಹಪಾಠಿಗಳಿಗೆ ಮತ್ತೆ ಎಲ್ಲರೂ ಹೀಗೆ ಸೇರುವುದು ಸಾಧ್ಯವಿಲ್ಲ ಎಂದು ತಿಳಿದ ವಿಷಯವೇ. ಸಹಪಾಠಿಗಳು, ಗೆಳತಿಯರು, ಆಪ್ತ ಸ್ನೇಹಿತೆಯರು ಹೀಗೆ ಬೇರೆ ಬೇರೆಯೇ ಮನೋಧರ್ಮವಿದ್ದುದರಿಂದ ಅದೇ

ಮನೋಭಾವದಲ್ಲಿ ಒಬ್ಬರ ನೊಬ್ಬರು ಬೀಳ್ಕೊಟ್ಟಿದ್ದರು. ಆದರೆ ಈ ಯಾವ ರೀತಿಗೂ ಸೇರಿದವಳೆಂದರೆ ಮೂಕಾಂಬಿಕಾಳೊಬ್ಬಳೇ, ಇದರಿಂದ ಯಾರಿಗೂ ಯಾವ ಬೇಸರದ ಭಾವನೆ ಇರಲಿಲ್ಲ. ಅವಳ ಮನಸ್ಸಿನಲ್ಲಿ ಏನಿತ್ತು ಅಂತ ಅವಳಿಗೆ ಮಾತ್ರಗೊತ್ತು.

ಫಲಿತಾಂಶದ ದಿನ ಮತ್ತೆ ಎಲ್ಲರಿಗೂ ಸಂಭ್ರಮ, ಕುತೂಹಲ, ಆತಂಕ.. ಢವ ಢವ ಎನ್ನುವ ಎದೆಯ ಬಡಿತದೊಂದಿಗೆ, ನೋಟೀಸ್ ಬೋರ್ಡ್ ಎದುರಿಗೆ ಸ್ವಲ್ಪ ಮಟ್ಟಿಗೆ ನೂಕು ನುಗ್ಗಲು. ತಮ್ಮ ತಮ್ಮ ರಿಜಿಸ್ಟರ್ ನಂಬರನ್ನು ಹುಡುಕುತ್ತಾ, ಸಮಾಧಾನದ ನಿಟ್ಟುಸಿರು, ಗೆಲುವಿನ ಉತ್ಸಾಹ, ಕೆಲವರದ್ದಾದರೆ, ಕೆಲವರ ಪೆಚ್ಚು ಮುಖವೇ ಅವರ ಫಲಿತಾಂಶವನ್ನು ತಿಳಿಸಿತ್ತು. ಅವರವರ ಫಲಿತಾಂಶವನ್ನು ತಿಳಿದ ನಂತರ, ತಮಗೆ ಬೇಕಾದವರ ಫಲಿತಾಂಶವನ್ನು ತಿಳಿದುಕೊಳ್ಳುವ ಕುತೂಹಲ. ಮತ್ತೊಮ್ಮೆ ಪ್ರಕಟಣೆಯ ಮೇಲೆ ಕಣ್ಣೋಟ... ಹಾಗೇ ನೋಡುತ್ತಾ ನೋಡುತ್ತಾ ಮೂಕಾಂಬಿಕಾಳ ಫಲಿತಾಂಶ ಏನಾಗಿದೆಯೋ ಎನ್ನುವ ಆಸಕ್ತಿಯಿಂದ, ಅವಳ ರಿಜಿಸ್ಟರ್ ನಂಬರ್ರು ತಿಳಿದವರು ಪತ್ತೆ ಮಾಡಿದರು. ಅವಳು ಎಲ್ಲಾ ವಿಷಯಗಳಲ್ಲೂ ಫೇಲಾಗಿದ್ದಳು. ಆದರೆ ಸಂಗೀತದ ಮಾತ್ರ ಪಾಸಾಗಿದ್ದಳು! ಎಲ್ಲರಿಗೂ ಅಯ್ಯೋ ಎಂದೆನಿಸಿರಲೇ ಬೇಕು. ಅವಳು ಕೆಟ್ಟ ಹುಡುಗಿಯಲ್ಲ., ದುಷ್ಟತನವಿರಲಿಲ್ಲ. ಆದರೆ ಓದು ಬರಹದಲ್ಲಿ ಹಿಂದುಳಿದಿದ್ದಳು. ಸೋಜಿಗವೆಂದರೆ ಸಂಗೀತದ ಐಚ್ಛಿಕ ವಿಷಯದಲ್ಲಿ ಪಾಸಾಗಿದ್ದುದು... ಇದು ಟೀಚರರ ಕೃಪೆ ಇರಲೇಬೇಕು... ಆ ನಂತರ ಅವಳು ಮತ್ತೆ ಯಾರಿಗೂ ಸಿಕ್ಕಿರಲಿಲ್ಲ. ಮೂರು ವರ್ಷಗಳ ನಂತರ, ಎಲ್ಲರಿಗೂ ಅವರವರದ್ದೇ ಬೇರೆ ಬೇರೆ ದಾರಿ. ಕೆಲವರು ಓದನ್ನು ಮುಂದುವರೆಸಿದ್ದರು. ಕೆಲವರು ಕೆಲಸಕ್ಕೆ ಸೇರುವ ಪ್ರಯತ್ನದಲ್ಲಿದ್ದರು. ಕೆಲವರಿಗೆ ಮದುವೆಯಾಗಿ ಸಂಸಾರಕ್ಕೆ ಕಾಲಿಟ್ಟಿದ್ದರು. ಆದರೆ ಮೂಕಾಂಬಿಕಾಳ ಬಗ್ಗೆ ಯಾರಿಗೂ ತಿಳಿಯಲಿಲ್ಲ ಅಜ್ಞಾತವಾಗಿಯೇ ಉಳಿದಳು ಆ ಮೌನಿ ಇತರರುಗಳ ಪಾಲಿಗೆ.

ಇಷ್ಟು ವರ್ಷಗಳ ನಂತರ ಶಾರದಾಳಿಗೆ ಅವಳ ನೆನಪು ಒತ್ತಿಕೊಂಡು ಬಂದಿತ್ತು. ಅದು ಈ ಶಾರಿಕಾಳನ್ನು ಕಂಡಮೇಲೆ ಬಸ್ಸು ನಿಂತಿತ್ತು. ಇತ್ತ ತಿರುಗಿ ಹುಡುಗಿಯ ಕಡೆ ನೋಡಿದಳು.

"ಎಳ್ನೀರು ಕುಡೀತೀಯ ಶಾರಿಕಾ... ಕೊಡಿಸ್ಲಾ?" ಬೇಡ ಎನ್ನುವಂತೆ ಆ ಹುಡುಗಿ ತಲೆಯಾಡಿಸಿತು. ಏನನ್ನು ತಿನ್ನದೇ ಕುಡಿಯದೇ, ಅತ್ತಿತ್ತ ನೋಡದೇ, ತನ್ನ ಪಾಡಿಗೆ ತಾನು ಕುಳಿತಿರುವ ಹುಡುಗಿ ಮೌನದ ಭರಣಿ ಎಂದುಕೊಂಡಳು.

ಮತ್ತೆ ಬಸ್ಸು ಚಲಿಸಿತ್ತು. ಸಮಯಕ್ಕೆ ಸರಿಯಾಗಿ ಊರನ್ನು ಸೇರಿತ್ತು. ತಾನು ತನ್ನ ಲಗೇಜಿನೊಂದಿಗೆ ಇಳಿದು, ಆ ಹುಡುಗಿಯನ್ನು ಇಳಿಸಿದಳು. ಆ ಹುಡುಗಿಯದು ಒಂದೇ ಒಂದು ಸಣ್ಣ ಕಿಟ್‌ಬ್ಯಾಗ್.. ಆ ಹುಡುಗಿಯ ಕರೆಯುವರು ಯಾರಾದರೂ

ಬಂದಿರಬಹುದೇ ಅಂತ ಅತ್ತಿತ್ತ ಕಣ್ಣು ಹಾಯಿಸಿದಳು. ಆದರೆ ಅವಳ ಬಳಿಗೆ ಯಾರೂ ಧಾವಿಸಿ ಬಂದಿರಲಿಲ್ಲ. ಇವಳಿಗೆ ಅಚ್ಚರಿ ಎನಿಸಿತ್ತು...

ಹತ್ತು ನಿಮಿಷಗಳು ಕಳೆದರೂ ಯಾರೂ ಬಂದಿರಲಿಲ್ಲ. ಶಾರಿಕಾಳು ಯಾವ ಗಾಬರಿಯನ್ನಾಗಲೀ, ಬೇಸರವನ್ನಾಗಲೀ ವ್ಯಕ್ತ ಪಡಿಸದೇ ಹಾಗೇ ನಿಂತುದುದು ಇವಳಲ್ಲ ಆತಂಕವನ್ನುಂಟು ಮಾಡಿತ್ತು.. ಇನ್ನು ಎಷ್ಟು ಹೊತ್ತು ಇಲ್ಲೇ ಕಾಯುತ್ತಾ ನಿಲ್ಲುವುದು..? ಈ ಹುಡುಗಿಯ ವಿಳಾಸ ಗೊತ್ತಾದರೆ, ಅವಳ ಮನೆಯನ್ನು ತಲುಪಿಸ ಬಹುದು ಎಂದುಕೊಂಡು,

"ನಿಮ್ಮ ಮನೆಯವರು ಯಾರೂ ಬಂದಿಲ್ಲವಲ್ಲ ಶಾರಿಕಾ... ನಿಮ್ಮ ಮನೆ ಎಲ್ಲಿ ಬರುತ್ತೆ! ನಿಂಗೆ ಅಡ್ರೆಸ್ ಗೊತ್ತಾ?" ಅಂತ ಕೇಳಿದಾಗ, ಆ ಹುಡುಗಿ ತಲೆ ಅಲಾಡಿಸಿ ಗೊತ್ತಿಲ್ಲ ಎಂದು ಪಿಸುಧ್ವನಿಯಲ್ಲಿ ಹೇಳಿದ್ದು ಇವಳಿಗೆ ಕೇಳಿಸಿರಲಿಲ್ಲ. ಅರ್ಥವಾಗಿತ್ತು. ಮನದಲ್ಲೇ ಬೈದುಕೊಂಡಳು...

"ಮತ್ತೆ ಈಗ ಏನು ಮಾಡುವುದು!.. ಹೆಣ್ಣು ಹುಡುಗಿ, ಒಬ್ಬಳನ್ನೇ ಬಿಟ್ಟು ಹೋಗುವಂತಿಲ್ಲ. ಈ ಹುಡುಗಿಯ ಜವಾಬ್ದಾರಿಯನ್ನು ತನಗೆ ವಹಿಸಿದ ಆ ವ್ಯಕ್ತಿ ಎಂಥಾ ಬೇಜವಾಬ್ದಾರಿಯವನಿರಬಹುದು! ಇಂಥೋರೂ ಇರ್ತಾರಾ?" ಎಂದು ಸದ್ದಾಗದಂತೆ ಹಲ್ಲು ಕಡಿದಳು.

ಇಪ್ಪತ್ತು ನಿಮಿಷಗಳು ಕಳೆದರೂ, ಆ ಹುಡುಗಿಯನ್ನು ಕರೆದೊಯ್ಯಲು ಬರ ದಿದ್ದಾಗ, ಒಂದು ಆಟೋ ಹಿಡಿದು, ಆ ಹುಡುಗಿಯನ್ನು ಕೂರಿಸಿಕೊಂಡು ತನ್ನ ಅಕ್ಕನ ಮನೆಗೆ ಬಂದಳು.

ಶಾರದಾ ಬರುತ್ತಿರುವಳೆಂಬ ವಿಷಯ ತಿಳಿದಿದ್ದ ಅವಳ ಅಕ್ಕ, ಆಟೋ ನಿಂತ ಸದ್ದನ್ನು ಕೇಳಿದ ಕೂಡಲೇ ಮುಂಬಾಗಿಲಿಗೆ ಬಂದು ನಿಂತಳು. ತಂಗಿಯೊಡನೆ ಇಳಿದ ಬಾಲಕಿಯನ್ನು ಕಂಡು ಹುಬ್ಬೇರಿಸಿದಳು.

" ಶಾರೀ.. ಯಾರೇ ಈ ಹುಡುಗಿ?"

" ಅಯ್ಯೋ ಹೇಳ್ತಿನಿ ನಡೀ.. ಒಳಗೆ... ಎಂದು ಹೇಳಿ ಹುಡುಗಿಯ ಕೈ ಹಿಡಿದು ಒಳಕ್ಕೆ ಕರೆತಂದಳು. ಈ ಹುಡುಗಿ ಇದೇ ಊರ್ನೋಳು... ನನ್ನ ಜೊತೆಲೇ ಬಸ್ಸಲ್ಲಿ ಬಂದ್ಲು ಎಂದು ಹೇಳಿ ನಡೆದುದನ್ನು ತಿಳಿಸಿದಳು. ಯಾರೋ ಏನೋ, ಈ ಹುಡುಗಿಯ ಅಪ್ಪನೋ, ಚಿಕ್ಕಪ್ಪನೋ, ಬಸ್ ಸ್ಟ್ಯಾಂಡ್ಗೆ ಬರ್ಲೇ ಇಲ್ಲ... ಈ ಹುಡುಗಿ ಯಾರೂಂತ ನಿಂಗೇನಾದ್ರು ಗೊತ್ತಾ?"

"ಯಾರೋ ಗೊತ್ತಾಗ್ತಿಲ್ಲ. ಇದನ್ನೇ ಕೇಳ್ಬೋಡು ಮನೆ ಎಲ್ಲಿದೆ ಅಂತ ಗೊತ್ತಿಲ್ದೇ ಇರುತ್ತಾ?" ಅಕ್ಕ ಹುಡುಗಿಯಕಡೆ ಮತ್ತೆ ಮತ್ತೆ ನೋಡಿದಳು.

" ಬಾಯನ್ನೇ ಬಿಟ್ಟಿಲ್ಲ... ಏನು ಹೇಳುತ್ತೋ ಅದಕ್ಕೇ ಕೇಳ್ಸುತ್ತೋ ಇಲ್ವೋ.. ಹೆಸರು ಶಾರಿಕಾ ಅಂತ.. ಇಡೋ ಬದ್ಲು ಮೂಕಾಂಬಿಕಾ ಅಂತ ಇಡ್ಬೇಕಾಗಿತ್ತು."

ಇಬ್ಬರೂ ಸಣ್ಣಗೆ ನಕ್ಕೊಂಡ್ರು. "ಬೆಳಗ್ನಿಂದ ಏನನ್ನೂ ತಿಂದಿಲ್ಲ. ಕುಡಿದಿಲ್ಲ. ಮುದುಕಿ ತರಹ ಬಾಯನ್ನ ಒಣಗಿಸ್ಕೊಂಡು ಕೂತಿದೆ. ಒಂದು ಬಟ್ಟಲು ಹಾಲನ್ನಾದ್ರು ಕುಡೀಬಹುದು. ಇದ್ದರೆ ಕೊಡ್ತೀಯಾ?"

"ಹೂಂ ಕೊಡ್ತೀನಿ. ನೀನು ಕೈ ಕಾಲು ತೊಳ್ಕೊಂಡು ಬಾ... ನಿಂಗೆ ಕಾಫಿ ಕೊಡ್ತೀನಿ." ಅಕ್ಕ ಅಡಿಗೆ ಮನೆ ಕಡೆಗೆ ನಡೆದಿದ್ದಳು. ಶಾರದಾ ಬಚ್ಚಲು ಮನೆಯಿಂದ ಹೊರಕ್ಕೆ ಬರುವಷ್ಟರಲ್ಲಿ ಅವಳ ಭಾವನನ್ನು ಕೇಳಿಕೊಂಡು ಒಂದಿಬ್ಬರು ಬಂದಿದ್ದರು. ಅಕ್ಕ ಅವರೊಡನೆ ಶಾರಿಕಾಳ ಬಗ್ಗೆ ಹೇಳುತ್ತಿದ್ದಳು.

"ಈ ಹುಡುಗಿ ಇದೇ ಊರಿನವಳಂತೆ. ಯಾರ ಮನೆಯವಳು ಅಂತ ನಿಮಗೇನಾದ್ರು ಗೊತ್ತಾ?.. ಈ ಹುಡುಗಿ ಮಾತನ್ನೇ ಆಡಿಲ್ಲ. ಅದೇನು ಭಯವೋ .. ತಿಳೀತಿಲ್ಲ."

"ನಾವು ಕೇಳ್ತೀವಿ. ತಡೀರಿ," ಎನ್ನುತ್ತಾ ಅವರ ಪೈಕಿಯಲ್ಲಿ ಒಬ್ಬ ಹುಡುಗಿಯ ಬಳಿಗೆ ಬಂದ. ನಾನು ಈ ಹುಡುಗಿನ ಎಲ್ಲೋ ನೋಡಿದೀನಿ. ತಡೀರಿ ಜ್ಞಾಪಿ ಸ್ಕೋಳ್ತೀನಿ, ಎನ್ನುತ್ತಾ ತಲೆಗೆ ಕಸರತ್ತು ಕೊಟ್ಟರು.. ಅತ್ತಿತ್ತ ಓಡಾಡಿದ. ಆ ಹುಡುಗಿಗೆ ತಿಳಿಯದಂತೆ ಅವಳ ಕಿಟ್ ಬ್ಯಾಗ್‌ನ್ನು ತಡಕಾಡಿದ. ಅದರಲ್ಲಿ, ವಿಳಾಸವನ್ನು ಬರೆ ದಿದ್ದ ಒಂದು ಕಾರ್ಡ್ ಸಿಕ್ಕಿತು. ಓದಿಕೊಂಡು " ಯುರೇಕಾ " ಎನ್ನುವಂತೆ ಓಡಿ ಬಂದ.

"ಗೊತ್ತಾಯ್ತು.. ಈ ಹುಡುಗಿ ಯಾರ ಮನೆಯವಳು ಅಂತ ಗೊತ್ತಾಯ್ತು" ಎಂದ ಹರ್ಷದಿಂದ. ಅಕ್ಕ ಎಲ್ಲರಿಗೂ ಕಾಫಿಯನ್ನು ತಂದಿತ್ತಳು. ಆ ಹುಡುಗಿಗೆ ಸಕ್ಕರೆ ಹಾಕಿದ ಹಾಲನ್ನು ಕುಡಿಯಲು ಕೊಟ್ಟಳು. ಹುಡುಗಿ ನಿಧಾನವಾಗಿ ಕುಡಿಯಿತು. ಅವನು ಆ ವಿಳಾಸವನ್ನು ಹಿಡಿದು ನಾನು ಈಗ್ಬಂದೆ ಎಂದು ಹೇಳಿ, ಸ್ಕೂಟರನ್ನೇರಿ ಹೊರಟೇ ಬಿಟ್ಟಿದ್ದ.. ಕೆಲವೇ ನಿಮಿಷಗಳಲ್ಲಿ ತನ್ನೊಡನೆ ಶಾರಿಕಾಳ ತಂದೆಯನ್ನು ಚಿಕ್ಕಪ್ಪನನ್ನು ಕರೆತಂದಿದ್ದ..

ಸ್ಕೂಟರ್ರು ನಿಂತ ಸದ್ದನ್ನು ಕೇಳಿ ಹುಡುಗಿ ಎದ್ದು ನಿಂತಿತು. ಅವಳ ತಂದೆ ಶಾರೀ ಎನ್ನುತ್ತಾ ಒಳಕ್ಕೆ ಬಂದಿದ್ದ. ಹುಡುಗಿ ತುಟಿಗಳನ್ನು ಅಲುಗಿಸಿ, 'ಅಪ್ಪಾ' ಎಂದು ಗಂಟಲೊಳಗೇ ಉಸುರಿ, ಅವನ ಬಳಿಗೆ ಓಡಿತ್ತು...

"ಏನ್ರೀ.. ಬಸ್ ಸ್ಟ್ಯಾಂಡ್ ಗೆ ಯಾಕ್ರೀ ಬರ್ಲಿಲ್ಲ?" ಶಾರದಾ ಜಬರ್ದಸ್ತಿನಿಂದ ಕೇಳಿದ್ದಳು..

"ಸ್ವಲ್ಪ ತಡ ಆಯ್ತು.. ನಾವು ಬರೋವಷ್ಟರಲ್ಲಿ ನೀವು ಇವಳನ್ನು ಕರ್ಕೊಂಡು ಹೊರಟು ಹೋಗಿದ್ರಿ," ಅವನೂ ತಡೆದು ಹೇಳಿದ.

"ಮತ್ತೇನ್ರೀ ಮಾಡೋದು? ಎಷ್ಟೊತ್ತು ಅಂತ ಕಾಯೋದು?.. ನನಗೆ ನಿಮ್ಮ ವಿಳಾಸ ಗೊತ್ತಿಲ್ಲ. ನಿಮ್ಮ ಮಗಳು ಬಾಯನ್ನೇ ಬಿಡ್ಲಿಲ್ಲ... ನಾವು ಏನೂಂತ

ತಿಳ್ಕೊಳೋದು?.. ಇನ್ನು ಸ್ವಲ್ಪ ಹೊತ್ತು ನೋಡಿ, ನಮ್ಮ ಭಾವ ಬಂದ್ಮೇಲೆ ಪೋಲಿಸರ ಹತ್ತಿರಕ್ಕೆ ಕರ್ಕೊಂಡು ಹೋಗ್ಬೇಕಂತ ಇದ್ವಿ.. ಅಷ್ಟರಲ್ಲಿ ಈ ಪುಣ್ಯಾತ್ಮರು ಬಂದ್ರು.. ನಿಮ್ಮ ಪರಿಚಯ ಅವರಿಗಿದೆ ಅಂತ ಕಾಣುತ್ತೆ... ಸಧ್ಯ ತಾಯಿ ಮೂಕಾಂಬಿಕೆಯ ಕೃಪೆ.. ನಿಮ್ಮ ಹುಡುಗಿ ನಿಮಗೆ ಸುಲಭವಾಗಿ ಸಿಕ್ಕಿದ್ಲು.. ಅದ್ಯಾಕ್ರಿ ಅವರು ನಿಮ್ಮ ತಮ್ಮ.. ನನ್ನ ಗುರುತಿಲ್ಲ ಪರಿಚಯವಿಲ್ಲ.. ಈ ಹುಡುಗಿಯ ಜವಾಬ್ದಾ ರೀನ ನನಗೆ ವಹಿಸಿ ನಿಶ್ಚಿಂತೆಯಾಗಿ ಹೊರಟು ಹೋದ್ರು.. ಯಾರಿಗಾದ್ರರು ಜವಾಬ್ದಾರಿ ಬೆಡ್ವೇನ್ರೀ.. ಏನಾದು ಎಡವಟ್ಟಾಗಿದ್ದಿದ್ರೇ ...ಏನ್ಮಾಡ್ತಿದ್ರಿ?"

"ಥ್ಯಾಂಕ್ಸ್.. ನೀವು ಹೇಳಿದ್ರಲ್ಲ ಹಾಗೇ ತಾಯಿ ಮೂಕಾಂಬಿಕೆಯ ಕೃಪೆ.. ನಮ್ಮ ಮನೆದೇವರು ಕೊಲ್ಲೂರು ಮೂಕಾಂಬಿಕಾ .. ನಮ್ಮ ಕೈ ಬಿಡೋಲ್ಲ ಅನ್ನುವ ನಂಬಿಕೆ ನಮಗಿದೆ. ಇಲ್ದಿದ್ರೆ ನಮ್ಮ ಈ ಮುಗ್ಧ ಹುಡುಗಿಗೆ ನಿಮ್ಮಂಥೋರು ಸಿಗೋದು ಅಂದ್ರೇನು?.." ನೀವು ದೇವಿಯ ರೂಪದಲ್ಲಿ ಸಹಾಯ ಮಾಡಿರಿ."

"ಪರವಾಗಿಲ್ಲ ಬಿಡಿ.. ನಾನು ಸಾಮಾಜಿಕ ಪ್ರಜ್ಞೆ ಉಳ್ಳವಳು. ಹೇಗಾದ್ರು ಮಾಡಿ ನಿಮ್ಮ ಹುಡುಗೀನ ನಿಮ್ಮ ಮನೆಗೆ ತಲುಪಿಸ್ತಿದ್ದೆ.. ಈ ಹುಡುಗಿ ತೀರಾ ಅಷ್ಟು ಮುಗ್ಧೇನಾ? ತನ್ನ ಮನೆಯ ವಿಳಾಸ ಗೊತ್ತಿಲ್ಲದಷ್ಟು.. ಇಂಥೋಳನ್ನ ಊರಿಗೆ ಹೇಗೆ ಕಳಿಸಿದ್ರಿ.. ಅವರು ಒಬ್ಬಳನ್ನೇ ಯಾಕೆ ಕಳಿಸಿದ್ರು?.."

"ಅದೆಲ್ಲ ಒಂದು ದೊಡ್ಡ ಕಥೆ. ಈಗ ಇವಳ ಎದುರಿಗೆ ಬೇಡ. ಮತ್ತೆಂದಾದ್ರು ಬಂದು ಆಡೋಣ."

"ಇವಳ ವರ್ತನೆ, ರೂಪ, ಗುಣ ಎಲ್ಲ ನೋಡಿದ್ರೆ, ನನ್ನ ಸಹಪಾಠಿಯೊಬ್ಬಳ ನೆನಪಾಗುತ್ತೆ. ಅವಳೂ ಥೇಟ ಅವಳ ತರಹವೇ!"

"ಅವಳ ಹೆಸರು ಏನೂಂತ ಗೊತ್ತಾ? ಮೂಕಾಂಬಿಕಾ ಅಂತ.. ಹೆಸರಿಗೆ ತಕ್ಕ ಹಾಗಿದ್ದಳು."

"ಮೂಕಾಂಬಾ ನಿಮ್ಮ ಕ್ಲಾಸ್ ಮೇಟ್ ಆಗಿದ್ಲಾ?.." ಅಚ್ಚರಿಯಿಂದ ತಮ್ಮ ಕೇಳಿದ.

"ಹೂಂ. ಅವಳ ನೆನಪು ಇವತ್ತು ತುಂಬಾ ಬಂತು.. ಇವಳಂತೆಯೆ ಇದ್ಲು."

"ಹೌದು. ಶಾರಿಕಾ ಎಲ್ಲಾ ಆ ಮೂಕಾಂಬನಂತೆಯೇ.. ಅವಳು ನನ್ನ ಅಕ್ಕಾ.."

"ಆಂ! ಏನಂದ್ರೀ ಶಾರದಾ ಆಶ್ಚರ್ಯದಿಂದ ಕಣ್ಣರಳಿಸಿದಳು. ಈಗ ಅವಳು ಎಲ್ಲಿದಾಳೆ? ಅವಳಿಗೆ ನಮ್ಮೆಲ್ಲರ ನೆನಪು ಇರಲಿ, ಇಲ್ಲದಿರಲಿ.. ಈಗ ಹೇಗಿದಾಳೆ."

"ಈಗಲೂ ಆಗಿನಂತೆಯೇ ತಾನಾಯಿತು ತನ್ನ ಹಾಡಿನ ಪುಸ್ತಕವಾಯಿತು. ಅಷ್ಟನ್ನು ಬಿಟ್ಟರೆ ಬೇರೆ ಏನೂ ಇಲ್ಲ." ತಮ್ಮ ವ್ಯಥೆಯಿಂದ ಹೇಳಿದ.

"ಅಂದರೇ.. ಅವಳು ನಿಮ್ಮೊಂದಿಗೇ ಇದಾಳೆಯೇ?.."

"ಹೂಂ. ಅವಳಿಗೆ ನಮ್ಮ ತಂದೆ ಮದುವೆ ಮಾಡಲಿಲ್ಲ.. ಅವಳಿಂದ ನಮಗೆ ಯಾವ ತೊಂದರೆಯೂ ಇಲ್ಲ. ಆದರೆ ಅವಳ ಒಂಟಿತನ ಸ್ವಲ್ಪ ಮುಜುಗರವನ್ನುಂಟು ಮಾಡುತ್ತದೆ.."

"ಛೆ..ಛೆ.. ಯಾಕೆ ಹೀಗಾಯ್ತೋ?" ಲೊಚ ಗುಟ್ಟಿದಳು ಶಾರದಾ..

"ಎಲ್ಲಾ ಆ ದೇವಿಯ ಕೃಪೆ. ತನ್ನ ಭಕ್ತೆಯನ್ನು ತನ್ನಂತೆಯೇ ವಿಗ್ರಹವಾಗಿರಲಿ ಅಂತ ಆರಿಸಿಟ್ಟುಕೊಂಡಿರಬಹುದು.. ಶಾರೀ ಹುಟ್ಟಿದಾಗ, ಎಲ್ಲರೂ, ಅವಳ ಸೋದರತ್ತೆಯಂತೆಯೇ ಎಂದು ನುಡಿದಿದ್ದರು. ಹಾಗಾಗದಿರಲಿ ಎಂದು ನಾವು ಎಲ್ಲಾ ಮುನ್ನೆಚ್ಚರಿಕೆಯ ಕ್ರಮವನ್ನು ಅನುಸರಿಸುತ್ತಿದ್ದೇವೆ. ಇಷ್ಟರ ಮೇಲೆ ಆ ದೇವೇಚ್ಛೆ.."

"ಹಾಗಂದುಕೊಂಡು ಸುಮ್ಮನೇ ಕೈ ಕಟ್ಟಿಕೊಂಡು ಕೂತ್ಕೋಬೇಡಿ. ಈಗ ಕಾಲ ಬದಲಾಗಿದೆ. ಸಲಹೆ ನೀಡುವ ಡಾಕ್ಟರುಗಳಿದಾರೆ."

"ನಾವು ಯಾವ ಪ್ರಯತ್ನವನ್ನು ನಿಲ್ಲಿಸಿಲ್ಲ. ಮೇಡಂ... ನೀವು ನಮ್ಮ ಮನೆಗೊಮ್ಮೆ ಬನ್ನಿ... ನಿಮ್ಮ ಸ್ನೇಹಿತೆಯನ್ನು ನೋಡಿ ಮಾತನಾಡಿಸುವಿರಂತೆ."

"ಆಯ್ತು, ಅದ್ರೆ ಬರ್ತೀನಿ." ಶಾರದೆಯ ಮನಸ್ಸು ಕಲಕಿ ಹೋಗಿತ್ತು.. ಎಷ್ಟೋ ವರ್ಷಗಳ ನಂತರ ನೆನಪಿನ ಗಂಟು ಹೀಗೆ ಬಿಚ್ಚಿಕೊಳ್ಳುತ್ತದೆಂದು ಊಹಿಸಿರಲಿಲ್ಲ.

"ಶಾರೀ ಆಂಟಿಗೆ ಟಾ ಟಾ ಹೇಳು" ಎನ್ನುತ್ತಾ ಅವನು ಆ ಹುಡುಗಿಯ ಕೈಯನ್ನು ಹಿಡಿದುಕೊಂಡ ಆ ಹುಡುಗಿ ವಿಧೇಯತೆಯಿಂದ ಬಲಗೈ ಆಡಿಸಿತು. ಮುಖದಲ್ಲಿ ಸ್ವಲ್ಪ ಮಟ್ಟಿಗೆ ಧೈರ್ಯದ ಕಳೆ ಏರಿತ್ತು.

"ಮತ್ತೊಮ್ಮೆ ಕರ್ಕೊಂಡ್ಬನ್ನಿ." ಎನ್ನುತ್ತಾ ಶಾರಿಕಾಳ ದುಂಡುಕೆನ್ನೆಗಳ ಮೇಲೆ ಬೆರಳನ್ನಾಡಿಸಿದಳು. ಅವಳು ಹಿಂದಕ್ಕೆ ಸರಿದಿದ್ದಳು. ಇವಳಿಗೆ ಮುಗುಳ್ನಗೆ ಕಂಡಿತು. "ಎಷ್ಟೋ ಬಾರಿ ಈ ಊರಿಗೆ ಪ್ರಯಾಣ ಮಾಡಿದೀವಿ. ಆದರೆ ಈ ಅನುಭವ ಎಂದೆಂದಿಗೂ ನೆನಪಿನಲ್ಲಿರುವಂಥದ್ದು" ಎಂದಿದ್ದಳು ಅವರ ಕಡೆ ತಿರುಗಿ.

"ನಿಮ್ಮಂಥೋರು ಇರುವುದರಿಂದಲೇ.. ಜನರಲ್ಲಿ ಇನ್ನು ವಿಶ್ವಾಸ ನಂಬಿಕೆಗಳು ಇರುವುದು" ಎಂದಿದ್ದ ಶಾರಿಕಾಳ ಚಿಕ್ಕಪ್ಪ..

"ನಿಮ್ಮ ವಿಶ್ವಾಸಕ್ಕೆ ಥ್ಯಾಂಕ್ಸ್. ಆದರೆ ಕಾಲ ಬದಲಾಗಿದೆ ರೀ ... ಈಗ ಆ ಮೂಕಾಂಬಿಕಳ ಕಾಲವಲ್ಲ; ಈ ಶರಿಕಾಳ ಕಾಲ.. ಎಷ್ಟೇ ಎಚ್ಚರಿಕೆಯಿಂದ ಇದ್ದರೂ ಸಾಲದು. ಅವಳಂತೆ ಇವಳು ಎಲ್ಲರೊಡನೆ ಇದ್ದೂ ಏಕಾಂಗಿಯಂತೆ ಆಗದಿರಲಿ.. ಮನೆಮಂದಿಯೊಡನೆ ಬೆರೆಯಲಿ. ಸ್ನೇಹಿತೆಯರೊಂದಿಗೆ ಸೇರಲಿ. ಈ ಮುಗ್ಧೆಯ ಬಾಳು ಹಸನಾಗಲಿ.." ಎಂದು ಹಾರೈಸಿದಳು ಶಾರದಾ. ಶಾರಿಕಾ ಅಪ್ಪನ ಕೈ ಹಿಡಿದು ಮೌನದಿಂದ ಹೆಜ್ಜೆಯನ್ನು ಹಾಕಿದಳು.. ಹಿಂತಿರುಗಿ ನೋಡಿರಲಿಲ್ಲ.. ಬೆನ್ನ ತುಂಬಾ ಹರಡಿದ್ದ ಗುಂಗುರು ಕೂದಲಿನ ಸುರುಳಿಗಳ ವೃತ್ತದೊಳಗೆ ಅಡಗಿರುವ ಭವಿಷ್ಯವವೇನು ಎಂದು ಮನ ಚಿಂತಿಸುತ್ತಿತ್ತು.

* * *

೫. ಹೇಡಿ

ರಸ್ತೆಯ ತಿರುವಿನಲ್ಲೇ, ಆ ಮನೆಯ ಮುಂದೆ ನಿಂತಿದ್ದ ಜನರ ಗುಂಪನ್ನು ಕಂಡು, ಏನೋ ಅನಾಹುತ ನಡೆದಿದೆ ಅಂದು ಭಾವಿಸಿದ ಶೇಖರ ಪರಿಚಯದ ಜಾಗ, ಪರಿಚಯದ ಮನೆ, ಆದರೂ ಅವನನ್ನು ಯಾರೂ ಗುರುತಿಸಿದಂತೆ ಕಾಣಲಿಲ್ಲ. ಅನುಮಾನಿಸುತ್ತಾ ಮನೆಯ ಬಾಗಿಲನ್ನು ಸಮೀಪಿಸಿದ. ಬಾಗಿಲ ಬಳಿ ನಿಂತಿದ್ದ ಸುಬ್ಬ ಅವನನ್ನು ಕಂಡು ಕೆಕ್ಕರಿಸಿ ನೋಡಿ, "ಯಾಕೋ? ನೀನ್ಯಾಕೆ ಬಂದ್ಯೋ...?" ಎಂದು ಅಬ್ಬರಿಸಿ, ಅವನ ಷರಟಿನ ಕಾಲರಿಗೆ ಕೈ ಹಾಕಿದ. ಶೇಖರ ಸುಬ್ಬನ ಕೈ ಕೊಡವಿದ.

"ಏನಾಯ್ತು?... ಯಾರು...?" ಸಹನೆಯಿಂದ ಪ್ರಶ್ನಿಸಿದ.

"ನಿನಗ್ಯಾಕೆ ಅದೆಲ್ಲಾ? ಹೊರಟು ಹೋಗು ಇಲ್ಲಿಂದ ..." ಮತ್ತೆ ಸುಬ್ಬ ಅಬ್ಬರಿಸಿದ.

"ಹೋಗ್ತೀನಿ ಯಾರಿಗೆ ಏನಾಯ್ತು ಅಂತ ಹೇಳಿ ಬಿಡು..."

ಶಂಕರ ಗೋಗರೆದ. ಸುಬ್ಬ ನುಡಿಯಲಿಲ್ಲ. ಅವನ ಪಕ್ಕದಲ್ಲಿ ನಿಂತಿದ್ದ ಅವನ ಪತ್ನಿ ಸಾವಿತ್ರಿ ಅಳುತ್ತಾ ನುಡಿದಳು.

"ಲಲಿತಾ.... ಲಲಿತಾ ನೆನ್ನೆ ರಾತ್ರಿ ಹೋಗಿ ಬಿಟ್ಟಳು."

"ಲಲಿತಾನಾ.. ಓ.. ದೇವರೇ..." ಶೇಖರ ನಂಬದವನಂತೆ ಗೋಡೆಗೆ ಆತುಕೊಂಡ.

"ಹುಂ ಲಲಿತಾನೇ ಗೋತ್ತಾಯ್ತಲ್ಲ.. ಇನ್ನು ಹೋಗು ಸುಮ್ಮನೇ" ಸುಬ್ಬ ಮತ್ತೆ ಹೇಳಿದಾಗ ಅವನ ಪತ್ನಿ ಅವನನ್ನು ತಡೆದಳು.

"ಇಲ್ಲಿ ಇವತ್ತು ಬಂದವರು ಯಾರೂ ಇರುಲ್ಲ. ಎಲ್ಲರೂ ಅವರವರ ಮನೆಗೆ ಹೋಗ್ತಾರೆ. ನೀವು ಸುಮ್ಮನಿರಬಾರದಾ?"

"ನೀನು ಸುಮ್ಮನಿರು.. ಇವನಿಗೆ ಇಲ್ಲಿಗೆ ಬರೋಕೆ ಹೇಳಿ ಕಳಿಸಿದೋರು ಯಾರು? ಏನು ಸಂಬಂಧ ಅಂತ ಇಲ್ಲಿ ಬಂದಿದಾನೆ ಕೇಳು?"

"ಶಂಕರ ನಿಮ್ಮ ಸೋದರತ್ತೆಯ ಮಗ... ಯಾರು ಹೇಳಿ ಕಳಿಸದಿದ್ದರೂ, ಆ ಅನುಬಂಧ ಅವನನ್ನು ಇಲ್ಲಿಗೆ ಬರುವಂತೆ ಮಾಡಿದೆ. ಮುಖ ನೋಡಿ ಹೊರಟು ಹೋಗ್ತಾನೆ. ಇವತ್ತು ನೀವೇಕೆ ಹೀಗೆಲ್ಲಾ ಮಾತಾಡ್ತೀರೋ ನಂಗಂತೂ ಅರ್ಥವಾಗುಲ್ಲ. ನ್ಯಾಯವಾಗಿ ನಾವೇ ಹೇಳಿ ಕಳಿಸಬೇಕಾಗಿತ್ತು..."

"ಏನು ಸಂಬಂಧ ಉಳಿದಿದೆ ಅಂತ ಹೇಳಿ ಕಳಿಸಬೇಕು ಈ ಸ್ಕೌಂಡ್ರಲ್ ಗೆ..." ಸುಬ್ಬ ಹಲ್ಲು ಕಡಿದಾಗ, ಶೇಖರ ಪೆಚ್ಚಾದ.

ಹೊರ ಬಂದು ಜಗುಲಿಯ ಮೇಲೆ ಕುಳಿತ. ಏನೋ ವೇದನೆಯಿಂದ ಮೈಯನ್ನೆಲ್ಲಾ ಹಿಂಡಿದಂತಾಗುತ್ತಿತ್ತು.

"ಎ.. ಎಂಥಾ ಕೆಲಸವಾಗಿ ಹೋಯ್ತಲ್ಲ ಇನ್ನೊಂದೆರಡು ದಿನ ಮುಂಚಿತವಾಗಿ ಬಂದಿದ್ದರೆ, ಲಲಿತಳ ಹತ್ತಿರ ಮಾತನ್ನಾದರೂ ಆಡಬಹುದಾಗಿತ್ತು.... ಈಗ ಏನೂ ಉಳಿದಿಲ್ಲ. ಕಡೇ ಬಾರಿ ಮುಖ ದರ್ಶನವಾದರೂ ಆಗುತ್ತೋ ಇಲ್ಲವೋ... ನಿರ್ಜೀವ ದೇಹದ ಬಳಿ ಕುಳಿತು ಮನದಲ್ಲೇ ನಾಲ್ಕಾರು ಮಾತುಗಳನ್ನು ಆಡುವಂತಿದ್ದರೇ.."

"ಶೇಖರ ಅಲ್ವೇನೋ..? ಯಾವಾಗ ಬಂದೆ?" ಎನ್ನೋ ಧ್ವನಿ ಕೇಳಿ ಕತ್ತೆತ್ತಿ ನೋಡಿದ. ಎದುರಿಗೆ ನಾಗ ನಿಂತಿದ್ದ.

"ಈಗ ಸ್ವಲ್ಪ ಹೊತ್ತಾಯ್ತು?"

"ನಿನಗೆ ಹೇಗೆ ಗೋತ್ತಾಯ್ತು? ಹೇಳಿ ಕಳಿಸಿದ್ರಾ? ಟೆಲಿಗ್ರಾಂ ಕೊಟ್ಟಿದ್ರಾ?"

"ಏನೂ ಇಲ್ಲ...."ಎನ್ನುತ್ತಾ ತಲೆ ಆಡಿಸಿದ.

"ಮತ್ತೆ? ಅದ್ಹೇಗೆ ಸಮಯಕ್ಕೆ ಸರಿಯಾಗಿ ಬಂದೆ?"

"ನಾನು ಲಲಿತನ್ನ ಕಂಡು ಮಾತನಾಡಿಸಿ ಹೋಗೋಣ ಅಂತ ಬಂದೆ... ಆದರೆ..."

"ಲಲಿತಂಗೆ ಹುಶಾರಿರಲಿಲ್ಲ ಅಂತ ನಿನಗೆ ತಿಳಿದಿತ್ತಾ?"

"ಇಲ್ಲ.. ತಿಳಿದಿರಲಿಲ್ಲ. ಏನಾಗಿತ್ತು ಅವಳಿಗೆ?"

"ಆಸ್ತಮಾ.. ನರಳ್ತಾನೇ ಇದ್ಲು. ಸಧ್ಯ ಅವಳ ನರಳಿಕೆಗೆ ದೇವರೇ ಮುಕ್ತಿ ಕೊಟ್ಟ. ಪಾಪ... ಒಂದು ದಿನವೂ ಹಾಯಗಿರಲಿಲ್ಲ" ಎನ್ನುತ್ತಾ ಶೇಖರನನ್ನೇ ದಿಟ್ಟಿಸಿದ ಶೇಖರ ತಪ್ಪಿತಸ್ಥನಂತೆ ಕತ್ತು ಬಗ್ಗಿಸಿದ.

"ಇರ್ತೀಯೋ, ಹೋಗ್ತೀಯೊ..?" ಮತ್ತೆ ಪ್ರಶ್ನಿಸಿದ.

"ಮುಖ ನೋಡಿ ಹೋಗ್ತೀನಿ. ನನಗಿನ್ನೇನು ಕೆಲಸ ಇಲ್ಲಿ?"

"ಬಾ ಮತ್ತೆ ಇಲ್ಯಾಕೆ ಕೂತಿದೀಯ?" ಒಳಗೆ ಹೋಗು

"ಬೇಡ ನಾಗ ಮನೆಯೋರು ನನ್ನನ್ನು ಒಳಕ್ಕೆ ಸೇರಿಸಲ್ಲ. ಹೇಗೂ ಹೊರಕ್ಕೆ ತರ್ತಾರಲ್ಲ. ಆಗ ನೋಡ್ತೀನಿ."

"ಸರಿ ಹಾಗೇ ಮಾಡು.. ಎನ್ನುತ್ತಾ ನಾಗ ಒಳಕ್ಕೆ ಹೊರಟು ಹೋಗಿದ್ದ."

ಮತ್ತೆ ಯಾರಾದರೂ ಗುರುತು ಹಿಡಿದು ಮಾತನಾಡುವ ಮೊದಲು ಇಲ್ಲಿಂದ ಹೊರಟು ಹೋದರೆ ಸಾಕು ಅಂತೆನ್ನಿಸಿತ್ತು. ತಲೆ ತಗ್ಗಿಸಿ ಕೂತವನನ್ನು ಮತ್ತೆ ನಾಗ ಬಂದು ಕರೆದ.

"ಒಳಗೆ ಬಾ ಶೇಖರ.. ಏನೋ ಶಾಸ್ತ್ರ ಅಂತೆ. ಹೇಗೂ ನೀನು ಬಂದಿದೀಯಲ್ಲ.. ಎಲ್ಲಾ ಬೇಗ ಬೇಗ ಮುಗಿದರೆ ಒಳ್ಳೆಯದಲ್ವಾ?"

"ನಾನಾ? ಏನಂತೆ?"

"ಲಲಿತಂಗೆ ಮದುವೆ ಆಗಿತ್ತಾ? ವಿಧವೇನೋ, ಮುತ್ತೈದೇನೋ ಅಂತ ಶಾಸ್ತ್ರಿಗಳು ಕೇಳಿದ್ರಂತೆ...... ಮುತ್ತೈದೆ ಅಂತ ಹೇಳಿದ್ರು.. ಅದಕ್ಕೆ.."

"ನಾನು ಬರುಲ್ಲ ನಾಗ, ಆ ಸಂಬಂಧವೇ ಕಡಿದು ಹೋಗಿದೆಯಲ್ಲ. ಈಗ ನಾನು ಅವಳ ಗಂಡ ಅಲ್ಲ..."

"ಹಾಗಂದ್ರೆ ಹೇಗೆ..? ಅದನ್ನೆಲ್ಲ ಆ ಮೇಲೆ ನಿಧಾನವಾಗಿ ಯೋಚಿಸಿದರಾಯ್ತು.. ಸುಮ್ಮನೇ ಹೊತ್ತಾಗುತ್ತೆ. ನೆನ್ನೆ ರಾತ್ರಿಯಿಂದ ಮನೆಯವರೆಲ್ಲಾ ಉಪವಾಸವಿದಾರೆ..." ಎನ್ನುತ್ತಾ ಶೇಖರನ ಕೈ ಹಿಡಿದು ಎಬ್ಬಿಸಿದ.

ಶೇಖರ ಜರ್ಝರಿತಗೊಂಡವನಂತೆ, ಕಾಲೆಳೆದು ಹಾಕುತ್ತಾ ಲಲಿತಳ ಶರೀರವನ್ನು ಮಲಗಿಸಿದ್ದೆಡೆಗೆ ನಡೆದ. ಎಲ್ಲರೂ ಅವನನ್ನೇ ನೋಡುತ್ತಿರುವಂತೆ ಭಾಸವಾಗುತ್ತಿತ್ತು, ನೆಲ ಬಾಯಿಬಿಟ್ಟು ತನ್ನನ್ನು ಒಳಕ್ಕೆ ಎಳೆದುಕೊಳ್ಳಬಾರದೆ ಅಂತನ್ನಿಸುತ್ತಿತ್ತು, ಅವನಿಗೆ.

"ಒಳ್ಳೇ ಹೇಳಿಕಳಿಸ್ದೋರಿಗಿಂತ ಹೆಚ್ಚಾಗಿ ಬಂದು ಬಿಟ್ಟ..." ಇವಳ ಆಸ್ತಿ ಸಿಗುತ್ತೇಂತ ತಿಳಿದುಕೊಂಡಿದಾನಾ ಹಲ್ಕಾ?" ಸುಬ್ಬ ಗುಣುಗುಟ್ಟುತ್ತಾ ನುಡಿದಾಗ, ಶೇಖರನ ಕಾಲುಗಳು ಜಡಗಟ್ಟಿದಂತಾಯಿತು.

ಲಲಿತಳ ಶರೀರದ ಬಳಿ ಕೂತಿದ್ದ ನಂಜಮ್ಮ ಅವನನ್ನು ಕಂಡು ಮತ್ತೇ ಅಳ ತೊಡಗಿದಳು.

"ಈಗೇನು ಉಳಿದಿದೆ ಅಂತ ಬಂದ್ಯೋ ಶೇಖರಾ... ನಿನಗಾಗಿ ಕೊರಗಿ ಸತ್ತ ಳಲ್ಲೋ... ನನ್ನ ಮಗಳು.."

"ಅಮ್ಮಾ... ನೀವು ಸ್ವಲ್ಪ ಸಮಾಧಾನ ಮಾಡಿಕೊಳ್ಳಿ.. ನಿಮ್ಮ ಮಗಳು ಮುತ್ತೈದೆಯಾಗಿ ಸತ್ತಿದಾಳೆ.. ಇದಕ್ಕಿಂತ ಪುಣ್ಯ ಬೇಕಾ?.. ನೀವೇ ಹೇಳಿ.. ಗಂಡ ತಾನೇ ಮುಂದಾಗಿ ನಿಂತು ತನ್ನ ಹೆಂಡತಿಯನ್ನು ತನಗಿಂತ ಮುಂಚೆ ಕಳಿಸಿಕೊಡ ಬೇಕು.. ಅದೇ ನ್ಯಾಯ. ಇಲ್ಲದಿದ್ದರೆ ಹಿಂದೆ ಉಳಿಯುವ ಹೆಂಗಸರ ಪಾಡು... ನರಕಕ್ಕೆ ಸಮಾನ.." ಅಲ್ಲಿ ನೆರೆದಿದ್ದ ವ್ಯಕ್ತಿಯೊಬ್ಬರು ಹಿತವಚನವೆನ್ನುವಂತೆ ನುಡಿದಾಗ, ಯಾರಿಗೂ ಆ ಮಾತು ಸಮಂಜಸವೆನಿಸಲಿಲ್ಲ. ಅವರವರ ದುಃಖ ಅವರಿಗೆ.

ಶಾಸ್ತ್ರಿಗಳು ಹೇಳಿದಂತೆ, ಶೇಖರ, ಲಲಿತಳ ಹಣೆಗೆ ಕುಂಕುಮವನ್ನಿಟ್ಟ..ಕೆನ್ನೆಗೆ ಅರಿಶಿನ ಬಳಿದ.. ಹೆರಳಿಗೆ ಹೂ ಮುಡಿಸಿದ.. ಹತ್ತಿರದಿಂದ ಪತ್ನಿಯನ್ನು ಕಡೆಯದಾಗಿ ನೋಡುವ ಸೌಭಾಗ್ಯ ಸಿಕ್ಕಿತ್ತು... ನೋಡಿಯೇ ನೋಡಿದ.. ಆದರೆ ಅಗಿನ ಚಿನಾರಿ ಲಲಿತಾ ಎಲ್ಲಿ? ಈಗಿನ ಸೊರಗಿ ಹೋದ ಲಲಿತಾ ಎಲ್ಲಿ? "ಇದಕ್ಕೆ ತಾನು ಕಾರಣನೇ.. ಅಥವಾ ಅವಳಿಗಂಟಿಕೊಂಡಿದ್ದ ಖಾಯಿಲೆ ಕಾರಣವೇ...?"

ತಾನು ಅವಳನ್ನು ಬಯಸಿದೆ, ಮದುವೆಯಾದೆ. ಆದರೆ ಅವಳನ್ನು ಜೀವನ ಪರ್ಯಂತ ತನ್ನ ಸಂಗಾತಿಯನ್ನಾಗಿ ಮಾಡಿಕೊಳ್ಳುವುದು ಮಾತ್ರ ತನ್ನಿಂದಾಗಲಿಲ್ಲ.. ಕಣ್ಣೀರು ಧಾರಾಕಾರವಾಗಿ ಹರಿಯಿತು.

"ಏಯ್.. ಆಷಾಢಭೂತಿ ಎದ್ದೇಳು ಸಾಕು... ನಿನಗೋಸ್ಕರ ಅವಳು ಕಣ್ಣೀರು ಸುರಿಸೀ ಸುರಿಸೀ.. ಈಗ ಹಾಯಾಗಿ ಮಲಗಿದ್ದಾಳೆ. ಈಗ ನೀನು ಮೊಸಳೆ ಕಣ್ಣೀರನ್ನು ಸುರಿಸಿ, ನಮ್ಮನ್ನೆಲ್ಲ ಕೆರಳಿಸಬೇಡ.. " ಸುಬ್ಬ ಕರ್ಕಶವಾದ ಧ್ವನಿಯಲ್ಲಿ ನುಡಿದಾಗ ಶೇಖರ ಎದ್ದು ನಿಂತ.

ಹೇಗೂ ತಾನು ಬಂದುದಾಗಿದೆ. ಅಂತಿಮ ಕ್ರಿಯೆಗಳನ್ನು ತಾನೇ ಮಾಡಬೇಕೆಂದು ಕೊಂಡ ಶೇಖರ. ಆದರೆ ಸುಬ್ಬ ಬಿಡಲಿಲ್ಲ. ನನ್ನ ತಂಗಿಯ ದೇಹಕ್ಕೆ ಕೊಳ್ಳಿ ಇಡುವ ಅಧಿಕಾರ ನಿನಗಿಲ್ಲವೇ ಇಲ್ಲ.. ಹೊರಟು ಹೋಗು ಎಂದು ದಬಾಯಿಸಿದ.

ಮತ್ತೊಮ್ಮೆ ಶೇಖರ ಲಲಿತಳ ಮುಖವನ್ನು ದೀರ್ಘವಾಗಿ ನೋಡಿ, ಕೈ ಮುಗಿದು ಅಲ್ಲಿಂದ ಹೊರಬಿದ್ದ. ಸೀದಾ, ಸಮೀಪದಲ್ಲಿದ್ದ ತನಗೆ ಒಂದು ಕಾಲದಲ್ಲಿ ಪ್ರಿಯವಾಗಿದ್ದ ಗುಡ್ಡವನ್ನೇರಿ, ಒಂದು ಮರದ ಕೆಳಗೆ ಕುಳಿತ. ಮೇಲೆ ಬೀಳುತ್ತಿದ್ದ ಬಿಸಿಲು, ಬೀಸುತ್ತಿದ್ದ ಬಿಸಿಗಾಳಿ ಯಾವುದು ಅವನ ಗಮನಕ್ಕೆ ಬರುತ್ತಿರಲಿಲ್ಲ.

ಆಗಾಗ್ಗೆ ನಿಟ್ಟುಸಿರಿನೊಂದಿಗೆ ಬಿಡುತ್ತಿದ್ದ ಬಿಸಿಗಾಳಿ ಅವನ ಮುಖಕ್ಕೆ ತಗುಲಿ ಶಾಖವನ್ನುಂಟು ಮಾಡುತ್ತಿತ್ತು. ಮೈಯೆಲ್ಲಾ ತಾಪಗೊಳ್ಳುತ್ತಿರುವಂತೆ ಅನ್ನಿಸುತ್ತಿತ್ತು. ಪ್ರಶಾಂತವಾಗಿ ಮಲಗಿರುವ ಲಲಿತಳ ದೇಹಕ್ಕೆ ಇನ್ನು ಕೆಲವೇ ಸಮಯದಲ್ಲಿ ಬೆಂಕಿಯನ್ನು ತಗುಲಿಸುತ್ತಾರೆ. ಬೆಂಕಿಯ ಜ್ವಾಲೆಯೊಳಗೆ ಉರಿದು ಕರಕಾಗುವ ಆ ದೇಹ.. ಆ ಬೇಗೆಯನ್ನು ಹೇಗೆ ಸಹಿಸುತ್ತದೆಯೋ..? ಎಂತಹ ಸುಕೋಮಲವಾದ ಶರೀರ ಲಲಿತಳದು..! ತಾನೇ ಬೆಂಕಿಯಲ್ಲಿ ಬಿದ್ದವನಂತೆ ಚಡಪಡಿಸಿದ..

ಹಿಂದೊಮ್ಮೆ ಲಲಿತಳ ಸುಕೋಮಲ ಶರೀರ ಇವನದಾಗಿತ್ತು. ಇವನ ಬಾಹು ಬಂಧನದಲ್ಲಿ ನಲುಗಿದವಳು ಬೇಡಿಕೊಂಡಿದ್ದಳು..

"ನನ್ನನ್ನು ಬಿಟ್ಟು ಬಿಡು ಶೇಖರಾ.. ನಾನು ಈ ಹಿಂಸೆಯನ್ನು ತಾಳಲಾರೆ... ದಯವಿಟ್ಟು ನನ್ನನ್ನು ಬಿಡು."

"ಏಯ್ ಹುಚ್ಚಿ.. ಇದನ್ನು ಹಿಂಸೆ ಅಂತೀಯ.. ಇದು ಸುಖ."

"ಥೂ ಬಿಡಪ್ಪಾ... ನನಗಿಂತಹ ಸುಖ ಬೇಡವೇ ಬೇಡ.."

"ನಿನ್ನನ್ನು ಜಾತ್ರೆಗೆ ಕರೆದುಕೊಂಡು ಹೋಗಿ ಬಳೆ, ರಿಬ್ಬನ್ನು, ಬೆಂಡು ಬತ್ತಾಸು.. ಎಲ್ಲಾ ಕೊಡಿಸ್ತೀನಿ... ನಿನಗೆ ಬೇಕೋ ಬೇಡವೋ..?"

ಬೆಂಡು ಬತ್ತಾಸಿನ ಆಸೆ ಅಲ್ಲದಿದ್ದರೂ, ಜಾತ್ರೆಯಲ್ಲಿ ತಿರುಗಾಡುವ ಆಸೆಯಿಂದ, ಲಲಿತ ಅವನ ಆಸೆಗೆ ಬಲಿಯಾಗಿದ್ದಳು. ಭತ್ತದ ಮೂಟೆಗಳನ್ನು ಪೇರಿಸಿದ್ದ ಉಗ್ರಾಣದಲ್ಲಿ ನಡೆಯುವ ಈ ಚೆಲ್ಲಾಟ ಯಾರ ಗಮನಕ್ಕೂ ಬಂದಿರಲಿಲ್ಲ.

"ನೀನು ಎಷ್ಟು ಚೆನ್ನಾಗಿದೀಯ ಲಲಿತಾ.. ನಿನ್ನನ್ನು ಬಿಡೋಕೆ ಮನಸ್ಸಾಗುಲ್ಲ.. ಹೀಗೇ ಸದಾ ಇರಬೇಕು ಅಂತ ಅನ್ನಿಸುತ್ತೆ ನನಗೆ."

"ಥೂ ನನಗೆ ಅಸಹ್ಯವಾಗುತ್ತೆ.. ನಾನು ಹೋಗ್ತಿನಪ್ಪಾ.."

"ನಾಳೆ ನಿನ್ನ ಮದುವೆಯಾದ ಮೇಲೆ, ಹಗಲೂ ರಾತ್ರಿ ನಿನ್ನ ಗಂಡ ಹೀಗೇ ಸತಾಯಿಸಿದ್ರೆ ಏನು ಮಾಡ್ತೀಯ?" ನಗುತ್ತಾ ಪ್ರಶ್ನಿಸಿದ್ದ.

"ನಾನು ಮದುವೇನೇ ಮಾಡಿಕೊಳ್ಳಲ್ಲ. ಹೀಗೇ ಇದ್ದು ಬಿಡ್ತೀನಿ."

"ನನ್ನನ್ನು ಮದುವೆಯಾಗೊಲ್ವಾ?"

"ನೀನು ಹೀಗೆಲ್ಲಾ ಗೋಳು ಹುಯ್ದುಕೊಳ್ಳಲ್ಲ ಅಂತ ಭಾಷೆ ಕೊಟ್ಟರೆ ಮದುವೆ ಮಾಡಿ ಕೊಳ್ತೀನಿ.."

"ಹೋಗೇ ಹೋಗೇ.. ಇದಕ್ಕೆಲ್ಲ ಭಾಷೆ, ಆಣೆ.. ಎಲ್ಲಾ ಯಾಕೆ? ಗಂಡಸು ಮದುವೆ ಮಾಡಿಕೊಳ್ಳೋದೇ ಈ ಸುಖಕ್ಕಾಗಿ.."

"ಥೂ ಇದನ್ನು ಸುಖ ಅಂತ ಅಂತೀಯ? ಹಾಗಾದ್ರೆ ನಾನು ಮದುವೇನೇ ಅಗುಲ್ಲ..."

"ಹಾಗಾದ್ರೆ ನಾನು ಕರೆದಾಗೆಲ್ಲ ಮತ್ತೆ ಬರ್ತೀಯಲ್ಲ.."

"ನನಗೆ ನಿನ್ನನ್ನ ಕಂಡರೆ ಇಷ್ಟ ಶೇಖರ.. ನೀನು ನನ್ನ ಹೋಂವರ್ಕ್ ಮಾಡಿ ಕೊಡ್ತೀಯ.. ಪಾಠ ಹೇಳಿ ಕೊಡ್ತೀಯ.. ನನಗೆ ಮಾವಿನಕಾಯಿ, ಸೀಬೆಹಣ್ಣು ಎಲ್ಲಾ ತಂದು ಕೊಡ್ತೀಯ.. ಜಾತ್ರೇಲಿ ನಿನ್ನ ಕೈ ಕೈ ಹಿಡಿದು ಓಡಾಡುತ್ತಿದ್ದರೆ ಎಷ್ಟು ಚೆನ್ನಾಗಿರುತ್ತೆ ಗೊತ್ತಾ?.. ಅದಕ್ಕೇ ನೀನು ಹೇಳಿದ ಹಾಗೆ ಕೇಳಿ ಬಿಡ್ತೀನಿ.. ಇಲ್ಲದಿದ್ದರೆ ಅದೆಲ್ಲ ತಪ್ಪಿ ಹೋಗುತ್ತಲ್ವಾ?"

"ಹಾಗಾದರೆ, ಆ ಆನಂದ ಎಲ್ಲಾ ನಿನಗಿರಲಿ, ಈ ಸುಖವೆಲ್ಲಾ ನನಗಿರಲಿ ಎನ್ನುತ್ತಾ ಅವಳನ್ನು ತಬ್ಬಿಕೊಂಡಿದ್ದ."

ಶೇಖರ, ಲಲಿತಳ ಸೋದರತ್ತೆಯ ಮಗ. ಪಕ್ಕದ ಊರಿನವನು. ಇವಳಿಗಿಂತ ಹತ್ತು ವರ್ಷಕ್ಕೆ ದೊಡ್ಡವನು. ಸೋದರ ಮಾವನ ಮನೆಗೆ ಆಗಾಗ್ಗೆ ಬರುತ್ತಿದ್ದ. ಲಲಿತಳ ಅಕ್ಕಂದಿರು ಇವನೊಡನೆ ಹೆಚ್ಚಿಗೆ ಬೆರೆಯುತ್ತಿರಲಿಲ್ಲ. ಮನೆ ಕೆಲಸ ಕಾರ್ಯಗಳಲ್ಲಿ

ತೊಡಗಿರುತ್ತಿದ್ದರು. ಚಿಕ್ಕ ವಯಸ್ಸಿನ ಲಲಿತ ಇವನ ಹಾಸ್ಯ ಕುಚೋದ್ಯದ ಮಾತುಗಳಿಗೆ ಮರುಳಾಗಿ ಇವನ ಹಿಂದೆ ಮುಂದೆ ಸುತ್ತುತ್ತಿದ್ದಳು. ಬಿ.ಎಸ್ಸಿ. ಪದವಿಗಳಿಸಿದರೂ, ಕೆಲಸವಿಲ್ಲದೇ ಉಂಡಾಂಡಿಯಾಗಿ ತಿರುಗಾಡಿಕೊಂಡಿದ್ದ ಶೇಖರ, ಸೋದರಮಾವನ ಮನೆಗೆ ಪದೇ ಪದೇ ಬರತೊಡಗಿದರೂ ಯಾರಿಗೂ ಅನುಮಾನ ಬಂದಿರಲಿಲ್ಲ.

ಸುಬ್ಬ ತನ್ನ ತಂಗಿಯರಿಗೆ ಮದುವೆಯಾಗದ ಹೊರತು ತಾನು ಮದುವೆ ಯಾಗುವುದಿಲ್ಲವೆಂದು ಹೇಳಿ ಬಿಟ್ಟಿದ್ದ. ಲಲಿತಳ ಹಿರಿಯಕ್ಕನಿಗೆ ಮದುವೆ ಗೊತ್ತಾಯಿತು. ಆಗ ಮಾವ ಶೇಖರನನ್ನು ಕರೆದು ಕೇಳಿದ್ದರು.

"ಶೇಖರಾ, ನಮ್ಮ ಅನುಸೂಯನ್ನ ನೋಡಿದೀಯಲ್ಲ ಹೇಗಿದಾಳೆ?"

"ಚೆನ್ನಾಗಿದಾಳೆ....."

"ಅವಳನ್ನು ಮದುವೆಯಾಗ್ತೀಯೇನೋ ನಿಮ್ಮಮ್ಮನ ಹತ್ತಿರ ಮಾತನ್ನಾಡ್ಲಾ...?"

"ಬೇಡ.. ಮಾವ.." ತೊದಲಿದ್ದ.

"ಯಾಕೋ.. ಈಗ್ತಾನೇ ಚೆನ್ನಾಗಿದಾಳೆ ಅಂತಂದೆ.."

"ಅವಳನ್ನು ನಾನು ಆ ದೃಷ್ಟಿಯಿಂದ ನೋಡಿಲ್ಲ ಮಾವ.." ಎನ್ನುತ್ತಾ ಮೆಲ್ಲನೆ ಅಲ್ಲಿಂದ ಸರಿದಿದ್ದ. ಆನಂತರ ಸೋದರ ಮಾವನ ಮನೆಗೆ ಬರುವುದನ್ನು ನಿಲ್ಲಿಸಿದ್ದ. ಬೆಂಗಳೂರಿಗೆ ಹೋಗಿ ಯಾವುದೋ ಒಂದು ಸಣ್ಣ ಕೆಲಸಕ್ಕೆ ಸೇರಿಕೊಂಡು ಬಿಟ್ಟವನು, ಇತ್ಲಾಗೆ ಸುಳಿದಿರಲಿಲ್ಲ.

ಮನೇಲಿ ಮದುವೆ ಕೆಲಸ ಬೇಕಾದಷ್ಟಿದೆ. ಈಗ ಶೇಖರ ಇಲ್ಲೇ ಇದ್ದಿದ್ದರೆ ಎಷ್ಟೋ ಸಹಾಯವಾಗುತ್ತಿತ್ತು. ಅಣ್ಣ ಎಷ್ಟೋ ಬಾರಿ ಹೇಳಿದಾಗ, ತಂಗಿ ನಿಟ್ಟುಸಿರು ಗರಿದಿದ್ದಳು.

" ಓದು ಮುಗಿಸಿ ಎಷ್ಟೋ ವರ್ಷಗಳಾಗಿತ್ತು. ಕೆಲಸವಿಲ್ಲದೇ ತಿರುಗಾಡಿಕೊಂಡಿದ್ದ. ಈಗಲೇ ಕೆಲಸ ಸಿಗಬೇಕೇ? ಎಷ್ಟು ಬೇಡ ಅಂದೆ.. ಆದರೂ ಹೊರಟೇ ಹೋದ.."

"ನನಗೆ ಏನೋ ಅನುಮಾನ ಲಚ್ಚೂ.. ಅನುಸೂಯನ್ನ ಮದುವೆ ಆಗ್ತೀಯಾ ಅಂತ ಕೇಳಿದೆ.. ಅದಕ್ಕೆ ನಮ್ಮ ಮನೆಗೆ ಬರೋದನ್ನೇ ನಿಲ್ಲಿಸಿ ಬಿಟ್ಟ ನೋಡು.."

"ಹೌದಾ?.. ಈ ಮಾತನ್ನು ನೀನೇಕೆ ಮೊದಲೇ ಹೇಳಲಿಲ್ಲ? ನಿನಗೂ ಐದು ಜನ ಹೆಣ್ಣು ಮಕ್ಕಳು. ಒಬ್ಬರನ್ನಾದರೂ ನನ್ನ ಸೊಸೆಯನ್ನಾಗಿ ಮಾಡಿಕೊಳ್ತಿದ್ದೆ.. ಅದರಲ್ಲೇನು? ನಾನು ಅವನನ್ನು ಈ ತಕ್ಷಣ ಬಾ ಅಂತ ಟೆಲಿಗ್ರಾಂ ಕೊಟ್ಟು ಕರಿಸ್ತೀನಿ.."

"ಬೇಡ ಲಚ್ಚೂ.. ಅವನಿಗಿಷ್ಟ ಇಲ್ಲ ಅಂತ ಕಾಣುತ್ತೆ. ಇಲ್ಲದಿದ್ದರೆ ಹೇಳದೇ ಕೇಳದೇ ಓಡಿ ಹೋಗ್ತಿದ್ನಾ? ಮದುವೆ ವಿಷಯದಲ್ಲಿ ಬಲವಂತ ಮಾತ್ರ ಮಾಡ ಬಾರದು.. ಮುಂದೆ ನಮ್ಮ ಮಕ್ಕಳು ಸುಖವಾಗಿರೋದು ಮುಖ್ಯ.." ಅಲ್ಲಿಗೆ ಆ ಮಾತು ಮುಗಿದಿತ್ತು.

ತಂಗಿಯರಿಬ್ಬರ ಮದುವೆಯಾದ ಕೆಲವೇ ತಿಂಗಳುಗಳ ನಂತರ ಸುಬ್ಬನೂ ಮದುವೆಯಾದ. ಅವನ ಹೆಂಡತಿ ಸಾವಿತ್ರಿ ಪಟ್ಟಣದವಳು. ಅವಳು ಲಲಿತಳ ಅನ್ಯಮನಸ್ಕತೆಯನ್ನು ಗಮನಿಸಿ ಗಂಡನೊಡನೆ ನುಡಿದಳು.

"ಲಲಿತ ಎಲ್ಲರಂತಿಲ್ಲ ಅಂತ ನನಗನ್ನಿಸುತ್ತೆ ಒಂದು ಸಲ ಅವಳನ್ನು ಸಿಟಿಯ ಡಾಕ್ಟರಿಗೆ ತೋರಿಸುವುದು ಒಳ್ಳೆಯದು ಅಂತ ನನಗನ್ನಿಸುತ್ತೆ.."

"ಏನಾಗಿದೆ ಅವಳಿಗೆ....?"

"ಸದಾ ಮಂಕಾಗಿರ್‍ತಾಳೆ ಅಂತ ಅನ್ನಿಸೋಲ್ವಾ ನಿಮಗೆ? ನೀವೆಂತಹ ಅಣ್ಣ? ಅವಳೂ ನಿಮ್ಮ ತಂಗಿ.."

"ನನಗೆ ಐದು ಜನ ತಂಗಿಯರು. ಯಾರ್‍ಯಾರನ್ನ ಅಂತ ವಿಚಾರಿಸಲಿ..? ಈ ವರ್ಷ ಕಳೀಲಿ.. ಮದುವೆ ಮಾಡಿದರಾಯ್ತು.."

"ಮದುವೆ ಮಾಡಿದರೆ ಆಗಲಿಲ್ಲ. ಏನು ಕೆಲಸ ಬರುತ್ತೆ ಅವಳಿಗೆ? ಓದೋದನ್ನು ನಿಲ್ಲಿಸಿ ಬಿಟ್ಟಿದಾಳೆ.."

"ಅದನ್ನೆಲ್ಲಾ ನೀನೇ ವಿಚಾರಿಸ್ಕೋ ಸಾವಿತ್ರಿ ಅಡಿಗೆ ಕೆಲಸ ಹೇಳಿಕೊಡು.. ನನಗಿದನ್ನೆಲ್ಲಾ ಹೇಳಲೇಬೇಡ.."

ಸಾವಿತ್ರಿ ಲಲಿತಳ ಅನ್ಯಮನಸ್ಕತೆಯನ್ನು ಚೆನ್ನಾಗಿ ಗಮನಿಸಿದ್ದಳು. ಲಲಿತಾ ಯಾರೊಂದಿಗೂ ಬೆರೆಯದೇ ತನ್ನ ಪಾಡಿಗೆ ತಾನು ಇರುವುದು, ಭತ್ತದ ಉಗ್ರಾಣದ ಕಡೆ ಆಗಾಗ್ಗೆ ನೋಡುವುದು, ಕೆಲವೊಮ್ಮೆ ಮುಖವನ್ನು ಅಸಹ್ಯಸಿಕೊಳ್ಳುವುದು.. ಒಂದು ಸಾರಿ ಲಲಿತಳನ್ನು ಕೇಳಿಯೂ ಸಹ ಕೇಳಿದ್ದಳು.

"ಯಾಕೇ ಲಲಿತಾ ಸದಾ ಹೀಗಿರ್ತೀಯಲ್ಲ.. ನಿನಗೆ ಬೇಜಾರಾಗೋಲ್ವಾ?.."

"ಹೌದು ಅತ್ತಿಗೆ, ತುಂಬಾ ಬೇಜಾರಾಗುತ್ತೆ.."

"ಅಕ್ಕಂದಿರು ಮದುವೆಯಾಗಿ ಹೊರಟು ಹೋದ್ರು ಅಂತಾನಾ?"

"ಹಾಗೇನಿಲ್ಲ.. ಶೇಖರ ಯಾಕೆ ನಮ್ಮ ಮನೆ ಮದುವೆಗೆ ಬರಲೇ ಇಲ್ಲ?"

"ನಂಗೊತ್ತಿಲ್ಲಮ್ಮ.. ಶೇಖರ ಬರಲಿಲ್ಲ ಅಂತ ಬೇಜಾರಾ?"

"ಶೇಖರ ಬಂದಿದ್ರೆ ಅವನ ಜೊತೆ ಹರಟೆ ಹೊಡೆಯ ಬಹುದಾಗಿತ್ತು. ಈಚೆಗ್ಯಾಕೆ ಅವನು ಬರ್ತಾನೇ ಇಲ್ಲ."

"ನಿಂಗೊತ್ತಿಲ್ವಾ ಲಲಿತಾ? ಅವನೀಗ ಬೆಂಗಳೂರಿನಲ್ಲಿದಾನಂತೆ."

"ಹೌದಾ? ನನಗ್ಯಾರೂ ಹೇಳಲೇ ಇಲ್ಲ."

"ಹೋಗಲಿ ಬಿಡು. ಈಗ ನಾನು ಈ ಮನೆಗೆ ಹೊಸಬಳು ಅಲ್ವಾ? ನನಗೆ ನಿಮ್ಮ ಮನೇ ಕೆಲಸ ಕಾರ್ಯ ಎಲ್ಲಾ ಹೊಸದು. ನನಗೆ ಸ್ವಲ್ಪ ತಿಳಿಸಿ ಕೊಡ್ತೀಯಾ?"

"ನನಗೇನೂ ಬರುಲ್ಲ. ಅಮ್ಮ ಇದಾರಲ್ಲ."

"ಅಮ್ಮ ದೊಡ್ಡೋರು. . ಅವರನ್ನ ಕೇಳೋದು ಹೇಗೆ? ನೀನೂ ಒಂದು ಸ್ವಲ್ಪ ಸಹಾಯ ಮಾಡಿದ್ರೆ ಆಗುತ್ತೆ.."

"ನನಗೆ ಬೇಜಾರು ಅತ್ತಿಗೆ.."

"ನಿನ್ನ ಬೇಜಾರು ಕಳೆಯುತ್ತೆ.. ನನಗೆ ಸಹಾಯವೂ ಆಗುತ್ತೆ. ನಾಳೆ ಬೆಳಿಗ್ಗೆ ಬೇಗ ಎಬ್ಬಿಸ್ತೀನಿ.. ಎದ್ದು ಸ್ನಾನ ಮಾಡಿ ಅಡಿಗೆ ಮನೆಗೆ ನನ್ನ ಜೊತೆಗೆ ಬಂದು ಬಿಡಬೇಕು.."

ಅತ್ತಿಗೆಯ ಈ ಆತ್ಮೀಯತೆ ಲಲಿತಳಿಗೆ ಬೇಕಾಗಿರಲಿಲ್ಲ. ಬೆಳಿಗ್ಗೆ ಸಾವಿತ್ರಿ ಲಲಿತಳನ್ನು ಎಬ್ಬಿಸಲೆಂದು ಬಂದಾಗ ಅವಳು ಅಲ್ಲಿರಲಿಲ್ಲ. ಮನೆಯೆಲ್ಲಾ ಹುಡುಕಿದರೂ, ಕಾಣದಾದಾಗ ಎಲ್ಲರೂ ಗಾಭರಿಗೊಂಡಿದ್ದರು. ಭತ್ತದ ಉಗ್ರಾಣದ ಬಾಗಿಲು ತೆಗೆದಿರುವುದನ್ನು ಕಂಡು ಎಲ್ಲರೂ ಒಳಗೆ ಹೋದರು. ಭತ್ತದ ಮೂಟೆಗಳ ನಡುವೆ ಅರೆಜ್ಞಾನದ ಸ್ಥಿತಿಯಲ್ಲಿ ಮಲಗಿದ್ದವಳನ್ನು ಕಂಡು ಮತ್ತಷ್ಟು ಹೆದರಿದರು.

ಏನಾಗಿದೆ ಇವಳಿಗೆ? ಹೀಗೇಕೆ ವರ್ತಿಸುತ್ತಿದಾಳೆಂದು ಅರ್ಥವಾಗಿರಲಿಲ್ಲ.

ಆನಂತರ, ಲಲಿತ ತಾಯಿಯೊಟ್ಟಿಗೇ ಮಲಗುತ್ತಿದ್ದಳು. ಆದರೂ ರಾತ್ರಿಯ ಹೊತ್ತು ಎದ್ದು ಏನೇನನ್ನೋ ಕನವರಿಸುವುದು, ಬೆಚ್ಚಿ ಬಿದ್ದು ಉಗ್ರಾಣದ ಕಡೆ ನೋಡಿ ಅಳುವುದು ಇದನ್ನೆಲ್ಲ ಗಮನಿಸಿ ಮನೆಯವರೆಲ್ಲ ಆತಂಕಗೊಂಡರು.

ಆದಷ್ಟು ಬೇಗ ಮದುವೆ ಮಾಡಿ ಬಿಟ್ಟರೆ, ಸರಿ ಹೋಗುತ್ತಾಳೆಂದುಕೊಂಡು ಗಂಡುಗಳನ್ನು ನೋಡಲು ಪ್ರಾರಂಭಿಸಿದರು. ವಧು ಪರೀಕ್ಷೆಗೆಂದು ಬಂದ ಗಂಡುಗಳು, ಅವಳ ಮುಖದ ಮಂಕುತನವನ್ನು ಗಮನಿಸಿ ಹುಡುಗಿ ಚೂಟಿಯಾಗಿಲ್ಲವೆಂದು ನಿರಾಕರಿಸಿದ್ದರು.

ಆನಂತರ, ಶಾಸ್ತ್ರ ಕೇಳಿದ್ದಾಯಿತು. ಮಂತ್ರ ಹಾಕಿಸಿದ್ದಾಯಿತು. ಯಂತ್ರ ಕಟ್ಟಿಸಿದ್ದಾಯಿತು. ಹರಕೆ ಹೊತ್ತಾಯಿತು. ಆದರೆ ಲಲಿತ ಮಾತ್ರ ಬದಲಾಗಿರಲಿಲ್ಲ.

ಕಡೆಗೆ ಪಟ್ಟಣದ ಡಾಕ್ಟರಿಗೆ ತೋರಿಸಿದ್ದಾಯಿತು. ಅವರು ಕೂಲಂಕುಷವಾಗಿ ನೋಡಿ, ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ತೋರಿಸಬೇಕೆಂದು ಸಲಹೆ ಇತ್ತರು.

ನಿಮ್ಹಾನ್ಸ್ ಎಂದ ಕೂಡಲೇ ಎಲ್ಲರ ಉಸಿರು ನಿಂತಂತಾಯಿತು. ತಮ್ಮ ಮಗಳಿಗೆ ಇಂಥ ಖಾಯಿಲೆ ಏಕೆ ಬಂದು ಅಡರಿಕೊಂಡಿತೋ ಎಂದು ಕಂಗಾಲಾದರು. ಬೆಂಗಳೂರಿಗೆ ಹೋಗಿ ಬರುವುದೆಂಬ ತೀರ್ಮಾನಿಸಿದರು.

ಬೆಂಗಳೂರಿನಲ್ಲಿ ಶೇಖರನ ಮನೆಯಲ್ಲಿ ಇಳಿದು ಕೊಂಡರೆ ಓಡಾಡುಕ್ಕೆ ಅನುಕೂಲ ಆಗುತ್ತೆ ಅಂತ ಅಪ್ಪ ಹೇಳಿದಾಗ ಸುಬ್ಬ ಗುಡುಗಿದ್ದ "ಹೇಳದೇ ಕೇಳದೇ ಮನೆಗೆ ಬರೋದನ್ನ ನಿಲ್ಲಿಸ್ದೋನು, ನಮ್ಮ ಮನೆಯ ಮದುವೆಗೆ ಬರದೇ ಇದ್ದೋನನ್ನ ನಾವು ನೆನೆಸಿಕೊಳ್ಳಲೂಬಾರದು" ಎಂದ.

"ಸರಿಯಪ್ಪಾ.." ತೆಪ್ಪಗಾಗಿದ್ದರು ತಂದೆ. ಹೊರಗಿನ ಊರಿನವರಿಗೆ ಇಳಿದುಕೊಳ್ಳಲು ನಿಮ್ಹಾನ್ಸ್‌ನಲ್ಲೇ ಅನುಕೂಲ ಸಿಗುತ್ತದೆಂದು ಡಾಕ್ಟರು ಹೇಳಿದ್ದರು.

ನಿಮ್ಹಾನ್ಸ್‌ನ ಮನೋವೈದ್ಯರು ಲಲಿತಳನ್ನು ಕೂಲಂಕಷವಾಗಿ ಪರೀಕ್ಷಿಸಿ, ಅದಕ್ಕೆ ಸಂಬಂಧಿಸಿದ ಮಾಹಿತಿಗಳನ್ನೆಲ್ಲ ಸಂಗ್ರಹಿಸಿದರು.

"ಇದು ಮೆದುಳಿಗೆ ಸಂಬಂಧಿಸಿದ ಖಾಯಿಲೆ. ಮನಸ್ಸಿಗೆ ಆದ ಏನೋ ಆಘಾತ ದಿಂದ ಹೀಗಾಗಿದೆ. ಚಿಕಿತ್ಸೆ ಕೊಡಿಸಲೇ ಬೇಕು. ಹಾಗೇ ಆಘಾತಕ್ಕೆ ಕಾರಣ ಏನೂಂತ ಕಂಡು ಹಿಡಿಯಬೇಕು" ಅಂತ ಹೇಳಿ ಕೆಲವು ದಿನಗಳ ಮಟ್ಟಿಗೆ ರೋಗಿ ಇಲ್ಲಿರುವುದು ಒಳ್ಳೆಯದು ಎಂದಿದ್ದರು.

ಹದಿನೈದು ದಿನಗಳ ಚಿಕಿತ್ಸೆಯ ನಂತರ, ಡಾಕ್ಟರು ಕೊಟ್ಟ ಸೂಕ್ತ ಸಲಹೆಗಳನ್ನು ಟಿಪ್ಪಣಿ ಮಾಡಿಕೊಂಡು ಊರಿಗೆ ವಾಪಸ್ಸಾದರು. ಮೂರು ವರ್ಷಗಳ ಚಿಕಿತ್ಸೆಯ ನಂತರ ಲಲಿತ ಸ್ವಲ್ಪ ಮಟ್ಟಿಗೆ ಸುಧಾರಿಸಿಕೊಂಡಳು. ಆದರೂ ಮಾತ್ರೆಗಳ ಸೇವನೆ ಮುಂದುವರೆದಿತ್ತು. ಡಾಕ್ಟರು ಹೇಳದೇ ಅದನ್ನು ನಿಲ್ಲಿಸುವಂತಿಲ್ಲ.

ಈ ಮಧ್ಯೆ ಒಂದು ದಿನ ದಿಢೀರನೇ ಶೇಖರ ಇವರ ಮನೆಗೆ ಬಂದ ಅವನ ಸ್ನೇಹಿತ ನಾಗನ ಮದುವೆಗೆ ಬಂದಿದ್ದವನು, ಲಲಿತಳಿಗೆ ಹುಶಾರಿರಲಿಲ್ಲವೆಂದು ತಿಳಿದು, ಅವಳನ್ನು ನೋಡಲೆಂದು ಬಂದಿದ್ದ.

ನಾಗನ ತಂಗಿ ಹೇಳಿದ್ದಳು. "ಲಲಿತನ್ನಂತೂ ನೋಡೋಕೆ ಆಗುಲ್ಲ. ಹಾಗೆ ಕೃಶವಾಗಿ ಹೋಗಿದಾಳೆ. ತುಂಬಾ ಮಂಕಾಗಿ ಹೋಗಿದಾಳೆ." ಅಂತ.

ಇದಕ್ಕೆ ತಾನೆ ಕಾರಣ ಅಂತ ಅಂದುಕೊಂಡ ಶೇಖರ. ಅಂದ ಚೆಂದದಿಂದ ಕಂಗೊಳಿಸುತ್ತಿದ್ದವಳನ್ನು ಸುಖದ ಆಮಿಷ ತೋರಿ, ಹೀರಿ ಹಿಪ್ಪೆ ಮಾಡಿದವನು ತಾನು.. ಇದ್ದಕ್ಕಿದ್ದಂತೆ ಮಾಯವಾದ ತನ್ನನ್ನು ಕಾಣದೇ ಕೊರಗಿ ಹಾಗಾಗಿರಬಹುದು ಎಂದುಕೊಂಡ. ತಪ್ಪೆಲ್ಲಾ ತನ್ನದೇ ತಾನೀಗ ಲಲಿತೆಯ ಕೈ ಬಿಡಬಾರದು ಎಂದು ಕೊಂಡು, ಮಾವನ ಮನೆಗೆ ಬಂದ. ಯಾರು ಅವನೊಡನೆ ಮುಖಕೊಟ್ಟು ಮಾತಾಡಲಿಲ್ಲ. ಆದರೆ ಲಲಿತ ಮಾತ್ರ ಅವನನ್ನು ಕಂಡೊಡನೆ ಉಳಿದವರನ್ನು ಮರೆತು, ಅವನ ಬಳಿಗೆ ಓಡಿ ಬಂದಿದ್ದಳು.

"ಎಲ್ಲಿ ಹೊರಟು ಹೋಗಿದ್ದೆ ಶೇಖರಾ? ನಿನಗೆ ನನ್ನ ನೆನಪೇ ಬರಲಿಲ್ವಾ?.. ನೀನು ಬರದೇ ಎಷ್ಟು ಬೇಜಾರಾಗಿತ್ತು ಗೊತ್ತಾ?"

ಎಲ್ಲರೂ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು. ಶೇಖರ ಮಾವನ ಕಾಲಿಗೆ ಬಿದ್ದ.

"ನನ್ನದು ತಪ್ಪಾಯ್ತು ಮಾವ ಲಲಿತ ನನ್ನನ್ನ ಇಷ್ಟು ಹಚ್ಚಿಕೊಂಡಿದಾಳೆ ಅಂತ ನನಗೆ ಗೊತ್ತಿರಲಿಲ್ಲ. ನೀವು ಒಪ್ಪಿದರೆ ನಾನು ಇವಳನ್ನು ಮದುವೆಯಾಗ್ತೀನಿ."

ಎಲ್ಲರೂ ಸಲೀಸಾಗಿ ಉಸಿರಾಡಿದರು.. ಲಲಿತಳ ಭಾಗಕ್ಕೆ ದೇವರಂತೆ ಶೇಖರ ಬಂದ ಎಂದೇ ಭಾವಿಸಿದರು. ಆದರೆ ಲಲಿತ ಮದುವೆಗೆ ಒಪ್ಪಲಿಲ್ಲ. ನನಗೆ ಈ ಮದುವೆ ಬೇಡ. ಅಂತಂದಳು.

ಸಾವಿತ್ರಿ, ಸಮಾಧಾನ ಮಾಡಿ ಹೇಳಿದ್ದಳು. ಶೇಖರನಿಲ್ಲದೇ ನೀನು ಕೊರಗಿ ಹಾಳಾಗಿದ್ದೆ. ಈಗ ಅವನು ಬಂದಿದಾನೆ ಮದುವೆಯಿಲ್ಲದೇ ಹಾಗೆ ಓಡಾಡಿಕೊಂಡಿದ್ರೆ ಏನು ಚೆನ್ನ ಹೇಳು.. ಕ್ರಮೇಣ ಎಲ್ಲ ಸರಿ ಹೋಗುತ್ತೆ. ನಿನ್ನ ಆರೋಗ್ಯಾನೂ ಸುಧಾರಿಸುತ್ತೆ. ಲಲಿತ ಒಪ್ಪಬೇಕಾಯ್ತು.

ಆದರೆ ಹಾಗಾಗಲಿಲ್ಲ. ಮದುವೆಯ ರಾತ್ರಿ ಶೇಖರ ಬಳಿಸಾರಿದಾಗ, ಲಲಿತ ಕಿಟಾರನೆ ಕಿರುಚಿ ಜ್ಞಾನ ತಪ್ಪಿ ಬಿದ್ದಿದ್ದಳು. ಶೇಖರ ಅವಮಾನಗೊಂಡವನಂತೆ ಕೆಂಪಾಗಿದ್ದ.

"ಲಲಿತ ಇನ್ನು ಚಿಕ್ಕವಳು. ಹುಲಿಯಂತೆ ಮೈಮೇಲೆ ಬಿದ್ದರೆ ಏನು ಮಾಡ್ತಾಳೆ?" ಸುಬ್ಬ ರೇಗಿದ್ದ.

ಆದರೆ ಶೇಖರನಿಗೆ ಸಮಾಧಾನವಾಗಿರಲಿಲ್ಲ. ಮೊದಲು ತನ್ನ ಮೇಲಿನ ಪ್ರೀತಿಯಿಂದ ತನ್ನ ಚೆಲ್ಲಾಟಗಳನ್ನು ಸಹಿಸಿಕೊಂಡಿದ್ದವಳಿಗೆ ಈಗೇನಾಯ್ತು? ಹೀಗೇ ಮುಂದುವರೆದರೆ ತನ್ನ ಗತಿಯೇನು?

ಲಲಿತಳನ್ನು ಒಲಿಸಿಕೊಳ್ಳಲು ನಾನಾ ಉಪಾಯಗಳನ್ನು ಮಾಡಿದ ಹೋಟೆಲ್ಲು ಸಿನಿಮಾಗಳಿಗೆ ಕರೆದೊಯ್ದ. ಪಾರ್ಕುಗಳಲ್ಲಿ ಸುತ್ತಾಡಿಸಿದ. ಹೊರಗೆ ನಗು ನಗುತ್ತಾ ಕಾಲ ಕಳೆಯುತ್ತಿದ್ದವಳು ರಾತ್ರಿಯಾಗುತ್ತಿದ್ದಂತೇ ಮಂಕಾಗುತ್ತಿದ್ದದನ್ನು ಗಮನಿಸಿ. ಒಂದೆರಡು ಬಾರಿ ರಾತ್ರಿ ಊಟವಾದೊಡನೆ ಗುಟ್ಟಾಗಿ ಮಾತ್ರೆ ನುಂಗಿದುದನ್ನು ಗಮನಿಸಿದ್ದ ಏನಿರಬಹುದು?

ಅನುಮಾನದಿಂದ ಕೇಳ ಹೊರಟವನು ಅವಳ ಅಂಜಿಕೆಯನ್ನು ಗಮನಿಸಿ ಸುಮ್ಮನಾದ. ಅವಳು ಚೆನ್ನಾಗಿ ನಿದ್ದೆ ಹೋದ ಮೇಲೆ, ಅವಳ ಪೆಟ್ಟಿಗೆಯನ್ನು ತೆಗೆದು, ಮಾತ್ರೆಗಳನ್ನು ನೋಡಿದ. ಎಷ್ಟೊಂದು ಮಾತ್ರೆಗಳು! ಏನಾಗಿದೆ ಇವಳಿಗೆ? ಏನೋ ಸಂದೇಹ ಕಾಡಿತು. ಕೆಲವು ಮಾತ್ರೆಗಳನ್ನು ತೆಗೆದು ಮುಚ್ಚಿಟ್ಟ, ಮಾರನೇ ದಿನ ಕೆಲಸಕ್ಕೆ ಹೋಗುವಾಗ ಮರೆಯದೇ ಅದನ್ನು ಸಮೀಪದಲ್ಲಿದ್ದ ಮೆಡಿಕಲ್ ಸ್ಟೋರ್ಸ್‌ಗೆ ಹೋಗಿ, ಅದರ ಬಗ್ಗೆ ತಿಳಿದುಕೊಂಡ. ಮೈಯೆಲ್ಲಾ ನಡುಗಿದಂತಾಯಿತು.

ಲಲಿತಾ ಮನೋರೋಗಿ. ಮನೋರೋಗಕ್ಕೆ ಮದ್ದಿಲ್ಲ ಅಂತಾರೆ. ಇವಳಿಗೆ ಇಂಥಾ ಖಾಯಿಲೆ ಇದೆ ಅಂತ ತಿಳೀದೇ ಹೋಯ್ತಲ್ಲ. ಹಾಗೆ ಅಂತ ಗೊತ್ತಿದ್ದಿದ್ರೆ ಇವಳ ಸಹವಾಸಾನೇ ಮಾಡ್ತಿರಲಿಲ್ಲ.. ಆಗ ಮಾಡಿದ ತಪ್ಪು ಸಾಲದು ಅಂತ ಈಗ ಮತ್ತೊಮ್ಮೆ ಭಾರೀ ತಪ್ಪನ್ನೇ ಮಾಡಿಬಿಟ್ಟೆನಲ್ಲ.. ಲಲಿತನ್ನ ಉದ್ದಾರ ಮಾಡೋಕೆ ಹೋಗಿ ಹಾಳು ಬಾವಿಗೆ ಬಿದ್ದಂತಾಯಿತಲ್ಲ.

ಮಾವ ಬಹಳ ಜಾಣರು. ಲಲಿತಂಗೆ ಹೀಗಿದೆ ಅಂತ ಒಂದು ಮಾತು ತನಗೆ ತಿಳಿಸಲಿಲ್ಲವಲ್ಲ. ನನಗೆ ಮೋಸ ಮಾಡಬೇಕು ಅಂತ ಕಾಯ್ತಾ ಇದ್ದರು ಅಂತ ಕಾಣಿಸುತ್ತೆ. ಪೆದ್ದನ ಹಾಗೆ ನಾನು ಹೇಳಿದ್ದೇ ಸಾಕು ಅಂತ ತಿಂಗಳಿನೊಳಗೆ ಮದುವೆ ನೆರವೇರಿಸಿ ಬಿಟ್ಟರಲ್ಲ. ಈ ಲಲಿತಾ ಎಂಥಾ ಕಿಲಾಡಿ? ನನಗೆ ಒಂದು ಮಾತು ತಿಳಿಸಲಿಲ್ಲವಲ್ಲ. ಎಲ್ಲರೂ ಸೇರಿ ನನಗೆ ಮೋಸ ಮಾಡಿ ಬಿಟ್ಟರು...

ಅದೇ ಆವೇಶದಲ್ಲಿ ಮನೆಗೆ ಬಂದವನೇ, ಲಲಿತಳನ್ನು ಸೀದಾ ಊರಿಗೆ ಕರೆ ತಂದು ಬಿಟ್ಟು ಬಿಟ್ಟ.

ಲಲಿತಂಗೆ ಕೆಟ್ಟ ಖಾಯಿಲೆ. ನಿಮ್ಹಾನ್ಸ್‌ಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದೀರಿ.. ಆದರೆ ಮುಚ್ಚಿಟ್ಟು ಮದುವೆ ಮಾಡಿದೀರಿ. ಈ ಹುಚ್ಚಿಯ ಸಹವಾಸ ನನಗೆ ಬೇಡ.. ನೀವೇ ಸಾಕಿಕೊಳ್ಳಿ...

ಏಯ್! ಲಲಿತಾ ಹೀಗೆ ಆಗೋಕೆ ನೀನೇ ಕಾರಣ. ಸುಮ್ಮನೇ ಕರೆದುಕೊಂಡು ಹೋಗು. ಇಲ್ಲದಿದ್ದರೆ ಪೋಲಿಸ್ ಕಂಪ್ಲೆಂಟ್ ಕೊಡ್ತೀನಿ. ಸುಬ್ಬ ಹೆದರಿಸಿದ್ದ.

ಅದೇನು ಮಾಡ್ತೀರೋ ಮಾಡ್ಕೊಳ್ಳಿ. ನಾನು ಅವಳಿಗೆ ಡೈವೋರ್ಸ್ ಕೊಡ್ತೀನಿ. ಈಗ ಸುಬ್ಬ ಸ್ವಲ್ಪ ಮೆತ್ತಗಾಗಿದ್ದ. ಶೇಖರನನ್ನು ಬಲವಂತವಾಗಿ ಕೂರಿಸಿದ.

ನಿನಗೆ ಮೋಸ ಮಾಡಬೇಕೂಂತ ಏನಿರಲಿಲ್ಲ ಶೇಖರಾ, ಒಂದಲ್ಲ ಒಂದು ದಿನ ನಿನಗೆ ತಿಳಿದೇ ತಿಳಿಯುತ್ತೆ ಅಂತ ಗೊತ್ತಿತ್ತು. ಲಲಿತ ನಿನ್ನನ್ನ ಕಂಡೊಡನೆ ಎಷ್ಟು ಖುಷಿಯಾಗಿ ಓಡಿ ಬಂದಳು ನೋಡು...? ಅವಳೀಗ ಪೂರಾ ಹುಶಾರಾಗಿ ದಾಳೆ. ಆದರೆ ಆ ಮಾತ್ರೆಗಳನ್ನು ತಕ್ಷಣಕ್ಕೆ ನಿಲ್ಲಿಸುವಂತಿಲ್ಲ. ನಿಧಾನವಾಗಿ, ಡಾಕ್ಟರರ ಸಲಹೆಯ ಮೇರೆಗೆ ನಿಲ್ಲಿಸಬೇಕು. ಬೇಕಾದರೆ ನೀನೇ ಡಾಕ್ಟರ ಹತ್ತಿರ ಮಾತನಾಡು.

ಸರಿ, ನಾನು ಡಾಕ್ಟರ ಹತ್ತಿರ ಮಾತನಾಡ್ತೀನಿ.. ಶೇಖರ ಬೆಂಗಳೂರಿಗೆ ಹೋದ ವನೇ ಮೊದಲು ನಿಮ್ಹಾನ್ಸ್‌ಗೆ ಹೋದ. ತನ್ನ ಪರಿಚಯ ಹೇಳಿಕೊಂಡು, ನಿಜ ಏನೂಂತ ಹೇಳಬೇಕೆಂದು ಕೇಳಿಕೊಂಡ. ಡಾಕ್ಟರು ಲಲಿತಳ ಪರಿಸ್ಥಿತಿಯನ್ನೆಲ್ಲ ತಿಳಿಸಿ.

"ಮದುವೆಗೆ ಮುಂಚೆ ನನ್ನನ್ನೊಮ್ಮೆ ಕೇಳಿದ್ದರೆ ಚೆನ್ನಾಗಿತ್ತು. ಯಾವುದೋ ಆಘಾತದ ನೆನಪು ಅವಳನ್ನು ಹಿಂಸೆಗೀಡು ಮಾಡುತ್ತಿದೆ. ಅದು ಏನೆಂದು ಇದು ವರೆಗೂ ತಿಳಿದಿಲ್ಲ. ಭತ್ತದ ಉಗ್ರಾಣದಲ್ಲಿ ಮೂಟೆಗಳ ನಡುವೆ ಜ್ಞಾನವಿಲ್ಲದ ಸ್ಥಿತಿಯಲ್ಲಿ ಆ ಹುಡುಗಿ ಮಲಗಿದ್ದಳು ಅಂತ ಹೇಳಿದರು. ಯಾಕಿರಬಹುದು? ನೀವು ಅವಳನ್ನು ಚಿಕ್ಕವಯಸ್ಸಿನಿಂದ ಬಲ್ಲವರು.. ನಿಮ್ಮೊಡನೆ ಎಂದಾದರೂ ಹಾಗೆ ವರ್ತಿಸಿದ್ದಳಾ?"

ಶೇಖರನ ಕೆನ್ನೆಗೆ ಅಪ್ಪಳಿಸಿದಂತಾಯ್ತು. ಅವಳನ್ನು ಆಕರ್ಷಿಸಿ ಹಾಳು ಮಾಡಿ, ಸರಸಕ್ಕೆ ಎಳೆಯುತ್ತಿದ್ದವನು ತಾನು.. ಆದರೆ ಅದನ್ನು ಅಸಹ್ಯಸಿಕೊಳ್ಳುತ್ತಿದ್ದಳು..

ಹಾಗೇಕೆ ಮಾಡುತ್ತಿದ್ದಳು. ಈಗ ಮದುವೆಯಾದ ಮೇಲೆ ತನ್ನನ್ನು ಬಳಿಗೇ ಸೇರಿಸುತ್ತಿಲ್ಲ. ಇದನ್ನೆಲ್ಲ ಡಾಕ್ಟರಿಗೆ ಹೇಳುವುದು ಹೇಗೆ? ಹೇಳಿದರೆ ತಪ್ಪಿತಸ್ಥ ತಾನೇ ಆಗುತ್ತೇನೆ ಎಂದುಕೊಂಡು ಎದ್ದ.

ಡಾಕ್ಟರು ಮುಗುಳ್ನಗುತ್ತಾ ನುಡಿದಿದ್ದರು. "ಮನಸ್ಸಿಗೂ ಮೆದುಳಿಗೂ ನಿಕಟ ಸಂಬಂಧ. ಮನಸ್ಸು ಕೆಲಸ ಮಾಡದಿದ್ದಾಗ ಮೆದುಳು ಕೈ ಕೊಡುತ್ತದೆ. ಇದರಲ್ಲಿ ಆ ಹುಡುಗಿಯ ತಪ್ಪು ಏನೂ ಇಲ್ಲ. ದೊಡ್ಡ ಹೃದಯದಿಂದ ಮದುವೆಯಾಗಿದ್ದೀರಿ. ಕೈ ಬಿಡಬೇಡಿ. ಕ್ರಮೇಣ ಸರಿ ಹೋಗಬಹುದು. ಒಂದು ವೇಳೆ ನಿಮಗೇ ಹೀಗಾಗಿದ್ದರೆ ನಿಮ್ಮ ಹೆಂಡತಿ ನಿಮ್ಮ ಕೈ ಬಿಡುತ್ತಿದ್ದಳೇ..?"

ಆದರೆ ಆ ಗಳಿಗೆಯಲ್ಲಿ ಶೇಖರನ ತಲೆ ಮತ್ತೇನೂ ಕೆಲಸ ಮಾಡಲಿಲ್ಲ. ತನಗೆ ಮೋಸವಾಯಿತು. ಇದಕ್ಕೋಸ್ಕರ ಮಾವನ ಮನೆಯವರು ಕಾಯುತ್ತಿದ್ದರು. ತಾನು ಅವರಿಗೆ ಬುದ್ಧಿ ಕಲಿಸಲೇ ಬೇಕು.. ತನಗೆ ಸುಖವನ್ನೇ ಕೊಡದಿದ್ದ ಮೇಲೆ ಲಲಿತ ತನ್ನ ಹೆಂಡತಿಯಾಗಿದ್ದರೆಷ್ಟು ಬಿಟ್ಟರೆಷ್ಟು?.

ಇದೇ ಜಿದ್ದಿನಲ್ಲಿ ಅವನು ಡೈವೋರ್ಸ್‌ಗೆ ಅರ್ಜಿ ಸಲ್ಲಿಸಿದ.

ನಾವು ಲಲಿತಂಗೆ ಒಂದು ಪಾಲು ಆಸ್ತಿ ಕೊಡ್ತೀವಿ. ಅವಳಿಗೆ ಡೈವೋರ್ಸ್ ಕೊಡಬೇಡ. ನೀನೂ ಕೈ ಬಿಟ್ಟರೆ ಅವಳು ಹಾಳಾಗಿ ಹೋಗ್ತಾಳೆ ಮಾವ ಕೈ ಮುಗಿದು ಕೇಳಿಕೊಂಡಾಗ ತಿರಸ್ಕಾರದಿಂದ ನೋಡಿದ್ದ.

ನಿಮ್ಮ ಆಸ್ತಿ ಏನೂ ಬೇಕಿಲ್ಲ ಮಾವ. ಆದರೆ ನೀವು ಹೀಗೆ. ಮೋಸ ಮಾಡ್ತೀರಿ ಅಂತ ನಾನು ಅಂದುಕೊಂಡಿರಲಿಲ್ಲ. ನಿಜವಾದ ವಿಷಯ ಏನೂಂತ ತಿಳಿಸಿದ್ದರೆ ನನಗೆ ಖಂಡಿತಾ ಇಷ್ಟು ಬೇಜಾರಾಗುತ್ತಿರಲಿಲ್ಲ.. ಆದರೆ, ಲಲಿತ ಈಗ ಯಾರ ಹೆಂಡತಿಯಾಗಿರಲು ಲಾಯಖ್ಖಿಲ್ಲ. ನನಗೂ ನನ್ನದೇ ಆದ ಸ್ವಂತ ಆಸೆಗಳಿವೆ. ಲಲಿತ ಗಂಡನಿಲ್ಲದೇ ಬದುಕಬಲ್ಲಳು. ಆದರೆ ನಾನು ಹೆಂಡತಿ ಇರದೇ ಇರಲಾರೆ. ಲಲಿತ ನನಗೆ ತಕ್ಕವಳಲ್ಲ ಎಂದು ಕೈ ಮುಗಿದು ಹೊರಟು ಹೋಗಿದ್ದ.

ಡೈವೋರ್ಸ್ ಸಿಕ್ಕಿ ಸುಮಾರು ವರ್ಷಗಳೇ ಕಳೆದು ಹೋಗಿವೆ. ಹೊಸತರಲ್ಲಿ ಶೇಖರ ಮರು ಮದುವೆಯ ಆಸೆಯಿಂದ ನಾಲ್ಕಾರು ಹೆಣ್ಣುಗಳನ್ನು ನೋಡಿದ್ದ. ಆದರೆ ಯಾರೂ ಲಿಲತೆಯಷ್ಟು ಸುಂದರಿಯರಲ್ಲ ಅಂತನ್ನಿಸಿತ್ತು. ಕ್ರಮೇಣ ಮದುವೆಯ ಆಸೆ ಕಡಿಮೆ ಆಗಿತ್ತು. ಹೆಂಗಸಿನ ಸಹವಾಸ ಬೇಕೆನಿಸಿದಾಗ ವೇಶ್ಯೆಯರ ಬಳಿಗೆ ಹೋಗುತ್ತಿದ್ದ. ಕ್ರಮೇಣ ಆ ಆಸಕ್ತಿಯೂ ಕಡಿಮೆ ಆಗಿತ್ತು. ಥೂ ಇದೂ ಒಂದು ಜೀವನಾನಾ? ಎಂದು ಬೇಸರಗೊಳ್ಳುತ್ತಿದ್ದ.

ಈ ಸಮಯದಲ್ಲಿ ಒಂದು ದಿನ ನಾಗ ಸಿಕ್ಕಿದ್ದ. ತಾನಾಗಿಯೇ ಲಲಿತಳ ಬಗ್ಗೆ ವಿಚಾರಿಸಿದ್ದ.

"ಈಗ ಲಲಿತ ಹೇಗಿದಾಳೆ? ಏನು ಮಾಡ್ತಿದಾಳೆ?"

"ಪರವಾಗಿಲ್ಲ ಅಂತ ಕಾಣಿಸುತ್ತೆ. ಕೆಲಸಕ್ಕೆ ಸೇರಿಕೊಂಡಿದಾಳೆ."

"ಹೌದಾ? ನನಗೆ ಗೊತ್ತೇ ಇಲ್ಲ.."

"ಆ ಮನೆಯ ಸಂಬಂಧವೇ ಕಡಿದು ಹೋದ ಮೇಲೆ, ನಿನಗೆ ಹೇಗೆ ಗೊತ್ತಾಗುತ್ತೆ?"

"ಲಲಿತ ಮತ್ತೆ ಮದುವೆ ಮಾಡಿಕೊಂಡಿದಾಳಾ?" ಬೇಕಂತ ಕೇಳಿದ.

"ಮದುವೆ ಅಂದರೆ, ಮುಖ ಕೆಟ್ಟದು ಮಾಡ್ತಾಳಂತೆ.. ಅಲ್ಲ ಶೇಖರ, ನೀನು ಮದುವೆಯ ರಾತ್ರಿ ಲಲಿತನ್ನ ಪೂರಾ ಹೆದರಿಸಿ ಬಿಟ್ಟೆಯಂತೆ. ಅಂಥಾದ್ದೇನು ಮಾಡಿದೆ?" ಕುತೂಹಲದಿಂದ ಕೇಳಿದ್ದ.

ಶೇಖರ ಸುಮ್ಮನೇ ನಕ್ಕಂತೆ ಮಾಡಿದ. "ಅಂಥಾದ್ದೇನೂ ನಡೀಲಿಲ್ಲ. ಅವಳಿಗೆ ಗಂಡಸಿನ ಸಹವಾಸ ಬೇಡವಂತೆ.. ಅದಕ್ಕೇ ಅವಳು ಮತ್ತೆ ಮದುವೆ ಆಗಲಿಲ್ಲ."

"ನೀನ್ಯಾಕೆ ಮರು ಮದುವೆ ಆಗಲಿಲ್ಲ."

"ನಾನಾ? ನಾನು ಜೀವನದಲ್ಲಿ ಪ್ರೀತಿಸಿದ್ದು ಲಲಿತನ್ನ ಮಾತ್ರ. ಆದರೆ ಅವಳೂ, ಅವಳ ಮನೆಯವರು ನನಗೆ ಮೋಸ ಮಾಡಿಬಿಟ್ಟರು. ಒಂದು ಸಲದ ಮದುವೆಯ ಅನುಭವವೇ ಸಾಕು ನನಗೆ. ಮತ್ತೆಲ್ಲಿ ಮೋಸವಾಗುತ್ತೋ ಅಂತ ನನಗೆ ಭಯ.."

"ಆದರೂ ಅಮ್ಮ ಬದುಕಿರೋವರೆಗೂ ಮತ್ತೆ ಮದುವೆಯಾಗು ಅಂತ ಹೇಳ್ತಾನೇ ಇದ್ಲು. ಅವಳಿಗೂ ಅಣ್ಣನ ಮನೆಯವರ ಮೇಲೆ ಕೋಪವಿತ್ತು. ಆದರೆ ಈಗೆ ಅವಳಿಲ್ಲ. ನಾನೂ ಏಕಾಂಗಿ."

"ಈಗ ನಿನಗೂ ವಯಸ್ಸಾಗಿದೆ. ಒಂಟಿ ಅಂತೀಯ.. ಅಲ್ಲಿ ಲಲಿತಳೂ ಒಂಟಿ. ಅವಳನ್ನು ಪ್ರೀತಿಸಿದೆ ಅಂತ ಹೇಳ್ತೀಯ.. ಅವಳಿಗೆ ಹೀಗಾ ಕೈ ಕೊಡೋದು? ಇದು ತಪ್ಪಲ್ವಾ?"

"ನಿನಗೆ ಅದೆಲ್ಲ ಅರ್ಥವಾಗುಲ್ಲ ನಾಗ. ನಿನ್ನ ಸಂಸಾರದಲ್ಲಿ ಇಂತಹ ಸಮಸ್ಯೆ ಇಲ್ಲ. ನೀನು ಹಾಯಾಗಿದೀಯ."

"ಲಲಿತಳಿಗೆ ಬಾಳು ಕೊಡ್ತೀನಿ ಅಂತ ಮಾವನ ಕಾಲು ಹಿಡಿದು ಮದುವೆಯಾಗಿ, ಈಗ ಅವಳ ಬಾಳನ್ನು ಮತ್ತೂ ಹಾಳು ಮಾಡಿದೆಯಲ್ಲ.. ಇದು ಗಂಡಸಿನ ಲಕ್ಷಣಾನಾ?"

"ಅಂದರೆ? ನಾನು ಗಂಡಸೇ ಅಲ್ಲ ಅಂತಾನಾ?" ರೇಗಿದ.

"ಕೈ ಹಿಡಿದ ಗಂಡ, ಹೆಂಡತಿಯನ್ನು ಕಷ್ಟದ ಸಮಯದಲ್ಲಿ ಕೈ ಬಿಡಬಾರದು. ಅದು ನಿಜವಾದ ಗಂಡಸಿನ ಲಕ್ಷಣ.."

"ಹೋಗಲಿ ಬಿಡು ನಾಗ. ನಾನು ಹೇಡಿ ಅಂತಲೇ ತಿಳಕೋ.. ನನಗೆ ಗೊತ್ತು.. ಲಲಿತಳ ಜೀವನ ಹಾಳಾಗುಕ್ಕೆ ನಾನೇ ಕಾರಣ ಅಂತ. ಆದರೆ ಆಗ ನನಗೆ ಸಹನೆ,

ಸಂಯಮ ಎರಡೂ ಇರಲಿಲ್ಲ. ಈಗ ಹಳೇದನ್ನೆಲ್ಲ ನೆನಸಿಕೊಂಡರೆ ಏನು ಪ್ರಯೋಜನ ಹೇಳು?"

"ಆದರೆ ನಿಜ ಹೇಳು ಶೇಖರ, ಹಳೇ ಮಾತು ಒಂದೂ ನಿನಗೆ ನೆನಪಿಗೆ ಬರುಲ್ವಾ?" ಶೇಖರ ತಲೆ ತಗ್ಗಿಸಿದ.

ಸ್ನೇಹಿತ ಅತ್ತ ಹೋದ ನಂತರ, ಶೇಖರ ತಾನೂ ಆ ಸಂಗತಿಯನ್ನು ಮರೆತವನಂತೆ ಸುಮ್ಮನಾಗಿದ್ದ. ಆದರೆ, ಒಂದು ದಿನ ಅವನ ಸಹೋದ್ಯೋಗಿಯ ತಂಗಿಯನ್ನು ಯಾರೋ ದುಷ್ಕರ್ಮಿಗಳು ಬಲಾತ್ಕಾರ ಮಾಡಿ. ಅವಳೀಗ ನರ್ಸಿಂಗ್ ಹೋಂನಲ್ಲಿದಾಳೆ ಅನ್ನೋ ವಿಷಯ ತಿಳಿದಾಗ ಶೇಖರ ಪೆಚ್ಚಾದ. ಸಹೋದ್ಯೋಗಿ, ಪೋಲಿಸರಿಗೆ ಕಂಪ್ಲೆಂಟ್ ಕೊಟ್ಟು ಬಂದಿದ್ದ. ಅತ್ಯಾಚಾರಕ್ಕೆ ಒಳಗಾದ ಹುಡುಗಿ, ಆಘಾತದಿಂದ ಮಾನಸಿಕ ಸ್ವಸ್ಥತೆಯನ್ನು ಕಳೆದುಕೊಂಡಿದ್ದಳು ಎಂದು ತಿಳಿಯಿತು.

ತಾನೇ ಅಪರಾಧಿಯೇನೋ ಎಂಬಂತೆ ಶೇಖರ ತೊಳಲಾಡಿದ. ತಾನು ಲಲಿತೆಯ ಮೇಲೆ ನಡೆಸಿದ ಅತ್ಯಾಚಾರ ನೆನಪಿಗೆ ಬಂತು. ಅಸಹ್ಯಗೊಂಡರೂ, ಲಲಿತಾ ತನಗಾಗಿ ಅದಲ್ಲವನ್ನು ಸಹಿಸಿಕೊಂಡಿದ್ದಳು. ಆಗ ಅವಳಿಗೆ ನನ್ನ ಮೇಲೆ ಪ್ರೀತಿ ಇತ್ತು. ತನಗಾಗಿ ಏನೆಲ್ಲವನ್ನು ಸಹಿಸುವ ಶಕ್ತಿ ಇತ್ತು.. ಮಾವ ಅನುಸೂಯಳನ್ನು ಮದುವೆಯಾಗ್ತೀಯ.. ಅಂತ ಕೇಳಿದಾಗ ತಾನೇಕೆ ಹೇಡಿಯಂತೆ ವರ್ತಿಸಿದೆ? ಲಲಿತನ್ನ ಮದುವೆಯಾಗ್ತೀನಿ.. ನನಗೆ ಅವಳು ಇಷ್ಟ ಎಂದೇಕೆ ಹೇಳಲಿಲ್ಲ? ಹೇಡಿಯಂತೆ ಕೈ ಕೊಟ್ಟು ಬಂದುದೇ ಲಲಿತಳಿಗೆ ಆಘಾತವಾಗಿರಬಹುದು. ಅವಳ ಆರೋಗ್ಯ ಕೆಡಲು ತಾನೇ ಕಾರಣ.. ಅವಳ ಆರೋಗ್ಯ ಸುಧಾರಿಸಲು ತಾನು ಸಹಾಯಕನಾಗಬಹುದಾಗಿತ್ತು. ಆದರೆ ಹಾಗೆ ಮಾಡದೆ ಮತ್ತೊಮ್ಮೆ ಹೇಡಿಯಾದೆ.

ಕೆಲಸ, ಸಂಪಾದನೆ ಇದ್ದೂ, ವೇಶ್ಯೆಯರ ಸಹವಾಸ ಮಾಡಿಯೂ ತಾನು ಸುಖವಾಗಿರಲಿಲ್ಲ. ಒಂಟಿತನ ಕಾಡುತ್ತಿತ್ತು. ತನಗೇ ಹೀಗಾದ ಮೇಲೆ ಲಲಿತಳಿಗೆ ಹೇಗಾಗಿರಬೇಡ? ಅನುನಯದಿಂದ, ತಾಳ್ಮೆಯಿಂದ ಒಲಿಸಿಕೊಂಡಿದ್ದರೆ, ಒಂದಲ್ಲ ಒಂದು ದಿನ ಅವಳು ತನ್ನವಳಾಗುತ್ತಿದ್ದಳು. ಆದರೆ ನಾನು ಸ್ವಾರ್ಥಿಯಾಗಿ ಬಿಟ್ಟೆ... ಸ್ವಾರ್ಥಿಯಾಗಿ ಬಿಟ್ಟೆ...

ಹೀಗೇ ಹಲವಾರು ದಿನಗಳು ಉರುಳಿ ಹೋದವು. ಈಗ ಲಲಿತಳ ಮನೆಯಲ್ಲೂ ಸಾಕಷ್ಟೇ ಬದಲಾವಣೆಗಳಾಗಿರಬಹುದು. ಈಗ ಮಾವ ಇಲ್ಲ ಎಂದು ನಾಗ ಹೇಳಿದ ನೆನಪು. ಸುಬ್ಬನಿಗೆ ಮದುವೆ ಆಗಿದೆ. ಅವನದೇ ಸಂಸಾರ ತಾಪತ್ರಯವಿರತ್ತೆ. ಲಲಿತಳ ತಂಗಿಯರಿಗೂ ಮದುವೆ ಆಗಿರುತ್ತೆ. ಈಗ ಲಲಿತ ಅತ್ತೆ ಇಬ್ಬರೇ. ಅತ್ತೆಗೆ ವಯಸ್ಸಾಗಿದೆ. ಲಲಿತನ್ನ ಯಾರು ನೋಡಿಕೊಳ್ತಾರೆ? ಸುಬ್ಬನ ಹೆಂಡತಿ ಹೇಗೋ? ಅವಳೇಕೆ ಲಲಿತನ್ನ ನೋಡಿಕೊಳ್ತಾಳೆ? ಕಡೆಗೂ ಒಂದು ನಿರ್ಧಾರಕ್ಕೆ ಬಂದ.

ಈಗ ಹೋಗಿ ಕರೆದರೆ, ಲಲಿತ ನನ್ನ ಜೊತೆ ಮತ್ತೆ ಬರಬಹುದು. ಈ ಹಿಂದೆಯೂ ನನಗಾಗಿ ಕಾತರಿಸಿದ್ದು, ನನ್ನನ್ನು ಕಂಡೊಡನೆ ಓಡಿ ಬರಲಿಲ್ಲವೇ...? ಬಸ್ಸು ಎಷ್ಟು ಹೊತ್ತಿಗೆ ಊರನ್ನು ತಲುಪುತ್ತದೋ ಎಂದು ಕಾತರಿಸಿದ್ದ.

ಆದರೆ, ಬಸ್ಸಿನಿಂದ ಇಳಿದು ಲಲಿತೆಯ ಮನೆಯನ್ನು ಸಮೀಪಿಸಿದವನಿಗೆ ಕಾದಿದ್ದು ಭಾರೀ ಆಘಾತ.

ತಾನು ಬರುತ್ತಿದ್ದೇನೆಂಬ ಸುಳಿವು ಲಲಿತಂಗೆ ಸಿಕ್ಕಿತ್ತೆ? ಹಿಂದಿನಂತೆಯೇ ತಾನು ಮತ್ತೊಮ್ಮೆ ಮೋಸ ಮಾಡಬಹುದೆಂದು ಲಲಿತ ಭಾವಿಸಿದಳೇ? ನೀನು ಹೀಗೆ ಮಾಡಬಾರದಾಗಿತ್ತು ಲಲಿತಾ.. ಒಮ್ಮೆಯಾದರೂ ನನ್ನನ್ನು ಕ್ಷಮಿಸಬೇಕಾಗಿತ್ತು. ನಿನ್ನ ಸೇವೆ ಮಾಡುವ ಅವಕಾಶವನ್ನು ಕೊಡಬೇಕಾಗಿತ್ತು. ಪಶ್ಚಾತ್ತಾಪದ ಅಗ್ನಿಯಲ್ಲಿ ನಾನು ಬೆಂದು ಹೋಗಿದ್ದೀನಿ. ಆದರೆ ನಾನಿನ್ನು ಬದುಕಿದ್ದೀನಿ. ಆದರೆ ನೀನು..? ಚಿತೆಯ ಅಗ್ನಿಯಲ್ಲಿ ಉರಿದು ಬೂದಿಯಾಗಿ, ಪಂಚಭೂತಗಳಲ್ಲಿ ಸೇರಿ ಹೋಗುತ್ತಿದೀಯ.. ನಿನ್ನ ಜೀವನ ಸಾರ್ಥಕಗೊಳ್ಳುತ್ತಿರಬಹುದು.. ಆದರೆ ನಾನು? ನನ್ನನ್ನು ಹೀಗೆ ನಿರುಪಯೋಗಿಯನ್ನಾಗಿ ಬಿಟ್ಟು ಹೋಗ್ತಿದೀಯಲ್ಲ ಲಲಿತಾ... ಏಕಾಂಗಿಯಾಗಿ ಕುಳಿತು ಶೇಖರ ರೋಧಿಸಿಯೇ ರೋಧಿಸಿದ. ಅವನ ರೋಧನವನ್ನು ಕೇಳಲು ಯಾರೂ ಇರಲಿಲ್ಲ. ಬಿಸಿಲಿನ ತಾಪಕ್ಕೆ, ಗಾಳಿಯ ಸಂಚಾರವೂ ಇಲ್ಲದೇ, ಸ್ತಬ್ಧವಾಗಿದ್ದ ಗಿಡಮರಗಳು ಅವನ ರೋಧನಕ್ಕೆ ಮೂಕ ಸಾಕ್ಷಿಯಾಗಿದ್ದವು.

*   *   *

೬. ನೆನಪಿನ ಆಭರಣ

"ಅಮ್ಮಾ.. ರಂಗಣ್ಣ ಅನ್ನೋರು ನಿನ್ನನ್ನು ಭೇಟಿಯಾಗಬೇಕಂತೆ. ಫೋನು ಮಾಡಿಸಿದಾರೆ"

ಮಗ ರಾಜ ಹೇಳಿದಾಗ, ತಾಯಿ ರಾಧಮ್ಮ ಕಣ್ಣುಗಳನ್ನು ಕಿರಿದು ಮಾಡಿದಳು.

"ಯಾವ ರಂಗಣ್ಣ?... " ಆಲೋಚನೆಯ ಆಳಕ್ಕೆ ಧುಮುಕಿದಳು. ಒಬ್ಬ ನನ್ನ ಚಿಕ್ಕಪ್ಪ.. ಅವನು ಸತ್ತು ಹತ್ತು ವರ್ಷಗಳೇ ಕಳೆದವು. ಇನ್ನೊಬ್ಬ ನನ್ನ ತಂಗಿ ಗಂಡ... ನನ್ನ ತಂಗಿಯೇ ಬದುಕಿಲ್ಲ.. ಇನ್ನು ನನಗೂ ಅವನಿಗೂ ಏನು ನೆಂಟಸ್ತಿಕೆ?.. ಇವನ್ಯಾರೋ.. ನನಗೇನು ಗೊತ್ತು?"

"ರಂಗಣ್ಣ ನಿನ್ನನ್ನು ನೋಡಿ ಮಾತನಾಡಬೇಕಂತೆ. ನಿನ್ನ ಕೈಗೆ ಏನೋ ಅಮೂಲ್ಯವಾದ ವಸ್ತುವನ್ನು ಕೊಡಬೇಕಂತೆ.. ಅವರು ಹುಶಾರಿಲ್ಲದೇ ಮಲಗಿದಾರಂತೆ ಇಲ್ಲದಿದ್ದರೆ ಅವರೇ ಬರುತ್ತಿದ್ದರಂತೆ. "

"ಯಾರೋ ರಂಗಣ್ಣ ಬಾ ಅಂತ ಹೇಳಿದ ಮಾತ್ರಕ್ಕೆ ಹೋಗುಕ್ಕಾಗುತ್ತಾ? ನಿಮ್ಮಪ್ಪ ಏನಂತಾರೋ.. ಅಡ್ರೆಸ್ ಹೇಳಿದ್ನಾ? "

"ಹೂಂ. ರಾಮಕೃಷ್ಣಾಶ್ರಮದ ಹಾಸ್ಪೆಲ್ಲಿನ ರೂಂನಲ್ಲಿದಾರಂತೆ. "

"ರಾಮಕೃಷ್ಣಾಶ್ರಮದ ಹಾಸ್ಪೆಲ್ಲಿನ ರೂಂನಲ್ಲಿರೋ ಈ ರಂಗಣ್ಣ ಯಾರು? ನಮ್ಮ ಶಾರದೆ ಗಂಡ ಏನಾದ್ರೂ ಇರಬಹುದೆ?... " ಅವಳು ನೆನಪಿಸಿಕೊಂಡಳು.

"ಹೂಂ. ಈಗ ನೆನಪಿಗೆ ಬಂತು.. " ನಾನು ಶಾರದೆಯ ಗಂಡ ಅಂತ ಹೇಳಪ್ಪಾ ಅಂತಂದ್ರು."

"ಈಗ ಹೇಳ್ತಾ ಇದೀಯಲ್ಲೋ ರಾಜ... ಏನು ಹುಶಾರಿಲ್ವಂತೆ? "

"ಏನೋ ನಂಗೊತ್ತಿಲ್ಲಮ್ಮ. ಹೋಗಿ ನೋಡಿದ್ರೆ ಗೊತ್ತಾಗುತ್ತೆ. "

"ಪಾಪ. ಒಂಟಿ ಜೀವ ನೋಡಿಕೊಳ್ಳೋರೂ ಯಾರೂ ಇಲ್ಲ. ಅದಕ್ಕೇ ಹಾಸ್ಪೆಲ್ಲಿನಲ್ಲಿದಾನೆ.. "

"ಎಲ್ಲೋ ಯಾವುದೇ ನೆಂಟಸ್ಥಿಕೆ ಹೇಳಿಕೊಂಡು ನಮ್ಮ ಮನೆಗೆ ಬಂದು ಸೇರಿಕೊಳ್ಳಬಹುದು. ಸ್ವಲ್ಪ ಹುಶಾರಾಗಿರು. " ಮೊದಲೇ ಬಾಯಿಬಿಲೆ ಬೇರೆ.

"ಅಂಥೋನಲ್ಲ ಅವನು. ಏನೋ ನೋಡೋಕೆ ಸ್ವಲ್ಪ ವಡ್ಡನಂತೆ ಕಾಣ್ತಿದ್ದ. ಆದರೆ ಹೃದಯ ಬಹಳ ಮೃದು. ಚಾಲಾಕಿ ಮನುಷ್ಯನಲ್ಲ. ಹಾಗಿದ್ದಿದ್ರೆ ಇದುವರೆಗೆ ಎಂದಾದ್ರೂ ಬರದೇ ಇರುತ್ತಿದ್ನಾ? "

"ಅಂಥೋರನ್ನೆಲ್ಲಾ ಅಪ್ಪ ಎಂದೂ ಸೇರಿಸಿದವರಲ್ಲ. ಅಪ್ಪಂಗೆ ಹೆದರಿ ಬಂದಿಲ್ಲ ಅಷ್ಟೇ... "

"ಏನೇ ಅದು? ಇಬ್ಬರೂ ನನ್ನ ಬಗ್ಗೆ ಮಾತ್ನಾಡ್ತಾ ಇದೀರಿ. " ಮಲಗಿದ್ದ ನಾರಾಯಣ ಎಚ್ಚೆತ್ತು ಕೇಳಿದಾಗ ಇಬ್ಬರೂ ಸುಮ್ಮನಾದರು.

ಎಲ್ಲರಿಗೂ ಕಾಫಿ ಬೆರೆಸಿ ಕೊಡುವಾಗಲೂ, ರಾಧಮ್ಮನಿಗೆ ರಂಗಣ್ಣನದೇ ಧ್ಯಾನ. "ಇಷ್ಟು ವರ್ಷಗಳ ಬಳಿಕ ಅವನು ನನ್ನನ್ನೇಕೆ ನೋಡಬೇಕು ಅಂತಂದ? ಸಂಬಂಧವೇ ಇಲ್ಲದೆ ಮೂವತ್ತು ವರ್ಷಗಳು ಕಳೆದಿವೆ. ಈಗ ನನ್ನಿಂದೇನಾಗಬೇಕು? ಅತ್ತಿಗೆಯನ್ನಾದರೂ ಕೇಳೋಣವೆಂದರೆ, ಅವಳು ಮಗನ ಮನೆಗೆ ಅಮೆರಿಕಾಕ್ಕೆ ಹೋಗಿದಾಳಂತೆ.. ಏನಾದರಾಗಲೀ ಒಂದು ಸಾರಿ ನೋಡಿ ಬಂದ್ರಾಯ್ತು. ಅದರಿಂದಾಗುವ ನಷ್ಟವೇನು? ಪಾಪ ಸುಖವಿಲ್ಲದ ಮನುಷ್ಯ. ಎರಡೆರಡು ಮದುವೆಯಾದರೂ, ಸಂಸಾರ ಸುಖ ಅವನ ಹಣೆಯಲ್ಲಿ ಬರೆದಿರಲಿಲ್ಲ. ಇದಕ್ಕೆಲ್ಲಾ ಇವನೇ ಕಾರಣನೇ ಅಥವಾ ನನ್ನ ಅಣ್ಣ ಕಾರಣನೇ.. ಒಟ್ಟಿನಲ್ಲಿ ಇವರುಗಳ ದೆಸೆಯಿಂದ ನನ್ನ ತಂಗಿ ಸತ್ತು ಹೋದಳು. ಪಾಪ! ಎಂಥಾ ದಿವಿನಾದ ಹುಡುಗಿಗೆ ಎಂಥಾ ಅಂತ್ಯ? "

ಮನಸ್ಸು ತಂಗಿಯನ್ನು ನೆನೆದು ಮರುಗಿತು.

ಶಾರದೆ ರಾಧಳಿಗಿಂತ ಹತ್ತು ವರ್ಷಕ್ಕೆ ಚಿಕ್ಕವಳು. ಎತ್ತಿ ಆಡಿಸಿ ಲಾಲಿಸಿ ಬೆಳೆಸಿದ ಮುದ್ದು ತಂಗಿ. ಹದಿಮೂರನೇ ವರ್ಷದಲ್ಲಿ ರಾಧಳಿಗೆ ಮದುವೆಯಾಗಿ, ಗಂಡನ ಮನೆಗೆ ಹೊರಟಾಗ, ತಾನೂ ಅಕ್ಕನ ಜೊತೆಯಲ್ಲಿ ಹೋಗುವುದಾಗಿ ಹಠ ಮಾಡಿ ಅತ್ತಿದ್ದವಳನ್ನು ಬಿಟ್ಟು ಹೋಗಲು ಜಯಳಿಗೂ ಕಷ್ಟವೆನಿಸಿತ್ತು.

ರಾಧಳಿಗೆ ಮದುವೆಯಾದ ಮೂರು ನಾಲ್ಕು ವರ್ಷಗಳೊಳಗೆ, ತಾಯಿ ತೀರಿಕೊಂಡಳು. ತಾಯಿ ತೀರಿದ ಕೆಲವೇ ತಿಂಗಳುಗಳ ನಂತರ ತಂದೆಯೂ ತೀರಿಕೊಂಡರು. ಮಕ್ಕಳುಗಳು ಅನಾಥರಾದರು. ಚಿಕ್ಕಪ್ಪ ದೊಡ್ಡಪ್ಪಂದಿರುಗಳ ಮನೆಯಲ್ಲಿ ಬೆಳೆದ ಶಾರದೆ ಅವಳ ಇಬ್ಬರು ತಮ್ಮಂದಿರ ಪಾಡು ಅಸಹನೀಯ. ರಾಧಾಳ ಅಣ್ಣ ನಾಗರಾಜ ಡಿಗ್ರಿ ಮುಗಿಸಿ ಕೆಲಸಕ್ಕೆ ಸೇರಿಕೊಂಡು, ಮದುವೆಯಾಗಿ, ಸಂಸಾರ ಹೂಡಿದ. ತನ್ನ ತಮ್ಮಂದಿರನ್ನು ತಂಗಿಯನ್ನು ತನ್ನ ಮನೆಗೆ ಕರೆಸಿಟ್ಟುಕೊಂಡ. ಆ ಮಕ್ಕಳ ಬಾಳು ಕುದಿಯುವ ಎಣ್ಣೆಯಿಂದ, ಉರಿಯುವ ಬೆಂಕಿಗೆ ಬಿದ್ದಂತಾಯಿತು ಅಷ್ಟೇ.

ಅತ್ತಿಗೆ ಒಳ್ಳೆಯವಳಾಗಿರಲಿಲ್ಲ. ಅಣ್ಣ ಅತ್ತಿಗೆಯ ದಾಸನಾಗಿದ್ದ. ಅತ್ತಿಗೆಯ ಬೈಗುಳ ಹೊಡೆತಗಳನ್ನು ತಿಂದು, ಒಂದು ತುತ್ತಿನ ಅನ್ನಕ್ಕಾಗಿ, ಹಿಂಸೆಗಳನ್ನು ಅನುಭವಿಸುತ್ತಿರುವ ತಮ್ಮ ತಂಗಿಯರನ್ನು ಕಂಡು ರಾಧಾ ನಿಟ್ಟುಸಿರು ಬಿಡುತ್ತಿದ್ದಳು. ಅವಳಿಗೂ ಯಾವುದೇ ಸ್ವತಂತ್ರವಿರಲಿಲ್ಲ.

ಹದಿನಾರನೇ ವರ್ಷಕ್ಕೇ ಕಾಲಿಟ್ಟ ಶಾರದಳಿಗೆ ಅತ್ತಿಗೆ ಒಂದು ಗಂಡನ್ನು ಗೊತ್ತು ಮಾಡಿ, ಮದುವೆಯನ್ನು ನಿಶ್ಚಯಿಸಿದಳು. ಆ ಗಂಡು ಶಾರದಳಿಗೆ ಅನುರೂಪನಾಗಿರಲಿಲ್ಲ. ತೆಳ್ಳಗೆ ಬೆಳ್ಳಗೆ ಬಳಕುವ ದೇಹದ ಬಾಲೆ ಶಾರದ ಎಲ್ಲಿ? ಹಿಡಿಂಬಾಸುರನಂತೆ, ದಪ್ಪಪುಷ್ಟವಾದ ಆರಡಿಯ ಆಜಾನುಬಾಹು ವ್ಯಕ್ತಿ ಎಲ್ಲಿ? ವಯಸ್ಸಿನಲ್ಲೂ ಸುಮಾರು ಹನ್ನೆರಡು ವರ್ಷಗಳ ಅಂತರ. ಧಡೂತಿ ದೇಹದ ರಂಗಣ್ಣ ಮೃದುಭಾಷಿಯಾಗಿದ್ದ. ನೋಡಲು ಭಯ ಹುಟ್ಟಿಸುವಂತಿದ್ದರೂ, ಹೃದಯವಂತನಾಗಿದ್ದ. ಆದರೂ ಶಾರದೆಗೆ ಅವನು ಮೆಚ್ಚುಗೆಯಾಗಿರಲಿಲ್ಲ. ರಾಧಾ ತಂಗಿಗೇ ಸಮಾಧಾನ ಹೇಳಿದಳು. ಅಮ್ಮ ಅಪ್ಪ ಬದುಕಿದ್ದಿದ್ದರೆ ಹೀಗಾಗುತ್ತಿರಲಿಲ್ಲ ಎಂದು ಎಲ್ಲರೂ ಆಡಿಕೊಳ್ಳುವವರೇ.. ಆದರೂ ಮದುವೆ ನೆರವೇರಿತು. ಆದರೆ ಮದುವೆಯಲ್ಲಿ ವರೋಪಚಾರದಲ್ಲಿ ಕಡಿಮೆಯಾಯಿತು. ಕೊಟ್ಟದ್ದು ಸಾಲದು ಎನ್ನುವ ಆಕ್ಷೇಪಣೆಯೊಂದಿಗೆ, ಶಾರದೆಯನ್ನು ಮನೆ ತುಂಬಿಸಿಕೊಳ್ಳಲಿಲ್ಲ ಅತ್ತೆ.

ಮೂರು ತಿಂಗಳ ನಂತರ ಶೋಭನ ಮಾಡಿಕೊಡುವಾಗ, ಈಗ ಕೈತಪ್ಪಿದ್ದನ್ನು ಕೊಡುವುದಾಗಿ, ಅಣ್ಣ ಮಾತುಕೊಟ್ಟ ಮೇಲೆ ಬೀಗರು ಶಾಂತರಾದದ್ದು ಶಾರದೆಯಂತೂ ಅತ್ತೂ ಅತ್ತೂ ಮುಖವನ್ನು ಊದಿಸಿಕೊಂಡಿದ್ದಳು.

ಮೂರು ತಿಂಗಳುಗಳು ಕಳೆದರೂ ಶೋಭನದ ಪ್ರಸ್ತಾಪವೇ ಬರದಿದ್ದಾಗ, ರಂಗಣ್ಣ ಹಾಗೂ ಅವನ ತಾಯಿ ಪತ್ರಗಳನ್ನು ಬರೆಸಿದರು. ಒಮ್ಮೆ ಬಂದು ಹೋದರು. ಆದರೂ ಅಣ್ಣ ಅತ್ತಿಗೆ ಕೈಯಾಡಿಸಿ ಬಿಟ್ಟರು. ಈಗ ನಮ್ಮ ಕೈಯಲ್ಲಿ ಹಣವಿಲ್ಲ. ಮದುವೆಯಾಗಿ ಮಾಡಿದ ಸಾಲವೇ ಬಡ್ಡಿಯಿಂದ ಬೆಳೆಯುತ್ತಿದೆ. ಮದುವೆ ಮಾಡಿಕೊಟ್ಟಾಗಿದೆ. ಬೇಕಾದರೆ ಕರೆದುಕೊಂಡು ಹೋಗಿ ಇಲ್ಲದಿದ್ದರೆ ನಾನು ಕಳಿಸಿಕೊಡುವವರೆಗೆ ಸುಮ್ಮನಿರಿ ಎಂದು ಬಿಟ್ಟರು.

ಮಡದಿಯ ಬಗ್ಗೆ ನಾನಾ ಆಸೆಗಳನ್ನು ಇಟ್ಟುಕೊಂಡಿದ್ದ ರಂಗಣ್ಣನಿಗೆ ಮೂರು ತಿಂಗಳುಗಳು ಕಳೆದಿದ್ದೇ ಸಾಕು ಎನಿಸಿತ್ತು. ಈಗ ನೋಡಿದರೆ ಹೀಗೆ. ಎಷ್ಟಾಗಲೀ ತಂದೆ ತಾಯಿ ಇಲ್ಲದವಳು, ಇವರು ಹೀಗೆ ತಕರಾರು ಮಾಡುತ್ತಲೇ ಇದ್ದರೆ, ನಾವಿಬ್ಬರೂ ದೂರ ದೂರವೇ ಇರುವಂತಾಗುತ್ತದೆ ಎಂದುಕೊಂಡು ಬೇಸರಿಸಿದ. ಈ ಮಧ್ಯೆ ರಂಗಣ್ಣನ ತಂದೆ ಖಾಯಿಲೆ ಮಲಗಿದರು. ಅವರಿಗೆ ಸೊಸೆಯನ್ನೊಮ್ಮೆ ನೋಡಬೇಕೆನಿಸಿತು. ಅವರು ಹೇಳಿದ್ದೇ ಸಾಕು ಎನ್ನುವಂತೆ ರಂಗಣ್ಣ ತಾನೆ ಖುದ್ದಾಗಿ ಹೋಗಿ ಹೆಂಡತಿಯನ್ನು ಮನೆಗೆ ಕರೆತಂದ.

ತಂದೆಯ ಖಾಯಿಲೆ ಉಲ್ಬಣಿಸಿತ್ತು. ತಾಯಿ ಗಂಡನ ಶುಶ್ರೂಷೆಯಲ್ಲಿ ತೊಡಗಿದ್ದಳು. ಮನೆ ಕೆಲಸಕಾರ್ಯಗಳನ್ನು ಅರಿತಿದ್ದ ಶಾರದೆ ಅತ್ತೆಗೆ ಸಹಾಯಕಳಾಗಿ ಓಡಾಡಿಕೊಂಡಿದ್ದಳು. ರಂಗಣ್ಣನ ಪ್ರೀತಿಯ ಕಣ್ಣುಗಳು ಶಾರದೆಯ ಮೇಲೆ ಹರಿದಾಡಿದವು. ಪ್ರೀತಿಯ ಮಾತುಗಳನ್ನಾಡಿ, ರಂಗಣ್ಣ ಶಾರದೆಯನ್ನು ಒಲಿಸಿಕೊಂಡ. ಎಷ್ಟಾಗಲೀ ಮದುವೆಯಾದ ಗಂಡ, ಭಯದಿಂದ ತತ್ತರಿಸಿ ಹೋಗಿದ್ದ ಶಾರದೆ ಅವನ ಒರಟಾದ ಆಲಿಂಗನದಲ್ಲಿ ಜಜ್ಜಿ ಹೋದಳು.. ಮೂಕವಾಗಿ ಅಳುವುದೊಂದೇ ಅವಳಿಗೆ ತೋರಿದ ಮಾರ್ಗ.

ಇದೇ ಸಮಯದಲ್ಲಿ ರಂಗಣ್ಣನ ತಂದೆ ನಿಧನರಾಗಿ ಹೋದರು. ಅವರನ್ನು ನೋಡಲೆಂದು ಬಂದ ಅಣ್ಣ ಅತ್ತಿಗೆಯರ ಜೊತೆ ಶಾರದೆ ವಾಪಸ್ಸು ಬಂದುಬಿಟ್ಟಳು. ದಿನ ಕಾರ್ಯಗಳು ಮುಗಿದ ನಂತರ ರಂಗಣ್ಣ ಶಾರದೆಯನ್ನು ಕಳಿಸಿಕೊಡಿ ಎಂದು ಪತ್ರ ಬರೆದಾಗ, ಶಾಸ್ತ್ರಗಳು ಅಡ್ಡಿ ಬಂದವು. ತಂದೆಯ ಕರ್ಮವನ್ನು ಮಾಡಿದವನು ಹಸೆಮಣೆ ಏರುವಂತಿಲ್ಲ. ಆರತಿ ಎತ್ತಿಸಿಕೊಳ್ಳುವಂತಿಲ್ಲ. ಇನ್ನು ಶೋಭನ ಮಾಡಿಕೊಳ್ಳುವುದೆಂದರೇ? ವರ್ಷ ಕಳೆಯಲಿ. ನಂತರ ಒಳ್ಳೆಯ ಮುಹೂರ್ತವನ್ನು ಇಟ್ಟು ಶಾಸ್ತ್ರೋಕ್ತವಾಗಿ ಕಳಿಸಿಕೊಡಬೇಕೆಂದು ಶಾಸ್ತ್ರಿಗಳು ನುಡಿದರು.

ನಿಮ್ಮ ತಂಗಿಯ ಕಾಲ್ಗುಣ ಚೆನ್ನಾಗಿಲ್ಲ. ಮದುವೆಯಾದ ಮೂರು ನಾಲ್ಕು ತಿಂಗಳಿಗೆ ಮನೆಯ ಯಜಮಾನರು ತೀರಿ ಹೋದರು. ನನ್ನ ಮಗ ಈಗ ದುಃಖದಲ್ಲಿದಾನೆ. ನಮಗೆ ಯಾವ ಶಾಸ್ತ್ರ ಸಂಬಂಧಗಳು ಬೇಡ. ನನ್ನ ಮಗನಿಗೆ ಹೆಂಡತಿಯ ಒಡನಾಟ ಬೇಕಾಗಿದೆ. ಕಳಿಸಿಕೊಡಿ ಎಂದು ರಂಗಣ್ಣನ ತಾಯಿಯೂ ಜಬರ್ದಸ್ತಿ ಮಾಡಿದಾಗ ಮಾತು ಮಾತು ಮುಂದುವರೆದು ಜಗಳದಲ್ಲಿ ಅಂತ್ಯ ಗೊಂಡಿತು.

"ಸಂಬಂಧಿಕರು ಆಡಿಕೊಂಡು ನಗ್ತಾರೆ. ಗೊತ್ತಿದ್ದೂ ಗೊತ್ತಿದ್ದೂ ಈಗ ಈ ಶಾಸ್ತ್ರವನ್ನು ಮಾಡುಕ್ಕೆ ಆಗ್ಲುಲ್ಲ. ವರ್ಷ ಕಳೆಯಿಲಿ. ಜುಂ ಅಂತ, ವಿಜೃಂಭಣೆಯಿಂದ ನನ್ನ ತಂಗಿಯನ್ನು ಕಳಿಸಿಕೊಡ್ತೀನಿ. ಈಗ ಬೇಡ" ಅಣ್ಣ ಕೇಳಿಕೊಂಡ.

"ಸಾಕಯ್ಯ ನಿನ್ನ ಪುರಾಣ. ಬೆಳೆದ ತಂಗಿಯನ್ನು ಬೇಕಾಬಿಟ್ಟಿಯಾಗಿ ಮದುವೆ ಮಾಡಿಕೊಟ್ಟದ್ದೂ ಅಲ್ಲದೇ, ಈಗ ನನ್ನ ಮಗನಿಗೆ ಅವಳ ಅಗತ್ಯವಿರುವಾಗ ಕಳಿಸಿಕೊಡದೇ ತಲೆಯೆಲ್ಲಾ ಮಾತನಾಡಬೇಡ. ಈಗ ನನ್ನ ಸೊಸೆ ನನ್ನ ಮನೆಗೆ ಬಂದರೆ ಸರಿ. ಇಲ್ಲದಿದ್ದರೆ, ನಿನ್ನ ತಂಗಿಯನ್ನು ನಿನ್ನ ಮನೇಲೇ ಇಟ್ಟುಕೋ. ನಾನು ನನ್ನ ಮಗನಿಗೆ ಬೇರೆ ಮದ್ವುವೆ ಮಾಡ್ತೀನಿ." ಆಕೆಯೂ ದಾಡಿಸಿದಳು.

ಕೋಪದ ಭರಾಟೆಯಲ್ಲಿ ಮಾತುಗಳು ಎತ್ತೆತ್ತಲೋ ತಿರುಗಿದವು. ಅವರುಗಳ ಬೆದರಿಕೆಗೆ ಅಣ್ಣ ಜಗ್ಗಲಿಲ್ಲ. "ಹೇಗೂ ವರ್ಷ ಕಳೆಯದೇ ಯಾವ ಶುಭದ ಮಾತನ್ನಾಡುವಂತಿಲ್ಲ. ಮತ್ತೆ ಮದುವೆ ಹೇಗೆ ಆಗ್ತಾನೆ? ಇವನ ಮೂತಿಗೆ ಯಾರು

ಹೆಣ್ಣು ಕೊಡ್ತಾರೆ? " ಅಣ್ಣನ ಮಾತುಗಳು ಶಾರದೆಯ ಕಿವಿಗೆ ಬಿದ್ದವು. ಮುಸಿಮುಸಿ ಅತ್ತಳು ಅಕ್ಕನಿಗೆ ಪತ್ರವನ್ನಾದರೂ ಬರೆಯಬೇಕೆಂದು ಹಾಳೆ, ಪೆನ್ನು ಹುಡುಕಿಟ್ಟು ಕೊಂಡಳು. ಅಷ್ಟರಲ್ಲಿ ಅತ್ತಿಗೆ ಬಂದವಳು ಪೆನ್ನನ್ನು ಕಿತ್ತುಕೊಂಡಳು.

ಗಂಡನಿಗೆ ಕದ್ದು ಮುಚ್ಚಿ ಪತ್ರ ಬರೆಯುತ್ತಿದಾಳೆಂದು ಮೂತಿ ಮೂತಿ ತಿವಿದು ಮತ್ತು ಮನಸ್ಸನ್ನು ನೋಯಿಸಿದಳು. ಅಲ್ಲದೇ ಅವಳಿಗೆ ಹೆದರಿಕೆ ಕಾಡಿತ್ತು. ನಿಸ್ಸಹಾಯಕಳಾಗಿ ಮಲಗಿದ್ದವಳಲ್ಲಿ ಏನೋ ಆತಂಕ, ಏನೋ ಭಯ. ಮದುವೆ ಶೋಭನ ಅಂದರೆ ಏನು ಅಂತ ಅರಿಯದವಳೇನಲ್ಲ. ತನ್ನ ಗಂಡ ತನ್ನೊಡನೆ ದೇಹ ಸಂಬಂಧವನ್ನು ಬೆಳೆಸಿದ್ದ ಪರಿಣಾಮವನ್ನು ಗುರುತಿಸಿದ್ದಳು. ಮುಟ್ಟಿನ ದಿನಗಳು ಮುಂದೆ ಹೋಗಿದ್ದವು. ಮುಂದೇನು ಗತಿ? ಯಾರಿಗೆ ಹೇಳುವುದು? ಈ ವಿಷಯ ಬಯಲಿಗೆ ಬಂದರೆ ಬದುಕಿದ್ದು ಸತ್ತಂತೆ. ಅತ್ತಿಗೆ ಅಣ್ಣ ಮನೆಯಿಂದ ಹೊರ ಹಾಕಬಹುದು. ಅತ್ತೆ ಮನೆಯನ್ನು ಸೇರಿಸದಿರಬಹುದು. ಒಟ್ಟಿನಲ್ಲಿ ನನ್ನ ಬಾಳು ಮುಗಿಯಿತು ಎಂದು ಅತ್ತಳು.

"ಯಾಕೇ ಅತ್ತೆ ಅಳ್ತಿದೀಯ" ಎಂದು ಕೇಳಿದ ಅಣ್ಣನ ಮಗಳನ್ನು ತಬ್ಬಿಕೊಂಡು ಮುದ್ದಿಟ್ಟಳು. ತನ್ನ ಒಡಲಲ್ಲೂ ಒಂದು ಕೂಸು ಬೆಳೆಯುತ್ತಿದೆ. ಆದರೆ ಮುದ್ದಾಗಿರದೆ ಗಂಡನಂತೆ ವಡ್ಡು ವಡ್ಡಾಗಿದ್ದರೇ.. ಆ ಅನಿಸಿಕೆಯೇ ಅವಳ ಹೊಟ್ಟೆಯಲ್ಲಿ ತಳಮಳವನ್ನುಂಟು ಮಾಡಿತು. ಮಗು ಹೇಗೇ ಬೆಳೆಯಲಿ, ಈಗ ಈ ವಿಷಯವನ್ನು ಬಹಿರಂಗಗೊಳಿಸುವಂತಿಲ್ಲ. ಎಲ್ಲರೂ ನನ್ನನ್ನೇ ದೂಷಿಸುತ್ತಾರೆ. ಮರ್ಯಾದೆಯಿಂದ ತಲೆ ಎತ್ತಿ ನಡೆಯಲೂ ಅಗೆ ಸ್ಥಿತಿ ನನಗೆ ಒದಗಿದೆ. ತಾಯಿ ಬದುಕಿದ್ದಿದ್ದರೇ.. ಈ ಕಷ್ಟಕ್ಕೆ ಖಂಡಿತಾ ಒದಗಿರುತ್ತಿದ್ದಳು. ಈ ಅತ್ತಿಗೆ ನನಗೆ ತಾಯಿಯಾಗಲು ಖಂಡಿತಾ ಸಾಧ್ಯವಿಲ್ಲ. ಯಾರಿಗೂ ಈ ವಿಷಯ ತಿಳಿಯಕೂಡದು ಇದಕ್ಕೆಲ್ಲಾ ಒಂದೇ ದಾರಿ.. ಆತ್ಮಹತ್ಯೆ?

ಈ ಪರಿಹಾರ ಹೊಳೆದದ್ದೇ ತಡ, ಬೇರೆ ಆಲೋಚನೆ ಅವಳಲ್ಲಿ ಬರಲಿಲ್ಲ. ಹಗಲೂ ರಾತ್ರಿ ಅದೇ ಚಿಂತೆ.. ಅದಕ್ಕಾಗಿ ಸಮಯವನ್ನು ಕಾಯುತ್ತಿದ್ದಳು. ಒಂದು ದಿನ ಅಣ್ಣ ಅತ್ತಿಗೆ ಯಾವುದೋ ಮದುವೆಗೆ ಹೋಗಿದ್ದರು. ಮಕ್ಕಳು ಸ್ಕೂಲಿನಿಂದ ಬಂದಿರಲಿಲ್ಲ. ಅಡಿಗೆ ಮನೆಯಲ್ಲಿದ್ದ ಸೀಮೆಯಣ್ಣೆಯನ್ನು ಮೈಮೇಲೆ ಸುರಿದು ಕೊಂಡಳು. ಬೆಂಕಿಯ ಕಡ್ಡಿಯನ್ನು ಗೀರಿ, ಬಟ್ಟೆಗೆ ಹೊತ್ತಿಸಿಕೊಂಡಳು, ಅಷ್ಟೇ ಅಲ್ಲಿಗೆ ಎಲ್ಲಾ ಮುಗಿಯಿತು. ತೆಳ್ಳಗೆ ಬೆಳಗ್ಗೆ ಹೊಳೆಯುವ ದೇಹ ಕರಕಲಾಗಿತ್ತು.

ಪೋಲಿಸರು ಬಂದರು. ಕೇಸು ಬರೆದುಕೊಂಡರು. ದೇಹವನ್ನು ಮಹಜರು ಮಾಡಿಸಿದರು. ಆಗ ಅವಳು ಎರಡು ತಿಂಗಳ ಗರ್ಭಿಣಿಯಾಗಿದ್ದಳೆಂದು ತಿಳಿದಾಗ, ರಂಗಣ್ಣ ಎದೆ ಎದೆ ಬಡಿದುಕೊಂಡು ಅತ್ತ. ಶಾರದೆಯನ್ನು ಕೆಡಿಸಿದವನು ನಾನೇ,

ಅವಳು ಗರ್ಭಿಣಿ ಅಂತ ನನ್ನೊಡನೆ ಹೇಳಬಾರದಾಗಿತ್ತೇ.. ನಾನು ಆಕ್ಷಣವೇ ನನ್ನ ಮನೆಗೆ ಕರೆದುಕೊಂಡು ಹೋಗುತ್ತಿದ್ದೆ ಎಂದು ಬಿದ್ದು ಬಿದ್ದು ಅತ್ತ.

ಶಾರದೆಯ ಸಾವಿಗೆ ನಾನೇ ಕಾರಣ ಎಂದು ಎಲ್ಲರಲ್ಲೂ ಹೇಳಿಕೊಂಡ. ಅಣ್ಣ ಅತ್ತಿಗೆ ತಲೆ ತಗ್ಗಿಸಿ ನಿಂತಿದ್ದರು. ಶಾರದೆ ಈ ವಿಷಯವನ್ನು ಮುಚ್ಚಿಟ್ಟು ನಮ್ಮನ್ನು ಕೆಟ್ಟವರನ್ನಾಗಿ ಮಾಡಿದಳು. ನಾವೇ ಕೊಲೆಗಾರರು ಅನ್ನುವಂತೆ ಎಲ್ಲರೂ ನಮ್ಮನ್ನೇ ನೋಡ್ತಿದಾರೆ. ಅತ್ತಿಗೆ ಮೊಸಳೆ ಕಣ್ಣೀರು ಸುರಿಸಿದಳು.

ರಾಧಾಳ ಒಡಲಲ್ಲಿ ಬೆಂಕಿ ಹತ್ತಿ ಉರಿಯುತ್ತಿತ್ತು. ಒಟ್ನಲ್ಲಿ ಎಲ್ಲಾ ಸೇರಿ ಶಾರದೆಗೆ ಅನ್ಯಾಯ ಮಾಡಿಬಿಟ್ಟರು. ಇಂಥ ಒಂದು ನಿರ್ಧಾರ ತೆಗೆದುಕೊಳ್ಳಬೇಕಾದ್ರೆ ಅವಳ ಪುಟ್ಟ ಹೃದಯ ಎಷ್ಟು ಅತ್ತಿರಬೇಕು. ಅವಳ ಬಿಸಿ ಕಣ್ಣೀರಿನ ತಾಪ ಇವರುಗಳನ್ನು ಸುಡದೇ ಬಿಡುವುದಿಲ್ಲ. ಎಂದು ತನ್ನಲ್ಲೇ ಹೇಳಿಕೊಂಡಳು.

ಶಾರದೆ ಮಲಗುತ್ತಿದ್ದ ಹಾಸಿಗೆಯ ದಿಂಬಿನ ಕೆಳಗೆ ಒಂದು ಚಿಕ್ಕ ಚೀಟಿ ಸಿಕ್ಕಿತ್ತು. "ನನ್ನ ಸಾವಿಗೆ ನಾನೇ ಕಾರಣ, ಬೇರೆ ಯಾರೂ ಅಲ್ಲ ಎಂದು ಬರೆದಿದ್ದಳು. ಅದರೊಂದಿಗೆ, ಒಂದು ಜೊತೆ ಓಲೆಗಳು, ಹಾಗೂ ಕರಿಮಣಿಸರವೂ ಇದ್ದಿತು. ಇವುಗಳನ್ನು ತನ್ನ ಗಂಡನ ಮನೆಗೆ ಕೊಟ್ಟು ಬಿಡಬೇಕೆಂದು ತಿಳಿಸಿದ್ದಳು.

ಅವನು ಅವುಗಳನ್ನು ತನ್ನ ಎದೆಗೆ ಒತ್ತಿಕೊಂಡು ಬಿಕ್ಕಿ ಬಿಕ್ಕಿ ಅತ್ತ. ನಂತರ ಅಲ್ಲಿಗೆ ಶಾರದೆಯ ಕತೆ ಮುಗಿಯಿತು. ಉಳಿದದ್ದು ಅವಳ ನೆನಪುಗಳು ಮಾತ್ರ. ರಾಧಾಳ ಕಣ್ಣುಗಳ ಎದುರಿಗೆ ಅವಳ ಕರಾಳ ರೂಪ ಕಂಡು ಬರುತ್ತಿತ್ತೇ ವಿನಃ ಅವಳ ಸುಂದರ ರೂಪದಲ್ಲಿ ಮನ ಮುದುಡಿ ಹೋಗುತ್ತಿತ್ತು.

ಕೆಲವಾರು ವರ್ಷಗಳ ನಂತರ, ಅವನೇ ಖುದ್ದಾಗಿ ಬಂದು ತನ್ನ ಮದುವೆಯ ಆಹ್ವಾನ ಪತ್ರಿಕೆಯನ್ನು ಕೊಟ್ಟು ಹೋಗಿದ್ದ. ಮದುವೆಯ ನಂತರ ಒಂದೆರಡು ತಿಂಗಳು ಸಂಸಾರ ಮಾಡಿದ್ದನೋ ಇಲ್ಲವೋ ಅವನ ಹೆಂಡತಿ ಬಾವಿಗೆ ಬಿದ್ದು ಸತ್ತು ಹೋಗಿದ್ದಳು. ಎಲ್ಲರೂ ಆಕಸ್ಮಿಕವಾಗಿ ಕಾಲು ಜಾರಿ ಬಿದ್ದು ಸತ್ತಿದ್ದು ಎಂದರು. ಒಟ್ಟಿನಲ್ಲಿ ಅವನಿಗೆ ಹೆಂಡತಿಯೊಡನೆ ಬಾಳ್ವೆ ನಡೆಸುವ ಯೋಗವಿರಲಿಲ್ಲ. ಮತ್ತೆ ಮದುವೆ ಮಾಡಲು, ಅವನ ತಾಯಿ ಹೆಣ್ಣುಗಳನ್ನು ಹುಡುಕುತ್ತಿದಾಳೆಂಬ ವರ್ತಮಾನ ಬಂದಿತ್ತು. ಆದರೆ ಯಾವ ಹೆಣ್ಣಿನವರೂ ಮುಂದೆ ಬಂದಿರಲಿಲ್ಲ. ತಾಯಿ ಬದುಕಿರುವ ವರೆಗೂ ಅಮ್ಮ ಮಗ ಒಟ್ಟಿಗೇ ಇದ್ದರು. ಅಮ್ಮ ಸತ್ತ ನಂತರ, ಅವನು ತನ್ನ ಭಾಗದ ಗದ್ದೆ ಹೊಲ ಮನೆಗಳನ್ನು ಮಾರಿ, ಯಾವುದೋ ಆಶ್ರಮಕ್ಕೆ ಸೇರಿಕೊಂಡಿರು ವನೆಂಬ ವದಂತಿ ತಿಳಿದಿತ್ತು.

"ಪಾಪ, ಹುಶಾರಿಲ್ಲದೇ ಮಲಗಿದಾನಂತೆ. ಅವನ ಮನಸ್ನಲ್ಲಿ ಏನಿದೆಯೋ ಆಮೇಲೇನಾದರೂ ಹೆಚ್ಚು ಕಡಿಮೆ ಆಗಿಬಿಟ್ಟರೇ.. ಹೇಳಿದರೂ ಹೋಗಿ ನೋಡಲಿಲ್ಲ

ವಲ್ಲ ಅನ್ನೋ ಮಾತು ಕಡೇ ತನಕ ಉಳಿದು ಬಿಡುತ್ತೆ" ಎಂದು ರಾಜನಿಗೆ ಹೇಳಿ ಹೋಗಿ ನೋಡುವ ತೀರ್ಮಾನವನ್ನು ತಿಳಿಸಿದಳು.

ಎರಡು ದಿನಗಳ ನಂತರ, ಸಮೀಪದಲ್ಲಿರುವ ರಂಗಣ್ಣನಿದ್ದ ಹಾಸ್ಟೆಲ್‌ಗೆ ಬಂದರು. ಅಲ್ಲಿಯ ಮುಖ್ಯಸ್ಥರನ್ನು ಕಂಡು, ತಮ್ಮ ಪರಿಚಯವನ್ನು ಹೇಳಿಕೊಂಡು ವಿಷಯವನ್ನು ತಿಳಿಸಿದರು. ಅವರುಗಳು ಮುಖ ಮುಖ ನೋಡಿಕೊಂಡರು. ಒಳಗಿನಿಂದ ಒಬ್ಬರು ಒಂದು ಸಣ್ಣ ಕವರನ್ನು ತಂದುಕೊಟ್ಟರು. ರಾಜ ಅದನ್ನು ಒಡೆದು ನೋಡಿದ. ಅದರಲ್ಲಿ ಒಂದು ಜೊತೆ ಓಲೆಗಳಿದ್ದವು. ಒಂದು ಪತ್ರವೂ ಇದ್ದಿತು.

ಅತ್ತಿಗೆಮ್ಮನಿಗೆ ನಮಸ್ಕಾರಗಳು. ನಾನೊಮ್ಮೆ ನಿಮ್ಮನ್ನು ಖುದ್ದಾಗಿ ನೋಡಿ, ನನ್ನ ಮನದ ದುಃಖವನ್ನು ತೋಡಿಕೊಳ್ಳಬೇಕೆಂದುಕೊಂಡೆ. ಆದರೆ ಯಾಕೋ ಅದೂ ಸಾಧ್ಯವಾಗುತ್ತಿಲ್ಲ. ನನ್ನಂತಹ ನಿರ್ಭಾಗ್ಯನನ್ನು ನೋಡಲು ನೀವು ಹಿಂಜರಿಯುತ್ತಿರಬಹುದು. ನಾನೇನು ಮಾಡಲಿ? ನನ್ನ ಜಾತಕವೇ ಅಂತಹದು. ಎಲ್ಲರನ್ನೂ ಕಳೆದುಕೊಂಡು, ಒಂಟಿಯಾಗಿ ನನ್ನ ದಿನಗಳನ್ನು ಕಳೆದಿದ್ದೇನೆ. ಶ್ರೀ ರಾಮಕೃಷ್ಣ ಪರಮಹಂಸರ ಸನ್ನಿಧಿಯಲ್ಲಿ ನನ್ನ ಒಂಟಿತನವನ್ನು ಕಳೆಯಲು ಪ್ರಯತ್ನಿಸುತ್ತಿದ್ದೇನೆ. ಆದರೂ ಮನಸ್ಸು ಮಂಗನಂತೆ, ಅತ್ತಿತ್ತ ಸರಿದಾಡುತ್ತಾ ಎಲ್ಲರನ್ನೂ ನನ್ನ ಬಳಿಗೆ ಕರೆತಂದು ನೆಮ್ಮದಿ ಇಲ್ಲದಂತೆ ಮಾಡುತ್ತದೆ. ನೆಮ್ಮದಿ ಸಿಗುವುದು ನನಗೆ ಆದಿನ ಮಾತ್ರ. ನನ್ನ ಅಂತ್ಯ ಸಮೀಪಿಸಿದ ದಿನ.

ಈ ಓಲೆಗಳು ಶಾರದೆಯದ್ದು. ಏಕೋ ಏನೋ ಇದನ್ನು ನನ್ನ ಇನ್ನೊಬ್ಬ ಮಡದಿಗೆ ಕೊಡುವ ಮನಸ್ಸು ಬರಲಿಲ್ಲ. ಶಾರದೆಯ ನೆನಪಿಗಾಗಿ ನನ್ನ ಬಳಿಯೇ ಇಟ್ಟುಕೊಂಡೆ. ಇದನ್ನೂ ಕಾಣಿಕೆಯನ್ನಾಗಿ ನಾನು ನಿಮಗೆ ಕೊಡುತ್ತಿದ್ದೇನೆ. ಬೇಡ ಅನ್ನಬಾರದು. ನೀವು ತೆಗೆದುಕೊಳ್ಳದಿದ್ದರೆ ನನ್ನ ಆತ್ಮಕ್ಕೆ ಶಾಂತಿ ಸಿಗುವುದಿಲ್ಲ.

ನನಗೆ ರಕ್ತದ ಒತ್ತಡ, ಸಕ್ಕರೆ ಖಾಯಿಲೆ ಇದೆ. ಲಿವರ್, ಕಿಡ್ನಿ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಡಾಕ್ಟರು ಹೇಳಿದ್ದಾರೆ. ಬದುಕಿರುವಾಗಲೇ ನಿಮ್ಮನ್ನು ನೋಡಿ ಮಾತನಾಡಿ, ಶಾರದಳ ಬಳಿಗೆ ಹೋಗುವ ಆಸೆಯಿಂದ ನಿಮಗಾಗಿ ಕಾಯುತ್ತಿದ್ದೇನೆ.

ಇತಿ ನಿರ್ಭಾಗ್ಯ ರಂಗಣ್ಣ.

ರಾಜ ಅವರ ಕಡೆ ನೋಡಿದ ಅವರು ತಲೆಯಾಡಿಸಿದ್ದರು ಪತ್ರವನ್ನು ಬೇರೊಬ್ಬರ ಕೈಯಲ್ಲಿ ಬರೆಸಿ, ಅವನು ಸಹಿ ಹಾಕಿದ್ದ. ರಾಜ ಪತ್ರವನ್ನು ಓದಿ ಮಡಿಸಿದ. ಓಲೆಗಳನ್ನು ಕವರಿನೊಳಕ್ಕೆ ಹಾಕಿದ್ದ.

"ನಡಿಯಮ್ಮ ಹೋಗೋಣ. ಅವರು ಇಲ್ಲಿಲ್ಲ" ಎಂದ. ಅಷ್ಟರಲ್ಲಾಗಲೇ ರಾಧಾಳಿಗೆ ಅನುಮಾನ ಬಂದಿತ್ತು. ತಳಮಳದಿಂದ ರಾಜನ ಕಡೆ ನೋಡಿದಳು.

"ಅವತ್ತೇ ಬಂದಿದ್ದರೆ ಅವನ ಮುಖವನ್ನಾದರೂ ಕಡೇ ಸಲ ನೋಡಬಹುದಾಗಿತ್ತು. ಎಂಥಾ ಕೆಲಸವಾಯ್ತು ನೋಡು. ಯಾವತ್ತು ಸತ್ತದ್ದು? " ಅಲ್ಲಿಯವರನ್ನು ಕೇಳಿದಳು.

"ಮೂರು ದಿನ ಆಯ್ತು. ಅದೇ ಅವತ್ತು ನಿಮಗೆ ಫೋನು ಮಾಡಿಸಿದ್ದರಲ್ಲ. ಅವತ್ತೇ.. ಅವತ್ತೇ ತೀರಿ ಹೋದರು. "

"ಮತ್ಯಾಕೆ ನಮಗೆ ತಿಳಿಸಲಿಲ್ಲ? "

"ಬದುಕಿದ್ದಾಗ ಬಂದರೆ ಸರಿ.. ಇಲ್ಲದಿದ್ದರೆ ಸತ್ತ ಮೇಲೆ ತಿಳಿಸಬೇಡಿ. ಸತ್ತ ಮುಖವನ್ನು ಯಾರೂ ನೋಡುವುದು ಬೇಡ ಎಂದಿದ್ದರು. ನಾವು ಯಾರಿಗೂ ತಿಳಿಸಲಿಲ್ಲ. ನಿಮಗೆ ಈ ಕಾಗದವನ್ನು ತಲುಪಿಸುವಂತೆ ಹೇಳಿದ್ದರು. ಒಂದು ವೇಳೆ ನೀವು ಬರದೇ ಇದ್ದಿದ್ದರೂ, ಮನೆಗೆ ತಲುಪಿಸುತ್ತಿದ್ದೆವು." ಆತ ನುಡಿದ.

ರಾಧಾಳ ಕಣ್ಣಾಲಿಗಳು ತುಂಬಿ ಬಂದಿದ್ದವು. ಆಟೋದಲ್ಲಿ ಕುಳಿತಾಗ, ರಾಜ ಕಾಗದದಲ್ಲಿದ್ದ ವಿಷಯವನ್ನು ತಿಳಿಸಿದ. ಹಾಗೂ ಓಲೆಗಳನ್ನು ತೋರಿಸಿದ.

"ಅವನಿಗೆ ಶಾರದೆಯ ಮೇಲೆ ಬಹಳ ಪ್ರೀತಿಯಿತ್ತು. ಈ ಪ್ರೀತಿಯನ್ನು ಶಾರದ ಅರ್ಥ ಮಾಡಿಕೊಳ್ಳಲಿಲ್ಲ. ಅವಳು ಸಾಯಬಾರದಾಗಿತ್ತು. ಅವಳು ಸತ್ತು ಸಾಧಿಸಿದ್ದೇನು? ಇದ್ದು ಜಯಿಸಬೇಕಾಗಿತ್ತು." ಗಂಟಲು ಉಬ್ಬಿ ಬಂದಿತ್ತು.

"ಆದರೆ.. ಆ ಕಾಲದಲ್ಲಿ ಸಾಧ್ಯವಿತ್ತೇನಮ್ಮ... "

"ಕಾಲ ಏನು ಮಾಡುತ್ತೆ? ಎಲ್ಲಾ ಕಾಲದಲ್ಲೂ ಒಂದು ಪರಿವರ್ತನೆಯಾಗಲೇ ಬೇಕು. ಶಾರದ ಹೇಡಿಯಂತೆ ಆತ್ಮಹತ್ಯೆ ಮಾಡಿಕೊಳ್ಳಬಾರದಾಗಿತ್ತು. ಏನೋ ನಡೆದು ಹೋಯ್ತು. ಈ ಓಲೆಗಳನ್ನು ಏನು ಮಾಡೋಣ..? ನಿಮ್ಮಪ್ಪನಿಗೆ ಇದೆಲ್ಲ ಇಷ್ಟ ವಾಗುಲ್ಲ." ರಾಜ ಸುಮ್ಮನಿದ್ದ ಮತ್ತೆ ತಾನೇ ನುಡಿದಳು.

"ಯಾವುದಾದ್ರೂ ಅಮ್ಮನವರ ದೇವಸ್ಥಾನಕ್ಕೆ ಈ ಓಲೆಗಳನ್ನು ಕೊಟ್ಟು ಬಿಡೋಣ. ಶಾರದೆಯ ಹೆಸರಿನಲ್ಲಿ ಈ ಓಲೆಗಳು ಅಮ್ಮನವರ ಆಭರಣವಾಗಿ ಬೆಳಗಲಿ" ಎನ್ನುತ್ತಾ ಓಲೆಗಳನ್ನಾ ಅತ್ತಿತ್ತ ತಿರುಗಿಸಿ ನೋಡಿದಳು. ಬಿಳಿಯ ಹರಳುಗಳು ಬೆಳಕಿಗೆ ಮಿರುಗಿದವು. "ಈ ಹರಳಿನಂತೆ ಶಾರದೆಯ ಬಾಳು ಮಿನುಗಬಾರದಾಗಿತ್ತೇ... ಸುಟ್ಟು ಕರಿಯಾಯ್ತಲ್ಲ.. ಇದ್ಯಾವ ನ್ಯಾಯ?" ಎಂದುಕೊಂಡು ನಿಟ್ಟುಸಿರುಬಿಟ್ಟಳು. ಕಣ್ಣಿನಿಂದ ಉದುರಿದ ಹನಿಗಳು ಹರಳುಗಳನ್ನು ತೋಯಿಸಿದವು.

* * *

೭. ಸನ್ಮಾನ (ಸಣ್ಣ ನಾಟಕ)

ಪಾತ್ರಧಾರಿಗಳು : ಶಾಲಿನಿ, ನಾರಾಯಣರಾಯರು(ಗಂಡ ಹೆಂಡತಿ)

ಭಕ್ತ ಮಂಡಳಿಯ ಸದಸ್ಯೆಯರು ೪ ಜನ.

ಭಜನೆ ಮಾಡುವವರು. (೮-೧೦ ಜನ)

ದೃಶ್ಯ-೧.

ರಾತ್ರಿ ೮-೩೦ ಗಂಟೆಯ ಸಮಯ, ಗಂಡ ಹೆಂಡತಿಯರು ಅದೇ ತಾನೇ ಊಟ ಮುಗಿಸಿ, ಟಿ.ವಿ.ಯಲ್ಲಿನ ಯಾವುದೋ ಕಾರ್ಯಕ್ರಮವನ್ನು ವೀಕ್ಷಿಸುತ್ತಿದ್ದಾರೆ. ಇದ್ದಕ್ಕಿದ್ದಂತೆ ಬಾಗಿಲನ್ನು ಯಾರೋ ದಬದಬ ಬಡಿದ ಸದ್ದು ಕೇಳಿ, ಬೆಚ್ಚಿಬಿದ್ದು, ಹೆದರಿ ನಿಂತಿದ್ದಾರೆ.

ನಾರಾಯಣ – ಯಾರು? ಯಾರು?

ಹೊರಗಿನಿಂದ – ನಾವು.. ಬಾಗಿಲು ತೆಗೀರ್ರೀ.. (ಒರಟಾಗಿ 4–5 ಧ್ವನಿಗಳು ಒಟ್ಟಿಗೇ ಕೇಳಿ ಬರುತ್ತವೆ)

ನಾರಾಯಣ ಯಾರೋ ಹೆಂಗಸರು ಅಂತ ಕಾಣುತ್ತೆ. ನೀನೇ ಬಾಗಿಲು ತೆಗೆದು ನೋಡು.

ಶಾಲಿನಿ– ಇಲ್ಲ, ನನಗೆ ಹೆದರಿಕೆ ಡಕಾಯಿತರು ಹೆಂಗಸರ ಧ್ವನಿಯಲ್ಲಿ ಮಾತ ನಾಡುತ್ತಿದ್ದಾರೋ ಏನೋ ನಾನು ತೆಗೆಯಲ್ಲಪ್ಪ.(ಹೆದರಿಕೆಯ ಧ್ವನಿಯಲ್ಲಿ ಹೇಳುವಳು.)

ನಾರಾಯಣ ಇಷ್ಟು ಮುಂಚೆ ಯಾವ ಡಕಾಯಿತರು ಬರುತ್ತಾರೆ? ನಾನು ನೋಡ್ತಿನಿ ತಡಿ. (ಅಷ್ಟರಲ್ಲಿ ಮತ್ತೆ ಬಾಗಿಲು ಬಡಿದ ಸದ್ದು, ನಾರಾಯಣ ಬಾಗಿಲು ತೆಗೆಯುತ್ತಾನೆ. ಅವನನ್ನು ತಳ್ಳಿಕೊಂಡೇ ನಾಲ್ಕೈದು ಜನ ಹೆಂಗಸರು ಒಳಗೆ ನುಗ್ಗುತ್ತಾರೆ.)

ಯಾರ್ರೀ ನೀವು? ಹೀಗ್ಯಾಕೆ ನುಗ್ಗಾ ಇದೀರಿ ಎಂದು ಕೇಳುವ ಪ್ರಶ್ನೆಗೆ ಉತ್ತರಿಸದೆ.

ಒಬ್ಬ ಸದಸ್ಯೆ . ಎಲ್ಲಿ ಮೇಡಂ? ಮೇಡಂ ಎಲ್ಲಿ? (ಹುಡುಕುವರು)

ನಾರಾಯಣ ಯಾವ ಮೇಡಂ? ಇಲ್ಲಿ ಯಾವ ಮೇಡಮ್ಮೂ ಇಲ್ಲ.

(೨) ಸದಸ್ಯೆ – ನಮಗೆ ಗೊತ್ರೀ, ನಿಮಗೆ ಗಂಡಸರಿಗೆ ಹೊಟ್ಟೆಕಿಚ್ಚು. ಎಲ್ಲಿ ಕರೀರಿ ಅವರನ್ನು. ಮೇಡಂ.. ಮೇಡಂ..(ಕೂಗುವರು)

(ಮರೆಯಿಂದ ಶಾಲಿನಿ ಹೊರಬಂದಳು)

ಶಾಲಿನಿ – ಯಾರು ನೀವೆಲ್ಲಾ? ಇಷ್ಟು ಹೊತ್ನಲ್ಲಿ ಏನು ಕೆಲಸ?

ಬೆಳಗಿನ ಹೊತ್ನಲ್ಲಿ ಬನ್ನಿ. ಇಷ್ಟು ಹೊತ್ನಲ್ಲಿ ನಾವು ಮನೆಯಲ್ಲಿ ಬಿಡಿಗಾಸನ್ನು ಸಹ ಇಟ್ಟುಕೊಂಡಿರೊಲ್ಲ.

೩ ಸದಸ್ಯೆ ಅಯ್ಯೋ ಶಿವನೇ! ನಮಗೆ ಗೊತ್ರೀ.. ನಿಮ್ಮ ಬಿಡಿಗಾಸು ಯಾರಿಗೆ ಬೇಕಾಗಿದೆ? ನಾವು ಚಂದಾ ಕೇಳಕ್ಕೆ ಬಂದಿದೀವಿ ಅಂತ ಅಂದ್ಕೊಂಡಿದಾರೆ ಇವರು (ಉಳಿದವರ ಕಡೆ ನೋಡಿ ನಗುವಳು ಅವರೂ ನಗುವರು) ನಮಗೇನೂ ಬೇಡ. ನಮ್ಮ ಜತೆ ಹೊರಡಿ.

ಶಾಲಿನಿ – ಎ..ಎಲ್ಲಿಗೆ ಇಷ್ಟು ಹೊತ್ನಲ್ಲಿ? (ತೊದಲುವಳು ಹೆದರುತ್ತಾ)

೪ನೆ ಸದಸ್ಯೆ ಎಲ್ಲಿಗೆ ಅಂತ ಅಪಶಕುನ ನುಡೀಬೇಡಿ.. ಸುಮ್ಮನೇ ನಡೀರಿ. ನಿಮಗೆ ಸನ್ಮಾನ ಮಾಡ್ತೀವಿ.

ಶಾಲಿನಿ – ಸನ್ಮಾನ? ನನಗೆ? ನೀವು ಯಾರೋ ಪರಿಚಯವಿಲ್ಲ ನನಗೆ.

ಸದಸ್ಯೆ – ನಿಮಗೆ ನಾವು ಪರಿಚಯವಿಲ್ಲದಿರಬಹುದು. ಆದರೆ ನಮಗೆ ನಿಮ್ಮ ಪರಿಚಯವಿದೆ. ಈ ರಸ್ತೆಯ ತಿರುವಿನಲ್ಲಿ ನಮ್ಮ ಸಂಘ ಇದೆ. ನಾವು ನಿಮ್ಮನ್ನು ನೋಡಿದೀವಿ. ನಿಮಗೆ ಸನ್ಮಾನ ಬೇಕೋ ಬೇಡವೋ? (ಆಸೆಯನ್ನು ಎಬ್ಬಿಸುವಳು)

ಶಾಲಿನಿ – (ಪಿಸುದನಿಯಲ್ಲಿ ಗಂಡನೊಡನೆ) ಯಾರ್‍ರೀ ಇವರೆಲ್ಲ.. ಸನ್ಮಾನ ಅಂತೀದಾರಲ್ಲ.. ಏನ್ರೀ ಅದು.

ನಾರಾಯಣ ಯಾರೋ ನಿನಗೆ ಅವಾರ್ಡ್ ಕೊಟ್ಟಿರಬಹುದು ನಮಗೇ ತಿಳೀದ ಹಾಗೆ... ತಮಾಷೆಯಾಗಿದೆ ಹೋಗಿ ನೋಡ್ಗೋಣ.

ಶಾಲಿನಿ – ಏನ್ರೀ ಅದು ಗುಸುಗುಸು ಪಿಸು ಪಿಸು.. ಬೇಗ ಹೊರಡಿ ಈಗಾಗಲೇ ಹೊತ್ತಾಗಿದೆ. ನಮಗ್ಯಾರಿಗೂ ಊಟ ಆಗಿಲ್ಲ. ಅಷ್ಟು ಹೊತ್ನಿಂದ ನಿಮ್ಮನ್ನ ಹುಡುಕೋದೇ ಆಗಿ ಹೋಯ್ತು. (ಆಕಳಿಸುವಳು)

ಶಾಲಿನಿ – ಏನಿಲ್ಲ. ನಮ್ಮ ಯಜಮಾನರನ್ನು ಕೇಳಿ ಬಿಟ್ಟು ಬರ್ತೀನಿ.

ಸದಸ್ಯೆ ಅವರನ್ನೇನ್ರೀ ಕೇಳುವುದು? ಸನ್ಮಾನ ಮಾಡುತ್ತಿರುವುದು ನಿಮಗೆ ಅವರಿಗಲ್ಲ. ಸುಮ್ಮನೆ ಬನ್ನಿ. (ಕೈ ಹಿಡಿದು ಎಳೆಯುವವಳು) ನೀವಾಗೇ ಬರದಿದ್ರೆ ಎತ್ಕೊಂಡು ಹೋಗ್ತೀವಿ ಅಷ್ಟೇ...

ಶಾಲಿನಿ – ಏನ್ರೀ ಅದು ಗೂಂಡಾಗಿರಿ...? ಸನ್ಮಾನ ಅಂತ ಹೇಳ್ತಾ ಇದೀರಿ? ನನಗೇಕೆ ಸನ್ಮಾನ?

ಸದಸ್ಯೆ ಅಯ್ಯೋ ಶಿವನೆ! ಯಾಕೆ ಹೀಗಾಡ್ತೀರಿ? ನೀವು ಸಾಹಿತಿ ಅಂತ ನಮಗೆ ತಿಳೀತು ಅದಕ್ಕೇ ಬಂದ್ವಿ...

ಶಾಲಿನಿ – ನಿಮಗೆ ಯಾರೊ ಸುಳ್ಳು ಹೇಳಿದಾರೆ... ನಾನು ಸಾಹಿತಿಯಲ್ಲ.

ಸದಸ್ಯೆ – ನಿಮ್ಮಂಥೋರಲ್ಲ ಹೇಳಿಕೊಳ್ಳೇದೇ ಹೀಗೆ...

ಶಾಲಿನ – ಏನ್ರೀ ಮಾಡಲಿ? (ಗಂಡನನ್ನು ಕೇಳುವಳು)

ನಾರಾಯಣ – ನಿನಗೂ ಸಮಾರಂಭ, ಸನ್ಮಾನ ಅಂತಂದರೆ ಇಷ್ಟ. ಅದೇನು ತಮಾಷೆ ಅಂತ ನೋಡಿ ಬಾ.. ನಾಳೆ ದಿನ ನಿನ್ನ ಹೆಸರು ಪೇಪರ್ನಲ್ಲಿ ಬಂದರೂ ಬರಬಹುದು.

ಶಾಲಿನಿ – ಯಾವತ್ತು ಸನ್ಮಾನ?

ಸದಸ್ಯೆ ಅದೇನು ಮೇಡಂ ಹೀಗೆ ಕೇಳ್ತೀರಿ. ಇವತ್ತೇ.. ಈಗಲೇ ಹೊರಡಿ ಹೊತ್ತಾಯ್ತು. ಎಲ್ಲಾ ನಿಮಗಾಗಿ ಕಾಯ್ತ ಕೂತಿದಾರೆ.

ಶಾಲಿನ – ಸನಗೆ ಗೊತ್ತಿರಲಿಲ್ಲ. . ಬೇರೆ ಸೀರೆ ಉಟ್ಟುಕೊಂಡು ಬರ್ತೀನಿ.

ಸದಸ್ಯೆ – ಪರವಾಗಿಲ್ಲ ನಡಿಯವ್ವೋ, ಈ ಸೀರೇನೇ ಚೆನ್ನಾಗಿದೆ. ಅಲ್ಲದೇ ಅಲ್ಲಿ ನಿಮ್ಮ ಸೀರೆ ಹೆಂಗೈತ್ತೆ ಅಂತ ನೋಡೋಕೆ ಬಂದಿರಲ್ಲ. ಹೊತ್ತಾಯ್ತು ಬನ್ನಿ. (ಶಾಲಿನಿ ಹಾಗೇ ಸೀರೆಯ ನೆರಿಗೆಗಳನ್ನು ಸರಿಪಡಿಸಿಕೊಂಡು, ಕೈಯಲ್ಲಿ ತಲೆಗೂದಲನ್ನು ಸರಿಪಡಿಸಿಕೊಳ್ಳುತ್ತಾ ಮನಸ್ಸಿಲ್ಲದ ಮನಸ್ಸಿನಲ್ಲಿ ಅವರೊಡನೆ ಹೊರಡುವಳು).

ದೃಶ್ಯ ೨

(ಒಂದು ಸಣ್ಣ ಸ್ಟೇಜು. ಒಂದು ಕಡೆ ಒಂದು ದೇವಿಯ ದೊಡ್ಡ ಪಟವನ್ನಿಟ್ಟು ಹೂವಿನ ಹಾರ ಇತ್ಯಾದಿಗಳಿಂದ ಅಲಂಕರಿಸಿದ್ದಾರೆ. ಎರಡು ದೀಪಗಳು ಮುಂದೆ ಉರಿಯುತ್ತಿವೆ. ಊದಿನ ಕಡ್ಡಿ ಹೊಗೆಯಾಡುತ್ತಿದೆ.)

8–10 ಜನ ಮಹಿಳೆಯರು, ಒಂದೇ ಬಣ್ಣದ ಸೀರೆಯನ್ನುಟ್ಟು ಕುಳಿತು, ಹರೇ ರಾಮ ಹರೇ ರಾಮ ಭಜನೆಯನ್ನು ಮಾಡುತ್ತಿದ್ದಾರೆ. ಇವರನ್ನು ನೋಡಿ ಭಜನೆಯನ್ನು ಮುಗಿಸುತ್ತಾರೆ.

ಸಂಘದ ಮುಖ್ಯಸ್ಥೆ 'ಬರಬೇಕು ಬರಬೇಕು ಸಾಹಿತಿಗಳು ಈ ಕಡೆ ಬರಬೇಕು ಈ ದಿನ ನಿಮ್ಮ ಸನ್ಮಾನ; ಈ ದಿನವೇ ನಮಗೆ ಸುದಿನ' ಎಂದು ರಾಗವಾಗಿ ಹೇಳಿ, ಒಂದಿಷ್ಟು ಹೂವಿನ ಪಕಳೆಗಳನ್ನು ಶಾಲಿನಿಯ ಮೇಲೆ ಎರಚುತ್ತಾ ಅಲ್ಲಿದ್ದ ಕುರ್ಚಿಯ ಮೇಲೆ ಕೂರಿಸುವರು.

ನಂತರ ಆಕೆಯಿಂದ ಭಾಷಣ

ಸಭಿಕರೇ, ಸಾಹಿತಿಗಳೇ, ಭಜನಾ ಮಂಡಳಿಯ ಭಕ್ತರೇ.. ಈ ದಿನ ನಮ್ಮ ಸಂಘದ ಮೊದಲನೇ ವಾರ್ಷಿಕೋತ್ಸವ.. ಯಾರಾದರೂ ಒಬ್ಬ ಮಹಿಳೆಗೆ ಸನ್ಮಾನ

ಮಾಡದಿದ್ದರೆ ನಮ್ಮ ಸಂಘಕ್ಕೆ ಏನು ಕಳೆ ಕಟ್ಟುತ್ತೆ ಅಂತ ನಿರ್ಧರಿಸಿ, ಹೆಸರಾಂತ ಸಿನಿಮಾ ತಾರೆ, ಬಿ.ವಿ.ಸರೋಜ ಅನ್ನೋರನ್ನ ಕರೆಸೋ ಏರ್ಪಾಡು ಮಾಡಿದ್ದೆವು. ಕಡೇ ಗಳಿಗೆಯಲ್ಲಿ ಆಯಮ್ಮ ಕೈಕೊಟ್ಟು ಬಿಡ್ತು.. ಹಂಗಾರೆ ಬೇರೆ ಯಾರೂ ಹೆಂಗಸ್ರೇ ಇಲ್ವಾ ಅಂತ ಯೋಚಿಸ್ತಿದ್ದಾಗ, ಈ ಮಹಾತಾಯೀನ ಕಂಡ್ವು, ನಮ್ಮ ರಸ್ತೇಲೀ ಇದಾರೆ. ನಮಗೆ ತಿಳೀನೇ ಇಲ್ವಲ್ಲ ಅಂತ ನಮ್ಮನ್ನು ನಾವೆ ಬಯ್ದುಕೊಂಡು, ದಿಢೀರನೇ ಅವರನ್ನ ಕರೆದುಕೊಂಡು ಬಂದೇ ಬಿಟ್ಟರು ನಮ್ಮ ಸದಸ್ಯೆಯರು.(ಎಲ್ಲಾ ಚಪ್ಪಾಳೆ ಹೊಡೆವರು) ಸರಸರನೆ, ಶಾಲಿನಿಯ ಕೊರಳಿಗೆ ಒಂದು ಹಳದಿ ಹೂವಿನ ಹಾರವನ್ನು ಹಾಕಿ, ಮಿಣ ಮಿಣ ಹೊಳೆಯುವ ಒಂದು ಕೆಂಪು ಶಾಲನ್ನು ಹೊದಿಸಿ, ಒಂದು ಹಣ್ಣು ತುಂಬಿದ ಬುಟ್ಟಿಯನ್ನು ಅವಳ ಕೈಗೆ ಇಡುವರು. ಫೋಟೋಗ್ರಾಫರ್ ನಾಲ್ಕಾರು ಭಂಗಿಗಳ ಫೋಟೋ ತೆಗೆಯುವನು. ಸನ್ಮಾನದಿಂದ ಉಬ್ಬಿ ಹೋದ ಶಾಲಿನಿ ಬೀಗುತ್ತಾ ಕುಳಿತಿರುವಳು. (ನೋಡುವವರಿಗೆ ಬಲಿಗೆ ಸಿದ್ಧ ಪಡಿಸಿದ ಕುರಿ ಯಂತೆ) ಈ ಕಡೆ ಬನ್ನಿ ಮೇಡಂ.. ಎಲ್ಲರಿಗೂ ಪ್ರಸಾದ ಕೊಡಬೇಕು.. ಎನ್ನುತ್ತಾ ಎಬ್ಬಿಸುವಳು.

ಶಾಲಿನಿ – ನಾನು ಭಾಷಣ ಮಾಡುವುದು ಬೇಡವಾ?

ಸದಸ್ಯೆ ಅಯ್ಯೋ ಶಿವನೇ! ಈ ನಡು ರಾತ್ರೀಲಿ ನಿಮ್ಮ ಭಾಷಣಾನ ಯಾರು ಕೇಳ್ತಾರೆ? ಎಲ್ಲರೂ ಪ್ರಸಾದ ತಗೋಳೋಕೆ ಹೊರಟು ಹೋಗಿದಾರೆ. ನೀವೂ ಮನೆಗೆ ಹೋಗಿ ಮನಿಕ್ಕಳಿ. (ಶಾಲಿನಿ ಕತ್ತಲೆಯಲ್ಲೇ ಮನೆಯನ್ನು ಬಂದು ಸೇರುವಳು)

ದೃಶ್ಯ ೩

ನಾರಾಯಣ – ಬಾಗಿಲು ತೆಗೆದು ಹೆಂಡತಿಯನ್ನು ನೋಡಿ ಏನೇ ಇಷ್ಟು ಬೇಗ ಮುಗಿದು ಹೋಯ್ತೇನೇ ಸಮಾರಂಭ? ಏನು ಕೊಟ್ಟರು?

ಶಾಲಿನಿ – ನೀವು ಬರಬೇಕಾಗಿತ್ತು ರೀ.. ಈ ಶಾಲು ಹೊದೆಸಿದರು. ಹಾರ ಹಾಕಿದರು. ಹಣ್ಣು ಹಂಪಲು ಕೊಟ್ಟಿದಾರೆ. ಕವರಿನಲ್ಲಿ ಹಣ ಇಟ್ಟಿರಬಹುದು.

ನಾರಾಯಣ ಅಂತೂ ಹೊಡೆದೆ ಛಾನ್ಸು... ಇಲ್ಲದಿದ್ರೆ ನಿನಗ್ಯಾರು ಸನ್ಮಾನ ಮಾಡುತ್ತಿದ್ರು?

ಶಾಲಿನಿ – ನನಗೂ ಗೊತ್ತಿಲ್ಲ. ನಾನಂತೂ ಇರುವರೆಗೂ ನಾನು ಒಬ್ಬರಿಗೆ ಒಂದು ಲೆಟರ್ ಸಹ ಬರೆದು ಗೊತ್ತಿಲ್ಲ.

ನಾರಾಯಣ – ಹೌದಲ್ವಾ.. ನಾನು ನೀನೂ ಇಬ್ಬರೂ ಇದೇ ಊರಿನವರು.. ಅದಕ್ಕೇ ನಿನಗೆ ಒಂದು ಪ್ರೇಮ ಪತ್ರ ಬರೆಯೋ ಅವಕಾಶ ಸಹ ಸಿಗಲಿಲ್ಲ.

ಇನ್ನಾದರೂ ಏನಾದ್ರೂ ಬರಿ. ಇಲ್ಲದಿದ್ದರೆ ಈ ಸನ್ಮಾನ ಮಾಡಿಸ್ಕೊಂಡು ಏನು ಸಾರ್ಥಕ?

ಶಾಲಿನಿ: ಥೂ, ಹೋಗ್ರೀ.. ಈ ವಯಸ್ನಲ್ಲಿ ಪ್ರೇಮ ಪತ್ರ ಬರೆಯೋದಾ? ನನ್ನಿಂದಾಗೊಲ್ಲಪ್ಪಾ..

(ಅಷ್ಟರಲ್ಲಿ ಮತ್ತೆ ಬಾಗಿಲು ದಬ ದಬ ಬಡಿದ ಸದ್ದು)

ನಾರಾಯಣ ಮತ್ತೆ ಯಾರೋ ಬಂದ್ರು.. ನಿನಗೆಲ್ಲೋ ಶುಕ್ರದೆಸೆ. ಅಂತ ಕಾಣುತ್ತೆ. ಇವರು ಯಾವ ಸಂಘದವರೋ?

ಶಾಲಿನಿ – ನಾನು ಬೇಗ ಬೇರೆ ಸೀರೆ ಉಟ್ಕೊಂಡು ಬರ್ತೀನಿ. ಮತ್ತೆ ಇದೇ ಸೀರೇಲಿ ನಾನಂತೂ ಹೋಗುಲ್ಲಪ್ಪಾ (ಒಳಗೆ ಹೋಗುವಳು) ನಾರಾಯಣ ಬಾಗಿಲು ತೆಗೆಯುವನು ಅದೇ ಸದಸ್ಯೆಯರು..

ಎಲ್ಲೀ ಮೇಡಂ.. ಕರೀರಿ.. ಕರೀರಿ.. ಮೇಡಂನ.

ನಾರಾಯಣ – ಬರ್ತಾರೆ.. ಡ್ರೆಸ್ ಮಾಡ್ಕೋತಿದಾರೆ..ಮತ್ತೆಲ್ಲಿಗೆ ಬರಬೇಕು?

ಸದಸ್ಯೆ ಅಲ್ಲಾ ಸಾರ್! ಅವರು ಹೀಗೆ ಮಾಡಬೌದಾ?

ನಾರಾಯಣ ಏನಾಯ್ತು! ಏನು ಮಾಡಿದ್ರು (ಗಾಭರಿಯಿಂದ)

ಸದಸ್ಯೆ – ನಮಗ್ಯಾರಿಗೂ ಹೇಳಲೇ ಇಲ್ಲ. ಸ್ಟೇಜ್ ಮೇಲೆ ಕೂತಿದ್ದೋರು ಹಾಗೇ ನಾಪತ್ತೇ. ಹೀಗೆ ಮಾಡಬೌದಾ ಅವರು.. ಕರೀರಿ.. ಅವರನ್ನು (ಶಾಲಿನಿ ಬೇರೆ ಸೀರೆ ಉಟ್ಟು ಮುಗುಳ್ನಗುತ್ತಾ ರೀವಿಯಿಂದ ಹೊರಗೆ ಬರುವಳು) ಅವರುಗಳನ್ನು ನೋಡಿ.. ಓ ನೀವೇನಾ? ನಾನು ಬೇರೆ ಯಾರೋ ಸಂಘದವರು ಅಂತ ಅಂದ್ಕೊಂಡೆ.

ಸದಸ್ಯೆ ಅಲ್ಲಾ ಮೇಡಂ, ನೀವು ನಮ್ಮಾ ಏರಿಯಾದವರು, ನೀವು ಹೀಗೆ ಮಾಡ್ತೀರಿ ಅಂತ ನಾವು ಅಂದ್ಕೊಂಡಿರಲಿಲ್ಲ. ಹೇಳದೇ ಕೇಳದೇ ಹಂಗೇ ಎದ್ದು ಬಂದು ಬಿಡೋದಾ? ನಾವು ಊಟಕ್ಕೆ ಅಂತ ಹೋಗಿದ್ದಾಗ?

ಶಾಲಿನಿ – ನನ್ನ ಊಟ ಆಗಿತ್ತು. ಇನ್ನೆಲ್ಲಿ ಬಲವಂತ ಮಾಡಿ ಎಬ್ಬಿಸಿ ಬಿಡ್ತೀರೋ ಅಂತ ಹೆದರಿ ಎದ್ದು ಬಂದೆ. ನಾನು ರಾತ್ರಿ ಹೊತ್ತು ಹೆಚ್ಚಿಗೆ ಊಟ ಮಾಡಲ್ಲ ಮೈ ಬರುತ್ತೆ ಅಂತ..

ಸದಸ್ಯೆ – ಬಿಡಿ ಮೇಡಂ ನೀವೂ ಸರಿ.. ಊಟ ಬೇಡದಿದ್ರೆ ಪರವಾಗಿಲ್ಲ. ಹೇಳಿಬರಕ್ಕಾಗ್ತಿರಲಿಲ್ವಾ?

ಶಾಲಿನಿ – ಯಾಕೆ? ನನಗೋಸ್ಕರ ಬಾದಾಮಿ ಹಾಲು ಕುಡಿಯೋಕೆ ಇಟ್ಟಿದ್ರಾ?

ಸದಸ್ಯೆ ಆತೀ ಆಸೆಯಾಯ್ತು ಬಿಡಿ ನಿಮ್ದೂ.. ಬಿಡಿ ಹೋಗಲಿ.. ಫಂಕ್ಷನ್ ಮುಗೀತಲ್ಲ. ಎಲ್ಲಿ ಆ ಶಾಲು ? ಇಶ್ಲಾಗೆ ತತ್ತನ್ನಿ. ಅದು ನಂದು.

ಗಂಡ ಹೆಂಡತಿ ಇಬ್ಬರೂ: ಆಂ..? ಇಬ್ಬರೂ ಬಾಯಿ ತೆರೆದು ಕಣ್ಣರಳಿಸಿ ಪ್ರಶ್ನಿಸುವರು.

ಸದಸ್ಯೆ – ಹೂಂ.. ಮತ್ತೆ ಬಿಟ್ಟಿ ಬತ್ತದಾ ಶಾಲು? ಹೋದವಾರ ಜಾತ್ರೇಲಿ ಕೊಂಡದ್ದು ಮಿಣಿ ಮಿಣಿ ಅಂತ ಚೆಂದಾಗಿದೆ. ಫೋಟೋ ಚೆನ್ನಾಗಿ ಬತ್ತದ ಕೊಡು ಅಂದಿದ್ರು ಕೊಟ್ಟಿದ್ದೆ. ಹೊದಿಸಿದ್ದೇ ಸಾಕು ಅಂತ ನೀವು ಹೊದ್ಕೊಂಡು ಬಂದು ಬಿಡೋದಾ? ಒಂದ್ಮಾತು ಕೇಳಬೇಡವಾ?

ಶಾಲಿನಿ – ನಮಗೇನ್ರಿ ಗೊತ್ತು ನೀವು ಇಂಥೋರು ಅಂತಾ? ಶಾಲು ಹೊದೆಸಿ ಈಗ ವಾಪಸ್ಸು ಕೇಳ್ತಿದೀರಲ್ಲ. ನಾಚಿಕೆಯಾಗೋಲ್ವಾ?

ಸದಸ್ಯೆ ಅಯ್ಯೋ ಮೇಡಂ.. ನಿಮಗೆ ಅಷ್ಟು ತಿಳೀಲಿಲ್ವಾ? ಹಂಗಾದ್ರೆ ನೀವೆಂಥಾ ಸಾಹಿತಿ? ಈ ಶಾಲು, ಸನ್ಮಾನ, ಸಮಾರಂಭ ಎಲ್ಲಾ ಪ್ರಚಾರಕ್ಕೆ. ಪೇಪರ್ನಲ್ಲಿ ಫೋಟೋ ಬರುತ್ತೆ. ನಮಗೆ ಪ್ರಚಾರ ಸಿಗುತ್ತೆ ಅಷ್ಟೆ.. ಈ ಊರ್ನಾಗೆ ಎಂತೆಂಥೋರೆಲ್ಲಾ ಸಂಘ ನಡೆಸ್ತಾರೆ ಸನ್ಮಾನ ಮಾಡ್ತಾರೆ ನಾವು ಮಾಡಿದರೆ ತಪ್ಪಾ?

ಶಾಲಿನಿ – ಚೆನ್ನಾಗಿದೆ ನಿಮ್ಮ ಕತೆ? ಯಾರಿಗೆ ಬೇಕಾಗಿದೆ ಈ ಥಳುಕಿನ ಶಾಲು, ಶಾಲು, ಅಂತ ಅರಚ್ಕೋ ಬೇಡ ತಗೊಂಡು ಹೋಗು..(ಎಸೆಯುವಳು)

ದೃಶ್ಯ ೪

ನಾರಾಯಣ ಏಯ್ ಶಾಲೂ.. ಶಾಲೂ.. ಏನೇ ಅದು ನೀನೇ ಶಾಲು ಶಾಲು ಅಂತ ಕನವರಿಸಿ ಕೊಳ್ತಾ ಇದೀಯ.. ಎಚ್ಚರ ಮಾಡ್ಕೊಳ್ಳೇ.. ಹೊದ್ದಿಕೇನ ಯಾಕೆ ಕಿತ್ತು ಎಸಿತಿದೀಯೇ..(ಎಚ್ಚರಗೊಳ್ಳುವಳು)

ಶಾಲಿನಿ – ಅಬ್ಬಾ.. ಎಂಥಾ ಕೆಟ್ಟ ಕನಸು! ಸಧ್ಯ! ಎಚ್ಚರವಾಯ್ತಲ್ಲ. (ಕಣ್ಣುಗಳನ್ನು ಉಜ್ಜುವಳು)

– ಪ್ರೇಕ್ಷಕರು ಚಪ್ಪಾಳೆ ತಟ್ಟುವರು.

ತೆರೆ ಬೀಳುವುದು. *

೮. ಕರ್ಮಕಾಂಡ

"ಅಣ್ಣ ಸಿಕ್ಕಿದ್ದ ಗುರುವಾರ ಅವರ ಮನೆಯಲ್ಲಿ ಏನೋ ವ್ರತವಂತೆ. ವಿಶೇಷ ಪೂಜೆ, ಹೋಮ, ಉದ್ಯಾಪನೆ ಎಲ್ಲಾ ಮಾಡ್ತಾರಂತೆ. ಹತ್ತು ಬಗೆಯ ದಾನ ಕೊಡ್ತಾರಂತೆ. ಹೆಂಡತಿ ಮಕ್ಕಳ ಜೊತೆ ಹಿಂದಿನ ದಿನವೇ ಬಂದು ಬಿಡು ಅಂತ ಹೇಳಿದಾರೆ. ಕೃಷ್ಣ ತನ್ನ ಹೆಂಡತಿ ಸರಸ್ವತಿಗೆ ಹೇಳಿದ.

ಅಲ್ಲಿ ದುಡಿಯುಕ್ಕೆ ಯಾರೂ ಸಿಗಲಿಲ್ಲ ಅಂತ ಕಾಣುತ್ತೆ. ಬಂದವರಿಗೆ ಎಲೆ ಹಾಕಿ ಬಡಿಸುಕ್ಕೆ ನೀವು, ಎಲೆ ತೆಗೆದು ಗೋಮ ಹಾಕುಕ್ಕೆ ನಾನು ಬೇಕು ಅಂತ ಕಾಣುತ್ತೆ. ವ್ಯಂಗ್ಯವಾಗಿ ನುಡಿದಳು.

ಸುಮ್ಮನೆ ಏನೇನೋ ಆಡಬೇಡ ಎರಡು ದಿನ ನಮಗೂ ನಮ್ಮ ಮಕ್ಕಳಿಗೂ ಪುಷ್ಕಳ ಊಟ ಸಿಗುತ್ತೆ. ಮರೀದೇ ಎಲ್ಲಾ ಬನ್ನಿ ಅಂದಿದಾನೆ.

ನೀವು ಬೇಕಾದರೆ ಹೋಗಿ. ನಾನು ಬರುಲ್ಲ. ನನ್ನ ಮಕ್ಕಳನ್ನೂ ಕಳಿಸುಲ್ಲ.

ಸುಮ್ಮನೆ ಎಲ್ಲರಿಗೂ ಗೊತ್ತಾಗುತ್ತೆ ಆಕ್ಷೇಪಣೆ ಮಾಡ್ತಾರೆ.

ಒಂದೇ ಊರಿನಲ್ಲಿದೀವಿ ಅಂತ ಏನೇನು ಮಾಡಿದಾರೆ ನಮಗೆ ಕೊಡುವುದನ್ನೇ ಕೊಟ್ಟಿಲ್ಲ. ನಮಗೆ ಅದ್ಯಾವುದೋ ಘುಡುಗೀನ ಸಾಕ್ಕೊಂಡು ಅದ್ಧೂರಿಯಾಗಿ ಮದುವೆ ಮಾಡಿದ್ರಲ್ಲ. ನಮಗೆ ಬಂದ ಭಾಗ್ಯವೇನು? ಕಡೆಗೆ ನಿಮಗೆ ಒಂದು ಜೊತೆ ಪಂಚೆ, ನನಗೆ ಒಂದು ಸೀರೆ.. ಮಕ್ಕಳಿಗೆ ಬಟ್ಟೆ ಹುಂ ಏನು ಕೊಟ್ಟರು ನಮಗೆ? ಮರ್ಯಾದೆ ಸಿಗದಿದ್ದ ಸ್ಥಳಕ್ಕೆ ನಾನು ಬರಲ್ಲ. ನನ್ನನ್ನ ಬಲವಂತ ಮಾಡಬೇಡಿ.

ವಿಶೇಷವಾಗಿ ದಾನ ಧರ್ಮ ಎಲ್ಲಾ ಕೊಡ್ತಿದಾರೆ. ಈ ಸಲವಾದರೂ ನಮಗೆ ಚೆನ್ನಾಗಿ ಏನಾದರೂ ಉಡುಗೊರೆ ಸಿಗಬಹುದು. ಒಂದು ದಿನದ ಮಟ್ಟಿಗೆ ಆದರೂ ಹೋಗೋಣ.

ಆ ದಾನ ಧರ್ಮ ಏನೂ ನಮಗೆ ಬೇಡ. ಅವರವರು ಮಾಡಿದ ಪಾಪ ಅವರವರಿಗೆ ಅದನ್ನು ದಾನದ ರೂಪದಲ್ಲಿ ತಗೊಂಡರೆ ನಾಶವಾಗಿ ಹೋಗ್ತಾರೆ ನಿಮ್ಮ ಅತ್ತಿಗೇದು ಏನೇನು ಪಾಪಕರ್ಮಗಳಿವೆಯೋ? ಅನುಭವಿಸಲಿಲ್ವೆ? ಹೆಂಗಸಿ ನಂತಹ ಗಂಡ; ಮಕ್ಕಳನ್ನು ಹುಟ್ಟಿಸುವ ತಾಕತ್ತಿಲ್ಲದಮನುಷ್ಯ. ಅಂತಹವರ ಮನೆಯಿಂದ

ಒಂದು ಹನಿ ನೀರು ಕುಡಿದರೂ ಘೋರ ಪಾಪ ಅಂಟಿಕೊಳ್ಳುತ್ತೆ. ಆವೇಶದಿಂದ ಕೂಗಾಡಿದಳು.

ಛೆ. ಅಷ್ಟೊಂದು ಕೋಪ ಯಾಕೆ? ಹೋಗಲಿ ಬಿಡು. ನಾವು ಹೋಗದಿದ್ದರೆ ಆಯಿತು. ಇಷ್ಟೊಂದು ಅನಾವಶ್ಯಕ ಮಾತು ಏಕೆ?

ಮಾತಾಡ್ತಾ ಮಾತಾಡ್ತಾ ಹತ್ತಿರ ಬರಬೇಡ ದೂರ ಹೋಗಿ. ನನಗೆಲ್ಲಾ ಗೊತ್ತು.

ಯಾಕೆ ಅಷ್ಟೊಂದು ಬೇಜಾರು? ಇದನ್ನ ಬಿಟ್ಟರೆ ಬೇರೆ ಮನೋರಂಜನೆ ಏನಿದೆ ಹೇಳು ನಮಗೆ?

ಆಲ್ವೆ ಮತ್ತೆ? ಸಿನಿಮಾನೇ ನಾಟಕಾನೇ? ಎಲ್ಲಾ ಇಲ್ಲೇ ಅದಕ್ಕೇ ಕಿತ್ತಾಡುವಷ್ಟು ಮಕ್ಕಳು ನಮಗೆ ಕೆಣಕಿ ಅಂದಳು.

ಹುಟ್ಟಿಸಿದ ದೇವರು ಹುಲ್ಲು ಮೇಯಿಸುತ್ತಾನೆಯೆ? ಹೇಗೋ ಬೆಳಕೋತಿವೆಯಲ್ಲ ನಮಗಿನ್ನೇನು ಚಿಂತೆ?

ನಿಮಗಿಲ್ಲ ಚಿಂತೆ. ಆ ಚಿಂತೆಯೆಲ್ಲಾ ನನಗೆ. ಎಲ್ಲಾ ಮನೆಯವರ ಮಕ್ಕಳಂತೆ ಎಲ್ಲಿವೆ ನಮ್ಮ ಮಕ್ಕಳು? ಆ ದೇವರೇನಾದರೂ ನನ್ನ ಬಳಿಗೆ ಬಂದಿದ್ದರೆ ಮೊದಲು ವರ ಕೇಳಿ ಆಮೇಲೆ ಅವನನ್ನು ಹತ್ತಿರ ಸೇರಿಸುತ್ತಿದ್ದೆ.

ಎಂತಹ ಮಾತಾಡ್ತೀಯೆ? ನಾನೇ ಅಲ್ಲವೇನೇ ನಿನ್ನ ದೇವರು. ಈಗಲೂ ಕೇಳು.

ಅದಕ್ಕೇ ಕೊಟ್ಟಿದೀರಲ್ಲ ನೂರೆಂಟು ವರ. ಇನ್ನೇನು ಬಾಕಿ ಇದೆ? ಸಾಕು ನಿಮ್ಮ ರಸಿಕತನ ಎದ್ದು ಹೋಗಿ ಸಿಡಿದು ನುಡಿದಳು.

ನಿಜ ಹೇಳು ಸರಸು, ನಾನು ಏನೂ ಕೊಡೋದು ಬೇಡವಾ?

'ಇನ್ನೇನಿದೆ ನಿಮ್ಮ ಹತ್ತಿರ ಇದನ್ನು ಬಿಟ್ಟು, ಬರೀ ಇದಿಷ್ಟೇ ಆಯಿತು. ಅವಳ ಮಾತಿಗೆ ಅಸಹ್ಯಗೊಂಡ ಕೃಷ್ಣ ದೂರ ಸರಿದು ಮಲಗಿದ. ಅವಳು ಹೇಳಿದ್ದು ಸುಳ್ಳೇನೂ ಆಗಿರಲಿಲ್ಲ.

ಅಣ್ಣ ಅತ್ತಿಗೆಯ ಕೈ ಗೊಂಬೆ. ಸಾಕಿಕೊಂಡ ಹುಡುಗಿಯ ಮದುವೆ ಮಾಡುವಾಗ ಅತ್ತಿಗೆ ಮನೆ ಮಾರಿಸಿದ್ದರು. ಎಲ್ಲಾ ಸಾಲಕ್ಕೆ ಹೊಂದಿಸಿ ಆಯಿತು. ಏನೂ ಉಳಿದಿಲ್ಲ ಎಂದು ಕೈಯಾಡಿಸಿದ್ದರು.

ಇವನಿಗೆ ಸಂಪಾದನೆ ಏನೂ ಇರಲಿಲ್ಲ. ವಿದ್ಯೆಯೂ ಹತ್ತಲಿಲ್ಲ. ಬೀದಿ ಬೀದಿ ಅಲೆದು ತಿರುಗುತ್ತಿದ್ದವನನ್ನು ಒಂದು ನೆಲೆಗೆ ತರಲು ಪ್ರಯತ್ನಿಸಿರಲಿಲ್ಲ. ಹೊಟ್ಟೆಯ ಪಾಡಿಗೆ ಅಲ್ಲಿ ಇಲ್ಲಿ ಕೂಲಿ ಮಾಡಿದ ಬ್ರಾಹ್ಮಣಾರ್ಥಕ್ಕೆ ಕುಳಿತ. ದಾನ ಧರ್ಮಕ್ಕೆ ಕೈ ನೀಡಿದ ಆದರೂ ಇಷ್ಟೇ. ಕಡೆಗೆ ಅಲ್ಲಿ ಇಲ್ಲಿ ಅಡಿಗೆ ಕೆಲಸ ಮಾಡಲು ಪ್ರಾರಂಭಿಸಿದ್ದ.

ಅಡಿಗೆ ರಾಮಚಂದ್ರರಾಯರ ಕೈ ಕೆಳಗೆ ಕೆಲಸಕ್ಕೇ ಸೇರಿಕೊಂಡ. ಅವರ ಪತ್ನಿ ಸಾವಿತ್ರಮ್ಮನಿಗೆ ಸ್ವಲ್ಪ ಮೆಚ್ಚುಗೆ ಇವನನ್ನು ಕಂಡರೆ. ಸರಸ್ವತಿ ಅವರ ಮಗಳು.

ಅವಳು ಮೈನೆರೆದಾಗ, ಆರತಿಗೆ ಬಾಗಿನ ಕೊಡಲು ಚಕ್ಕುಲಿ ಉಂಡೆಗಳನ್ನು ಆಕೆಯ ಜೊತೆ ಕುಳಿತು ಮಾಡಿದ್ದ. ಪುಟ ಪುಟನೆ ಅಲ್ಲಿಂದಿಲ್ಲಿಗೆ ಓಡಾಡುತ್ತಿದ್ದ ಸರಸ್ವತಿಯ ಮೇಲೆ ಅವನ ಕಣ್ಣು ಅನೇಕ ಸಲ ಹರಿದಾಡಿದವು. ಅವಳು ತ್ರಿಪುರ ಸುಂದರಿ ಅಲ್ಲದಿದ್ದರೂ, ಇವನ ಕಣ್ಣಿಗೆ ಅಪ್ಸರೆಯಂತೆ ಕಂಡು ಬಂದಳು.

ಆ ದಿನ ರಾಮಚಂದ್ರರಾಯರು ಬೇರೆ ಊರಿಗೆ ಹೋಗಿದ್ದರು. ಸಾವಿತ್ರಮ್ಮ ಯಾರ ಮನೆಗೋ ಮೆಣಸಿನ ಪುಡಿ ಕುಟ್ಟಿಕೊಡಲು ಹೋಗಿದ್ದರು. ಸರಸ್ವತಿ ಒಬ್ಬಳೇ ಇದ್ದುದನ್ನು ಕಂಡು ಕೃಷ್ಣ ಚುರುಕಾದ. ಮೈಕೈ ತುಂಬಿಕೊಂಡು ಗುಂಡಗೆ ಹೊಳೆಯುತ್ತಿದ್ದ ಅವಳನ್ನು ಹಿಡಿಯುವ ಆಸೆಯಾಯಿತು ಅವನಿಗೆ. ಪಾಠ ಸ್ಕೂಲುಗಳ ಯೋಚನೆ ಇಲ್ಲದೆ ನಿಶ್ಚಿಂತೆಯಿಂದ ಮಲಗಿದ್ದ ಅವಳ ಬಳಿಗೆ ಬಂದ. ಅವನನ್ನು ಕಂಡು ಮುಗುಳ್ನಕ್ಕು, ಹೆದರದ ಬೆದರದ ಸ್ಥಿತಿಯಲ್ಲಿದ್ದ ಅವಳನ್ನು ಕಂಡು ಉತ್ತೇಜನ ಸಿಕ್ಕಿತು.

ಇಪ್ಪತ್ತು ವರ್ಷದ ತರುಣ ಕೃಷ್ಣ ಚೆಲುವ. ಸುಂದರ ರೂಪದ, ದೃಢ ಕಾಯದ ಹುಡುಗ ರಸಿಕತೆಯನ್ನು ಸುರಿಸುತ್ತಾ ಬಂದಾಗ ಒಲ್ಲೆ ಎನ್ನಲು ಅವಳೇನು ಸನ್ಯಾಸಿನಿಯೆ? ತಾನಾಗಿಯೇ ಅವನೊಂದಿಗೆ ಒಂದಾದಳು.

ಹೀಗೇ ಎಷ್ಟೋ ದಿನಗಳು ನಡೆದವು. ಒಂದು ದಿನ ಬಹಿರಂಗವಾಗಿ ತಿಳಿದಾಗ ರಾಮಚಂದ್ರರಾಯರು ಬೆಚ್ಚಲಿಲ್ಲ. ಸಾವಿತ್ರಮ್ಮ ಕೂಗಾಡಲಿಲ್ಲವಾದರೂ ಆಕೆಗೆ ಮಗಳ ದುರ್ವಿಧಿ ಕಂಡು ಮರುಕ ಉಂಟಾಯಿತು. ತಮ್ಮಂತೆಯೇ ತಮ್ಮ ಮಗಳು ಅಡಿಗೆ ಯವನ ಪತ್ನಿಯಾಗಬೇಕಾದುದು ಆಕೆಗೆ ಸುತರಾಂ ಇಷ್ಟವಾಗಲಿಲ್ಲ.

ರಾಮಚಂದ್ರರಾಯರು ಜಾಣರು. ಒಂದು ಕಾಸು ಖರ್ಚಿಲ್ಲದೆ ಮದುವೆ ನಡೆಯುವಾಗ ಯೋಚನೆ ಏನು? ಮದುವೆ ಶಾಸ್ತ್ರವೂ ಆದ ಮೇಲೆ, ಇವರಿಬ್ಬರ ಸರಸ ಸಲ್ಲಾಪಕ್ಕೆ ಯಾವ ಅಡ್ಡಿಯೂ ಇರಲಿಲ್ಲ. ಮದುವೆಯಾದ ಏಳು ತಿಂಗಳಿಗೆ ಸರಸ್ವತಿ ಅವಳಿ ಮಕ್ಕಳನ್ನು ಹೆತ್ತಳು.

ಸಂಸಾರದ ಜವಾಬ್ದಾರಿ ಇಬ್ಬರಿಗೂ ಇರಲಿಲ್ಲ. ಖರ್ಚಿನ ವ್ಯವಹಾರ ರಾಮಚಂದ್ರ ರಾಯರದು. ಮನೆಯ ಒಳಗಿನ ಕೆಲಸವೆಲ್ಲಾ ಸರಸ್ವತಿಯದು. ಕೃಷ್ಣ ಹೊರಗೆ ಅಡಿಗೆ ಕೆಲಸಕ್ಕೆ ಹೋಗದ ದಿನವೆಲ್ಲಾ, ಸರಸ್ವತಿಯ ಮುಂದೇ ಕುಳಿತು ಕಾಲ ಕಳೆಯುತ್ತಿದ್ದ. ಸರಸ್ವತಿಯ ಯೌವನ, ಕೃಷ್ಣನ ರಸಿಕತನ ಬೇಗ ಬೇಗ ಮತ್ತೂ ಎರಡು ಮಕ್ಕಳಾದವು.

ಅವುಗಳಲ್ಲಿ ಒಂದು ಮಗು ಹುಟ್ಟಿದ ಕೆಲವು ದಿನಗಳಲ್ಲೇ ಸತ್ತಿತು. ಮತ್ತೆ ಇನ್ನೊಂದು ವರ್ಷದೊಳಗೇ. ಇನ್ನೊಂದು ಮಗುವನ್ನು ಸೃಷ್ಟಿ ಮಾಡಿದ್ದರು. ಹೆರಿಗೆ ಬಾಣಂತನದಿಂದ ಸರಸ್ವತಿ ಸೋತು ಹೋಗಿದ್ದರೂ ಅವಳ ಆಸೆ ಬತ್ತಿರಲಿಲ್ಲ. ಕೃಷ್ಣ ಅಷ್ಟು ಜಾಣ, ಹೆಂಡತಿಯನ್ನು ಒಲಿಸುವಲ್ಲಿ. ಇನ್ನೂ ಮೂರು ಮಕ್ಕಳುಗಳಾದವು.

ರಾಮಚಂದ್ರರಾಯರು ಬೆಳೆಯುತ್ತಿರುವ ಸಂಖ್ಯೆಯನ್ನು ಗಮನಿಸಿ ಕೃಷ್ಣನಿಗೆ ಬುದ್ಧಿ ಹೇಳಿ ಅವನಿಗೆ ಆಪರೇಷನ್ ಮಾಡಿಸಿದ್ದರು. ಇನ್ನು ನಿಶ್ಚಿಂತೆ.

ಮದುವೆಗೆ ಬಂದು ಧಾರೆ ಎರೆಸಿಕೊಂಡ ಅಣ್ಣ ಅತ್ತಿಗೆ ಮತ್ತೆ ಈ ಕಡೆ ತಲೆ ಹಾಕಿರಲಿಲ್ಲ. ಇವನಿಗೂ ಹೋಗಲು ಬಿಡುವಾಗಿರಲಿಲ್ಲ? ಇಬ್ಬರೂ ತಮ್ಮ ಲೋಲಾಪ್ತಿಯಲ್ಲಿ ಅಣ್ಣ ಅತ್ತಿಗೆಯರನ್ನು ನೆನೆಸಿಕೊಳ್ಳಲೇ ಇಲ್ಲ. ಆದರೆ ಒಂದು ದಿನ ಸರಸವಾಗಿ ಕೇಳಿದ್ದಳು ಸರಸ್ವತಿ.

ನಿಮಗೆ ನೋಡಿದರೆ ಇಷ್ಟು ಮಕ್ಕಳು ನಿಮ್ಮ ಅತ್ತಿಗೆಗೆ ಮಕ್ಕಳೇ ಇಲ್ಲ ಏಕೆ? ಕೃಷ್ಣ ನಕ್ಕಿದ್ದ.

ನನಗೇನು ಗೊತ್ತು ಅತ್ತಿಗೆಯನ್ನು ಕೇಳು.

ಅವರನ್ನೇನು ಕೇಳುವುದು? ಎಲ್ಲರೂ ಆಡಿಕೊಳ್ಳುತ್ತಿದ್ದರು. ನಿಮ್ಮ ಅಣ್ಣ ಗಂಡಸೇ ಅಲ್ಲವಂತೆ ಹೌದಾ?

ಛೆ. ಇಂತಹ ಮಾತನ್ನೆಲ್ಲಾ ಯಾರು ಹೇಳ್ತಾರೆ ನಿನಗೆ? ಅವನು ಗಂಡಸೋ ಅಲ್ಲವೋ ನನಗೇನು ಗೊತ್ತು. ನಿನಗೆ ಬೇಕಿದ್ದರೆ ಅತ್ತಿಗೆಯನ್ನು ಕೇಳಿ ತಿಳಿಕೋ ಮತ್ತೆ ನಕ್ಕಿದ್ದ.

ಕೇಳುವುದೇನು? ಪ್ರತ್ಯಕ್ಷವಾಗಿ ಕಾಣುತ್ತಿಲ್ಲವೆ? ಇಲ್ಲದಿದ್ದರೆ ಅವರಿಗೂ ನಾಲ್ಕಾರು ಮಕ್ಕಳಾಗಿರುತ್ತಿದ್ದವು. ದೇವರನ್ನು ನಂಬಿದಾರೆ. ಆದರೆ ದೇವರು ಅವರಿಗೆ ವರ ಕೊಟ್ಟಿಲ್ಲ.

ಆ ದೇವರು ಅಣ್ಣನಿಗೆ ಕೊಡುವ ಶಕ್ತಿಯನ್ನು ನನಗೇ ಕೊಟ್ಟು ಬಿಟ್ಟಿದಾನೆ ಅಂತ ಕಾಣುತ್ತೆ? ಇಲ್ಲದಿದ್ದರೆ ನನಗೆ ಇಷ್ಟೊಂದು ರಸಿಕತನ ಎಲ್ಲಿಂದ ಬರಬೇಕು?

ಇರಬಹುದು. ಇರಬಹುದು. ಸರಸ್ವತಿ ನಕ್ಕಿದ್ದಳು. ಆದರೆ ಕೃಷ್ಣನಿಗೆ ಆ ನಗು ಕೇಳಿಸಲಿಲ್ಲ. ಯಾವುದೋ ಘಟನೆಯನ್ನು ಅರಸುತ್ತಾ ನೆನಪಿನ ಆಳಕ್ಕೆ ಇಳಿದು ಹೋದ.

ಅಣ್ಣ ನರಸಿಂಹನ ಮದುವೆಯಾದಾಗ ಅವನಿಗೆ ಇಪ್ಪತ್ತೆಂಟು ವರ್ಷ. ಅತ್ತಿಗೆ ಲೀಲಾವತಿಗೆ ಹದಿನೆಂಟು ವರ್ಷ. ಹದಿನೆಂಟು ವರ್ಷದ ಲೀಲಾವತಿಗೆ, ಈ ಮನೆಯ ಹೊಸಿಲೊಳಗೆ ಕಾಲಿಟ್ಟ ಗಳಿಗೆಯಲ್ಲೇ ಎಲ್ಲಾ ಅರ್ಥವಾಗಿ ಹೋಯಿತು. ತಾಯಿ ಸುಭದ್ರಮ್ಮ, ಸೊಸೆಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ರಾತ್ರಿಯ ಹೊತ್ತು ಕೂಡಾ ತಮ್ಮ ಬಳಿಯೇ ಸೊಸೆಯನ್ನು ಮಲಗಿಸಿಕೊಳ್ಳುತ್ತಿದ್ದರು.

ಅಣ್ಣ ನರಸಿಂಹ, ಇನ್ನೊಬ್ಬ ಅಣ್ಣ ಸುಬ್ಬ, ಚಿಕ್ಕವನು ಕೃಷ್ಣ ಮೂರು ಜನವೂ ಅಲ್ಲೇ ವರಾಂಡದಲ್ಲಿ ಮಲಗುತ್ತಿದ್ದರು. ಅಣ್ಣ ಅಂಗಡಿಯೊಂದರಲ್ಲಿ ಲೆಖ್ಖ ಬರೆಯಲು ಬೆಳಿಗ್ಗೆ ಒಂಭತ್ತು ಗಂಟೆಗೇ ಮನೆಯನ್ನು ಬಿಟ್ಟು ಹೊರಡುತ್ತಿದ್ದ. ಅಲ್ಲಿಂದ ಸ್ಕೂಲಿನ

ಕೆಲಸಕ್ಕೆ ಹೋಗುತ್ತಿದ್ದ ಸುಬ್ಬ, ಕಿವುಡ-ಮೂಕ. ಹಾಗಾಗಿ ಮನೆಯಿಂದ ಆಚೆ ಎಲ್ಲೂ ಹೊರಗೆ ಹೋಗುತ್ತಿರಲಿಲ್ಲ. ಮನೆಯ ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದ. ಕಟ್ಟು ಮಸ್ತಾಗಿದ್ದ ಅವನಿಗೆ ಶ್ರಮವೇ ಆಗುತ್ತಿರಲಿಲ್ಲವೇನೋ? ಕೃಷ್ಣ ಓದು ಸ್ಕೂಲಿನ ಚಿಂತೆ ಇಲ್ಲದೆ ಬೀದಿ ಬೀದಿ ಅಲೆದು ಕೊಂಡಿರುತ್ತಿದ್ದ. ತಾಯಿಯ ಜೊತೆ ನದಿಗೆ ಹೋಗಿ, ಈಜಾಡಿ ಬರುವುದೆಂದರೆ ಅವನಿಗೆ ಬಹಳ ಆಸೆ. ಒಂದು ದಿನ ಇವನು ಮನೆಯಲ್ಲಿರಲಿಲ್ಲ. ಅಂಗಡಿಗೆ ಹೋಗಿದ್ದ. ಬರುವಷ್ಟರಲ್ಲಿ ತಾಯಿ ಹೊಳೆಗೆ ಹೊರಟು ಹೋಗಿದ್ದರು. ಮನೆಯ ಮುಂಬಾಗಿಲು ಹಾಕಿತ್ತು. ಮನೆಯಲ್ಲಿ ಯಾರ ಸದ್ದೂ ಇರಲಿಲ್ಲ. ಪಕ್ಕದ ಕಿಟಕಿಯಿಂದ ಇಣುಕಿ ನೋಡಿದ ಅಲ್ಲಿಯ ದೃಶ್ಯ ಕಂಡು ಬೆರಗಾಗಿ ಹಾಗೇ ನೋಡುತ್ತಾ ನಿಂತು ಬಿಟ್ಟ.

ಒಳಗಿನ ಕೋಣೆಯಲ್ಲಿ ಸುಬ್ಬನೊಡನೆ ಮಲಗಿರುವ ಲೀಲಾವತಿ, ಇಬ್ಬರೂ ಒಟ್ಟಿಗಿದ್ದಾರೆ. ನೋಡು ನೋಡುತ್ತಿದ್ದಂತೆಯೇ ಇವನ ಅಂಗಾಂಗಗಳು, ಸೆಟೆದು ಕೊಂಡವು ನರನಾಡಿಗಳು ಬಿಗಿಗೊಂಡವು. ಅಂದಿನಿಂದ ಇವನ ದಿನಚರಿ ಹೀಗೆ ಕಿಟಕಿಯಲ್ಲಿ ನೋಡುವುದು, ಆಮೇಲೆ ನದಿಗೆ ಹೋಗಿ ಮನಸಾರೆ ಈಜಾಡಿ ಬರುವುದು. ಸುಬ್ಬ ಯಾಕೆ ಹೀಗೆ ಮಾಡ್ತಾನೆ? ಅತ್ತಿಗೆ ಯಾಕೆ ಅಣ್ಣನ ಜೊತೆ ಮಲಗುವುದಿಲ್ಲ. ಅಮ್ಮನಿಗೆ ಈ ವಿಚಾರ ಗೊತ್ತಿಲ್ಲವೆ? ಈ ಚಿಂತೆಗಳಲ್ಲೇ ಅವನ ಚಟುವಟಿಕೆಗಳು ಹೆಚ್ಚಾಗುತ್ತಿದ್ದವು.

ಒಂದು ದಿನ ಸುಬ್ಬನ ಮೈಗೆ ಬೆಂಕಿ ತಗುಲಿ, ಮೈಯ ಸುಟ್ಟ ಗಾಯಗಳಿಂದ ಅಸುನೀಗಿದ. ಲೀಲಾವತಿ ಅತಿ ಮಂಕಾದಳು. ಒಂದು ದಿನ ಧೈರ್ಯ ಮಾಡಿ ಕೃಷ್ಣ ಅತ್ತಿಗೆಯ ಎದುರು ನಿಂತು ಹೇಳಿದ.

ಸುಬ್ಬ ಸತ್ತು ಹೋದ ಅಂತ ಚಿಂತಿಸಬೇಡಿ ಅತ್ತಿಗೆ. ಇನ್ನು ಮೇಲೆ ದಿನ ನಾನು ನಿಮ್ಮ ಜೊತೆಯಲ್ಲಿ ಸುಬ್ಬನಂತೆ ಮಲಗ್ತೀನಿ ಎಂದಿದ್ದ.

ಅತ್ತಿಗೆ ಕೆನ್ನೆಗೆ ಹೊಡೆದು ನನ್ನ ಕಣ್ಣೆದುರಿಗೆ ನಿಲ್ಲಬೇಡ, ಹೊರಟು ಹೋಗು ಎಂದು ಕೂಗಿದ್ದಳು. ಅಲ್ಲಿಂದ ಸೀದಾ ಅಣ್ಣನನ್ನು ಹುಡುಕಿಕೊಂಡು ಸ್ಕೂಲಿಗೆ ಬಂದು ಅತ್ತಿಗೆ ಹೊಡೆದುದನ್ನೂ ಅದಕ್ಕೆ ಕಾರಣವನ್ನೂ ಹೇಳಿದ್ದ. ಅವಮಾನದಿಂದ ಬೆಂದು ಹೋದ ಅಣ್ಣ ಲೀಲಾವತಿಯನ್ನು ತರಾಟೆಗೆ ತಗೊಂಡಿದ್ದ ಲೀಲಾವತಿ ಕಿರುಚಾಡಿದ್ದಳು.

ಕೈಲಾಗದವನು ಮೈ ಪರಚಿಕೊಂಡ ಅಂತ ನನ್ನನ್ನೇನು ಕೇಳ್ತೀರಿ? ಹೋಗಿ ನಿಮ್ಮ ಅಮ್ಮನ್ನ ಕೇಳಿ. ಮದುವೆಗೆ ಮುಂಚೆಯೇ ಅವರು ನನಗೆ ಈ ವಿಚಾರ ತಿಳಿಸಿದ್ದರು. ನಾಲ್ಕಾರು ಮಕ್ಕಳನ್ನು ಹಡೆದರೆ, ಈ ಆಸ್ತಿಯನ್ನೆಲ್ಲಾ ನನಗೆ ಕೊಡುವುದಾಗಿ ಹೇಳಿದ್ದರು.

ಆಸ್ತಿಯ ಆಸೆಗೆ ಹಾದರಗಿತ್ತಿಯ ಕೆಲಸ ಮಾಡ್ತೀಯ? ಅಮ್ಮ ಇಷ್ಟು ನೀಚ ಹೆಂಗಸು ಅಂತ ತಿಳಿದಿರಲಿಲ್ಲ ಅವನು ಕೂಗಾಡಿದ್ದ.

ತಾಯಿ ಬಂದು ಸಮಾಧಾನ ಮಾಡಿದ್ದಳು.

ಕೂಗಾಡಿ ಕಿರುಚಾಡಿದರೆ, ಅಕ್ಕ ಪಕ್ಕದವರಿಗೆ ತಿಳಿದು ಮರ್ಯಾದೆ ಹೋಗುತ್ತೆ ನಿನ್ನ ಸ್ಥಿತಿ ನಿನಗೆ ತಿಳಿಯದ್ದೇನಲ್ಲ. ಸುಬ್ಬ ಪಾಪ ಮೂಕ ಮುಂಡೇದು, ಅದರ ಆಸೇನ ಯಾರು ಕೇಳಬೇಕು? ನಾನೇ ಈ ವ್ಯವಸ್ಥೆ ಮಾಡಿದ್ದೆ. ಇದರಿಂದ ಲೀಲಾವತಿಯ ಆಸೆಗೂ ಯೌವನಕ್ಕೂ ಮರ್ಯಾದೆಗೆ ಕುಂದು ಬಂದಿಲ್ಲ. ಆದರೇನು ಇವಳ ಕರ್ಮವೋ ಎರಡು ಮಕ್ಕಳಾಗಲಿಲ್ಲ. ಅವನೂ ಸತ್ತ. ಈ ವಂಶ ಉಳಿಸುವ ಎರಡು ಮಕ್ಕಳು ಹುಟ್ಟಿ ಬಿಟ್ಟಿದ್ದರೆ, ಚಿಂತೆಯಿರಲಿಲ್ಲ. ನಿನಗೆ ಅವಳ ಮೇಲೆ ಕಿರುಚಾಡುವ ಹಕ್ಕು ಇಲ್ಲ. ಒಂದು ವೇಳೆ ಲೀಲಾವತಿ ಸುಖವನ್ನರಸಿ ಬೇರೆಯವರ ಹಿಂದೆ ಓಡಿದ್ದರೇ...

"ಇಲ್ಲ ನಾನೆಂದಿಗೂ ಅಂತಹ ಕೆಲಸ ಮಾಡುವುದಿಲ್ಲ. ನನಗೆ ಇದುವರೆಗೆ ಸಿಕ್ಕಿರುವ ಸುಖವೇ ಸಾಕು." ಎಂದು ಅಳತೊಡಗಿದಳು. ಅಲ್ಲಿಗೆ ಎಲ್ಲಾ ಮುಗಿದಿತ್ತು. ತಾಯಿಗೆ ಅವಳ ಮೇಲೆ ನಂಬಿಕೆ, ಗಂಡನಿಗೆ ಅವಳ ಮೇಲೆ ಅಂಜಿಕೆ. ಕೃಷ್ಣನಿಗೆ ಈ ಮಾತುಗಳನ್ನು ಕೇಳಿ ನಡುಕ ಉಂಟಾಯಿತು. ಹೇಳದೇ ಕೇಳದೇ ಮನೆ ಬಿಟ್ಟು ಓಡಿ ಬಂದು ರಾಮಚಂದ್ರರಾಯರ ಮನೆ ಸೇರಿದ್ದ.

ಅಲ್ಲಿ ದಷ್ಟ ಪುಷ್ಟವಾದ ಸರಸ್ವತಿಯನ್ನು ಕಂಡು, ಅವನ ಅನುಭವದ ಕಣ್ಣುಗಳು ಅವಳ ಮೇಲೆ ಹರಿದಾಡಿದವು. ಸುಬ್ಬ ಅತ್ತಿಗೆಗೆ ತಬ್ಬಿಕೊಂಡು....ಅದೇ ರೀತಿ ತಾನೂ ಮಾಡಬೇಕೆಂಬ ಬಯಕೆ ಮೂಡಿತು. ರಸಿಕತೆಯನ್ನೆಲ್ಲಾ ಸುರಿಸಿ ಸರಸ್ವತಿಯನ್ನು ಒಲಿಸಿಕೊಂಡಿದ್ದ. ಸರಸ್ವತಿಯೂ ಆ ವಿಚಾರದಲ್ಲಿ ರತಿ. ಗಂಡನನ್ನು ಸುಖದಲ್ಲಿ ತೇಲಾಡಿಸಿ ಬಿಡುತ್ತಿದ್ದಳು. ಮದುವೆಯಾದ ಇಷ್ಟು ವರ್ಷಗಳಲ್ಲಿ ಮನೆಯಲ್ಲಿ ಅತ್ತಿಗೆಯ ಮಾತು ಬಂದಾಗ ಮಾತ್ರ ಇವನಿಗೆ ಉಪವಾಸ.

ಹಿಂದೆ, ಅತ್ತಿಗೆ ಅವರ ತಮ್ಮನ ಮಗಳು ನಿರ್ಮಲೆಯನ್ನು ತಮ್ಮ ಬಳಿ ಕರೆತಂದು ಸಾಕು ಮಗಳನ್ನಾಗಿ ಮಾಡಿಕೊಂಡಾಗ ಸರಸ್ವತಿಗೆ ಹೊಟ್ಟೆ ಉರಿದು ಹೋಗಿತ್ತು.

ನೋಡಿ ಅವರ ಕೆಟ್ಟ ಬುದ್ಧೀನ ನಮ್ಮ ಮಕ್ಕಳಲ್ಲಿ ಒಂದನ್ನು ಸಾಕಿಕೊಳ್ಳುವ ಒಳ್ಳೆ ಬುದ್ಧಿ ಬರಲಿಲ್ಲ. ಅವರ ತಮ್ಮನಿಗೆ ನಾಲ್ಕು ಹೆಣ್ಣು ಮಕ್ಕಳು. ಪಾಪ ಕಷ್ಟ ಅಂತ ಒಂದನ್ನು ಸಾಕಿ ಕೊಳ್ಳುತ್ತಿದಾರಂತೆ. ನಮಗೆ ಅನ್ಯಾಯ ಮಾಡಿದಾರೆ, ನಮ್ಮ ಬಿಸಿ ಉಸಿರಿನ ತಾಪ ಅವರನ್ನು ತಟ್ಟದೇ ಬಿಡುವುದಿಲ್ಲ.

ಹೋಗಲಿ ಬಿಡು ನಮ್ಮ ಮಕ್ಕಳು ನಮಗೆ ಭಾರವೇ? ನಮ್ಮ ಜೊತೇನೇ ಇರುತ್ತವೆ. ಹೇಗೋ ಸಾಕಿ ಬೆಳೆಸೋಣ.

ಹೇಗೆ ಸಾಕ್ತೀರಿ? ಅಡಿಗೆ ಕೆಲಸ ಬಿಟ್ಟು ಬೇರೆ ಕೆಲಸ ಸಂಪಾದನೆ ಬೇರೆ ಇನ್ನೇನಿದೆ? ಇನ್ನೇನು ಬರುತ್ತೆ ನಿಮಗೆ? ಹಂಗಿಸಿದ್ದಳು. ಆಗ ತಮಾಷೆ ಎಂಬಂತೆ ಹೇಳಿದ್ದ.

ಅಡಿಗೆ ಕೆಲಸ ಬರುಲ್ಲವೇನೆ? ದಿನಾ ನಾನೇ ಅಲ್ಲವೆ ಅಡಿಗೆ ಮಾಡುವುದು, ನಿಮ್ಮಮ್ಮ ಸತ್ತಾಗಿನಿಂದ ..? ಅದೂ ಬರದೇ ಇದ್ದಿದ್ದರೆ ಖಾಲಿ ಹೊಟ್ಟೇಲಿರಬೇಕಾಗ್ತಿತ್ತು.

ಬರಿ ಹಸಿವು ಮುಚ್ಚಿಕೊಳ್ಳುವ ಬುದ್ಧಿ ನಿಮ್ಮದು. ಹಣ ಸಂಪಾದನೆ ಮಾಡು ವುದನ್ನು ಮೊದಲು ಕಲಿಯಿರಿ. ನನ್ನ ನನ್ನ ಮಕ್ಕಳ ಹೊಟ್ಟೆ ಬಟ್ಟೆಗಾಗುವಷ್ಟು ನೀವು ದುಡಿಯದಿದ್ದರೆ, ನಿಮ್ಮನ್ನು ಮನೆಗೆ ಸೇರಿಸುವುದಿಲ್ಲ ಹೆದರಿಸಿದ್ದಳು.

ಬೇರೆ ಸಂಪಾದನೆಯ ಮಾರ್ಗವೇನೂ ತಿಳಿದಿರಲಿಲ್ಲ ಅವನಿಗೆ. ಸೀದಾ ಅಣ್ಣನ ಮನೆಗೆ ಬಂದು ಅತ್ತಿಗೆಯನ್ನು ಕೇಳಿದ್ದ.

ಅತ್ತಿಗೆ ತೀರಾ ಕಷ್ಟವಾಗಿದೆ ಸ್ವಲ್ಪ ಹಣಕೊಡಿ. ನಾನು ಎಂದೂ ನಿಮ್ಮನ್ನು ಕೇಳಿದವನಲ್ಲ. ಮಕ್ಕಳಿಗೆ ಮೂರು ದಿನದಿಂದ ಉಪವಾಸ.

ಮಕ್ಕಳನ್ನು ಸಾಕುವ ಯೋಗ್ಯತೆ ಇಲ್ಲದಿದ್ದ ಮೇಲೆ ಅಷ್ಟೊಂದನ್ನು ಯಾಕೆ ಹುಟ್ಟಿಸಿದೆ? ಅವತ್ತು ಅಣ್ಣನ ಹತ್ತಿರ ನನ್ನ ಮೇಲೆ ಚಾಡಿ ಹೇಳಿದ್ದೆ. ಈಗಲೂ ನಿನಗೆ ಧೈರ್ಯವಿದ್ದರೆ ಅವತ್ತು ಹೇಳಿದೆಯಲ್ಲ ಆ ಮಾತನ್ನು ಹೇಳು. ಸುಬ್ಬ ಇಲ್ಲದೆ ನನಗೂ ಬೇಜಾರಾಗಿದೆ. ನಾನು ನಿನಗೆ ಕೇಳಿದಷ್ಟು ಹಣ ಕೊಡ್ತೀನಿ. ಕೆಟ್ಟ ನಗೆಯನ್ನು ನಕ್ಕಿದ್ದಳು.

ತಾನು ಪೆದ್ದು ತನದಿಂದ ಅಂದು ಆಡಿದ ಮಾತನ್ನು ಅತ್ತಿಗೆ ಇಂದೂ ಆಡಿ ಹಂಗಿಸುತ್ತಿದಾರೆನ್ನಿಸಿತು. ಎದುರಾಡುವ ಧೈರ್ಯವಿಲ್ಲದೆ ವಾಪಸ್ಸು ಮನೆಗೆ ಬಂದಿದ್ದ. ಮದುವೆ ಛತ್ರಗಳಲ್ಲಿ ಮುಸುರೆ ಪಾತ್ರೆ ತೊಳೆದು ಒಂದಿಷ್ಟು ಹಣ ಸಂಪಾದಿಸಿ ತಂದು ಹೆಂಡತಿಯ ಕೈಗಿತ್ತ. ಹೆಂಡತಿ ಪ್ರಸನ್ನಳಾದಳು.

ಇದಾಗಿ ಎಷ್ಟೋ ವರ್ಷಗಳ ನಂತರ ಒಂದು ದಿನ ಅಣ್ಣ ಬಂದು ಇವನನ್ನು ಆಚೆ ಕರೆದುಕೊಂಡು ಹೋಗಿದ್ದ. ಮನೇ ಮೇಲೆ ವಿಪರೀತ ಸಾಲವಾಗಿದೆ. ಮನೆ ಮಾರಬೇಕು. ಹಣ್ಣ ಉಳಿದರೆ ನಿನಗೂ ಕೊಡ್ತೀವಿ ಅಂದಿದ್ದ. ಪತ್ರದ ಮೇಲೆ ಸಹಿ ಹಾಕಿಸಿಕೊಂಡಿದ್ದ.

ಆದರೆ ಆ ಹಣ ಎಷ್ಟು ಉಳಿಯಿತು? ಎಷ್ಟು ಖರ್ಚಾಯಿತು ಒಂದನ್ನಾದರೂ ಇವನಿಗೆ ಸರಿಯಾಗಿ ತಿಳಿಸಲಿಲ್ಲ. ಕೆಲವೇ ದಿನಗಳಲ್ಲಿ ನಿರ್ಮಲೆಯ ಮದುವೆ ಗೊತ್ತಾಗಿತ್ತು. ಅತ್ತಿಗೆಗೆ ಕನ್ಯಾದಾನ ಮಾಡುವ ಯೋಗ ಕೂಡಿ ಬಂದಿತ್ತಂತೆ.

ಅತ್ತಿಗೆ ತಮ್ಮಲ್ಲಿದ್ದ ಒಡವೆಗಳನ್ನು ಕರಗಿಸಿ, ಆ ಹುಡುಗಿಗೆ ಒಡವೆಗಳನ್ನು ಮಾಡಿಸಿದಳು. ಹಳೇ ಬೆಳ್ಳಿ ಕರಗಿಸಿ, ಅಳಿಯನಿಗೆ ತಟ್ಟೆ ಚೊಂಬುಗಳನ್ನು ಮಾಡಿಸಿದಳು.

ಈ ವಿಚಾರ ತಿಳಿದ ಸರಸ್ವತಿ ತನ್ನ ಗಂಡನನ್ನು ಒಂದು ವಾರದ ವರೆಗೆ ಮಾತನಾಡಿಸ ಲಿಲ್ಲ ಮುಖ ಊದಿಸಿಕೊಂಡು ತಿರುಗಾಡುತ್ತಿದ್ದಳು.

ಎಂತಹ ಕೆಟ್ಟ ಜಾತಿ ಹೆಂಗಸು ನಿಮ್ಮ ಅತ್ತಿಗೆ? ಆಸ್ತಿಯಲ್ಲಿ ನಮಗಾದರೆ ಮೂರು ಕಾಸಿಲ್ಲ. ಆ ಹುಡುಗೀನ ಉದ್ಧಾರ ಮಾಡುಕ್ಕೆ ಹೊರಟಿದಾರೆ. ಖಂಡಿತಾ ಉದ್ಧಾರವಾಗುಲ್ಲ ಅವರು. ನನ್ನ ನೊಂದ ಮನಸ್ಸು ಖಂಡಿತಾ ಅವರಿಗೆ ಒಳ್ಳೆಯದನ್ನು ಬಯಸುವುದಿಲ್ಲ. ಊಟ ಬಿಟ್ಟು ಮೌನ ವ್ರತ ಮಾಡಿದ್ದಳು.

ಆ ಹಣ ನಮ್ಮ ಹಣೆಯಲ್ಲಿ ಬರೆದಿಲ್ಲ. ಅದರ ಮೇಲೆ ಆಸೆಯಾಕೆ? ನನ್ನ ನಿನ್ನ ಪ್ರೀತಿಗೆ ಅದರಿಂದ ಕೊರತೆ ಏನಿಲ್ಲ. ನಾವು ಹೀಗೇ ಇದ್ದರೆ ಇನ್ನೂ ಸುಖವಾಗಿ ರುತ್ತೀವಿ. ಅವನು ಸಮಾಧಾನ ಗೊಳಿಸುವ ಪ್ರಯತ್ನ ಮಾಡಿದ್ದ.

ಎಷ್ಟು ದಿನ ಉಪವಾಸ ಮಾಡ್ತೀಯ ಸರಸು? ಇದನ್ನೆಲ್ಲ ಮನಸ್ಸಿಗೆ ಹಚ್ಕೊಂಡು ಯಾಕೆ ಕೊರಗ್ತೀಯ? ನಮಗೇನಿದೆಯೋ ಅದರಲ್ಲಿ ಸುಖವಾಗಿರೋಣ.

ಸಂಪಾದಿಸುಕ್ಕೆ ಕೈಲಾಗದಿದ್ದವರ ಮಾತು ಇದು. ಅಭಾವ ವೈರಾಗ್ಯ ನಿಮ್ಮದು. ಹಂಗಿಸಿದ್ದಳು.

ಅಭಾವವೂ ಇಲ್ಲ; ವೈರಾಗ್ಯವೂ ಇಲ್ಲ. ನಗುತ್ತಾ ಅವಳನ್ನು ಹತ್ತಿರಕ್ಕೆ ಎಳೆದು ಕೊಂಡಿದ್ದ. ಅವಳ ಮುನಿಸನ್ನು ಕಡಿಮೆ ಮಾಡಿದ್ದ.

ಯಥಾ ಪ್ರಕಾರ ಮದುವೆಗೆ, ಕೃಷ್ಣ ಒಬ್ಬನೇ ಹೋಗಿದ್ದ. ಅಣ್ಣ ಕೇಳಿದಾಗ ಹೇಳಿದ್ದ, "ಮಕ್ಕಳಿಗೆ ಉಡಲು ಒಂದು ಜೊತೆ ಚೆನ್ನಾಗಿರುವ ಬಟ್ಟೆ ಕೂಡಾ ಇಲ್ಲ, ಹೇಗೆ ಬರುತ್ವೆ ನೀನೇ ಹೇಳು?" ಅಣ್ಣನಿಗೆ ತಿಳಿಯಲೆಂದೇ ಹೇಳಿದ್ದ.

ಅಣ್ಣ ಅತ್ತಿಗೆಗೆ ತಿಳಿಯದಂತೆ ಒಂದಿಷ್ಟು ಹಣವನ್ನು ತಂದು ಕೈಗೆ ಕೊಟ್ಟಿದ್ದ. ಸಮಾರಂಭ ಮುಗಿದಾಗ ಉಳಿದ ಒಂದಿಷ್ಟು ಬಟ್ಟೆಗಳನ್ನು ಇವನಿಗೆ ಕೊಟ್ಟು ಮಕ್ಕಳಿಗೆ ಹೊಸ ಬಟ್ಟೆ ಹೊಲಿಸುವಂತೆ ಹೇಳಿದ್ದ.

ಅತ್ತಿಗೆ ಯಾರೊಡನೆಯೋ ಹೇಳುತ್ತಿದುದು ಕಿವಿಗೆ ಬಿದ್ದಿತ್ತು. ಹೊಟ್ಟೆ ಬಟ್ಟೆಗೆ ಇಲ್ಲದವರು ಬಂದು ಬಿಟ್ಟರೆ, ಅವರ ಕಣ್ಣು ಚೆನ್ನಾಗಿರುಲ್ಲ. ಯಾರೋ ಒಂದಿಷ್ಟು ಹಣ ಬಟ್ಟೆ ಎಲ್ಲಾ ಕದ್ದಿದಾರೆ ಎಂದು ಹೇಳಿ ಕೃಷ್ಣನ ಕಡೆ ತಿರುಗಿ ಹೇಳಿದ್ದಳು.

ನೀನಾದರೂ ಸ್ವಲ್ಪ ಆ ಕಡೆ ಈ ಕಡೆ ನೊಡಿಕೋ ಬೇಕಾಗಿತ್ತು. ಕಳ್ಳತನ ಆಗಿಲ್ಲದೇ ಇದ್ದಿದ್ದರೆ, ಬಟ್ಟೆಗಳನ್ನು ನಿನಗೇ ಕೊಡಬಹುದಾಗಿತ್ತು ಅಂತ.

ಅಣ್ಣನ ಮರ್ಯಾದೆಯನ್ನೂ ತೆಗೆಯುವ ಮನಸ್ಸಿಲ್ಲದ್ದರಿಂದ ಸುಮ್ಮನಾಗಿದ್ದ. ಆ ಹಣ ಬಟ್ಟೆಯನ್ನು ಕುರಿತು ಹೆಂಡತಿಗೆ ಏನನ್ನೂ ಹೇಳಲಿಲ್ಲ. ಎಲ್ಲವನ್ನು ಒಂದು ಹರಕು ಬಟ್ಟೆಯಲ್ಲಿ ಗಂಟು ಕಟ್ಟಿ ಅಟ್ಟದ ಮೇಲೆ ಎಸೆದ. ಹೆಂಡತಿಗೆ ಹೆದರಿ ಮದುವೆಯ ವಿಚಾರವನ್ನೇ ಮಾತನಾಡಲಿಲ್ಲ.

ಮದುವೆಯಾಗಿ ನಿರ್ಮಲ ಗಂಡನ ಮನೆಗೆ ಹೋಗಿದ್ದಳು ಅತ್ತಿಗೆಗೆ ಕನ್ಯಾದಾನದ ಪುಣ್ಯ ಸಿಕ್ಕಿತ್ತು. ಆದರೆ....?

ಆ ಮನೆಯನ್ನು ಕೊಂಡ ಪುಣ್ಯಾತ್ಮ ಒಂದು ದಿನ ಬಂದು ಹೇಳಿದ್ದ.

ತಾಯಿ ನಮಗೆ ಆ ಮನೆ ಆಗಿಬರಲಿಲ್ಲ. ಮನೆಗೆ ಕಾಲಿಟ್ಟ ದಿನವೇ ನನ್ನ ಮಗ ಮಹಡಿಯಿಂದ ಬಿದ್ದು ಕಾಲು ಮುರಿದುಕೊಂಡು ಬಿಟ್ಟ. ಶಾಶ್ವತವಾಗಿ ಊನವಾಗಿದೆ. ನಮಗೆ ಆ ಮನೆ ಬೇಡ. ನಮಗೆ ನಿಧಾನವಾಗಿ ಹಣ ತೀರಿಸಿ. ನಿಮ್ಮ ಮನೆ ನೀವು ಇಟ್ಟುಕೊಳ್ಳಿಟೆಂದು ಹೇಳಿ ಬೀಗದ ಕೈಯನ್ನು ಅವರ ಕೈಗಿತ್ತು ಹೊರಟು ಹೋಗಿದ್ದ.

ಅತ್ತಿಗೆಯ ತಮ್ಮನ ಭಾವಮೈದುನನಿಗೆ ಆ ಊರಿಗೇ ವರ್ಗವಾಗಿತ್ತು. ಬ್ಯಾಂಕಿನಲ್ಲಿ ಕೆಲಸದಲ್ಲಿದ್ದ ಅವನಿಗೆ ಮನೆಯ ಅಗತ್ಯವಿತ್ತು. ಬ್ಯಾಂಕಿನಿಂದ ಸಾಲ ತೆಗೆದುಕೊಂಡು ಮನೆಯನ್ನು ಕೊಂಡುಕೊಂಡ.

ಬ್ಯಾಂಕಿನಲ್ಲಿ ಕ್ಯಾಷಿಯರ್ ಆಗಿದ್ದ. ಇದ್ದಕ್ಕಿದ್ದಂತೆಯೇ ಅವನ ಮೇಲೆ ಅಪವಾದ ಬಂದು ಕೇಸಾಗಿ ಅವನು ಸಸ್ಪೆಂಡ್ ಆದ. ಸಾಲದ ಹಣಕ್ಕೆ ಬದಲಾಗಿ ಆ ಮನೆಯನ್ನು ಬ್ಯಾಂಕಿನವರು ಸೀಸ್ ಮಾಡಿದರು. ಕೆಲಸವಿಲ್ಲದೆ ಮನೆಬಿಟ್ಟು ಊರು ಬಿಟ್ಟು ಪರದೇಶಿಯಾದ ಆ ಮನುಷ್ಯ.

ಮತ್ತೊಂದು ವಾರಗಳಲ್ಲಿ ನಿರ್ಮಲ ಗೋಳೋ ಅಂತ ಅಳುತ್ತಾ ವಾಪಸ್ಸು ಬಂದಿದ್ದಳು. ಗಂಡ ಹೆಂಡತಿಗೆ ವೈಮನಸ್ಯ ಬಂದು ಅವನು ಹೆಂಡತಿಯನ್ನು ಮನೆಯಿಂದಾಚೆ ತಳ್ಳಿದ್ದ. ತಿಳುವಳಿಕೆ ಹೇಳಲು ಹೋಗಿ ಅತ್ತಿಗೆಯ ತಮ್ಮ ನಿಷ್ಠೂರ ನಾಗಿದ್ದ. ಲೀಲಾವತಿಯ ಅಕ್ಕನಂತೂ ವಾರಗಿತ್ತಿಯ ಬಿರುನುಡಿಗಳಿಗೆ ಬೆದರಿ ಲೀಲಾವತಿಯೊಡನೆ ಜಗಳವಾಡಿದ್ದಳು. ಜನರು ಲೀಲಾವತಿಯನ್ನೇ ನಿಷ್ಠೂರ ಮಾಡಿದ್ದರು. ಮಧುಸೂದನ ಡೈವೋರ್ಸಿಗೆ ಹಾಕಿದ್ದ. ಅಲ್ಲಿಗೆ ಮುಟ್ಟಿದ್ದೆಲ್ಲ ಒಂದೊಂದು ಒಂದೊಂದು ತರಹ.

ಈ ಕಷ್ಟ ಕಾರ್ಪಣ್ಯಗಳನ್ನು ನಿವಾರಿಸಲು ಲೀಲಾವತಿ ವ್ರತ ಹಿಡಿದಿದ್ದಳು. ಗ್ರಹಶಾಂತಿ, ಜಪತಪ, ಹೋಮ ಇತ್ಯಾದಿಗಳ ವಿಶೇಷ ಪೂಜೆಯೊಂದಿಗೆ ಉದ್ಯಾಪನೆ ದಶದಾನ ಇತ್ಯಾದಿ ಇತ್ಯಾದಿ ನಡೆಯಬೇಕಿತ್ತು. ಹತ್ತಿರದ ಬಂಧು ಬಳಗದವರಿಗೆ ಆಹ್ವಾನ ಕೊಟ್ಟುದುದಾಗಿತ್ತು. ಅನ್ನ ಶಾಂತಿ ನಡೆದರೆ ಎಲ್ಲಾ ಸರಿ ಹೋಗುತ್ತದೆಂಬ ನಂಬಿಕೆ ಲೀಲಾವತಿಗೆ ದಾನ ದಕ್ಷಿಣೆಗಳ ಪಟ್ಟಿಯನ್ನೇ ಹಾಕಿಕೊಂಡಿದ್ದಳು.

ಇದನ್ನೆಲ್ಲ ಕೃಷ್ಣ ಅಲ್ಲಿ ಇಲ್ಲಿ ಅವರಿವರಲ್ಲಿ ಸಂಗ್ರಹಿಸಿದ್ದ. ಆದರೆ ಸರಸ್ವತಿಗೆ ಹೇಳುವ ಧೈರ್ಯ ಬರಲಿಲ್ಲ. ಹೆಂಡತಿಗೆ ಅನುಮಾನ ಬರುವುದೆಂದು ಎರಡು ದಿನ ಮುಂಚಿತವಾಗಿಯೇ ಬೇರೆ ಊರಿಗೆ ಹೊರಟು ಹೋಗಿದ್ದ. ಆದರೆ ಅಲ್ಲಿಂದ ಸೀದಾ ಅಣ್ಣನ ಮನೆಗೆ ಒಂದಿನ ದಿನ ಬಂದು ಇಳಿದುಕೊಂಡಿದ್ದ.

ಅಣ್ಣನ ಮಾತಿಗೆ ಬೆಲೆ ಕೊಟ್ಟು ಬಂದನಾದರೂ, ಅತ್ತಿಗೆಯ ಜೊತೆ ಜೊತೆಗೆ ಅವರ ಕೆಲಸಗಳಲ್ಲಿ ನೆರವಾದ. ಪೂಜೆ, ಹೋಮ ದಾನ ಇತ್ಯಾದಿಗಳ ಸಂಭ್ರಮದಲ್ಲಿ ಮುಳುಗಿ ಹೋಗಿದ್ದ. ಅನ್ನ ಸಂತರ್ಪಣೆಯ ಸಮಯದಲ್ಲಿ ಹೆಂಡತಿ ಮಕ್ಕಳನ್ನು ಅತಿಯಾಗಿ ಜ್ಞಾಪಿಸಿಕೊಂಡಿದ್ದ. ಮನಸ್ಸಿನಲ್ಲಿ ಸರಸ್ವತಿಯನ್ನು ಬೈದುಕೊಂಡಿದ್ದ. ಯಾರಿಗುಂಟು ಯಾರಿಗಿಲ್ಲ ಈ ಅವಕಾಶ? ನಾವಂತೂ ಇದನ್ನೆಲ್ಲಾ ಮಾಡುತ್ತೇವೋ ಇಲ್ಲವೋ? ಮಾಡಿದುದನ್ನು ನೋಡುವ ಭಾಗ್ಯವೂ ಆ ಪಾಪಿಗಿಲ್ಲವಲ್ಲ. ಎಂದುಕೊಂಡ. ಅತ್ತಿಗೆ ನಮಗೆ ಹಣ ಕೊಡದಿದ್ದರೂ ಚಿಂತೆ ಇಲ್ಲ. ತಮಗೆ ಅಂತ ಇಟ್ಟುಕೊಂಡಿಲ್ಲವಲ್ಲ ಎಂದು ಸಮಾಧಾನಗೊಂಡ.

ಮಧ್ಯಾಹ್ನದ ಊಟ ತಿಂಡಿಯ ಕಲಾಪವೆಲ್ಲ ಮುಗಿದು, ಬಂದವರು ಹೊಟ್ಟೆ ತುಂಬಾ ಉಂಡು, ಕೈ ತುಂಬಾ ಎಲೆ ಅಡಿಕೆ ತಾಂಬೂಲಗಳನ್ನು ಹಿಡಿದು ದಾನ ದಕ್ಷಿಣೆಗಳನ್ನು ಪಡೆದು ಹೊರಟಾಗ, ತಮಗೆ ಈ ತರಹ ಅತಿಥಿ ಸತ್ಕಾರದ ಭಾಗ್ಯ ಇಲ್ಲವಲ್ಲ ಎಂದು ಮರುಗಿದ. ರಾತ್ರಿಯ ಉಟವನ್ನು ಮುಗಿಸಿಕೊಂಡು ಮನೆಗೆ ಬಂದಾಗ ರಾತ್ರಿ ಹನ್ನೊಂದು ಗಂಟೆ ಮೀರಿ ಹೋಗಿತ್ತು. ಸರಸ್ವತಿ ಮಲಗಿಬಿಟ್ಟಿದ್ದಳು. ಏಕೋ ಏನೋ ಸರಸ್ವತಿಯಿಂದ ದೂರವಾಗಿ ಮಲಗಿದ ತಾನಾಗಿಯೇ ಪಾಪಿ ಎಂದು ಬೈದುಕೊಂಡಿದ್ದ.

ಇದೆಲ್ಲಾ ನಡೆದು ಎರಡು ಮೂರು ದಿನಗಳಾಗಿರಬಹುದು. ಒಂದು ಕಡೆ ಜನ ಗುಂಪಾಗಿ ನಿಂತು ಮಾತನಾಡುತ್ತಾ ಇದ್ದುದನ್ನು ಕಂಡು ಕುತೂಹಲದಿಂದ ತಾನು ಹೋಗಿ ಗುಂಪನ್ನು ಸೇರಿಕೊಂಡ. ನಡೆದ ಘಟನೆಯನ್ನು ಕೇಳಿ ವ್ಯಥೆಗೊಂಡಿದ್ದ.

ಆ ದಿನ ನರಸಿಂಹನ ಮನೆಯಲ್ಲಿ ಮುಖ್ಯವಾದ ದಾನ, ಗೋದಾನವನ್ನು ಸ್ವೀಕರಿಸಿದ ಗೋವಿಂದ ಭಟ್ಟರು ಲಕ್ವ ಹೊಡೆದು ಪ್ರಜ್ಞಾಶೂನ್ಯರಾಗಿದ್ದರು. ಬಲಭಾಗ ವೆಲ್ಲಾ ನಿಶ್ಚೇತನವಾಗಿ ಹೋಗಿದ್ದವು. ಎರಡು ದಿನಗಳ ಹಿಂದೆ ಪ್ರಧಾನ ಪುರುಷರಾಗಿ ಮೆರೆದ ಗೋವಿಂದ ಭಟ್ಟರಿಗೆ ಲಕ್ವ ಹೊಡೆಯುವುದು ಎಂದರೇನು? ಅಜಾನುಬಾಹು ಶರೀರದ ಒಂದು ಭಾಗದಲ್ಲಿ ಶಕ್ತಿಯನ್ನು ಕಳೆದುಕೊಂಡು, ಪ್ರಜ್ಞಾಶೂನ್ಯರಾಗಿ ಬಿದ್ದಿರುವು ದೆಂದರೇನು? ಸಮಾಚಾರ ಕೇಳಿ ಅವನ ಬುದ್ಧಿ ಮಂಜಿನಲ್ಲಿ ಮುಳುಗಿತು. ನಂಬಲಾಗದ ಈ ಸತ್ಯವನ್ನು ಸರಸ್ವತಿಗೆ ತಿಳಿಸಲೆಂದು ಮನೆಗೆ ಸರಸರ ಬಂದ.

ಮನೆಗೆ ಬೀಗ ಹಾಕಿತ್ತು ಎಲ್ಲಿ ಹೋದಳಪ್ಪಾ ಎಂದು ಚಿಂತಿಸುತ್ತಿದ್ದವನ್ನು ಸರಸ್ವತಿ ಬಂದು ಕರೆದಳು.

"ರೀ ಕೇಳಿದ್ರಾ? ಆಚೆ ಕಡೇ ಮನೆ ರಾಮಾ ಜೋಯಿಸರು ಸ್ನಾನಕ್ಕೆ ಅಂತ ಹೊಳೆಗೆ ಹೋದವರು ಕಾಲು ಜಾರಿ ಬಿದ್ದು ತಲೆಗೆ ಏಟು ಬಿದ್ದು ಜ್ಞಾನ ಹೋಯಿತಂತೆ. ಆಸ್ಪತ್ರೆಗೆ ಸೇರಿಸಿ ಎರಡು ದಿನವಾಯಿತಂತೆ. ಪಾಪ ಹೆಂಡತಿ ಮಕ್ಕಳು ಅಳುತ್ತಿದಾರೆ.

ಈ ವಿಚಾರ ಕೇಳಿ ಗೊಂದಲಕ್ಕೊಳಗಾದ ಇದೇನಪ್ಪ ವಿಚಿತ್ರ ಎಂದುಕೊಂಡ. ರಾಮಾ ಜೋಯಿಸರು ಆ ದಿನ ನರಸಿಂಹನ ಮನೆಯಲ್ಲಿ ಹಿರಣ್ಯ ದಾನವನ್ನು ಸ್ವೀಕರಿಸಿದವರು. ಎದೆ ಗುಂಡಿಗೆ ನಿಂತಂತಾಯಿತವನಿಗೆ. ತಾನು ಕಂಡುದ್ದನ್ನು ಕೇಳಿದುದನ್ನು ಹೆಂಡತಿಗೆ ತಿಳಿಸಲಾಗದ ಸಂಕಟದಲ್ಲಿ ಒದ್ದಾಡಿದ.

ಅದನ್ನೇ ಯೋಚಿಸುತ್ತಾ ಮಲಗಿದ್ದವನಿಗೆ ಇದ್ದಕ್ಕಿದ್ದಂತೆ ಜ್ಞಾನೋದಯವಾದಂತಾಗಿತ್ತು. ಬೆಳಗಿನ ಝಾವದಲ್ಲಿ ಹೆಂಡತಿಯನ್ನು ಎಬ್ಬಿಸಿ ಹೇಳಿದ ಸ್ವಲ್ಪ ಕಾಫಿ ಮಾಡಿಕೊಡು. ನಾನು ಈಗಲೇ ಹೊರಗೆ ಹೋಗಬೇಕು. ಮುಖ್ಯವಾದ ಕೆಲಸವಿದೆ. ನಿದ್ದೆಗಣ್ಣಿನಲ್ಲಿ ಅವಳು ಮಾತನಾಡದೇ ಕಾಪಿಯನ್ನು ಬೆರೆಸಿಕೊಟ್ಟಳು.

ಕೃಷ್ಣ ಸೀದಾ, ಎರಡು ಮೂರು ಮೈಲಿ ದೂರದಾಚೆ ಇದ್ದ ಒಂದು ತೋಟದ ಮನೆಗೆ ಬಂದ. ಆ ಮನೆಯ ಗೋಪಾಲ ಇವನ ಸ್ನೇಹಿತ. ಸ್ನೇಹಿತನ ಹೆಸರನ್ನು ಹಿಡಿದು ಕರೆದಾಗ, ಸ್ತ್ರೀಯೊಬ್ಬಳು ಬಂದು ಇಣುಕಿ ನೋಡಿದಳು.

ಅವನು ತನ್ನ ಪರಿಚಯ ಹೇಳಿಕೊಂಡಾಗ ಒಳಗೆ ಬನ್ನಿ ಎಂದು ಕರೆದಿದ್ದಳು. ಭಯ ಭೀತಿ ಕುತೂಹಲದಿಂದ ಒಳಗೆ ಬಂದ. ಸಂದೇಹದಿಂದ ಆ ಕಡೆ ಈ ಕಡೆ ನೋಡಿದಾಗ ಅವನ ಊಹೆಯಂತೆ ಏನೋ ನಡೆದಿತ್ತು. ಹಿಂದಿನ ದಿನ, ನಿತ್ಯದಂತೆ ಹೂ ಕೊಯ್ಯಲು ಕೆಂಡಸಂಪಿಗೆ ಮರ ಏರಿದ್ದ ಗೋಪಾಲ ಮರದ ಮೇಲಿನಿಂದ ಬಿದ್ದಿದ್ದ. ಒಂದು ಕಾಲಿನ ಮೂಳೆ ಮುರಿದಿತ್ತು. ಮೂತ್ರ ಕೋಶಕ್ಕೆ ಬಲವಾದ ಪೆಟ್ಟು ಬಿದ್ದಿತ್ತು. ತಕ್ಷಣ ಆಸ್ಪತ್ರೆಗೆ ಹೋಗಿ ಎಕ್ಸ್‌ರೇ ತೆಗೆಸಿ ಶುಶ್ರೂಷೆ ಮಾಡಿಸಿ ಪ್ಲಾಸ್ಟರ್ ಹಾಕಿಸಿ ಮನೆಗೆ ಕರೆದುಕೊಂಡು ಬಂದಿದ್ದರು. ಗೋಪಾಲ ಬೇಜಾರು ಮಾಡಿಕೊಂಡು ಹೇಳಿದ, ಎಷ್ಟೋ ವರ್ಷದಿಂದ ಮರ ಹತ್ತಿದೀನಿ ಎಂದೂ ಬಿದ್ದಿರಲಿಲ್ಲ. ಎಂದಿದ್ದ ನೋವಿನಿಂದ ಮುಖ ತಿವುಚಿ.

ಕೃಷ್ಣನ ಸಂದೇಹ ಬಲವಾಯಿತು ಏನೋ ವಿಚಿತ್ರವಾದುರು ನಡೆಯುತ್ತಿದೆ ಎಂದುಕೊಂಡ. ಎದೆ ಬಲವಾಗಿ ಹೊಡೆದು ಕೊಳ್ಳಲಾರಂಭಿಸಿತು. ಏಕೆಂದರೆ ಅಣ್ಣನ ಮನೆಯಲ್ಲಿ ವಸ್ತ್ರದಾನ ಪಡೆದಿದ್ದವನು ಈ ಗೋಪಾಲನೇ!

ಚಡಪಡಿಸುತ್ತಾ ಹತ್ತು ನಿಮಿಷ ಕುಳಿತಿದ್ದ ಕೃಷ್ಣ ಸೀದಾ ಅಲ್ಲಿಂದ ಬಸ್ಸನ್ನೇರಿ ಪಕ್ಕದೂರಿಗೆ ಬಂದ. ಅಲ್ಲಿ ಅವರ ವಯಸ್ಸಾದ ಸೋದರ ಮಾವ ಸೋದರತ್ತೆ ವಾಸವಾಗಿದ್ದರು. ಭೀತಿಯಿಂದ ಅವರ ಮನೆಯ ಆವರಣದೊಳಕ್ಕೆ ಕಾಲಿಡುತ್ತಿದ್ದಂತೆಯೇ. ಏನೋ ಗಂಭೀರವಾದುರು ನಡೆದಿದೆ ಅಂತ ಎನಿಸಿತ್ತು. ಸೋದರ ಮಾವ, ಸೋದರತ್ತೆ ಮನೆಯಲ್ಲಿ ಇರಲಿಲ್ಲ. ಹಿರಿಯ ಸೊಸೆ ಇದ್ದಳು. ಅವಳು ಗಾಬರಿಯಿಂದ ನಡೆದ ವಿಚಾರ ತಿಳಿಸಿದ್ದಳು.

ಮೊನ್ನೆ ರಾತ್ರಿ ಊರಿಗೆ ಬರುವ ಹೊತ್ತಿಗೆ ಸಮ್ಮತ್ತೆಗೆ ಹುಶಾರಿರಲಿಲ್ಲ. ಏನು ಕರ್ಮವೋ ಏನೋ, ಮುಟ್ಟು ನಿಂತು ಎಂಟು ವರ್ಷಗಳಾಗಿದ್ದವು. ಋಷಿ ಪಂಚಮಿ

ವ್ರತ ಬೇರೆ ಮಾಡುತ್ತಿದ್ದರು ಈಗ ಗರ್ಭಕೋಶದಲ್ಲಿ ಏರುಪೇರಾಗಿದೆ. ಅವರ ಸುಸ್ತು ಸಂಕಟ ನೋಡಲಾರದೇ ಅವರನ್ನು ಆಸ್ಪತ್ರೆಗೆ ಸೇರಿಸಿದ್ದೇವೆ. ಏಕೆ ಹೀಗಾಯಿತೋ ಕಾಣೆವು ಕೃಷ್ಣನ ದಿಗಿಲು ಇಮ್ಮಡಿಸಿತ್ತು. ಅವನ ಮನಸ್ಸಿಗೆ ಕತ್ತಲು ಕವಿದಂತಾಗಿತ್ತು. ಆ ದಿನ ನರಸಿಂಹ ಹಿರಿ ಮುತ್ತೈದೆ ಎಂದು ಸೋದರತ್ತೆಗೆ ಕಳಸ ದಾನ ಮಾಡಿದ್ದ.

ವಿಸ್ಮಯದಿಂದ ಅವನು ಆ ದಿನ ಅಣ್ಣನ ಮನೆಯಲ್ಲಿ ಹತ್ತು ಬಗೆಯ ದಾನ ಪಡೆದವರಲ್ಲಿ ಉಳಿದವರ ಮನೆಯನ್ನು ಹೊಕ್ಕು ವಿಚಾರಿಸಿದ ಎಲ್ಲರ ಮನೆಯಲ್ಲೂ ಒಂದಲ್ಲ ಒಂದು ಆಪತ್ತು ಒದಗಿತ್ತು.

ನರಸಿಂಹನ ಷಡ್ಡುಕ ಸುಬ್ಬಣ್ಣನ ಮಗಳು ಹೊಟ್ಟೆ ನೋವು ಎಂದು ಆಸ್ಪತ್ರೆಗೆ ಸೇರಿದ್ದವಳು ಆಪರೇಷನ್‌ಗೆ ಮೊದಲೇ ಅಸುನೀಗಿದ್ದಳು. ಅವಳಿಗೆ ಮದುವೆಯಾಗಿತ್ತು. ಇನ್ನೊಬ್ಬ ಷಡ್ಡುಕ ನಾರಾಯಣನ ಹೆಂಡತಿ, ಹತ್ತು ವರ್ಷದ ಮೇಲೆ ಚೊಚ್ಚಲು ಬಸಿರಿಯಾಗಿದ್ದವಳಿಗೆ ಅಬಾರ್ಷನ್ ಆಗಿತ್ತು.

ದೂರದ ನೆಂಟರು ವೆಂಕಟ ಕೃಷ್ಣ ಶಾಸ್ತ್ರಿಗಳು ಸ್ಕೂಲಿನಲ್ಲಿ ಮೇಷ್ಟರಾಗಿದ್ದರು ಅವರಿಗೆ ಇದ್ದಕ್ಕಿದ್ದಂತೆ ಬುದ್ಧಿ ಭ್ರಮಣೆಯಾಗಿತ್ತು. ಲೀಲಾವತಿಯ ತಮ್ಮನ ಹೆಂಡತಿ ಅಡಿಗೆ ಮಾಡುವಾಗ ಮೈಕೈ ಸುಟ್ಟುಕೊಂಡಿದ್ದಳು. ಲೀಲಾವತಿಯ ತಮ್ಮನಿಗೆ ಮೋಟಾರ್ ಸೈಕಲ್ ಆಕ್ಸಿಡೆಂಟಾಗಿ ಎಡಗೈ ಮೂಳೆ ಮುರಿದುಕೊಂಡಿತ್ತು. ಇನ್ನೊಬ್ಬ ಸ್ನೇಹಿತನ ಮಗ ಕಳ್ಳತನದ ಅಪವಾದಕ್ಕೀಡಾಗಿದ್ದ. ಇದನ್ನೆಲ್ಲ ಕಣ್ಣಾರೆ ಕಂಡ ಕೃಷ್ಣ ಎದ್ದೆನೋ ಬಿದ್ದೆನೋ ಎಂದು ತನ್ನ ಮನೆಗೆ ಹಿಂದಿರುಗಿದ. ರಾವು ಬಡಿದಂತಿದ್ದ ಅವನ ಮುಖವನ್ನು ಕಂಡು ಸರಸ್ವತಿ ಗಾಬರಿಗೊಂಡಿದ್ದಳು.

ಕೃಷ್ಣ ಅಣ್ಣನ ಮನೆಯನ್ನು ಮಾರಿ ಬಂದ ಹಣದಿಂದ ನಡೆದ ದುರ್ಘಟನೆಗಳ ನ್ನೆಲ್ಲಾ ವಿವರಿಸಿ ಹೇಳಿದ. ನೀನು ಮಕ್ಕಳು ಬರದೇ ಇದ್ದುದು ಒಳ್ಳೆಯದೇ ಆಯಿತು. ಅವತ್ತು ಊಟ ಮಾಡಿದವರಿಗೆ ಏನಾಗುತ್ತೇ? ಆತಂಕದಿಂದ ಕೇಳಿದ್ದ.

ಏನಾಗುತ್ತೇ? ಅಜೀರ್ಣ ಆಗುತ್ತೆ ವಾಂತಿ ಭೇಧಿಯಾಗಿ ಕಾಲರಾ ಆಗಬಹುದು. ನೀವೇನು ಊಟ ಮಾಡಿಲ್ಲವಲ್ಲ ನಿಮಗೇಕೆ ಹೆದರಿಕೆ? ಇದಕ್ಕೆಲ್ಲಾ ನಿಮ್ಮ ಅತ್ತಿಗೆಯ ಪಾಪ ಕರ್ಮಗಳೇ ಕಾರಣ, ಅವರ ಪಾಪಕರ್ಮಗಳನ್ನು ದಾನ ಪಡೆದವರಿಗೂ ಜೊತೆಯಲ್ಲಿ ದಾನ ಮಾಡಿರಬೇಕು. ಬರೀ ದಾನ ಪಡೆಯುವ ಆಸೆ ಏಕೆ? ಕರ್ಮಗಳನ್ನೂ ಹಂಚಿಕೊಳ್ಳಬೇಕು. ಸರಸ್ವತಿ ನಕ್ಕಳು.

ಇದು ನಗುವ ಮಾತಲ್ಲ ಸರಸ್ವತಿ ನನಗೇಕೋ ಗಾಬರಿಯಾಗಿದೆ. ಅತ್ತಿಗೆ ಮಾಡಿರುವ ಕರ್ಮಗಳನ್ನು ಕಣ್ಣಾರೆ ಕಂಡಿರುವವನು ನಾನು. ನನಗಿನ್ನೇನು ಗತಿ ಕಾದಿದೆಯೋ? ಅತ್ತಿಗೆ, ಸುಬ್ಬನ ಜೊತೆ ದೇಹ ಸಂಬಂಧದ ವಿಚಾರವಾಗಿ ತಿಳಿಸಿದ.

ಅದನ್ನು ಕಂಡದ್ದರಿಂದಲೇ ನನಗೆ ನಿನ್ನ ಮೇಲೆ ಆಸಕ್ತಿ ಮೂಡಿದ್ದು. ಅತ್ತಿಗೆ ಏನು ಕರ್ಮ ಮಾಡಿದಾರೋ, ಅವರ ನೆರಳು ಬಿದ್ದವರಿಗೆ ಒಂದಲ್ಲ ಒಂದು ಕಷ್ಟ. ಅಣ್ಣ ಮಂಕಾದ, ಸುಬ್ಬ ಸುಟ್ಟುಕೊಂಡು ಸತ್ತ. ನಾನು ಹೀಗೆ ಬಡತನದಲ್ಲಿ ಬೇಯುತ್ತಾ ಇದೀನಿ. ನಮ್ಮ ಮಕ್ಕಳನ್ನು ದತ್ತು ತೆಗೆದುಕೊಳ್ಳಲಿಲ್ಲ ಎಂದು ಬೈದು ಕೊಂಡೆಯಲ್ಲ. ಸಧ್ಯ ಆ ಆಸ್ತಿಯ ಒಂದು ಕಿಲುಬು ಕಾಸೂ ಬೇಡ ನಮಗೆ. ನಾವು ಈ ಊರನ್ನೇ ಬಿಟ್ಟು ಹೊರಟು ಹೋಗೋಣ. ಅತ್ತಿಗೆಯ ಮುಖವನ್ನು ನೋಡಿದರೇ ನಮಗೆ ಕೆಡುಕಾಗ ಬಹುದು."ತಳಮಳದಿಂದ ನುಡಿದ.

"ಬೇರೆ ಯಾರಿಗೂ ಯಾವ ಅನುಮಾನವೂ ಇಲ್ವಾ?.. ಯಾರೂ ಹೆದರಿಲ್ವಲ್ಲಾ?"

"ಇವತ್ತಲ್ಲ ನಾಳೆ ಅನುಮಾನ ಬರಬಹುದು. ಅವರನ್ನು ಬೇಕಾದರೆ ಕಡಿದು ಹಾಕಲಿ ನಮಗೇನಾಗಬೇಕು? ನೀನು ಈಗಲೇ ಗಂಟು ಮೂಟೆ ಕಟ್ಟು ಇಲ್ಲಿಂದ ದೂರ ಹೊರಟು ಹೋಗೋಣ."

ಆಸ್ತಿಯನ್ನು ಮಾರಿದಾಗ ಕೊಟ್ಟ ಹಣದಿಂದ ಕೊಂಡಿದ್ದ ವಸ್ತುಗಳನ್ನು ಬಿಸ್ಹಾಕಿ ಬಿಡು. ಆಸ್ತಿಯಲ್ಲಿ ಕಿಂಚಿತ್ತು ನಮಗೆ ಬೇಡ. ಗಂಡ ಯಾವುದೋ ದಿಗಿಲಿನಿಂದ ನುಡಿದಾಗ ಅವಳಿಗೂ ಆತಂಕವಾಗಿತ್ತು. ತಮಗೆ ಬೇಕೆನಿಸಿದ ಕೆಲವು ವಸ್ತುಗಳನ್ನು ತೆಗೆದಿರಿಸಿಕೊಂಡರು. ಮಕ್ಕಳನ್ನು ಎಳೆದುಕೊಂಡು ಜಟಕಾ ಹತ್ತಿ ರೈಲ್ವೇ ಸ್ಟೇಷನ್ನಿನ ದಾರಿಯನ್ನು ಹಿಡಿದಿದ್ದರು.

ಅಣ್ಣನ ಮನೆಯಲ್ಲಿ ಎರಡು ಹೊತ್ತು ಮೃಷ್ಟಾನ್ನ ಭೋಜನವನ್ನುಂಡ ಕರ್ಮಕ್ಕೆ, ಸಂಸಾರ ಸಮೇತವಾಗಿ ತಲೆ ಮರೆಸಿಕೊಂಡು ದೇಶಾಂತರ ಹೊರಟಿದ್ದ! ಕರ್ಮಶೇಷ ಕಳೆಯಬೇಕಾಗಿತ್ತು!

* * *

೧೦. ಹರಿದ ಜಾತಕ

ಸರಳಳ ಮನಸ್ಸು ಗೊಂದಲಕ್ಕೊಳಕ್ಕಾಗಿತ್ತು. ಹೀಗೂ ಸಾಧ್ಯವೇ ಅಥವಾ ತಾನೇನಾದರೂ ಆತನನ್ನು ತಪ್ಪಾಗಿ ಕಲ್ಪಿಸಿಕೊಂಡಿದ್ದೇನೆಯೇ ಅಂತ ಕಸಿವಿಸಿಯಾಗಿತ್ತು. ಎಷ್ಟೋ ವರ್ಷಗಳಿಂದ ಬದಲಾಗದ ಅವನು ಇದ್ದಕ್ಕಿದ್ದಂತೆಯೇ ಬದಲಾಗಿರುವುದನ್ನು ಕಂಡು ಅಚ್ಚರಿಯಾಗಿತ್ತು. ಅವನ ಮೇಲೆ ಯಾವುದೋ ಪವಾಡ ಪ್ರಭಾವ ಬೀರಿರಬಹುದೆ ಮಂತ್ರ ಕೆಲಸ ಮಾಡಿರಬಹುದೇ ಎಂದು ಯೋಚಿಸಿದಾಗ ಇದ್ದಕ್ಕಿದ್ದಂತೆಯೇ ತಾನು ಅವನು ಮಲಗುತ್ತಿದ್ದ ಹಾಸಿಗೆಯ ಅಡಿಯಲ್ಲಿ ಇಟ್ಟಿದ್ದ ತಾಯಿತದ ನೆನಪಾಯಿತು. ಹೌದು ಆ ತಾಯಿತದ ಪ್ರಭಾವವೇ ಇರಬೇಕು. ಇಲ್ಲದಿದ್ದರೆ ಒಂದು ತಿಂಗಳ ಕೆಳಗೆ ಇದ್ದ ನಡವಳಿಕೆಗೂ ಈಗಿನ ನಡವಳಿಕೆಗೂ ವ್ಯತ್ಯಾಸ ಹೇಗೆ ಉಂಟಾಗುತ್ತಿತ್ತು?

ಹೌದು ಈಗ್ಗೆ ಒಂದು ತಿಂಗಳ ಕೆಳಗೆ ಕೂಡಾ, ತಾನು ಅವನನ್ನು ಮದುವೆಯಾಗಿ ಬಂದಾಗ ಹೇಗೆ ಇದ್ದನೋ ಅದೇ ನಡೆವಳಿಕೆ. ಅವನು ಹುಟ್ಟಿ ಬೆಳೆದುದೇ ಹಾಗೇ. ಅವನನ್ನು ತನ್ನಿಂದ ಬದಲಾಯಿಸಲು ಸಾಧ್ಯವಿಲ್ಲ ಎಂದು ಖಚಿತವಾಗಿ ತಿಳಿದಿದ್ದರೂ, ಅವನು ಬದಲಾಗಲಿ ಎಂದು ಮನಸ್ಸು ಹಾರೈಸುತ್ತಿತ್ತು. ಅವನು ಬದಲಾಗಬೇಕು ಎಲ್ಲರಂತೆ ತಾನೂ ಗಂಡನೊಡನೆ ನಗುನಗುತ್ತಾ ಬಾಳ ಬೇಕೆಂದು ಆಸೆಯಾಗುತ್ತಿತ್ತು. ಅವನು ಕ್ರೂರಿಯಂತೆ ನಡೆದು ಕೊಂಡಾಗಲೂ, ಇವಳು ಪತಿವ್ರತೆಯಂತೆ ಅವನನ್ನು ಸಹಿಸಿದ್ದಳು. ಅವನನ್ನು ಬದಲಿಸಲು ಮಾಡದ ಪೂಜೆಗಳಿಲ್ಲ; ವ್ರತಗಳಿಲ್ಲ. ಜ್ಯೋತಿಷಿಗಳನ್ನು ಕಂಡಿದ್ದಳು; ಭವಿಷ್ಯವನ್ನು ಕೇಳಿದ್ದಳು. ಅವರನ್ನು ಸಲಹೆಗಳನ್ನು ಕೇಳಿ ಅದರಂತೆ ಏನು ಬೇಕೋ ಅದನ್ನು ಮಾಡುತ್ತಿದ್ದಳು. ಆದರೂ ಒಳಗೊಳಗೇ ಭಯ. ಅವನಿಗೆ ತಿಳಿದು ತನ್ನನ್ನು ಹೊಡೆದು ಬಡಿದರೆ ಅಂತ. ಅವನು ಹೆಚ್ಚಿಗೆ ಮನೆಯಲ್ಲೇ ಇಲ್ಲದೇ ಇರುತ್ತಿದ್ದುದು ಇವಳಿಗೆ ಸಹಾಯಕ ವಾಗುತ್ತಿತ್ತು.

ಅವಳಿಗೆ ತಿಳಿದಂತೆ ಅವನು ಅವಳನ್ನು ಮದುವೆಯಾದ ಹೊಸದರಲ್ಲಿ ಎಂಟುಹತ್ತು ದಿನಗಳು ಮಾತ್ರ ಅವಳ ಜೊತೆಗಿದ್ದ. ಮದುವೆ ಎಂದರೆ ಸೊಗಸು ಎಂದು ಕನಸು ಕಂಡಿದ್ದ ಸರಳ ನಿರಾಶೆಗೊಂಡಿದ್ದಳು. ತಂದೆ ತಾಯಿಯಿಲ್ಲದ ಹುಡುಗಿ ಸೋದರ ಮಾವನ ಬಳಿ ಬೆಳೆದವಳು. ತುಂಬಾ ಆಸ್ತಿವಂತನಾದ ಸುಂದರ

ಸಿಕ್ಕಿದಾಗ, ಸೋದರ ಮಾವ ಹಿಂದೆ ಮುಂದೆ ವಿಚಾರಿಸದೆ ಅವಳ ಮದುವೆ ಗೊತ್ತು ಮಾಡಿದ್ದರು. ಮದುವೆಯಾದಾಗ ಸುಂದರನ ತಂದೆತಾಯಿಗಳು ಬದುಕಿದ್ದರು. ಮದುವೆಯಾದ ರಾತ್ರಿ ಅತ್ತೆ ಅವಳನ್ನು ಕರೆದು ಹೇಳಿದ್ದರು.

ಸರಳಾ ನೀನು ತುಂಬಾ ಒಳ್ಳೆ ಹುಡುಗಿ ಅಂತ ತಿಳಿದು ನನ್ನ ಸೊಸೆಯನ್ನಾಗಿ ಆರಿಸಿದೀನಿ. ಸುಂದರ ಕೆಟ್ಟ ಚಾಳಿಯನ್ನು ಹಿಡಿದಿದ್ದಾನೆ. ಒಳ್ಳೆಯವನಲ್ಲ. ಆದರೆ ಎಷ್ಟಾಗಲಿ ಅವನು ನನ್ನ ಮಗ. ಇವತ್ತಿನಿಂದ ಅವನನ್ನು ನಿನ್ನ ಮಡಿಲಿಗೆ ಹಾಕಿದ್ದೀನಿ. ಅವನನ್ನು ನಾನು ಸಹಿಸಿದಂತೆಯೇ ಸಹಿಸುವುದು ನಿನ್ನ ಕರ್ತವ್ಯ. ಈ ಆಸ್ತಿ ಪಾಸ್ತಿ ಎಲ್ಲಾ ಹಾಳಾಗದಂತೆ ಜೋಪಾನ ಮಾಡುವ ಜವಾಬ್ದಾರಿ ನಿನ್ನದು. ನಾನು ಸ್ವಾರ್ಥಿ ನನ್ನ ಮಗನ ಸಂಸಾರ ಚೆನ್ನಾಗಿ ಆಗಲಿ ಎಂಬ ಆಸೆ ನನಗೆ ನೀನು ಅದನ್ನು ನೆರವೇರಿಸುತ್ತೀಯಾ ಎಂದು ನಂಬಿದೀನಿ. ಯಾವುದೇ ಕಾರಣಕ್ಕೂ ಅವನನ್ನು ಬಿಟ್ಟು ಹೋಗಬಾರದು. ಈ ಮನೆ ನಿನ್ನದು. ಗಂಡ ನಿನ್ನವನು ಆಂತ ತಿಳಿದು ಎಲ್ಲಾ ನಿಭಾಯಿಸಬೇಕು. ದೇವರು ನಿನಗೆ ಸಹಾಯಕನಾಗಿರುತ್ತಾನೆ. ಆಕೆ ಹೃತ್ಪೂರ್ವಕವಾಗಿ ಅವಳನ್ನು ಆಶೀರ್ವದಿಸಿದ್ದರು. ಸರಳ ಗುಟ್ಟಾಗಿ ಅತ್ತು ತನಗೆ ತಾನೇ ಸಮಾಧಾನವನ್ನು ಹೇಳಿಕೊಂಡಿದ್ದಳು.

ಅವರ ಆಶೀರ್ವಾದದ ಬೆಂಬಲ ತನಗಿದೆ ಎಂಬ ಧೈರ್ಯದಿಂದ ಸರಳ ಅವನ ಬಳಿಗೆ ಬಂದಿದ್ದಳು. ಹತ್ತಿರದಲ್ಲಿ ನಿಂತಿದ್ದ ಅವಳನ್ನು ಮೇಲಿನಿಂದ ಕೆಳಗಿನವರೆಗೆ ದಿಟ್ಟಿಸಿದ ಸುಂದರ ಅವಳನ್ನು ತನ್ನ ಬಳಿಗೆ ಎಳೆದುಕೊಂಡಿದ್ದ. ಗಂಡನ ಪ್ರೀತಿ ಎಂಬುದರ ಅರ್ಥ ಹುಡುಕುವ ಮೊದಲೇ ಅವಳು ಎಲ್ಲವನ್ನು ಕಳೆದುಕೊಂಡಿದ್ದಳು. ಅವಳ ವ್ಯಕ್ತಿತ್ವಕ್ಕೆ ಬೆಲೆಯೇ ಇಲ್ಲದಂತೆ ವರ್ತಿಸಿದ್ದ ಅವನ ಧಾಳಿಗೆ ನಲುಗಿದ ಸರಳ ಮಂಕಾದಳು. ಉತ್ಸಾಹವನ್ನು ಕಳೆದುಕೊಂಡಳು.

೮-೧೦ ದಿನ ಮನೆ ಬಿಟ್ಟು ಅಲುಗಾಡದ ಸುಂದರ, ತನಗೆ ಬೇಕೆನಿಸಿದಾಗಲೆಲ್ಲ ಸರಳಳನ್ನು ತನ್ನ ಬಳಿಗೆ ಎಳೆದುಕೊಳ್ಳುತ್ತಿದ್ದ. ವಿರೋಧಿಸಲು ಶಕ್ಯವಿಲ್ಲದೆ ಮರದ ಕೊರಡಿನಂತೆ ಬಿದ್ದಿರುತ್ತಿದ್ದಳು. ಅಂತಹ ಸಮಯದಲ್ಲೆಲ್ಲಾ ಹಂಗಿಸುತ್ತಿದ್ದ.

ನೀನೂ ಒಂದು ಹೆಣ್ಣಾ? ಗಂಡನ್ನ ಹೇಗೆ ಸಂತೋಷ ಪಡಿಸಬೇಕು ಅಂತ ಕೂಡಾ ಗೊತ್ತಿಲ್ಲವಲ್ಲ ನಿನಗೆ. ನೀನು ಇಂತಹವಳು ಅಂತ ಗೊತ್ತಿದ್ದರೆ ನಿನ್ನನ್ನು ಮದುವೆಯಾಗುತ್ತಿರಲಿಲ್ಲ. ಇಲ್ಲಿ ಕೆಲವು ಮ್ಯಾಗಸೈನ್‌ಗಳಿವೆ ಓದು ಅದರಲ್ಲಿರುವುದನ್ನೆಲ್ಲಾ ತಿಳಿದುಕೊಂಡು ನನ್ನನ್ನು ರಂಜಿಸಬೇಕು. ಮುಖದ ಬಳಿ ಕೆಲವು ಹಾಳೆಗಳನ್ನು ತಿರುಗಿಸಿದ. ಕತ್ತೆತ್ತದೆ ಕುಳಿತಿದ್ದ ಅವಳನ್ನು ತಳ್ಳಿ, ಅನಾವಶ್ಯಕವಾಗಿ ಹೊಡೆದು ಬಡಿದು ಹಿಂಸಿಸಿದ್ದ. ತಲೆ ಎತ್ತಿ ಗಂಡನಕಡೆ ನೋಡಲೇ ಇಚ್ಚಿಸುತ್ತಿರಲಿಲ್ಲ.

ಅತ್ತೆಯ ಮಾತಿನಿಂದಲೇ ಗಂಡ ಎಂದರೇನೆಂದು ಸ್ವಲ್ಪ ತಿಳಿದುಕೊಂಡಿದ್ದ ಅವಳು ಅವನ ಪ್ರತ್ಯಕ್ಷ ನಡೆವಳಿಕೆಯಿಂದ ಅವನನ್ನು ಪೂರ್ತಿಯಾಗಿ ಅರ್ಥ

ಮಾಡಿಕೊಂಡಳು. ಮೂಕ ಹಸುವಿನಂತೆ ಅವನ ಹಿಂಸೆಗಳನ್ನು ತಡೆದುಕೊಂಡಳು. ಆದರೆ ಅವನು ಹೇಳಿದಂತೆ ಅವನನ್ನು ಅವಳಿಂದ ರಂಜಿಸಲು ಆಗಲೇ ಇಲ್ಲ. ಅವನ ಕಾಟಗಳಿಗೆ ಬೇಸರಿಸಿದ ಅವಳಿಗೆ ಮೂರು ನಾಲ್ಕು ದಿನಗಳು ಅವನಿಂದ ದೂರವಿರುವ ಅವಕಾಶ ಸಿಕ್ಕಿತು. ಆಗ ಅವನು ಮನೆಯಿಂದ ಹೊರಗೆ ಹೋದವನು ಒಂದು ವಾರವಾದರೂ ವಾಪಸ್ಸು ಬರಲಿಲ್ಲ. ಅವಳಿಗೆ ಅತ್ತೆಯನ್ನು ಕೇಳಬೇಕೆಂದೂ ಎನಿಸಲಿಲ್ಲ. ಸುಮ್ಮನಿದ್ದು ಬಿಟ್ಟಳು.

ಅಂದಿನಿಂದ ಅದೇ ಪರಿಪಾಠವಾಯಿತು. ಆಗಾಗ್ಗೆ ಮನೆಯಿಂದ ಹೊರಗೆ ವಾರಗಟ್ಟಲೆ ಇರಲಾರಂಭಿಸಿದ. ಅವನ ಕಾಟ ತಪ್ಪಿತು ಎಂದು ಸುಮ್ಮನಿರುತ್ತಿದ್ದಳು. ಇದೇ ಸಮಯದಲ್ಲಿ ಅತ್ತೆ ಖಾಯಿಲೆ ಮಲಗಿದಳು.

"ಏನಮ್ಮಾ ಸರಳಾ, ನೀನು ಬಂದು ಸುಂದರನ್ನ ಸರಿ ಮಾಡ್ತೀಯ ಎಂದು ಕೊಂಡಿದ್ದೆ ಅವನ ಚಾಳಿಯನ್ನು ನೀನು ಬಿಡಿಸ್ಲೇ ಇಲ್ಲ. ನೀನು ಅವನನ್ನು ನಿನ್ನ ಕೈಯಲ್ಲಿಟ್ಟು ಕೊಳ್ಳಲಾಗ್ಲಿಲ್ಲ. ಎಂದು ಆಗಾಗ್ಗೆ ಹಂಗಿಸುತ್ತಿದ್ದಳು. ಕಣ್ಣೀರು ಹಾಕುತ್ತಿದ್ದಳು. ಇದ್ಯಾವುದಕ್ಕೂ ಮಾತಾಡದೆ ಮೂಕಿಯಂತೆ ಇದ್ದು ಬಿಡುತ್ತಿದ್ದಳು. ಒಂದು ದಿನ ಕರೆದು ಹತ್ತಿರ ಕೂರಿಸಿಕೊಂಡರು.

ಸರಳಾ, ನೀನು ನನಗೆ ಭಾಷೆ ಕೊಡಬೇಕು. ಸುಂದರನ್ನ ನೀನು ನಿನ್ನ ದಾರಿಗೆ ತರಲೇಬೇಕು. ಅದಕ್ಕಾಗಿ ಯಾವ ವ್ರತವಾದರೂ ಸರಿ ಮಾಡಬೇಕು. ನನ್ನ ಮಗ ಬದಲಾಗಲೇ ಬೇಕು. ಇದನ್ನು ನೀನು ನಡೆಸಿಕೊಡಲೇ ಬೇಕು. ಹಾಗಂತ ಮಾತುಕೊಡು ಎಂದು ಅವಳಿಂದ ಭಾಷೆ ತೆಗೆದುಕೊಂಡಿದ್ದಳು. ಆ ಮಾತುಗಳೇ ಅವರ ಕಡೆಯ ಮಾತು ಗಳಾಗಿತ್ತು. ಬೆಳಿಗ್ಗೆ ಅವರು ಮತ್ತೆ ಏಳಲೇ ಇಲ್ಲ.

ಅತ್ತೆಯೂ ಇಲ್ಲದ್ದನ್ನು ಕಂಡು ಸರಳ ಕುಸಿದಳು. ಸುಂದರ ಮನೆಯಲ್ಲಿರಲಿಲ್ಲ. ಮಾವನವರು ಮಗುವಿನಂತೆ ರೋಧಿಸುತ್ತಿದ್ದರು. ಯಾರೋ ಬಂದು ಸಮಾಧಾನ ಮಾಡಿದ ಮೇಲೆ ಮಾವನವರೇ ಮುಂದಿನದನ್ನೆಲ್ಲ ನಡೆಸಿದರು. ಸುಂದರ ಬರುವ ಹೊತ್ತಿಗೆ ಎಲ್ಲರೂ ಹೊರಟಿದ್ದರು. ತಾಯಿಯನ್ನು ಕಳೆದುಕೊಂಡ ಸುಂದರ ಬೇರೆಯವರ ಮಾತಿಗೆ ಒಪ್ಪಿ ಎಲ್ಲಾ ನಡೆಸಿದರೂ ಏಕೋ ಏನೋ ಸರಳಳ ಮೇಲೆ ಕಿಡಿ ಕಾರುತ್ತಿದ್ದ. ಅವಳನ್ನು ದ್ವೇಶಿಸಲಾರಂಭಿಸಿದ.

ಇದ್ದಕ್ಕಿದ್ದಂತೆ ಮಾವನೂ ಮನೆಬಿಟ್ಟು ತೀರ್ಥಯಾತ್ರೆ ಹೊರಟು ಹೋದರು. ಈಗ ನಿಜಕ್ಕೂ ಸರಳ ಏಕಾಂಗಿ. ಸುಂದರ ಮನೆಗೆ ಬಂದರೆ ಬಂದ ಇಲ್ಲದಿದ್ದರೆ ಇಲ್ಲ. ನಿರ್ಲಿಪ್ತತೆಯನ್ನು ಬೆಳೆಸಿಕೊಂಡ ಸರಳ ಪೂಜೆ ಪುನಸ್ಕಾರ ವ್ರತಕತೆಗಳಲ್ಲಿ ದಿನಗಳೆಯಲಾರಂಭಿಸಿದಳು. ಮನೆಗೆ ಬಂದರೂ ಗಂಡ ಹೆಂಡಿರಲ್ಲಿ ಮಾತಿಲ್ಲ ಕತೆಯಿಲ್ಲ. ಸದಾ ಸಿಡಿಸಿಡಿ ಎಂದು ತನಗೆ ಬೇಕಾದ್ದನ್ನು ದಕ್ಕಿಸಿಕೊಂಡು ತನಗೆ ಬೇಕಾದ್ದನ್ನು ಅನುಭವಿಸಿ ಹೊರಟು ಬಿಡುತ್ತಿದ್ದ. ಮಾತು ಮಾತಿಗೂ ಅವಳನ್ನು

ಹಂಗಿಸುವುದು, ಬೈಯುವುದು ಹೊಡೆಯುವುದು ಎಲ್ಲಾ ನಡೆಯುತ್ತಿತ್ತು. ಅವನೊಡನೆ ಎದುರು ಮಾತುಕೂಡ ಆಡಲು ಇಷ್ಟಪಡದ ಸರಳ ಸುಮ್ಮನಿದ್ದು ಬಿಡುತ್ತಿದ್ದಳು.

ಹೀಗೇ ಕೆಲವಾರು ವರ್ಷಗಳು ಕಳೆದವು. ಇವಳಿಗೆ ಸ್ನೇಹಿತೆಯರು ಕೂಡಾ ಯಾರಿರಲಿಲ್ಲ. ಅಕ್ಕ ಪಕ್ಕದ ಮನೆಯಲ್ಲಿ ಯಾರಿದ್ದಾರೆಂದು ಸರಿಯಾಗಿ ತಿಳಿದು ಕೊಂಡಿರಲಿಲ್ಲ. ಮನೆಕೆಲಸಕ್ಕೆ ಬರುತ್ತಿದ್ದ ಸಣ್ಣಮ್ಮ ಒಬ್ಬಳೇ ಇವಳ ಗೆಳತಿ.

ಸಣ್ಣಮ್ಮ ಅವರ ಮನೆಯಲ್ಲಿ ಎಷ್ಟೋ ವರ್ಷಗಳಿಂದ ಮನೆಗೆಲಸ ಮಾಡುತ್ತಿದ್ದ ವಳು ಸರಳ ಅನುಭವಿಸುತ್ತಿದ್ದ ಮೂಕವೇದನೆ ಕಂಡು ಅವಳ ಮನ ಮರಗುತ್ತಿತ್ತು.

"ಅಮ್ಮಾ ನೀವು ಬಹಳ ಸಾಧು ಕಣ್ರಮ್ಮಾ ಹಂಗ್ಯಾಕೆ ಸುಮ್ಮನಿದ್ದು ಬಿಡ್ತೀರಿ? ನೀವೂ ನಾಲ್ಕು ಮಾತು ಅನ್ನಿ."

"ಇಲ್ಲ ಸಣ್ಣಮ್ಮ ನಾನೂ ಹಾಗೆ ಮಾಡಿದರೆ ನನ್ನನ್ನು ಮನೆ ಬಿಟ್ಟು ಹೊರಗೆ ಹಾಕ್ತಾರೆ ಅಷ್ಟೆ ನಾನು ಇಲ್ಲೇ ಇದ್ದು ಅವರನ್ನು ಸರಿದಾರಿಗೆ ತರುವ ಪ್ರಯತ್ನ ಮಾಡ್ತೀನಿ. ನಮ್ಮ ಅತ್ತೆ ನನ್ನನ್ನು ನಂಬಿ ನನ್ನ ಮೇಲೆ ಈ ಜವಾಬ್ದಾರಿ ಹೊರಿಸಿ ಹೋಗಿದ್ದಾರೆ. ನಾನು ಅವರಿಗೆ ಮಾತು ಕೊಟ್ಟಿದ್ದೀನಿ."

"ಏನೋಮ್ಮ ನನಗಂತೂ ಆಯಪ್ಪ ಸರಿಯಾಗ್ತಾನೆ ಅಂದ್ರೆ ನಂಬಿಕೇನೇ ಬರುಲ್ಲ. ನೀವೂ ಚಿಕ್ಕವರು. ಸುಮ್ಮನೆ ಶ್ರಮಪಡ್ತೀರಿ ಅಷ್ಟೆ. ಬಿಟ್ಟು ಹೋಗಿ ಅತ್ಲಾಗೆ."

"ನನ್ನ ಕೈಲಿ ಆಗುಲ್ಲ ಅಂದ್ರೆ ನಾನಿನ್ನೆಲ್ಲಿಗೆ ಹೋಗ್ಲೀ ನೀನೇ ಹೇಳು. ನನಗೇನು ಅಪ್ಪ ಅಮ್ಮ ಇದಾರೆಯೆ? ಇಲ್ಲಿಗೆ ಬಂದಾಯಿತು. ಇಲ್ಲಿಯ ಕಷ್ಟ ಸುಖ ನನ್ನದು ನನ್ನ ಪ್ರಯತ್ನವನ್ನು ನಾನು ಬಿಡುಲ್ಲ."

"ನೀವಂತೂ ಬಹಳ ತಿಳಿದವರು ನಮ್ಮ ಹಾಗೇ ಹಳ್ಳಿ ಮುಕ್ಕರೆ? ಯಾವುದಾದರೂ ಮಾಟಾನೋ ಮದ್ದೋ ಮಾಡಿಸಿ. ನಿಮ್ಮ ಕಡೀಗೆ ಬಂದೇ ಬರ್ತಾನೆ ಆವಯ್ಯ."

"ಮಾಟ ಮದ್ದು ನಮ್ಮಂತಹವರಿಗಲ್ಲ ಅಲ್ಲ ಸಣ್ಣಮ್ಮ ಬೇಕಾದರೆ ದೇವಸ್ಥಾನದ ಪೂಜಾರಿಗಳನ್ನು ಕೇಳಿ, ತಾಯಿತ ಮಾಡಿಸಿ ತರಬಹುದು. ಪೂಜೆ ವ್ರತ ಮಾಡಿಯೇನು."

"ಅದನ್ನೇ ಮಾಡಿ. ಊರಾಚೆ ಇರುವ ಆಂಜನೇಯನ ದೇವಸ್ಥಾನದಲ್ಲಿ ತಾಯಿತ ಮಾಡಿಕೊಡ್ತಾರಂತೆ. ಯಾರು ಮನಸ್ನಾಗೆ ಏನು ಇಟ್ಟುಕೊಂಡರೂ ಅದು ನಡೆಯುತ್ತಂತೆ."

"ಅದನ್ನೂ ಮಾಡಿ ನೋಡ್ತೀನಿ. ಗುರುವಾರ ಹೋಗೋಣ ನನ್ನ ಜೊತೆ ಬರ್ತೀಯಾ? ನನಗೂ ಹೋಗ್ಬೇಕು ಅಂತ ಇದೆ."

"ಧಾರಾಳವಾಗಿ ನೀವು ಕರೆಯುವುದು ಹೆಚ್ಚೋ? ನಾನು ಬರುವುದು ಹೆಚ್ಚೋ?"

"ಸರಿ. ನೀನು ಬೇರೆ ಯಾರಿಗೂ ಏನನ್ನೂ ಹೇಳಬಾರದು."

"ನನ್ನನ್ನು ನಂಬಿ ಅಮ್ಮ ನಿಮ್ಮ ಬಾಳು ನೇರವಾದರೆ ನನಗೆ ಅದಕ್ಕಿಂತ ಬೇರೆ ಇನ್ನೇನು ಬೇಕು?" ಮನದುಂಬಿ ಹೇಳಿದ್ದಳು.

ಅಂದುಕೊಂಡಂತೆ ಗುರುವಾರ ಸರಳ ಸಣ್ಣಮ್ಮ ಊರಾಚೆಯಲ್ಲಿರುವ ಆಂಜನೇಯನ ಗುಡಿಗೆ ಹೋದರು. ಹಣ್ಣು ಕಾಯಿ ಕೊಟ್ಟು ಅರ್ಚನೆ ಮಾಡಿಸಿದಳು. ಭಕ್ತಾದಿಗಳೆಲ್ಲ ತೆರಳಿದ ನಂತರ ಸರಳ ಪೂಜಾರಿಯೊಡನೆ ಮಾತನಾಡಿದಳು.

ಅವಳ ಸಮಸ್ಯೆಗಳನ್ನೆಲ್ಲ ಶಾಂತ ಚಿತ್ತದಿಂದ ಕೇಳಿ ತಿಳಿದುಕೊಂಡ ಆತ ನುಡಿದರು.

ಜನಗಳ ಸಮಸ್ಯೆಗಳನ್ನೆಲ್ಲಾ ಪಾರು ಮಾಡುವವನೇ ಈ ಮಹಾಬಾಹು. ಇವನನ್ನು ನಂಬಿ ಇವನನ್ನು ಭಜಿಸಿ. ನಿಮ್ಮ ಕಷ್ಟಗಳೆಲ್ಲಾ ಪರಿಹಾರವಾಗುತ್ತದೆ. ನಾನು ಒಂದು ಸರ್ವಸಿದ್ಧಿ ಯಂತ್ರ ತಯಾರಿಸಿಕೊಡುತ್ತೇನೆ. ಅದನ್ನು ಅವರು ಮಲಗುವ ಹಾಸಿಗೆಯ ಅಡಿಯಲ್ಲಿ ಇಡಿ. ಎಲ್ಲರ ಕಷ್ಟಗಳೂ ತಾನೇ ತಾನಾಗಿ ದೂರವಾಗುತ್ತದೆ.

ನಿಮ್ಮಿಂದ ತುಂಬಾ ಉಪಕಾರವಾಯಿತು. ನಾನಿನ್ನು ಬರ್ತೀನಿ ಎಂದು ಆತನಿಗೆ ನಮಸ್ಕರಿಸಿ, ಎಂದು ಬರಲಿ? ಎಂದು ಕೇಳಿದಳು.

ಭಾನುವಾರ ಬನ್ನಿ. ನಾನು ಎಲ್ಲಾ ಸಿದ್ಧ ಮಾಡಿಟ್ಟಿರ್ತೀನಿ. ಎಲ್ಲಾ ಒಳ್ಳೆಯದಾಗುತ್ತೆ. ಮತ್ತೊಮ್ಮೆ ಹರಸಿ ಗರ್ಭಗುಡಿಯ ಒಳಗೆ ಸರಿದರು.

ಭಾನುವಾರ ಸರಳ ಸಣ್ಣಮ್ಮನೊಡನೆ ಹೋಗಿ ಅವರು ಕೊಟ್ಟ ತಾಯಿತವನ್ನು ತೆಗೆದುಕೊಂಡು ಬಂದಳು. ಗಂಡನ ಹಾಸಿಗೆಯ ಮೆತ್ತೆಯಡಿ ತಾಯಿತವನ್ನು ಕಾಣಿಸ ದಂತೆ ಮುಚ್ಚಿಟ್ಟು ದೇವರನ್ನು ಮನಸಾರೆ ಬೇಡಿಕೊಂಡಳು.

ಏನಾಶ್ಚರ್ಯ? ಒಂದು ತಿಂಗಳಿನಿಂದ ಸುಳಿವೇ ಇಲ್ಲದಿದ್ದ ಗಂಡ ಬೆಳಿಗ್ಗೆ ಏಳುತ್ತಿರುವ ಸಮಯಕ್ಕೇ ಹಾಜರು. ಅವನನ್ನು ಕಂಡೊಡನೆಯೇ ಅನಿಸಿತು– ಅವನಲ್ಲಿ ವಿಪರೀತ ಬದಲಾವಣೆಗಳಾಗಿವೆ ಎಂದು. ಅತಿ ಬಳಲಿದ್ದಾನೆನಿಸಿತು. ಆದರೆ ಮಾತಾಡುವ ಧೈರ್ಯವಾಗಲಿಲ್ಲ.

ಪ್ರತಿ ಸಲ ಅವನು ಬಂದಾಗಲೂ ಕಂಡರೂ ಕಾಣದವಳಂತೆ ಇರುತ್ತಿದ್ದಳು. ಅದೇ ರೀತಿ ಈ ಸಾರಿಯೂ ಸುಮ್ಮನಿದ್ದು ಬಿಟ್ಟಳು. ಆದರೂ ಅವನಲ್ಲಾಗಿದ್ದ ಮಾರ್ಪಾಡು ಕಂಡು ಬಂದಿತ್ತು.

ಯಾವುದೇ ರೀತಿಯ ಸಿಡುಕು ಸೆಡವುಗಳಾಗಲೀ, ಕೋಪ ತಾಪಗಳಾಗಲೀ ಕಂಡು ಬರಲಿಲ್ಲ. ತನ್ನ ಪಾಡಿಗೆ ತಾನು ಇದ್ದು ಬಿಡುತ್ತಿದ್ದ. ಇವಳ ಬಳಿಗೇ ಬಂದಿರಲಿಲ್ಲ. ಅದಂತೂ ಇವಳಿಗೆ ಪರಮಾಶ್ಚರ್ಯ ಊರಿನಲ್ಲಿದ್ದಾಗ ಅವಳ ಸಂಗ ಮಾಡದೇ ಎಂದೂ ಇರುತ್ತಿರಲಿಲ್ಲ. ಹೋಗಲಿ ಆರೋಗ್ಯ ಚೆನ್ನಾಗಿಲ್ಲವೇನೋ ಅಂತ ಅಂದುಕೊಳ್ಳೋಣವೆಂದರೆ ಹಾಗೇನೂ ತೋರುತ್ತಿರಲಿಲ್ಲ. ಊಟ ನಿದ್ದೆ ಚೆನ್ನಾಗಿಯೇ ಮಾಡುತ್ತಿದ್ದ ಇನ್ನೂ ಒಂದು ಆಶ್ಚರ್ಯದ ವಿಷಯವೆಂದರೆ ಓದುತ್ತಿದ್ದುದು

ಮುಂಚೆ ಎಂದೂ ಅವನು ಕೈಲಿ ಪುಸ್ತಕ ಹಿಡಿದಿದುದನ್ನೇ ಕಂಡಿರಲಿಲ್ಲ. ಈಗ ಏನಾಗಿದೆ ಅವನಿಗೆ? ಅವಳಿಗೆ ಅರ್ಥವಾಗಲಿಲ್ಲ.

ಅವನು ಸಮಾಧಾನವಾಗಿರುವುದನ್ನು ಕಂಡು ಏನನ್ನಾದರೂ ಕೇಳೋಣವೆಂದು ಅಂದುಕೊಂಡರೂ ಹೆದರಿಕೆ. ತಾನು ಕೇಳಿದ್ದಕ್ಕೇ ಕೋಪಿಸಿಕೊಂಡು ಬಿಟ್ಟರೆ...? ಮತ್ತೆ ಮೊದಲಿನಂತಾಗಿ ಬಿಟ್ಟರೆ...? ದೇವರೇ ಹಾಗಾಗದಿರಲಿ. ಹೇಗೋ ಅವನು ಸರಿಯಾಗಿದ್ದರೆ ಸರಿ ಎಂದು ಕೊಂಡು ಸುಮ್ಮನಾಗಿ ಬಿಡುವಳು. ಆದರೂ ವಿಸ್ಮಯ ಕುತೂಹಲ ತಾಳಲಾರದೆ ಅವನನ್ನೇ ಕದ್ದು ಕದ್ದು ನೋಡುತ್ತಿರುವಳು. ಏನೂ ತಿಳಿಯುತ್ತಿರಲಿಲ್ಲ. ಆದರೆ ಮುಖ ಮಾತ್ರ ಸಪ್ಪಗಿದೆ. ಏನೋ ಆಗಿದೆ. ಎಲ್ಲೋ ಅವನ ಪ್ರೇಯಸಿ ಒದ್ದು ಓಡಿಸಿರಬೇಕು ಎಂದು ಕೊಂಡು ಸಮಾಧಾನಗೊಳ್ಳುವಳು. ಹಾಗಾ ದರೂ ಅವನು ಮತ್ತೆ ಮನೆಗೆ ಬಂದಿದಾನಲ್ಲ. ಇನ್ನು ಕೆಲವು ದಿನ ಕಾದು ನೋಡೋಣ. ಒಂದೇ ನನ್ನ ಬಳಿಗೆ ಬರಬೇಕು ಅಥವಾ ಮತ್ತೆ ಹಳೆಯ ಚಾಳಿಗೆ ಇಳೀ ಬೇಕು. ನನ್ನ ಬಳಿಗೆ ಬರದಿದ್ದರೂ ಪರವಾಗಿಲ್ಲ. ಮತ್ತೆ ಹಳೇ ಚಾಳಿಗೆ ಹೋಗು ವಂತಾಗದಿರಲಿ ಎಂದು ದೇವರಲ್ಲಿ ಬೇಡುವಳು.

ಹೀಗೇ ಎಷ್ಟೋ ದಿನಗಳು ಕಳೆದವು. ಅವನು ತಾನಾಗಿಯೇ ಅವಳೊಡನೆ ಮಾತನಾಡುತ್ತಿರಲಿಲ್ಲ. ಊಟದ ವೇಳೆಗೆ ಊಟಕ್ಕೆ ಬರುವನು. ಸಾಕು ಬೇಕು ಎಂದಷ್ಟೇ ಮಿತವಾಗಿ ಮಾತನಾಡುತ್ತಿದ್ದ. ಇವಳಿಗೆ ಒಂದೊಂದು ಸಲ ನಗು ಬರುತ್ತಿತ್ತು. ಕತ್ತು ಬಗ್ಗಿಸಿ ಹಾಕಿದಷ್ಟನ್ನು ತಿಂದು ಎದ್ದುಹೋಗುತ್ತಿದ್ದ.

ಅವನು ಒಳಗಿನ ರೂಮಿನಲ್ಲಿ ಮಲಗುತ್ತಿದ್ದ ಇವಳು ಮಾತ್ರ ತಾನು ಮೊದಲಿನಿಂದ ಮಲಗುತ್ತಿದ್ದ ಜಾಗದಲ್ಲೇ ಮಲಗುತ್ತಿದ್ದಳು. ತನ್ನ ಪಾಡಿಗೆ ತಾನು ಮಲಗಿದ್ದನ್ನು ಕಂಡು ಸಧ್ಯ ಕಾಟ ತಪ್ಪಿತು ಎನಿಸಿದರೂ ಅವನ್ಯಾಕೆ ಹೀಗೆ ಬೇರೆಯೇ ಮಲಗುತ್ತಿದ್ದಾನೆ? ಎಂದು ಅನುಮಾನವಾಗುತ್ತಿತ್ತು. ಈ ದಿನಗಳಲ್ಲಿ ಒಂದು ದಿನವೂ ಅವಳನ್ನು ಕರೆದಿರಲಿಲ್ಲ. ಏನೋ ಆಗಿದೆ. ಬಲವಾದ ಕಾರಣವೇ ಇರಬೇಕು ಎಂದು ಒಳಗೊಳಗೇ ಹೆದರಿಕೆಯಾಗತೊಡಗಿತು. ಆ ಹೆದರಿಕೆಗಳಿಗೆ ಗಳಿಗೆಗೂ ಬೆಳೆದು ಒಂದು ತರಹದ ಕೆಟ್ಟ ಧೈರ್ಯ ಬಂದಿತು. ಏನಾದರಾಗಲೀ, ತಾನಾಗಿಯೇ ಅವನನ್ನು ಎಲ್ಲಾ ಕೇಳಿ ಬಿಡುತ್ತೇನೆ. ಹೊಡೆದರೆ ಹೊಡೆಯಲಿ; ಬೈದರೆ ಬೈಯಲಿ ಆದರೆ ಹೀಗೆ ಅವನ ಇರವೇ ಇಲ್ಲದಂತೆ ಇರುವುದಕ್ಕಿಂತ ಅದು ವಾಸಿ ಎನಿಸಿತು.

ಇದನ್ನೆಲ್ಲಾ ಗಮನಿಸಿದ್ದ ಸಣ್ಣಮ್ಮ ಹೇಳಿದ್ದಳು. "ಎಲ್ಲೋ ಆ ಭೋಸುಡಿ ಒದ್ದು ಓಡಿಸಿರಬೇಕು. ಇದೇ ಸುಸಮಯ. ನೀವು ನಿಮ್ಮ ಕಡೆಗೆ ಈವಯ್ಯನನ್ನು ತಿರುಗಿಸಿಕೊಳ್ಳಿ."

"ನನಗ್ಯಾಕೋ ಹೆದರಿಕೆ ಆಗುತ್ತೆ ಸಣ್ಣಮ್ಮ ನಾನು ಏನು ಮಾಡಬೇಕು ಅಂತ ತಿಳೀತಾನೇ ಇಲ್ಲ."

"ಅಯ್ಯೋ ನೀವು ಅವ್ರ ಹೆಂಡ್ತಿ ಅಲ್ಲವಾ? ಸೀದಾ ಅವರ ಬಳಿಗೆ ಹೋಗಿ ತಾನೇ ತಾನಾಗಿ ಆಯಪ್ಪ ನಿಮ್ಮನ್ನ ಕರ್ರ್ಕೊತಾನೆ."

"ಅದು ಮಾತ್ರ ಸಾಧ್ಯ ಇಲ್ಲ. ನಾನಾಗೇ ಮೇಲೆ ಬಿದ್ದು ಹೋಗುಕ್ಕೆ ನನಗೆ ಇಷ್ಟವಿಲ್ಲ."

"ಗಂಡಸ್ಗೂ ಆಸೆ ಇರುತ್ತೆ. ಹೆಂಡ್ತಿ ತಾನಾಗೇ ಬರಲಿ ಅಂತ. ಅದಕ್ಕೇ ಹೀಗೆಲ್ಲಾ ನಾಟಕ ಆಡ್ತಾರೆ. ನೀವು ನಾನು ಹೇಳಿದ ಹಾಗೆ ಕೇಳಿ. ಎಲ್ಲಾ ಸರಿ ಹೋಗುತ್ತೋ ಇಲ್ಲವೋ ಅಮೇಲೆ ನನಗೆ ಹೇಳಿ." ಮತ್ತೆಮತ್ತೆ ಹೇಳಿದ್ದಳು.

"ನಿನ್ನ ಗಂಡಾನೂ ಹೀಗೆ ಆಡಿದ್ರೆ ನೀನೂ ಹೀಗೇ ಹೋಗ್ತಿದ್ದೆಯಾ?"

"ಅಯ್ಯೋ, ಶಿವನೆ.. ಅಂತಹ ಅದೃಷ್ಟ ನನಗೆಲ್ಲಿ? ಕುಡಿದು ಬಂದಾಗ ಮಾತ್ರ ತೆಪ್ಗೆ ಬಿದ್ಕೋತಾನೆ. ಅವತ್ತು ಮಾತ್ರ ನನಗೆ ಬಿಡುವು." ಎಂದಿದ್ದಳು ಅಸಹ್ಯವಾಗಿ ನಕ್ಕು.

"ಹೌದು ಸಣ್ಣಮ್ಮ ಇವರು ಕುಡಿತ ಕೂಡಾ ಬಿಟ್ಟ ಹಾಗೆ ಕಾಣುತ್ತೆ. ತುಂಬಾನೇ ಬದಲಾಗಿ ಹೋಗಿದಾರೆ. ಇದೆಲ್ಲಾ ಯಾವುದೋ ಪವಾಡಾನೆ ಇರಬೇಕು."

"ಯಾವುದೋ ಏಕೆ? ನಿಮ್ಮ ಆಂಜನೇಯಪ್ಪನ ಮಹಿಮೆ. ಪೂಜಾರಪ್ಪ ಕೊಟ್ಟ ಯಂತ್ರ ಹೆಂಗೆ ಕೆಲಸ ಮಾಡಿದೆ ಕಂಡ್ರಾ?"

"ಹೌದು ಅಂತೀಯಾ ಸಣ್ಣಮ್ಮ. ಅವರನ್ನು ಸರ್ರಿ ಮಾಡಿ ಮನೆಗೆ ಕಳಿಸಿಧ ಆ ದೇವರೇ ಅವರನ್ನು ನನ್ನ ಬಳಿಗೂ ಕಳಿಸ್ತಾನೆ. ಅವರಾಗಿಯೇ ಬರುವವರೆಗೂ ನಾನು ಕಾಯ್ತೀನಿ."

"ಎಂತಹ ಸಹನೇನ್ರಮ್ಮ ನಿಮಗೆ ದೇವರು ನಿಮ್ಮ ಕೈ ಬಿಡಾಕೇ ಇಲ್ಲ. ನಾನಿನ್ನು ಬರ್ತೀನಮ್ಮ" ಹೊರಟಳು.

"ಇನ್ನು ಏನೇನು ಅನುಭವಿಸಬೇಕೋ? ಎಲ್ಲಾ ನನ್ನ ಗ್ರಹಚಾರ ಮುಂಚೆಯೆಲ್ಲಾ ರಾಕ್ಷಸನ ಹಾಗೆ ಆಡುತ್ತಿದ್ದ. ಈಗ ಹೀಗೆ ಮೆತ್ತಗಾಗಿದ್ದಾನೆ. ಯಾವುದು ಸರಿ? ತಿಳಿಯಲಿಲ್ಲ."

ನಿದ್ದೆ ಬಾರದೇ ಹೊರಳಾಡುತ್ತಿದ್ದ ಅವನ ಮನಸ್ಸು ವ್ಯಗ್ರ. ತಾನು ಮಾಡಿದ್ದು ಸರಿಯೇ? ಯಾರಿಗಾದರೂ ತಿಳಿದರೆ ತನ್ನನ್ನು ಸುಮ್ಮನೆ ಬಿಡುವರೆ? ಅಥವಾ ಇವಳಿಗೆ ತಿಳಿದರೆ ನನ್ನನ್ನು ಇಲ್ಲಿ ಇರಗೊಡಿಸುತ್ತಾಳೆಯೇ? ತಾನು ಈ ಮನೆಗೆ ಕಾಲಿಡುವವರೆಗೂ ತಾನು ನಡೆದುಕೊಂಡಿದ್ದು ಸರಿ ಎನ್ನಿಸಿತ್ತು. ಆದರೆ ಈಗ ಆಗಾಗ್ಗೆ ತಾನು ಮಾಡಿದ್ದು ತಪ್ಪು ಎನಿಸುತ್ತಿದೆ.

ಆ ಸರೋಜಾಕ್ಷಿಯ ಮಾತು ಕೇಳಿಕೊಂಡು ಇಲ್ಲಿಗೆ ಬರಬಾರದಾಗಿತ್ತು. ಅವಳು ತಾನು ಬಿಡುಗಡೆ ಹೊಂದಲು ನನ್ನನ್ನು ಉಪಯೋಗಿಸಿಕೊಂಡಿದ್ದಾಳೆ. ಯಾರಿಗೂ

ತಿಳಿಸಲಾಗದಂತಹ ಕೆಲಸ ಮಾಡಿದ್ದೇನೆ. ಪೋಲಿಸ್ ಕಂಪ್ಲೆಂಟ್ ಕೊಟ್ಟಿದ್ದರೆ ಇಷ್ಟು ಹೊತ್ತಿಗೆ ನಾವಿಬ್ಬರೂ ಜೈಲಿನಲ್ಲಿರಬೇಕಾಗುತ್ತಿತ್ತು. ನಾನೇನೂ ಅಪರಾಧಿಯಲ್ಲ. ಆದರೂ ನಾನೂ ಒಂದು ಸುಳಿಯಲ್ಲಿ ಖಂಡಿತಾ ಸಿಕ್ಕಿ ಬೀಳುತ್ತಿದ್ದೆ. ಅವಳು ನನ್ನನ್ನು ಪಾರು ಮಾಡಿ ತಾನೂ ಪಾರಾದಳು. ಆದರೆ ನನಗೆ ನಾನು ದೊಡ್ಡ ಅಪರಾಧಿ ಎಂಬ ಭಾವನೆ ಕಾಡುತ್ತಿದೆ. ಇದಕ್ಕೆ ಪರಿಹಾರ ಎಂದು? ಮತ್ತೆ ಆ ಸರೋಜಾಕ್ಷಿಯನ್ನು ಕಾಣುವಂತಿಲ್ಲ. ನಾನೂ ಅವಳು ಭೇಟಿಯಾಗಬಾರದೆಂದು ಮಾತನಾಡಿಕೊಂಡಿದ್ದೇವೆ. ಇಲ್ಲಿಗೆ ಬಂದು ಇಪ್ಪತ್ತು ದಿನಗಳಾದವು. ನನ್ನ ಅಪರಾಧಿ ಪ್ರಜ್ಞೆ ನನ್ನನ್ನು ಅವಳೊಡನೆ ಬೆರೆಯದಂತೆ ತಡೆಯುತ್ತಿದೆ.

ಇವಳೂ ಸರಿ, ಇವಳೇಕೆ ಇಷ್ಟು ಶಾಂತ ಮೂರ್ತಿಯಾಗಿದ್ದಾಳೆ? ಇದುವರೆಗೆ ಒಂದು ದಿನವಾದರೂ ನನ್ನನ್ನು ಮಾತನಾಡಿಸಲು ಪ್ರಯತ್ನ ಪಟ್ಟಿಲ್ಲ, ಹೋಗಲಿ ನನ್ನ ಕಣ್ಣೆದುರಿಗೇ ಬಂದಿಲ್ಲ, ಕತ್ತೆತ್ತಿ ನೋಡಿಲ್ಲ. ಅವಳೇ ಬಂದು ಮಾತನಾಡಿಸಿದ್ದರೆ ನನಗೆ ಎಷ್ಟೋ ಸಲೀಸಾಗುತ್ತಿತ್ತು. ಈಗ ಏನು ಮಾಡುವುದು? ಮತ್ತೆ ವಾಪಸ್ಸು ಹೊರಟು ಹೋಗಲೆ? ಆಗ ಇವಳ ಗತಿ ಏನಾಗಬಹುದು? ಅವಳನ್ನು ಉದ್ಧಾರ ಮಾಡಲೆಂದೇ ಅಲ್ಲವೆ ನಾನ್ನಿಲ್ಲಗೆ ಬಂದಿರುವುದು? ಆದರೆ ನಾನಾಗೇ ನಾನು ತೆಗೆದುಕೊಂಡಿರುವ ನಿರ್ಧಾರ ಸರಿಯೆ? ಸರೋಜಾಕ್ಷಿಯ ಮಾತುಗಳನ್ನು ಕೇಳ ಬಾರದಾಗಿತ್ತು. ಆದರೆ ಆಗ ನನ್ನ ಸ್ಥಿತಿ ಏನೂ ತಪ್ಪು ಇಲ್ಲದೆ ಸುಳ್ಳು ಅಪವಾದಕ್ಕೆ ಗುರಿಯಾಗಬೇಕಾಗುತ್ತಿತ್ತು. ಈಗ ನ್ಯಾಯಾನ್ಯಾಯಗಳ ಬಲೆಗಳ ಮಧ್ಯೆ ಸಿಕ್ಕಿ ಬಿದ್ದಿದ್ದೇವೆ. ಇಲ್ಲಿಂದ ನನಗೆ ಸರಿ ಮಾರ್ಗ ತೋರಿಸುವವರ್ಯ್ಯಾರು? ಇವಳೇ ಸರಿ. ಇವಳಿಗೆ ಎಲ್ಲಾ ಹೇಳಿಬಿಡುತ್ತೇನೆ. ಆಮೇಲೆ ಅವಳು ಏನು ಹೇಳು ತ್ತಾಳೋ ಹಾಗೇ ನಡೆದುಕೊಳ್ಳುತ್ತೇನೆ. ಇಲ್ಲದಿದ್ದರೆ ಈ ಅಪರಾಧಿ ಭಾವ ನನ್ನನ್ನು ಸುಡುತ್ತದೆ. ಅವಳಿಗೆ ನನ್ನ ಮೇಲೇನಾದರೂ ಅನುಮಾನವಿದ್ದರೆ... ಅದೂ ತಿಳಿದು ಬಿಡುತ್ತದೆ. ಸಮಯ ಸಂದರ್ಭ ನೋಡಿ ಇವತ್ತು ಅವಳೊಡನೆ ಮಾತನಾಡಿ ಬಿಡುತ್ತೇನೆ.

ಅವಳೇನು ಮಾಡುತ್ತಿದಾಳೆ ನೋಡಿಕೊಂಡು ಬರುತ್ತೇನೆ ಎಂದು ಎದ್ದ ಅವನ ಕಾಲುಗಳು ಥರಥರನೆ ನಡುಗುತ್ತಿದ್ದವು. ಇವತ್ತು ಬೇಡ. ನಾಳೆ ಮಾತನಾಡುತ್ತೇನೆ ಎಂದು ಮತ್ತೆ ಮಲಗಿದ. ಆದರೆ ಮಲಗಲಾಗಲಿಲ್ಲ. ಆ ಮನೆಯ ಹಾಸಿಗೆ ಒತ್ತಿದ ಅನುಭವವಾಯಿತು. ಮತ್ತೆ ಎದ್ದು, ಏನಾದರಾಗಲಿ, ಇವತ್ತು ನನ್ನ ಉಳಿವು ಅಳಿವಿನ ಇತ್ಯರ್ಥ ಮಾಡಿಕೊಂಡು ಬಿಡುತ್ತೇನೆಂದು ಧೈರ್ಯ ಮಾಡಿ ಅವಳು ಮಲಗಿದ್ದ ರೂಮಿನ ಬಳಿಗೆ ಬಂದ.

ರೂಮಿನ ಬಾಗಿಲಲ್ಲಿ ನಿಂತು ಕೂಗಿದ ಸರಳಾ.... ಮಲಗಿದ್ದ ಸರಳ ಧಿಗ್ಗನೆ ಎದ್ದು ಕುಳಿತಳು. ಅವಳು ಹಾಗೆ ಬೆಚ್ಚಿ ಎದ್ದಿದ್ದನ್ನು ಕಂಡು ಹೆದರಿದ. ಅವಳ

ಮೈಯಾದಿಯೆಲ್ಲ ಲಘುವಾಗಿ ಕಂಪಿಸಿತು. ತನ್ನ ಗಂಡ ತನ್ನ ಬಳಿಗೆ ಬಂದಿದ್ದಾನೆ. ಹರ್ಷದಿಂದ ಎದ್ದು ನಿಂತಳು. ಸರಳಾ ನಾನು ಸ್ವಲ್ಪ ನಿನ್ನ ಹತ್ತಿರ ಮಾತನಾಡಬೇಕು. ಅವನ ಮಾತು ಕಿವಿಗೆ ಬೀಳದಂತೆ ತೂರಾಡುತ್ತಾ ಸರಳ ಅವನ ಬಳಿಗೆ ನಡೆದು ಬಂದಳು. ಅವನ ಸಮೀಪಕ್ಕೆ ಅವಳನ್ನು ಅವಳ ದೇಹ ಕರೆತಂದಿತು. ನೋಡುತ್ತಿದ್ದಂತೆಯೇ, ಅವನ ಮೈಮೇಲೆ ವಾಲಿದಳು. ಅವನು ಅವಳನ್ನು ಹಿಡಿದುಕೊಳ್ಳುವ ಮೊದಲೇ ಬಿದ್ದು ಬಿಟ್ಟಳು.

ಏನಾಗಿದೆ ಅವಳಿಗೆ? ಬಿದ್ದವಳನ್ನು ಕರ್ತವ್ಯ ಪ್ರಜ್ಞೆಯಿಂದ ಎತ್ತಿತಂದು ಮಂಚದ ಮೇಲೆ ಮಲಗಿಸಿದ. ಅಲ್ಲಿಯೇ ಹತ್ತಿರವಿದ್ದ ಗ್ಲಾಸಿನಲ್ಲಿದ್ದ ನೀರನ್ನು ಚುಮಕಿಸಿದ.

ಮೆಲ್ಲಗೆ ಕಣ್ಣು ಬಿಟ್ಟು ಅವನನ್ನು ನಿರುಕಿಸಿದಳು. ಅವನು ತನ್ನ ಬಳಿಯೇ ನಿಂತಿದ್ದಾನೆ. ಹರ್ಷದಿಂದ ಅವನ ಕೈಗಳನ್ನು ಹಿಡಿದುಕೊಂಡು ತನ್ನ ಕಣ್ಣಿಗೊತ್ತಿಕೊಂಡಳು. ಅವನ ಕೈಗಳನ್ನು ಬಿಗಿಯಾಗಿ ಹಿಡಿದು ತನ್ನ ಕೆನ್ನೆಗಳ ಮೇಲೆ ಇಟ್ಟುಕೊಂಡಳು.

ಈ ಅನಿರೀಕ್ಷಿತ ಘಟನೆಯಿಂದ ಗಾಬರಿಯಾಗಿದ್ದ ಅವನು ಅವಳ ಕೈಯನ್ನ ತನ್ನ ಕೈಯಿಂದ ಬಿಡಿಸಲು ಪ್ರಯತ್ನಿಸಿದ. ಅವಳು ಮತ್ತೂ ಗಟ್ಟಿಯಾಗಿ ಹಿಡಿದು, "ಬೇಡಿ... ನನ್ನಿಂದ ದೂರ ಹೋಗಬೇಡಿ. ನಾನು ಸಹಿಸಲಾರೆ. ಇಷ್ಟು ದಿನ ನಾನು ಹೇಗೆ ಕಳಿದಿದೀನಿ ಅಂತ ನಿಮಗೆ ತಿಳಿದಿಲ್ಲ. ದಯವಿಟ್ಟು ನನ್ನ ಕೈಬಿಡಬೇಡಿ." ಅಳತೊಡಗಿದಳು.

"ಇಲ್ಲ. ಸರಳ ನಾನು ಸ್ವಲ್ಪ ನಿನ್ನ ಹತ್ತಿರ ಮಾತಾಡೋಣ ಅಂತ ಬಂದೆ. ನೀನು ನನ್ನನ್ನ ತಪ್ಪಾಗಿ ತಿಳಿದುಕೊಂಡಿದೀಯ" ಕೈ ಸಡಿಲಿಸಲು ನೋಡಿದ.

"ಇಲ್ಲ. ಇಲ್ಲ ನಾನು ನಿಮ್ಮನ್ನ ಖಂಡಿತಾ ತಪ್ಪಾಗಿ ತಿಳಿದಿಲ್ಲ. ಇಷ್ಟರಮಟ್ಟಿಗೆ ನೀವು ನನ್ನ ಬಳಿಗೆ ಬಂದಿರುವುದೇ ನನ್ನ ಪುಣ್ಯ. ನಾನು ನಿಮ್ಮನ್ನು ಬಿಡುವುದಿಲ್ಲ. ನೀವು ನನಗೆ ಬೇಕು.... ಯಾಕೆ ನಿಮಗೆ ನಾನು ಬೇಕು ಅನ್ನಿಸುವುದಿಲ್ಲವೇ? ನೀವ್ಯಾಕೆ ಹೀಗೆ ದೂರ ಆದಿರಿ?"

"ಪ್ಲೀಸ್ ಸರಳಾ ನನ್ನ ಕೈ ಬಿಡು ನನ್ನನ್ನ ಮಾತಾಡಲು ಬಿಡು."

"ಇಲ್ಲ, ನಾನು ಬಿಡುಲ್ಲ. ಗಂಡ ತಾನಾಗಿಯೇ ನನ್ನ ಹತ್ತಿರ ಬಂದಾಗ ಬಿಟ್ಟು ಕಳಿಸಲು ನಾನೇನೂ ಮೂರ್ಖಳಯಲ್ಲ. ನೀವು ಇವತ್ತು ಇಲ್ಲೇ ನನ್ನ ಜೊತೆಯೇ ಇರಬೇಕು. ಇಲ್ಲದಿದ್ದರೆ ನನ್ನಾಣೆ." ಅವನನ್ನ ಎಳೆದು ತನ್ನ ಬಳಿ ಕೂರಿಸಿಕೊಂಡಳು.

ಅವಳ ಮಾತುಗಳನ್ನು ಕೇಳಿ ಅವನು ಅಧೀರನಾದ. ಅವಳಿಗೇನಾದರೂ ಬುದ್ಧಿ ಭ್ರಮಣೆಯಾಗಿದೆಯೆ? ಈಗ ತಾನೇನು ಮಾಡಬೇಕು? ಈಗ ಕೊಸರಿಕೊಂಡು ಹೊರಟು ಹೋದರೆ.... ಮತ್ತೆ ಇದು ಸರಿಯಾಗುವುದಿಲ್ಲ. ಅವಳು ಬುದ್ಧಿ ಭ್ರಾಂತಿ

ಗೊಳಗಾಗಬಹುದು. ಆಗ ಅದಕ್ಕೆ ತಾನೇ ಹೊಣೆಯಾಗುತ್ತೇನೆ. ಈಗ ನಾನು ಇಲ್ಲಿಯೇ ಇದ್ದರೆ.... ಅವಳಿಗೆ ಸಂತೋಷವಾಗುತ್ತದೆ. ಆದರೆ ತನ್ನ ಮನಸ್ಸು ಒಪ್ಪುತ್ತಿಲ್ಲ. ಹಾಗೇ ಯೋಚಿಸುತ್ತಿದ್ದವನನ್ನು ತಿವಿದು ಎಚ್ಚರಿಸಿದಳು.

"ಏನು ಯೋಚಿಸುತ್ತಿದ್ದೀರಿ? ನಾನು ಹುಚ್ಚಿ ಎಂತಲೆ? ಇಲ್ಲ ನನಗೆ ಏನೂ ಆಗಿಲ್ಲ. ನಿಮ್ಮ ಬರವನ್ನೇ ಇದುವರೆಗೂ ಕಾದು ಕಾದು ಉದ್ರೇಕದಿಂದ ಹೀಗೆ ಮಾತಾಡ್ತಿದೀನಿ. ಮೊದಲು ಇಷ್ಟೊಂದು ಮಾತಾಡುತ್ತಿರಲಿಲ್ಲವಲ್ಲ. ಈಗ ಎಲ್ಲಿಂದ ಕಲಿತಳು ಎಂದು ಕೊಂಡಿರಾ? ಇದು ನಾನು ನಂಬಿದ ದೇವತ ಮಹಿಮೆ. ನೀವು ಎಲ್ಲರಂತೆ ಸರಿಯಾಗಿ ಬಾಳಿ ಸಂಸಾರ ಮಾಡಲಿ ಎಂದು ತಾಯಿತ ಬೇರೆ ಮಾಡಿಸಿ ತಂದಿದೀನಿ. ಅಲ್ಲಿದೆ ನೋಡಿ. ನೀವು ಮಲಗುವ ಹಾಸಿಗೆಯಡಿಯಲ್ಲಿ ಇಟ್ಟಿದೀನಿ. ಅದರ ಶಕ್ತಿಯಿಂದಲೇ ನೀವು ಹೀಗೆ ಬದಲಾಗಿರುವುದು. ನೀವಾಗೇ ನೀವು ನನ್ನ ಬಳಿಗೆ ಬಂದೇ ಬರುತ್ತೀರೆಂಬ ನಂಬಿಕೆ ನನಗಿತ್ತು. ನೀವು ಬಂದಿರಿ. ನನಗೆ ಇನ್ನೇನೂ ಬೇಡ. ನನ್ನ ಗಂಡ ಮಕ್ಕಳೊಡನೆ ನಡೆಸುವ ಸಂಸಾರ ಸುಖ ಮಾತ್ರ ನನಗೆ ಬೇಕು. ದಯವಿಟ್ಟು ನನಗೆ ವಂಚನೆ ಮಾಡಬೇಡಿ." ಮತ್ತೊಮ್ಮೆ ಅಳತೊಡಗಿದಳು.

ಅವಳು ಮಾತುಗಳಿಂದ ಮೂಕನಂತಾಗಿದ್ದ ಅವನು ಏನು ಮಾಡಬೇಕೆಂದು ತೋಚದೆ ಅವಳ ಕಣ್ಣೀರನ್ನು ಒರೆಸಿದ. ಅವಳು ಎದ್ದು ಅವನನ್ನು ತಬ್ಬಿಕೊಂಡಳು.

ಒಬ್ಬ ಸೊರಗಿದ ಸ್ತ್ರೀಯ ದೇಹ ಭಾರ ತನ್ನ ಮೇಲೆ ಬಿದ್ದು, ಅವಳ ಅಂಗಾಂಗಗಳ ಆಲಿಂಗನದಿಂದ ದೇಹದ ನರನಾಡಿಗಳೂ ಎದ್ದು ನಿಂತು ಮೈಕಾವೇರಿದಾಗ ಸಂಯಮ ತಂದುಕೊಂಡು ಸುಮ್ಮನಿರಲು ಅವನೇನು ಸನ್ಯಾಸಿಯೆ? ಅವನ ಅಂಗಾಂಗಗಳೂ ಚಲಿಸತೊಡಗಿದವು.

ಒಂದು ಗಂಡು, ಒಂದು ಹೆಣ್ಣು, ಆನಂದದಿಂದ ಪಾನಮತ್ತರಾಗಿ, ಮುಕ್ತವಾಗಿ ಒಂದಾಗಿ ಒಬ್ಬರಿಂದ ಇನ್ನೊಬ್ಬರು ಸಂತೃಪ್ತಿಯನ್ನು ಪಡೆದರು. ತನ್ನ ಗಂಡ ತನ್ನೊಡನೆ ಹೀಗೆ ಸ್ನೇಹಭಾವದಿಂದ ಸಂಗ ಮಾಡಿರಲಿಲ್ಲವೆಂದು ಮೊದಲ ಬಾರಿಗೆ ಅನುಭವ ವಾಯಿತು, ಸರಳೆಗೆ. ಒಬ್ಬ ಸ್ತ್ರೀ ತಾನಾಗಿಯೇ ಸಮರ್ಪಣಾ ಭಾವದಿಂದ ಒಬ್ಬ ಗಂಡಸನ್ನು ಹೇಗೆ ತೃಪ್ತಿಗೊಳಿಸಬಲ್ಲಳೆಂಬ ಅನುಭವ ಮೊಟ್ಟ ಮೊದಲಬಾರಿಗೆ ಅವನಿಗಾಯಿತು.

ಅಂದಿನಿಂದ ಸರಳ ಅತ್ಯಂತ ಸುಖಿ. ಇವನು ಮಾತ್ರ ಆಗಾಗ್ಗೆ ಅಂತರ್ಮುಖಿ ಯಾಗಿ ಬಿಡುತ್ತಿದ್ದ. ಆಗ ಅವನ ಮನಃ ಪಟಲದಲ್ಲಿ ಮೂಡುತ್ತಿದ್ದ ಚಿತ್ರಗಳೇ ಬೇರೆ. ತನ್ನದು ಸ್ವಾರ್ಥವೋ ಉಪಕಾರವೋ ಮೂರ್ಖತನವೋ ಒಂದೂ ಅರ್ಥ ವಾಗುತ್ತಿರಲಿಲ್ಲ. ಈಚೀಚೆಗೆ ತನ್ನ ಮನದಲ್ಲಿ ಕುಳಿತಿರುವ ಚಿತ್ರ ಮಾಲೆಯನ್ನು ಬಿಡಿಸಿ ಹೇಳುವ ಧೈರ್ಯವಿರಲಿಲ್ಲ. ಆ ಆಘಾತವನ್ನು ಅವಳು ತಡೆದುಕೊಳ್ಳುವ

ನಂಬಿಕೆ ಇವನಿಗಿರಲಿಲ್ಲ. ಅಥವಾ ಅವಳನ್ನು ಬಿಟ್ಟು ಹೋಗುವ ನೆನಪೇ ಅವನಿಗೆ ಇಷ್ಟವಾಗುತ್ತಿರಲಿಲ್ಲ. ಪ್ರಾಯಶಃ ಅವನು ಹಿಂದೆ ಹೋಗಲಾರದಷ್ಟು ಮುಂದೆ ಬಂದು ಬಿಟ್ಟಿದ್ದ ಎಂದು ಅವನಿಗೇ ಅರಿವಾಗಿತ್ತು.

ಒಮ್ಮೊಮ್ಮೆ ಮೂಡಿಯಾಗಿ ಬಿಡುತ್ತಿದ್ದ ಅವನನ್ನು ಸರಳ ಕೆದಕುತ್ತಿರಲಿಲ್ಲ. ಅವಳ ಒಡನಾಟ ಅವನನ್ನು ವಾಸ್ತವಕ್ಕೆ ಎಳೆದು ತರುತ್ತಿತ್ತು. ನಾಣ್ಯದ ಇನ್ನೊಂದು ಮುಖವೆಂಬಂತೆ ಬದಲಾಗಿದ್ದ ಅವನು ಸರಳೆಗೆ ಬಹಳ ಹತ್ತಿರವಾಗಿದ್ದ. ಮತ್ತೊಮ್ಮೆ ಅವನನ್ನು ಕಳೆದುಕೊಳ್ಳಲು ಸರಳೆ ಸಿದ್ಧಳಾಗಿರಲಿಲ್ಲ. ಆ ವಿಚಾರ ಅವನಿಗೂ ಹಾಗೆಯೇ ತೋರಿತ್ತು.

ಇವರಿಬ್ಬರ ಜೀವನ ಸರಿಯಾದುದನ್ನು ಕಂಡು ಸಣ್ಣಮ್ಮ ಹಿಗ್ಗಿದಳು.

"ಅಮ್ಮಾ ಖುಷಿಯಿಂದ ಮುಖ ಹೆಂಗರಳಿವೆ ಗೊತ್ರಾ? ಏನಾದರೂ ವಿಶೇಷಾನಾ?" ಛೇಡಿಸಿದಳು.

"ಇಲ್ಲ ಸಣ್ಣಮ್ಮ" ನಾಚಿದಳು.

"ಅದ್ರಲ್ಲಿ ನಾಚ್ಕೆ ಏಕೆ? ನಿಮಗೇನೂ ಆಸೆ ಇಲ್ಲವಾ?"

"ಆಸೆ ಇಲ್ಲವಾ ಸಣ್ಣಮ್ಮ ನಮ್ಮ ಜೀವನದಲ್ಲಿ ಅದೂ ಒಂದು ಮುಖ್ಯ. ಬೇಗ ಒಂದು ಮಗುವಾದರೆ ನಾವಿಬ್ಬರೂ ಇನ್ನು ಹತ್ತಿರವಾಗ್ತೀವಿ."

"ಅದ್ಸರಿ ಅದ್ಸರಿ ತಲೆದೂಗಿಸಿದಳು. ನಮ್ಮ ಆಂಜನೇಯಪ್ಪ ಕಣ್ತೆರೆದರೆ ಎಲ್ಲಾ ನಿಮ್ಮ ಆಸೆ ಹಂಗೇ ನಡೀತದೆ."

"ನೀನು ಆಡಿದ ಮಾತ್ನಿಂದ ಜ್ಞಾಪ್ಕ ಬಂತು ನೋಡು. ನಾನು ಆಂಜನೇಯನ ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿಸಿ, ಆ ಪೂಜಾರಿಗಳನ್ನ ಭೇಟಿಯಾಗಬೇಕು. ನಮ್ಮಿಬ್ಬರ ಜಾತಕಾನೂ ತೋರಿಸಿ ನಮಗೆ ಯಾವಾಗ ಮಕ್ಕಳಾಗುತ್ತೆ? ಇವರು ಹೀಗೇ ಇರ್ತಾರಾ? ನನ್ನ ಜೊತೇನೇ ಅಂತ ತಿಳಿಕೋ ಬೇಕು."

"ಅದಕ್ಕೇನಂತೆ? ನಡೀರಿ ಒಂದು ದಿನ. ಬರ್ತೀನಿ ನಾನೂ ನಿಮ್ಜೊತೆಗೆ ಅಯ್ನೋರಿಗೆ ಹೇಳಬೇಡಿ ಈಗ್ಲೇ ಮುನಿಸ್ಕೊಂಡಾರು.

"ಹಾಗೇ ಆಗಲಿ ಸಣ್ಣಮ್ಮ ಈ ಗುರುವಾರ ಹೋಗೋಣ್ವಾ? ಅವತ್ತು ಬೇಗ ಹೋಗಿ ಬಂದು ಬಿಡೋಣ." ಸಡಗರದಿಂದ ಉತ್ತರಿಸಿದ ಸರಳೆಯನ್ನು ನೋಡಿ ಸಣ್ಣಮ್ಮ ನಸುನಕ್ಕಳು.

ಆ ಗುರುವಾರ ಬೇಗ ಬೇಗ ಸಿದ್ಧರಾಗಿ ಇಬ್ಬರೂ ಹೊರಟರು. ಸರಳ ತನ್ನೊಡನೆ ತಮ್ಮಿಬ್ಬರ ಜಾತಕದ ಪ್ರತಿಯನ್ನು ಇರಿಸಿಕೊಂಡಳು.

ಇವಳನ್ನು ಕಂಡ ಪೂಜಾರಿಗಳು ಮುಗಳ್ನಕ್ಕು, "ಏನಮ್ಮಾ ಚೆನ್ನಾಗಿದೀಯಾ?" ಎಂದು ವಿಚಾರಿಸಿದರು.

"ಎಲ್ಲಾ ನಿಮ್ಮ ಆಶೀರ್ವಾದ. ಎಲ್ಲಾ ಸರಿಯಾಗಿದೆ. ನಾನು ನಿಮ್ಮ ಹತ್ತಿರ ಮಾತಾಡಬೇಕಾಗಿತ್ತು."

"ಆಗಲಿ. ಅದಕ್ಕೇನಂತೆ ಇಲ್ಲಿಂದ ಬಿಡುವಾದ ತಕ್ಷಣ ಮಾತಾಡೋಣ. ಸ್ವಲ್ಪ ಹೊತ್ತು ಕಾಯಬೇಕು. ಅಲ್ಲಿ ಕುಳಿತಿರಿ" ಹೇಳಿದರು.

ತಲೆ ಆಡಿಸಿದ ಸರಳೆ ಸಣ್ಣಮ್ಮನೊಡನೆ ಅವರು ತೋರಿಸಿದ ಜಾಗದಲ್ಲಿ ಕುಳಿತಳು.

ಭಕ್ತಾದಿಗಳೆಲ್ಲ ತೆರಳಿದ ನಂತರ ಪೂಜಾರಿಗೆ ಬಿಡುವಾಯಿತು. ಇವರಿಬ್ಬರೂ ಕುಳಿತದ್ದ ಸ್ಥಳಕ್ಕೆ ಬಂದರು.

"ಏನಮ್ಮಾ ಏನಾದರೂ ಕೇಳುವುದಿತ್ತಾ?" ಕೇಳಿದರು.

"ಹೌದು ಹಿಂದೊಮ್ಮೆ ನೀವು ಮಾಡಿಕೊಟ್ಟ ತಾಯಿತದಿಂದ ನಮಗೆ ಒಳ್ಳೆಯ ದಾಗಿದೆ. ಮನೆಯಿಂದ ದೂರ ದೂರವೇ ಇರುತ್ತಿದ್ದ ನಮ್ಮವರು ಮನೆಗೆ ಅಂಟಿ ಕೊಂಡಿದ್ದಾರೆ. ನಾವಿಬ್ಬರೂ ಈಗ ಅನ್ಯೋನ್ಯವಾಗಿದ್ದೇವೆ."

"ತುಂಬಾ ಸಂತೋಷ ದೇವರು ಕಣ್ಬಿಟ್ಟಾಗ ಎಲ್ಲಾ ಒಳ್ಳೆಯದೇ ಅಗುತ್ತೆ. ಹಾಗಾದರೆ ಈಗ ತೊಂದರೆ ಏನಿಲ್ಲವಲ್ಲ."

"ತೊಂದರೆ ಏನಿಲ್ಲ. ಈಗಾಗಲೇ ನಮ್ಮ ಮದುವೆಯಾಗಿ ೩-೪ ವರ್ಷಗಳು ಕಳೆದಿವೆ. ನಮಗೆ ಇದುವರೆಗೂ ಮಕ್ಕಳಾಗಿಲ್ಲ. ಅವರೇ ಸರಿಯಿಲ್ಲದಿದ್ದಾಗ ನನಗೆ ಆ ಆಸೆಯೇ ಇರಲಿಲ್ಲ. ಈಗ ನಮ್ಮದೇ ಮಕ್ಕಳು ಬೇಕು ಅಂತ ಎನ್ನಿಸುತ್ತಿದೆ. ಅದಕ್ಕೇ ನಮ್ಮಿಬ್ಬರ ಜಾತಕಾನೂ ತಂದಿದೀನಿ. ಅದನ್ನು ನೋಡಿ ಮಕ್ಕಳ ಯೋಗ ಇದೆಯಾ? ಯಾವಾಗ ಆಗುತ್ತೆ ಅಂತ ತಿಳಿಸಬೇಕು." ಕವರಿನಿಂದ ಜಾತಕದ ಪ್ರತಿಗಳನ್ನು ಹೊರ ತೆಗೆದು ಆತನ ಮುಂದೆ ಇಟ್ಟಳು.

ಎರಡೂ ಜಾತಕಗಳನ್ನು ವೀಕ್ಷಿಸಿದ ಅವರು ತಕ್ಷಣವೇ ಏನನ್ನು ಹೇಳಲಿಲ್ಲ. ಅವರ ಮುಖ ಗಂಭೀರವಾಗಿತ್ತು. ಆಳವಾಗಿ ಏನನ್ನೋ ಯೋಚಿಸುತ್ತಿರುವಂತೆ ತೋರಿತು. ಸ್ವಲ್ಪ ಹೊತ್ತಾದ ಮೇಲೆ, "ನಾನು ಮತ್ತೊಮ್ಮೆ ಸರಿಯಾಗಿ ಇದನ್ನು ನೋಡಿ ಹೇಳ್ತೀನಿ. ಲೆಖ್ಖಾಚಾರ ಹಾಕಿ ನೋಡಬೇಕಾಗುತ್ತೆ. ಸಧ್ಯಕ್ಕೆ ನನ್ನ ಹತ್ತಿರ ಇರಲಿ. ಇನ್ನೊಂದೆರಡು ದಿನಗಳ ನಂತರ ನಿನ್ನ ಗಂಡನನ್ನೇ ಕಳಿಸು ಆತನನ್ನು ಕೆಲವು ಪ್ರಶ್ನೆಗಳನ್ನು ಕೇಳಬೇಕಾಗಿದೆ."

ಚಿಂತಿತಳಾದಳು. "ಅವರು ಬರುಲ್ಲ ಎಂದರೆ ಏನು ಮಾಡುವುದು?"

"ಅವರು ಬರಲೇ ಬೇಕಮ್ಮ ಇಲ್ಲದಿದ್ದರೆ ಕೆಲವು ಸಮಸ್ಯೆಗಳು ಪರಿಹಾರವಾಗು ವುದಿಲ್ಲ." ಸ್ಪಷ್ಟವಾಗಿ ಹೇಳಿದಳು.

"ಏಕೆ? ಏನಾದರೂ ಗಂಭೀರವಾದ ವಿಚಾರವೆ?" ಆತಂಕವಿತ್ತು ದನಿಯಲ್ಲಿ.

ಅವಳನ್ನೇ ಒಂದು ಗಳಿಗೆ ದಿಟ್ಟಿಸಿದರು. ಅವಳನ್ನು ನೋಯಿಸುವ ಇಚ್ಛೆ ಅವರಿಗಾಗಲಿಲ್ಲ.

"ಹಾಗೇನಿಲ್ಲ. ಆದರೂ ಖಚಿತ ಪಡಿಸಿಕೊಳ್ಳಬೇಕಾದ ಕೆಲವು ಮಾತುಗಳಿವೆ. ಅವರನ್ನು ಒಬ್ಬರನ್ನೇ ಕಳಿಸು. ನೀನೇನೂ ಗಾಬರಿಯಾಗಬೇಡ. ನಿನಗೆ ಯಾವುದೇ ತೊಂದರೆಗಳಿಲ್ಲ. ನನ್ನ ಮಾತನ್ನು ನಂಬು."

"ಆಯ್ತು ನಿಮ್ಮ ಮಾತಿನ ಮೇಲೆ ನನಗೆ ತುಂಬಾ ವಿಶ್ವಾಸ. ಆದಷ್ಟು ಪ್ರಯತ್ನ ಪಟ್ಟು ಅವರನ್ನು ಕಳಿಸ್ತೀನಿ. ಹಾಗಾದರೆ ಈಗ ಬರಲೆ?" ಎದ್ದು ನಿಂತಳು.

"ಒಳ್ಳೇದಮ್ಮ ಹೋಗಿ ಬಾ." ತಾವೂ ಎದ್ದು ಒಳಗೆ ಹೋದರು.

ಚಿಂತೆ ಕವಿದ ಮುಖದಿಂದ ಸರಳ ಮನೆಗೆ ಬಂದಳು. ಸಣ್ಣಮ್ಮನೂ ಏನೂ ಮಾತನ್ನಾಡಿರಲಿಲ್ಲ. ಈಗ ಗಂಡನೊಡನೆ ಈ ವಿಷಯ ಹೇಳಲೇ ಬೇಕಾಗಿದೆ. ಏನಂತಾನೋ ಏನೋ? ಆತಂಕವಾಯಿತು.

ರಾತ್ರಿ ಊಟವಾದ ಬಳಿಕ ಮಲಗಲು ಸಿದ್ಧತೆ ನಡೆಸುತ್ತಿದ್ದಾಗ, ಕೇಳಿದಳು "ನನ್ನದೊಂದು ಮಾತು ನಡೆಸಿಕೊಡಬೇಕು ನೀವು, ಆಗುತ್ತಾ?"

"ಏನು ವಿಚಾರ? ಇದುವರಗೂ ಏನೂ ಕೇಳಿರಲಿಲ್ಲ. ಅಂಥ ಮುಖ್ಯವಾದದ್ದು ಏನು? ಬೇಗ ಹೇಳಿಬಿಡು."

"ಕೇಳಿದಮೇಲೆ ಇಲ್ಲ ಅನ್ನಬಾರದು."

"ಇಲ್ಲ ಮಹರಾಯಿತಿ ಅದೇನು ಹೇಳಬಾರದೆ?" ನಸುನಕ್ಕ.

"ಮತ್ತೆ.... ನನ್ನಗೆ ಗುರುತಿನ ಪಂಡಿತರೊಬ್ಬರಿದಾರೆ ಅವರೇ ಆ ತಾಯಿತವನ್ನೂ ಮಾಡಿಕೊಟ್ಟವರು. ಅವರ ಬಳಿಗೆ ಇವತ್ತು ಹೋಗಿದ್ದೆ. ಅವರು ನಿಮ್ಮನ್ನು ಬರಹೇಳಿದ್ದಾರೆ."

"ಏನಂದೆ?" ಬೆಚ್ಚಿ ಎದ್ದು ನಿಂತ. ಹೆದರಿಕೆ ಆಯಿತು. ಸಾವರಿಸಿಕೊಂಡು ಕೇಳಿದ?... "ಏನು ಕೇಳುಕ್ಕೆ ಹೋಗಿದ್ದೆ? ನಾನು ಯಾಕೆ ಹೋಗಬೇಕಂತೆ? ನನಗೆ ಅಂಥದ್ದೆಲ್ಲಾ ಇಷ್ಟವಿಲ್ಲ." ಅವಳಿಗೆ ಬೆನ್ನುಮಾಡಿ ನಿಂತ.

"ನಮ್ಮ ಮದುವೆಯಾಗಿ ನಾಲ್ಕು ವರ್ಷವಾಯಿತು ಮಕ್ಕಳಾಗೇ ಇಲ್ಲವಲ್ಲ. ಅದಕ್ಕೇ ಜಾತಕ ತೋರಿಸಿ ಅವರನ್ನು ಕೇಳಿದೆ."

"ಏನು? ಜಾತಕಾನೂ ತೋರಿಸಿದೆಯಾ? ನನ್ನ ಜಾತಕ ನಿನಗೆಲ್ಲಿ ಸಿಕ್ತು?"

"ಯಾಕೆ? ಇಲ್ಲೇ ಮನೆಯಲ್ಲೇ ಇತ್ತಲ್ಲ."

ಪೆದ್ದನಂತೆ ಮುಖ ನೋಡಿದ. ತಡವರಿಸಿದ, "ಹೋಗಲಿ ಅವರು ಏನಂದರು?" ಅವನ ಮನಸ್ಸು ಹೆದರುತ್ತಿತ್ತು.

"ಕೆಲವು ವಿಚಾರ ಖಚಿತವಾಗಿ ತಿಳಕೋಬೇಕು ಅದಕ್ಕೆ ನಿಮ್ಮನ್ನು ಕಳಿಸು ಅಂತ ಹೇಳಿದರು."

"ನನ್ನ ಹತ್ತಿರ ಏನಿದೆಯಂತೆ ಕೇಳುವುದು? ನಾನು ಹೋಗುಲ್ಲ. ನೀನೇ ಆ ಜಾತಕಗಳನ್ನು ವಾಪಸ್ಸು ತಂದು ಬಿಡು." ಏನನ್ನೂ ತಿಳ್ಕೋಬೇಕಾಗಿಲ್ಲ ನಾನು.

"ಯಾಕೆ ಹೀಗೆ ಆಡ್ತೀರಿ? ಒಂದು ದಿನ ಹೋಗಿ ಬಂದರೆ ಆಯಿತು. ನಿಮಗೆ ಮಕ್ಕಳು ಆಗಲಿ ಅಂತ ಆಸೆ ಇಲ್ಲವಾ?" ಅರೆ ನಾಚಿಕೆಯಿಂದ ಕೇಳಿದಳು.

"ಆಗುತ್ತೆ ಬಿಡು. ಅದಕ್ಕೆ ಅವಾಂತರ ಯಾಕೆ?"

"ನಿಮಗೆ ನನ್ನ ಭಾವನೆಯೇ ಅರ್ಥವಾಗುಲ್ಲ. ತಾಯಿಯಾಗುವುದಕ್ಕೆ ಎಲ್ಲಾ ಹೆಂಗಸರು ಇಷ್ಟಪಡುವುದಿಲ್ಲವೆ?"

"ನೀನು ತಾಯಿಯಾಗುಕ್ಕೂ, ಆ ಜಾತಕಕ್ಕೂ ಏನು ಸಂಬಂಧ?"

"ನನಗೆ ಅದೇನೋ ಗೊತ್ತಿಲ್ಲ. ಅವರು ಹೇಳಿದ್ದನ್ನ ಹೇಳಿದೀನಿ. ನನ್ನ ಮೇಲೆ ಪ್ರೀತಿ ಇದ್ದರೆ, ಗುರು ಹಿರಿಯರನ್ನು ಗೌರವಿಸುವ ಮನಸ್ಸಿದ್ದರೆ ನೀವು ಹೋಗಿಬನ್ನಿ. ಇಷ್ಟರ ಮೇಲೆ ನಿಮ್ಮಿಷ್ಟ." ಮುಸುಕೆಳೆದು ಮಲಗಿದಳು.

ಅವಳ ಕಡೆ ಕೂಡಾ ತಿರುಗದೆ ತನ್ನ ಪಾಡಿಗೆ ತಾನು ಮಲಗಿದ. ತಲೆಕೆಳಗೆ ಕೈಯನ್ನಟ್ಟು ಸೂರನ್ನು ದಿಟ್ಟಿಸುತ್ತಾ ಮಲಗಿದ್ದವನಿಗೆ ದಿಗಿಲಾಗಿತ್ತು.

ಒಂದು ಅಧ್ಯಾಯ ಸುಗಮವಾಗಿ ಮುಗಿದಿತ್ತು. ಈಗ ಇನ್ನೊಂದು ಅಧ್ಯಾಯ ಪ್ರಾರಂಭವಾಗಿದೆ. ಯೋಚಿಸಿ ಸುಸ್ತಾದ ಅವನು ಒಂದು ತೀರ್ಮಾನಕ್ಕೆ ಬಂದ. ಇದುವರಗೂ ಯಾರಿಗೂ ಹೇಳದ ಒಂದು ರಹಸ್ಯ ನನ್ನಲ್ಲಿದೆ. ಈ ನೆಪದಲ್ಲಿ ಆತನಿಗೆ ಹೇಳಿಬಿಡುತ್ತೇನೆ. ತಪ್ಪೋ ಸರಿಯೋ ಆತನನ್ನೇ ಕೇಳುತ್ತೇನೆ. ನಂತರ ಆತ ಹೇಳಿದಂತೆ ನಡೆದು ಬಿಡುತ್ತೇನೆ. ಆಗ ನನಗೆ ನಿಶ್ಚಿಂತೆಯಾಗುತ್ತದೆ. ಮೊಟ್ಟ ಮೊದಲ ಬಾರಿಗೆ ಇನ್ನೊಬ್ಬರ ಮೇಲೆ ಜವಾಬ್ದಾರಿ ಹೊರಿಸಿ ನಿಶ್ಚಿಂತೆಯಾಗಿ ಮಲಗಿ ನಿದ್ರಿಸಿದ. ಮುಸುಕಿನೊಳಗೆ ರೋಧಿಸುತ್ತಿದ್ದ ಸರಳೆಯ ನೆನಪು ಕೂಡಾ ಆಗಲಿಲ್ಲ. ಹಗುರವಾದ ಮನಸ್ಸಿನಲ್ಲಿ ಹೂಗನಸ ಕಾಣುತ್ತಾ ಮಲಗಿದ್ದವನು ಬೆಳಿಗ್ಗೆ ಎದ್ದಾಗ ಏಳು ಗಂಟೆಯಾಗಿತ್ತು.

ರಾತ್ರಿ ಮುನಿಸಿಕೊಂಡು ಮಲಗಿದ್ದರಿಂದ ಸರಳೆ ಬೆಳಿಗ್ಗೆ ಅವನೊಡನೆ ಮಾತಾಡ ಲಿಲ್ಲ. ಅವನಿಗೂ ಮಾತು ಬೇಡವಾಗಿತ್ತು. ದಿನದ ಕೆಲಸಗಳನ್ನೆಲ್ಲಾ ಮುಗಿಸಿ ಮನೆಯಿಂದ ಹೊರಟವನು ಸೀದಾ ಆಂಜನೇಯನ ದೇವಸ್ಥಾನದ ಕಡೆ ನಡೆದ.

ದೇವರ ಮುಂದೆ ಕೈ ಮುಗಿದು ನಿಂತು ದೀರ್ಘವಾಗಿ ಪ್ರಾರ್ಥಿಸಿದ ಮನಸ್ಸಿನಲ್ಲಿ ಅಳಕು ಇದ್ದರೂ, ಒಂದು ಇತ್ಯರ್ಥವಾಗುವ ಮನೋಭಾವ ಇತ್ತು. ಎಲ್ಲರೂ ಹೊರಡುವವರೆಗೂ ಕಾದು ಕುಳಿತಿದ್ದ ಅವನು ಪೂಜಾರಿಗೆ ಬಿಡುವಾದುದನ್ನು ಕಂಡು ಅವರ ಬಳಿಗೆ ಬಂದ.

"ನಮಸ್ಕಾರ" ಕೈ ಜೋಡಿಸಿದ.

"ಏನಾಗ ಬೇಕಿತ್ತು?" ಕೇಳಿದರು.

"ನಾನು ಬರಲಿ ಅಂತ ಹೇಳಿಕಳಿಸಿದ್ದರಂತೆ. ಸರಳ ಹೇಳಿದಳು." ಆತ ತಲೆಯಾಡಿಸಿದರು.

"ಹೌದು. ಹೌದು ಕೆಲವು ಮುಖ್ಯವಾದ ವಿಚಾರಗಳನ್ನು ತಿಳಿದುಕೊಳ್ಳಬೇಕಾಗಿದೆ. ಕೂತ್ಕೊಂಡು ಮಾತಾಡೋಣ ಬಾಪ್ಪಾ." ಅವರನ್ನು ಹಿಂಬಾಲಿಸಿದ.

ಇಬ್ಬರೂ ಕುಳಿತರು. ಒಂದು ಗಳಿಗೆ ಅವನನ್ನೇ ದಿಟ್ಟಿಸಿದ ಅವರು ಕೇಳಿದರು.

"ನಾನು ಕೆಲವು ಪ್ರಶ್ನೆಗಳನ್ನು ಕೇಳ್ತೀನಿ ಮರೆಮಾಚ್ಚದೆ ಉತ್ತರ ಹೇಳಬೇಕು."

ಅವರ ನೋಟವನ್ನು ಎದುರಿಸಲಾಗದೇ ತಲೆ ತಗ್ಗಿಸಿದ.

"ನೀನು ಆ ಹುಡುಗಿಯ ಗಂಡನಲ್ಲ. ನೀನು ಯಾರು? ಇಲ್ಲಿಗೆ ಯಾಕೆ ಬಂದೆ? ಹೇಗೆ ಬಂದೆ? ನಿನ್ನ ಉದ್ದೇಶ ಏನು? ಯಾರು ಕಳಿಸಿದ್ದಾರೆ? ಒಂದೂ ಬಿಡದೆ ಎಲ್ಲಾ ಹೇಳಬೇಕು. ಅಮೇಲೆ ನಾನು ನಿನಗೆ ಸಲಹೆ ನೀಡ್ತೀನಿ. ಹಾಗೆಯೇ ನಾನು ಈ ವಿಚಾರವನ್ನು ಯಾರಿಗೂ ಹೇಳುವುದಿಲ್ಲ. ಹಾಗಂತ ಮಾತು ಕೊಡ್ತೀನಿ."

"ಹೌದು. ನಾನು ಅಪರಾಧಿ ನನ್ನನ್ನು ಕ್ಷಮಿಸಿ. ಕಾರಣಾಂತರದಿಂದ ಹೀಗೆ ಮಾಡಬೇಕಾಯಿತು. ನೀವು ಹೇಗೆ ಹೇಳಿದರೆ ಹಾಗೆ ಕೇಳ್ತೀನಿ. ದಯವಿಟ್ಟು ಯಾರಿಗೂ ತಿಳಿಸ್ಬೇಡಿ."

"ಮುಖ ನೋಡಿದರೆ ಒಳ್ಳೆಯವನ ತರಹ ಕಾಣ್ತೀಯ. ಆದರೆ ಇಂತಹ ಒಂದು ದಿಟ್ಟ ಹೆಜ್ಜೆ ಇಡಬೇಕಾದರೆ ನಿನ್ನ ಧೈರ್ಯ ಎಷ್ಟು? ಇದು ಮೋಸ ಎಂದು ನಿನಗೆ ಅನ್ನಿಸಲಿಲ್ಲವಾ?"

"ತಪ್ಪೋ ಸರಿಯೋ ಏನನ್ನೂ ಯೋಚಿಸುವ ಸ್ಥಿತಿಯಲ್ಲಿ ಆಗ ನಾನಿರಲಿಲ್ಲ. ಅಲ್ಲದೆ ನನ್ನ ಪರಿಸ್ಥಿತಿಯನ್ನು ರೂಪಿಸಿದವರೇ ಬೇರೆಯವರು. ನಾನು ಅಪರಾಧಿ ಎನ್ನುವ ಭಾವನೆ ನನ್ನನ್ನು ಸದಾ ಕಾಡಿದೆ. ಆದರೆ ಹಿಂದೆ ಹೋಗಲಾರದಷ್ಟು ಮುಂದೆ ಬಂದು ಬಿಟ್ಟಿದ್ದೇನೆ. ಯಾರಿಗಾದರೂ ಹೇಳಿಕೊಳ್ಳೋಣವೆಂದರೆ ಯಾರೂ ಇಲ್ಲ. ಈಗ ನಿಮಗೆ ಎಲ್ಲಾ ಹೇಳಿಬಿಡುತ್ತೇನೆ. ಆಮೇಲೆ ತೀರ್ಮಾನ ನಿಮ್ಮದು" ಹೇಳಲು ಪ್ರಾರಂಭಿಸಿದ.

"ಈಗ್ಗೆ ಸುಮಾರು ಎರಡು ತಿಂಗಳ ಹಿಂದೆ ನಡೆದ ಘಟನೆ, ಇದು ಆಗ ನಾನು ಆಟೋರಿಕ್ಷಾ ಓಡಿಸುತ್ತಿದ್ದೆ. ವಿದ್ಯಾವಂತ ನಿರುದ್ಯೋಗಿಯಾದ ನನಗೆ ನನ್ನ ಸ್ನೇಹಿತನ ತಂದೆ, ಸಹಾಯ ಮಾಡಿದ್ದರು. ಬ್ಯಾಂಕಿನಿಂದ ತೆಗೆದ ಸಾಲದ ಹಣದಲ್ಲಿ ನನಗೆ ಆಟೋರಿಕ್ಷಾ ಕೊಡಿಸಿದ್ದರು. ಲೈಸನ್ಸ್ ಕೊಡಿಸಿದ್ದರು. ತರಬೇತಿ ನೀಡಿದ್ದರು."

"ಹುಟ್ಟಿನಿಂದಲೇ ಅನಾಥನಾದ ನನಗೆ ತಂದೆ ತಾಯಿಯ ಮುಖದ ನೆನಪೇ ಇರಲಿಲ್ಲ. ತಮ್ಮ ತಂಗಿಯರಿರಲಿಲ್ಲ. ಆದರೂ ನನಗೆ ಹೆಣ್ಣು ಮಕ್ಕಳೆಂದರೆ ಅಭಿಮಾನ ವಾತ್ಸಲ್ಯ. ಹೆಣ್ಣು ಹುಡುಗಿಯರಿಗೆ ಅದರಲ್ಲೂ ನಿಸ್ಸಹಾಯಕರಾದ ಅಬಲೆಯರಿಗೆ ನನ್ನಿಂದಾದ ಸಹಾಯ ಮಾಡುತ್ತಿದ್ದೆ. ನಾನು ದುಡಿದ ಹಣದಲ್ಲಿ ಸ್ವಲ್ಪ ಹಣವನ್ನು ಅನಾಥಾಶ್ರಮದ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಕೊಡುತ್ತಿದ್ದೆ. ಅವರಿಗೆ ಉಪಕಾರ

ಮಾಡುವ ಅವರನ್ನು ಉದ್ಧಾರ ಮಾಡುವ ಮನೋಭಾವನೆ ಇಲ್ಲದೆ ಬೇರೆ ಯಾವ ಆಸೆಯೂ ಇರಲಿಲ್ಲ. ಈ ಭಾವನೆ ನನ್ನಲ್ಲಿ ಹೇಗೆ ಉದಯವಾಯಿತು ಅಂತ ನನಗೆ ತಿಳಿದಿಲ್ಲ. ಆದರೂ ಅದನ್ನು ಗಟ್ಟಿ ಮಾಡುವ ಒಂದು ಘಟನೆ ನನ್ನ ಕಣ್ಣೆದುರಿಗೇ ನಡೆಯಿತು.

ನನಗೆ ಪರಿಚಯವಿದ್ದವರ ಮನೆಯಲ್ಲಿ ನಡೆದ ಘಟನೆ. ಗಂಡ ಹೆಂಡತಿಯರಲ್ಲಿ ಸಾಮರಸ್ಯವಿರಲಿಲ್ಲ. ಹೆಂಡತಿ ಪತಿವ್ರತೆ. ಗಂಡನಿಗೆ ಹೊರಚಾಳಿ. ಒಂದಲ್ಲ ಒಂದು ದಿನ ತನ್ನ ಗಂಡ ತನ್ನ ಬಳಿಗೆ ವಾಪಸ್ಸು ಬಂದೇ ಬರುತ್ತಾನೆಂಬ ನಂಬಿಕೆಯಿಂದ ಆ ಹೆಂಗಸು ದಿನಾ ಗಂಡನ ದಾರಿ ಕಾಯುತ್ತಿದ್ದಳು. ಅದರೆ ಹಾಗಾಗಲಿಲ್ಲ. ಕುಡಿದು ತೂರಾಡುತ್ತಿದ್ದ ಅವನು ಕಾರಿಗೆ ಸಿಕ್ಕಿ ಸತ್ತ. ಅವಳ ಬಳಿಗೆ ಅವನು ಬರಲೇ ಇಲ್ಲ. ಈ ವಿಚಾರ ತಿಳಿದ ಆ ಹೆಂಗಸು ಆತ್ಮಹತ್ಯೆ ಮಾಡಿಕೊಂಡಳು. ನನಗೆ ಹಾಗಾಗಬಾರದಾಗಿತ್ತು ಅಂತ ಎನ್ನಿಸಿದ್ದು ಎಷ್ಟೋ ಸಾರಿ, ಆ ಹೆಂಗಸಿನ ಬಾಳನ್ನು ಹಾಳು ಮಾಡಿ, ತನ್ನ ಬಾಳನ್ನು ಹಾಳು ಮಾಡಿಕೊಂಡ ಅವನು ಪಾಪಿ ಎಂದೇ ಎನಿಸಿತು. ಇಂತಹ ಗಂಡಸರಿಂದ ಸ್ತ್ರೀಯರಿಗೆ ಸಂಕಟ ಎಂದು ಮನ ಮರುಗಿತ್ತು. ಆಗ ಅನ್ನಿಸಿತ್ತು. ನಾನು ನನ್ನ ಹೆಂಡತಿಯನ್ನು ಹೂವಿನಂತೆ ಚೆನ್ನಾಗಿ ನೋಡಿಕೊಳ್ಳಬೇಕೆಂದು ಜೊತೆಗೆ ನಗುವೂ ಬಂದಿತ್ತು. ನನ್ನಂತಹ ಆಟೋ ಡ್ರೈವರನಿಗೆ ಹೆಣ್ಣುಕೊಡಲು ಯಾರಾದರೂ ಸಿದ್ಧರಾಗಿರುತ್ತಾರೆಯೆ?

ಇದಾದ ಕೆಲವು ದಿನಗಳ ನಂತರ ಒಂದು ದಿನ ಸಾಯಂಕಾಲ ಸುಮಾರು ೪ ಗಂಟೆಯ ಸಮಯದಲ್ಲಿ ಒಬ್ಬಳು ಹೆಂಗಸು ಇಬ್ಬರು ಗಂಡಸರು ಒಟ್ಟಾಗಿ ಬಂದರು. ಎಲ್ಲರೂ ಶಿಸ್ತಾಗಿ ಡ್ರೆಸ್ ಮಾಡಿಕೊಂಡಿದ್ದರು. ಅರ್ಜೆಂಟಾಗಿ ನಂದಿ ಬೆಟ್ಟಕ್ಕೆ ಹೋಗಬೇಕು ಮತ್ತೆ ವಾಪಸ್ಸು ಬರಬೇಕು. ವೇಟಿಂಗ್ ಚಾರ್ಜ್ ಕೊಡ್ತೀವಿ. ಎಕ್ಸಟ್ರಾ ದುಡ್ಡು ಕೊಡ್ತೀವಿ ಅಂತ ಹೇಳಿದರು. ದುರ್ಘಳಿಗೆ ಹೂಂ ಅಂತ ಒಪ್ಪಿದೆ. ದಾರಿಯಲ್ಲಿ ನಿಲ್ಲಿಸಿ ಸಾಕಷ್ಟು ಪೆಟ್ರೋಲನ್ನು ತುಂಬಿಸಿಕೊಂಡೆ.

ಅಲ್ಲಿ ತಲಪುವ ಹೊತ್ತಿಗೆ ಸುಮಾರು ಕತ್ತಲಾಗುತ್ತಾ ಬಂದಿತ್ತು. ಮೂವರು ಹರಟುತ್ತಿದ್ದರು. ಸ್ನೇಹಿತರು ಇರಬಹುದು ಎಂದುಕೊಂಡೆ. ತಿರುಗಾಡಲು ಹೊರಟರು. ನನ್ನನ್ನು ಬರುವಂತೆ ಬಲವಂತ ಮಾಡಿದರು. ಹೇಗೂ ಅವರ ಜೊತೆಗೇ ವಾಪಸ್ಸು ಬರಬೇಕೆಂದು ಇದ್ದುದರಿಂದ ನಾನು ಅವರನ್ನು ಹಿಂಬಾಲಿಸಿದೆ. ಜನ ಸಂಚಾರವಿಲ್ಲದ ಒಂದು ಜಾಗಕ್ಕೆ ಬಂದೆವು. ಇದ್ದಕ್ಕಿದ್ದಂತೆಯೇ ಆ ಗಂಡು ಹುಡುಗರು ಆ ಹುಡುಗಿಯೊಡನೆ ಕೆಟ್ಟದಾಗಿ ನಡೆದುಕೊಳ್ಳಲಾರಂಭಿಸಿದರು. ಹುಡುಗಿ ವಿರೋಧಿಸುತ್ತಿದ್ದುದನ್ನು ಕಂಡು ನಾನು ಆ ಹುಡುಗಿಯ ಸಹಾಯಕ್ಕೆ ಹೋದೆ. ಆ ಇಬ್ಬರೂ ನನ್ನನ್ನು ಹೊಡೆದು ಬೀಳಿಸಿ ಕೈಕಾಲು ಕಟ್ಟಿ ಬಟ್ಟೆ ತುರುಕಿ ಒಂದು ಮರದ ಬುಡದಲ್ಲಿ ಕೂರಿಸಿ

ದರು. ನಾನು ನೋಡುತ್ತಿದ್ದಂತೆಯೇ ನನ್ನ ಕಣ್ಣೆದುರಿಗೆ ಆ ಹುಡುಗಿಯನ್ನು ಇಬ್ಬರೂ ಕೆಡವಿ ಬಲತ್ಕಾರ ಗೊಳಿಸಿದರು. ಅವರ ಧಾಳಿಗೆ ಆ ಹುಡುಗಿಗೆ ಜ್ಞಾನ ಹೋಗಿರಬೇಕು ತಮ್ಮ ಕಾರ್ಯ ಮುಗಿದ ನಂತರ, ಆ ಹುಡುಗಿಯನ್ನು ಇಬ್ಬರೂ ಸೇರಿ ಎತ್ತಿ ಮೇಲಿನಿಂದ ಬೆಟ್ಟದ ಕೆಳಕ್ಕೆ ಎಸೆದರು. ಕೈಕೊಡವಿಕೊಂಡು ನನ್ನ ಬಳಿಗೆ ಬಂದ ಅವರನ್ನು ಕಂಡು ನನಗೆ ಹೆದರಿಕೆ ಆಯಿತು. ಅರಿವಿಲ್ಲದವನಂತೆ ಕಣ್ಣು ಮುಚ್ಚಿ ಮಲಗಿದೆ. ನನ್ನ ಜೇಬಿನಿಂದ ಬೀಗದ ಕೈಯನ್ನು ತೆಗೆದುಕೊಂಡು, ನಿಷ್ಕರುಣಿಗಳಂತೆ ಹೊರಟು ಹೋದರು. ಹಾಗೇ ಆ ಛಳಿಯಲ್ಲಿ ಎಷ್ಟು ಹೊತ್ತು ಮಲಗಿದ್ದೆನೋ ನನಗೆ ಗೊತ್ತಿಲ್ಲ.

ಇದ್ದಕ್ಕಿದ್ದಂತೆಯೇ ಧಡ್ ಧಡ್ ಎಂಬ ಹೆಜ್ಜೆ ಸಪ್ಪಳಕ್ಕೆ ಎಚ್ಚೆತ್ತು ಕಣ್ಣು ಬಿಟ್ಟು ನೋಡಿದೆ. ಬೆಳದಿಂಗಳ ಬೆಳಕಿನಲ್ಲಿ ಒಬ್ಬ ಹೆಂಗಸು ಓಡೋಡಿ ಬರುತ್ತಿರುವುದು ಕಾಣಿಸಿತು. ಆದರೆ ಕೈಕಾಲು ಆಡಿಸಲು ಸಾಧ್ಯವಿಲ್ಲದೆ ಮಲಗಿದ್ದ ನಾನು ಸುಮ್ಮನೆ ಇದ್ದೆ. ನೋಡುತ್ತಿದ್ದೆ. ಆ ಹೆಂಗಸಿನ ಹಿಂದೆ ಅನತಿ ದೂರದಲ್ಲಿ ಒಬ್ಬ ಗಂಡಸು ತೂರಾಡುತ್ತ ಬರುತ್ತಿದ್ದ. ತಿರುಗಿ ನೋಡಿ ಓಡುತ್ತಾ ಬರುತ್ತಿದ್ದ ಇವಳು ನನ್ನನ್ನು ಕಂಡಿರಬೇಕು. ಇದ್ದಕ್ಕಿದ್ದಂತೆಯೇ ನಿಂತು, ಅಲ್ಲಿ ನೆಲದ ಹುಲ್ಲಿನ ಮೇಲೆ ಬಿದ್ದಿದ್ದ ಸುಮಾರು ಸೈಜಿನ ಕಲ್ಲನ್ನು ತೆಗೆದು ಓಡಿಬರುತ್ತಿದ್ದ ಆ ಮನುಷ್ಯನ ಮೇಲೆ ಎಸೆದಳು. ಏನಾಯಿತೋ ಎಂಬಂತೆ ಆ ಮನುಷ್ಯ ದೊಪ್ಪನೆ ಬಿದ್ದ. ಆ ಹೆಂಗಸು ನನ್ನ ಬಳಿಗೆ ಬಂದು, ದಯವಿಟ್ಟು ಸಹಾಯ ಮಾಡಿ. ಈ ರಾಕ್ಷಸನ ಹಿಡಿತದಿಂದ ನನ್ನನ್ನು ರಕ್ಷಿಸಿ. ಅಂಗಲಾಚಿದಳು.

ನಾನು ಬರೀ ಹೂಂ ಹೂಂ ಎಂದು ಸದ್ದು ಮಾಡಿದೆ. ಬಿದ್ದಿದ್ದ ಆ ಮನುಷ್ಯ ಏಳದ್ದನ್ನು ಕಂಡು ಧೈರ್ಯಗೊಂಡ ಅವಳು ನನ್ನನ್ನು ಸಮೀಪಿಸಿದಳು. ಹತ್ತಿರದಿಂದ ನನ್ನನ್ನು ನೋಡಿ...

ಅರೆ... ಏನಾಗಿದೆ? ಯಾರು ಕಟ್ಟಿಹಾಕಿದಾರೆ?" ಎನ್ನುತ್ತಾ ಕಟ್ಟುಗಳನ್ನು ಬಿಚ್ಚಿದಳು. ಕೈ ಬಿಡಿಸಿಕೊಂಡ ನಾನು ಬಾಯಿನಿಂದ ಬಟ್ಟೆ ಚೆಂಡನ್ನು ತೆಗೆದು ದೂರ ಎಸೆದೆ. ಆಕೆಗೆ ಥ್ಯಾಂಕ್ಸ್ ಹೇಳಿದೆ.

"ಈಗ ಥ್ಯಾಂಕ್ಸ್ ಇರಲಿ. ದಯವಿಟ್ಟು ನನ್ನನ್ನು ಬೆಂಗಳೂರಿಗೆ ತಲುಪಿಸಿ. ನಿಮ್ಮ ಖಾಕಿ ಡ್ರೆಸ್ ನೋಡಿದರೆ ನೀವು ಡ್ರೈವರ್ ಇರಬಹುದು. ಯಾವ ವೆಹಿಕಲ್ ಇದೆ ಎಂದು ಕೇಳಿದಳು?"

"ನಾನು ಆಟೋ ಡ್ರೈವರ್ ಆದರೆ...ಕೀ ತೆಗೆದುಕೊಂಡು ಹೊರಟುಹೋದರು ಅವರಗಳು" ಎಂದೆ.

"ಓ... ಅವರೇ ನಿನ್ನನ್ನು ಇಲ್ಲಿ ಕಟ್ಟಿ ಹಾಕಿ ಕೀ ತೆಗೆದುಕೊಂಡು ಆಟೋದಲ್ಲಿ ಪರಾರಿಯಾಗಿರಬೇಕು. ಈಗ ಏನು ಮಾಡುವುದು? ಲ ಮನುಷ್ಯ ಎದ್ದರೆ ನನ್ನನ್ನು

ಕೊಂದು ಹಾಕಿ ಬಿಡ್ತಾನೆ. ನಾನು ಇಲ್ಲಿಂದ ಬೇಗ ತಪ್ಪಿಸಿಕೊಳ್ಳಬೇಕು" ಎಂದು ಅಳತೊಡಗಿದಳು.

"ಛೆ! ಅಳಬೇಡಿ ಏನಾದರೂ ಉಪಾಯ ನೋಡೋಣ. ಆತನಿಗೆ ಮೊದಲು ಏನಾಗಿದೆ ಅಂತ ನೋಡೋಣ ಆತ ಯಾರು? ನಿಮ್ಮ ಪರಿಚಯದವನಾಗಿದ್ದರೆ ಇಲ್ಲಿ ಬಿಟ್ಟು ಹೋಗುವುದು ಸರಿಯಲ್ಲ."

"ನಾನು ಆತನ ಜೊತೆಗೇ ಇಲ್ಲಿಗೆ ಬಂದದ್ದು. ಎಲ್ಲಾ ವಿವರವಾಗಿ ಆಮೇಲೆ ಹೇಳ್ತೀನಿ. ಮೊದಲು ಇಲ್ಲಿಂದ ಹೋಗೋಣ."

ಇಬ್ಬರೂ ಬಿದ್ದಿದ್ದ ಅ ವ್ಯಕ್ತಿಯ ಬಳಿ ಬಂದರು. ಆತ ಮೂರ್ಛೆ ಹೋಗಿದ್ದ.

"ನಾವಿಬ್ಬರೂ ಇಲ್ಲೇ ಗೆಸ್ಟ್ ಹೌಸಿನಲ್ಲಿದೇವೆ. ಅಲ್ಲಿಗೆ ಮೊದಲು ಈತನನ್ನು ಸಾಗಿಸೋಣ. ಅಮೇಲೆ ಏನಾದರೂ ದಾರಿ ಹುಡುಕೋಣ. ಈತನಿಗೆ ಜ್ಞಾನ ಬರುವ ಮೊದಲು ನಾವು ಇಲ್ಲಿಂದ ಹೊರಟು ಬಿಡಬೇಕು."

ಇಬ್ಬರೂ ಕಷ್ಟಪಟ್ಟು ಆತನನ್ನು ಎತ್ತಿ ತಂದು ರೂಮಿನೊಳಗೆ ಹಾಕಿದರು. ಇಷ್ಟಾದರೂ ಆತನಿಗೆ ಜ್ಞಾನ ಬಂದಿರಲಿಲ್ಲ. ಅಲ್ಲಿದ್ದ ಹೂಜಿಯಿಂದ ನೀರನ್ನು ಬಗ್ಗಿಸಿಕೊಂಡು ಕುಡಿದರು. ಬಿದ್ದಿದ್ದ ಆ ವ್ಯಕ್ತಿಯ ಕಡೆ ನೋಡುತ್ತಾ ನೋಡುತ್ತಾ ಪಿಸುದನಿಯಲ್ಲಿ ಆಕೆ ಹೇಳತೊಡಗಿದಳು.

"ನಾನು ಮತ್ತು ಈತ ಎಷ್ಟೋ ವರ್ಷಗಳಿಂದ ಸ್ನೇಹಿತರು. ಆದರೆ ಯಾಕೋ ಏನೋ ನಾವಿಬ್ಬರೂ ಮದುವೆಯಾಗುವ ಉದ್ದೇಶ ನಮಗಿರಲಿಲ್ಲ. ಹಾಗಾಗಿ ನಾವಿಬ್ಬರೂ ಆಗಾಗ್ಗೆ ಒಬ್ಬರನ್ನೊಬ್ಬರು ಸಂಧಿಸುತ್ತಿದ್ದೆವು. ಈ ವಿಚಾರ ಯಾರಿಗೂ ಗೊತ್ತಿರಲಿಲ್ಲ. ಈತ ಅಷ್ಟೇನೂ ಒಳ್ಳೆಯ ವ್ಯಕ್ತಿಯಲ್ಲ. ಆದರೂ ನನಗೆ ಹೇಗೆ ಗಂಟು ಬಿದ್ದನೋ ತಿಳಿಯದು. ನಾವಿಬ್ಬರೂ ಎಲ್ಲಾ ಸಂಬಂಧ ಇಟ್ಟುಕೊಂಡಿದ್ದರೂ ನನಗೆ ಮಕ್ಕಳಾಗುವ ಸೂಚನೆ ಏನೂ ಕಂಡು ಬರಲಿಲ್ಲವಾದ್ದರಿಂದ ಇಬ್ಬರೂ ಧೈರ್ಯವಾಗಿಯೇ ಇದ್ದೆವು. ಇವನು ನನಗಾಗಿ ಬೇಕಾದಷ್ಟು ಹಣ ಖರ್ಚು ಮಾಡುತ್ತಿದ್ದ.

ಇದೇ ಸಮಯದಲ್ಲಿ ಏನು ಕಾರಣವೋ ಏನೋ ತರಾತುರಿಯಲ್ಲಿ ಈತನ ಮದುವೆ ಬೇರೊಬ್ಬ ಹುಡುಗಿಯ ಜೊತೆ ನಡೆಯಿತು. ನಾನೂ ಮದುವೆಯಲ್ಲಿ ಭಾಗಿಯಾಗಿದ್ದೆ. ಆ ಹುಡುಗಿಯ ಮುಗ್ಧತನ ಕಂಡು ಬಹಳ ಸಂಕಟವಾಯಿತು. ಏನಾದರಾಗಲಿ ಈ ಹುಡುಗಿಗೆ ನನ್ನಿಂದಾಗಲೀ ಈತನಿಂದಾಗಲೀ ಅನ್ಯಾಯವಾಗ ಬಾರದೆನಿಸಿತು. ನಾನು ಬ್ಯಾಂಕಿಗೆ ರಜ ಹಾಕಿ ಬೇರೆ ಊರಿಗೆ ಹೊರಟು ಹೋದೆ. ಅಲ್ಲಿ ನಮ್ಮ ಸೋದರಮಾವನ ಮನೆಯವರು ಇದ್ದರು. ವಾಪಸ್ಸು ಬರಲು ೧೫-೨೦ ದಿನಗಳಾದವು. ನಾನು ಊರಿಗೆ ಬರುವಷ್ಟರಲ್ಲಿ ಗಂಡ ಹೆಂಡತಿ ಸುಖವಾಗಿದ್ದು ನನ್ನನ್ನು ಮರೆತಿರುತ್ತಾನೆಂದು ಕೊಂಡಿದ್ದೆ. ಒಂದು ತರಹ ಸಮಾಧಾನವಾಗಿತ್ತು.

ಆದರೆ ಹಾಗಾಗಲಿಲ್ಲ. ೧–೨ ದಿನಗಳ ನಂತರ ಈತ ನನ್ನನ್ನು ಹುಡುಕಿಕೊಂಡು ಬಂದ. ಆತನನ್ನು ಕಂಡೊಡನೆ ನನ್ನ ಆಸೆಗಳೆಲ್ಲಾ ಮರುಕಳಿಸಿದವು. ಆದರೂ ಆತನಿಗೆ ತಿಳುವಳಿಕೆ ಹೇಳಿದೆ. ಆದರೆ, ಆತ ನನ್ನನ್ನು ಬೈದು ಹೆದರಿಸಿದ ತನಗೆ ಇಬ್ಬರು ಹೆಂಗಸರನ್ನು ತೃಪ್ತಿಪಡಿಸುವ ಶಕ್ತಿ ಇದೆ ಎಂದು ಪೌರುಷ ಕೊಚ್ಚಿಕೊಂಡ. ನೀನೂ ಬೇರೆ ಮದುವೆಮಾಡಿಕೊಂಡು ಬಿಡು. ಆಗ ನಿನ್ನನ್ನು ಬಿಟ್ಟು ಬಿಡುತ್ತೇನೆ. ಎಂದು ತಮಾಷೆ ಮಾಡಿದ. ಅಂತೂ ಬಲವಂತದಿಂದ ನನ್ನ ಮನವೊಲಿಸಿ ನನ್ನೊಡನೆ ಇರಲಾರಂಭಿಸಿದ."

"ಹೀಗೇ ಆಗ ಈಗ ತಿಂಗಳಿನಲ್ಲಿ ೧–೨ ಸಲ ವಾರಗಟ್ಟಲೆ ನನ್ನೊಡನೆ ಇರುತ್ತಿದ್ದ. ಇದೇ ಸಮಯದಲ್ಲಿ ಬ್ಯಾಂಕಿಗೆ ಹೊಸದಾಗಿ ಟ್ರಾನ್ಸ್‌ಫರ್ ಆಗಿ ಬಂದವ ರೊಬ್ಬರ ಮುಖಾಂತರ ನನಗೆ ಮತ್ತೊಬ್ಬ ವ್ಯಕ್ತಿಯ ಪರಿಚಯವಾಯಿತು. ಆತ ವಿಧುರ ಒಂದು ಮಗುವಿತ್ತು. ನನ್ನನ್ನು ಆತನಿಗೆ ಪರಿಚಯಿಸಿದ ನನ್ನ ಸ್ನೇಹಿತೆ, ನಾನು ಆತನನ್ನು ಮದುವೆಯಾಗಿ ಸುಖವಾಗಿರಬೇಕೆಂಬ ಆಸೆಯನ್ನು ಪ್ರಕಟಿಸಿದಳು."

"ನನಗೆ ಮೊದಲಿಗೆ ಆಶ್ಚರ್ಯವೆನಿಸಿದರೂ, ನಂತರ ಯಾಕಾಗಬಾರದು? ಎನಿಸಿತು. ಅಲ್ಲದೆ ಇವನು ತಮಾಷೆಗೆ ಆಡಿದ್ದ ಮಾತು ನನಗೆ ಸವಾಲಾಗಿತ್ತು. ನನಗೂ ವಯಸ್ಸಾಗಿತ್ತು. ಈತನಿಂದ ದೂರವಾಗುವ ಸುಸಂಧಿ ಎನಿಸಿ, ಒಪ್ಪಿದೆ. ನಮ್ಮಿಬ್ಬರ ವಿವಾಹ ಸರಳವಾಗಿ ಜರುಗಿತು. ಮಗು ಚಿಕ್ಕದು ನೋಡಿಕೊಳ್ಳಲು ಒಬ್ಬ ಹೆಂಗಸನ್ನು ಗೊತ್ತು ಮಾಡಿದ್ದರು. ನಮ್ಮವರು ರಸಿಕರಲ್ಲ, ಉದಾಸೀನಭಾವದಿಂದ ಇರುತ್ತಿದ್ದರು. ಒಮ್ಮೊಮ್ಮೆ ಬೇಜಾರಾಗುತ್ತಿತ್ತು. ಆಗ ನನಗೆ ಈತನ ನೆನಪಾಗುತ್ತಿತ್ತು."

ನನಗೆ ಮದುವೆಯಾದ ವಿಷಯ ನಾನು ಈತನಿಗೆ ತಿಳಿಸಿರಲಿಲ್ಲ. ಯಥಾ ಪ್ರಕಾರ ಈತ ನನ್ನನ್ನು ಭೇಟಿಯಾಗಿ ಕರೆಯಲು ಬಂದಾಗ ನಾನು ಇದ್ದ ವಿಷಯ ತಿಳಿಸಿದೆ. ಕೂಗಾಡಿದ, ಕಿರುಚಾಡಿದ, ಹೊಡೆದ ಬಡಿದ. ನನ್ನ ಮಾತನ್ನು ನಂಬಲಿಲ್ಲ. ತನ್ನಿಂದ ತಪ್ಪಿಸಿಕೊಳ್ಳುವ ಸುಳ್ಳು ಉಪಾಯ ಎಂದ. ಬೇಕಾದರೆ ಗಂಡನನ್ನು ಕರೆಸಿ ಪರಿಚಯ ಮಾಡಿಸಿಕೊಡುತ್ತೇನೆಂದಾಗ ಸುಮ್ಮನಾದ. ಸ್ವಲ್ಪ ಹೊತ್ತಿನ ನಂತರ, "ಮೊದಲೇ ಮುದುಕ ವಿಧುರ. ನಿನ್ನ ಜೊತೆ ಏನು ಮಾಡಾನು? ಮೊದಲಿನ ಹಾಗೇ ನಾವಿಬ್ಬರೂ ಇದ್ದು ಬಿಡೋಣ. ನಿನಗೆ ನಾನು ಬೇಡವಾ?" ಎಂದ.

"ಈಗ ಚೆನ್ನಾಗಿರುಲ್ಲ. ನಮ್ಮ ಪಾಡಿಗೆ ನಾವಿಬ್ಬರೂ ನೆಮ್ಮದಿಯಾಗಿ ನಮ್ಮ ನಮ್ಮ ಸಂಸಾರವನ್ನೇ ಸುಖವಾಗಿ ಕಾಪಾಡೋಣ. ಪ್ಲೀಸ್ ದೂರವಿದ್ದು ಇಬ್ಬರೂ ಒಬ್ಬರ ನ್ನೊಬ್ಬರು ಮರೆತು ಬಿಡೋಣ ಎಂದೆ."

"ಅದೆಲ್ಲಾ ಸುಳ್ಳು ನಾನು ಹೇಳಿದ ಹಾಗೆ ನೀನು ಕೇಳಲೇ ಬೇಕು ಇಲ್ಲದಿದ್ದರೆ ನಿನ್ನ ಗಂಡನಿಗೆ ನಮ್ಮಿಬ್ಬರ ಸಂಬಂಧದ ವಿಷಯ ತಿಳಿಸಿ... ನಿನ್ನನ್ನು ಆತನಿಂದ ದೂರ ಮಾಡಿಬಿಡುತ್ತೇನೆ ಎಂದು ಹೆದರಿಸಿದ."

"ಅವನ ಮುಖ ನೋಡಿ ಹಾಗೇ ಮಾಡಿದರೂ ಮಾಡಬಹುದು ಯಾವುದಕ್ಕೂ ಅಂಜದವನು ಎನಿಸಿತು ವಿಧಿಯಿಲ್ಲದೆ ಅವನ ಮಾತಿಗೆ ಒಪ್ಪಬೇಕಾಯಿತು."

"ಅಂದಿನಿಂದ ಮತ್ತೆ ನಾವು ಆಗ ಈಗ ಭೇಟಿಯಾಗ ತೊಡಗಿದೆವು. ನನ್ನ ಗಂಡ ಟೂರ್ ಹೋದಾಗ, ತಾಯಿ ಮನೆಗೆ ಹೋಗುತ್ತೇನೆಂದು ಸುಳ್ಳು ಹೇಳಿ ಇಲ್ಲಿ ಬಂದಿರುತ್ತಿದ್ದೆ. ಆದರೂ ಆಗಾಗ್ಗೆ ಅಂಜಿಕೆಯಾಗುತ್ತಿತ್ತು."

"ಈ ಸಾರಿಯೂ ಹಾಗೇ ಬಂದಿದ್ದೇವೆ. ನಾನು ನಾಳೆ ಬೆಳಿಗ್ಗೆ ಹೊರಟು ಹೋಗಬೇಕು ಎಂದೆ. ಈತ ಒಪ್ಪಲಿಲ್ಲ. ಮತ್ತೊಮ್ಮೆ ಬೆದರಿಕೆಯ ಮಾತುಗಳನ್ನು ಆಡಿದ. ಆಗ ನಾನು ಧೈರ್ಯವಾಗಿ, ಈ ಸಾರಿ ನಾನೇ ನನ್ನ ಗಂಡನಿಗೆ ಎಲ್ಲವನ್ನು ತಿಳಿಸಿ ಬಿಡುತ್ತೇನೆ. ಆತ ನನ್ನನ್ನು ಒಪ್ಪಿಕೊಂಡರೆ ಸರಿ ಇಲ್ಲದಿದ್ದರೆ ಡೈವೋರ್ಸ್ ಮಾಡಿ ಬಿಡುತ್ತೇನೆ. ಹೀಗೆ ದಿನ ದಿನ ಅಂಜುವ ಬದುಕು ನನಗೆ ಬೇಡ ಎಂದೆ."

"ಏನೋ ಆ ಮಾತಿಗೆ ಅವನಿಗೆ ಕೋಪ ಬಂದು. ಇವತ್ತು ನಿನ್ನನ್ನು ಕೊಂದು ಹಾಕಿ ಬಿಡುತ್ತೇನೆ. ನನ್ನ ಜೊತೆ ಇರದವಳು ನೀನು ಅವನ ಜೊತೆಯೂ ಇರಕೂಡದು. ನೀನು ಇರಕೂಡದು ಎಂದು ನನ್ನ ಬಳಿಗೆ ಬಂದ. ಸಿಕ್ಕಾಪಟ್ಟೆ ಕುಡಿದಿದ್ದರಿಂದ ತೂರಾಡುತ್ತಿದ್ದ. ನನ್ನನ್ನು ಹಿಡಿಯಲು ಕೈ ಚಾಚಿ ಮುಂದೆ ಬರುತ್ತಿದ್ದವನನ್ನು ನೋಡಿ ಭಯವಾಯಿತು. ಆತನಿಂದ ತಪ್ಪಿಸಿಕೊಳ್ಳಲು ಬಾಗಿಲು ತೆಗೆದುಕೊಂಡು ಆಚೆ ಓಡಿ ಬಂದೆ. ಕಿರುಚುತ್ತಾ ನನ್ನ ಹಿಂದೆ ಬರುತ್ತಿದ್ದವನಿಗೆ ಸಿಗದಂತೆ ಓಡಿ ಬರುತ್ತಿದ್ದೆ. ಆಚೆ ಈಚೆ ಅಕ್ಕ ಪಕ್ಕದಲ್ಲಿ ಯಾರೂ ಕಾಣಲಿಲ್ಲ. ಆದರೆ ಇನ್ನು ಸ್ವಲ್ಪ ಮುಂದೆ ಬಂದಾಗ ಬೆಳದಿಂಗಳ ಬೆಳಕಿನಲ್ಲಿ ಯಾರೋ ಮರದ ಬುಡದಲ್ಲಿ ಮಲಗಿರುವಂತೆ ಕಂಡಿತು. ಜೊತೆಗೆ ಇನ್ನೊಬ್ಬ ವ್ಯಕ್ತಿ ಇದಾನೆ ಎಂಬ ಧೈರ್ಯದಲ್ಲಿ ಅಲ್ಲಿಯೇ ಬಿದ್ದಿದ್ದ ಕಲ್ಲನ್ನು ಎತ್ತಿ ನನ್ನ ಹಿಂದೆ ಬರುತ್ತಿದ್ದ ಆತನ ಮೇಲೆ ಎಸೆದೆ. ಅಷ್ಟಕ್ಕೇ ಆತ ಬಿದ್ದು ಬಿಟ್ಟ. ಇದಿಷ್ಟೂ ನಡೆದ ವಿಚಾರ. ನನ್ನ ಹಾಗೇ ನೀನೂ ಕಷ್ಟದಲ್ಲಿದೀಯ ಅಂತ ಎನ್ನಿಸುತ್ತೆ. ನಿನ್ನನ್ನು ಕಟ್ಟಿ ಹಾಕಿದವರು ಯಾರು?"

"ನಾನು ನನ್ನೊಡನೆ ನಡೆದ ಮೋಸಕೃತ್ಯವನ್ನು ಆಕೆಯೊಡನೆ ಹೇಳಿದೆ. ಮಾತು ಮುಗಿಸಿ ಬಿದ್ದಿದ್ದ ಆ ವ್ಯಕ್ತಿಯ ಕಡೆ ನೋಡಿದೆ. ಯಾಕೋ ಮುಖ ವಿಕಾರವಾಗಿದೆ ಎನಿಸಿತು. ಆತನ ಬಳಿಗೆ ಹೋಗಿ ಮೂಗಿನ ಬಳಿ ಬೆರಳಿಟ್ಟು ನೋಡಿದೆ. ಉಸಿರಾಡುತ್ತಿರಲಿಲ್ಲ. ಗಾಬರಿಯಾಗಿ ಅವಳನ್ನು ಕರೆದೆ. ಇಬ್ಬರೂ ಮುಖಕ್ಕೆ ನೀರು ತಟ್ಟಿ ಎಚ್ಚರಿಸಲು ಪ್ರಯತ್ನಿಸಿದೆವು. ಆತ ಎಚ್ಚರಗೊಳ್ಳಲಿಲ್ಲ. ಎಷ್ಟೋ ಹೊತ್ತಿನ ನಂತರ ಗೊತ್ತಾಯಿತು ಆತ ಸತ್ತು ಹೋಗಿದ್ದಾನೆಂದು. ನಮ್ಮಿಬ್ಬರ ಮುಖಗಳು ನೀಲಿಗಟ್ಟಿ ಹೋದವು. ನನಗಂತೂ ದಿಕ್ಕೇ ತೋಚದಂತಾಯಿತು. ಎಲ್ಲಿಂದೆಲ್ಲಿಗೋ ಬಂದು ಈ ಗೊಂದಲದಲ್ಲಿ ಸಿಕ್ಕಿ ಬಿದ್ದನೆಂದು."

ಆಕೆಗೂ ಸಿಕ್ಕಾಪಟ್ಟೆ ಗಾಬರಿಯಾಗಿತ್ತು. ಆದರೂ ಬುದ್ಧಿವಂತೆ. ಈಗ ಅವಳು ಇಲ್ಲಿಂದ ಪಾರಾಗಿ ಹೋಗಬೇಕಾಗಿತ್ತು. ಅದನ್ನೆಲ್ಲಾ ಕಂಡಿರುವ ನನ್ನನ್ನು ತನ್ನ ಕಡೆಗೆ ಒಲಿಸಿಕೊಳ್ಳಬೇಕು ಹೀಗೇ ಏನೋ ಯೋಚಿಸುತ್ತಿದ್ದವಳು, ನನ್ನ ಮುಖ ವನ್ನೊಮ್ಮೆ ಆತನ ಮುಖವನ್ನೊಮ್ಮೇ ನೋಡಲಾರಂಭಿಸಿದಳು. ಇದ್ದಕ್ಕಿದ್ದಂತೆ ಕೇಳಿದಳು "ನಿಮ್ಮ ಹೆಸರೇನು? ನಿಮ್ಮ ವಯಸ್ಸೆಷ್ಟು?"

ನಾನು ನನ್ನ ಹೆಸರನ್ನು ವಯಸ್ಸನ್ನು ತಿಳಿಸಿದೆ. ಮತ್ತೊಮ್ಮೆ ಆಕೆಯೇ ಹೇಳಿದಳು. "ಈಗ ನನಗೆ ಒಂದು ಉಪಾಯ ಹೊಳೆದಿದೆ."

"ನಾನು ಮೊದಲೇ ಬಡವ, ಅನಾಥ ನನ್ನನ್ನು ಈ ಗೊಂದಲದಲ್ಲಿ ಸಿಕ್ಕಿಸಬೇಡಿ. ನಿಮ್ಮನ್ನು ಕರಕೊಂಡು ಹೋಗಿ ನಿಮ್ಮ ಮನೆ ತಲುಪಿಸ್ತೀನಿ. ಆಮೇಲೆ ನನ್ನ ಪಾಡಿಗೆ ನನ್ನನ್ನು ಬಿಟ್ಟುಬಿಡಿ."

"ಈಗ ಇಲ್ಲಿ ಇಬ್ಬರೂ ಸಿಕ್ಕಿ ಬಿದ್ದಿದ್ದೇವೆ. ನನಗೂ ದಾರಿ ಇಲ್ಲ. ನಿಮಗೂ ದಾರಿ ಇಲ್ಲ. ನಾನು ಹೇಳುವ ಮಾತನ್ನು ಕೇಳಿ. ಇದರಿಂದ ಇಬ್ಬರೂ ತಪ್ಪಿಸಿಕೊಳ್ಳಬಹುದು. ಈಗ ನಿಮ್ಮನ್ನು ಬಿಟ್ಟುಬಿಟ್ಟರೆ ನನ್ನ ವಿರುದ್ಧ ಸಾಕ್ಷಿ ಹೇಳುಲ್ಲ ಅಂತ ಏನು ಗ್ಯಾರಂಟಿ?"

"ನಾನು ಯಾರಿಗೂ ಹೇಳುಲ್ಲ ಅಂತ ಪ್ರಾಮಿಸ್ ಮಾಡ್ತೀನಿ."

"ನಿಮ್ಮ ಅಟೋರಿಕ್ಷಾ ಇಲ್ಲಿ ಕಳೆದು ಹೋಗಿದೆ ಅಂತ ಪೋಲಿಸ್‌ನವರಿಗೆ ಕಂಪ್ಲೆಂಟ್ ಕೊಡ್ತೀರಿ ಅಂತ ಅಂದುಕೊಳ್ಳೋಣ ಆಗ ನಿಮ್ಮ ಕೇಸ್‌ಗೋಸ್ಕರ ಕೋರ್ಟಿಗೆ ಹೋಗಬೇಕಾಗುತ್ತೆ. ಆಟೋ ಸಿಕ್ಕಿದರೂ ಸಿಕ್ಕಬಹುದು. ಅಥವಾ ಸಿಗದಿರ ಬಹುದು ನಿಮ್ಮ ಮಾಲೀಕರಿಗೆ ಆಟೋ ಹಣ ಕೊಡಬೇಕಾಗುತ್ತೆ. ನಿಮಗೆ ಮೋಸ ಮಾಡಿದವರು ನಿಮ್ಮನ್ನು ಹಿಂಬಾಲಿಸುತ್ತಾನೆ ಇರ್ತಾರೆ. ಆಗ ನೀವು ಏನು ಮಾಡ್ತೀರಿ? ಕೆಲಸಕಾರ್ಯ ಇಲ್ಲದೆ ಬೀದಿ ಬೀದಿ ಅಲೀತೀರಿ ಅಷ್ಟೆ."

"ಯಾಕೆ ಹೆದರಿಸ್ತಿದೀರಾ? ಈಗ ನಾನು ಏನು ಮಾಡಬೇಕು ಹೇಳಿ?"

"ಈ ಮನುಷ್ಯನ್ನ ಸರಿಯಾಗಿ ಗಮನಿಸಿ ನೋಡಿದ್ರಾ? ಏನಾದ್ರೂ ವಿಶೇಷ ಗೊತ್ತಾಯಿತೆ?"

"ವಿಶೇಷ ಏನಿರುತ್ತೆ? ಮುಖ ವಿಕಾರವಾಗಿದೆ."

"ಮುಖ ವಿಕಾರವಾಗಿಲ್ಲದೇ ಇದ್ದರೆ..? ನಿಮಗೆ ಗೊತ್ತಾ ನೀವು ಆತನ ಹಾಗೇ ಇದೀರಿ ಅಂತ."

"ಏನಂದ್ರಿ..? ಸಾಧ್ಯವೇ ಇಲ್ಲ." ನಂಬದವನಂತೆ ಹೇಳಿದ.

"ಯಾಕೆ ಸಾಧ್ಯವಿಲ್ಲ. ನಾನು ಆತನ್ನ ಎಷ್ಟೋ ವರ್ಷಗಳಿಂದ ಬಲ್ಲೇ. ೩-೪ ವರ್ಷಗಳ ಕೆಳಗೆ ಆತ ನಿಮ್ಮ ಹಾಗೇ ಇದ್ದ. ಈಚೆಗೆ ಕುಡಿದು ಕುಡಿದು ಮೈ ಬಂದಿತ್ತು, ಕ್ರೂರತನ ಹೆಚ್ಚಾಗಿ ಮುಖ ಕ್ರೂರವಾಗಿತ್ತು ಅಷ್ಟೆ."

"ನೀವು ಏನು ಹೇಳ್ತಿದೀರೋ ನನಗೆ ಅರ್ಥವಾಗಿಲ್ಲ."

"ಏನಿಲ್ಲ ಸಿಂಪಲ್. ನೀವು ನಿಮ್ಮ ಮೀಸೆ ಬೋಳಿಸಿ, ಆತನ ಬಟ್ಟೆಯನ್ನೂ ನೀವು ಹಾಕಿಕೊಳ್ಳಿ. ನಿಮ್ಮ ಖಾಕಿ ಬಟ್ಟೆ ಆತನಿಗೆ ತೊಡಿಸಿ. ಆತ ಬಿದ್ದ ಜಾಗದಲ್ಲೇ ಮತ್ತೆ ಈ ಬಾಡಿನ್ನ ಬಿಸ್ಹಾಕಿ ಬರೋಣ. ಆಗ ಎಲ್ಲರೂ ಈತನೇ ಆ ಆಟೋರಿಕ್ಷಾ ಡ್ರೈವರ್, ಆ ವ್ಯಕ್ತಿಗಳು ಆತನನ್ನು ಕೊಂದು ಹಾಕಿ ಆಟೋದಲ್ಲಿ ಪರಾರಿಯಾಗಿದಾರೆ ಅಂತ ಅಂದುಕೊಳ್ತಾರೆ. ಈತನ ಜಾಗದಲ್ಲಿ ನೀವಿರ್ತೀರಿ."

"ಅಷ್ಟು ಸುಲಭವಾಗಿ ಎಲ್ಲಾ ಸರಿಹೋಗುತ್ತಾ? ಯಾರಿಗಾದರೂ ಅನುಮಾನ ಬಂದೇ ಬರುತ್ತೆ. ನಾನು ಈತನ ಬದಲಿಗೆ ಹೇಗೆ ಇರುಕ್ಕೆ ಆಗುತ್ತೆ?..."

"ನಿಮಗೇನೂ ಗಾಬರಿಬೇಡ ನನ್ನಿಂದ ನಿಮಗೆ ಇನ್ನು ಯಾವ ತೊಂದರೇನೂ ಇಲ್ಲ. ಹೆಂಡತಿ ವಿಚಾರ ಸ್ವಲ್ಪ ಯೋಚಿಸಬೇಕಾಗುತ್ತೆ. ಮೊದಲು ಇಲ್ಲಿಂದ ಹೊರಟು ಹೋದರೆ ೮-೧೦ ದಿನ ಎಲ್ಲಾದರೂ ರಹಸ್ಯವಾಗಿದ್ದು ವರ್ತಮಾನಗಳನ್ನು ತಿಳಿದು ಕೊಳ್ಳೋಣ. ಮೊದಲು ಬೀಸುವ ದೊಣ್ಣೆ ಏಟು ತಪ್ಪಿಸಿಕೊಂಡರೆ ಸಾಕು."

"ಇದೊಳ್ಳೆ ಫಜೀತಿ. ಈತ ತಾನು ಸತ್ತು ಪಾರಾದ. ನನ್ನನ್ನು ಈ ಜಂಜಾಟಕ್ಕೆ ಸಿಕ್ಕಿಸಿದ.".

"ಆತ ತಾನು ಸತ್ತು ಎಲ್ಲರಿಗೂ ಒಳ್ಳೆಯದನ್ನೇ ಮಾಡಿರಬಹುದು. ಕಾದು ನೋಡೋಣ. ನೀವೇನೂ ಗಾಬರಿಯಾಗಬೇಡಿ. ಸಧ್ಯಕ್ಕೆ ನಾನು ನಿಮ್ಮ ಜೊತೆ ಇರ್ತೀನಿ ಅಷ್ಟೆ."

"ಆಕೆಯ ನಿರಾಳತನಕ್ಕೆ ನನಗೆ ಅಚ್ಚರಿಯಾಯಿತು. ನನ್ನದೇನೂ ತಪ್ಪಿಲ್ಲದೆ ಇದ್ದಾಗ ನಾನೇಕೆ ಸಿಕ್ಕಿಹಾಕಿಕೊಳ್ಳಬೇಕೆನಿಸಿತು. ಆಕೆ ಹೇಳಿದ ಉಪಾಯ ಸಧ್ಯಕ್ಕೆ ಸರಿ ಎನಿಸಿತು. ಮುಂದೆ ಏನಾಗುತ್ತೋ ಆಗಲಿ. ಅಂತ ತೀರ್ಮಾನಿಸಿಕೊಂಡೆ."

ಅಂತೂ ಇಬ್ಬರೂ ಸೇರಿ ಆ ಶರೀರಕ್ಕೆ ನನ್ನ ಖಾಕಿ ಬಟ್ಟೆಯನ್ನೂ ತೊಡಿಸಿದೆವು. ನಾನು ಅಲ್ಲಿಯೇ ಇದ್ದ ಷೇವಿಂಗ್ ಸೆಟ್‌ನಿಂದ ಮೀಸೆ ಬೋಳಿಸಿದೆ. ಆತನ ಬೇರೆ ಒಂದು ಸೆಟ್ ಬಟ್ಟೆಗಳನ್ನು ಧರಿಸಿ, ಆತನಿಂದ ಬಿಚ್ಚಿ ಹಾಕಿದ್ದ ಬಟ್ಟೆಗಳನ್ನು ಒಂದು ಚೀಲದಲ್ಲಿ ಹಾಕಿಕೊಂಡೆವು. ಅಂತೂ ಮತ್ತೊಮ್ಮೆ ಆತನನ್ನು, ಆತ ಬಿದ್ದ ಸ್ಥಳಕ್ಕೆ ಕರೆತಂದು ಬಿಸಾಡಿದೆವು. ಗೆಸ್ಟ್ ಹೌಸ್‌ನ ಹಿಂಭಾಗದಲ್ಲಿ ವಾಸವಾಗಿದ್ದ ಮುದುಕ ವಾಚಮನ್ನಿಗೆ ತಿಳಿಸಿ ನಾವು ಅಲ್ಲಿಂದ ಹೊರಡುವ ಹೊತ್ತಿಗೆ ಬೆಳಗಿನ ಏಳು ಗಂಟೆ.

ಆಕೆ ನಾನೂ ಬೆಂಗಳೂರಿಗೆ ಬಂದೆವು. ಸೀದಾ ಒಂದು ಲಾಡ್ಜಿಗೆ ಹೋದೆವು. ತಿಂಡಿ ಕಾಫಿ ಮುಗಿಸಿ, ಒಂದು ರೂಮನ್ನು ಬಾಡಿಗೆಗೆ ಹಿಡಿದೆವು. ಅಲ್ಲಿ ಕುಳಿತಾಗ ಆಕೆ ಸರೋಜಾಕ್ಷಿ, ಸತ್ತು ಹೋದ ಆ ಮನುಷ್ಯನ ನಡೆವಳಿಕೆಗಳನ್ನು ನನಗೆ ಮನದಟ್ಟು

ಮಾಡಿಕೊಟ್ಟಳು. ಆತನ ಹೆಂಡತಿಯೊಡನೆ ಆತ ನಡೆದುಕೊಳ್ಳುತ್ತಿದ್ದ ರೀತಿ ನೀತಿಗಳನ್ನು ತೋರಿಸಿಕೊಟ್ಟಳು.

"ಹೀಗೆ ಒಂದು ಹತ್ತು ದಿನ ಅಜ್ಞಾತವಾಗಿದ್ದು ಆಚೆಗೆ ಬಂದೆ. ಅಷ್ಟರಲ್ಲಿ ಪೇಪರಿ ನಲ್ಲಾಗಲೇ ಆ ಕೊಲೆಯ ಬಗ್ಗೆ ವರದಿ ಬಂದಿದ್ದು ಈಗ ಅದು ಹಳೆಯ ಮಾತಾಗಿತ್ತು.'

"ಸತ್ತು ಹೋದ ಆ ವ್ಯಕ್ತಿ ಅಪ್ಪನ ಆಸ್ತಿಗೆ ಏಕೈಕ ವಾರಸುದಾರನಾಗಿದ್ದು ಬ್ಯಾಂಕಿನಲ್ಲಿಟ್ಟಿದ್ದ ಹಣದ ಬಡ್ಡಿಯಿಂದ ಜೀವನ ನಡೆಸುತ್ತಿದ್ದರಿಂದ ಕೆಲಸದ ಯೋಚನೆ ಯಾಗಲೀ ಸಹೋದ್ಯೋಗಿಗಳ ಚಿಂತೆಯಾಗಲೀ ಇರಲಿಲ್ಲ. ಆಗ ಈಗ ಊರ ಹೊರಗಿನ ತೋಟದ ಕೆಲಸಕ್ಕೆ ಮಾತ್ರ ಹೋಗಬೇಕಾಗಿತ್ತು. ಇದೆಲ್ಲಾ ಏನೂ ಸಮಸ್ಯೆ ಯಾಗಿ ತೋರಲಿಲ್ಲ ನನಗೆ. ಹೆಂಡತಿಯೊಡನೆ... ಹೇಗಿರಬೇಕಪ್ಪಾ ಎಂಬ ಸಮಸ್ಯೆ ಚಿಂತೆಗೀಡು ಮಾಡುತ್ತಿತ್ತು."

"ಅಂದಿನಿಂದಲೇ ಆ ಮನೆಗೆ ಕಾಲಿಟ್ಟೆ. ನನ್ನನ್ನು ನೋಡಿದರೂ ನೋಡದವಳಂತೆ ಅವಳು ಹೊರಟು ಹೋಗಿದ್ದಳು. ನಾನು ಮನೆಯಲ್ಲೇ ಇದ್ದು, ಅದೂ ಇದೂ ಧ್ಯಾನದಿಂದ ಇರುವುದನ್ನು ಕಂಡು ಅಚ್ಚರಿಯಾಗಿರಬೇಕು ಅವಳಿಗೆ. ಎಷ್ಟೋ ದಿನಗಳ ತನಕ ಒಬ್ಬರನ್ನೊಬ್ಬರು ದಿಟ್ಟಿಸಿಕೂಡಾ ನೋಡಿರಲಿಲ್ಲ. ಆದರೂ ನನಗೆ ಅಪರಾಧಿ ಮನೋಭಾವ ದಿನೇ ದಿನೇ ಹೆಚ್ಚಾಗುತ್ತಿತ್ತು. ಎಂದಾದರೂ ಅವಳಿಗೆ ಎಲ್ಲಾ ವಿಚಾರ ತಿಳಿಸಿ ಅವಳು ಒಪ್ಪಿದರೆ ಅವಳ ಜೊತೆ ಇರುವುದು, ಇಲ್ಲದಿದ್ದರೆ ಎಲ್ಲಾದರೂ ಹೊರಟು ಹೋಗುವುದು ಎಂದು ತೀರ್ಮಾನಿಸಿದ್ದೆ. ಒಂದು ದಿನ ಧೈರ್ಯ ಮಾಡಿ ಅವಳೊಡನೆ ಮಾತಾಡಲು ಅವಳು ಮಲಗಿದ್ದ ರೂಮಿಗೆ ಹೋದೆ.

ನನ್ನನ್ನು ಕಂಡು ಅವಳು, ಏಕೋ ಏನೋ ಮೂರ್ಛೆ ಹೋದಳು. ಉಪಚರಿಸಿ ಎಚ್ಚರಿಸಿದಾಗ ನನ್ನನ್ನು ಕೈ ಮುಗಿದು ಬೇಡಿಕೊಂಡಳು. ನನ್ನನ್ನು ದೂರ ಮಾಡಬೇಡಿ ಎಂದು. ಅಳತೊಡಗಿದಳು. ಆಗ ಅವಳನ್ನು ನೋಯಿಸುವ ಇಚ್ಛೆ ಇಲ್ಲದೆ ನಾನು ಅವಳಿಗೆ ಸಮೀಪನಾದೆ. ಅವಳ ಆಸೆಯನ್ನು ಅರಿತು ಅವಳಿಗೆ ಸುಖಕೊಟ್ಟೆ. ಅವಳು ನನ್ನನ್ನು ತನ್ನ ಗಂಡನೆಂದೇ ನಂಬಿದ್ದಾಳೆ. ಅಲ್ಲವೆಂದು ಹೇಳಿ ಅವಳಿಗೆ ಆಘಾತ ವನ್ನುಂಟು ಮಾಡುವ ಆಸೆ ನನಗಿಲ್ಲ. ಆದರೆ ನಾನು ದ್ರೋಹಿ ಎಂಬ ಭಾವನೆ ನನಗಿದ್ದೇ ಇದೆ. ಆದರೆ ಅವನು ಈಗ ಬದುಕಿಯೇ ಇಲ್ಲವಲ್ಲ. ನಾನು ಅವನ ಜಾಗಕ್ಕೆ ಬಂದಿದ್ದೇನೆ. ಅವಳಿಗೆ ಗಂಡನ ಸಾವಿನ ವಿಚಾರ ತಿಳಿದರೆ? ತಿಳಿದರೆ ಅವನ ಬರುವಿಗಾಗಿ ಕಾಯುತ್ತಿದ್ದ ಅವಳಿಗೆ ಎಷ್ಟು ನಿರಾಶೆ ಆಗಬಹುದು? ಆತ್ಮಹತ್ಯೆ ಮಾಡಿಕೊಂಡರೆ? ಆ ಪಾಪ ಕೂಡಾ ತನ್ನ ತಲೆಗೆ ತಟ್ಟುತ್ತೆ? ಅಲ್ಲದೆ, ಮತ್ತೆ ನಾನು ಯಾರು? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಆಗ ನಾನು ಜೈಲಿನಲ್ಲಿರಬೇಕಾಗುತ್ತದೆ.

ನೋಡಿಯೇ ಬಿಡ್ತೀನಿ ಒಂದೆರಡು ವಾರ, ಅಷ್ಟರ ಒಳಗೆ ನನಗೂ ಅವಳಿಗೂ ಸ್ನೇಹ ಬೆಳೆಯದಿದ್ದರೆ, ನಾನು ಎಲ್ಲಾ ಬಿಟ್ಟು ತಲೆಮರೆಸಿಕೊಂಡು ಹೊರಟು ಹೋಗುತ್ತೇನೆ. ಅಂತ ಹೀಗೆಲ್ಲಾ ನಿರ್ಧರಿಸಿಕೊಂಡಿದ್ದೆ.

೮-೧೦ ದಿನಗಳಲ್ಲಿ ನನ್ನ ಅವಳ ಬಾಂಧವ್ಯ ಬೆಳೆಯಿತು. ಅವಳು ಬಹಳ ಸಂತೋಷದಿಂದಿದ್ದಳು. ಅವಳನ್ನು ನೋಡಿದರೆ ನಾನು ತಪ್ಪಿತಸ್ಥ ಎಂದು ಖೇದವಾಗುತ್ತಿತ್ತು. ಒಂದು ದಿನ ಆಕಸ್ಮಿಕವಾಗಿ ನಾನೂ ಅವಳೊಡನೆ ದೈಹಿಕ ಸುಖ ಅನುಭವಿಸಿದೆ. ಅವಳು ವಿರೋಧಿಸಲಿಲ್ಲ. ಅದನ್ನು ಅತೀವವಾಗಿ ಬಯಸಿದ್ದಂತೆ ತೋರಿತು. ಎಷ್ಟೋ ದಿನದಿಂದ ಬಯಕೆಯನ್ನು ಅದುಮಿಟ್ಟವಳಂತೆ ನನ್ನೊಡನೆ ನಡೆದುಕೊಂಡಳು. ನಾನು ಒಬ್ಬ ಅಪರಿಚಿತ ಎಂದು ತಿಳಿದರೆ ಅವಳು ಹಾಗೆ ನಡೆದುಕೊಳ್ಳಲು ಸಾಧ್ಯವಿತ್ತೆ? ಒಬ್ಬ ಹೆಂಗಸಿಗೆ ದೇಹ ಸುಖ ಕೊಟ್ಟ ಸಂತೋಷ ನನಗಾಗಿತ್ತು. ನನಗೂ ನನ್ನ ಎಲ್ಲಾ ಆತಂಕಗಳೂ ಕಳೆಯಿತು. ಎಲ್ಲೀವರೆಗೆ ಸಾಧ್ಯವೋ ಅಲ್ಲಿವರೆಗೂ ಹೀಗೇ ಇದ್ದು ಬಿಡುತ್ತೇನೆ ಎಂದು ತೀರ್ಮಾನಿಸಿದೆ. ಅಂದಿನಿಂದ ನಾವಿಬ್ಬರೂ ಅನ್ಯೋನ್ಯ ದಂಪತಿಗಳಾದೆವು. ಸರೋಜಾಕ್ಷಿ ಕೂಡಾ ಬಹಳ ಸಂತೋಷವಾಗಿದಾಳೆ. ಗಂಡನೊಡನೆ ಬಹಳ ಸುಖವಾಗಿದ್ದಾಳೆ. ಹೀಗೆ ಇಬ್ಬರು ಅಬಲೆಯರಿಗೆ ನೆಮ್ಮದಿ ತಂದು ಕೊಟ್ಟ ಅಭಿಮಾನ ನನ್ನಲ್ಲಿತ್ತು. ಇದರಲ್ಲಿ ನನ್ನ ಸ್ವಾರ್ಥತೆಯೂ ಇದೆ ಎನ್ನಿ.

ಆದರೆ ನೆನ್ನೆ ದಿನ ಇದ್ದಕ್ಕಿದ್ದಂತೆ, ಸರಳ ನಿಮ್ಮ ವಿಚಾರವನ್ನು ಪ್ರಸ್ತಾಪ ಮಾಡಿದ್ದಾಗ ನಾನು ಹೆದರಿದೆ. ಈಗ ನಿಮ್ಮನ್ನು ಪ್ರತ್ಯಕ್ಷ ಕಂಡಾಗಲಂತೂ, ನಿಮ್ಮಿಂದ ಯಾವ ಗುಟ್ಟು ಮುಚ್ಚಿಡುವ ಶಕ್ತಿ ನನಗಿಲ್ಲ. ಆದ್ದರಿಂದ ನಾನು ಎಲ್ಲಾ ಹೇಳಿದ್ದೇನೆ. ನೀವು ಸರಳನಿಗೆ ಎಲ್ಲಾ ವಿಚಾರ ತಿಳಿಸಿ. ಆನಂತರವೂ ಅವಳು ನನ್ನೊಡನೆ ಸಂಸಾರ ನಡೆಸುವುದಾದರೆ ನನಗೆ ತುಂಬಾ ಸಂತೋಷ ಒಪ್ಪದಿದ್ದರೆ ನಾನು ಎಲ್ಲಾದರೂ ಹೊರಟು ಹೋಗ್ತೀನಿ.

ಇದುವರಗೂ ಆಸಕ್ತಿಯಿಂದ ಸುಭಾಷನ ಮಾತುಗಳನ್ನು ಕೇಳಿದ ಜೋಯಿಸರು ಕಲ್ಲಾದರು. ಎಷ್ಟೋ ಸಮಯ ಮನಸ್ಸಿನಲ್ಲೇ ಮೆಲಕು ಹಾಕುತ್ತಿದ್ದ ಅವರು ಹೇಳಿದರು.

ನೋಡು ಮಗು, ನೀನು ಮಾಡಿರುವುದು ಕಾನೂನಿನ ಪ್ರಕಾರ ತಪ್ಪು. ಅದರೆ ನನಗೆ ನಿಜವನ್ನೇ ಹೇಳಿರುವುದರಿಂದ ನನಗೆ ನಿನ್ನಲ್ಲಿ ವಿಶ್ವಾಸ ಮೂಡಿದೆ. ಪ್ರಪಂಚದಲ್ಲಿ ಕಂಡೂ ಕಾಣದಂತಹ ಎಷ್ಟೋ ತಪ್ಪುಗಳು ನಡೆದು ಹೋಗುತ್ತಿರುತ್ತವೆ. ಸುಂದರೇಶನು ತನ್ನ ಹೆಂಡತಿಯೊಡನೆ ಹಾಗೆ ನಡೆದುಕೊಳ್ಳುತ್ತಿದ್ದುದು ನಿಜವಾಗಿಯೂ ತಪ್ಪು. ಆದರೆ ಅದನ್ನು ವಿರೋಧಿಸುವವರು ಯಾರೂ ಇರಲಿಲ್ಲ. ಹೆಂಡತಿ ಕೂಡಾ ಸುಮ್ಮನಿದ್ದಳು. ಅವಳೇ ಅವನನ್ನು ಕೊಲ್ಲಬಹುದಾಗಿತ್ತು. ಆದರೆ ಕಾನೂನು ಅವಳನ್ನು ಶಿಕ್ಷಿಸುತ್ತಿತ್ತು. ಅವಳು ಏನು ಸುಖ ಕಂಡ ಹಾಗೆ ಆಗುತ್ತಿತ್ತು? ಸರೋಜಾಕ್ಷಿ ಕೂಡಾ

ಆ ಕೆಲಸ ಮಾಡಲಿಲ್ಲ. ತಾನಾಗಿಯೇ ಸುನಾಯಾಸವಾಗಿ ಸತ್ತಿದ್ದಾನೆ. ಆದರೆ ಯಾರಿಗೂ ಈ ವಿಷಯ ಇದುವರೆಗೂ ತಿಳಿದಿಲ್ಲ. ಅನುಮಾನ ಕೂಡಾ ಬಂದಿಲ್ಲ.

ಇದೇ ಸಮಯದಲ್ಲಿ ನೆನ್ನೆ ದಿನ ಅವಳು ಬಂದು ನಿಮ್ಮನ್ನು ಹೋಗಿ ಕಂಡು ಬರುವಂತೆ ತಿಳಿಸಿದಾಗ ದಿಗಿಲಾಯಿತು. ಆದರೆ ಯಾರಿಗಾದರೂ ಈ ವಿಚಾರ ತಿಳಿಸಿ ಸಲಹೆ ಪಡೆದರೆ ಮನಸ್ಸಿಗೆ ನೆಮ್ಮದಿ ಸಿಗಬಹುದೆಂಬ ಉದ್ದೇಶದಿಂದ ನಿಮ್ಮ ಬಳಿಗೆ ಬಂದಿದ್ದೇನೆ. ನಿಮ್ಮ ಮುಂದೆ ನನ್ನ ರಹಸ್ಯವನ್ನೆಲ್ಲಾ ಬಿಚ್ಚಿ ಹರಡಿದ್ದೇನೆ.

ದೇವರ ಮುಂದೆ ಕುಳಿತು ಹೇಳುತ್ತಿದ್ದೇನೆ. ನೀವು ಹೇಳಿದಂತೆ ಕೇಳುವ ನಿರ್ಧಾರ ನನ್ನದು. ನೀವು ಏನು ಶಿಕ್ಷೆ ಕೊಟ್ಟರೂ ಅದಕ್ಕೆ ಸಿದ್ಧ."

"ಮನುಷ್ಯರೆಲ್ಲರೂ ತಿಳಿದೋ ತಿಳಿಯದೇನೋ ಅನೇಕ ತಪ್ಪುಗಳನ್ನು ಮಾಡುತ್ತಲೇ ಇರುತ್ತಾರೆ. ತಿಳಿದು ಮಾಡಿದ ತಪ್ಪಗೆ ಶಿಕ್ಷೆ ಇದೆ. ನೀನು ಮಾಡಿದ್ದು ಎಲ್ಲಾ ರೀತಿಯಿಂದಲೂ ತಪ್ಪು ಆದರೆ ಈಗ ಎಲ್ಲಾ ಸವಿಸ್ತಾರವಾಗಿ ಹೇಳಿದ್ದರಿಂದ ಯೋಚಿಸ ಬೇಕಾಗಿದೆ. ನಿನ್ನನ್ನು ಪೋಲಿಸರಿಗೆ ಹಿಡಿದುಕೊಟ್ಟು ಜೈಲಿಗೆ ಕಳಿಸುವುದು ಅತಿ ಸುಲಭ. ಆದರೆ. ನಿನ್ನನ್ನೇ ಗಂಡನೆಂದು ನಂಬಿರುವ ಸರಳೆಯ ಬಗ್ಗೆ ಯೋಚಿಸುವಾಗ ಆತಂಕವಾಗುತ್ತೆ. ಆದ್ದರಿಂದ ದೇವರಿಚ್ಛೆ ಎಂದು ಸುಮ್ಮನಿದ್ದುಬಿಡುತ್ತೇನೆ."

ಹೇಳುತ್ತಾ ಅವರ ಗಂಟಲುಬ್ಬಿ ಬಂತು.

ಅವನು ಸಂತಸದಿಂದ ಮೂಕನಾಗಿದ್ದ. ಆದರೂ ಅರ್ಚಕರೊಡನೆ ಕೆಲವು ವಿಚಾರಗಳನ್ನು ಮನದಟ್ಟು ಮಾಡಿಕೊಳ್ಳಬೇಕಾಗಿತ್ತು.

"ಅರ್ಚಕರೆ... ಇನ್ನೊಂದು ವಿಚಾರ ಒಂದು ವೇಳೆ ಈ ದೇವರು ಅನುಗ್ರಹಿಸ ದಿದ್ದರೆ ನೀವು ಏನು ಹೇಳುತ್ತಿದ್ದಿರಿ?"

"ನನಗೆ ದೇವರು ಅನುಗ್ರಹಿಸಿಯೇ ಅನುಗ್ರಹಿಸುವನು ಎಂಬ ನಂಬಿಕೆ ದೃಢವಾಗಿತ್ತು. ಬೇರೆ ಏನೂ ಆಗಲು ಸಾಧ್ಯವೇ ಇರಲಿಲ್ಲ. ಭಕ್ತರ ಮನಸ್ಸಿನಲ್ಲಿರುವುದನ್ನು ನಡೆಸಿಯೇಕೊಡುವನು ಎಂದುಕೊಂಡೆ. ಎಷ್ಟೋ ವರ್ಷಗಳ ಹಿಂದೆಯೇ ಈ ದೇವರನ್ನು ಬೆಂಬಲ ವನ್ನಾಗಿಟ್ಟುಕೊಂಡು ಮುಂದುವರೆದಿದ್ದರೆ, ನನ್ನ ತಂಗಿಯ ಬಾಳೂ ನೇರ ವಾಗುತ್ತಿತ್ತು. ಒಂದು ಕ್ಷಣದ ದುರ್ಬಲತೆ ಎಲ್ಲನ್ನು ನಾಶಮಾಡಿತು. ಈ ದಿನ ನನ್ನ ಈ ನಿರ್ಧಾರ ದಿಂದ ನನ್ನ ತಂಗಿಯ ಆತ್ಮಕ್ಕೆ ಶಾಂತಿ ಸಿಗಬಹುದು. ಅಥವಾ ಈ ಸರಳೆಯೇ ಮತ್ತೊಮ್ಮೆ ನನ್ನ ತಂಗಿಯಂತೆ ಬಂದು ನನ್ನಿಂದ ಈ ಕಾರ್ಯ ಮಾಡಿಸಿರಬಹುದು."

ನನ್ನ ತಂಗಿಗೆ ಚಿಕ್ಕವಯಸ್ಸಿನಲ್ಲೇ ಮದುವೆಯಾಗಿ ಗಂಡನ ಮನೆಗೆ ಕಾಲಿಡುವುದಕ್ಕೆ ಮೊದಲೇ ವಿಧವೆಯಾದಳು. ನಮ್ಮ ಮನೆಗೆ ಆಗಾಗ್ಗೆ ಬರುತ್ತಿದ್ದ ನಮ್ಮ ಸೋದರತ್ತೆಯ ಮಗ ಅವಳನ್ನು ಮದುವೆಯಾಗಲು ಸಿದ್ಧನಾಗಿದ್ದ. ಆಗಿನ ಕಾಲದ ಪದ್ಧತಿಯಂತೆ

ಯಾರೂ ಅವರಿಬ್ಬರ ವಿವಾಹಕ್ಕೆ ಒಪ್ಪಲಿಲ್ಲ. ಎಲ್ಲರೂ ಅವಳನ್ನು ವಿಚಿತ್ರ ರೀತಿಯಲ್ಲಿ ನೋಡಲಾರಂಭಿಸಿದರು. ಅದನ್ನು ಸಹಿಸಲಾಗದೆ ನನ್ನ ತಂಗಿ ಆತ್ಮಹತ್ಯೆ ಮಾಡಿಕೊಂಡಳು. ಆಗಿನಿಂದ ನನಗೆ ಅದೇ ವ್ಯಥೆ. ಆಕಾಲದಲ್ಲೇ ನಾನು ಅವಳಿಗೆ ಸಹಾಯಕನಾಗಿ ನಿಂತಿದ್ದರೆ ಅವಳು ಸುಖವಾಗಿರುತ್ತಿದ್ದಳು. ಆ ವ್ಯಥೆ ಇಂದು ಕಳೆದು ಹೋಯಿತು. ನನಗೆ ಇಂದು ತೃಪ್ತಿ ಸಿಕ್ಕಿದೆ. ನೀವಿಬ್ಬರೂ ಚೆನ್ನಾಗಿ ಸಂಸಾರ ನಡೆಸಿಕೊಂಡು ಸುಖವಾಗಿರಿ. ನಮಸ್ಕರಿಸಿದ ಅವನನ್ನು ಮತ್ತೊಮ್ಮೆ ಆಶೀರ್ವದಿಸಿದರು.

ದೇವಸ್ಥಾನದ ಮಟ್ಟಿಲುಗಳ ಮೇಲೆ ನಿಂತಿದ್ದ ಅವನನ್ನು ಕರೆದು ಅವನ ಕೈಯಲ್ಲಿ ಸರಳೆಯ ಜಾತಕದ ಪ್ರತಿಯನ್ನು ಮಾತ್ರ ಕೊಟ್ಟರು. ಅವಳ ಗಂಡನ ಜಾತಕದ ಪ್ರತಿಯನ್ನು ಹರಿದು ಚೂರು ಚೂರು ಮಾಡಿದರು. ಚೂರುಗಳನ್ನು ಅವನ ಕೈಯಲ್ಲಿಡುತ್ತಾ ಹೇಳಿದರು. ಇದನ್ನು ಎಸೆದು ಬಿಡು..... ಸಧ್ಯದಲ್ಲೇ ಎಂದಾದರೂ ಒಂದು ದಿನ ನೀವಿಬ್ಬರೂ ಒಟ್ಟಿಗೆ ಬಂದು ದೇವರ ಸೇವೆ ಮಾಡಿಸಿ

ಅವರ ಮಾತಿಗೆ ಆಗಲಿ ಎಂದು ತಲೆದೂಗುತ್ತಾ ಮೆಟ್ಟಿಲುಗಳನ್ನು ಇಳಿದು ಬಂದ ಅವನ ಹೃದಯದಿಂದ ದೊಡ್ಡ ಹೊರೆಯನ್ನು ಇಳಿಸಿದಂತಾಗಿತ್ತು. ದೇವಸ್ಥಾನದ ಮನೋಹರವಾದ ಆವರಣದಲ್ಲಿ ಹಕ್ಕಿಯಂತೆ ಹಾರಾಡುತ್ತಿದ್ದ ಅವನ ಮನಸ್ಸು ಹಕ್ಕಿಯಂತೆ ಹಗುರವಾಗಿತ್ತು. ಅಲ್ಲಿಯೇ ಇದ್ದ ಒಂದು ಮರದ ಬುಡಕ್ಕೆ ಹರಿದ ಕಾಗದದ ಚೂರುಗಳನ್ನೆಸೆದು, ಸರಳೆಯ ಜಾತಕವನ್ನು ತನ್ನ ಜೇಬಿನೊಳಗೆ ಇಳಿಬಿಟ್ಟ.

ಇನ್ನು ಯಾವ ಭಯವೂ ತನಗಿಲ್ಲವೆಂದು, ಸೀಟಿ ಹಾಕುತ್ತಾ ಹೆಜ್ಜೆ ಹಾಕಿದ....

* * *

೧೦. ಆಯ್ಕೆ

ಇತ್ತೀಚೆಗೆ ಕಂಪೆನಿಯ ಹಿರಿಯ ಹಾಗೂ ದಕ್ಷ ಆಡಳಿತಗಾರ ನಾಗಭೂಷಣ ರವರು ಅನಾರೋಗ್ಯದಿಂದ ಆಸ್ಪತ್ರೆ ಸೇರಿದಾಗ, ಎಲ್ಲರೂ ಆತಂಕಗೊಂಡರು. ಇನ್ನು ಈ ಕಂಪೆನಿ ಉದ್ಧಾರವಾದ ಹಾಗೇನೇ... ಅವರೇ ಈ ಕಂಪೆನಿಯ ಜೀವಾಳ. ಆಧಾರಸ್ತಂಭವಾದ ಅವರೇ ಇಲ್ಲವಾದ ಮೇಲೆ, ಇದನ್ನ ನಡೆಸುವವರ್‍ಯಾರು! ಕಂಪೆನಿ ಯನ್ನು ಮುಚ್ಚಿಬಿಟ್ಟರೆ ನಮ್ಮಗಳ ಗತಿಯೇನು!? ಅಲ್ಲಿಯ ಕೆಲಸಗಾರರ ಮೊದಲ ಚಿಂತೆ ಇದು. ಎಲ್ಲರೂ ಸಮಾಲೋಚನೆ ನಡೆಸಿ ತಮ್ಮ ಸಂದೇಹವನ್ನು ಶಂಕರನ ಮುಂದಿಟ್ಟರು.

ಶಂಕರ ಆ ಕಂಪೆನಿಗೆ ಕೆಲಸಕ್ಕೆ ಸೇರಿ ಎರಡು ಮೂರು ವರ್ಷಗಳಷ್ಟೇ ಕಳೆದಿದ್ದವು. ಇದಕ್ಕೆ ಮುಂಚೆ ಬೇರೆ ಬೇರೆ ಕಂಪೆನಿಗಳಲ್ಲಿ ಕೆಲಸ ಮಾಡಿ ಅನುಭವವಿದ್ದ ಅವನನ್ನೇ ಆಯ್ಕೆ ಮಾಡಿದ್ದರು. ನಿಷ್ಠೆಯಿಂದ ಕೆಲಸ ಮಾಡುತ್ತಿದ್ದ ಅವನು ನಾಗಭೂಷಣರವರಿಗೆ ಮೆಚ್ಚುಗೆಯಾಗಿದ್ದ. ಅವನ ಆಕರ್ಷಕ ವ್ಯಕ್ತಿತ್ವ, ಚುರುಕಾದ ಕಾರ್ಯ ತತ್ಪರತೆ ಅವರನ್ನು ಮರುಳುಗೊಳಿಸಿದ್ದವು. ಎಷ್ಟೋ ಜನ ಬೇರೆ ಸಹಾಯಕರಿದ್ದೂ, ಕೆಲವು ವಿಷಯಗಳಲ್ಲಿ ಇವನ ಸಲಹೆ ಪಡೆಯುತ್ತಿದ್ದರು. ಅದು ಎಲ್ಲರಿಗೂ ತಿಳಿದ ವಿಷಯ. ಆ ಬಗ್ಗೆ ಯಾರಿಗೂ ಅಸೂಯೆ ಇಲ್ಲವಾದರೂ, ಸಾಹೇಬರ ಚಮಚಾ ಎಂದು ಗೇಲಿ ಮಾಡಿ, ಅವನ ಹಿಂದೆ ನಗುತ್ತಿದ್ದುದೂ ಉಂಟು. ಈ ದಿನ ಅವನೇ ಅವರ ನೆರವಿಗೆ ಬೇಕಾಯ್ತು.

"ಈ ಕಂಪೆನಿಯ ಅಡಿಪಾಯ ಅವರು. ಒಂದು ವೇಳೆ ಅವರೇ ಇಲ್ಲವಾದರೆ ಇದನ್ನು ನಡೆಸುವವರು ಯಾರು! ನಮಗೆ ಉದ್ಯೋಗವಿಲ್ಲದಿದ್ದರೆ ನಾವು ಜೀವಿಸಿರುವು ದಾದರೂ ಹೇಗೆ!? ನಮ್ಮ ಸಂಸಾರದ ಗತಿಯೇನು!?" ಅವರ ಅಳಲು ಅದು.

"ಹಾಗೆಲ್ಲಾ ಏನೂ ಆಗೊಲ್ಲ, ನೀವು ಚಿಂತಿಸಬೇಡಿ. ಇದು ಹೊಸದಾಗಿ ಶುರು ವಾದ ಕಂಪೆನಿಯೇ ಇರಬಹುದು. ಆದರೆ ಮುಳುಗಿ ಹೋಗುಷಷ್ಟು ದುಃಸ್ಥಿತಿಯಲ್ಲಿಲ್ಲ. ಅವರು ಅನಾರೋಗ್ಯದಿಂದ ನರಳುತ್ತಿರುವುದರಿಂದ ಕಂಪೆನಿಯ ಕಡೆ ಗಮನ ಕಡಿಮೆ ಆಗಿದೆ. ಅಷ್ಟೇ.... ಅವರ ಜಾಗಕ್ಕೆ ಸೂಕ್ತವಾದ ಬೇರೊಬ್ಬ ಅಧಿಕಾರಿಯನ್ನು ನೇಮಿಸು ವಂತೆ ಕೇಳಿಕೊಳ್ಳೋಣ. ನಾವೆಲ್ಲಾ ಸೇರಿ ಒಪ್ಪಿಸೋಣ."

ಎಲ್ಲರೂ ಅವನ ಮಾತಿಗೆ ಒಪ್ಪಿದರು. ಎಲ್ಲರೂ ನರ್ಸಿಂಗ್ ಹೋಂಗೆ ಹೋಗಿ ಶುಭ ಹಾರೈಸಿದರು. ಕಡೆಯಲ್ಲಿ ಇವನೊಬ್ಬನೇ ಉಳಿದ. ಅವನು ತನ್ನೊಡನೆ ಏನನ್ನೋ ಮಾತನಾಡಲು ಕಾಯುತ್ತಿದ್ದಾನೆಂದು ತಿಳಿದು ಅವರಿಗೂ ಆತಂಕವಾಯಿತು. ತಾವು ತಮ್ಮ ಮಗಳ ಭವಿಷ್ಯತ್ತನ್ನು ಆಲೋಚಿಸಿ, ಬ್ಯಾಂಕಿನ ನೆರವಿನಿಂದ ಈ ಕಂಪೆನಿಯನ್ನು ಪ್ರಾರಂಭಿಸಿದ್ದರು. ಆದರೆ ಇದ್ದಕ್ಕಿದ್ದಂತೆ ತಮಗೇನಾಯಿತು! ಇನ್ನು ತಮ್ಮ ಮಗಳ ಗತಿಯೇನು? ಅವಳಿನ್ನೂ ಚಿಕ್ಕವಳು ಅಂತ ಎನಿಸಿದಾಗ ಚಿಂತೆ ಹೆಚ್ಚುತ್ತಿತ್ತು.

"ನನಗೇನೋ ಗಂಭೀರವಾದ ಖಾಯಿಲೆಯೇ ಇರಬೇಕು. ಇಲ್ಲದಿದ್ದರೆ ಇಷ್ಟು ದಿನಗಳಾದರೂ ಗುಣವಾಗುತ್ತಿರಲಿಲ್ಲವೆ! ನನಗೇನಾಗಿ ಬಿಡುತ್ತದೋ ಎನ್ನುವ ಚಿಂತೆ ನನಗಿಲ್ಲ. ನನ್ನ ಮಗಳದೇ ನನಗೆ ಚಿಂತೆ." ಶಂಕರನೊಡನೆ ಹೇಳಿಕೊಂಡರು.

ಅವರಿಗೊಬ್ಬಳು ಮಗಳು ಇದಾಳೆ ಎನ್ನುವುದು ಇವತ್ತೇ ಅವನಿಗೆ ತಿಳಿದದ್ದು. ಅವರ ಮನೆಗೆ ಹೋದಾಗ್ಲೂ ಅವಳನ್ನು ಕಂಡಿರಲಿಲ್ಲ. ಈಗ ಅವರ ಮಾತಿಗೆ ಏನು ಹೇಳಬೇಕೆಂದು ತಿಳಿಯದೇ ಸುಮ್ಮನೆ ನೋಡಿದ.

"ನನಗೇನಾದರೂ ಆಗಿ ಹೋದರೆ, ಅವಳಿಗೆ ತಿಳಿಸಕೂಡದು. ನಾನಿಲ್ಲದೇ ಅವಳು ಬದುಕಲಾರಳು."

ಈ ಮಾತು ಅರ್ಥಹೀನವಾಗಿ ಕಂಡಿತು. 'ಇವರಿಗೆ ಏನು ಆಗುತ್ತದೋ ಎಂದು ಎಲ್ಲರೂ ಅನುಮಾನದಿಂದಿರುವಾಗ, ಸ್ವಂತ ಮಗಳಿಗೆ ಈ ವಿಷಯ ತಿಳಿಯದಿದ್ದರೆ!" ಅವನು ಅಚ್ಚರಿಗೊಂಡ.

"ನನ್ನ ಮಾತು ನಿನಗೆ ವಿಚಿತ್ರವಾಗಿ ಕಂಡಿರಬೇಕಲ್ಲವೆ! ಪ್ರಪಂಚದಲ್ಲಿ ನಡೆಯುವ ಎಲ್ಲಾ ವಿಚಿತ್ರ ನಮಗೆ ತಿಳಿಯುವುದಿಲ್ಲ. ನಮ್ಮ ನಮ್ಮ ಮನೆಯಲ್ಲಿ ನಡೆಯುವ ಘಟನೆಯಿಂದ ಎಲ್ಲಾ ತಲೆಕೆಳಗಾಗುತ್ತದೆ. ನಾವೂ ವಿಚಿತ್ರವ್ಯಕ್ತಿಗಳಾಗಿ ಬಿಡುತ್ತೇವೆ." ಆತ ವಿಚಿತ್ರವಾಗಿ ನಕ್ಕಾಗ ಅವನು ತಬ್ಬಿಬ್ಬಾದ.

"ಈ ಕಂಪೆನಿಗೆ ನೀನು ಹೊಸಬನಾದರೂ, ನಿನ್ನ ಕಾರ್ಯದಕ್ಷತೆ ನನ್ನನ್ನು ಮೆಚ್ಚಿಸಿದೆ. ಅದರಿಂದಲೇ ನನಗೆ ನಿನ್ನನ್ನ ಕಂಡರೆ ತುಂಬಾ ಇಷ್ಟ. ನಿನ್ನನ್ನ ನನ್ನ ಮಗನಂತೆಯೇ ಎಂದು ಭಾವಿಸಿದ್ದೇನೆ. ಎಷ್ಟೋ ಸಲ ನಿನ್ನಂತಹ ಒಬ್ಬ ಮಗ ನನಗೆ ಇರಬಾರದಾಗಿತ್ತೆ ಎಂದು ಯೋಚಿಸಿದ್ದೂ ಉಂಟು. ಅದರಿಂಧಲೇ ನಿನ್ನೊಡನೆ ಸಲುಗೆ ಜಾಸ್ತಿ."

ಯಾವ ಮಾತಿಗೆ ಈ ಪೀಠಿಕೆ ಎಂದು ಇವನಿಗೆ ಅರ್ಥವಾಗಲಿಲ್ಲ. ಆತ ಮಾತನಾಡುತ್ತಲೇ ಇದ್ದರು.

"ನನಗೆ ಒಬ್ಬಳೇ ಮಗಳು ವಸಂತಿ. ತಕ್ಕ ಮಟ್ಟಿಗೆ ಅನುಕೂಲವಾಗಿದ್ದವರು ನಾವು. ನಮಗೆ ಕಾರು ಬಂಗಲೆ ಎಲ್ಲಾ ಇತ್ತು. ಒಂದು ಸಲ ಉಂಟಾದ ಕಾರು

ಅಪಘಾತದಲ್ಲಿ ನನ್ನ ಹೆಂಡತಿ ತೀರಿ ಹೋದಳು. ಹೈಸ್ಕೂಲಿನಲ್ಲಿ ಓದುತ್ತಿದ್ದ ವಸಂತಿ ತಬ್ಬಲಿಯಾದಳು. ಅವಳಿಗಾಗಿ ಒಬ್ಬ ಆಯಾನ್ನ ಗೊತ್ತು ಮಾಡಿದೆ. ಇನ್ನು ಪೂರ್ಣ ತಿಳುವಳಿಕೆ ಇಲ್ಲದ ಹುಡುಗಿ, ಮನೆಯಲ್ಲಿ ಒಬ್ಬ ಹಿರಿಯ ಹೆಂಗಸರು ಇರಬೇಕು ಅಂತ ನನ್ನ ಅನಿಸಿಕೆ. ಆದರೆ ವಸಂತಿಗೆ ಏಕೋ ಏನೋ ಅವಳನ್ನ ಕಂಡರೆ ಆಗುತ್ತಿರಲಿಲ್ಲ. ದಿನಾ ಏನಾದರೂ ಒಂದು ಜಗಳ ತೆಗೆದು ರಂಪ ಮಾಡುತ್ತಿದ್ದಳು. ಆಕೆ ಸಹಿಸಲಾರದೇ ಬಿಟ್ಟು ಹೋದಳು.

ನಾನು ಚಿಂತಿಸಿ, ಚಿಂತಿಸಿ, ಕಡೆಗೆ, ವಸಂತಿಯನ್ನ ಬೇರೆ ಊರಿನ ಒಂದು ಸ್ಕೂಲಿಗೆ ಸೇರಿಸಿ, ಹುಡುಗಿಯರ ಹಾಸ್ಟೆಲಿಗೆ ಸೇರಿಸಿದೆ. ನನ್ನ ಮೇಲಿನ ಕೋಪದಿಂದ ಅವಳು ನನ್ನನ್ನು ನೋಡಲು ಇಷ್ಟ ಪಡುತ್ತಿರಲಿಲ್ಲ. ಅದು ನನಗೆ ಅತೀವ ವೇದನೆ ಯನ್ನುಂಟು ಮಾಡಿದ ವಿಷಯ.

ಹಾಸ್ಟೆಲಿನಲ್ಲಿ ಒಳ್ಳೆಯ ಹುಡುಗಿಯರ ಸಹವಾಸ ಅವಳಿಗೆ ಬೇಕಿರಲಿಲ್ಲವೇನೋ.... ಸ್ಕೂಲಿನ ಇತರ ಹುಡುಗಿಯರ ಸಹವಾಸಗಳಿಂದ ಕೆಟ್ಟ ಚಟಗಳಿಗೆ ಮಾರು ಹೋಗಿದ್ದಳು. ಈ ವಿಷಯ ನನಗೆ ತಿಳಿದದ್ದು ಬಹು ತಡವಾಗಿ.

ಹೈಸ್ಕೂಲಿನ ಪ್ರಿನ್ಸಿಪಾಲರಿಂದ ಹೇಗೋ, ಹಾಸ್ಟೆಲ್‌ನ ವಾರ್ಡನ್‌ನಿಂದ, ಅವಳು ಮಾದಕ ವಸ್ತುಗಳ ಸೇವನೆ ಮಾಡುತ್ತಿದ್ದಾಳೆಂದು ತಿಳಿದಾಗ ನನಗೆ ಹೃದಯಾಘಾತವಾಗ ಲಿಲ್ಲ ಅಷ್ಟೇ! ಅವರುಗಳ ಸಲಹೆಯಂತೆ ಅವಳನ್ನ ಮನೆಗೆ ಕರೆತಂದು, ಗುಟ್ಟಾಗಿ ಒಬ್ಬ ಡಾಕ್ಟರರಿಂದ ಅವಳು ಗುಣಮುಖಳಾಗುವಂತೆ ವ್ಯವಸ್ಥೆ ಮಾಡಿದೆ.

ಆದರೆ ವಸಂತಿ, ನನಗೆ ಡಾಕ್ಟರರಿಗೆ ತಿಳಿಯದಂತೆ, ಕೆಲಸದ ಆಳುಗಳ ಮೂಲಕ ಡ್ರಗ್ಸ್ ತರಿಸಿಕೊಳ್ಳುತ್ತಿದ್ದಳೇನೋ.... ಅವಳು ಹಣ ಕೇಳಿದಾಗ ನಾನು ಕೊಡಲು ನಿರಾಕರಿಸಿದೆ. ಕ್ರಮೇಣ ಮನೆಯ ಅಮೂಲ್ಯವಾದ ವಸ್ತುಗಳೆಲ್ಲ ಕಾಣೆಯಾಗ ತೊಡಗಿದವು. ಡ್ರಗ್ಸ್‌ನ ಜತೆಗೆ ಕೆಲಸಗಾರರಿಗೆ ಲಂಚ ಬೇರೆ... ಇದ್ದಕ್ಕಿದ್ದಂತೆ ಮನೆಯ ವಸ್ತುಗಳು ಏನಾದವು ಎಂದು ನನಗೆ ಅನುಮಾನ ಬಂದಿದ್ದರಿಂದ ಕೆಲಸಗಾರರನ್ನ ಕರೆಸಿ, ಪೋಲಿಸರಿಗೆ ಹಿಡಿದು ಕೊಡುವುದಾಗಿ ಬೆದರಿಕೆ ಹಾಕಿದಾಗ ಬಾಯಿಬಿಟ್ಟರು. ಕೋಪ ತಡೆಯಲಾರದೇ ನಾನು ಆ ದಿನ ನನ್ನ ಮಗಳನ್ನ ಬೆತ್ತದ ಕೋಲಿನಿಂದ ಚೆನ್ನಾಗಿ ಥಳಿಸಿದೆ. ಆ ರಾತ್ರಿ ಅವಳು ಎಲ್ಲರ ಕಣ್ಣು ತಪ್ಪಿಸಿ ಮನೆ ಬಿಟ್ಟು ಹೋದಳು. ಪೋಲೀಸರಿಗೆ ಕಂಪ್ಲೆಂಟ್ ಕೊಟ್ಟು ಹುಡುಕಿಸಿದೆ.

ಒಂದು ವಾರದ ನಂತರ, ಯಾರೋ ಒಬ್ಬ ಪರದೇಶಿ ಹುಡುಗನ ಜತೆ ಮಾದಕಸೇವನೆ ಮಾಡಿ ಬಿದ್ದುಕೊಂಡಿದ್ದವಳನ್ನ ಪೋಲಿಸರು ಗುರುತಿಸಿ, ಹಿಡಿದರು. ಅವಳು ನನ್ನ ಮಗಳೆಂದು ಗುರುತಿಸುವಾಗ ಭೂಮಿ ಕುಸಿಯಬಾರದೇ ಎನ್ನುವಷ್ಟು ಅವಮಾನ ನನಗಾಗಿತ್ತು.

ಅಲ್ಲಿಂದ ಸೀದಾ ಅವಳನ್ನ ಮದ್ರಾಸಿನ ಒಂದು ನರ್ಸಿಂಗ್ ಹೋಂಗೆ ಸೇರಿಸಿದೆ. ಅಲ್ಲಿ ಅವಳು ಎಲ್ಲಾ ರೀತಿಯಿಂದಲೂ ಗುಣ ಮುಖಳಾಗುವಂತೆ ಚಿಕಿತ್ಸೆ ಕೊಡಿಸಿದೆ. ಆದರೆ ಅವಳು ಇವತ್ತಿಗೂ ಸರಿಯಾಗಿಲ್ಲವೆಂದೇ ನನ್ನ ಅನಿಸಿಕೆ. ನನ್ನ ಕಡೆ ನೋಡುವುದಿಲ್ಲ. ನಾನು ಮಾತನಾಡಿದರೂ ಮಾತನಾಡುವುದಿಲ್ಲ. ಲವಲವಿಕೆಯಿಂದ ನಳ ನಳಿಸುತ್ತಾ ಇರಬೇಕಾದ ಹುಡುಗಿ, ಗರಬಡಿದವಳಂತೆ ಬೆಪ್ಪಾಗಿರುತ್ತಾಳೆ. ಅವಳನ್ನ ನೋಡಿದರೆ ನನ್ನ ಹೊಟ್ಟೆಯಲ್ಲಿ ಬೆಂಕಿ ಸುರಿದಂತಾಗುತ್ತದೆ. ನಾನೇನು ಮಾಡಲಿ ಎಂದು ತಿಳಿಯುವುದಿಲ್ಲ.

ಆ ಕಂಪೆನಿಯ ಕೆಲಸಕ್ಕೆ ರಾಜಿನಾಮೆ ಕೊಟ್ಟು ಇಲ್ಲಿ ಬಂದು ನೆಲಸಿದೆ. ಅನುಭವದ ಬುನಾದಿಯಿಂದ ಈ ಕಂಪೆನಿ ಪ್ರಾರಂಭಿಸಿದೆ. ನೋಡಲು ನಾನೊಬ್ಬ ಸಣ್ಣ ಕಂಪೆನಿಯ ಅಧಿಕಾರಿ. ಆದರೆ ನಾನೊಬ್ಬ ಸಾಲಗಾರ.. ನನ್ನ ವೃದ್ಧಾಪ್ಯದಲ್ಲಿ ನನಗೆ ಆಸರೆ ಕೊಡುವಂತಹ ಮಕ್ಕಳಿಲ್ಲ. ನನ್ನವರು ನನಗೆ ಯಾರೂ ಇಲ್ಲ. ಕೆಲವು ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಿಕೊಟ್ಟು ಅವರಿಗೆ ನೆರವಾಗಿದ್ದೇನೆ ಎನ್ನುವುದಷ್ಟೇ ನನಗೆ ನೆಮ್ಮದಿ. ಆದರೆ ಈ ಸಮಯದಲ್ಲೇ ನನ್ನ ಆರೋಗ್ಯ ಕೆಡಬೇಕೆ! ಖರ್ಚಿನ ಮೇಲೆ ಖರ್ಚು.... ನನಗೆ ದಿಕ್ಕೇ ತೋಚಂತಾಗಿದೆ. ನನ್ನ ಸಂಕಟವನ್ನ ನಾನು ಯಾರೊಡನೆ ಹೇಳಿಕೊಳ್ಳಲಿ?"

ಶಂಕರ ಏನು ಉಪಾಯ ಹೇಳಿಯಾನು! ಅವನ ಮುಖ ಕಳೆ ಗುಂದಿತು.

"ನನ್ನ ನೆಂಟರಿಷ್ಟರಿಗೆ ನನ್ನ ಮನೆಯ ವಿಷಯ ತಿಳಿದರೆ ನಗೆಪಾಟಲು ಆಗುತ್ತದೆ. ನೆರವಿಗೆ ಬರುವ ಬದಲು ಆಡಿಕೊಂಡು ನಗುತ್ತಾರೆ. ನನಗೊಂದು ಸಹಾಯ ಮಾಡ್ತೀಯ?" ಇದ್ದಕ್ಕಿದ್ದಂತೆ ಅವರು ಕೇಳಿದಾಗ ಅವನು ಬೆಚ್ಚಿದ. ಏನು ಕೇಳಿ ಬಿಡುವರೋ ಎಂದು ದಿಗಿಲಾಗಿತ್ತು.

"ನನ್ನ ಮಗಳು ಹೇಗಿದ್ದಾಳೋ ಎನ್ನುವ ಆತಂಕ ಕಾಡಿದೆ. ಹೋಗಿ ನೋಡಿ ಕೊಂಡು ಬಂದು ನನಗೆ ಹೇಳ್ತೀಯಾ?"

ಅವನು 'ಹೂಂ' ಎನ್ನಲೇ ಬೇಕಾಯ್ತು. ಅಲ್ಲದೇ ಈ ಅಧಿಕಾರಿಯ ಮಗಳು ಡ್ರಗ್ ಆಡಿಕ್ಟ್ ಆಗಿದ್ದವಳು ಹೇಗಿದ್ದಾಳೋ ಎನ್ನುವ ಕುತೂಹಲ ಬೇರೆ. ಅದರಿಂದ ವಿಳಾಸ ಪಡೆದು, ಅವಳು ಚಿಕಿತ್ಸೆ ಪಡೆಯುತ್ತಿದ್ದ ಕೇಂದ್ರಕ್ಕೆ ಬಂದ. ಮೊದಲು ಅವನನ್ನ ಬಿಡಲು ತಕರಾರು ಮಾಡಿದರು, ಅವಳ ಬಗ್ಗೆ ಮಾಹಿತಿ ನೀಡಿದರು. ಅದೇನು ಹಿತವಾಗಿರಲಿಲ್ಲ. ದೂರದಿಂದ ಅವಳನ್ನ ನೋಡುವಂತೆ ಅನುಮತಿ ಕೊಟ್ಟರು.

ಏನೋ ಶೂನ್ಯವನ್ನ ಯೋಚಿಸುತ್ತ ಮಲಗಿದ್ದವಳಂತೆ ಕಂಡುಬಂದಳು. ಹತ್ತಿರ ನಿಂತಿದ್ದ ಸಹಾಯಕಿ ಅವಳನ್ನ ಮಾತನಾಡಿಸಿದಾಗ ಅವಳು ತಿರುಗಿದಳು. ಅವಳನ್ನ ನೋಡಿ ಇವನಿಗೆ ಮರುಕವೆನಿಸಿತು. ಏನೋ ಒಂದು ತರಹದ ಭಾವನೆ ಉಂಟಾಗಿ

ಅವಳ ಕಡೆಗೆ ಕೈಯಾಡಿಸಿದ. ಪ್ರತಿಯಾಗಿ ಅವಳು ಕೈಯಾಡಿಸಲಿಲ್ಲ. ಒಂದುಗಳಿಗೆ ಅಲ್ಲಿ ನಿಂತಿದ್ದವನು ಹೊರಡಲನುವಾದ. ಅವಳು ಅವನ ಕಡೆಗೆ ನೋಡುತ್ತಿದ್ದಳು. ಮತ್ತೆ ಅವನು ಹಿಂತಿರುಗಿ ನೋಡಿದಾಗಲೂ ಅವಳು ಅವನ ಕಡೆಗೇ ದೃಷ್ಟಿ ಬಿಡುತ್ತಿದ್ದಳು. ಮನಸ್ಸಿಗೆ ಮಬ್ಬು ಕವಿದಂತಾಗಿತ್ತು.

ತನ್ನ ಅಧಿಕಾರಿಗೆ ನಿರಾಸೆಯನ್ನುಂಟುಮಾಡಿ, ಆತಂಕವನ್ನ ಹೆಚ್ಚಿಸುವ ಆಸೆ ಇಲ್ಲದ್ದರಿಂದ ಶಂಕರ ಸುಳ್ಳು ಹೇಳಿದ. "ಚಿಕಿತ್ಸೆಯಿಂದ ಅನುಕೂಲವಾಗಿದೆ. ಸ್ವಲ್ಪ ಮಟ್ಟಿನ ಬದಲಾವಣೆ ಕಂಡಿದೆ. ಇನ್ನು ಕೆಲವೇ ತಿಂಗಳಿನಲ್ಲಿ ಸಾಕಷ್ಟು ಚೇತರಿಸಿಕೊಳ್ಳು ತ್ತಾರೆ, ಎಂದು ಡಾಕ್ಟರು ಹೇಳಿದಾರೆ." ಎಂದ.

ಆತ ಅವನ ಮಾತನ್ನ ನಂಬಿದಂತೆ ಕಾಣಲಿಲ್ಲ. ನಸುನಕ್ಕು ನುಡಿದರು.

"ನನಗೆ ಗೊತ್ತು, ನನ್ನ ಮನಸ್ಸಿಗೆ ನೋವಾಗಬಾರದು ಅಂತ ಸುಳ್ಳು ಹೇಳ್ತಿದೀಯ. ನಿಜ ಹೇಳು, ಹೇಗಿದಾಳೆ! ನಾನು ಸಾಯುವುದಕ್ಕಿಂತ ಮುಂಚೆ ಅವಳು ಸತ್ತರೆ ಒಳ್ಳೆಯದು. ಆಗ ನಾನು ನೆಮ್ಮದಿಯಿಂದ ಸಾಯಬಹುದು."

"ನನ್ನ ಮಾತನ್ನ ನಂಬಿ ಸಾರ್. ನಾನು ಅವರ ಕಡೆಗೆ ಕೈಯಾಡ್ಸಿ ಮುಗುಳ್ನಕ್ಕೆ. ಪ್ರತಿಯಾಗಿ ಅವರೂ ಕೈಯಾಡಿಸಿ ಮುಗುಳ್ನಕ್ಕರು."

"ಅವಳು ಮುಗುಳ್ನಕ್ಕಳೆ! ಇಂಪಾಸಿಬಲ್. ಅವಳ ಅಮ್ಮ ಸತ್ತಾಗಿನಿಂದ, ನಗು ಅವಳ ಮುಖದಲ್ಲಿ ಮೂಡಿಯೇ ಇಲ್ಲ." ಅಡ್ಡಡ್ಡ ತಲೆಯಾಡಿಸಿದರು.

"ನನ್ನ ಮಾತಿನ ಮೇಲೆ ನಂಬಿಕೆ ಇಲ್ಲದಿದ್ದರೆ, ಆಸ್ಪತ್ರೆಯ ಸಿಬ್ಬಂದಿಯವರನ್ನ ವಿಚಾರಿಸಿ." ಶಂಕರ ಸ್ವಲ್ಪ ಅಸಮಾಧಾನದಿಂದ ನುಡಿದ.

"ಪರವಾಗಿಲ್ಲ. ಹೋಗಲಿ ಬಿಡು. ನೀನು ನನ್ನ ಆಪ್ತ. ನಿನ್ನ ಮಾತಿನಲ್ಲಿ ವಿಶ್ವಾಸ ವಿಡುತ್ತೇನೆ. ಈ ಸುಳ್ಳಿನಿಂದಲಾದರೂ ಅವಳು ಬೇಗ ಗುಣಮುಖಳಾಗಲಿ."

ಆ ನಂತರ ಶಂಕರನ ದಿನಚರಿ ಬದಲಾಯಿತು. ಜವಾಬ್ದಾರಿ ಹೆಚ್ಚಿತು. ಬೇರೊಬ್ಬ ಸಹಾಯಕನನ್ನ ನೇಮಿಸಿಕೊಂಡು, ಅಧಿಕಾರವನ್ನ ವಹಿಸಿಕೊಂಡ. ಆದರೆ ಪ್ರತಿಯೊಂದಕ್ಕೂ ನಾಗಭೂಷಣರವರನ್ನು ಸಲಹೆ ಕೇಳಿ, ಅವರು ಹೇಳಿದಂತೆಯೇ ಮಾಡುತ್ತಿದ್ದ. ವಾರದಲ್ಲಿ ಒಂದು ದಿನ ವಸಂತಿಯನ್ನು ನೋಡಿ ಬರಲು ಹೋಗುತ್ತಿದ್ದ. ವರದಿಯನ್ನ ಅವರಿಗೆ ಒಪ್ಪಿಸುತ್ತಿದ್ದ. ಅವರು ಮುಗುಳ್ನಕ್ಕು ತಲೆ ಆಡಿಸುತ್ತಿದ್ದರು.

ಈಗ ಕಂಪೆನಿಯ ಇತರೆ ಕೆಲಸಗಾರರೂ ನಿಶ್ಚಿಂತರಾಗಿದ್ದರು. ಅವರುಗಳ ಉದ್ಯೋಗಕ್ಕೆ ಯಾವ ಬಾಧಕವೂ ಇರಲಿಲ್ಲ. ಈ ಮಧ್ಯೆ ಅವನು ತನ್ನ ತಂದೆ ತಾಯಿಗಳ ಬಗ್ಗೆ ಚಿಂತಿಸಲು ಸಮಯವೇ ಇರಲಿಲ್ಲ. ಆ ದಿನ ತನ್ನ ತಾಯಿಯಿಂದ ಬಂದ ಕಾಗದ ಓದಿ ಅವನಿಗೆ ಹೀನಾಯವೆನಿಸಿತು.

"ಬೇರೆ ಊರಿನಲ್ಲಿ ಕೆಲಸದಲ್ಲಿದೀಯ. ಒಂಟಿಯಾಗಿದೀಯ, ಹೆಣ್ಣಿನವರು

ಕೇಳಿಕೊಂಡು ಬರುತ್ತಿದ್ದಾರೆ. ನಾಲ್ಕು ದಿನ ರಜ ಹಾಕಿ ಬಾ. ಯಾವುದಾದರೂ ಹುಡುಗೀನ ಒಪ್ಪಿ ಆದಷ್ಟು ಬೇಗ ಮದುವೆಯಾಗಬೇಕು, ನೀನು..." ಅದೇ ಒಕ್ಕಣೆ ಎಂದುಕೊಂಡು ಕಾಗದವನ್ನ ಒಂದೆಡೆ ಎಸೆದ. ಅವನು ಮದುವೆಯ ಬಗ್ಗೆ ಆಸಕ್ತಿಯನ್ನು ಕಳೆದುಕೊಂಡಿದ್ದ.

ಅವನೇನು ಚಿಕ್ಕವನಲ್ಲ. ಅವನಿಗೂ ಮೂವತ್ತೆರಡು ವರ್ಷ. ಮದುವೆಯ ಬಗ್ಗೆ ಕುತೂಹಲ ಉಂಟಾದ ವಯಸ್ಸಿನಲ್ಲಿ ಅವನಿಗೆ ಮದುವೆಯಾಗುವ ಆಸೆ ಮೂಡಿತ್ತು. ಅದಕ್ಕೆ ಕಾರಣ ಅವನ ಸೋದರ ಮಾವನ ಮಗಳು ಜಲಜ. ರಜೆಯಲ್ಲಿ ಆಗೀಗ ಅವರ ಮನೆಗೆ ಹೋಗುತ್ತಿದ್ದ. ಅವಳ ಜತೆ ಹರಟುತ್ತಿದ್ದ. ಅವಳ ಹಿಂದೆ ಮುಂದೆ ತಿರುಗುವುದೆಂದರೆ ಅವನಿಗೆ ಆಸೆ. ಅವಳು ಹುಟ್ಟಿದಾಗ, ಅವನ ಅಜ್ಜಿ ಅವರ ಮಗನಿಗೆ ಹೇಳಿದ್ದರಂತೆ,... ಶಂಕರನೇ ಅವಳ ಗಂಡನಾಗಬೇಕು ಅಂತ. ಮನೆಯ ಹಿರಿಯರು ಗೇಲಿಮಾಡಿ ನಗುತ್ತಿದ್ದರು, ಅವನು ಅವಳನ್ನ ತನ್ನ ಪುಟ್ಟ ಹೆಂಡತಿ ಎಂದೇ ಭಾವಿಸಿದ್ದ.

ಒಂದು ವಯಸ್ಸು ಬಂತು, ಇಬ್ಬರಲ್ಲೂ ಗಾಂಭೀರ್ಯ ಮೂಡಿದಾಗ ಇವನು ಅವರ ಮನೆಗೆ ಹೋಗುವುದನ್ನ ಕಡಿಮೆ ಮಾಡಿದ್ದ. ಆದರೂ, ಅವಳೇ ತನ್ನ ಹೆಂಡತಿ ಎಂಬ ಭಾವನೆ ಬೇರೂರಿತ್ತು. ಮದುವೆ ಎಂದರೆ ಏನು ಎಂದು ಅರ್ಥ ಕಂಡುಕೊಳ್ಳಲಾರಂಭಿಸಿದ್ದ. ಹೊಂಗನಸುಗಳನ್ನ ಕಟ್ಟಿ ಕುತೂಹಲದಿಂದ ತನ್ನ ಮದುವೆಯಾಗುವ ದಿನಗಳು ಎಂದು ಬರುವುವು ಎಂದು ಆಗಾಗ ಚಿಂತಿಸುತ್ತಿದ್ದ.

ಆದರೆ ನಡೆದದ್ದೇ ಬೇರೆ. ಅವನ ಅಜ್ಜಿ ಸತ್ತಾಗ ಅವನ ತಾಯಿಗೂ, ಸೋದರ ಮಾವನಿಗೂ ಭಾರೀ ಜಗಳವಾಗಿ ಮನಸ್ತಾಪ ಮೂಡಿತು. ಅದೂ ಯಾವುದೋ ಒಡವೆ ವಸ್ತುವಿಗಾಗಿ ನಡೆದ ಜಗಳ. ಅದನ್ನೇ ನೆವ ಮಾಡಿಕೊಂಡು, ಸೋದರಮಾವ ಇವರ್ಯಾರಿಗೂ ತಿಳಿಸದೇ ಜಲಜಳ ಮದುವೆಯನ್ನು ಬೇರೆ ಕಡೆ ಗೊತ್ತು ಮಾಡಿದ. ಲಗ್ನ ಪತ್ರಿಕೆಯನ್ನು ಪೋಸ್ಟ್ ಮೂಲಕ ಕಳಿಸಿ, ಮದುವೆ ಗೊತ್ತು ಮಾಡಿದೇವೆ ಎಂದು ತಿಳಿಸಿದ.

"ಬಂದು ಕರೆಯುವಷ್ಟು ಸೌಜನ್ಯವೂ ಇಲ್ಲದಿದ್ದ ಮೇಲೆ ಇವನ ಮನೆ ಮದುವೆಗೆ ಯಾರು ಹೋಗ್ತಾರೆ?" ಎಂದು ತಂದೆ ತಾಯಿ ಕೂಗಾಡಿದ್ದರು. ಇವನಿಗೆ ಆದ ಆಘಾತವೇ ಬೇರೆ. ತನ್ನನ್ನೇ ಗಂಡ ಎಂದು ಭಾವಿಸಿದ್ದ, ಜಲಜ ಈಗ ಬೇರೊಬ್ಬನ ಹೆಂಡತಿಯಾಗಲು ಹೇಗೆ ಸಾಧ್ಯ! ಅವಳನ್ನೇ ಕೇಳಿ ಬಿಡೋಣವೆಂದುಕೊಂಡು ಅವಳು ಓದುತ್ತಿದ್ದ ಕಾಲೇಜಿಗೆ ಹೋಗಿ ಅವಳನ್ನ ಭೇಟಿಯಾಗಿದ್ದ.

ಅವಳು ಯಾವುದನ್ನ ತಲೆಗೆ ಹಚ್ಚಿಕೊಂಡಂತೆ ಕಾಣಲಿಲ್ಲ. "ನನ್ನ ಅಪ್ಪ ಅಮ್ಮನ ವಿರುದ್ಧ ನಿಂತು ನಾನು ಮದುವೆಯಾಗೋಕ್ಕೆ ಆಗುತ್ತಾ! ನಾನೇನು ನಿನಗೆ

ಮಾತು ಕೊಟ್ಟಿರಲಿಲ್ಲವಲ್ಲ ಎಂದು ಮಾತು ಮುಗಿಸಿದ್ದಳು. ಬಂದ ಕೋಪವನ್ನ ತಡೆದುಕೊಂಡು ಹಿಂತಿರುಗಿದ್ದ.

ಅಶಾಂತಿಯಿಂದ ಕಲಕಿ ಹೋಗಿದ್ದ ಮನಸ್ಸನ್ನು ಸಾಂತ್ವನಗೊಳಿಸಿದವಳು ಅವನ ಕ್ಲಾಸ್‌ಮೇಟ್ ಮುಕ್ತ. ಅವರ ಮನೆಯ ರಸ್ತೆಯಲ್ಲೇ ಅವಳ ಮನೆ ಇದ್ದುದು. ಚಿಕ್ಕ ವಯಸ್ಸಿನಲ್ಲಿ ಎದುರಿಗಿದ್ದ ಮೈದಾನದಲ್ಲಿ ಒಟ್ಟಿಗೇ ಆಡುತ್ತಿದ್ದರು. ತಂಗಿಯ ಜತೆ ಹರಟೆ ಹೊಡೆಯಲು ಆಗಾಗ್ಗೆ ಬರುತ್ತಿದ್ದಳು. ತನ್ನ ಜೊತೆ ಓದುತ್ತಿದ್ದವಳಾದರೂ ತನ್ನ ಅಣ್ಣನ ಜತೆಯೂ ಸಲುಗೆಯಿಂದ ಮಾತನಾಡುತ್ತಿದ್ದಳು. ತಮ್ಮ ಮನೆಯ ವಿಚಾರವೆಲ್ಲಾ ತನ್ನ ತಂಗಿಯಿಂದ ಅವಳಿಗೆ ತಿಳಿದಿರುತ್ತಿತ್ತು. ಕ್ರಮೇಣ ತಾನು ತನ್ನ ಮನಸ್ಸಿನ ಗಾಯಗಳನ್ನ ವಾಸಿಮಾಡಿಕೊಂಡೆ. ಇದಕ್ಕೆ ಮುಕ್ತಳ ಒಲವೇ ಕಾರಣ. ತನಗೂ ತಿಳಿಯದಂತೆ ತಾನು ಅವಳನ್ನ ಪ್ರೀತಿಸಲಾರಂಭಿಸಿದ್ದೆ. ಆದರೆ ಅದನ್ನ ಅವಳಿಗಾಗಲೀ ಯ್ಯಾರಿಗಾಗಲೀ ಹೇಳುವ ಧೈರ್ಯವಿರಲಿಲ್ಲ.

ಕಾಲೇಜಿನ ವ್ಯಾಸಂಗ ಮುಗಿಸಿ, ನನ್ನ ಅಣ್ಣ ಕೆಲಸಕ್ಕೆ ಸೇರಿದ್ದ. ವಯಸ್ಸಿನಲ್ಲಿ ಚಿಕ್ಕವನಾದರೂ, ಕೆಲಸಕ್ಕೆ ಸೇರಿದವನಾದ್ದರಿಂದ, ಅವನಿಗೆ ಹೆಣ್ಣು ಕೊಡಲು ಕನ್ಯಾಪಿತೃಗಳು ಬರುತ್ತಿದಾರೆಂದು ತಂದೆ ತಾಯಿ ಮಾತನಾಡಿಕೊಳ್ಳುತ್ತಿದ್ದರು.

ಆಗ ಒಂದು ದಿನ ನನ್ನ ಅಣ್ಣ ತನ್ನ ಮನಸ್ಸಿನ ಆಸೆಯನ್ನ ಬಿಚ್ಚಿ ಹೇಳಿದ್ದ. ತಾನು ಮುಕ್ತಳನ್ನು ಪ್ರೀತಿಸುತ್ತಿದ್ದೇನೆಂದು, ಅವಳನ್ನೇ ಮದುವೆಯಾಗುವ ನಿರ್ಧಾರ ಮಾಡಿದ್ದೇನೆಂದು ತಿಳಿಸಿದ. ಮತ್ತೊಮ್ಮೆ ಮನೆಯಲ್ಲಿ ದೊಡ್ಡ ರಾದ್ಧಾಂತ.

ನನಗೆ ಆದ ಆಘಾತವೇ ಬೇರೆ. ನಾನು ಮನಸಾರೆ ಪ್ರೀತಿಸುವ ಮುಕ್ತ ಅವನನ್ನ ಮದುವೆಯಾಗಲು ಹೇಗೆ ಸಾಧ್ಯ! ಅವಳನ್ನ ಪ್ರೀತಿಸಲು ಇವನ್ಯಾರು?" ಎಂಬ ಕ್ರೋಧದೊಡನೆ ಸೀದಾ ಅವಳ ಮನೆಗೆ ಹೋದೆ.

ಮನೆಯ ಹೊರಗೆ ನಿಂತು, ಮಾತನಾಡಿದೆ. ಅವಳ ಕೈ ಹಿಡಿದು ಕೇಳಿದೆ.

"ನಾನು ನಿನ್ನನ್ನ ಮನಸಾರೆ ಪ್ರೀತಿಸ್ತೀನಿ ಮುಕ್ತ. ನನ್ನಂತೆ ನನ್ನ ಅಣ್ಣನೂ ನಿನ್ನನ್ನ ಪ್ರೀತಿಸ್ತಿದಾನೆ ಅಂತ ತಿಳೀತು. ಆದರೆ ನೀನು ಅವನನ್ನ ಮದುವೆಯಾಗ ಕೂಡದು." ಅವಳು ಸರ್ರನೆ ಕೈಯನ್ನ ಹಿಂದಕ್ಕೆ ಎಳೆದುಕೊಂಡಳು.

"ಏನು ಹೇಳ್ತಿದ್ದೀಯ ಶಂಕರ? ನಾನು ಎಂದಿಗೂ ನಿನ್ನನ್ನು ಪ್ರೀತಿಸಲೇ ಇಲ್ಲ. ನಾನು ಪ್ರೀತಿಸಿದ್ದು ನಿನ್ನ ಅಣ್ಣನನ್ನೇ. ನಾವಿಬ್ಬರೂ ಮದುವೆಯಾಗುವುದೆಂದು ತೀರ್ಮಾನಿಸಿ ಕೊಂಡಿದ್ದೇವೆ."

ರೋಷದಿಂದ ಹಲ್ಲುಗಳನ್ನ ಕಡಿದೆ. ಅಲ್ಲಿಯೇ ನಿಂತಿದ್ದರೆ ತನ್ನಿಂದ ಏನು ಅಪಚಾರ ನಡೆಯುತ್ತದೆಯೋ ಎಂದು ಹೆದರಿ ಬಿರಬಿರನೆ ಮನೆಗೆ ಬಂದೆ. ಮನೆಯ ಕೋಲಾಹಲವಿನ್ನೂ ಮುಗಿದಿರಲಿಲ್ಲ. ಅಮ್ಮ ಅಳುತ್ತಿದ್ದಳು. ಅಪ್ಪ ರೇಗಾಡುತ್ತಿದ್ದರು.

ಅಣ್ಣ ಕಲ್ಲಿನಂತೆ ನಿಂತಿದ್ದ. ಇದನ್ನೆಲ್ಲ ಮೀರಿದ ಕೋಲಾಹಲ ನನ್ನ ಅಂತರಂಗದಲ್ಲಿ ನಡೆಯುತ್ತಿದ್ದುದು ಅವರಿಗೆ ಹೇಗೆ ಅರ್ಥವಾಗಬೇಕು? ಯಾರಿಗೂ ಹೇಳಲಾಗದ ಹೇಳದೇ ಇರಲಾರದ ಸ್ಥಿತಿಯಲ್ಲಿ ಒದ್ದಾಡಿದೆ.

ನನ್ನ ಕಾಲೇಜಿನ ವಿದ್ಯಾಭ್ಯಾಸವನ್ನು ಅಷ್ಟಕ್ಕೇ ಬಿಟ್ಟು ಆ ಊರಿನಿಂದ ದೂರ ಎಲ್ಲಾದರೂ ಹೋಗಬೇಕೆಂದು ತೀರ್ಮಾನಿಸಿದೆ. ಒಂದು ವಾರ ನಾನು ಕಾಲೇಜಿಗೆ ಹೋಗದಿದ್ದಾಗ, ಮುಕ್ತ ನನ್ನನ್ನು ಹುಡುಕಿಕೊಂಡು ಬಂದಳು. ತನ್ನಿಂದಾಗಿ ಮನೆಯಲ್ಲಿ ನಡೆದ ರಾದ್ಧಾಂತ ತಿಳಿದಿದ್ದರಿಂದ ಒಳಗೆ ಬರುವ ಧೈರ್ಯವಿಲ್ಲದೇ ತನ್ನ ತಂಗಿಯೊಡನೆ ಹೇಳಿ ಕಳಿಸಿದ್ದಳು.

ಮತ್ತೊಮ್ಮೆ ಆಸೆಯ ಕಿರಣಗಳನ್ನು ಹೊತ್ತು ನಾನು ಹೊರಗೆ ಬಂದಿದ್ದೆ. ಎದುರಿಗಿನ ಮೈದಾನದ ಹಾಸಿನ ಮೇಲೆ ಕೂತು ನಾವು ಮಾತನಾಡಿದೆವು.

"ಶಂಕರ, ನಿನ್ನನ್ನ ನಾನೆಂದೂ ಆ ಭಾವನೆಯಿಂದ ಮಾತನಾಡಿಸಲಿಲ್ಲ. ನಿನಗೇಕೆ ಮೋಸವಾಯಿತೋ ನನಗೆ ತಿಳಿಯದು. ಈಗ ನಿಮ್ಮ ತಂದೆ ತಾಯಿ ನಮ್ಮಿಬ್ಬರ ಮದುವೆಗೆ ವಿರೋಧವಾಗಿದ್ದಾರೆ. ಈ ಮದುವೆ ನಡೆಯುತ್ತೋ ಬಿಡುತ್ತೋ ಯಾರಿಗೆ ಗೊತ್ತು? ನನ್ನ ಮೇಲಿನ ಕೋಪದಿಂದ ಅನಾವಶ್ಯಕವಾಗಿ ನಿನ್ನ ವಿದ್ಯಾಭ್ಯಾಸವನ್ನೇಕೆ ಹಾಳು ಮಾಡಿಕೊಳ್ತೀಯ! ನೀನು ಕಾಲೇಜಿಗೆ ಬರುತ್ತಿಲ್ಲ ಎನ್ನುವುದು ನನಗೆ ಮಾತ್ರ ತಿಳಿದಿದೆ. ನಿಮ್ಮ ತಂದೆ ತಾಯಿಗೆ ತಿಳಿದರೆ ನೊಂದುಕೊಳ್ಳುವುದಿಲ್ಲವೆ! ಮೊದಲೇ ಅವರಿಗೆ ನನ್ನ ಮೇಲೆ ಅಸಮಾಧಾನ ಮೂಡಿರಬಹುದು. ನನ್ನ ಬಗ್ಗೆ ನಿನಗೆ ವಿಶ್ವಾಸವಿದ್ದರೆ, ನೀನು ನಾಳೆಯಿಂದ ಕಾಲೇಜಿಗೆ ಬರ್ತೀಯ, ಎಂದಷ್ಟೇ ಹೇಳಿ ಸಮೀಪದ ತನ್ನ ಮನೆಗೆ ಹೊರಟು ಹೋದಳು. ಎಷ್ಟೋ ಹೊತ್ತಿನ ತನಕ ಅಲ್ಲೇ ಕೂತಿದ್ದವನು ಮನೆಗೆ ಹಿಂತಿರುಗಿದ.

ಮಾರನೆ ದಿನ ನನ್ನನ್ನ ಕಾಲೇಜಿನಲ್ಲಿ ಕಂಡೊಡನೆ ಅವಳ ಮುಖ ಅರಳಿತು. ವಿಶ್ವಾಸದಿಂದ ಕೈಯಾಡಿಸಿದಳು. ನಾನು ಎಲ್ಲವನ್ನೂ ಮರೆಯಲು ಪ್ರಯತ್ನಿಸಿ, ಅವಳ ವಿಶ್ವಾಸವೊಂದಿದ್ದರೆ ಸಾಕು ಎಂದು ಯೋಚಿಸಿಕೊಂಡೆ.

ಆಮೇಲೆ ನನ್ನ ಅಣ್ಣನ ಮದುವೆ ಅವಳೊಂದಿಗೆ ನಡೆಯಿತು. ಹಠ ಮೊಂಡು ತನದಿಂದ ವಾದಿಸಿ, ಬೆದರಿಕೆ ಹಾಕಿ, ಅಣ್ಣ, ತಂದೆ ತಾಯಿಯರನ್ನ ಒಪ್ಪಿಸಿದ್ದ. ನಾನು ಪ್ರೀತಿಸಿದ ಮುಕ್ತ ನನಗೆ ಅತ್ತಿಗೆಯಾಗಿ ಬಂದಳು. ಒಂದೇ ಮನೆಯಲ್ಲಿ ಅವಳ ಎದುರಿಗೆ ಓಡಾಡಲು ನನಗೆ ಸಂಕೋಚವೆನಿಸಿ, ನಾನು ಬೇರೆ ಬೇರೆ ಊರಿನಲ್ಲಿ ಕೆಲಸಗಳಿಗೆ ಪ್ರಯತ್ನಿಸಿದೆ. ನನ್ನ ಓದಿಗೆ ಸಿಕ್ಕಿದ್ದು ಸಣ್ಣ ಪುಟ್ಟ ಕೆಲಸಗಳೇ. ನಿರುತ್ಸಾಹ ದಿಂದ ಕೆಲಸಗಳನ್ನ ಬಿಟ್ಟೆ. ಈ ಮಧ್ಯೆ ನನ್ನ ತಂಗಿಗೆ ಮದುವೆ ನಿಶ್ಚಯವಾಯಿತು. ನಾನು ಮದುವೆಗೆಂದು ಹೋಗಲೇಬೇಕಾಯ್ತು. ಅಲ್ಲಿಂದ ಎಷ್ಟು ಬೇಗ ವಾಪಸ್ಸಾ

ಗೋದು ಎಂದು ತವಕಿಸುತ್ತಿದ್ದೆ.

ನಾನು ಊರಿನಿಂದ ವಾಪಸ್ಸು ಬರುವ ಹೊತ್ತಿಗೆ ಒಂದು ಕಾಗದ ನನಗಾಗಿ ಕಾದಿತ್ತು. ಅದು ಜಲಜ ನನಗೆ ಬರೆದ ಕಾಗದ.

"ಏನೇನೋ ದುಃಖವನ್ನು ತೋಡಿಕೊಂಡಿದ್ದಳು. ಗಂಡನೊಂದಿಗೆ ತನ್ನ ಜೀವನ ಚೆನ್ನಾಗಿರಲಿಲ್ಲವಾದ್ದರಿಂದ ಅವನನ್ನ ಬಿಟ್ಟು ತಾನೀಗ ತವರು ಮನೆಗೆ ವಾಪಸ್ಸು ಬಂದಿರುವುದಾಗಿಯೂ, ಸಧ್ಯದಲ್ಲೇ ಡೈವೋರ್ಸ್ ಸಿಕ್ಕುತ್ತದೆ ಎಂದೂ, ತನಗೆ ಮರು ಮದುವೆಯಾಗುವ ಆಸೆ ಇದೆ." ಎಂದೂ ಬರೆದಿದ್ದಳು.

ಇದನ್ನೆಲ್ಲ ತನಗೇಕೆ ಬರೆದಿದ್ದಾಳೆಂದು ತಕ್ಷಣಕ್ಕೆ ಅರ್ಥವಾಗದಿದ್ದರೂ, ನಿಧಾನ ವಾಗಿ ಗೊತ್ತಾಯ್ತು. ಅಮ್ಮ ಸಹ ಅದನ್ನ ಕುರಿತೇ ಬರೆದಿದ್ದಳು. ನಿನ್ನ ಸೋದರಮಾವ ಬಂದಿದ್ದ. ಕ್ಷಮೆ ಕೇಳಿದ. ಶಂಕರಂಗೆ ಹೇಗೂ ಇನ್ನೂ ಮದುವೆ ಯಾಗಿಲ್ಲವಲ್ಲ ಎಂದು ಏನೋ ಹೇಳಲು ಬಂದ. ನಾನು ಚೆನ್ನಾಗಿ ಬೈದು ಕಳಿಸಿದೆ. ಅವಳಿಗೆ ಒಂದು ಹೆಣ್ಣು ಮಗು ಸಹ ಇದೆ. ನಮಗೇನು ಕರ್ಮ? ಎಲ್ಲಾದರೂ ಹೋಗಲಿ.. ನೀನು ಮನಸ್ಸನ್ನು ಸಡಿಲ ಬಿಡಬೇಡ.' ಎಂದು ಬರೆದಿದ್ದಳು.

ನಾವಾಗಿಯೇ ಹೋಗಿ ಕೇಳಿದಾಗ, ಅಪ್ಪನ ಮಾತಿನಂತೆ ನಡೆವವಳು ಎಂದು ತಿಳಿಸಿ, ಸ್ವಂತ ಬುದ್ಧಿ ಇಲ್ಲದವಳಂತೆ ನಟಿಸಿದ್ದಳು. ಈಗ ಅಪ್ಪ ಮಗಳೂ ಸೇರಿ ಬುದ್ಧಿವಂತಿಕೆಯಿಂದ ನನ್ನನ್ನ ಸಿಕ್ಕಿಸಲು ನೋಡುತ್ತಿದ್ದಾರೆನಿಸಿ ಅಸಹ್ಯವೆನಿಸಿತು.

ಸ್ವಲ್ಪ ದಿನಗಳ ನಂತರ ಒಂದು ಘೋರ ದುರಂತ ನಡೆದು ಹೋಯಿತು. ಹೆಂಡತಿಯೊಡನೆ ಟೂರ್ ಹೋಗಿದ್ದ ನನ್ನ ಅಣ್ಣ ಅಪಘಾತಕ್ಕೆ ಈಡಾಗಿ ತೀರಿ ಹೋಗಿದ್ದ. ಅಪ್ಪ ಅಮ್ಮನ ಗೋಳನ್ನು ಹೇಳಲು ಅಸಾಧ್ಯ. ಅತ್ತಿಗೆ ತಾನೇ ತಪ್ಪಿತಸ್ಥಳಂತೆ ನಿಂತಿದ್ದಳು. ಯಾರಿಗೆ ಸಮಾಧಾನ ಹೇಳಬೇಕೆಂದು ನನಗೆ ತಿಳಿಯಲಿಲ್ಲ. ಸ್ವಲ್ಪ ದಿನಗಳ ಮಟ್ಟಿಗೆ ರಜ ಹಾಕಿ ಅಲ್ಲೇ ಉಳಿದುಕೊಂಡೆ.

ಅಪ್ಪ, "ಅವಳು ಇನ್ನು ಇಲ್ಲಿ ಇದ್ದು ಏನು ಮಾಡಬೇಕಾಗಿದೆ! ಬೇಡ ಎಂದರೂ ಬಲವಂತವಾಗಿ ಅವಳನ್ನ ನಮ್ಮ ಮಗ ಮದುವೆಯಾಗಿದ್ದೆ ಇಧಿಷ್ಟಕ್ಕೆ ನಮ್ಮ ಹಗೆತನ ಕಟ್ಟಿಕೊಂಡ. ಅವನೇ ಇಲ್ಲದಿದ್ದ ಮೇಲೆ ಇನ್ನೂ ಇವಳನ್ನ ಕಟ್ಟಿಕೊಂಡು ಏನಾಗ ಬೇಕಾಗಿದೆ?"

ನನಗೆ ಅದು ಸರಿಯೆನಿಸಲಿಲ್ಲ. ಅಮ್ಮನಿಗೆ ಸಮಜಾಯಿಸಿ ಹೇಳಲು ನೋಡಿದೆ. "ಎಷ್ಟಾಗಲೀ ಅವಳು ಈ ಮನೆ ಸೊಸೆ. ಈ ಮನೆಯಿಂದ ಹೊರಗೆ ಹೋದರೆ ಜನ ಆಡಿಕೊಳ್ಳುವುದಿಲ್ಲವೆ!" ಅಂತ.

"ನಮ್ಮ ಹೊಟ್ಟೆ ಉರಿದು ಹೋಗ್ತಿದೆ. ಎಲ್ಲಾ ನಮಗೆ ತಿಳುವಳಿಕೆ ಹೇಳೋರೇ...." ಅಮ್ಮ ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸಿದಾಗ ಸುಮ್ಮನಾಗಿದ್ದೆ.

ನಾನೊಬ್ಬನೇ ಇದ್ದ ಸಮಯ ನೋಡಿ, ಮುಕ್ತ ನನ್ನ ಬಳಿಗೆ ಬಂದು ಅಳುತ್ತಾ ನುಡಿದಿದ್ದಳು. "ನನಗೋಸ್ಕರ, ನೀನು ನಿನ್ನ ತಂದೆ ತಾಯಿಗಳ ಜತೆ ಮನಸ್ತಾಪ ಮಾಡ್ಕೋಬೇಡ. ನನ್ನ ಚಿಂತೆ ನನಗಿಲ್ಲ. ನಾನು ಒಬ್ಬಳೇ ಆಗಿದ್ದರೆ, ಎಲ್ಲಾದರೂ ಹೊರಟು ಹೋಗ್ತಿದ್ದೆ. ಆದರೆ ಈಗ... ನಾನು ಒಂಟಿಯಲ್ಲ. ಈ ಮನೆಯ ಕಂದ ನನ್ನಲ್ಲಿ ಬೆಳೆಯುತ್ತಿದೆ. ದಿಕ್ಕುಗೆಟ್ಟವಳಂತೆ ಎಲ್ಲಾದರೂ ಹೊರಟುಹೋದರೆ ಮಗು ಅನಾಥವಾಗಿ ಬಿಡುತ್ತೆ. ಈ ಮನೆಯಲ್ಲಿ ಬರಲಿರುವ ಆ ಕಂದನಿಗೆ, ಸಿಗುವ ಸ್ಥಾನ ಮಾನ ಇನ್ನೆಲ್ಲೂ ಸಿಗುವುದಿಲ್ಲ". ಇಂದು ಬೇಸರದಿಂದ ಏನೋ ಆಡಿ ಅಂದು ಮಾಡುವ ನಿಮ್ಮ ತಂದೆ ತಾಯಿ, ನಾಳೆ ಮಗುವಿನ ಮುಖನೋಡಿ ಎಲ್ಲಾ ಮರೆತು ಆನಂದಿಸಬಹುದು. ಅಲ್ಲಿಯವರೆಗೂ ಏನೇ ಆದರೂ ಸಹಿಸಿಕೊಂಡು ನಾನು ಇಲ್ಲೇ ಇರುತ್ತೀನಿ. ನನಗೆ ಆ ಶಕ್ತಿ ಇದೆ."

ಅವಳ ನಿರ್ಧಾರ ಸರಿ ಎನಿಸಿದರೂ, ಹೆಣ್ಣಾದ ಅಮ್ಮನಿಗೆ, ಅತ್ತಿಗೆ ತಾಯಿಯಾಗ ಲಿದ್ದಾಳೆ ಎಂದು ತಿಳಿದೂ ಈ ತರಹ ಏಕೆ ಮಾತನಾಡಿದಳೋ ನನಗೆ ಅರ್ಥ ವಾಗಲಿಲ್ಲ ಎಂದುಕೊಂಡ.

"ಮುಕ್ತ ನಿನಗೆ ಇಲ್ಲಿರುಕ್ಕೆ ನಿನಗೆ ತೊಂದರೆ ಎನಿಸಿದರೆ, ನನ್ನ ಮನೆಯಲ್ಲಿ ಬಂದಿರು. ನಿನಗೆ ತೊಂದರೆಯಾಗದಂತೆ ನೋಡಿಕೊಳ್ತೇವೆ. ಇಲ್ಲದಿದ್ದರೆ ಅಣ್ಣನ ಆತ್ಮ ನೊಂದುಕೊಳ್ಳುತ್ತೆ." ಸಮಾಧಾನಕ್ಕಾಗಿ ಹೇಳಿದ್ದ.

"ಪರವಾಗಿಲ್ಲ ಇಲ್ಲೇ ಇರ್ತೀನಿ. ಒಬ್ಬಂಟಿಗನಾದ ನಿನ್ನ ಮನೆಯಲ್ಲಿ ನಾನು ಇರುವುದು ಸರಿಯಲ್ಲ." ಎಂದಿದ್ದಳು. ನನಗೂ ಆ ಮಾತು ಹಿಡಿಸಿತು.

ರಜ ಮುಗಿಸಿ ಹೋಗುವಾಗ ಅಮ್ಮನಿಗೆ ಹೇಳಿದ್ದ.

"ಅಮ್ಮ.... ಅತ್ತಿಗೆಗೆ ಮಾತ್ರ ಏನೂ ಅನ್ನ ಬೇಡ. ಅವಳದಾಗಲೀ, ಹುಟ್ಟಲಿರುವ ಮಗುವಿನದಾಗಲೀ ಏನೂ ತಪ್ಪಿಲ್ಲ. ಅಣ್ಣನಂತೂ ಇಲ್ಲ. ಅವನ ಮಗುವಿಗೆ, ಈ ಮನೆಯಲ್ಲಿ ಅವನಿಗಿದ್ದಷ್ಟೇ ಹಕ್ಕಿದೆ."

"ಹೋಗೋ, ನನಗೆಲ್ಲ ಗೊತ್ತು. ಹಕ್ಕು ಚಲಾಯಿಸುವಂತೆ ನೀನೇ ಅವಳಿಗೆ ಹೇಳಿಕೊಡ್ತೀಯ." ಅಮ್ಮ ಹಂಗಿಸಿ ನುಡಿದಿದ್ದಳು. ಕಣ್ಣೀರು ಸುರಿಸುತ್ತಾ ನಿಂತಿದ್ದವಳಿಗೆ ಕಣ್ಣಿನಲ್ಲೇ ಸಮಾಧಾನ ಹೇಳಿ ಹೊರಟಿದ್ದೆ.

ಆನಂತರ ಮುಕ್ತಳಿಗೆ, ಆಗಾಗ್ಗೆ ಕಾಗದ ಬರೆದು, ಅವಳ ಆರೋಗ್ಯದ ಬಗ್ಗೆ ವಿಚಾರಿಸಿ ಎಚ್ಚರಿಕೆಯಿಂದ ಇರಬೇಕೆಂದು ತಿಳಿಸುತ್ತಿದ್ದೆ.

ಆ ದಿನ ಬಂತು, ಅತ್ತಿಗೆಗೆ ಗಂಡು ಮಗುವಾಯಿತು. ಮೊಮ್ಮಗ ಬಂದು, ಅಪ್ಪ ಅಮ್ಮನ ದುಃಖವನ್ನು ಹೆಚ್ಚಿಸಿದ್ದನೋ, ಕಡಿಮೆ ಮಾಡಿದ್ದನೋ ತಿಳಿಯದು. ಇಬ್ಬರೂ ಅತ್ತಿದ್ದೇ ಅತ್ತಿದ್ದು.

"ಇನ್ನು ಕೆಲವೇ ದಿನ ಶಂಕರ, ನಾನು ಕೆಲಸಕ್ಕೆ ಸೇರ್‍ತೀನಿ. ನನ್ನ ಬಾಳನ್ನು ನಾನೇ ರೂಪಿಸಿಕೊಳ್ತೀನಿ. ನಿಮ್ಮ ತಾಯಿ ತಂದೆಗೆ ಬೇಡವಾಗಿ ನಾನು ಈ ಮನೆಯಲ್ಲಿರಲಾರೆ." ದುಃಖದಿಂದ ಮುಕ್ತ ನುಡಿದಾಗ ನಾನು ಸಾಂತ್ವನ ಹೇಳಿದ್ದೆ.

"ಹಾಗೆಲ್ಲ ಯೋಚಿಸಬೇಡ. ಈ ಮನೆ ನಿನ್ನದೂ ಸಹ. ಕ್ರಮೇಣ ಅಪ್ಪ ಅಮ್ಮನ ದುಃಖ ಕಮ್ಮಿ ಆಗಬಹುದು. ಮೊಮ್ಮಗ ಬಂದಿದಾನೆ. ಇನ್ನೇನಾಗಬೇಕು?"

"ಅವರ ದುಃಖ ಎಲ್ಲಾ ಕಡಿಮೆ ಆಗಬಹುದು.... ನಿಜ. ಆದರೆ ನಾನು ಹೇಗೆ ಒಬ್ಬಳೇ ಇರಲಿ ಹೇಳು? ಮಗುವಿನ ಲಾಲನೆಪಾಲನೆಯಲ್ಲಿ ದಿನಗಳು ಕಳೆ ಬಹುದು. ಆದರೆ ನನ್ನ ಒಂಟಿತನ ಹೇಗೆ ಸೀಗುತ್ತೆ! ನಾನು ಹೀಗೆ ಹೇಳ್ತಿನಿ ಅಂತ ತಪ್ಪು ತಿಳಿಯಬೇಡ. ಒಂದು ವೇಳೆ ನಾನೇ ಸತ್ತುಹೋಗಿದ್ದರೆ, ನಿನ್ನಣ್ಣನಿಗೆ ಮರು ಮದುವೆ ಮಾಡುತ್ತಿರಲಿಲ್ಲವೆ!"

ಒಂದು ಗಳಿಗೆಯಲ್ಲಿ, ಅವಳ ಆಸೆ ಏನೆಂದು ತಿಳಿಯಿತು.

"ನಿನ್ನ ಆಸೆ ಏನೆಂದು ಅರ್ಥವಾಯಿತು ಮುಕ್ತ ಮರುಮದುವೆಯಾಗುವುದ ತಪ್ಪೇನಲ್ಲ. ಆದರೆ ನಿನ್ನ ಈ ಮಗುವನ್ನ ಒಪ್ಪಿಕೊಂಡು, ನಿನ್ನನ್ನ ಮದುವೆಯಾಗುವವರು ಸಿಕ್ಕಿದರೆ, ನನಗೆ ತಿಳಿಸು, ನಾನು ನಿಂತು ನಿನ್ನ ಮದುವೆ ನೆರವೇರಿಸ್ತೀನಿ." ಅವಳ ಮಾತಿನಿಂದ ಆಘಾತವಾಗದಿದ್ದರೂ, ಬೇಸರವಾಗಿತ್ತು.

"ಖಂಡಿತಾ ತಿಳಿಸ್ತೀನಿ. ನಾನಂತೂ ಹೀಗೇ ಬಾಳನ್ನ ಕಳೆಯುವುದಂತೂ ಸಾಧ್ಯವಿಲ್ಲ."

ಈ ಮಾತನ್ನ ಅಮ್ಮನಿಗೆ ತಿಳಿಸುವುದಂತೂ ಸಾಧ್ಯವಿರಲಿಲ್ಲ. ಮೊದಲೇ ನೊಂದಿರುವ ಅವಳಿಗೆ ಈ ಮಾತು ಕರ್ಣಕಠೋರವೇ.... ಆದರೂ ಮುಕ್ತಳನ್ನು ಒಪ್ಪಿದವನನ್ನು, ಬಲವಂತವಾಗಿ ಒಪ್ಪಿಸಿಯಾದರೂ ಮದುವೆ ಮಾಡಿಸಬೇಕೆಂದುಕೊಂಡೆ.

ಊರಿಗೆ ಬಂದು ಕೆಲಸಕ್ಕೆ ಹಾಜರಾದೆ. ನನ್ನ ಮನಸ್ಥಿತಿ ಏನೋ ಒಂದು ತರಹ ವೈರಾಗ್ಯದಿಂದ ತುಂಬಿದೆ ಎನಿಸಿತು. ಮುದ್ದು ಮಗುವಿನ ಮುಖ ನೆನೆ ಕೊಂಡಾಗ, ಬೆಳೆದು ದೊಡ್ಡವನಾದ ಮೇಲೆ ಅವನಿಗೂ ಪ್ರಪಂಚ ಎಷ್ಟು ವಿಚಿತ್ರ ಎಂದರೇನು ಎಂದು ತಿಳಿಯುತ್ತೆ ಅಂತ ಎನಿಸಿದಾಗ, ಮಗು ಮಗುವಾಗಿಯೇ ಇರಲಿ. ಬೆಳೆಯುವುದೇಕೆ ಎಂದೂ ಸಹ ಯೋಚಿಸುತ್ತಿದ್ದೆ.

ಮಗುವಿಗೆ ಮೂರು ತಿಂಗಳಾದ ನಂತರ ಮುಕ್ತ ಕೆಲಸಕ್ಕೆ ಹೋಗಿ ಬರಲು ಪ್ರಾರಂಭಿಸಿದಳು. ಅಪ್ಪ ಅಮ್ಮನಿಗೆ ಅದು ಇಷ್ಟವಿಲ್ಲದಿದ್ದರೂ ನಾನೇ ಒಪ್ಪಿ "ಅಣ್ಣನ ಕಂಪೆನಿಯಲ್ಲೇ ಕೆಲಸ... ಮನೆಯಲ್ಲೇ ಅವಳು ಹೇಗೆ ಕಾಲ ಕಳೆಯಬೇಕು... ಕೆಲಸಕ್ಕೆ ಹೋಗಿ ಬರಲಿ ತಪ್ಪೇನಿಲ್ಲ." ಎಂದು ಅವಳ ಪರವಹಿಸಿ ವಾದಿಸಿದ್ದೆ.

"ಚೆನ್ನಾಗಿದೆ ಕಣೋ ನಿನ್ನ ಮಾತು. ಎಲ್ಲಾದಕ್ಕೂ ಅವಳ ಪರವಹಿಸಿಕೊಂಡು

ಮಾತಾಡ್ತೀಯಲ್ಲ. ಹೊರಗೆ ಪರಗಂಡಸರ ಜತೆ ಕೆಲಸ ಮಾಡ್ತಾಳೆ. ಒಂದೇ ಸಮ ಎಲ್ಲಾ ಸರಿಯಾಗಿರುತ್ತೆ ಅಂತ ಹೇಗೆ ಹೇಳ್ತೀಯ...?"

"ಅಮ್ಮ ನೀನು ಯಾವ ಕಾಲದಲ್ಲಿದೀಯ... ಒಂದು ವೇಳೆ ಅಂತಹುದೇನಾದರೂ ನಡೆಯುವುದಿದ್ದರೆ ಮನೆಯಲ್ಲೂ ನಡೆಯಬಹುದಲ್ಲ. ಮುಕ್ತ ಅಂತಹವಳಲ್ಲ."

"ಅವಳು ನಿನಗೆ, ಏನೋ ಮೋಡಿ ಮಾಡಿದಾಳೆ. ನಿನ್ನಣ್ಣನ್ನ ವಶಪಡಿಸಿಕೊಂಡಳು. ಈಗ ನಿನ್ನ ಸರದಿ."

"ಅವಳು ನನ್ನ ಜತೆ ಓದುತ್ತಿದ್ದವಳು. ಅವಳ ಸ್ವಭಾವ, ನಡತೆ ನನಗೆ ಗೊತ್ತು. ನೀನು ಏನೇನೋ ಮಾತನಾಡಬೇಡ." ಅವಳ ಮಾತಿನಿಂದ ರೇಗಿ ಹೋಗಿತ್ತು.

ಸಧ್ಯ ಮುಕ್ತ ಮನೆಯಲ್ಲಿರಲಿಲ್ಲ. ಅಮ್ಮನ ಮಾತುಗಳಿಂದ ಅವಳಿಗೆ ದುಃಖವಾಗುತ್ತಿದ್ದುದಂತೂ ನಿಜ. ಆನಂತರ ನಾನು ಪೇಪರಿನಲ್ಲಿ ಒಂದು ಪ್ರಕಟಣೆ ಕೊಡಿಸಿದೆ. ಮುಕ್ತಳ ಬಗ್ಗೆ ವಿವರಕೊಟ್ಟು, ನನ್ನ ವಿಳಾಸಕ್ಕೆ ಬರೆಯುವಂತೆ ಕೋರಿದ್ದೆ. ಆದಷ್ಟು ಬೇಗ ಅವಳು ಮದುವೆಯಾಗಿ ಸುಖವಾಗಿರಲಿ ಎಂದು ಬಯಸಿದೆ.

ಹೆಚ್ಚಿಗೆ ಅರ್ಜಿಗಳು ಬರಲಿಲ್ಲವಾದರೂ, ಒಂದು ನಾಲ್ಕೈದು ಅರ್ಜಿಗಳು ಬಂದಿದ್ದವು. ಅದರಲ್ಲಿ ಒಂದನ್ನ ಆರಿಸಿಕೊಂಡು, ವಿಳಾಸ ಹುಡುಕಿ, ಪತ್ತೆ ಮಾಡಿ ಹುಡುಗನೊಡನೆ ಮಾತನಾಡಿದೆ. ಅವನು ಎಲ್ಲಾ ತಿಳಿದುಕೊಂಡು ಒಪ್ಪಿಗೆ ಕೊಟ್ಟ. ಇನ್ನು ಮುಕ್ತಳಿಗೆ ಈ ವಿಷಯ ತಿಳಿಸಿ ಒಪ್ಪಿಸುವುದು... ಉಳಿದಿದ್ದ ಕೆಲಸ.

ಅವಳಿಗೆ ಕಾಗದ ಬರೆದು ಎಲ್ಲಾ ವಿಷಯ ತಿಳಿಸಿ, ಹುಡುಗನ ಭಾವಚಿತ್ರವನ್ನ ಕಳಿಸಿದ್ದೆ. ಅವನೊಬ್ಬ ಡೈವೋರ್ಸಿ. ಅವನಿಗೆ ಮಕ್ಕಳಿಲ್ಲದ್ದರಿಂದ ಮಗುವಿನ ಬಗ್ಗೆಯೂ ಚಕಾರವೆತ್ತಿರಲಿಲ್ಲ. ಮುಕ್ತ ಒಪ್ಪಿದ್ದೇನೆಂದು ಬರೆಯುತ್ತಾಳೆಂದುಕೊಂಡಿದ್ದೆ. ಆದರೆ ಅವಳ ಕಾಗದ ಬಂದು ನನ್ನನ್ನ ಚಕಿತಗೊಳಿಸಿತು.

"ನನಗೋಸ್ಕರ ಎಷ್ಟೊಂದು ತೊಂದರೆ ತಗೊಳ್ಳುತ್ತಿದ್ದೀಯಾ? ಆದರೆ ನನ್ನ ಮನಸ್ಸಿನಲ್ಲಿರುವುದೇ ಬೇರೆ. ನನಗೆ ನೀನು ಮಾಡಿರುವಷ್ಟು ಸಹಾಯ, ನೀನು ತೋರಿಸುವಷ್ಟು ಪ್ರೀತಿ ನನಗೆ ಇನ್ನೆಲ್ಲೂ ಸಿಕ್ಕಲ್ಲ. ಅದರಿಂದ ನಾನಾಗಿಯೇ ಒಂದು ತೀರ್ಮಾನಕ್ಕೆ ಬಂದಿದೀನಿ.... ನನ್ನದೊಂದು ಮಾತನ್ನ ನಡೆಸಿಕೊಡ್ತೀಯಾ?... ನೀನು ನನ್ನನ್ನ ಮದುವೆಯಾಗ್ತೀಯಾ? ಆಗ ನನ್ನ ಎಲ್ಲಾ ಸಮಸ್ಯೆಗೂ ಒಟ್ಟಿಗೇ ಪರಿಹಾರ ಸಿಕ್ಕಂತಾಗುತ್ತದೆ...."

"ನನಗೆ ಇದು ತೀರ ಅನಿರೀಕ್ಷಿತ. ನಾನು ಅವಳನ್ನ ಪ್ರೀತಿಸಿದ್ದೆ, ಆಗ! ಆದರೆ ಈಗ! ಕನಸಿನಲ್ಲೂ ನೆನಸದ ವಿಷಯ. ಇವಳಿಗ್ಯಾಕೆ ಇಂತಹ ಆಲೋಚನೆ ಬಂತು! ಹೇಗೆ ಬಂತು!" ಮನಸ್ಸು ಕುಂದಿತು.

ತಕ್ಷಣ ಅವಳಿಗೆ ಮರು ಕಾಗದ ಬರೆದು ಹಾಕುವ ಮನಸ್ಸಾದರೂ ತಡೆದು

ಕೊಂಡೆ. ಅವಳ ಎದುರಿಗೆ ಕುಳಿತು ಎಲ್ಲಾ ವಿವರವಾಗಿ ಮಾತನಾಡುವುದೇ ಸರಿ ಎಂದುಕೊಂಡು ಊರಿಗೆ ಹೊರಟೆ. ಸೀದಾ ಅವಳು ಕೆಲಸ ಮಾಡುತ್ತಿದ್ದ ಸ್ಥಳಕ್ಕೆ ಹೋಗಿ ಅವಳನ್ನ ಭೇಟಿಯಾದೆ. ಯಾವ ಪೀಠಿಕೆಯೂ ಇಲ್ಲದೆ ಮಾತಿಗೆ ಪ್ರಾರಂಭಿಸಿದೆ.

"ನಿನ್ನ ಕಾಗದ ಓದಿ ತಕ್ಷಣ ಹೊರಟು ಬಂದಿದೀನಿ. ಈ ಮದುವೆ ಸಾಧ್ಯವಿಲ್ಲ."

"ಏಕೆ ಸಾಧ್ಯವಿಲ್ಲ! ನೀನು ನನ್ನನ್ನ ಪ್ರೀತಿಸುತ್ತಿದ್ದೆ ಅಲ್ಲವೆ! ಈಗ ನನ್ನ ನಿನ್ನ ಮರುಮದುವೆಯಾದರೆ, ನಾನು ನಿಮ್ಮ ಮನೆಯಲ್ಲಿಯೇ ಉಳಿಯುತ್ತೀನಿ. ನನ್ನ ಮಗುವಿನ ಭವಿಷ್ಯದ ಬಗ್ಗೆ ಚಿಂತಿಸಬೇಕಲ್ಲ."

"ಇಲ್ಲ, ಮುಕ್ತ ನಾನು ನಿನ್ನನ್ನ ಮದುವೆಯಾಗಲಾರೆ."

"ಏಕೆ? ನಾನು ವಿಧವೆಯೆಂದೆ? ಅಥವಾ ಭಾಗ್ಯಹೀನಳೆಂದೆ?"

"ಛೆ..ಛೆ... ಅಲ್ಲ ಅಲ್ಲ. ನನ್ನ ಅಣ್ಣನ ಹೆಂಡತಿ, ನೀನು ನನ್ನ ತಾಯಿಗೆ ಸಮಾನ.. ನಿನ್ನನ್ನ ಗೌರವಿಸುವುದು ನನ್ನ ಕರ್ತವ್ಯ. ಒಂದು ವೇಳೆ ನೀನು ಮದುವೆ ಯಾಗದೇ ಹಾಗೇ ಉಳಿದರೂ ನಾನು ನನ್ನ ತಾಯಿಯನ್ನ ನೋಡಿಕೊಳ್ಳುವಷ್ಟೇ ನಿಷ್ಠೆಯಿಂದ ನಿನ್ನನ್ನ ನೋಡಿಕೊಳ್ತೀನಿ."

"ಹಾಗಾದರೆ ನೀನು ನನ್ನನ್ನ ಪ್ರೀತಿಸಿದ್ದು ಸುಳ್ಳೇ...?"

"ಅದು ಒಂದು ತರಹದ ಅವಿವೇಕ... ಜಲಜಳ ಮೇಲಿನ್ನ ಸಿಟ್ಟಿನಿಂದ ನಾನೇ ಮಾಡಿಕೊಂಡ ಹೊಂದಾಣಿಕೆ. ನಿನ್ನ ಸಾಂತ್ವನದ ಮಾತುಗಳನ್ನ ನಾನು ಪ್ರೀತಿಯೆಂದು ಭ್ರಮಿಸಿದ್ದೆ... ನಿಜವಾಗಿಯೂ.."

"ಜಲಜ ಗಂಡನನ್ನ ಬಿಟ್ಟು ಬಂದಿದಾಳಂತೆ. ಹಾಗಾದ್ರೆ ಅವಳನ್ನ ಮದುವೆ ಯಾಗ್ತಿಯಾ?" ವ್ಯಂಗ್ಯ ಎದ್ದು ಕಾಣುತ್ತಿತ್ತು.

"ಇಲ್ಲ, ಖಂಡಿತಾ ಇಲ್ಲ. ಅದು ಸುಟ್ಟು ಭಸ್ಮವಾದ ಪ್ರೀತಿ. ನಾನು ಅವಳನ್ನ ಪ್ರೀತಿಸಿದ್ದೆ ಎನ್ನುವುದನ್ನ ಸಹ ಮರೆತಿದ್ದೀನಿ. ಅದೇ ರೀತಿ, ನನ್ನ ಅವಿವೇಕದ ದಿನಗಳನ್ನೂ ಮರೆತಿದ್ದೀನಿ. ನನಗೆ ಪ್ರೀತಿ, ಮದುವೆಯಲ್ಲಿ ವಿಶ್ವಾಸವೇ ಇಲ್ಲ."

"ಹಾಗಾದರೆ ಹೀಗೇ ಇರ್ತೀಯಾ! ನಿಮ್ಮ ತಾಯಿಗೆ ನಿರಾಸೆಯಾಗುಲ್ಲವೆ!"

"ಬಹುಶಃ ಹಾಗೇ ಇರ್ತೀನಿ.... ಅಮ್ಮನಿಗೆ ಎಷ್ಟೋ ವಿಧದಲ್ಲಿ ನಿರಾಸೆಯಾಗಿದೆ. ಅದರ ಜೊತೆಗೆ ಇದೂ ಒಂದು. ಮುಕ್ತಾ ನನ್ನನ್ನ ತಪ್ಪು ತಿಳಿಯಬೇಡ. ನನ್ನ ಅಂತರಂಗವನ್ನ ಅರಿಯಲು ಪ್ರಯತ್ನಿಸು. ನಿನ್ನ ಬಗ್ಗೆ ಗೌರವವಿದೆ, ವಿಶ್ವಾಸವಿದೆ, ಅನುಕಂಪವಿದೆ...."

"ನಿನ್ನ ಅನುಕಂಪ ನನಗೆ ಬೇಕಿಲ್ಲ" ಸಿಟ್ಟಿನಿಂದ ಅವಳು ಎದ್ದು ಹೊರಟೇ ಹೋದಳು. ಶಂಕರ ಕೊಂಕುನಗೆ ನಕ್ಕು ತಾನು ಹೊರಗೆ ಬಂದ.

ಮನೆಗೆ ಹೋಗಿ ತಾಯಿ ತಂದೆಯರನ್ನ ಮಾತನಾಡಿಸಿ, ಸೀದಾ ಮತ್ತೆ ನನ್ನ

ಊರಿಗೆ ಹೊರಟೆ. ಇವೆಲ್ಲ ಎರಡು ವರ್ಷದ ಹಳೆಯ ಕತೆ. ಈಗ...

ಜಲಜ ಮತ್ತೆ ಗಂಡನ ಮನೆಗೆ ಹೋದಳೆಂದು ಅಮ್ಮ ವರ್ತಮಾನ ತಿಳಿಸಿದ್ದಳು. ಒಳ್ಳೆಯದೇ ಆಯ್ತು ಎಂದುಕೊಂಡ. ಮುಕ್ತ ಮಾತ್ರ ಏಕೋ ಏನೋ ಮರುಮದುವೆಯ ಬಗ್ಗೆ ಮಾತನಾಡಿರಲಿಲ್ಲ. ಮಗ ಎರಡು ವರ್ಷದವನಾಗಿದ್ದ. ತಾತ ಅಜ್ಜಿಗೆ ಬಹಳ ಪ್ರೀತಿಯ ಮೊಮ್ಮಗು ಅವನು.

ಈ ಮಧ್ಯೆ ಅವನ ಸಹಪಾಠಿ ಸ್ನೇಹಿತನೊಬ್ಬ ಭೇಟಿಯಾದವನು ಹೊಸ ಸುದ್ದಿ ತಿಳಿಸಿದ್ದ. "ನಿನ್ನ ಅಣ್ಣನ ಹೆಂಡತಿ ಕೆಲಸ ಮಾಡ್ತಾರಲ್ಲ... ಅಲ್ಲಿರುವ ಅವಳ ಆಫೀಸರ್ ಅವರನ್ನ ಮರು ಮದುವೆಯಾಗ್ತಾರಂತೆ ಹೌದಾ?" ಅಂತ. ಇದು ಅವನಿಗೆ ತಿಳಿಯದ ಸುದ್ದಿ ಆದರೂ ಸಂತೋಷವಾಗಿತ್ತು. ಏಕೋ ಏನೋ ಮುಕ್ತ ಅವನಿಗೆ ತಿಳಿಸದೇ ಅವನಿಂದ ಮುಚ್ಚಿಟ್ಟಿದ್ದಳು.

"ಒಬ್ಬರನ್ನೊಬ್ಬರು ಇಷ್ಟಪಟ್ಟಿದ್ದಾರೆ... ಆದರೆ ಮಾತುಕತೆ ಮುಗಿದಿಲ್ಲ. ನಿನಗೆ ಗೊತ್ತಲ್ಲ ನನ್ನ ತಂದೆ ತಾಯಿ ಹಳೇ ಸಂಪ್ರದಾಯದವರು..." ಎಲ್ಲಾ ತಿಳಿದವನಂತೆ ಹೇಳಿ ಅವನ ಬಾಯಿ ಮುಚ್ಚಿಸಿದ್ದ.

ಒಂದು ಸಲ ಊರಿಗೆ ಹೋಗಿ ಎಲ್ಲಾ ವಿಷಯ ತಿಳಿದುಕೊಂಡು ಬರಬೇಕೆಂಬ ಆಸೆ ಇದ್ದರೂ ಹೋಗಲಾಗಿರಲಿಲ್ಲ. ಈ ಮಧ್ಯೆ ಅವನ ಅಧಿಕಾರಿಯ ಅನಾರೋಗ್ಯ. ಆತನ ಮಗಳನ್ನ ಆಗಾಗ್ಗೆ ವಿಚಾರಿಸುವ ಕೆಲಸ, ಕಂಪೆನಿಯ ಜವಾಬ್ದಾರಿಯಂತ ಕೆಲಸಗಳಿಂದ ಹೋಗಿರಲು ಆಗಿರಲಿಲ್ಲ.

ಈ ಮಧ್ಯೆ ಅಮ್ಮನಿಂದ ಕಾಗದ ಬಂದಿತ್ತು. ಯೋಗಕ್ಷೇಮ ವಿಚಾರಿಸಿ, ಆದರೆ, "ಹಬ್ಬದ ಹೊತ್ತಿಗೆ ಬಾ" ಎಂದು ಬರೆದಿದ್ದಳು. ಎರಡು ಮೂರು ವರ್ಷಗಳ ನಂತರ, ಅಮ್ಮನ ಬಾಯಲ್ಲಿ ಹಬ್ಬದ ಮಾತು! ಹಬ್ಬದ ಸಹಿ ಉಂಡಷ್ಟೇ ಸಿಹಿಯಾಗಿತ್ತು. ತಕ್ಷಣ ಹೊರಟು ನಿಂತ.

ಮೊಮ್ಮಗುವಿನ ಆಟ ಪಾಠಗಳಲ್ಲಿ ಅಮ್ಮ ತನ್ನ ದುಃಖವನ್ನ ಸ್ವಲ್ಪ ಮಟ್ಟಿಗೆ ಮರೆಯಲು ಪ್ರಯತ್ನಿಸಿರಬೇಕು. ಹುಡುಗಿಯಂತೆ ಸಂಭ್ರಮದಿಂದ ಎಲ್ಲಾ ಕೆಲಸವನ್ನ ತಾನೇ ಮಾಡುತ್ತಿದ್ದಳು. ಎಷ್ಟು ಹೊತ್ತಾದರೂ ಮುಕ್ತ ಮನೆಗೆ ಬಂದಿರಲಿಲ್ಲ. ವಿಚಾರಿಸಿ ದಾಗ,

"ಈ ನಡುವೆ ಹೀಗೇನಪ್ಪ, ಮನೆ ಮಠ, ಮಗು ಯಾವುದರ ಚಿಂತೆಯೂ ಅವಳಿಗಿಲ್ಲ. ಅದೇನು ಕೆಲಸವೋ, ಒಂದೊಂದು ದಿನ ಎಂಟುಗಂಟೆಗೆ ಬರ್ತಾಳೆ. ನಾವೂ ಕೇಳುವುದನ್ನೇ ಬಿಟ್ಟು ಬಿಟ್ಟಿದೀವಿ."

"ಅಪ್ಪಾ ಏನಂತಾರೆ! ಅವರೇ ಕೇಳಬಹುದಲ್ಲ...?"

"ಹೊತ್ತು ಗೊತ್ತಿಲ್ಲದೇ ಮನೆಗೆ ಬರುವುದಾದರೆ ಅವಳು ಇಲ್ಲಿರುವುದೇ ಬೇಡ.

ಅವಳ ತವರು ಮನೆಯಲ್ಲಿರಲಿ ಅಂದರು."

"ಸರಿ, ಅತ್ಲಾಗೆ ಕಳಿಸಿಬಿಡು."

"ಅವಳು ಹೋದರೆ, ಈ ಮಗುವೂ ಅವಳ ಜತೆಗೆ ಹೋಗುತ್ತದೆ. ನಾವುಗಳು ಆಮೇಲೆ ಇರುವುದಾದರೂ ಹೇಗೆ! ಅವನೂ ಇಲ್ಲ, ನೀನೂ ಬೇರೆ ಊರಿನಲ್ಲಿರ್ತೀಯ. ಮಗಳು ಗಂಡನ ಮನೆಯಲ್ಲಿರ್ತಾಳೆ. ಈಗ ಸಮಯ ಕಳೆಯಲು ನಮಗೆ ಇವನೊಬ್ಬನೇ ಆಧಾರ..." ಆಡುತ್ತಿದ ಮಗುವನ್ನ ಎತ್ತಿಕೊಂಡು ಲೊಚಲೊಚನೆ ಮುದ್ದಿಟ್ಟಳು.

"ಅಮ್ಮ ನಾನು ಅತ್ತಿಗೆಯ ಹತ್ತಿರ ಮಾತನಾಡ್ತೀನಿ. ಅವಳು ಮಗುವನ್ನ ಇಲ್ಲಿಯೇ ಬಿಟ್ಟು, ತವರು ಮನೆಗೆ ಹೋದರೆ ನಿಮ್ಮ ಅಭ್ಯಂತರವೇನಿಲ್ಲ ತಾನೇ!"

"ತಾಯಿ ಮಗುವನ್ನ ತೊರೆಸಿದ ಪಾಪ ನಮ್ಮನ್ನ ಅಂಟಿಕೊಳ್ಳುತ್ತಲ್ಲಪ್ಪ."

"ಆದೆಲ್ಲ ಪುರಾಣಕಾಲದ ಮಾತು. ಅವಳಿಗೆ ಮಗುವಿನ ಮೇಲೆ ಅಷ್ಟು ಮಮತೆ ಇದ್ದಿದ್ದರೆ ಕೆಲಸಕ್ಕೆ ಹೋಗದೆ ಮನೆಯಲ್ಲಿಯೇ ಇರುತ್ತಿದ್ದಳು. ಅಥವಾ ಮನೆಗೆ, ಕರುವನ್ನ ಹುಡುಕಿಕೊಂಡು ಬರುವ ಹಸುವಿನಂತೆ ಬರುತ್ತಿದ್ದಳು."

"ಏನೋಪ್ಪ, ನಿನ್ನ ಮಾತೇ ಅರ್ಥವಾಗುವುದಿಲ್ಲ."

"ಆಫೀಸಿನ ಜನ, ಹರಟೆ, ತಿರುಗಾಟ ಎಲ್ಲಾ ಅವಳಿಗೆ ಇಷ್ಟವಾಗುತ್ತೆ ಅಂತ ಕಾಣಿಸುತ್ತೆ. ಹೇಗೂ ಅವಳಿಗಿಂತ ಚೆನ್ನಾಗಿ ನೀವು ಮಗುವನ್ನ ನೋಡಿಕೊಳ್ತೀರಿ. ಅವಳಿಗೆ ಯಾವ ಆತಂಕವೂ ಇಲ್ಲವೇನೋ..." ಬೇಕೂಂತ ಹೇಳಿದ್ದ.

"ಅದಕ್ಕೇ ನಾನು ಅವಳು ಕೆಲಸಕ್ಕೆ ಹೋಗುವುದು ಬೇಡ ಅಂತ ಅಂದಿದ್ದು. ನನಗೆ ಗೊತ್ತಿತ್ತು ಹೀಗೇ ಆಗುತ್ತೆ ಅಂತ..."

"ಈಗೇನಾಗಿದೆ ಅಂತ ಹೀಗಾಡ್ತೀಯ? ಅವಳ ವಯಸ್ಸು ಅಂಥದು. ತನ್ನ ವಯಸ್ಸಿನ ಸ್ನೇಹಿತರ, ಸಹೋದ್ಯೋಗಿಗಳ ಜತೆ ಖುಷಿಯಾಗಿರುವುದು ತಪ್ಪೇನಲ್ಲ. ಅವಳು ವೈರಾಗ್ಯದಿಂದಿರುವುದಕ್ಕೆ ಮುದುಕಿ ಏನಲ್ಲ."

"ಮುದುಕಿ ಅಲ್ಲ, ಮದುವೆಗಿರುವ ಹುಡುಗಿಯೂ ಇಲ್ಲ. ಜವಾಬ್ದಾರಿ ಇರುವ ತಾಯಿ. ಅದಾದರೂ ಜ್ಞಾಪಕದಲ್ಲಿರಲಿ."

"ಬರೀ ಅದೊಂದು ಸಾಲದು ಅವಳಿಗೆ. ಅವಳನ್ನ ಪ್ರೀತಿಸುವ, ಅವಳನ್ನ ಮೆಚ್ಚಿಸುವ ಗಂಡ ಇಲ್ಲಿ ಇಲ್ಲವಲ್ಲ..."

"ಏನೋ ನೀನು ಹೇಳೋದು...! ಹಾಗಂತ ಅವಳು ಹೇಗೆ ಅಂದ್ರೆ ಹಾಗೆ ಇರೋಕ್ಕೆ ಆಗೊಲ್ಲ. ಹಾಗೇನಾದರೂ ಇರುವ ಆಸೆ ಇದ್ದರೆ ಅವಳು ನಮ್ಮ ಮನೆಯಲ್ಲಿರುವುದು ಬೇಡ."

"ಹಾಗಾದರೆ, ನೀವುಗಳೇ ಅವಳಿಗೆ ಇನ್ನೊಂದು ಮದುವೆ ಮಾಡಿಬಿಡಿ."

"ನಿನ್ನ ತಲೆ ಕೆಟ್ಟಿದೆಯೇ ಶಂಕರಾ?"

"ತಲೆ ಸರಿಯಾಗಿದೆ. ಅದರಿಂದಲೇ ಇಂತಹ ಒಳ್ಳೆಯ ಮಾತುಗಳನ್ನ ಹೇಳ್ತಿದೀನಿ. ಅವಳಿಗಿನ್ನು ಯಾವ ವಯಸ್ಸು? ಅವಳನ್ನ ಇಚ್ಛೆ ಪಟ್ಟು ಮದುವೆಯಾಗುವವನು ಮುಂದೆ ಬಂದರೆ, ಅವಳಿಗೆ ಆಶೀರ್ವಾದ ಮಾಡಿಕಳಿಸಿ. ಇದರಿಂದ ಎಲ್ಲರಿಗೂ ಒಳ್ಳೆಯದೇ..."

"ಇಂತಹ ಮಾತುಗಳನ್ನ ನಿಮ್ಮಪ್ಪನ ಎದುರಿಗೆ ಆಡಬೇಡ."

"ಏಕೆ ಆಡಬಾರದು! ಅಪ್ಪ ಆ ಕಾಲದವರಾದರೆ. ನಾನು ಈ ಕಾಲದವನು. ನಮ್ಮ ಕಾಲಕ್ಕೆ ತಕ್ಕಂತೆ ನಾವು ನಡೆಯುತ್ತೀವಿ. ನಿಮ್ಮ ಕಾಲಕ್ಕೆ ತಕ್ಕಂತೆ ಇದ್ದರೆ ನಮ್ಮ ಸಮಸ್ಯೆಗಳು ಹೆಚ್ಚುತ್ತವೆ."

"ಹಾಗಾದರೆ ನಮ್ಮ ಅನಿಸಿಕೆಗಳಿಗೆ ಬೆಲೆಯೇ ಇಲ್ಲವೆ?" ವ್ಯಥೆಯಿಂದ ನುಡಿದಳು.

"ಬೆಲೆ ಇಲ್ಲದೆ ಏನು! ನೀವು ಮಾರ್ಗದರ್ಶಕರಾಗಿ, ನಿಮ್ಮ ಬೆಲೆಯನ್ನ ನೀವು ಉಳಿಸಿಕೊಳ್ಳಬೇಕು... ಸ್ವಲ್ಪ ನಮಗೋಸ್ಕರ ಮಾರ್ಪಾಡಾಗಬೇಕು."

"ಹೋಗೋ ಹುಚ್ಚು ಹುಡುಗ... ಹೋಗು ಹೋಗು... ಇದಕ್ಕೆ ನಾನಾಗಲೀ ನಿಮ್ಮ ಅಪ್ಪನಾಗಲೀ ಒಪ್ಪುವುದಿಲ್ಲ. ನಾಳೆಯಿಂದ ಅವಳ ಕೆಲಸಕ್ಕೆ ಹೋಗದೇ ಮನೆಯಲ್ಲಿ ಬಿದ್ದಿರಲಿ. ಮನೆಯ ಮರ್ಯಾದೆಯಾದರೂ ಉಳಿಯುತ್ತೆ."

"ಅಮ್ಮ.. ಅತ್ತಿಗೆಗೆ ಮೊದಲೇ ಆಗಿರುವ ಶಿಕ್ಷೆ ಸಾಲದೆ? ಅವಳ ಪಾಡಿಗೆ ಅವಳನ್ನ ಬಿಡಿ. ಮನೆತನದ ಮರ್ಯಾದೆ ಹೋಗುವಂತಹ ಕೆಲಸವನ್ನೇನೂ ಮಾಡಿಲ್ಲ ಅವಳು. ನೀವುಗಳು ಹೀಗೇ ಮಾತನಾಡುವುದಾದರೆ ಇನ್ನ ಮೇಲೆ ನಾನು ನಿಮ್ಮ ಊರಿಗೆ ಬರುವುದೇ ಇಲ್ಲ. ಇದೇ ಕೊನೆ. ಸಿಟ್ಟಿನಿಂದ ನುಡಿದ.

ಶಂಕರ ಊರಿಗೆ ಹೊರಟು ನಿಂತಾಗ ತಾಯಿ ತಡೆಯಲಿಲ್ಲ. ಅವನಿಗೆ ವ್ಯಥೆಯಾಯಿತು. ಮುಕ್ತಳ ಪರವಹಿಸಿ ಮಾತನಾಡಿದ್ದಕ್ಕೆ ತನಗೆ ಈ ಉಪಚಾರ ಇರಲಿ ಪರವಾಗಿಲ್ಲ. ಚಿಕ್ಕವಳು ಬಾಳಿ ಬದುಕಬೇಕಾದವಳು ಅವಳು. ನಮ್ಮ ಈ ಮನಸ್ತಾಪದಿಂದ ಅವಳಿಗೆ ಒಳ್ಳೆಯದಾಗುವುದಾದರೆ ಅದೂ ಸರಿ ಎಂದುಕೊಂಡು ಹೊರಟೇ ಬಿಟ್ಟ.

ಆಮೇಲೆ ಮುಂದಿನ ದಿನಗಳು ಬಹಳ ಬೇಗ ಕಳೆದು ಹೋದವು. ಅದರಲ್ಲಿ ಮುಖ್ಯವಾದ ಸಂಗತಿ ಜರುಗಿದ್ದು ಎಂದರೆ, ವಸಂತಿಯ ಆರೋಗ್ಯದಲ್ಲಿ ಕಂಡ ವ್ಯತ್ಯಾಸ. ಅವನಿಗಾಗಿ ಅವಳು ಕಾದಿದ್ದು ಅವನನ್ನು ಕಂಡೊಡನೆ ಮುಗುಳ್ನಕ್ಕು ತಾನೇ ಕೈಯಾಡಿಸುವುದನ್ನು ಪ್ರಾರಂಭಿಸಿದ್ದಳು. ಕ್ರಮೇಣ ಅವನೊಡನೆ ಕಾಲ ಕಳೆಯುವ ಮಾತನ್ನಾಡುವ ಬಯಕೆಯನ್ನು ವ್ಯಕ್ತಪಡಿಸಿದಳು.

ಉತ್ತಮವಾಗಿ ಗುಣ ಕಂಡಿದ್ದರಿಂದ ಡಾಕ್ಟರು ಅವಳನ್ನು ಮನೆಗೆ ಕರೆದುಕೊಂಡು ಹೋಗುವಂತೆ ಸಲಹೆ ನೀಡಿದರು. ಆದರೆ ನಾಗಭೂಷಣರ ಆರೋಗ್ಯ ಸುಧಾರಿಸಿರ

ಲಿಲ್ಲ. ಶಂಕರನೊಡನೆ, ಅಪ್ಪನನ್ನ ನೋಡಲು ಬಂದಿದ್ದ ವಸಂತಿಯನ್ನ ಆತನೇ ಗುರುತಿಸಲಿಲ್ಲ. ವಸಂತಿಯೇ 'ಅಪ್ಪ' ಎಂದಾಗ ಅವರಿಗೆ ಅಚ್ಚರಿ! ಈ ಚಮತ್ಕಾರವೆಲ್ಲಾ ಶಂಕರನಿಂದ ಎಂದು ತಿಳಿದ ಅವರು ಅವನಿಗೆ ಕೈಮುಗಿದು 'ಥ್ಯಾಂಕ್ಸ್' ಎಂದರು.

ಡಾಕ್ಟರು, "ಅವರು ಇನ್ನು ಗುಣಮುಖರಾಗುವ ಸಾಧ್ಯತೆಯೇ ಇಲ್ಲ. ಅವರ ಆಸೆಗಳೇನೇ ಇದ್ದರೂ ತೀರಿಸಿ ಎಂದು ಹೇಳಿದ್ದರು. ವಸಂತಿ ಗುಣಮುಖಳಾದದ್ದು ಅವರನ್ನ ಸಂತೋಷಗೊಳಿಸಿದ್ದರೂ, ಮುಂದೇನು ಎನ್ನುವ ಚಿಂತೆ ಬಾಧಿಸುತ್ತಲೇ ಇತ್ತು.

"ಶಂಕರ, ನಾನು ಹೇಗೂ ಸಾಯುವ ಸ್ಥಿತೀಲಿದೀನಿ. ಆದರೆ ಇವಳದೇ ನನಗೆ ಚಿಂತೆ. ಇವಳು ಒಪ್ಪುವ ಗಂಡನ್ನ ಹುಡುಕಿ, ಇವಳಿಗೆ ಮದುವೆ ಮಾಡುವ ಜವಾಬ್ದಾರಿ ನಿನ್ನದು." ಎಂದಿದ್ದರು.

ಶಂಕರ ಗಲಿಬಿಲಿಗೊಂಡ. ಇದೆಲ್ಲಿಯ ಜವಾಬ್ದಾರಿ ಏನಿಸಿದರೂ, ತಾನು ಇವರ ಎಲ್ಲಾ ಕೆಲಸಗಳಲ್ಲಿ ಸಹಾಯಕನಾಗಿ ಶಾಭಾಷ್‌ಗಿರಿ ಪಡೆದಿದ್ದೀನಿ. ಇದೂ ಒಂದು ಆಗಿ ಹೋಗಲಿ ಎಂದುಕೊಂಡ. ಆದರೆ ಅದು ಕಾರ್ಯಗತವಾಗುವುದು ಹೇಗೆ ಅಂತ ತಿಳಿಯಲಿಲ್ಲ. ನಂತರ ಆತ ಉಳಿಯಲಿಲ್ಲ. ಒಂದು ಮಧ್ಯಾಹ್ನ ತೀರಿಹೋದರು.

ವಸಂತಿ ಮತ್ತೊಮ್ಮೆ ತಬ್ಬಲಿಯಾದಳು. ಯಾವ ಅಳುಕೂ ಇಲ್ಲದೇ ಅವಳು ಅವನನ್ನ ತಬ್ಬಿ ಅಳತೊಡಗಿದಾಗ, ಶಂಕರನ ಕೈಗಳು ಅವಳ ಬೆನ್ನ ಮೇಲೆ ಹರಿದಾಡಿದವು. ಬಾಯಿ ಸಾಂತ್ವನದ ನುಡಿಗಳನ್ನ ನುಡಿಯಿತು.

ಅವಳು ಚೆನ್ನಾಗಿ ಚೇತರಿಸಿಕೊಂಡಿದ್ದರೂ, ಅವಳು ಮತ್ತೆ ಮಾದಕ ವಸ್ತುಗಳ ಅಭ್ಯಾಸಕ್ಕೆ ಗುರಿಯಾದಾಳು ಎಂಬ ಭಯದಿಂದ ಶಂಕರ ಅವಳನ್ನ ಹಗಲೂ ರಾತ್ರಿ ಖೈದಿಯನ್ನು ಕಾಯುವಂತೆ ಕಾದ. ಆದರೆ ಅವನಿಗೆ ತಿಳಿಯದಂತೆ ಅವಳು ಅವನ ಹೃದಯವನ್ನ ಗೆದ್ದಿದ್ದಳು. ಆದರೆ ಅದನ್ನ ವ್ಯಕ್ತ ಪಡಿಸಿರಲಿಲ್ಲ.

ಅವಳಿಗೆ ಒಂದು ದಾರಿ ಮಾಡುವುದು ಹೇಗೆ ಎಂದು ಒಂದು ದಿನ ಅತಿಯಾಗಿ ಚಿಂತಿಸುತ್ತಾ ಕುಳಿತಿದ್ದ. ಕಿಲಕಿಲನೆ ನಗುತ್ತ, ಚಪ್ಪಾಳೆ ತಟ್ಟುತ್ತಾ ಬಂದ ಅವಳ ರೀತಿ ಅವನನ್ನ ಅಧೀರ ನನ್ನಾಗಿ ಮಾಡಿತು. "ಏನಾಯ್ತು ವಸಂತಿ! ಏಕೆ ಹೀಗೆ ನಗ್ತಿದೀಯಾ?" ಕೇಳಿದ.

"ನೀವು ನಿದ್ದೆ ಮಾಡ್ತಿದೀರೇನೋ ಅಂತ ಎಂದ್ಕೊಂಡೆ. ಅದಕ್ಕೆ ಎಬ್ಬಿಸಿದೆ."

"ಎಬ್ಬಿಸೋ ರೀತೀನಾ ಇದು!" ಲಘುವಾಗಿ ರೇಗಿದ.

"ಮತ್ತೆ ಹೇಗೆ! ಮೈ ಮುಟ್ಟಿ ಎಬ್ಬಿಸಿದರೆ ಬೈತೀರಿ... ಮತ್ತೆ ನಿಮ್ಮನ್ನ ಲೋ, ಶಂಕರಾ ಏಳೋ ಅಂತ ಕೂಗುಕ್ಕೆ ಆಗುತ್ತ? ನೀವೇ ಹೇಳಿ."

"ಚೆನ್ನಾಗಿದೆ. ಏನು ಬೇಕು ನಿನಗೆ!"

"ನನಗೆ ತುಂಬಾ ಬೇಜಾರಾಗ್ತಿದೆ. ಯಾವುದಾದರೂ ಪಿಕ್ಚರಿಗೆ ಹೋಗೋಣ್ವಾ?"

"ಬೇಡ ವಸಂತಿ. ನನಗೆ ಸಿನಿಮಾ ನೋಡಿದರೆ ತಲೆ ನೋವು ಬರುತ್ತೆ."

"ಹಾಗಾದ್ರೆ ನಾನೊಬ್ಬಳೇ ಹೋಗ್ತೀನಿ. ನನಗೆ ದುಡ್ಡುಕೊಡಿ."

"ಬೇಡ, ಅಂದರೆ ಹೇಗೋ, ದುಡ್ಡು ಕೊಟ್ಟು ಕಳಿಸಿದರೆ ಹೇಗೋ ಒಬ್ಬಳೇ ಹೋಗ್ತಾಳೆ. ಇದೊಳ್ಳೆ ಪೀಕಲಾಟ" ಎಂದುಕೊಂಡು, ತಾನೂ ಹೊರಟ.

"ನೋಡಿದ್ರಾ... ನನ್ನನ್ನ ಒಬ್ಬಳನ್ನೇ ಕಳಿಸೊಕ್ಕೆ ಹೆದರಿಕೆ ನಿಮಗೆ! ಬೇಕಾದ್ರೆ ನಿಮ್ಮಾಣೆ ಹಾಕ್ತೀನಿ. ಡ್ರಗ್ಸ್ ಕಡೆ ತಿರುಗಿ ನೋಡಲ್ಲ, ನಾನು."

ಅವಳ ಕತೆ ಬಿರುಗಣ್ಣಿನಿಂದ ನೋಡಿದ.

"ಡ್ರಗ್ಸ್ ಮಾತನಾಡಿದರೆ ನಿಮಗೇಕೆ ಸಿಟ್ಟು!"

"ಅದರ ಹೆಸರನ್ನ ಎತ್ತಕೂಡದು ನೀನು."

"ಅದನ್ನ ಹೇಳೊಕ್ಕೆ ನೀವ್ಯಾರು!"

ಕಾಲುಗಳು ತಟಸ್ಥವಾದವು. ಎತ್ತಿ ಕಪಾಳಕ್ಕೆ ಹೊಡೆಯುವ ಮನಸ್ಸಾಯಿತು. 'ಆದರೆ ನನ್ನನ್ನ ಹೊಡೆಯಲು ನೀನ್ಯಾರು ಎಂದು ಕೇಳಿದರೆ! ಹೌದು. ನನಗೂ ಇವಳಿಗೂ ಏನು ಸಂಬಂಧ! ನಾನೇನು ಇವಳ ಅಪ್ಪನೇ, ಅಣ್ಣನೇ ಅಥವಾ ಇವಳ ಗಂಡನೇ...?'

ತಕ್ಷಣ ಅವನ ಮೆದುಳು ಚುರುಕಾಯಿತು 'ತಾನು ಇವಳ ಗಂಡ ಏಕೆ ಆಗ ಬಾರದು... ಈ ಕ್ಷಣ ಅವಳನ್ನ ಕೇಳಿ ಅವಳ ಒಪ್ಪಿಗೆ ಪಡೆಯಬೇಕು ಎನಿಸಿದರೂ, ಅವಳ ಮನಸ್ಸಿನಲ್ಲಿ ಏನಿದೆಯೋ, ಒಂದು ವೇಳೆ ಒಪ್ಪದಿದ್ದರೆ ಕೈ ತೋರಿಸಿ ಅವಲಕ್ಷಣ ಎನಿಸಿಕೊಂಡ ಹಾಗಾಗುತ್ತೆ ಎಂದುಕೊಂಡು,

"ವಸಂತಿ. ನಾನೊಂದು ಮಾತು ಕೇಳ್ತೀನಿ. ನೀನು ನೇರವಾಗಿ ಉತ್ತರ ಹೇಳಬೇಕು." ಲಜ್ಜೆಯ ಧ್ವನಿಯಲ್ಲಿ ಹೇಳಿದ.

"ಒಬ್ಬ ಹೆಂಗಸು, ತಂದೆ, ಗಂಡ, ಮಗ, ಇವರುಗಳಲ್ಲಿ ಯಾರಾದರೊಬ್ಬರ ಆಶ್ರಯದಲ್ಲಿದ್ದರೆ ಆ ಸ್ತ್ರೀಗೆ ಮನ್ನಣೆ. ನೀನು ಸಿನಿಮಾಕ್ಕೆ ಒಬ್ಬಳೇ ಹೋದರೆ ಜನ ನಗುಲ್ವೆ!"

"ಸ್ನೇಹಿತೆಯರ ಜತೆ ಹೋದರೆ!"

"ತಲೆ ಹರಟೆ ಅಂತಾರೆ..."

"ಹುಂ. ಸರಿ, ನೀವು ನನ್ನ ಅಪ್ಪನಲ್ಲ... ಗಂಡನೂ ಅಲ್ಲ. ನನ್ನ ಮಗನಾಗುವುದಂತೂ ಸಾಧ್ಯವೇ ಇಲ್ಲ...." ಮತ್ತೆ ನಕ್ಕಳು.

"ನಿನಗೆ ಎಂತಹ ಗಂಡ ಬೇಕು ಹೇಳು. ಹುಡುಕಿ ಮದುವೆ ಮಾಡುವ ಜವಾಬ್ದಾರಿ ನನ್ನದು."

"ನನ್ನ ಅವಗುಣಗಳೆಲ್ಲಾ ತಿಳಿದಿದ್ದರೂ, ನನ್ನನ್ನು ಮೆಚ್ಚುವ, ನನ್ನನ್ನ ಪ್ರೀತಿಸುವ ಗಂಡ ನನಗೆ ಬೇಕು.." ಅಷ್ಟೇ ಗಂಭೀರವಾಗಿ ಹೇಳಿದಳು.

"ಹುಂ. ಸರಿ. ಅಂತಹ ಒಬ್ಬ ವರನನ್ನ ಮನಸ್ಸಿನಲ್ಲಿದಾನೆ. ನಾಳೆ ಕರೆದುಕೊಂಡು ಬರ್ತೀನಿ...."

"ಬೇಡ," ಇದ್ದಕ್ಕಿದ್ದಂತೆ ಕಿರುಚಿದಳು... "ಬೇಡ. ನಾನು ಈ ಮನೆ ಬಿಟ್ಟು ಎಲ್ಲಿಗೂ ಹೋಗುವುದಿಲ್ಲ. ನನಗೆ ಯಾವ ಗಂಡನೂ ಬೇಡ... ನನ್ನಂತಹವಳನ್ನು ಯಾರೂ ಮದುವೆಯಾಗುವುದಿಲ್ಲ." ಕೈಯಲ್ಲಿ ಮುಖ ಮುಚ್ಚಿ ಅಳತೊಡಗಿದಳು.

ಶಂಕರ, ಮುಚ್ಚಿದ್ದ ಅವಳ ಕೈಗಳನ್ನ ಬಿಡಿಸಿ, ಅವಳ ಕಣ್ಣುಗಳನ್ನೇ ದಿಟ್ಟಿಸಿ ನೋಡಿದ. ಅವಳ ಕಣ್ಣುಗಳಲ್ಲಿದ್ದ ಪ್ರೀತಿಯನ್ನ ಗುರುತಿಸಿದ. ಆದರೆ ಭೀತಿಯ ಪೊರೆ ಅಡ್ಡವಾಗಿತ್ತು.

"ಬೇಡ. ನೀನು ಮನೆ ಬಿಟ್ಟು ಎಲ್ಲಿಗೂ ಹೋಗಬೇಡ. ನಿನ್ನ ಜತೆ ಇಲ್ಲಿಯೇ ಇರುವವನನ್ನ ಮಾಡ್ಕೋತೀಯಾ?" ಕೇಳಿದ. ಅವಳು ಸುಮ್ಮನೇ ಅವನನ್ನ ನೋಡಿದಳು.

"ಅವನು ನಿನಗೆ ತಕ್ಕವನು ಅಲ್ಲದಿರಬಹುದು.... ಮೂವತ್ನಾಲ್ಕು ವರ್ಷದವನು, ಅಲ್ಲಲ್ಲಿ ತಲೆಯಲ್ಲಿ ಬಿಳಿ ಕೂದಲು ಕಾಣುತ್ತೆ, ಕನ್ನಡಕ ಹಾಕಿಕೊಳ್ತಾನೆ, ಸ್ವಲ್ಪ ದಪ್ಪ ಎನ್ನಬಹುದಾದ ಶರೀರ... ಆದರೆ..."

"ಛೀ. ನನಗೆ ಅಂತಹವನು ಬೇಡ." ಎಂದಳು ಮತ್ತೆ.

"ಮತ್ತೆ?" ಎಂದ ನಗುತ್ತ.

"ಮತ್ತೆ... ಮತ್ತೆ. ನಿಮ್ಮಂತಹವರು." ಎಂದಳು ಅವನೆಡೆಗೆ ಬೆರಳು ಮಾಡಿ. ಆ ಬೆರಳನ್ನ ಹಿಡಿದು, ಅವಳನ್ನ ತನ್ನೆಡೆಗೆ ಎಳೆದ್ಕೊಂಡ.

"ನಿಜ ಹೇಳು ವಸಂತಿ. ನಾನು ನಿನಗೆ ಒಪ್ಪಿಗೇನಾ?"

"ನಿಜ ಹೇಳಿ, ನೀವು ನನಗೆ ಒಪ್ಪಿಗೇನಾ?" ಇಬ್ಬರೂ ಒಟ್ಟಿಗೇ ನಕ್ಕರು.

ತಕ್ಷಣ ಅದೇ ದಿನ ತಾಯಿಗೆ ಕಾಗದ ಬರೆದ.

"ನಾನು ನನಗೆ ತಕ್ಕ ಒಬ್ಬ ಹುಡುಗಿಯನ್ನ ಆಯ್ಕೆ ಮಾಡಿಕೊಂಡಿದೇನೆ. ದಯವಿಟ್ಟು ಬೇಡ ಅನ್ನಬೇಡ. ಆ ಹುಡುಗಿಗೆ ನನ್ನ ಅಗತ್ಯವಿದೆ.... ನನಗೆ ನಿನ್ನ ಆಶೀರ್ವಾದ ಬೇಕು... ಅಪ್ಪನಿಗೆ ನೀನೇ ಎಲ್ಲಾ ತಿಳಿಸಿಬಿಡು... ನೀನೇ ನಿಂತು ಮದುವೆ ಮಾಡುವು ದಾದರೆ ತುಂಬಾ ಸಂತೋಷ. ಇಲ್ಲದಿದ್ದರೆ ನಾವು ಕಾನೂನಿನ ರೀತಿಯಲ್ಲಿ ಮದುವೆ ಆಗುತ್ತೇವೆ."

ಕಾಗದ ತಲುಪಿದ ಕೂಡಲೇ ತಂದೆ ತಾಯಿ ಆತುರಾತುರವಾಗಿ ಬಂದರು. ವಸಂತಿಯನ್ನ ನೋಡಿದರು. ಶಂಕರ ಅವಳ ವಿಚಾರವನ್ನೆಲ್ಲಾ ಚಾಚೂ ತಪ್ಪದೇ

ಹೇಳಿ ಮುಗಿಸಿದ. ಇಬ್ಬರೂ ಮಾತನಾಡಲಿಲ್ಲ. ಇವನೇ ಕೇಳಿದ.

"ಮುಕ್ತ ಹೇಗಿದಾಳೆ!"

"ಅವಳೂ ಅವಳ ಗುಟ್ಟನ್ನ ಹೊರಗೆ ಹಾಕಿದಾಳೆ... ನಿನ್ನ ಹಾಗೇ..."

"ಓ... ಹಾಗಾದರೆ ನಿಮ್ಮ ತೀರ್ಮಾನವೇನು!"

"ಇನ್ನೇನಿದೆ! ನಾವು ಪಡೆದುಕೊಂಡು ಬಂದದ್ದೆ ಇಷ್ಟು, ಅಲ್ಲಿ ನಮ್ಮ ಜನರೆದುರಿಗೆ ತಲೆ ಎತ್ತದಂತಾಗಿದೆ. ಆದರೆ ಎಲ್ಲಾ ಕೆಡಿಸಿಕೊಂಡು ನಿಮ್ಮಗಳಿಂದ ನಾವು ದೂರ ಇದ್ದು ಏನು ಸಾಧಿಸುವುದಿದೆ. ಎಲ್ಲಾ ದೈವೇಚ್ಛೆ." ಭಾರವಾದ ಧ್ವನಿಯಲ್ಲಿ ನುಡಿದಳು.

ಶಂಕರ ಮೀಸೆಯ ಅಡಿಯಲ್ಲಿ ನಕ್ಕ.

"ನಾವು ಊರಿಗೆ ಹೋಗಿ ಮುಹೂರ್ತ ಇಡಿಸಿ, ಟೆಲಿಗ್ರಾಂ ಕೊಡ್ತೀವಿ. ತಕ್ಷಣ ಇವಳನ್ನ ಕರೆದುಕೊಂಡು ಬಾ..."

ವಸಂತಿ, ಭಾವೀ ಅತ್ತೆ ಮಾವಂದಿರಿಗೆ ನಮಸ್ಕರಿಸಿದಳು. ತಾಯಿಯ ಕಣ್ಣೀರು ವಸಂತಿಯ ತಲೆಯ ಮೇಲೆ ಹನಿ ಹನಿಯಾಗಿ ಉದುರಿತು.

ಕೆಲವೇ ದಿನಗಳಲ್ಲಿ ಶಂಕರ ವಸಂತಿ, ಮುಕ್ತ–ಅವಳ ಆಫೀಸರ್ ಭಾರ್ಗವನ ವಿವಾಹ ನೆರವೇರಿತು. ಎಲ್ಲಾ ನೆಂಟರಿಷ್ಟರನ್ನೂ ಆಹ್ವಾನಿಸಿದ್ದರು. ಬರಲು ಇಷ್ಟವಿದ್ದವರು ಬಂದು ವಧೂವರರನ್ನ ಆಶೀರ್ವದಿಸಿದ್ದರು...

ಮುಕ್ತ ಗಂಡನ ಮನೆಗೆ ಹೊರಟು ನಿಂತಳು. ಎಲ್ಲಾ ವಿಷಯ ತಿಳಿದಿದ್ದ ವಸಂತಿ, ಮುಕ್ತಳಿಗೆ ಧೈರ್ಯ ಹೇಳಿದ್ದಳು... "ಅಕ್ಕ ನೀವು ಏನೂ ಚಿಂತಿಸಬೇಡಿ. ನಿಮ್ಮ ಮಗುವನ್ನ ನಾನು ನೋಡಿಕೊಳ್ತೀನಿ" ಅಂತ.

"ನೀನು ಅದೃಷ್ಟವಂತೆ ವಸಂತಿ. ಶಂಕರನಂತಹ ಗಂಡನನ್ನ ಪಡೆದಿದೀಯೆ...." ಮುಕ್ತ ವಸಂತಿಯ ಕೈಯನ್ನ ಪ್ರೀತಿಯಿಂದ ಅದುಮಿದಳು.

ಶಂಕರನ ಹೃದಯ ಭಾರವಾಗಿತ್ತು. ಮುಕ್ತಳಂತಹ ಸ್ನೇಹಿತೆಗೆ ಒಂದು ನೆಲೆ ಸಿಕ್ಕಿತಲ್ಲ ಅಂತ ಸಂತಸವಾಗಿತ್ತು.
ವಸಂತಿಯಂಥ ಅಸಹಾಯಕ ಹುಡುಗಿಗೆ ಆಸರೆಯಾದ ಶಂಕರನ ಬಗ್ಗೆ ಮುಕ್ತಳಿಗೆ ಅಭಿಮಾನ ಉಕ್ಕಿತು.

ಅಪೂರ್ವವಾದ ಕೆಲಸವನ್ನ ಸಾಧಿಸಿದವರಂತೆ, ಶಂಕರನ ತಂದೆ ತಾಯಿ ಚಪ್ಪರದ ಎತ್ತರಕ್ಕೆ ಬೆಳೆದು ನಿಂತಿದ್ದವರಂತೆ ಗೋಚರಿಸಿದರು... ಕೆಲವರಿಗೆ.

* * *

೧೧. ಬರೀ ನಾಟಕ ಅಲ್ಲ.....

ಅದು ಒಂದು ಹಳ್ಳಿ. ಸುಮಾರು ಎಪ್ಪತ್ತು ಎಂಭತ್ತು ಮನೆಗಳು ಇರಬಹುದು. ಹಳ್ಳಿಯಲ್ಲಿ ದೀಪವಿತ್ತು, ನಲ್ಲಿ ಇತ್ತು. ಹಳ್ಳಿಯವರಿಗೆ ಅದರ ಉಪಯೋಗ ಗೊತ್ತಿತ್ತೇ ಹೊರತು ಉಳಿತಾಯ ಗೊತ್ತಿರಲಿಲ್ಲ. ಸರಕಾರಿ ಶಾಲೆಯಿತ್ತು. ಓದುವ ಹುಡುಗರ ಸಂಖ್ಯೆ ಬಹಳ ಕಡಿಮೆ. ಆರೋಗ್ಯ ಕೇಂದ್ರವಿತ್ತು. ಸೋಮಾರಿಯಾಗಿ ಕಾಲಕಳೆಯುತ್ತಿದ್ದ ಅಲ್ಲಿನ ಕಾಂಪೌಂಡರ್.

ಹಳ್ಳಿಯ ಪ್ರಮುಖರಾದ ಪಟೇಲರ ಮನೆಯವರು ಸಾಕಷ್ಟು ಅನುಕೂಲವಾಗಿದ್ದರು. ಧಾನ್ಯದ ಕಣಜ ತುಂಬಿತ್ತು. ನಾಲ್ಕು ಹೊತ್ತು ಬಿಸಿ ಬಿಸಿಯಾಗಿ ಅಡುಗೆ ಮಾಡಿ ಆಳುಕಾಳಾದಿಯಾಗಿ ಬಡಿಸುವ ಪರಿಪಾಠ, ಅವರ ಮನೆಯಲ್ಲಿ. ಸುಗ್ಗಿ ಅದೂ ಇದು ಅಂತ ಅವರ ಮನೆಯವರು ಸದಾ ಕೆಲಸದಲ್ಲಿ ಮಗ್ನರು.

ಗ್ರಾಮದಲ್ಲಿ ಏನೇನು ಆಗಬೇಕು. ಹಳ್ಳಿಯವರು ಎಷ್ಟು ಮುಂದುವರೆಯಬೇಕು. ಸರಕಾರದವರು ಗ್ರಾಮ ಉದ್ಧಾರಕ್ಕಾಗಿ ಬಿಡುಗಡೆ ಮಾಡುವ ಹಣ ಎಷ್ಟರ ಮಟ್ಟಿಗೆ ಸಂದಾಯವಾಗುತ್ತಿದೆ, ಇದನ್ನೆಲ್ಲಾ ನೋಡಲು ಗ್ರಾಮದ ಮುಖ್ಯಸ್ಥರಿಗೆ ಪುರಸೊತ್ತಿಲ್ಲ.

ಸರಕಾರದವರು ನಮ್ಮ ಹಳ್ಳಿಯ ಜನರಿಗೆ ಏನೇನು ಉಪಕಾರ ಮಾಡುತ್ತಿದ್ದಾರೆ. ಏನೇನು ಸಲಹೆಗಳನ್ನು ಕೊಡುತ್ತಿದ್ದಾರೆ? ಇದುವರೆಗೂ ತಾವುಗಳು ಎಷ್ಟನ್ನು ಅರ್ಥಮಾಡಿಕೊಂಡಿದೇವೆ? ತಮಗೆ ಇನ್ನೂ ಏನಾದರೂ ಸೌಲಭ್ಯಗಳು ಬೇಕೆ? ಈ ಬಗ್ಗೆ ಹಳ್ಳಿಗರು ಅಜ್ಞಾನಿಗಳು.

ಹಾಂ! ಅಜ್ಞಾನಿಗಳು, ಆದರೆ ಎಲ್ಲರೂ ಅಲ್ಲ. ಎಲ್ಲೋ ಎಂಟನೇ ಒಂದು ಭಾಗದಷ್ಟು ಜನ ಕೆಲವು ಸೌಲಭ್ಯಗಳನ್ನ ಪಡೆದಿರುವುದು ಉಂಟು. ಕೆಲವರ ಮನೆಗಳಲ್ಲಿ ರೇಡಿಯೋ ಇದೆ. ಆದರೆ ಎಲ್ಲರೂ ಬರೀ ಸಿನಿಮಾ ಹಾಡುಗಳನ್ನು ಕೇಳುತ್ತಾರೆ. ಎಲ್ಲೋ ಒಂದಿಬ್ಬರ ಮನೆಯಲ್ಲಿ ಟಿ.ವಿ. ಸೆಟ್ ಇದೆ. ಧಾರಾವಾಹಿ, ಸಿನಿಮಾ, ಚಿತ್ರ ಮಂಜರಿ ನೋಡಿಕೊಂಡು ಕಾಲ ಕಳೆಯುತ್ತಾರೆ. ಯಾರಿಗೂ ಈ ಕಾರ್ಯಕ್ರಮಗಳಲ್ಲದೆ ಬರುವ, ಬೇರೆ ಬೇರೆ ಕಾರ್ಯಕ್ರಮಗಳು ಅಂದರೆ, ಕುಟುಂಬ ಯೋಜನಾ ಸಲಹೆ, ಸಾಕ್ಷರತಾ ಸಲಹೆ, ವರದಕ್ಷಿಣೆಯಿಂದ ಉಂಟಾಗುವ ಅನಾಹುತಗಳು, ಹುಟ್ಟುವ

ಮೊದಲೇ ತಂದೆಯನ್ನು ಕಳೆದುಕೊಂಡು, ತಾಯಿ ತಮ್ಮನ್ನು ಎಸೆದು ಅನಾಥರನ್ನಾಗಿ ಮಾಡಿದ, ಅನಾಥಮಕ್ಕಳ ಗೋಳು, ಹೀಗೆ ಸಾಮಾಜಿಕ ಸಮಸ್ಯೆಗಳನ್ನು ತಿಳಿದುಕೊಂಡು ಅರ್ಥಮಾಡಿಕೊಳ್ಳಬೇಕೆಂದು ಕಳಕಳಿ ಯಾರಿಗೂ ಇಲ್ಲ. ಅದೆಲ್ಲ ತಮಗೆ ಬೇಕಾದುದಲ್ಲ ಎಂಬ ಉದಾಸೀನ.

ಹೀಗೇ ಆ ಗ್ರಾಮದವರು, ತಮ್ಮ ಸಮಸ್ಯೆಗಳ ನಡುವೆಯೂ ಮೌನವಾಗಿದ್ದರು. ಅವರ ಅಜ್ಞಾನ, ಮುಖ್ಯಸ್ಥರ ಧೋರಣೆ ಇದಕ್ಕೆ ಕಾರಣವಾಗಿದ್ದಿತು.

ಇಂತಹ ಸಮಯದಲ್ಲಿ ಒಂದು ದಿನ, ಬೇರೆ ಊರಿನಿಂದ ಒಂದು ಗುಂಪು ಆ ಹಳ್ಳಿಗೆ ಬಂದಿಳಿಯಿತು. ಸ್ಟೇಷನ್‌ನಲ್ಲಿ ಅವರನ್ನು ಎದುರುಗೊಳ್ಳುವವರು ಯಾರೂ ಇರಲಿಲ್ಲ. ಏಕೆಂದರೆ ಅವರುಗಳು ಬರುವ ವಿಚಾರ ಯಾರಿಗೂ ತಿಳಿದಿರಲಿಲ್ಲ.

ಆ ಗುಂಪಿನ ಮುಖ್ಯಸ್ಥೆ ಗಿರಿಜೆ. ಆಕೆ ಮೊದಲು ಹೋಗಿ ಸ್ಟೇಷನ್ ಮಾಸ್ಟರನ್ನು ಮಾತನಾಡಿಸಿ, ತಮ್ಮ ಜೊತೆ ತಂದಿದ್ದ ಸೂಟ್‌ಕೇಸ್ ಬ್ಯಾಗ್ ಮುಂತಾದ ಲಗೇಜ್‌ನ್ನು ಅಲ್ಲಿ ಇರಿಸಿ ಪಟೇಲರ ಮನೆಯ ಕಡೆ ಎಲ್ಲರೂ ಹೊರಟರು.

ಪಟೇಲ್ ನಂಜಪ್ಪನವರು ನಡುವಯಸ್ಸಿನವರು. ಉಯ್ಯಾಲೆಯ ಮಣೆಯ ಮೇಲೆ ಮಗುವನ್ನು ಕೂರಿಸಿಕೊಂಡು, ನಿಧಾನವಾಗಿ ತೂಗಿಕೊಳ್ಳುತ್ತಿದ್ದರು. ತಮ್ಮ ಮನೆಗೆ ಬರುತ್ತಿದ್ದ ಗುಂಪನ್ನು ನೋಡಿ ಗಾಬರಿಯಾದರು. ಅಷ್ಟರಲ್ಲಿ ಗಿರಿಜೆ ಮನೆಯೊಳಗೆ ಬಂದುದಾಗಿತ್ತು. ಪಟೇಲರು, ತಬ್ಬಿಬ್ಬಾದರೂ, ಸಜ್ಜನಿಕೆಯಿಂದ

"ಬರ್ಬೇಕು. ಬರ್ಬೇಕು. ತಮ್ಮದು ಯಾವ ಊರಾತು?" ಅಂತ ಕೇಳಿದರು.

"ನನ್ನ ಗುರುತು ಸಿಗಲಿಲ್ವಾ ಪಟೇಲರೆ? ನಾನು ಗಿರಿಜೆ. ಪುಟ್ಟೇಗೌಡರ ಮಗಳು." ಕೈಮುಗಿದಳು.

"ಹೌದೇನವ್ವ? ಬಾಳ ಸಂತೋಷ. ಇವರೆಲ್ಲಾ....?... ಅವಳ ಅಕ್ಕಪಕ್ಕದಲ್ಲಿ ನಿಂತಿದ್ದವರನ್ನು ಕುರಿತು ಕೇಳಿದರು.

"ಇವರೆಲ್ಲ ನಮ್ಮವರೇ. ನಾವು ಈ ಹಳ್ಳಿಯಲ್ಲಿ ಒಂದು ವಾರ ಇರ್ತೀವಿ. ನಮಗೆಲ್ಲ ಇರುಕ್ಕೆ ಸ್ಥಳ, ಊಟ ತಿಂಡಿ ಏರ್ಪಾಡು ಮಾಡಿಸಿಕೊಡಬೇಕು ನೀವು."

"ಮಾಡಿಸೋಣ ಅದಕ್ಕೇನಂತೆ? ಆದ್ರೆ.... ನಿನ್ನ ಸ್ನೇಹಿತರನ್ನೆಲ್ಲಾ ಕರಕೊಂಡು ಈ ಹಳ್ಳೀಲಿ ಏನಿದೆ ಅಂತ ಬಂದ್ಯೆವ್ವಾ?" ಅನುಮಾನದಿಂದ ಪ್ರಶ್ನಿಸಿದರು.

"ನಾವು ಈ ಹಳ್ಳೀಲಿ ಸುತ್ತಾಡುಕ್ಕೆ ಬಂದಿಲ್ಲ. ಪಟೇಲ್ರೆ, ಕೆಲವಾರು ಯೋಜನೆಗಳನ್ನು ಹಾಕಿಕೊಂಡು, ಹಳ್ಳಿಯವರಿಗೆ ಆ ವಿಷಯಗಳನ್ನು ತಿಳಿಸೋಣ ಅಂತ ಬಂದಿದೀವಿ."

"ಅಂದ್ರೆ.. ಗ್ರಾಮೋದ್ಧಾರ ಮಾಡೂದು ಅನ್ನು. ನೀನು ಗ್ರಾಮ ಸಮಾಜ

ಸೇವಕಿಯಾಗಿದೀಯಾ ಹಾಗಾದ್ರೆ...." ದನಿದಪ್ಪ ಮಾಡಿಕೊಂಡು ಕೇಳಿದರು.

"ಹೂಂ. ನನ್ನ ಸ್ಥಿತಿ ಗೊತ್ತಲ್ಲ ನಿಮಗೆ. ಈ ಹತ್ತು ವರ್ಷದಲ್ಲಿ ನಾನು ಹಿಂದಿನ ಆ ಗಿರಿಜೆಯೇ ಅಲ್ಲ ಅನ್ನುವಷ್ಟು ಬದಲಾಗಿದೀನಿ."

"ಅದನ್ನು ಮುಖ ನೋಡಿದ್ರೇ ತಿಳಿಯುತ್ತೆ ಬಿಡವ್ವಾ ಅಂದ್ಹಾಗೆ ನೀನು ಈ ಕಡೆ ಬರ್ಲೇ ಇಲ್ಲ ನಿಮ್ಮಪ್ಪನಿಗೆ ನಿನ್ನೊಬ್ಬಳನ್ನು ಸಾಕುವ ಯೋಗ್ಯತೆ ಇರಲಿಲ್ವಾ?"

"ಯೋಗ್ಯತೆ ಪ್ರಶ್ನೆ ಅಲ್ಲ. ನನಗೆ ಆ ಪರಿಸ್ಥಿತೀಲಿ ಹಳ್ಳಿಗೆ ವಾಪಸ್ಸು ಬಂದು, ನಾಲ್ಕು ಜನ ನನ್ನನ್ನ ಕನಿಕರದಿಂದ ನೋಡಿ ಮಾತಾಡಿಸುವುದು ಬೇಡವಾಗಿತ್ತು. ನನ್ನನ್ನ ಎದುರಿಗಿಟ್ಟುಕೊಂಡು ನಮ್ಮಪ್ಪ ನಮ್ಮಮ್ಮ ತಾನೇ ಏನು ಸುಖವಾಗಿರ್ತಿದ್ದರು?"

"ನಿನ್ನ ಗಂಡನಿಗೆ ಆಕ್ಸಿಡೆಂಟ್ ಮಾಡಿ ಕೊಂದ್ಹಾಕಿದ್ನಲ್ಲ ಆ ಭಡವಾ! ಏನಾದರೂ ಕಾಸು ಗೀಸು ಕೊಟ್ನೇನವ್ವಾ?"

"ಅವನೂ ಬಡವನೇ. ಅವನೆಲ್ಲಿಂದ ಕಾಸು ತರ್ತಾನೆ? ಆ ವಿಚಾರವನ್ನೆಲ್ಲಾ ನಿಧಾನವಾಗಿ ಹೇಳ್ತೀನಿ. ನಮಗೆ ಇರುಕ್ಕೆ ಜಾಗ ತೋರ್ಸಿದ್ರೆ.... ಹಾಗೇ ನಮಗೆಲ್ಲ ಕಾಫಿ ಕಳಿಸ್ಕೊಡ್ತೀರಾ? ಪಟೇಲ್ರೇ ಆಯಾಸ ಆಗಿದೆ." ಧೈರ್ಯದಿಂದ ಕೇಳಿದಳು.

"ಮುಂಚಿತವಾಗಿ ತಿಳಿದಿದ್ರೆ ಎಲ್ಲಾ ಕ್ಲೀನ್ ಮಾಡಿಸ್ತಿದ್ದೆ. ಈಗ ಮುಂದಿನ ರೂಮಿನಲ್ಲಿ ಎಲ್ಲಾ ರೆಸ್ಟ್ ತಗೊಳ್ಳಿ. ಮಧ್ಯಾಹ್ನದ ಹೊತ್ತಿಗೆ ಅಟ್ಟದ ಮೇಲಿನ ಪಡಸಾಲೇನ ಕ್ಲೀನ್ ಮಾಡಿಸಿ ರೆಡಿಮಾಡಿಸ್ತೀನಿ."

"ಆಯ್ತು ಪಟೇಲ್ರೆ. ತುಂಬಾ ವಂದನೆಗಳು."

"ಥ್ಯಾಂಕ್ಸ್ ಅನ್ನವ್ವಾ. ನಮಗೂ ಸ್ವಲ್ಪ ಸ್ವಲ್ಪ ಇಂಗ್ಲೀಷ್ ಬರುತ್ತೆ" ಗೌಡರು ನಕ್ಕರು. ಎಲ್ಲರೂ ದನಿಗೂಡಿಸಿದರು.

ಒಳಗಿನ ಕೋಣೆಯಲ್ಲಿ, ಗಿರಿಜಳ ಗೆಳತಿ ರಮಾ ಕೇಳಿದಳು.

"ಏನೇ ಗಿರಿಜಾ.... ನೀನು ಈ ಹಳ್ಳಿಯವಳು ಅಂತ ಹೇಳೇ ಇರಲಿಲ್ಲವಲ್ಲೆ. ಈ ಹಳ್ಳಿ ಬಿಟ್ಟು ಪಟ್ಟಣಕ್ಕೆ ಹೇಗೆ ಬಂದೆ?"

"ಅದೊಂದು ಕೆಟ್ಟಕತೆ. ಯಾರಿಗೂ ಹೇಳಕ್ಕೇ ನನಗೆ ಇಷ್ಟವಿಲ್ಲ. ನಿನಗೆ ತಿಳಿದು ಕೊಳ್ಳಬೇಕು ಅಂತ ಆಸಕ್ತಿ ಇದ್ದರೆ ಇನ್ಯಾವತ್ತಾದರೂ ತಿಳಿಸ್ತೀನಿ. ಈಗ ಬೇಡ." ಹಾಗೇ ಅಲ್ಲಿ ಹಾಸಿದ್ದ ಜಮಾಖಾನೆಯ ಮೇಲೆ ಉರುಳಿಕೊಂಡಳು. ಹಣೆಯ ಮೇಲೆ ಕೈ ಇಟ್ಟು ಮಲಗಿದವಳಿಗೆ ಏನೇನೋ ನೆನಪುಗಳು. ತನ್ನ ಹಳ್ಳಿಯಲ್ಲಿ ಬಂದು ಇಳಿದಿರುವುದರಿಂದಲೋ, ಅಥವಾ ಆ ಸ್ನೇಹಿತೆ ಗತಿಸಿದ ಕತೆಯನ್ನು ಕೆರ ಳಿಸಿದುದರಿಂದಲೋ, ಅವಳಿಗೆ ಹಿಂದಿನ ನೆನಪುಗಳು ಚಿತ್ರದ ರೀಲಿನಂತೆ ಸರಿಯ ಲಾರಂಭಿಸಿತು.

ಅವಳು ಹುಟ್ಟಿದ್ದು ಈ ಹಳ್ಳಿಯಲ್ಲೇ. ತಂದೆ ಪುಟ್ಟೇಗೌಡರಿಗೆ ಎರಡನೇ

ಮಗಳು. ಅಕ್ಕ ತುಂಗೆಗಿಂತ ಎರಡು ವರ್ಷಕ್ಕೆ ಚಿಕ್ಕವಳು. ಅಣ್ಣ ಲೋಕೇಶನಿಗಿಂತ ನಾಲ್ಕು ವರ್ಷಕ್ಕೆ ಚಿಕ್ಕವಳು. ಅಣ್ಣ ಅಪ್ಪನ ಜೊತೆಯಲ್ಲಿ ಗದ್ದೆಗೆ ಹೋಗಿ ಸಹಾಯ ಮಾಡಿದರೆ, ತುಂಗೆ ಅಡಿಗೆ ಕೆಲಸದಲ್ಲಿ ತಾಯಿಗೆ ಸಹಾಯಕಳು. ಅವಳು ಶಾಲೆಗೆ ಹೋಗುತ್ತಿರಲಿಲ್ಲ. ತುಂಗೆಗೆ ಅದೆಲ್ಲ ಇಷ್ಟವಿಲ್ಲ. ಹೋಗಲಿ ಎಂದರೆ ತನ್ನ ತಮ್ಮ ತಂಗಿಯರನ್ನು ನೋಡಿಕೊಳ್ಳಲೂ ಬೇಜಾರು. ಗಿರಿಜ ಹಳ್ಳಿಯಲ್ಲಿ ಇದ್ದ ಒಂದೇ ಒಂದು ಸರಕಾರಿ ಶಾಲೆಗೆ ಹೋಗುತ್ತಿದ್ದಳು. ಅಲ್ಲಿದ್ದ ಒಬ್ಬರೇ ಮೇಷ್ಟ್ರು ಮಾಡುತ್ತಿದ್ದ ಎಲ್ಲಾ ಪಾಠಗಳನ್ನು ಕೇಳುತ್ತಿದ್ದಳು. ಆ ಸ್ಕೂಲಿಗೆ ಬರುತ್ತಿದ್ದ ಪಟೇಲರ ಮಕ್ಕಳು, ರೈಲ್ವೆ ಸ್ಟೇಷನ್ ಮಾಸ್ತರರ ಮಕ್ಕಳು, ಹಳ್ಳಿಯ ದೇವಸ್ಥಾನದ ಪೂಜಾರಪ್ಪನ ಮಕ್ಕಳು, ಸ್ಕೂಲು ಮೇಷ್ಟ್ರು ಮಕ್ಕಳುಗಳು ಇವಳ ಸ್ನೇಹಿತರು. ಅವರುಗಳಂತೆಯೇ ಎಲ್ಲಾದಕ್ಕೂ ಮುಂದು.

ಪ್ರೈಮರಿ ಕ್ಲಾಸಿನ ಪರೀಕ್ಷೆಯೊಂದಿಗೇ ಅವಳ ವಿದ್ಯಾಭ್ಯಾಸವೂ ಮುಗಿದಿತ್ತು. ಆ ಹೊತ್ತಿಗೆ ಅವಳ ಅಕ್ಕನ ಮದುವೆ ಆದುದರಿಂದ, ಇವಳು ಮನೆಯ ಕೆಲಸ ಕಾರ್ಯ ನೋಡಿಕೊಳ್ಳಲು ಶುರು ಮಾಡಿದಳು. ನಂತರದ ಎರಡೇ ವರ್ಷದಲ್ಲಿ ಇವಳ ಮದುವೆಯಾಯಿತು. ಹುಡುಗ ಪೇಟೆಯ ಒಂದು ಕಾಲೇಜಿನಲ್ಲಿ ಅಟೆಂಡರ್ ಆಗಿದ್ದ.

ಮುಂದೆ ಒಂದೆರಡು ವರ್ಷಗಳಲ್ಲಿ ಅವಳು ಗಂಡನ ಮನೆಗೆ ಬಂದಳು. ಇಲ್ಲೂ ಯಥಾಪ್ರಕಾರ ಮನೆ ಕೆಲಸ. ಅತ್ತೆ ಮಾವ ಓದು ಬರಹ ತಿಳಿದವರಲ್ಲ. ಆದ್ದರಿಂದ ಇವಳಿಗೂ ಏನೂ ಪ್ರೋತ್ಸಾಹವಿಲ್ಲ. ಗಂಡ ಸರಕಾರಿ ಕೆಲಸದವನಾಗಿದ್ದ ರಿಂದ ಅವನಿಗೆ ಅಷ್ಟರಲ್ಲೇ ತೃಪ್ತಿ.

ಆದರೆ ಮುಂದೆ ಕೆಲವೇ ತಿಂಗಳುಗಳಲ್ಲಿ ಗಿರಿಜೆ ವಿಧವೆಯಾದಳು. ಒಬ್ಬ ಕಾಲೇಜು ಮೇಷ್ಟ್ರ ಜೊತೆಯಲ್ಲಿ ಸ್ಕೂಟರಿನಲ್ಲಿ ಬರುತ್ತಿದ್ದವನು ಆಕ್ಸಿಡೆಂಟ್‌ನಿಂದ ಸತ್ತಿದ್ದ. ಕಾಲೇಜು ಮೇಷ್ಟ್ರು ಕೂಡಾ ನಂತರ ಸತ್ತಿದ್ದರು. ಆ ಸಮಯದಲ್ಲಿ ಆ ಕಾಲೇಜು ಮೇಷ್ಟ್ರ ಹೆಂಡತಿಯ ಪರಿಚಯವಾಗಿತ್ತು. ಆಕೆ ಕೂಡಾ ಬೇರೆ ಒಂದು ಕಾಲೇಜಿನಲ್ಲಿ ಅಧ್ಯಾಪಕಿಯಾಗಿದ್ದಳು. ಆದ್ದರಿಂದ ಆಕೆಗೆ ಸಮಯ ಕಳೆಯಲು ಕಷ್ಟ ವಾಗಲಿಲ್ಲ. ದುಃಖವನ್ನು ಮರೆಯಲು ಆಕೆ ಬೇರೆ ಬೇರೆ ಹವ್ಯಾಸಗಳನ್ನು ಹಚ್ಚಿ ಕೊಂಡಿದ್ದಳು.

ಗಿರಿಜೆಗೆ ಈಗ ಅತ್ತೆಮನೆ ನರಕ. ಪ್ರಪಂಚದ ಪರಿಚಯವಿಲ್ಲದ ಅವರುಗಳು ಅವಳನ್ನು ತಮ್ಮ ಮನೆಯಲ್ಲಿ ಇಟ್ಟುಕೊಳ್ಳಲು ಇಷ್ಟ ಪಡಲಿಲ್ಲ. ಸದಾ ಕಿರಿಕಿರಿ. ಓದು ಬರಹ ಚೆನ್ನಾಗಿ ತಿಳಿಯದ ಇವಳು ಯಾವ ಕೆಲಸಕ್ಕೆ ಸೇರಿಕೊಂಡಾಳು? ಕಾಲೇಜಿನ ಪ್ಯೂನ್ ಆಗಿರಲು ಅವಳ ಮನಸ್ಸು ಒಪ್ಪಲಿಲ್ಲ. ಅಥವಾ ಜೀವನದಲ್ಲಿ

ದಿಕ್ಕು ಗೆಟ್ಟು ತವರು ಮನೆ ಸೇರಿ ನಗೆ ಪಾಟಲಿಗೆ ಒಳಗಾಗಲು ಅವಳು ಸುತರಾಂ ಒಪ್ಪಲಿಲ್ಲ. ದಿಕ್ಕು ತೋಚದೇ ಅವಳು, ಸತ್ತ ಮೇಷ್ಟ್ರ ಹೆಂಡತಿಯನ್ನು ಭೇಟಿಯಾಗಿ ತನ್ನ ಕಷ್ಟಗಳನ್ನು ಹೇಳಿಕೊಂಡಳು.

ಸ್ವಭಾವತಃ ಆಕೆ ಒಳ್ಳೆಯವಳು. ಜನರ ಕಷ್ಟದಲ್ಲಿ ಭಾಗಿಯಾಗಿ ಸಮಸ್ಯೆಗಳನ್ನು ಪರಿಹರಿಸಲು ಸಲಹೆ ನೀಡುವವಳು. ಅವಳನ್ನು ಸಧ್ಯಕ್ಕೆ ತನ್ನ ಮನೆಯಲ್ಲಿ ಇರುವಂತೆ ಒಪ್ಪಿಸಿದಳು.

ಈಗ ಗಿರಿಜೆಗೆ ನಿಶ್ಚಿಂತೆ. ಆಕೆಯ ಜೊತೆ ಜೊತೆಯಾಗಿ ಮನೆ ಕೆಲಸಗಳನ್ನೂ ಮಾಡಿ ಮುಗಿಸಿ, ಮನೆ ಹೊರಗಿನ ಕೆಲಸಗಳನ್ನೂ ಅಭ್ಯಾಸ ಮಾಡಿಕೊಂಡಳು. ಆಕೆಯ ಸಲಹೆಯಂತೆ 'ವಯಸ್ಕರ ಶಿಕ್ಷಣ ಶಾಲೆ'ಗೆ ಸೇರಿ, ಓದಲು, ಬರೆಯಲು ಸಾಕಷ್ಟು ಚೆನ್ನಾಗಿ ಕಲಿತಳು. ಆಕೆಯ ಸಹಾಯದಿಂದ 7ನೇ ಕ್ಲಾಸು ಪರೀಕ್ಷೆ ಮುಗಿಸಿದಳು. ಅಭ್ಯಾಸದಲ್ಲಿ ಆಸಕ್ತಿ ಇದ್ದುದರಿಂದ ಹದಿನೆಂಟು ವರ್ಷಗಳಾದ ಮೇಲೆ, SSLC ಪರೀಕ್ಷೆಕೂಡಾ ಪಾಸು ಮಾಡಿದಳು.

ಈಗ ಆಕೆಯ ಜೊತೆ, ಹೊರಗೆ ಕೆಲವು ಸಂಸ್ಥೆಗಳಿಗೂ ಹೋಗಿ ಬರಲಾರಂಭಿಸಿದಳು. ಆಗ ಇವಳಿಗೆ ಸಮಾಜ ಸೇವಕಿಯಾಗಿ, ಜನರ ಕಷ್ಟ ಸುಖಗಳನ್ನು ತಿಳಿದು, ಸಹಾಯ ಮಾಡಬೇಕೆಂಬ ಆಸೆಯಾಯಿತು. ಆಕೆಯ ಪರಿಶ್ರಮದಿಂದ, ಅವರಿವರ ಸಹಾಯದಿಂದ, 'ಗ್ರಾಮದ್ಧೋರಾ ಮಂಡಳಿ' ಒಂದರಲ್ಲಿ ಸೇರುವ ಅವಕಾಶ ಸಿಕ್ಕಿತು.

ಎಲ್ಲರ ಜೊತೆಯಲ್ಲೂ ಬೆರೆತು, ನಗುನಗುತ್ತಾ, ಲವಲವಿಕೆಯಿಂದ ಓಡಾಡುವ ಗಿರಿಜೆ ಎಲ್ಲರಿಗೂ ಪ್ರಿಯಳಾದಳು. ಎಲ್ಲರ ಜೊತೆ ಕುಳಿತು ಚರ್ಚಿಸುವ ತಿಳುವಳಿಕೆ ಕೂಡಾ ಬಂತು. ತನಗೆ ತಿಳಿದ, ಹೊಳೆದ ಸಲಹೆಗಳನ್ನು ಹೇಳುವಳು. ಹೀಗೆ ಗ್ರಾಮ ಸೇವಕಿಯಾಗಿ, ಸ್ವತಂತ್ರವಾಗಿ ಹಳ್ಳಿಗಳಿಗೆ ಹೋಗಿ ಬರುವ ಅಭ್ಯಾಸ ಕೂಡಾ ಮಾಡಿಕೊಂಡಳು. ಯಾವುದಾದರೂ ಹಳ್ಳಿಗೆ ಹೋಗುವ ಮೊದಲು ತಾನು ಅಲ್ಲಿ ಹೇಗೆ ಹಳ್ಳಿಗರನ್ನು ಆಕರ್ಷಿಸಬೇಕು? ಅಂತಹ ಯಾವ ಕಾರ್ಯಕ್ರಮವನ್ನು ಯೋಜಿಸಬೇಕು ಎಂದು ತಾನೇ ಸಿದ್ಧತೆ ಮಾಡಿಕೊಳ್ಳುವಳು.

ಅಂತಹ ತಯಾರಿಗಳಿಂದ ತನ್ನ ಹುಟ್ಟಿದ ಹಳ್ಳಿಗೆ ಬಂದಿದ್ದಳು. ಇನ್ನು ಪಟೇಲರೊಡನೆ ಸಮಾಲೋಚಿಸಿ, ತನ್ನ ಕಾರ್ಯಕ್ರಮಗಳನ್ನು ಶುರುಮಾಡುವುದು. ಹೀಗೇ ಯೋಚಿಸುತ್ತಾ ಮಲಗಿದ್ದವಳಿಗೆ, ಆಯಾಸಕ್ಕೆ ನಿದ್ದೆ ಹತ್ತಿತ್ತು.

"ತಿಂಡಿ ಕಾಫಿ ರೆಡಿಯಾಗಿದೆ, ಬಿಸಿನೀರು ಕಾದಿದೆ, ಸ್ನಾನ ಮಾಡುವುದಾದರೆ ಮಾಡಬೇಕಂತೆ" ಮನೆ ಆಳು ಬಂದು ಹೇಳಿದ. ಗಿರಿಜೆಯನ್ನು ಎಬ್ಬಿಸಿದರು. ಸ್ನಾನ ಮುಗಿಸಿ, ತಿಂಡಿ ಕಾಫಿಯ ಸಮಯದಲ್ಲಿ ಗಿರಿಜೆ ಪಟೇಲರಿಗೆ ಹೇಳಿದಳು–

ಪಟೇಲರೆ ನಿಮಗೆ ಬಿಡುವಾದರೆ ನನ್ನ ಜೊತೆ ಬರ್ತೀರಾ? ಊರು ಸುತ್ತಾಡಿ, ಹಾಗೇ ನಮ್ಮ ಮನೆ ಇದ್ದ ತಾವಿಗೆ ಹೋಗಿ ಬರಬೇಕೆಂಬ ಆಸೆ."

"ಅಲ್ಲಿ ಏನಿದೆ ಅಂತ ಹೋಗ್ತೀಯವ್ವಾ? ನಿಮ್ಮಪ್ಪ ತೀರಿಕೊಂಡ ಮೇಲೆ, ನಿಮ್ಮಣ್ಣ ಇದ್ದ ಒಂದು ಚೂರು ನೆಲವನ್ನೂ ಮಾರಿ, ತನ್ನ ಹೆಂಡತಿ ಮಕ್ಕಳು, ತಾಯಿಯೊಡನೆ ಊರು ಬಿಟ್ಟು ಹೋದ. ಎಲ್ಲಿ ಹೋದ್ನೊ? ನೀನಾಗಲೀ, ನಿಮ್ಮ ಅಕ್ಕನಾಗಲೀ, ಒಂದು ದಿನ ಈ ದಿಕ್ಕಿಗೆ ಸುಳಿಯಲಿಲ್ಲ...."

"ನನ್ನ ಎದೆಯೇ ಹತ್ತಿ ಉರೀತಿದ್ದಾಗ ನಾನು ಯಾವ ಮುಖ ಇಟ್ಟುಕೊಂಡು ಬರಲಿ? ನೀವೇ ಹೇಳಿ. "ಕೆಟ್ಟು ಪಟ್ಟಣ ಸೇರು" ಅಂತಾರೆ. ಕೆಟ್ಟು ಹಳ್ಳೀನ, ಅದರಲ್ಲೂ ತವರು ಮನೆ ಸೇರಬಾರದು ಅಲ್ವಾ ಪಟ್ಲೇರ್ರೆ...."

"ನೀನು ಬಹಳ ತಿಳಿದವಳವ್ವ. ಅದರಿಂದಲೇ ಎಲ್ಲಾ ನಿಭಾಯಿಸ್ದೆ. ನೀನು ಆಗ್ಲೇ, ಆಮೇಲೆ ಹೇಳ್ತೀನಿ ಅಂದೆಯಲ್ಲ... ದೇನು ಅಂತ ಹೇಳ್ತೀಯಾ?"

"ಹೂಂ. ಅದಕ್ಕೆ ಹಾಗೇ ತಿರುಗಾಡಿಕೊಂಡು, ಮಾತಾಡಿಕೊಂಡು ಬರೋಣ ಅಂತ ಅಂದೆ. ಬರುಕ್ಕೆ ಆಗುತ್ತೆ ತಾನೆ?"

"ನೀನು ಕೇಳ್ದಾಗ ಆಗುಲ್ಲ ಅಂತೀನೇನವ್ವ. ನಡೀ ಹೊರಡಾಣ..." ತಾನೇ ಮುಂದಾಗಿ ಹೊರಟರು.

ಗಿರಿಜೆ ತನ್ನ ಸಂಗಾತಿಗಳಿಗೂ ಎಲ್ಲಾದರೂ ಹೋಗಿ ಬನ್ನಿರೆಂದು ಹೇಳಿ ಗೌಡರೊಡನೆ ಹೊರಟಳು.

ದಾರಿಯಲ್ಲಿ ಗಿರಿಜಳೇ ಮಾತು ಶುರು ಮಾಡಿದಳು.

"ಈ ಗ್ರಾಮದಲ್ಲಿ ಸರ್ಕಾರದ ಎಲ್ಲಾ ಸೌಲಭ್ಯಗಳಿದ್ದೂ, ಹಳ್ಳಿಗರು ಅದನ್ನು ಸಾಕಷ್ಟು ಉಪಯೋಗಿಸಿಕೊಳ್ಳುತ್ತಿಲ್ಲ ಅಂತ ಅನ್ನಿಸುತ್ತೆ. ಏನೇ ಆಗಲಿ, ಹಳ್ಳಿಯಲ್ಲೆ ಹುಟ್ಟಿ, ಬೆಳೆದವರಿಗೆ ಸ್ವಂತ ಬುದ್ಧಿ ಕಡಿಮೆ. ಬೇರೆಯವರು ಆಗಾಗ್ಗೆ ಬುದ್ಧಿಯನ್ನು ಖರ್ಚುಮಾಡಿ ಅವರ ತಲೆಯೊಳಗೆ ತುಂಬ ಬೇಕು. ಏನಂತೀರಿ?"

"ಏನೋವ್ವ ನನಗೆ ತಿಳೀದು. ಈಗ ನೀನು ಅವರಿಗೆ ತಲೆ ತುಂಬ ಬುದ್ಧಿ ತುರುಕಕ್ಕೆ ಬಂದಿದೀಯೂ ಅನ್ನು."

"ಬರೀ ಬಾಯಿ ಮಾತಿನಲ್ಲಿ ಬುದ್ಧಿ ಹೇಳಿದರೆ, ತಲೆಗೆ ಹೋಗುತ್ತಾ ಅವರಿಗೆ ತಿಳಿಯುವ ರೀತಿಯಲ್ಲಿ ಮಾಡಿ ತೋರಿಸಬೇಕು. ಅದಕ್ಕೆ ಈಗ ನನ್ನ ಯೋಚನೆ ಇಷ್ಟು: ನಾನು ನನ್ನ ಗುಂಪಿನವರೊಡನೆ ಸೇರಿ ಕೆಲವು ಸಣ್ಣ ನಾಟಕಗಳನ್ನು ಆಡಿಸುತ್ತೇನೆ. ಅದು ಈ ಗ್ರಾಮಸ್ಥರಿಗೆ ಮನದಟ್ಟಾಗಿ, ತಮ್ಮ ನಿಲುವನ್ನು ತಿಳಿದುಕೊಂಡರೆ ಸಾಕು. ಆಮೇಲೆ ಅಷ್ಟು ಕಷ್ಟವಾಗುವುದಿಲ್ಲ."

"ನಾಟಕಾನಾ? ಎಲ್ಲಿ ಆಡಿಸ್ತಿದೀಯಾ?" ಕೇಳಿದರು ಗೌಡರು.

"ನಿಮ್ಮ ಸಹಾಯವಿಲ್ಲದೆ ಆಗುತ್ಯೆ? ನೀವು ವಿಶಾಲವಾದ ಜಾಗದಲ್ಲಿ ಆದಷ್ಟು ಬೇಗ ನಾಟಕ ಆಡಲು ಸಾಧ್ಯವಾಗುವಂತೆ, ಚಪ್ಪರ ಹಾಕಿಸಿಕೊಡಿ. ಹಳ್ಳಿ ಜನರು ಕುಳಿತು ನೋಡಲು ಆಗುವಂತೆ, ಬಯಲುನ್ನ ಕ್ಲೀನ್ ಮಾಡಿಸಿ. ದೀಪ, ಮೈಕ್‌ಗಳನ್ನು ರೆಡಿ ಮಾಡಿಸಿ. ಹೂಂ. ಹಾಗೇ ಊರಿನಲ್ಲೆಲ್ಲಾ ಡಂಗೂರ ಸಾರಿಸಿ,.... ಕಾಸಿಲ್ಲದೆ ನೋಡಬಹುದು ಅಂದ್ರೆ ಹಳ್ಳಿ ಹೆಂಗಸರು, ಮಕ್ಕಳಂತೂ ಬಂದೇ ಬರ್ತಾರೆ."

"ಓ ಅದಕ್ಕೇನಂತೆ,? ಇವತ್ತೇ ನಮ್ಮ ಹಳ್ಳಿ ಹುಡುಗರಿಗೆ ಹೇಳಿ ನಿನಗೇನೇನು ಬೇಕೋ ಎಲ್ಲಾ ಸಿದ್ಧತೆ ಮಾಡ್ಸಿ ಕೊಡ್ತೀನಿ."

"ತುಂಬಾ ಸಂತೋಷ ಗೌಡ್ರೇ... ಮಾತಾಡ್ತಾ ಮಾತಾಡ್ತಾ ತುಂಬಾ ದೂರ ಬಂದ್ಬಿಟ್ಟಿದೀವಿ ಅಂತ ಕಾಣುತ್ತೆ. ವಾಪಸ್ಸು ಹೋಗೋಣ್ವಾ?"

"ಹೂಂ. ಊಟದ ಹೊತ್ತು ಆಯ್ತು. ಯಜಮಾನ್ತಿಗೆ ಹೇಳಿಬಿಟ್ಟಿದೀನಿ. ಪೇಟೆಯವರು ತಿನ್ನುವಂತಹ ಅಡಿಗೆ ಮಾಡಿಸು ಅಂತ. ನನಗೂ ಹಿಟ್ಟು, ಎಸರು ತಿಂದೂ ತಿಂದು ಬೇಜಾರಾಗಿ ಹೋಗಿದೆ."

"ಯಾಕೆ ಹಾಗಂದ್ರಿ ಗೌಡ್ರೆ, ನಮಗೂ ಹಿಟ್ಟು, ಎಸರೇ ಆಗ್ತಿತ್ತೂ. ನಮ್ಮ ಸ್ನೇಹಿತರಿಗೆ ಅದರ ರುಚಿ ಗೊತ್ತಿಲ್ಲ. ನನಗೂ ರುಚಿ ಮರೆತು ಹೋಗಿದೆ."

"ಓ ತಮಾಷೆ ಮಾಡ್ಬೇಡ ಬಿಡು." ಗೌಡರು ಅಂದರು. ಗಿರಿಜೆ ನಕ್ಕು ಹೇಳಿದಳು.

"ಆದ್ರೂ ಒಂದಿನ ಆ ಊಟ ಹಾಕಿಸ್ಲೇ ಬೇಕು. ನಿಮ್ಮ ಗೌಡತಿಗೆ ನಾನೇ ಹೇಳ್ತೀನಿ ಅಷ್ಟೆ"–ಇಬ್ಬರೂ ಸಣ್ಣಗೆ ನಕ್ಕರು.

ಅವರುಗಳು ವಾಪಸ್ಸು ಬರುವ ಹೊತ್ತಿಗೆ, ಗಿರಿಜೆಯ ಗೆಳೆಯರು, ಗೆಳತಿಯರು ತಮ್ಮ ಲಗೇಜ್‌ಗಳನ್ನು ತಂದಿದ್ದರು. ಅಟ್ಟದ ಮೇಲಿನ ಪಡಸಾಲೆ ತೆರವಾಗಿತ್ತು, ಶುಚಿ ಮಾಡಿಸಿದ್ದರು. ಊಟಕ್ಕೆ ಎಲ್ಲಾ ಸಿದ್ಧತೆ ಮಾಡಿದ್ದರು.

ಗೌಡರು ತಾವು ಹೇಳಿದಂತೆ, ಗಿರಿಜೆಗೆ ಅವಳ ಕಾರ್ಯಕ್ರಮ ನಡೆಸಿಕೊಡಲು ಅನುಕೂಲವಾಗುವಂತೆ ಎಲ್ಲಾ ಸಿದ್ಧತೆಗಳನ್ನು ಒದಗಿಸಿಕೊಟ್ಟಿದ್ದರು. ಊರಿನಲ್ಲೆಲ್ಲಾ ಡಂಗೂರ ಸಾರಿಸಿದ್ದರಿಂದ ಹಳ್ಳಿಯ ಜನರಿಗೆ ಕುತೂಹಲ, ಕೆಲವರು ಇವರನ್ನು ಇಣುಕಿಣಕಿ ನೋಡಿದ್ದರು. ಕೆಲವರು ಮಾತನಾಡಲು ಪ್ರಯತ್ನಿಸಿದ್ದರು. ಎಲ್ಲರಿಗೂ ತಮ್ಮ ಹಳ್ಳಿಯಲ್ಲಿ ಏನೋ ವಿಶೇಷ ನಡೆಯುತ್ತಿದೆಯೆಂಬ ಉತ್ಸಾಹ, ಸಂಭ್ರಮ.

ಮೊದಲೇ ತೀರ್ಮಾನವಾಗಿದ್ದಂತೆ ಕಾರ್ಯಕ್ರಮಗಳು ಸಮಯಕ್ಕೆ ಸರಿಯಾಗಿ ಪ್ರಾರಂಭವಾಯಿತು. ಮೊದಲ ದಿನ ಗಿರಿಜೆ ಒಂದೆರಡು ಮಾತುಗಳನ್ನಾಡಿದಳು.

"ಬಂಧುಗಳೇ, ಸ್ನೇಹಿತರೆ, ನಿಮ್ಮಗಳಿಗಾಗಿ ನಾವು ಕೆಲವು ನಾಟಕಗಳನ್ನು ಆಡಿ ತೋರಿಸಲಿದ್ದೇವೆ. ನಿಮಗೆ ಮೆಚ್ಚುಗೆಯಾಗುವುದೆಂದು ಭಾವಿಸಿದ್ದೇವೆ.

ಮೆಚ್ಚಿದವರು ಕೈ ಮೇಲೆತ್ತಿ ನಿಮ್ಮ ಅಭಿಪ್ರಾಯವನ್ನು ಸೂಚಿಸಬಹುದು. ಇದು ಬರೀ ಹಗುರವಾದ ನಾಟಕಗಳಲ್ಲ. ಇದರಲ್ಲಿ ಬರುವ ಮುಖ್ಯ ಉದ್ದೇಶಗಳನ್ನು ತಿಳಿದುಕೊಂಡು ಸಮಾಜದಲ್ಲಿ ಆ ಪಾತ್ರಗಳನ್ನು ಸಜೀವವಾಗಿ ತಂದರೆ, ಸಮಾಜದ ಉದ್ಧಾರವಾಗುವುದೆಂದು ನನ್ನ ಭಾವನೆ. ಇದು ಮುಖ್ಯವಾಗಿ ಹಳ್ಳಿಯ ಜನಗಳಿಗೆ ಅನ್ವಯಿಸುತ್ತದೆ. ಆದ್ದರಿಂದ ನನ್ನ ಈ ನಾಟಕಗಳು ಸಫಲವಾಗಲು ನೀವುಗಳು ಸಹಕರಿಸಬೇಕೆಂದು ಬಯಸುತ್ತೇನೆ. ನಮಸ್ಕಾರ" ಎಂದು ಹೇಳಿ ಮುಗಿಸಿದಳು.

ನಾಟಕ ಪ್ರಾರಂಭವಾದ ಕೂಡಲೇ ಗುಸು ಪಿಸು ಮಾತುಗಳನ್ನಾಡುತ್ತಿದ್ದ ಪ್ರೇಕ್ಷಕರು ಸುಮ್ಮನಾದರು. ಆಸಕ್ತಿಯಿಂದ ನೋಡಲಾರಂಭಿಸಿದರು. ಮೊದಲ ದಿನದ ನಾಟಕದ ಹೆಸರು 'ಕೊಲೆ'. ಒಬ್ಬ ಕುಡುಕನ ಸಂಸಾರದ ಚಿತ್ರಣ.

ಒಂದು ಬಡ ಕುಟುಂಬದ ಹಿರಿಯ, ಕುಡುಕ, ಕಷ್ಟಪಟ್ಟು ಗಳಿಸಿದ ಹಣವನ್ನೆಲ್ಲಾ ಕುಡಿತಕ್ಕೆ ಸುರಿದು ಮನೆಗೆ ಬರಿಗೈಯಲ್ಲಿ ಬರುತ್ತಾನೆ. ಮನೆಯಲ್ಲಿ ಎಲ್ಲರಿಗೂ ಉಪವಾಸ. ದಿನಾ ಗಂಡ ಹೆಂಡತಿಯರಿಗೆ ಜಗಳ. ಕುಡಿತದ ಅಮಲಿನಲ್ಲಿ ಹೆಂಡತಿಯನ್ನು ಹೊಡೆದು, ತನಗಾಗಿ ಬೇಯಿಸಿಟ್ಟಿದ್ದನ್ನು ತಿಂದು ಹೆಬ್ಬಾವಿನಂತೆ ಮಲಗುವನು. ಇದು ದಿನ ನಿತ್ಯದ ಪರಿಪಾಠ. ಇದನ್ನು ದಿನಾ ನೋಡುತ್ತಿದ್ದ ಅವರ ಮಕ್ಕಳಿಗೆ ಅಪ್ಪನನ್ನು ಕಂಡರೆ ತಾತ್ಸಾರ. ಬೆಳೆದು ದೊಡ್ಡವಳಾಗಿರುವ ಹಿರಿಯ ಮಗಳಿಗೆ, ತನ್ನದೇ ಚಿಂತೆ. ಅಪ್ಪ ಅಮ್ಮನಿಗೆ ತಿಳಿಯದಂತೆ, ಹಳ್ಳಿಯ ಕೆಲವು ಗಂಡಸರೊಡನೆ ಅನೈತಿಕ ಸಂಬಂಧ ಇಟ್ಟುಕೊಂಡು, ತನ್ನ ಆಸೆಗಳನ್ನು ಪೂರೈಸಿಕೊಳ್ಳುವಳು. ಅವಳಿಗಿಂತ ಚಿಕ್ಕವನಾದ, ಅವಳ ತಮ್ಮ ಅವರಿವರ ಮನೆಯಲ್ಲಿ ಸಣ್ಣ ಪುಟ್ಟ ಕೆಲಸಗಳನ್ನು ಮಾಡಿ, ಸಂಪಾದಿಸಿದ ಹಣವನ್ನು ಅಪ್ಪ ಅಮ್ಮನಿಗೆ ತಿಳಿಯದಂತೆ ಕುಡಿದು ಬರುತ್ತಿದ್ದ. ಚಿಕ್ಕವನು ಕುಡಿಯುವ ವಿಚಾರ ಅವನ ಅಕ್ಕನಿಗೆ ತಿಳಿಯುತ್ತದೆ. ಇದಕ್ಕೆ ಅಪ್ಪನೇ ಕಾರಣನೆಂದು ಸಿಟ್ಟು ಬರುತ್ತದೆ.

ಆದಿನ ಅಪ್ಪ ಕುಡಿದು ಮನೆಗೆ ಬಂದಾಗ, ಅಪ್ಪನನ್ನು ತರಾಟೆಗೆ ತೆಗೆದುಕೊಳ್ಳುತ್ತಾಳೆ. ನಿನ್ನ ಕುಡಿತ ಕಂಡು, ನಿನ್ನ ಮಗ ಇನ್ನೂ ಚಿಕ್ಕವನು ಕುಡಿದು ಹಾಳಾಗುತ್ತಿದಾನೆಂದು ಚಾಡಿ ಹೇಳುತ್ತಾಳೆ. ಅಪ್ಪ ಕೋಪದಿಂದ ಮಗನನ್ನು ಹೊಡೆದು ಬಡಿದು ಚೆನ್ನಾಗಿ ಬಾಯಿಗೆ ಬಂದಂತೆ ಬೈಯ್ಯುತಾನೆ. ಅಕ್ಕ ಚಾಡಿ ಹೇಳಿ ಹೊಡೆಸಿದಳು ಎಂಬ ಸಿಟ್ಟಿನಿಂದ, ತಮ್ಮ, ಅಕ್ಕನ ರಹಸ್ಯವನ್ನು ಬಯಲು ಮಾಡುತ್ತಾನೆ. ಬೇರೆ ಬೇರೆ ಗಂಡಸರನ್ನು ಕೂಡಿ ಕಾಲ ಕಳೆಯುವ ಅವಳು ನಮ್ಮ ಸಂಸಾರಕ್ಕೆ ಅವಮಾನ. ಅವಳ ಹೀನ ಕೆಲಸಕ್ಕಿಂತ, ನನ್ನ ಕುಡಿತ ಏನೂ ಕೆಟ್ಟದ್ದಲ್ಲ. ಅವಳಿಗೆ ಬುದ್ಧಿ ಹೇಳಲಾಗದೇ ನನ್ನ ಹೊಡಿತೀದೀಯ. ಅವಳ ಖರ್ಚು ನಿನಗೆ ಉಳಿಯುತ್ತದೆ. ಅದಕ್ಕೆ ನಿನಗೆ ಗೊತ್ತಿದ್ದರೂ ಸುಮ್ಮನಿದೀಯ ಎಂದು ಹಂಗಿಸುತ್ತಾನೆ. ತಾಯಿ

ಮಧ್ಯೆ ಪ್ರವೇಶಿಸಿ, ಇದಕ್ಕೆಲ್ಲಾ ನಿನ್ನ ಕುಡಿತವೇ ಕಾರಣ. ನನ್ನೊಡನೆ ಜಗಳವಾಡುವುದರಲ್ಲೇ ನಿನ್ನ ಕಾಲ ಕಳೆದೆ. ನಿನ್ನ ಉದಾಸೀನದಿಂದ ನಿನ್ನ ಮಕ್ಕಳು ಹಾಳಾದರು. ನಮ್ಮ ಸಂಸಾರ ಹಾಳಾಯಿತು ಎಂದು ಅಳುತ್ತಾಳೆ. ಇದೆಲ್ಲವನ್ನು ಕೇಳುತ್ತಾ ಕೇಳುತ್ತಾ ಅಪ್ಪನ ಕೋಪ ಏರಿ ಹೋಗುತ್ತದೆ. ತಡೆಯಲಾಗದೇ, ಆವೇಶದಿಂದ, ಅಲ್ಲಿಯೇ ಕಾಣುವಂತಿದ್ದ ಮಚ್ಚನ್ನು ತೆಗೆದುಕೊಂಡು, ಮಗಳನ್ನು ಮಚ್ಚಿನಿಂದ ಹೊಡೆದು ಕೊಲ್ಲುತ್ತಾನೆ. ಕುಡಿದು ಕೂತಿದ್ದ ಮಗನನ್ನೂ ಕೊಲ್ಲುತ್ತಾನೆ. ತಡೆಯಲು ಬಂದು, ಕಿರುಚಾಡುತ್ತಿದ್ದ ಹೆಂಡತಿಯನ್ನು ಹೊಡೆದು ಉರುಳಿಸುತ್ತಾನೆ. ನಡೆದ ಹಗರಣದ ಗಲಾಟೆಯನ್ನು ಕೇಳಿ ಅಕ್ಕ ಪಕ್ಕದವರು ಬರುತ್ತಾರೆ. ಅಲ್ಲಿನ ದೃಶ್ಯವನ್ನು ಕಂಡು ದಂಗಾಗುತ್ತಾರೆ. ಸಿಟ್ಟಿನ ಆವೇಶದಲ್ಲಿ ಎಲ್ಲರನ್ನೂ ಕಳೆದುಕೊಂಡ, ಅಪ್ಪ ಜೈಲು ಸೇರುತ್ತಾನೆ.

ಈ ನಾಟಕ ನೋಡಿ ಎಷ್ಟೋ ಜನ ಹೆಂಗಸರ ಕಣ್ಣಲ್ಲಿ ನೀರೂರಿತು. ತಮ್ಮಗಳ ಮನೆಯಲ್ಲಿ ಇಂತಹ ದುರಂತ ನಡೆಯುವ ಮೊದಲು ತಾವು ಎಚ್ಚೆತ್ತುಕೊಳ್ಳಬೇಕು ಎಂದು ನಿರ್ಧರಿಸಿದರು. ಸಾಕಷ್ಟು ಜನ ಕೈ ಮೇಲೆತ್ತಿ ಪ್ರೋತ್ಸಾಹ ನೀಡಿದರು. ಆ ದಿನದ ನಾಟಕ ಮುಗಿದಿತ್ತು.

ಎರಡನೆ ದಿನದ ನಾಟಕದ ಹೆಸರು "ಮಕ್ಕಳು ಅನಾಥರಲ್ಲ" ಎಂದು.

ಒಂದು ಕುಟುಂಬದ ಸದಸ್ಯರು, ಕೆಲವು ತಿಂಗಳ ಹಿಂದೆ ತಮ್ಮ ಮನೆಯ ಒಬ್ಬ ಹುಡುಗನಿಗೆ ಮದುವೆ ಮಾಡಿರುತ್ತಾರೆ. ಮದುವೆಯಾಗಿ ನಾಲ್ಕೈದು ತಿಂಗಳಾದರೂ ಹುಡುಗಿ ಗರ್ಭಿಣಿಯಾಗಲಿಲ್ಲವೆಂದು ಅವನ ಮನೆಯವರಿಗೆ ತಿರಸ್ಕಾರ. ಹೊಸದಾಗಿ ಮದುವೆಯಾಗಿದ್ದರಿಂದ ಗಂಡ ಹೆಂಡತಿಯೊಡನೆ ಪ್ರೀತಿಯಿಂದಿರುತ್ತಾನೆ. ಆದರೂ ಕ್ರಮೇಣ ಮನೆಯವರ ಮಾತುಗಳನ್ನು ಕೇಳಿಕೊಂಡು, ಹೆಂಡತಿಯನ್ನು ಬೈಯ ಲಾರಂಭಿಸುತ್ತಾನೆ.

ಗಂಡನೂ ಎಲ್ಲರಂತೆ ತನ್ನನ್ನು ಅಂದು ಆಡಿ ಬೈದು ಹೊಡೆದು ಹಿಂಸೆ ಮಾಡಲಾರಂಭಿಸಿದುದನ್ನು ಕಂಡು ಆ ಹುಡುಗಿ ನಿರಾಶಳಾಗುತ್ತಾಳೆ. ಒಂದು ದಿನ ಯಾರಿಗೂ ಕಾಣದಂತೆ ಹೋಗಿ, ತೋಟದ ಬಾವಿಯಲ್ಲಿ ಬೀಳುತ್ತಾಳೆ. ತೋಟದ ಬಾವಿಯ ಹತ್ತಿರ ಕೆಲಸ ಮಾಡುತ್ತಿದ್ದ ಒಬ್ಬ ಹುಡುಗನ ಕೂಗನ್ನು ಕೇಳಿ ಎಲ್ಲರೂ ಓಡಿ ಬರುತ್ತಾರೆ. ಬಾವಿಗೆ ಧುಮುಕಿ ಅವಳನ್ನು ಉಳಿಸುತ್ತಾನೆ ಒಬ್ಬ ಯುವಕ, ಆ ಯುವಕ ಆ ಊರಿನ ಗೌಡರ ಮನೆಗೆ ರಜದಲ್ಲಿ ಬಂದು ಕಾಲ ಕಳೆಯುತ್ತಿದ್ದ ಪೇಟೆಯ ಯುವಕ. ಸಾಕಷ್ಟು ಓದು ಬರೆದು ವಿಚಾರಗಳನ್ನು ತಿಳಿದುಕೊಂಡಿದ್ದ ಆ ಹುಡುಗನಿಗೆ, ಈ ಹೆಂಗಸು ಬಾವಿಗೆ ಯಾಕೆ ಬಿದ್ದಳೆಂಬ ಕಾರಣ ತಿಳಿಯುತ್ತದೆ. ಧೈರ್ಯ ವಹಿಸಿ, ಆ ಹೆಂಗಸಿನ ಗಂಡನನ್ನು ಕಂಡು ಮಾತನಾಡುತ್ತಾನೆ. ಮದುವೆಯಾಗಿ

ಇನ್ನು ಕೆಲವೇ ತಿಂಗಳಾಗಿವೆ. ಆದರೂ, ನಿಮಗಾಗಲೇ ಮಕ್ಕಳ ಆಸೆ. ಹಾಗಿದ್ದರೆ ಆರೋಗ್ಯಕೇಂದ್ರಕ್ಕೆ ಹೋಗಿ ನೀವಿಬ್ಬರೂ ಪರೀಕ್ಷೆ ಮಾಡಿಸಿಕೊಳ್ಳುವುದು ಸರಿ. ದೋಷ ನಿಮ್ಮಿಬ್ಬರಲ್ಲಿ ಯಾರಲ್ಲಾದರೂ ಇರಬಹುದು. ಬರೀ ಹೆಂಗಸರನ್ನೇ ದೂಷಿಸಬಾರದು. ಈಗ ಇವಳೇನಾದರೂ ಸತ್ತು ಹೋಗಿದ್ದರೆ ನೀವೆಲ್ಲ ಜೈಲಿಗೆ ಹೋಗಬೇಕಾದ ಗತಿ ಬರುತ್ತಿತ್ತು, ಎಂದ. ಯಾವುದೋ ಮುದುಕಿ, ಇವಳು ಸತ್ತಿದ್ದರೆ ಬೇರೆ ಮದುವೆ ಮಾಡುತ್ತಿದ್ದೆವು ಎನ್ನುವ ಮಾತು ಅವನ ಕಿವಿಗೆ ಬಿದ್ದಿತ್ತು.

ಅವನ ಉಪಕಾರಕ್ಕೆ ಕೈ ಮುಗಿದು, ಅವನ ಸಲಹೆಯಂತೆ ಗಂಡ ಹೆಂಡತಿ ಇಬ್ಬರೂ ಹತ್ತಿರದ ಆರೋಗ್ಯ ಕೇಂದ್ರಕ್ಕೆ ಹೋಗಿ ಪರೀಕ್ಷೆ ಮಾಡಿಸಿಕೊಳ್ಳುತ್ತಾರೆ. ಆಗ ನಿಜ ಸ್ಥಿತಿ ಗೊತ್ತಾಗುತ್ತದೆ. ಆ ಗಂಡಸಿನಲ್ಲೇ ದೋಷವಿರುತ್ತದೆ. ಇನ್ನೊಂದು ಮದುವೆಯಾದರೂ, ತನಗೆ ಮಕ್ಕಳಾಗದ ಸ್ಥಿತಿ ಇರುವುದನ್ನು ತಿಳಿದ ಅವನು ದುಃಖಿಸುತ್ತಾನೆ. ಅದನ್ನು ನೋಡಿದ ಡಾಕ್ಟರು ಸಲಹೆ ನೀಡುತ್ತಾನೆ. ಸಮಾಜದಲ್ಲಿ, ಮದುವೆ, ಮಕ್ಕಳು ಮಾತ್ರ ಜೀವನದ ಗುರಿ ಅಲ್ಲ. ಆದರೂ ಅವೆಲ್ಲ ನಡೆಯಲೇ ಬೇಕೆಂಬ ಸಂಪ್ರದಾಯ ರೂಢಿಗೆ ಬಂದಿದೆ. ಈಗ ನಿನ್ನ ಸ್ಥಿತಿಯಂತೆ ನೀನು ಬೇರೆ ಮದುವೆಯಾಗುವ ಹಾಗಿಲ್ಲ. ಈ ಕಾರಣದಿಂದ ನಿನ್ನ ಹೆಂಡತಿ ನಿನ್ನನ್ನು ಬಿಟ್ಟು ಬೇರೆ ಮದುವೆಯಾಗಬಹುದು. ಕಾನೂನು ಅದನ್ನು ಒಪ್ಪುತ್ತದೆ. ಆದರೆ ಆಕೆಗೆ ಹಾಗೆ ಮಾಡಲು ಇಷ್ಟವಿಲ್ಲ. ಈ ಕಾಲದಲ್ಲಿ ಮಕ್ಕಳಾಗಲು ಬೇಕಾದಷ್ಟು ಹೊಸ ಹೊಸ ವಿಧಾನಗಳು ಬಂದಿವೆ. ನಿಮ್ಮ ಮನೆಯವರು ಅದನ್ನು ಒಪ್ಪದಿರಬಹುದು. ಎಲ್ಲಕ್ಕಿಂತ ಯೋಗ್ಯವಾದ ಸಲಹೆ ಕೊಡ್ತೀನಿ. ಯೋಚಿಸಿ ನಿರ್ಧರಿಸಿ, ನಾನಾ ಕಾರಣ ಗಳಿಂದ ಹುಟ್ಟಿದ ಕೂಡಲೇ ಅಪ್ಪ ಅಮ್ಮನಿಂದ ದೂರವಾಗುವ ಅನಾಥ ಮಕ್ಕಳು ಬೇಕಾದಷ್ಟಿವೆ. ಅವುಗಳು ತಾವು ಹುಟ್ಟಬೇಕು ಎಂದು ಕೇಳಿ ಕೊಂಡೇನೂ ಹುಟ್ಟಿಲ್ಲ; ಅದು ಅವುಗಳ ತಪ್ಪಲ್ಲ. ಆದರೆ ಅನಾಥರಾಗಿಯೇ ಬೆಳೆಯಬೇಕಾದ ಸ್ಥಿತಿ ಅವುಗಳದ್ದು. ಅದನ್ನು ನಿವಾರಿಸಬೇಕೆಂದರೆ, ನಿಮ್ಮಂತಹ, ಮಕ್ಕಳ ಅಗತ್ಯ, ಆಸೆ ಇರುವ ಪೋಷಕರು, ಆ ಮಕ್ಕಳಲ್ಲಿ ಒಂದನ್ನು ನಿಮ್ಮ ಮಗುವನ್ನಾಗಿ ತೆಗೆದುಕೊಂಡು, ಸಾಕಿ, ಬೆಳೆಸಿ. ಉದ್ಧಾರ ಮಾಡಬಹುದು. ಅಂತಹ ಒಂದು ಅವಕಾಶ ಈಗ ನಿಮ್ಮ ಕೈಲಿದೆ. ನಿಮಗೆ ಒಪ್ಪಿಗೆಯಾದರೆ, ಒಂದು ಅನಾಥಾಶ್ರಮಕ್ಕೆ ಕರೆದುಕೊಂಡು ಹೋಗ್ತೀನಿ. ನಿಮಗೆ ಬೇಕಾದ ಮಗುವನ್ನು ಆಯ್ಕೆ ಮಾಡಿಕೊಳ್ಳಬಹುದು. ಹೆಂಡತಿಯೆದುರಿಗೆ, ಅವಮಾನಿತನಾಗಿ ನಿಂತಿದ್ದ ಗಂಡ, ಅವಳನ್ನು ನೋಡಿದ. ಅವಳ ಮುಖದಲ್ಲಿ ಆಸೆ ಇದ್ದಂತೆ ಕಂಡಿತು. ಯಾಕಾಗಬಾರದು ಎನಿಸಿತು. ತಾನೇ ಸರಿಯಿಲ್ಲದ ಮೇಲೆ ತನ್ನ ಮನೆಯವರು ಇನ್ನೇನೂ ಅನ್ನಲಾರರು, ಮಾಡಲಾರರು ಎಂಬ ಧೈರ್ಯ ಬಂದಿತು. ಡಾಕ್ಟರರ ಮಾತಿಗೆ ಒಪ್ಪಿ, 'ಅನಾಥಾಶ್ರಮಕ್ಕೆ' ಹೋಗಿ ಒಂದು ಗಂಡು

ಮಗುವನ್ನು ಎತ್ತಿಕೊಂಡು ಮನೆಗೆ ಬಂದರು. ಮನೆಯಲ್ಲಿ ರಂಪ ರಾದ್ಧಾಂತ. ಆಗ ಗಂಡ ಎಲ್ಲ ಸಂಗತಿಗಳನ್ನೂ ತಿಳಿಸಲೇ ಬೇಕಾಯಿತು. ಆಗ ಕುಟುಂಬದವರು ಏನೋ ನಷ್ಟವಾಗಿದೆಯೆಂದೆನಿಸಿ ಸುಮ್ಮನಾದರು. ಮನೆಯ ಒಬ್ಬ ಗಂಡಸು 'ಷಂಡ' ಎನ್ನಿಸಿಕೊಳ್ಳುವುದಕ್ಕಿಂತ, ಒಂದು ಮಗುವನ್ನು ಸಾಕಿ ಬೆಳೆಸುವುದು ಸಾವಿರ ಸಾಲು ಮೇಲು ಎನಿಸಿರಬೇಕು. ಅಂತೂ ಯಾವುದೋ ಕಾರಣದಿಂದ ಎಲ್ಲರೂ ಒಪ್ಪಿ ಸುಮ್ಮನಾದರು. ಮಗುವಿಗೆ ನಾಮಕರಣ ಮಾಡಿ 'ಪ್ರಕಾಶ' ಎಂದು ಹೆಸರಿಟ್ಟರು. ಅವನೇ ಮನೆಯ ಬೆಳಕಲ್ಲವೆ?"

ಈ ನಾಟಕವನ್ನು ಹಳ್ಳಿಗರು ಮೆಚ್ಚಿ, ಕೈ ಮೇಲೆತ್ತಿ ತಮ್ಮ ಬಲವನ್ನು ತೋರಿಸಿದರು.

ಎರಡನೇ ನಾಟಕವೂ ಒಳ್ಳೆಯ ಪ್ರತಿಕ್ರಿಯೆಯನ್ನು ಪಡೆಯಿತು.

ಮತ್ತೊಂದು ನಾಟಕದ ಹೆಸರು "ತಾಯಿ ಹೆಣ್ಣಲ್ಲವೆ?" ಅದರ ಸಾರಾಂಶ ಹೀಗೆ.

ಒಂದು ಸಂಸಾರದಲ್ಲಿ ಗಂಡ ಹೆಂಡತಿಗೆ ಬರೀ ಐದಾರು ಹೆಣ್ಣುಮಕ್ಕಳ ವಂಶ ಬೆಳೆಸಲು ಗಂಡು ಮಗುವಾಗಲಿ ಎಂಬ ಉದ್ದೇಶದಿಂದ, ಮನೆಯಲ್ಲಿ ಮಕ್ಕಳ ಸಂಖ್ಯೆ ಜಾಸ್ತಿಯಾಯಿತು. ಹಿರಿಮಗಳನ್ನು ತಂದೆತಾಯಿ ಸದಾ ದೂಷಿಸುವುದು. 'ನಿನ್ನ ಬೆನ್ನು ಚೆನ್ನಾಗಿಲ್ಲ. ನಿನ್ನ ಹಿಂದೆ ಬರೀ ಹೆಣ್ಣು ಹೆತ್ತೆ ಅಂತ. ಗಂಡ ಹೆಂಡತಿಯನ್ನು ಬೈಯುವುದು ನೀನೂ ಹೆಣ್ಣೇ...? ಒಂದು ಗಂಡು ಮಗು ಹೆರಲಾರದ ನೀನೆಂತಹ ಹೆಂಡತಿ ಎಂಬ ಮೂದಲಿಕೆ. ಇದನ್ನೆಲ್ಲ ಕಂಡ ಎರಡನೇ ಮಗಳು ತನ್ನ ಭವಿಷ್ಯವನ್ನು ತಾನು ಸರಿಮಾಡಿಕೊಳ್ಳಬೇಕೆಂದುಕೊಂಡು, ಶಾಲೆಗೆ ಹೋಗುವಳು. ಅವರಿವರ ಮನೆಯಲ್ಲಿ ಕೆಲಸ ಮಾಡಿ ಸ್ವಲ್ಪ ದುಡ್ಡು ಸಂಪಾದಿಸಿ ಇಟ್ಟುಕೊಂಡಿದ್ದಳು. ಮನೆಯಲ್ಲಿ ದೊಡ್ಡ ಮಗಳಿಗೆ ಕೆಲಸ. ತಾಯಿಯ ಬಾಣಂತನ ಮಾಡುವುದು. ತನ್ನ ತಂಗಿಯರನ್ನು ನೋಡಿಕೊಳ್ಳುವುದು. ಬೇಜಾರಿನಿಂದ ಮುದುಕಿಯಂತಾಗಿದ್ದಳು. ತಂಗಿಯಂತೆ ತಾನೂ ಓದು ಬರಹ ಕಲಿಯ ಬೇಕಾಗಿತ್ತು ಎನಿಸುವುದು. ಎಷ್ಟೋ ಸಲ ತಂಗಿಯ ಜೊತೆ ಕೆಲಸದವರ ಮನೆಗೆ ಹೋಗಿ, ಟಿ.ವಿ. ಕಾರ್ಯಕ್ರಮಗಳನ್ನು ನೋಡುವಳು. ಅವಳ ಮನಸ್ಸಿನಲ್ಲಿ ಏನೇನೋ ಸಂದೇಹಗಳು, ಸಮಸ್ಯೆಗಳು.

ಒಂದು ದಿನ ಅಕ್ಕ ತಂಗಿಯರಿಬ್ಬರೂ ಕುಳಿತು ಮಾತನಾಡಿಕೊಂಡರು. ಅವರಿಬ್ಬರಿಗೂ ಅಪ್ಪ ಅಮ್ಮನ ಧೋರಣೆ ಕಂಡು ಬೇಜಾರಾಗಿ ಹೋಗಿತ್ತು. ಆದರೂ ಅಪ್ಪ ಅಮ್ಮನಿಗೆ ಗಂಡು ಮಗು ಬೇಕೆಂಬ ಹಂಬಲದಲ್ಲಿ ನಡೆಯುತ್ತಿದ್ದ ಅಪ್ಪನ ಕಾಮದಾಹ ಕಂಡು ರೋಸಿ ಹೋಗಿತ್ತು. ಇಬ್ಬರೂ ಸೇರಿ "ಕುಟುಂಬಾ ಯೋಜನಾ ಕೇಂದ್ರ"ದ ಸಲಹೆಗಳನ್ನು ತಿಳಿದುಕೊಂಡಿದ್ದರು. ಒಂದು ದಿನ ತಾಯಿಯನ್ನು ಪುಸಲಾಯಿಸಿ, ಕೇಂದ್ರಕ್ಕೆ ಕರೆದುಕೊಂಡು ಹೋಗಿ, ಮಕ್ಕಳಾಗದಂತೆ 'ವಂಕಿ'ಯನ್ನು

ಹಾಕಿಸಿಕೊಂಡು ಕರೆದುಕೊಂಡು ಬಂದರು.

ತಾಯಿ ಈ ಸಂಗತಿಯನ್ನು ಗಂಡನಿಗೆ ತಿಳಿಸಿದಳು. ಅಪ್ಪ ಹೆಣ್ಣು ಮಕ್ಕಳ ಈ ಅಧಿಕ ಪ್ರಸಂಗತನಕ್ಕೆ ರೇಗಿ ಇಬ್ಬರನ್ನೂ ಚೆನ್ನಾಗಿ ಹೊಡೆದ. ಕೆರಳಿದ ಹುಡುಗಿಯರೂ ಕೂಗಾಡಿದರು. "ಯಾವ ರಾಜವಂಶ ನಿಂತು ಹೋಗುತ್ತೆ ಅಂತ ನಿನಗೆ ಗಂಡು ಮಕ್ಕಳು ಬೇಕು? ಯಾವ ಆಸ್ತಿ ಮಾಡಿಟ್ಟಿದೀನಿ ಅಂತ ಅದನ್ನು ಉಳಿಸಿಕೊಳ್ಳಲು ನಿನಗೆ ಮಗಬೇಕು? ಹೆಣ್ಣು ಮಕ್ಕಳಾಗಿ ಹುಟ್ಟಿದ್ದು ನಮ್ಮ ತಪ್ಪೇನಲ್ಲ. ಅದಕ್ಕೂ ನೀವೇ ಕಾರಣರು. ನಿನಗೆ ಹೆಂಡತಿ ಬೇಕು. ಹೆಣ್ಣು ಮಕ್ಕಳು ಅಸಹ್ಯ. ಅಮ್ಮನಿಗೆ? ತಾನೇ ಹೆಣ್ಣು ಅಂತಹುದರಲ್ಲಿ ತನಗೆ ಗಂಡು ಮಗಬೇಕು. ನಿಮ್ಮ ತಪ್ಪಿನಿಂದ ಹುಟ್ಟಿದ ನಮಗೆ ಅನ್ಯಾಯವಾಗುವುದನ್ನು ನಾವು ಸಹಿಸಬೇಕಾ? ನಮಗೋಸ್ಕರ ನೀವು ಏನೇನು ಕೂಡಿಟ್ಟಿದೀರಿ? ವಿದ್ಯಾಭ್ಯಾಸದ ಚಿಂತೆ ಮಾಡಿದೀರಾ? ಮದುವೆ ಯೋಚನೆ ಮಾಡಿದೀರಾ? ಇದು ಇನ್ನಾ ಮುಂದೆ ಹುಟ್ಟ ಬಹುದಾಗಿದ್ದ ಮಕ್ಕಳ ಹಣೆ ಬರಹ ಕೂಡಾ. ಮುಂದೆ ಕೂಡಾ ಗಂಡು ಮಗನೇ ಹುಟ್ಟುತ್ತಾನೆ ಅಂತ ಏನು ಸಾಕ್ಷಿ? ನಿಮ್ಮಂತಹವರನ್ನು ಅಪ್ಪ ಅಮ್ಮ ಅಂತ ಹೇಳಿಕೊಳ್ಳೋಕ್ಕೆ ನಮಗೆ ನಾಚಿಕೆ ಆಗುತ್ತೆ. ಇನ್ನು ಮೇಲೆ ನಮ್ಮನ್ನೇ ಗಂಡು ಮಕ್ಕಳು ಅಂತ ಭಾವಿಸಿ ಸಾಕಲು ಸಾಧ್ಯವಾದರೆ ಇಟ್ಟುಕೊಳ್ಳಿ. ಇಲ್ಲದಿದ್ದರೆ ನಮ್ಮ ಪಾಡಿಗೆ ನಮ್ಮನ್ನು ಇರಲು ಬಿಡಿ. ಹೆಣ್ಣು ಮಕ್ಕಳ ಆಶ್ರಮಕ್ಕೆ ಸೇರಿಕೊಂಡು ನಮ್ಮನ್ನು ನಾವು ನೋಡಿಕೊಳ್ಳುತ್ತೇನೆ. ಬೇಕಾದರೆ, ಹುಟ್ಟಿರುವ ಈ ಮಕ್ಕಳನ್ನು ತಂದು ಅಲ್ಲಿಗೆ ಸೇರಿಸು." ಎಂದು ಹೇಳಿ ಇಬ್ಬರೂ ಮನೆಯಿಂದ ಆಚೆ ನಡೆಯುತ್ತಾರೆ.

ಪ್ರೇಕ್ಷಕರು ಅತಿ ಮೌನಿಗಳಾಗಿದ್ದರು. ಯಾಕೋ ಈ ನಾಟಕವನ್ನು ಹೆಚ್ಚಿನ ಜನ ಮೆಚ್ಚಿದಂತೆ ಕಾಣಲಿಲ್ಲ. ಮೇಲೆ ಕೈ ಎತ್ತಿದವರ ಸಂಖ್ಯೆ ಬಹಳ ಕಮ್ಮಿ. ಜನರ ಗಂಡು ಮಕ್ಕಳ ವ್ಯಾಮೋಹ ಈಗಲೇ ಕಮ್ಮಿಯಾಗಲು ಅಸಾಧ್ಯ ಎಂದುಕೊಂಡಳು ಗಿರಿಜೆ.

ನಾಲ್ಕನೇ ನಾಟಕ 'ಬಲಿಯಾದವಳು' ಸುಮಾರಾಗಿ ಅನುಕೂಲಸ್ಥರ ಮನೆ. ಆದರೂ ಹಳೆಯ ಸಂಪ್ರದಾಯಗಳಿಗೆ ಅಂಜಿಕೊಂಡಿದ್ದವರು. ಮನೆಯಲ್ಲಿ ಸಾಕಷ್ಟು ಮಕ್ಕಳು. ಹಿರಿಯ ಹುಡುಗಿಗೆ ಮೈ ನೆರೆಯುವ ಮೊದಲೇ ಮದುವೆ ಮಾಡುತ್ತಾರೆ. ಮದುವೆಯಾದವನು ಹುಡುಗಿಗಿಂತ ಹದಿನೈದು ಹದಿನಾರು ವರ್ಷ ದೊಡ್ಡವನು. ನೋಡಲು ಭೀಮಕಾಯ, ಪೇಟೆಯವನು, ಆಗ ಈಗ ಹೆಣ್ಣಿನ ಸಹವಾಸದ ರುಚಿ ಕಂಡವನು. ಅವನನ್ನು ನೋಡಿ ಹುಡುಗಿ ಹೆದರಿದಳು. ಹುಡುಗಿ ಸ್ವಲ್ಪ ಕೃಶಕಾಯ. ಎಲ್ಲರೂ ಚೆನ್ನಾಗಿ ಆರೈಕೆ ಮಾಡಿದರೆ, ಮೈಕೈ ತುಂಬಿಕೊಂಡು ಚೆನ್ನಾಗುತ್ತಾಳೆ ಎಂದು ಭಾವಿಸುತ್ತಾರೆ. ಅವಳು ದೊಡ್ಡವಳಾಗುವುದನ್ನೇ ಕಾದಿದ್ದು, ಶೋಭನದ

ಸಮಾರಂಭ ನಡೆಸುತ್ತಾರೆ. ಸೂಕ್ಷ್ಮ ಸ್ವಭಾವದ, ಸಣಕಲು ಶರೀರದ ಹುಡುಗಿ ಅತಿ ಹೆದರಿದ್ದಾಳೆ. ಅವಳ ಬರುವಿಕೆಯನ್ನೇ ಕಾಯುತ್ತಿದ್ದ ಅವನು ಹುಲಿಯಂತೆ ಅವಳ ಮೇಲೆ ಎಗರುತ್ತಾನೆ. ಮದುವೆಯಾದ ಹೊಸ ಹೆಂಡತಿಯನ್ನು ಹೇಗೆ ಓಲೈಸಿಕೊಳ್ಳಬೇಕೆಂದು ತಿಳಿಯದ ಅವನು ಕ್ರೂರವಾಗಿ ನಡೆದುಕೊಳ್ಳುತ್ತಾನೆ. ಅವನ ಕ್ರೂರತೆಗೆ ಹೆದರಿದ ಆ ಹುಡುಗಿಯ ಹೃದಯಕ್ರಿಯೆ ನಿಂತು ಹೋಗಿರುತ್ತದೆ.

ಮಿಸುಕಾಡದೆ ಮಲಗಿದ್ದ ಅವಳನ್ನು ಕಂಡು ಅವನು ಗಾಬರಿಯಾಗುತ್ತಾನೆ. ಅಲುಗಾಡಿಸಿ ನೋಡಿದರೆ ಆ ಹುಡುಗಿ ಸತ್ತು ಹೋಗಿದ್ದಾಳೆ. ಇನ್ನು ತನ್ನ ಮೇಲೆ ಕೊಲೆಯ ಆರೋಪ ಬರುತ್ತದೆ ಎಂದು ಹೆದರಿದ ಅವನು ಅಲ್ಲಿಂದ ಪರಾರಿಯಾಗುತ್ತಾನೆ. ಬೆಳಗಾದ ಮೇಲೆ, ಎಷ್ಟೊತ್ತಾದರೂ ಏಳದ ದಂಪತಿಗಳನ್ನು ಎಬ್ಬಿಸಲು ಬಂದ ಮನೆಯವರು ಹುಡುಗಿಯ ಹೆಣವನ್ನು ಕಂಡು ಗಾಬರಿಯಾಗುತ್ತಾರೆ. ಅವನನ್ನು ಹುಡುಕಲು ಕೆಲವರು ಓಡುತ್ತಾರೆ. ಇಷ್ಟರಲ್ಲಿ ಈ ಸುದ್ಧಿಯನ್ನು ಪೋಲಿಸಿನವರಿಗೆ ತಿಳಿಸುತ್ತಾರೆ. ಹದಿನೆಂಟು ವರ್ಷ ತುಂಬದ, ಮೆಜಾರಿಟಿಗೆ ಬಂದಿರದ ಹುಡುಗಿಗೆ ಮದುವೆ ಮಾಡಿ, ಆಕೆಯ ಸಾವಿಗೆ ಕಾರಣನಾದ ಅಪ್ಪನನ್ನು ಪೋಲೀಸರು ಬಂಧಿಸುತ್ತಾರೆ. ತಲೆ ತಪ್ಪಿಸಿಕೊಂಡ ಗಂಡನನ್ನು ಹುಡುಕಿಸಲು ಶುರುಮಾಡುತ್ತಾರೆ. ಮಗಳನ್ನು ಕಳೆದುಕೊಂಡ ದುಃಖ, ಗಂಡ ಜೈಲು ಸೇರಿದ ತಾಪ, ತಮ್ಮ ಮನೆಗೆ ತಟ್ಟಿದ ಶಾಪ ಕಂಡು, ತಾಳಲಾರದೇ ತಾಯಿ ತನ್ನ ಉಳಿದ ಮಕ್ಕಳೊಡನೆ ಬಾವಿಗೆ ಹಾರಿಕೊಳ್ಳುತ್ತಾಳೆ.

ಈ ನಾಟಕ ಕೂಡಾ ಹೆಚ್ಚಿಗೆ ಜನರ ಮೆಚ್ಚುಗೆ ಗಳಿಸಲಿಲ್ಲ. ಚಿಕ್ಕ ವಯಸ್ಸಿನಲ್ಲಿ ಮದುವೆ ಮಾಡುವುದು ತಪ್ಪೆಂದು ಅವರಿಗೆ ಅನ್ನಿಸಿರಲಾರದು ಎಂದುಕೊಂಡಳು ಗಿರಿಜೆ. ಆದರೂ ಕೆಲವು ಹೆಂಸರು ತಲೆ ತಗ್ಗಿಸಿ ಅತ್ತಿದ್ದರು.

ಕಡೆಯ ನಾಟಕ, 'ಸಾಲಗಾರ', ಈ ನಾಟಕದಲ್ಲಿ ಒಂದು ದೊಡ್ಡ ಸಂಸಾರ. ಮನೆಯಲ್ಲಿ ದುಡಿಯುವವರು ಇಬ್ಬರು ತಿನ್ನುವವರು ಹತ್ತು ಮಂದಿ. ಹೊಟ್ಟೆಗಾದರೆ ಬಟ್ಟೆಗಿಲ್ಲ. ಬಟ್ಟೆಗಾದರೆ ಹೊಟ್ಟೆಗಿಲ್ಲ ಎನ್ನುವ ಸ್ಥಿತಿ. ಆದರೆ ಖರ್ಚು ತೂಗಿಸದಷ್ಟು ಸಾಲದ ಹೊರೆ. ಸಾಲದ ಬಡ್ಡಿ, ಅಸಲು ತೀರಿಸಲಾಗದೇ, ಇದ್ದ ಒಂದು ಚೂರು ನೆಲವನ್ನೂ ಸಾಹುಕಾರನ ಬಳಿ ಅಡವಿಟ್ಟಾಗಿದೆ. ಆ ಸಾಹುಕಾರ ಕೊಟ್ಟ ಹಣವೆಷ್ಟು? ಬರೆದ ಲೆಖ್ಖವೆಷ್ಟು, ಅದರ ಎರಡರಷ್ಟು ಬೆಲೆ ಬಾಳುವ ಜಮೀನನ್ನು ತನ್ನ ವಶ ಮಾಡಿಕೊಂಡಿದ್ದಾನೆ ಮತ್ತೆ ಮತ್ತೆ ಸಾಲ ಕೊಟ್ಟಿದ್ದಾನೆ. ಯಾವುದೂ ಸರಿಯಾಗಿ ತಿಳಿಯದು.

ದುರದೃಷ್ಟವಶಾತ್, ಅಕಸ್ಮಾತಾಗಿ ಅಪ್ಪನಿಗೆ ಅನಾರೋಗ್ಯ ಕಾಣಿಸಿಕೊಂಡು ಮಲಗಿದವನು ಮೇಲೇಳಲಿಲ್ಲ. ಔಷಧದ ಖರ್ಚು, ಮತ್ತೆ ಸಾಲ ಬೆಳೆಯಿತು.

ತಂದೆ ತೀರಿಕೊಂಡ, ಆ ಖರ್ಚು, ಮತ್ತೆ ಸಾಲ ಮತ್ತೆ ಸಾಲ. ಮನೆಯ ಹಿರಿಮಗನಿಗೆ ಸಾಕು ಸಾಕಾಯಿತು. ಎಲ್ಲಾ ಮುಗಿದು ಬಿಡುವಾದಾಗ ಒಂದು ದಿನ ಸಾಲದ ವಿವರಗಳನ್ನು ತಿಳಿದುಕೊಳ್ಳಬೇಕೆಂದು ಸಾಹುಕಾರನ ಮನೆಗೆ ಹೋದ. ಸಾಹುಕಾರ ಎಲ್ಲಾ ಲೆಕ್ಕ ಪರಿಶೀಲಿಸಿದಂತೆ ನೋಡಿ, ಇನ್ನು ಎರಡು ಸಾವಿರ ರೂ ಬಾಕಿ ಇದೆ ಎಂದ. ಅದನ್ನು ಕೇಳಿ ಆ ಹುಡುಗ ಕಂಗಾಲಾದ. ಇದನ್ನೆಲ್ಲಾ ಪಕ್ಕದಲ್ಲಿ ನಿಂತು ನೋಡುತ್ತಿದ್ದ ಸಾಹುಕಾರನ ಮಗ ಚುರುಕಾದ. ಸಾಲಗಾರನ ಮುಖದಲ್ಲಿದ್ದ ಕೆಟ್ಟ ಕಳೆ ಅವನನ್ನು ಯೋಚಿಸುವಂತೆ ಮಾಡಿತು. ಅಪ್ಪ ಇಲ್ಲದ ಸಮಯದಲ್ಲಿ ಆ ಖಾತೆಗಳನ್ನು ತೆರೆದು ನೋಡಿದ. ಆ ಹುಡುಗನ ತಂದೆ ಸಾಯುವ ಮೊದಲು ಇದ್ದ ಸಾಲದ ಹಣ ಕೇವಲ ೫೦೦ರೂಗಳು. ಅದನ್ನು ೫೦೦೦ ಎಂದು ತಿದ್ದಿ, ಅವನ ಜಮೀನನ್ನು ಒತ್ತೆ ಇಟ್ಟುಕೊಂಡಿದ್ದೂ ಅಲ್ಲದೆ, ಅವನ ಸಾಲದ ಭಾರ ಕಡಿಮೆ ಮಾಡಿದ್ದೇನೆಂದು ಮಾತಾಡಿದ್ದ.

ಈಗ ಮಗನಿಗೆ ಕೊಟ್ಟಿದ್ದ ಹಣ ಕೇವಲ ೨೦೦ರೂ. ಮಾತ್ರ. ಅದನ್ನು 1200 ಎಂದು ತಿದ್ದಿ ಮೋಸ ಮಾಡಿದ್ದ. ಇದನ್ನು ನೋಡಿದ ಸಾಹುಕಾರನ ಮಗನಿಗೆ, ಅಪ್ಪನಿಗೆ ತಕ್ಕ ಬುದ್ಧಿ ಕಲಿಸಬೇಕು ಎನಿಸಿತು. ಆ ಕಾಗದ ಪತ್ರಗಳನ್ನು ಆ ಪುಸ್ತಕದಿಂದ ಹರಿದುಕೊಂಡು ಅದನ್ನು ತಂದು, ಆ ಹುಡುಗನಿಗೆ ತೋರಿಸಿದ. ನಿಮ್ಮಗಳಿಗೆ ಓದು ಬರಹ ಬರದಿದ್ದರಿಂದ ಎಷ್ಟು ಸುಲಭವಾಗಿ ಮೋಸ ಹೋಗುತ್ತೀರೆಂದು ತಿಳಿಸಿದ. ಅವನಿಗೆ ಎಲ್ಲಾ ವಿವರ ತಿಳಿಸಿ, ಅವನ ಎದುರಿಗೆ ಆ ಕಾಗದಗಳನ್ನು ಹರಿದೆಸೆದ. ಇನ್ನು ಮೇಲೆ ಮತ್ತೆ ಇಂತಹ ತೊಂದರೆಗಳಿಗೆ ಬೀಳಬಾರದೆಂದು ತಿಳಿಸಿದ. ಈಗಲೂ ನಾಲ್ಕಕ್ಷರ ಕಲಿಯುವ ಇಚ್ಛೆ ಇದ್ದರೆ, ವಯಸ್ಕರ ಶಿಕ್ಷಣ ಶಾಲೆಗೆ ಸೇರಿ ಸಾಯಂಕಾಲದ ವೇಳೆಯಲ್ಲಿ ಕಲಿಯಬಹುದು ಎಂದು ತಿಳಿಸಿದ.

ಸಾಹುಕಾರನ ಮಗನ ಮಾರ್ಗದರ್ಶನದಿಂದ ಈಗ ಆ ಹುಡುಗ ಕಲಿತವನು. ವಿದ್ಯಾವಂತ. ಕೂಲಿ ಕೆಲಸದ ಜೊತೆಗೆ, ಅಂಗಡಿ ಲೆಖ್ಖ ಬರೆಯುವ ಕೆಲಸದಿಂದ ಸಂಪಾದಿಸುತ್ತಾನೆ. ತನ್ನ ಮಕ್ಕಳಿಬ್ಬರನ್ನು ಸ್ಕೂಲಿಗೆ ಕಳಿಸುತ್ತಿದ್ದಾನೆ. ಮಕ್ಕಳು ಓದಿ, ವಿದ್ಯಾವಂತರಾಗಿ ದೊಡ್ಡ ಕೆಲಸಕ್ಕೆ ಸೇರಿ ಚೆನ್ನಾಗಿ ಸಂಪಾದಿಸಲಿ ಎನ್ನುವ ಆಸೆ ಅವನದು. ತನ್ನ ಜೊತೆಗಾರರಿಗೂ ಓದು ಬರಹ ಕಲಿಯಲು 'ವಯಸ್ಕರ ಶಾಲೆ'ಯನ್ನು ಸೇರಲು ಉಪದೇಶ ಮಾಡುತ್ತಾನೆ.

ಈ ನಾಟಕ ಸಾಕಷ್ಟು ಜನರ ಮೆಚ್ಚುಗೆ ಗಳಿಸಿತು. ಎಲ್ಲರೂ ಕೈ ಎತ್ತಿ ಸಂತೋಷ ಸೂಚಿಸಿದರು. ಚಪ್ಪಾಳೆಯನ್ನು ತಟ್ಟಿದರು.

ಆಗ ಗಿರಿಜ ಮತ್ತೆ ನಾಲ್ಕು ಮಾತುಗಳನ್ನಾಡಿದಳು. "ಈ ನಾಟಕಗಳು ಕೇವಲ ಮನೋರಂಜನೆಗಾಗಿ ಅಲ್ಲ. ಜನರಲ್ಲಿ ತಿಳುವಳಿಕೆಯನ್ನು ಮೂಡಿಸುವ ಉದ್ದೇಶ

ಇದರ ಹಿಂದೆ ಇದೆ, ಅಂತ ಅರ್ಥವಾಗಿರಬಹುದು.

ಈಗಾಗಲೇ ನಿಮಗೆಲ್ಲ ತಿಳಿದಿರುವಂತೆ, ಸರಕಾರದವರು, ಹಳ್ಳಿಗರನ್ನು, ಹಿಂದುಳಿದವರನ್ನು ಉದ್ಧರಿಸಲು ನಾನಾ ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ. ಆದರೆ ಎಷ್ಟೋ ಕಡೆ ಅದಕ್ಕಾಗಿ ಸರಕಾರದಿಂದ ಬಿಡುಗಡೆಯಾದ ಹಣ, ಗ್ರಾಮಸ್ಥರನ್ನು ಬಂದು ತಲಪುವುದೇ ಇಲ್ಲ. ಅಜ್ಞಾನಿಗಳಾಗಿ, ಸುಮ್ಮನಿರುವುದರಿಂದ, ಹಿಂದೆ ನಡೆಯುವ ಕುತಂತ್ರಗಳ ಅರಿವೇ ಇರುವುದಿಲ್ಲ.

ಸಾಮಾನ್ಯವಾಗಿ ಈಗ ಎಲ್ಲಾ ಹಳ್ಳಿಗಳಲ್ಲೂ, ದೀಪ ಇದೆ. ಟಿ.ವಿ. ಇದೆ, ರೇಡಿಯೋ ಇದೆ. ರೇಡಿಯೋದಿಂದ ಬರೀ ಸಿನಿಮಾ ಹಾಡುಗಳನ್ನು ಕೇಳಿ ಕಿವಿ ತುಂಬಿಸಿಕೊಳ್ಳುವವರೇ ಜಾಸ್ತಿ. ಯಾರ ಮನೆಯಲ್ಲಾದರೂ ಸರಿ, ಕುಳಿತು ಟಿ.ವಿಯಲ್ಲಿ 'ಚಿತ್ರಮಂಜರಿ' ಸಿನಿಮಾ, ನೋಡ್ತೀರಿ. ಅದೇ ಹಳ್ಳಿಗರ ಉದ್ಧಾರಕ್ಕೆಂದು ರೂಪಿಸಿರುವ ಕಾರ್ಯಕ್ರಮಗಳನ್ನು ರೇಡಿಯೋದಲ್ಲಿ ಕೇಳುವುದಿಲ್ಲ. ಟಿ.ವಿಯಲ್ಲಿ ನೋಡುವುದಿಲ್ಲ. ಅದರಿಂದ ನಿಮಗೆ ಸರಕಾರದವರಿಗೂ, ನಿಮಗೂ ಅಂತರ ಎಲ್ಲಿದೆ? ಎಷ್ಟಿದೆ? ಏನಾಗುತ್ತಿದೆ. ಎನ್ನುವುದರ ಅಂದಾಜು ನಿಮಗೆ ತಿಳಿದಿಲ್ಲ.

ನಿಮಗೆಲ್ಲ ಇರುವುದು ಬಡತನವಲ್ಲ. ಸೋಮಾರಿತನ, ನಿಮ್ಮ ಅನ್ನವನ್ನು ನೀವು ದುಡಿದು ತಿನ್ನುವ ಶಕ್ತಿ ನಿಮಗಿದೆ. ಮೈಮುರಿದು ಕೆಲಸ ಮಾಡಿ, "ಕೈ ಕೆಸರಾದರೆ ಬಾಯಿ ಮೊಸರು ಎಂಬ ಗಾದೆ ಮಾತಿದೆ. ಆ ಸುಖದ ಅರಿವು ನಿಮಗಾಗುತ್ತದೆ. ಏಳಿ ಎದ್ದೇಳಿ. ಈಗಲಾದರೂ ಎಚ್ಚೆತ್ತುಕೊಳ್ಳಿ. ನಿಮ್ಮ ಸಂಪತ್ತನ್ನ ಉಳಿಸಿಕೊಳ್ಳಿ. ಪರರ ಪಾಲಾಗುವುದನ್ನ ತಪ್ಪಿಸಿ. ಗಿರಿಜೆ ಆವೇಶದಿಂದ ಮಾತನಾಡಿದಾಗ ಸಭಿಕರು ಚಪ್ಪಾಳೆ ತಟ್ಟಿದರು.

ನಾನು ಕೆಲವು ದಿನಗಳಿಂದ ನಿಮ್ಮ ಹಳ್ಳಿಯಲ್ಲಿ ಆಡಿಸಿದ್ದು ಬರೀ ನಾಟಕವಲ್ಲ. ಹಳ್ಳಿಗಳಲ್ಲಿ, ನಮ್ಮ ಸಮಾಜಗಳಲ್ಲಿ ನಡೆಯುತ್ತಿರುವ ದುರಂತಗಳು. ಈ ದುರಂತಗಳು ನಿಮ್ಮಲ್ಲೇ ನಡೆಯುತ್ತಿವೆ. ಆದರೆ ನಿಮಗೆ ಅದರ ಅರಿವಿಲ್ಲ. ಅದನ್ನು ನಾಟಕದ ದೃಶ್ಯಗಳ ಮೂಲಕ ನೀವೇ ನೋಡುವಂತೆ ತೋರಿಸಿದ್ದೇನೆ. ಇನ್ನಾದರೂ ಸಮಾಜದ ಈ ಪಿಡುಗುಗಳು ಕಡಿಮೆಯಾಗುತ್ತಾ ಬಂದರೆ, ನನ್ನ ಈ ಶ್ರಮ ಸಾರ್ಥಕವಾಗುತ್ತದೆ. ಜನರು ಎಚ್ಚೆತ್ತುಗೊಂಡು ತಮ್ಮನ್ನ ತಾವು ಸುಧಾರಿಸಿಕೊಂಡರೆ, ನನ್ನ ಈ ಪ್ರಯತ್ನಕ್ಕೆ ಪ್ರತಿಫಲ ಸಿಕ್ಕಂತಾಗುತ್ತದೆ. ಮತ್ತೊಮ್ಮೆ ಎಲ್ಲರೂ ಚಪ್ಪಾಳೆ ತಟ್ಟಿದರು. ಗಿರಿಜೆ ಎಲ್ಲರಿಗೂ ವಂದಿಸಿ, ತನ್ನ ಸ್ಥಳದಲ್ಲಿ ಕುಳಿತರು.

ಪಟೇಲರು ಎದ್ದು ನಿಂತು ಮಾತನಾಡಿದರು. "ಈ ಗಿರಿಜವ್ವ ನಮ್ಮ ಹಳ್ಳಿಯ ಹುಡ್ಗೀನೇ. ಹೆಂಗೆ ಜಾಣೆಯಾಗವ್ಳೆ ಕಂಡ್ರಾ?.... ತಾನ್ಹುಟ್ಟಿದ ಹಳ್ಳಿ ಅಂದ್ರೆ ಎಷ್ಟು ಪ್ರೀತಿ ಮಡಗವ್ಳೆ ಅಂತ ಕಂಡ್ರಾ? ನಮ್ಮ ಹಳ್ಳೀನ ಉದ್ಧಾರ ಮಾಡ್ಬೇಕು. ನಮ್ಮಳ್ಳಿ

ಜನ ಎಚ್ಚೆತ್ತು ಕೊಳ್ಬೇಕು ಅಂತ ಗಿರಿಜವ್ವರಿಗೆ ಶಾನೇ ಆಸೆ. ನೋಡಿದ್ರೋ ಇಲ್ವೋ, ಜನ ಹೆಂಗೆಂಗೆ ಕೆಟ್ಟಾರಿ ಹಿಡಿದವ್ರೆ ಅಂತ. ಇನ್ನಾದ್ರೂ ಒಳ್ಳೆ ದಾರಿ ಹಿಡ್ದು ಸುಖ ವಾಗಿರ್ಬೇಕು ಅಂತ ಶಪಥ ಮಾಡ್ಕಳಿ. ಎಲ್ರೂ ಜೈ ಅಂತ ಕೂಗ್ಪಾಕಿ ಗಿರಿಜವ್ವಂಗೆ... 'ಜಯವಾಗಲಿ' ಜನರು ಕೈ ಎತ್ತಿ ಕೂಗಿದರು, ಪಾತ್ರಧಾರಿಗಳು ಬಂದು ಸಂತಸದಿಂದ ವೀಕ್ಷಕರ ಕಡೆ ಕೈಯಾಡಿಸಿದರು.

ಈಗ ಕಾರ್ಯಕ್ರಮ ಮುಗಿದೈತಿ. ಎಲ್ರೂ ಎದ್ದು ನಿಂತ್ಕೊಂಡು ಜನಗಣ ಮನ ಹೇಳಿ..." ಪಟೇಲರು ಜನಗಣಮನ ಪ್ರಾರಂಭಿಸಿದರು. ಜನರು ದನಿಗೂಡಿಸಿದರು. ಕಡೆಯಲ್ಲಿ ಜೈ ಹಿಂದ್ ಎಂದು ಕೂಗಿ, ಜನರು ಚದುರಿದರು.

* * *

ಆ ರಾತ್ರಿ ನಾಟಕದ ಮಂಡಳಿಯವರಿಗೆಲ್ಲ ಬೆಳದಿಂಗಳ ಊಟವನ್ನ ಚೇರ್‌ಮೆನ್ನರ ಮನೆಯ ಅಂಗಳದಲ್ಲಿ ಸಿದ್ಧಪಡಿಸಿದ್ದರು. ನಾಟಕದ ದೃಶ್ಯಗಳ ಬಗ್ಗೆ, ಪಾತ್ರಧಾರಿಗಳ ಬಗ್ಗೆ ಹಳ್ಳಿಯ ಜನರ ಪ್ರತಿಕ್ರಿಯೆಗಳ ಬಗ್ಗೆ ಕುರಿತು ಎಲ್ಲರೂ ತಮ್ಮ ತಮ್ಮಲ್ಲೇ ಮಾತನಾಡಿಕೊಂಡರು, ಊಟ ಮುಗಿಸಿ ಎಲ್ಲರೂ ಶಾಲೆಯ ಕಡೆಗೆ ಮಲಗಲೆಂದು ಹೊರಟಾಗ, ಮಧ್ಯರಾತ್ರಿ ಮೀರಿ ಎರಡು ಗಂಟೆ ಕಳೆದಿತ್ತು.

ಮಾರನೇ ದಿನ ಎಲ್ಲರಿಗೂ ಗೌಡರ ಮನೆಯಲ್ಲಿ ಔತಣ ಕೂಟ. ಗಿರಿಜೆಯ ಆಸೆಯನ್ನ ಇಲ್ಲ ಎನ್ನಲಾಗದೇ ಗೌಡರು ರಾಗಿ ಮುದ್ದೆಯನ್ನು ಅವರೆ ಕಾಳು ಎಸರನ್ನ ಮಾಡಿಸಿದ್ದರು.

"ಯಾರ್ಗೆ ಮುದ್ದೆ ಸೇರ್ತೈತೊ ಅವ್ರು ನೀಡಿಸ್ಕಳ್ಳಿ. ಅನ್ನ ಸಾರು ಎಲ್ಲಾ ಐತೆ ಪಟೇಲರು ಖುದ್ದಾಗಿ ಬಂದು ಹೇಳಿದರು.

"ತುಂಬಾ ಥ್ಯಾಂಕ್ಸ್ ಗೌಡ್ರೇ.... ನಿಮ್ಮ ಈ ಸಹಕಾರವನ್ನ ನಾನು ಸದಾ ನೆನಪಿನಲ್ಲಿಟ್ಟುಕೊಳ್ತೀವಿ." ಗಿರಿಜೆ ಕೈ ಮುಗಿದು ನುಡಿದಳು.

"ಏಯ್ ಬಿಡವ್ವ... ನಿನ್ದೇ ಹಳ್ಳಿ, ನಿಂದೇ ಜನ.. ನಂದೇನೈತೆ... ನೀನು ಬಂದು ನಾಟ್ಕ ಆಡ್ಸಿದ್ದು ಹೆಚ್ಚೋ.... ಆಗಾಗ್ಗೆ ಬರ್ತಾ ಇರವ್ವಾ.." ಗೌಡ್ರು ವಿಶೇಷ ಅಕ್ಕರೆಯಿಂದ ಅವಳ ತಲೆಯ ಮೇಲೆ ಕೈ ಇರಿಸಿದರು.

ಊಟದ ನಂತರ, ಗೌಡರು ಎಲ್ಲರಿಗೂ ಉಡುಗೊರೆಗಳನ್ನ ಕೊಡಿಸಿದರು. ಗಿರಿಜೆ ಸಂಕೋಚಗೊಂಡಳು. ಗಿರಿಜೆಗೆ ಭಾರಿ ಸೀರೆಯನ್ನೇ ಕೊಡಿಸಿದ್ದರು.

"ಇರ್ಲಿ ತಕ್ಕೊಳವ್ವಾ.. ಇದೇನು ಬಾರಿ ಅಂತ ಇಂಗಾಡೀಯ... ನೀನೂ ನಂಗೆ ಮಗಳಿದ್ದಂಗೆ... ಇವ್ರೆಲ್ಲಾ ನಮ್ಮ ನೆಂಟ್ರೇ..." ಗಿರಿಜೆಯ ಕಣ್ಣುಗಳು ಮಂಜಾಗಿದ್ದವು.

ಎಲ್ಲರೂ ಕೈ ಮುಗಿದು, ರೈಲ್ವೇ ಸ್ಟೇಷನ್ನಿನ ಕಡೆ ಹೊರಟರು. ಗೌಡರು

ರೈಲ್ವೇ ನಿಲ್ದಾಣದ ತನಕ ಬಂದಿದ್ದರು. ಎಲ್ಲರೂ ಮತ್ತೊಮ್ಮೆ ಅಲ್ಲಿ ನೆರೆದಿದ್ದ ಜನ ಸಮೂಹಕ್ಕೆ ವಂದಿಸಿ, ರೈಲನ್ನ ಹತ್ತಿದರು. ಎಲ್ಲರೂ ಕೈಯಾಡಿಸಿದರು. ಇಂಜಿನ್ನು ಕೂಗಿತು. ಚಕ್ರಗಳು ಉರುಳಿದವು... ರೈಲು ಚಲಿಸಿತು.

ಗಿರಿಜೆ ತನಗೆ ಸಿಕ್ಕ ಆದರ, ವಿಶ್ವಾಸಕ್ಕೆ ಭಾವುಕಳಾದಳು. ಮೌನವಾಗಿ ತನ್ನ ಕಡೆ ಕೈಯಾಡಿಸುತ್ತಿದ್ದ ಗೌಡರನ್ನೇ ನೋಡಿದಳು. ಇದು ತನ್ನ ಹಳ್ಳಿ. ಇವರೆಲ್ಲ ತನ್ನವರು. ತಾನು ಆಗಾಗ್ಗೆ ಬರಬೇಕು. ಈ ಹಳ್ಳಿಯನ್ನ ಒಂದು ಮಾದರಿ ಹಳ್ಳಿಯನ್ನಾಗಿ ಪರಿವರ್ತನೆಗೊಳಿಸಬೇಕು ಎಂದು ತನ್ನಲ್ಲೆ ನಿರ್ಧರಿಸಿದಳು.

* * *

೧೨. ಯಾರಿಗೆ ಯಾರುಂಟು?

"ನಮಗೇನು ಹೆಚ್ಚುಗಾರಿಕೆಯಿಂದ ಮಾಡಿದ್ದು? ಎಷ್ಟೋ ದಿನ ರಾತ್ರಿ ಉಪವಾಸ ದಿಂದಲೇ ಮಲಗಿರುತ್ತಿದ್ದೆವು. ಪೂಜೆ ಪುನಸ್ಕಾರ, ಊಟ ತಿಂಡಿಗಳ ನಡುವೆ, ನಿನಗೆ ನಮ್ಮನ್ನೆಲ್ಲ ಗಮನಿಸಲು ಸಮಯವೆಲ್ಲಿತ್ತು! ನೀನೆಂತಹ ತಾಯಿ! ನಾವಾ ಗುವ ಹೊತ್ತಿಗೆ ಮನೆಯಲ್ಲೇ ಇದೀವಿ. ಇನ್ಯಾರಾದರೂ ಆಗಿದ್ದರೆ ಮನೆ ಬಿಟ್ಟು ಹೋಗಿರುತ್ತಿದ್ದರು. ಮಗನ ಮಾತುಗಳು ಕಿವಿಯಲ್ಲಿ ಗುಂಯ್ ಗುಟ್ಟುತ್ತಿದ್ದವು.

"ಮನೆ ಬಿಟ್ಟು ಹೋಗುವ ಧೈರ್ಯ ಅವನಿಗೆಲ್ಲಿತ್ತು! ಹೊರಗೆ ಹೋದರೆ ಒಂದು ಹೊತ್ತಿನ ಕೂಳು ಗಿಟ್ಟುವುದಿಲ್ಲ ಮುಂಡೇದರ ಮುಖಕ್ಕೆ. ಅದಕ್ಕೇ ಹೋಗ್ತಿರಲಿಲ್ಲ."

'ಷ್' ಎಂದು ತಾಯಿ ನಿಟ್ಟುಸಿರು ಬಿಟ್ಟಾಗ, ಅಲ್ಲಿಯೇ ಮಲಗಿದ್ದ ಶಾಲಿನಿ ಅಮ್ಮಾ... ಎಂದಳು. ತಾಯಿ ಉತ್ತರಿಸಲಿಲ್ಲ.

ಇವಳೊಬ್ಬಳು ನತದೃಷ್ಟೆ. ಹಿರಿಯ ಮಗಳು ಅಂತ ಅದ್ದೂರಿಯಾಗಿ ಮದುವೆ ಮಾಡಿದೆವು. ಒಂದು ವರ್ಷದೊಳಗೇ ಮತ್ತೆ ಈ ಮನೆಗೆ ವಾಪಸ್ಸಾದಳು. ವಿಶಾಲಾಕ್ಷಿ ಅಂತ ಇಟ್ಟ ಹೆಸರನ್ನ ಶಾಲಿನಿ ಅಂತ ಬದಲಾಯಿಸಿಕೊಂಡು ಕೆಲಸಕ್ಕೆ ಸೇರಿದಳು. ಮತ್ತೆ ಮದುವೆ ಆಗ್ತೀನಿ ಅಂತ ಸಹ ತಂಗಿಯರ ಹತ್ತಿರ ಹೇಳಿದ್ದಳಂತೆ. ವಿಧವೇನ ಮದುವೆಯಾಗುಕ್ಕೆ ಯಾರೂ ಮುಂದೆ ಬರಲಿಲ್ಲ. ಇವಳು ಈ ಮನೆಗೆ ಮತ್ತೆ ಕಾಲಿಟ್ಟ ಗಳಿಗೆಯೇ ಚೆನ್ನಾಗಿರಲಾರದು. ಕಷ್ಟದ ಮೇಲೆ ಕಷ್ಟ...

ಮೊದಲಿಗೆ ಆ ಇಬ್ಬರು ಹೆಣ್ಣು ಮಕ್ಕಳ ಮದುವೆಗೆ ಪಟ್ಟ ಪಾಡು! ಇಪ್ಪತ್ತೈದು ವರ್ಷವಾದರೂ ಗಂಡು ಸಿಗಲಿಲ್ಲ. ಬೆಳ್ಳಗೆ ದಪ್ಪ ದಪ್ಪಗೆ ಇದ್ದರೂ, ಯಾಕೋ ಯಾವ ಗಂಡೂ ಅವರುಗಳನ್ನ ಒಪ್ಪುತ್ತಿರಲಿಲ್ಲ. ಅವರಿಬ್ಬರಿಗೆ ಮದುವೆಯಾಗದೇ ತನ್ನ ಮದುವೆಯಾಗುವಂತಿಲ್ಲ ಅಂತ ಅಂದುಕೊಂಡ ಆ ವಿಜಿ, ತಾನೇ ಯಾರನ್ನೋ ಲವ್ ಮಾಡಿ, ಅವನನ್ನ ಮನೆ ಬಾಗಿಲಿನ ತನಕ ಕರೆದುಕೊಂಡು ಬರುವ ಸಾಹಸ ಮಾಡಿದಳು. ಮರ್ಯಾದೆಗೆ ಅಂಜಿ, ಅವಳ ಮದುವೆಯನ್ನೇ ಮುಂಚೆ ಮಾಡಿದ್ದಾಯ್ತು. ನಂತರ ಇವರಿಬ್ಬರಿಗೂ, ಐವತ್ತು ಸಾವಿರ ರೂಪಾಯಿನ ವರದಕ್ಷಿಣೆಯ ಆಸೆ ತೋರಿಸಿ ಗಂಡುಗಳನ್ನ ಗೊತ್ತು ಮಾಡಿ, ಮದುವೆ ಮಾಡಿ ಕಳಿಸಿದ್ದಾಯಿತು.

ಆದರೇನು! ಅದೇನು ಅಳಿಯಂದಿರೋ, ಯಾವಾಗ ನೋಡಿದರೂ ತಮ್ಮ ಹೆಂಡತಿಯರ ಜತೆ ಇಲ್ಲೇ... ಊಟ ತಿಂಡಿ, ಸಿನಿಮಾ, ಹರಟೆ, ಮಾತುಕತೆ ಎಲ್ಲಾ ಇಲ್ಲೇ. ಆಗ ನನಗೂ ಬೇಸರವೆನಿಸುತ್ತಿರಲಿಲ್ಲ. ಮನೆ ಹೆಣ್ಣು ಮಕ್ಕಳು, ತವರು ಮನೆಗಲ್ಲದೇ ಇನ್ನೆಲ್ಲಿಗೆ ಬರ್ತಾರೆ ಅಂತ. ಆದರೆ ಅದು ಅತೀ ಎನಿಸಿದ್ದು ಅವರುಗಳು ಮನೆಯ ಎಲ್ಲಾ ವಿಚಾರಕ್ಕೆ ಬಾಯಿ ಹಾಕುತ್ತಿದ್ದಾಗ. ಹೆಣ್ಣು ಮಕ್ಕಳಿಗಿಂತ ಹೆಚ್ಚಾಗಿ.

ತಾನು ಈ ಮನೆಗೆ ಬಲಗಾಲನ್ನಿಟ್ಟು ಬಂದು ಅರವತ್ತು ಸಂವತ್ಸರಗಳೇ ಕಳೆದಿವೆಯೇನೋ. ಮದುವೆಯಾದಾಗ ಹನ್ನೆರಡು ವರ್ಷವಂತೆ... ಈ ಮನೆಗೆ ಬಂದು ಸೇರಿದಾಗಿನಿಂದ ಅನುಭವಿಸಿದ ನೋವು, ಸವಿದಿನ, ಪಟ್ಟಿ ಹೇಳುತ್ತಾ ಹೋದಷ್ಟು ಬೆಳೆಯುತ್ತಾ ಹೋಗುತ್ತೆ. ಹಿರಿಮಗಳು ವಿಶಾಲಾಕ್ಷಿ... ಹಿರಿಯ ಮಗ ನೀಲಕಂಠ ಅವರಿಬ್ಬರ ಹಿಂದೆ ನಂತರ ಇನ್ನ ಐದು ಹೆಣ್ಣು ಮಕ್ಕಳು. ನಾಲ್ಕು ಜನ ಗಂಡು ಮಕ್ಕಳು... ಬಸಿರಿ, ಬಾಣಂತನದ ಸಡಗರದೊಂದಿಗೆ, ಮನೆಗೆ ಬರುವ ಹೋಗುವ ನೆಂಟರಿಷ್ಟರು, ಹಬ್ಬ ಹರಿದಿನದ ಸಂಭ್ರಮಗಳು....

ಮನೆಯಲ್ಲಿ ಯಾವ ಅನುಕೂಲಕ್ಕೆ ಕೊರತೆ ಇರಲಿಲ್ಲ. ಅಡಿಗೆಯವರು, ಇಬ್ಬಿಬ್ಬರು ಕೆಲಸದಾಳುಗಳು, ಕಾರು, ಫೋನು ಯಾವುದಿರಲಿಲ್ಲ! ಇವರು ಯಾವ ಬಿಸಿನೆಸ್ಸು ಮಾಡುತ್ತಿದ್ದರೋ, ಹಣದ ಮಳೆಯೇ ಹರಿಯುತ್ತಿತ್ತು ನಮ್ಮ ಮನೆಯಲ್ಲಿ. ಅತ್ತೆ ಮಾವನ ಮೆಚ್ಚಿನ ಸೊಸೆಯಾಗಿ, ಗಂಡನಿಗೆ ಮುದ್ದಿನ ಮಡದಿಯಾಗಿ ಸುಖ ಪಟ್ಟಿದ್ದೇ ಹೆಚ್ಚು....

ನಂತರ ತಾಪತ್ರಯ ಹೆಚ್ಚಿದ್ದೆಲ್ಲಾ ಮಕ್ಕಳು ಬೆಳೆದು ದೊಡ್ಡವರಾಗ್ತಾ ಬಂದಂತೆ. ಇವನು ಎಂದೂ ಹೀಗೇ ಹಠವಾದಿ.... ಚಿಕ್ಕ ವಯಸ್ಸಿನಲ್ಲೂ ಹೇಳಿದ ಮಾತು ಕೇಳುತ್ತಿರಲಿಲ್ಲ. ಸ್ಕೂಲಿಗೆ ಎಂದೂ ಸರಿಯಾಗಿ ಹೋದವನೇ ಅಲ್ಲ. ಊಟ ತಿಂಡಿ, ಉಡುಗೆ ತೊಡಿಗೆ ಪ್ರತಿಯೊಂದಕ್ಕು ಅವನದೇ ಅವನಿಗೆ. ಸ್ನೇಹಿತರು, ಹೋಟೆಲ್ಲು ಸಿನಿಮಾ ಅಂತ ತಿರುಗಾಡುವ ಇವನಿಗೆ, ನಾನು ಅವರಿಗೆ ತಿಳಿಯದಂತೆ ಹಣ ಜೋಡಿಸಿಕೊಡುತ್ತಿದ್ದೆ. ಮುದ್ದಿನ ಮಗ ಅಂತ ನಾನು ಮಾಡಿದ್ದೇ ತಪ್ಪು. ಆಗ ತಿಳಿಯಲಿಲ್ಲ. ಈಗ ಅನುಭವಿಸ್ತಾ ಇದೀನಿ.

ಬಿನಿನೆಸ್ಸು, ಹಣದ ಸಂಪಾದನೆಯಲ್ಲಿ ಇವರಿಗೆ ಮನೆಯಲ್ಲಿ ಮಕ್ಕಳ ಬಗ್ಗೆ ಯೋಚಿಸಲೂ ಸಮಯವಿರಲಿಲ್ಲ. ಅವರದ್ದೂ ತಪ್ಪೇ... ಮಕ್ಕಳ ಕಡೆ ಗಮನ ಕೊಡಲು ಪುರಸೊತ್ತು ಇಲ್ಲದಿದ್ದ ಮೇಲೆ, ಇಷ್ಟೊಂದು ಮಕ್ಕಳು ಹುಟ್ಟಲು ಕಾರಣರಾಗ ಬಾರದಾಗಿತ್ತು. ಅದೇನು ಪ್ರೀತಿಯೋ, ಸಾಲಾಗಿ ಮಕ್ಕಳಂತೂ ಹುಟ್ಟಿದವು. ಆದರೆ ಆಗೆಲ್ಲಾ ನಾನೆಂದು ಬೇಸರಿಸದ್ದೇ ಇಲ್ಲ...

ಮಕ್ಕಳ ಬಗ್ಗೆ ಬೇಸರ ಪಟ್ಟು ಪ್ರಯೋಜನವೇನು! ನಾವು ಬೆಳೆದದ್ದೇ ಆ ರೀತಿ ಇರಬಹುದು. ನಮ್ಮ ಮನೆಯ ರೀತಿ ನೀತಿಗಳೇ ಹಾಗಿದ್ದವು. ಏನು ಈಗಿನ ಕಾಲದವರ ತರಹಾನೇ... ಒಂದೋ, ಎರಡೋ... ಅಷ್ಟೆ..... ಬೆಳಗಾಗೆದ್ದು ಹಲ್ಲು ತಿಕ್ಕಿ, ಮುಖ ತೊಳೆಸುವುದರಿಂದ ಹಿಡಿದು, ಸಾಯಂಕಾಲ ಸ್ಕೂಲಿನಿಂದ ಬಂದ ಮೇಲೆ ಷೂ ಬಿಚ್ಚುವವರೆಗೆ ತಾಯಿ ತಂದೆ ಆ ಮಕ್ಕಳ ಹಿಂದೆ.... ಅವಳೂ ಎಂತಹವಳು? ವಿದ್ಯಾರ್ಥಿನೀ ಲವ್ ಮಾಡುವುದೇ. ಆಮೇಲೆ ತಿಳಿದಿದ್ದು ಅವಳಿಗೆ ಅಂತ ಖರ್ಚು ಮಾಡಿದ್ದ ಹೋಟೆಲ್ಲಿನ ಬಿಲ್ಲು ರಾಶಿಯಾಗಿ ಬಿದ್ದಿದ್ದು. ಅವನು ಮದುವೆ ಮಾಡಿಕೊಂಡು, ತನ್ನ ಪಾಡಿಗೆ ತಾನು ಬೇರೆ ಹೊರಟು ಹೋದ. ಅವನಿಗೆ ತಾನು ಹುಟ್ಟಿದ ಮನೆಯ ಬಗ್ಗೆ ಚಿಂತಿಸಬೇಕು ಅನ್ನುವುದೇ ಇರಲಿಲ್ಲ ವೇನೋ...?

ಇನ್ನ ಉಳಿದವರಿಬ್ಬರಿಗೂ, ತಾವು ಈ ಮನೆಯಿಂದ ಯಾವಾಗ ಹೋದೇವೋ ಅಂತ ಅನಿಸಿರಲೇ ಬೇಕು... ಮನೆಯಲ್ಲಿ ಯಾವಾಗ ನೋಡಿದರೂ, ಜಗಳ, ಹಗರಣ. ನೋಡಿ ನೋಡಿ ಬೇಜಾರಾಗಿ ಹೋಗಿತ್ತು.

ಇದ್ದಕ್ಕಿದ್ದಂತೇ ಕಾಂಗ್ರೆಸ್ ಸರಕಾರ ಕುಸಿದು ಬಿದ್ದಾಗ, ನಮ್ಮವರ ಬಿಸಿನೆಸ್ಸು ಕುಸಿದು ಬಿತ್ತು. ಆಗ ಅದೇನು ಬುದ್ಧಿ ತೋಚಿತೋ, ನಮ್ಮ ನೀಲಕಂಠ ಒಂದೊಂದಾಗಿ ತಾನೆಲ್ಲವನ್ನೂ ವಹಿಸಿಕೊಂಡು, ತನ್ನ ಸ್ನೇಹಿತರ ಜತೆಗೂಡಿ, ಬಂಡವಾಳ ಹಾಕಿ ಬೇರೆ ಬಿಸಿನೆಸ್ಸನ್ನ ಶುರು ಮಾಡಿದ. ಅದೇನು ಸಂಪಾದನೆ ಮಾಡುತ್ತಿದ್ದನೋ, ನಮ್ಮ ಮನೆ ಖರ್ಚಿಗೆ ಅಂತ ಒಂದಿಷ್ಟು ಕೊಟ್ಟು ಬಿಡುತ್ತಿದ್ದ. ನಮ್ಮಗಳ ಕೈ ಕಟ್ಟಿದಂತಾಗಿತ್ತು. ಬರುವ ಹೋಗುವವರ ಸಂಖ್ಯೆ ಕಡಿಮೆಯಾಗಿರಲಿಲ್ಲ. ಇನ್ನೂ ಇಬ್ಬರು ಹೆಣ್ಣು ಮಕ್ಕಳ ಮದುವೆಯಾಗಬೇಕಾಗಿದೆ.

ಆಗ ಈ ವಿಶಾಲು ನಮ್ಮ ಸಹಾಯಕ್ಕೆ ಬಂದವಳು. ತಾನು ಸಂಪಾದಿಸಿದ ಹಣವನ್ನ ಮನೆಯ ಖರ್ಚಿಗೆ ವಿನಿಯೋಗಿಸುತ್ತಿದ್ದಳು. ಆದರೆ ತನ್ನ ಅಲಂಕಾರಕ್ಕೆ ವಿಪರೀತ ಹಣ ಖರ್ಚು ಮಾಡುತ್ತಿದ್ದಳು. ತಿಂಗಳಿಗೊಂದು ಸೀರೆ, ಪೌಡರು, ಕಪ್ಪು, ಇತ್ಯಾದಿ ಒಂದೇ ಎರಡೇ, ಅವಳಿಗೇಕೆ ಅಲಂಕಾರ ಅಂತ ಎನಿಸಿದಾಗ, ಹೃದಯ ಸೊರಗುತ್ತಿತ್ತು. ಆದರೆ ಏನನ್ನೂ ಕೇಳಲಾರದ ಸ್ಥಿತಿಗೆ ಬಂದು ಸೇರಿದ್ದೆವು.

ನೀಲಕಂಠನಿಗೆ ಹೆಣ್ಣು ಕೊಡಲು ಕನ್ಯಾಪಿತೃಗಳು ಬರಲಾರಂಭಿಸಿದರು. ಆದರೆ ಅವನು ಬಿಲ್‌ಕುಲ್ ಮದುವೆಯಾಗುಲ್ಲ ಎಂದು ನಿರ್ಧರಿಸಿದ್ದ ಹೇಗೋ ತನ್ನ ಸ್ನೇಹಿತರ ಸಹಾಯದಿಂದ ಇಬ್ಬರು ವರಗಳನ್ನ ಪತ್ತೆ ಮಾಡಿ ತಂಗಿಯರ ಮದುವೆಗಳನ್ನ ಗೊತ್ತು ಮಾಡಿದ. ತಾನೇ ಇಬ್ಬರಿಗೂ ಕೆಲಸ ಕೊಡಿಸಿದ್ದನಂತೆ. ಅವರಿಬ್ಬರಿಗೂ ಐವತ್ತು ಸಾವಿರ ವರದಕ್ಷಿಣೆ ಕೊಟ್ಟು ಮದುವೆ ಸಿಂಪಲ್ಲಾಗಿ ಮಾಡಿಕೊಟ್ಟೆವು. ಆದರೆ

ಆಮೇಲೆ ಗೊತ್ತಾಯಿತು, ಆ ಗಂಡುಗಳು ಇಬ್ಬರು ನಿರುದ್ಯೋಗಿಗಳು. ಹೆಣ್ಣು ಮಕ್ಕಳ ಜತೆಯಲ್ಲಿ ಅಳಿಯಂದಿರೂ ನಮ್ಮ ಮನೆಯಲ್ಲಿರಲಾರಂಭಿಸಿದರು. ಅವರಿಬ್ಬರೇ ಏಕಿರಬೇಕು ಎನ್ನುವಂತೆ ಹಿರಿಯ ಅಳಿಯಂದಿರೂ ಹೆಚ್ಚು ಹೆಚ್ಚು ಬರಲಾರಂಭಿಸಿದರು.

ಈಗ ನೀಲಕಂಠ ಬದಲಾಗಿದ್ದ. ಸಿಡಿಮಿಡಿ ಜಾಸ್ತಿಯಾಗಿತ್ತು. ಎಲ್ಲರೂ ಕುಳಿತಿದ್ದರೆ ತನ್ನ ಪಾಡಿಗೆ ತಾನು ಊಟ ಮಾಡುವುದು... ತನ್ನ ಪಾಡಿಗೆ ತಾನು ತಿರುಗಾಡಿ ಬರುವುದು.... ಎಲ್ಲರ ಜತೆಯೂ ಮಾತನ್ನ ಬಿಟ್ಟಿದ್ದ. ಅಳಿಯಂದಿರನ್ನ ತಾತ್ಸಾರವಾಗಿ ತಿಳಿಯದಿದ್ದರೂ ಸಲುಗೆ ಹೆಚ್ಚಾದಷ್ಟು ಟೀಕೆ, ಹಾಸ್ಯ... ಒಂದೊಂದು ಸಲ ಎಲ್ಲಾ ಬೇಡವೆನಿಸುತ್ತಿತ್ತು.

ಹೀಗೇ ಎಷ್ಟೋ ವರ್ಷಗಳು ಕಳೆದವು. ಮದುವೆಯಾದ ಹೆಣ್ಣು ಮಕ್ಕಳ ಸೀಮಂತ, ಬಾಣಂತನ ಅದ್ಧೂರಿಯಾಗಿ ನಡೆದವು. ಹೆಣ್ಣು ಮಕ್ಕಳು ಪುಣ್ಯ ಮಾಡಿ ಹುಟ್ಟಿರಬೇಕು ಇಲ್ಲದಿದ್ದರೆ ಇಂತಹ ತವರು, ಎಲ್ಲಾ ಹೆಣ್ಣು ಮಕ್ಕಳಿಗೂ ಹೇಗೆ ಲಭ್ಯ! ನಾನೇ ಉದಾಹರಣೆ, ಹನ್ನೆರಡು ವರ್ಷಕ್ಕೆ ಈ ಮನೆಗೆ ಬಂದವಳು, ಒಂದು ದಿನವಾದರೂ ತವರು ಮನೆಗೆ ಹೋಗಿ ಕಾಲು ಚಾಚಿ ಕುಳಿತಿಲ್ಲ. ಮಲತಾಯಿ ಕರೆಯಲಿಲ್ಲ. ಇವರೂ ಕಳಿಸಲಿಲ್ಲ. ನನಗೂ ಬೇಕೆನಿಸಲಿಲ್ಲ. ಹಾಗೆ ನಡೀತು.

ಆಮೇಲೆ ಐದನೇ ಆರನೇ ಹೆಣ್ಣು ಮಕ್ಕಳ ಹೊತ್ತಿಗೆ ಕಾಲ ಎಷ್ಟೋ ಬದಲಾಗಿತ್ತು. ಓದಿ, ಡಿಗ್ರಿ ತೆಗೆದುಕೊಂಡು, ಕೆಲಸಕ್ಕಾದರೂ ಸೇರಿ ಹಾಯಾಗಿರಲಿ ಅಂತ ಅಂದುಕೊಂಡರೆ, ಅವುಗಳ ಹಣೇಲಿ ವಿದ್ಯೇನೇ ಬರೆದಿಲ್ಲ. ಎಸ್.ಎಸ್.ಎಲ್.ಸಿ. ಯಿಂದ ಮುಂದಕ್ಕೆ ಹೋಗಲೇ ಇಲ್ಲ. ಪ್ರತಿ ಸಲವೂ ಫೇಲು. ಅದೇನು ಮಣ್ಣು ತುಂಬಿದೆಯೋ ತಲೇಲಿ. ದಡ್ಡ ಮುಂಡೇವು ತಿನ್ನೋದು, ಸಿನಿಮಾ, ಟಿ.ವಿ. ಅಂತ ಮಜ ಮಾಡೋದು. ಅಕ್ಕಂದಿರ ಮಕ್ಕಳಿಗೆ ಸೇವೆ ಮಾಡೂದು. ಇಷ್ಟರಲ್ಲೇ ಕಾಲ ಕಳೆಯುವುದು. ನೋಡಿ ನೋಡಿ ಅಸಹ್ಯ ಆಗಿ ಹೋಯಿತು.

"ಇದೆಲ್ಲ ಅವರಿಗೆ ಅರ್ಥವೇ ಆಗ್ತಿರಲಿಲ್ಲ. ಇವೆಲ್ಲ ನನಗೆ ಗೊತ್ತಿಲ್ಲ. ನೀನುಂಟು ನಿನ್ನ ಮಕ್ಕಳುಂಟು ಎಂದೇ ಹೇಳುತ್ತಿದ್ದರು. ಗಂಡು ಹುಡುಗರಿಗಾದರೂ ಹೇಳೋಣ ಎಂದರೆ, ಅವರುಗಳಿಗೆ ಜವಾಬ್ದಾರಿಯೇ ಇಲ್ಲ.

ವಿದ್ಯೆ ಇಲ್ಲ, ಬುದ್ಧಿ ಇಲ್ಲ. ಬಿಸಿನೆಸ್ಸು ಬಿಸಿನೆಸ್ಸು ಅಂತ, ಆಗಾಗ್ಗೆ ಸಾವಿರಾರು ರೂಪಾಯಿ ತಗೊಂಡು ಹೋಗಿ ಅದೆಲ್ಲಿ ಸುರಿಯುತ್ತಿದ್ದನೋ, ಒಂದು ಸಲವಾದರೂ, "ಅಮ್ಮ ಇದು ನನ್ನ ಗಳಿಕೆಯ ಹಣ ತಗೋ ಅಂತ ಐವತ್ತು ರೂಪಾಯಿ, ಅಥವಾ ಒಂದು ಸೀರೆ, ರವಿಕೆ ಅಥವಾ ಒಂದು ಮೊಳ ಹೂವು ತಂದು ಕೊಟ್ಟವನಲ್ಲ. ಎಲ್ಲಾ ಸ್ವಾರ್ಥಿಗಳು.

ಬೆಳೀತಾ ಬೆಳೀತಾ... ನಾವು ಮಾಡಿದ್ದೆಲ್ಲ ಅವುಗಳಿಗೆ ಮರತೇ ಹೋಗುತ್ತದೆ

ಯೋ ಏನೋ.... ಅವನೂ ಮದುವೆಯಾಗದೇ ಹಾಗೇ ಉಳಿದಿದ್ದ. ನಾವು ಬಲ ವಂತ ಮಾಡಿರಲಿಲ್ಲ. ಯಾವ ಜವಾಬ್ದಾರಿಯೂ ತಿಳಿಯದ, ಸರಿಯಾದ ವಿದ್ಯೆ ಕೆಲಸವಿಲ್ಲದವನಿಗೆ ಯಾರು ಹೆಣ್ಣನ್ನು ಕೊಡ್ತಾರೆ! ಏಕೋ ಅವನಿಗೆ ಮದುವೆಯಾಗದೇ ಹಾಗೇ ಉಳಿದುಬಿಟ್ಟ. ಅಥವಾ ಮನೆಯವರಿಗೆ ತಿಳಿಸದೇ, ಯಾರನ್ನೋ ಗುಟ್ಟಾಗಿ ಇಟ್ಟುಕೊಂಡಿದ್ದರೂ ಇರಬಹುದು ಅದಕ್ಕೇ ಮನೆಯವರನ್ನು ಕಂಡರೆ ಅಷ್ಟಕ್ಕಷ್ಟೇ ಅಂತ ಅನ್ನಿಸುತ್ತೆ.

ಎರಡನೆಯವನು, ಹೇಗೋ ಕಷ್ಟ ಪಟ್ಟು ಕಾಲೇಜಿಗೆ ಸೇರಿದ್ದವನು, ಅಲ್ಲಿ ಅವನಿಗೆ ಪಾಠ ಹೇಳಿಕೊಡುತ್ತಿದ್ದ ಮೇಡಂನೇ ಲವ್ ಮಾಡಿ ಮದುವೆ ಮಾಡಿಕೊಂಡ. ಕೇಳಿದ್ದೆನಾದ್ದರಿಂದ, ಆದಷ್ಟು ಬೇಗ ಏನಾದರೊಂದು ವ್ಯವಸ್ಥೆಯನ್ನು ಮಾಡಬೇಕೆಂದುಕೊಂಡೆ. ಇದನ್ನೆಲ್ಲಾ ಮಾಡುವ ಮೊದಲು ಹೆಣ್ಣು ಮಕ್ಕಳ ಸಲಹೆ ಕೇಳಬೇಕೆಂದುಕೊಂಡು, ಅವರುಗಳನ್ನೆಲ್ಲ ಕರೆಸಿ ಮಾತನಾಡಿದೆ.

ಅವರೆಲ್ಲ ಅಷ್ಟು ಚತುರರು ಎಂದು ನನಗೆ ತಿಳಿಯಲೇ ಇಲ್ಲ. ಎಲ್ಲರೂ ಸೇರಿ ನನ್ನನ್ನ ಹೋಟೆಲ್ಲಿಗೆ ಕರೆದುಕೊಂಡು ಹೋಗಿ, ನನಗಿಷ್ಟವಾದ ತಿಂಡಿಗಳನ್ನೆಲ್ಲ ತಿನ್ನಿಸಿ, ಲಾಲ್‌ಬಾಗ್‌ಗೆ ಕರೆದುಕೊಂಡು ಹೋದರು. ಅಲ್ಲಿ ಸಮಾಲೋಚನೆ ನಡೆಯಿತು. ಒಬ್ಬೊಬ್ಬರೂ ತಮಗೆ ತಿಳಿದ ಸಲಹೆ ಮುಂದಿಟ್ಟರು. ಸಲಹೆಯೆಲ್ಲಾ ಅವರ ಅನುಕೂಲಕ್ಕಾಗಿಯೇ.

ಕಡ್ಲೆಕಾಯಿ ತಿನ್ನುತ್ತಾ ನಿಂತಿದ್ದ ವಿಶಾಲು ಯಾವ ಸಲಹೆಯನ್ನ ಕೊಡಲಿಲ್ಲ. ಎರಡನೆಯವಳು, ಶ್ಯಾಮಲಾ ಕಾನೂನು ತಿಳಿದವಳಂತೆ ನುಡಿದಳು.

"ಈಗ ಹೆಣ್ಣು ಮಕ್ಕಳಿಗೂ ಆಸ್ತಿಯಲ್ಲಿ ಪಾಲಿದೆ. ಕೊಡದಿದ್ದರೆ ಕೇಳಿ ಪಡೆಯುವ ಹಕ್ಕಿದೆ ಅದರಿಂದ ನಮಗೂ ಸಮಪಾಲು ಬೇಕು"

ನನಗೆ ಅಚ್ಚರಿಯಾಯಿತು. ಅವಳ ಮಾತನ್ನೇ ಉಳಿದ; ಸುಧಾವಿನುತ, ಮಾಧವಿ, ನಳಿನಿ ಎಲ್ಲರೂ ಅನುಮೋದಿಸಿದರು.

ನಮಗೆ ಮದುವೇಲಿ ಏನು ಕೊಟ್ಟಿದ್ದು ಮಹಾ! ಈ ಕಾಲದಲ್ಲಿ ಎಷ್ಟೆಷ್ಟು ಖರ್ಚು ಮಾಡಿ ಅದ್ದೂರಿಯಾಗಿ ಮದುವೆ ಮಾಡ್ತಾರೆ! ಎಲ್ಲರ ಅಭಿಮತ ಅದೇ.

ನಾವು ಸಾಕಷ್ಟು ಖರ್ಚುಮಾಡಿ, ಬೀಗರನ್ನ ಮೆಚ್ಚಿಸಿ ಮಾಡಿದ ಮದುವೆ ಈ ಹುಡುಗರಿಗೆ ಅದ್ದೂರಿಯಲ್ಲ... ನಮ್ಮ ಹೊಟ್ಟೆಯಲ್ಲಿ ಹುಟ್ಟಿ ನಮ್ಮ ಮೇಲೆ ಕನಿಕರ ವಿಲ್ಲದವು.... ನನ್ನ ಹೊಟ್ಟೆಯಲ್ಲಿ ತಳಮಳ.

"ನನ್ನ ಗಂಡಂಗೆ ಕೆಲಸವಿಲ್ಲ ಅಂತ ತಿಳಿದೂ, ಅವನಿಗೆ ಮದುವೆ ಮಾಡಿ ಕೊಟ್ಟಿದ್ದು ನಿಮ್ಮ ತಪ್ಪು. ನಿಮ್ಮಪ್ಪನ ಮನೇಲಿ ಏನು ಕೊಟ್ಟರು ಅಂತ ಹಂಗಿಸಿ ಅನ್ನುವ ಅತ್ತೆ. ನನಗಂತೂ ಸಾಕಾಗಿ ಹೋಗಿದೆ." ಮಾಧವಿಯ ನುಡಿ.

"ಅಲ್ಲದೇ ಮತ್ತೇನು! ನಿರುದ್ಯೋಗಿ ಅಂತ ತಿಳಿದೂ, ಮದುವೆ ಮಾಡಿ ಕೊಟ್ಟರು. ಹೋಗಲಿ ಏನಾದರೂ ಬಿಸಿನೆಸ್ ಮಾಡೋಣ ಅಂದರೆ ಹಣವೇ ಇಲ್ಲ. ನನಗೂ ಮಾತು ಕೇಳಿ ಕೇಳಿ ಸಾಕಾಗಿದೆ." ನಳಿನಿಯ ಮಾತು.

" ನನ್ನ ಮಗನ್ನ ಇಂಜಿನಿಯರ್ ಮಾಡೋಣ ಅಂತಿದೀನಿ. ಮೆರಿಟ್‌ನಲ್ಲಿ ಸೀಟು ಸಿಗದಿದ್ದರೆ, ಡೊನೇಶನ್ ಕೊಟ್ಟಾದರೂ ಸೇರಿಸಬೇಕು. ನಾವು ಪಡುತ್ತಿರುವ ಕಷ್ಟ ನಮಗೇ ಇರಲಿ. ಮಗನಾದರೂ ಮುಂದೆ ಬರಲಿ. ಹಣ ಹೇಗಪ್ಪ ಹೊಂದಿಸುವುದು ಅಂತ ಚಿಂತಿಸುತ್ತಿದ್ದೆ." ವಿನುತಳ ನುಡಿ.

ಆಗ ನನಗೆ ತಿಳಿದ ಉಪಾಯ, ಮನೆಗೆ ಸೊಸೆಯರು ಬಂದರೆ, ಎಲ್ಲಾ ಸರಿಹೋಗುತ್ತದೆ. ಹೆಣ್ಣು ಮಕ್ಕಳು ಅಳಿಯಂದಿರ ಮನೆಗೆ ಹೋದಾಗ ಕಡಿಮೆ ಆಗುತ್ತೆ ಅಂತ ಯೋಚಿಸಿ, ನೀಲಕಂಠನ ಹತ್ತಿರ ಮಾತನಾಡಿದೆ.

ಅವನು ತಾನು ಮದುವೆಯಾಗುವುದಿಲ್ಲವೆಂದೂ, ತಮ್ಮಂದಿರಿಗೆ ಮದುವೆ ಮಾಡಿಬಿಡಿ ಎಂದು ತಿಳಿಸಿದ. ಅವರಲ್ಲಿ ಒಬ್ಬ ತಾನೇ ಮದುವೆಯಾಗಿದ್ದ. ಇನ್ನೊಬ್ಬ ತುಂಬಾ ಚಿಕ್ಕವನು. ಅವನಿಗೆ ಮುಂಜಿ ಸಹ ಆಗಿಲ್ಲ. ಆದರೂ ಒಪ್ಪಿಗೆ ಕೊಟ್ಟ, ಅವನಿಗೆ ತಕ್ಕ, ಕೆಲಸದಲ್ಲಿದ್ದ ಹುಡುಗಿಯನ್ನ ಹುಡುಕಿ ಮದುವೆ ಮಾಡಿದೆವು. ಅವಳು ಅವನ ಪರಿಚಯದವಳೇ.

ನೀಲಕಂಠ ಅವಳನ್ನ ಚೆನ್ನಾಗಿ ನೋಡಿಕೊಂಡ. ಅವಳಿಗೆ ಏನು ಬುದ್ಧಿವಾದ ಹೇಳಿದನೋ, ಮನೆಗೆ ಬರುವವರ ಹೋಗುವವರ ಸಂಖ್ಯೆ ಕಡಿಮೆಯಾಯಿತು. ಅವಳ ಬಿಗುಮಾನ ಹೆಣ್ಣು ಮಕ್ಕಳಿಗೆ ಸಂಕೋಚವನ್ನುಂಟುಮಾಡಿರಬೇಕು. ಆದರೆ ಮನೆ ಬಿಕೋ ಎನಿಸಲಾರಂಭಿಸಿತ್ತು. ಅವಳು ಕೆಲಸಕ್ಕೆ ಹೋಗುತ್ತಿದ್ದಳು.

ಮನೆಯಲ್ಲಿ ನಾನು ನಮ್ಮ ಯಜಮಾನರೂ ಇಬ್ಬರೇ. ಯಾರಾದರೂ ಬರ ಬಾರದೇ ಎಂದು ಹಂಬಲಿಸುವಂತಾಗುತ್ತಿತ್ತು ಎಷ್ಟೋ ದಿನ ಹೆಚ್ಚಿಗೆ ಕೆಲಸವಿರಲಿಲ್ಲ, ಕೆಲಸದವಳು, ಅಡಿಗೆಯವರು ಇದ್ದೇ ಇದ್ದರು. ಮನೆಯಲ್ಲಿ ಕಾಲ ಕಳೆಯಲು ಕಷ್ಟ ವೆನಿಸಿದಾಗ, ನಾವೇ ಇಬ್ಬರು ಹೊರಗೆ ತಿರುಗಾಡಿ ಬರಲು, ಮಾರ್ಕೆಟಿಗೂ, ತರಕಾರಿ ತರುವುದಕ್ಕೂ ಹೋಗಿ ಬರುವ ಕೆಲಸ ಗೊತ್ತು ಮಾಡಿಕೊಂಡೆವು.

ಹಾಗೇ ಹೊರಗೆ ಹೋಗಿದ್ದಾಗ ಒಂದು ದಿನ, ನಮ್ಮ ಸ್ಕೂಟರ್‌ಗೆ ಅಪಘಾತ ವಾಯಿತು. ತಲೆಗೆ ಏಟು ಬಿದ್ದು ಇವರು ಆಸ್ಪತ್ರೆ ಸೇರಿದರು. ದವಡೆಗೆ ಏಟು ಬಿದ್ದ ನನಗೆ ನಾಲ್ಕಾರು ಹೊಲಿಗೆ ಬಿತ್ತು. ಎಷ್ಟೋ ದಿನಗಳ ನಂತರ ಇವರು ಚೇತರಿಸಿ ಕೊಂಡು ಮನೆಗೆ ಬಂದರು. ಆದರೆ ಅದೇ ಸಮಯದಲ್ಲಿ, ನನಗೆ ಸಕ್ಕರೆ ಖಾಯಿಲೆ ಎಂದು ತಿಳಿದಿದ್ದು. ಇನ್ನು ಬದುಕಿರಬಾರದು ಎನ್ನುವಷ್ಟು ಬೇಸರ ಉಂಟುಮಾಡಿತು. ಸಿಹಿ ಪದಾರ್ಥ ತಿನ್ನುವಂತಿಲ್ಲ. ಸಕ್ಕರೆ ಹಾಕಿದ ಸಿಹಿ ಕಾಫಿ

ಕುಡಿಯುವಂತಿಲ್ಲ. ತೂಕ ಇಳಿಸಲು, ಹೆಚ್ಚು ತಿನ್ನಬಾರದು. ಬಡ ಊಟ ಯಾರಿಗೆ ಬೇಕಾಗಿದೆ ಈ ಪಥ್ಯ? ಚೆನ್ನಾಗಿ ಎಲ್ಲಾ ತಿಂದುಂಡು, ಬೇಗ ಸಾಯಬೇಕೆಂಬ ಮನಸ್ಸುಂಟಾಯಿತು.

ನಾನೇ ಸಾಯಬೇಕು ಎಂದು ತೀರ್ಮಾನಿಸಿಕೊಂಡ ಮೇಲೆ ಸಾಯುವ ಮೊದಲು ನಾನು ಮಾಡಿ ಮುಗಿಸುವ ಕೆಲಸಗಳು ತುಂಬಾ ಇದ್ದವು. ನನ್ನ ಹತ್ತಿರ ತುಂಬಾ ಒಡವೆಗಳಿದ್ದವು. ಮನೆಯಲ್ಲಿ ಸಾಕಷ್ಟು ಬೆಳ್ಳಿ ಸಾಮಾನು, ಪಾತ್ರೆಗಳಿದ್ದವು. ಸೈಟು, ಮನೆ ನನ್ನ ಹೆಸರಿನಲ್ಲಿತ್ತು. ಅಪ್ಪ ಅಮ್ಮ ಸತ್ತ ಮೇಲೆ ಆಸ್ತಿಗಾಗಿ ಕಾದಾಡುವ ಮಕ್ಕಳ ಬಗ್ಗೆ ಏನಾದರೂ ಒಂದು ಮಾಡಲೇ ಬೇಕು. ಏಕಾಂತದಲ್ಲಿ ವಿಶಾಲನ ಸಲಹೆ ಕೇಳಿದೆ.

ಆ ಸಮಯದಲ್ಲಿ ವಿಶಾಲು ಹೇಳಿದ್ದು, ಈ ಮನೆಯಲ್ಲಿ ಹುಟ್ಟಿದವರು ನಾವು ಒಂಭತ್ತು ಜನ. ಎಲ್ಲರನ್ನ ನೀನು ಒಂದೇ ತರಹ ಹೊತ್ತು, ಹೆತ್ತು, ಬೆಳೆಸಿದೆ. ವಿದ್ಯೆ ಸಿಕ್ಕಿತು. ಎಲ್ಲರಿಗೂ ಮದುವೆ ಆಯಿತು. ಎಲ್ಲಾ ಒಂದೇ ತರಹದೇ ತಾನೇ... ಏನೋ ಸ್ವಲ್ಪ ಹೆಚ್ಚು ಕಡಿಮೆ ಆಗಿರಬಹುದು. ನಾನು ಇಲ್ಲಿಗೇ ಬಂದು ಸೇರಿದರೂ, ಗಂಡು ಮಗನಂತೆ ಸಂಪಾದಿಸುತ್ತಿದ್ದೀನಿ. ನನ್ನ ಹಣವೇ ನನಗೆ ಬೇಕಾದಷ್ಟು, ಆದರೆ ನಾನು ನನಗೆ ಪಾಲು ಬೇಕು ಅನ್ನವುದಿಲ್ಲ. ನನ್ನನ್ನ ಹೆಣ್ಣು ಮಕ್ಕಳ ಸಾಲಿಗಾದರೂ ಸೇರಿಸು, ಅಥವಾ ಗಂಡು ಮಕ್ಕಳ ಲೈನಿಗಾದರೂ ಸರಿ. ನೀನು ಕೊಡುವ ಪಾಲಿನ ಹಣವನ್ನ ನನ್ನ ಹಣದ ಜತೆ ಸೇರಿಸಿ, ಎಲ್ಲರಿಗೂ ನಾನು ಸಮನಾಗಿ ಹಂಚ್ತೇನಿ ಅಷ್ಟೇ...

ನಿನ್ನ ಹತ್ತಿರ ಅಷ್ಟು ಹಣವೆಲ್ಲಿದೆ!

ರಿಟೈರ್ ಆದರೆ, ಒಂದೆರಡು ಮೂರು ಲಕ್ಷ ದುಡ್ಡು ಬರಬಹುದು. ಹೆಣ್ಣು ನಾನೊಬ್ಬಳೇ ಇರುಕ್ಕೆ ಆಗಲ್ಲ. ಎಲ್ಲರ ಮನೇಲೂ ಕೆಲ ಕೆಲವು ದಿನ ಇರಬೇಕಾಗುತ್ತದೆ. ನನ್ನ ಆಸ್ತೀನೂ ಅವರಿಗೆ ಹಂಚಿದರೆ, ಅವರಿಗೆ ಸಂತೋಷವಾಗುತ್ತೆ. ಬದುಕಿರುವವರೆಗೂ ನನ್ನನ್ನ ಚೆನ್ನಾಗಿ ನೋಡಿಕೊಳ್ತಾರೆ.

ಮುಂದೆ ಅವರುಗಳು ನಮ್ಮನ್ನ ಚೆನ್ನಾಗಿ ನೋಡಿಕೊಳ್ತಾರೆ ಅನ್ನುವ ಬಗ್ಗೆ ನನಗೆ ನಂಬಿಕೆ ಇರಲಿಲ್ಲವಾದರೂ ಅವಳೊಡನೆ ಏನನ್ನೂ ಹೇಳಲಿಲ್ಲ. ಆದರೂ ಯೋಚಿಸಿದೆ. ಎಲ್ಲಾ ಗಂಡು ಮಕ್ಕಳ ಹೆಸರಿಗೆ ಬರೆದರೆ ಹೆಣ್ಣು ಮಕ್ಕಳು ದೂರವಾಗ್ತಾರೆ. ಬಂದು ಹೋಗಿ ಆತ್ಮೀಯವಾಗಿ ಮಾತನಾಡುವವರೇ ಇಲ್ಲದಂತಾಗುತ್ತದೆ. ಸಂಬಂಧ ಕಳಚಿ ಹೋಗುತ್ತೆ. ಗಂಡು ಮಕ್ಕಳು ನಮ್ಮವರಾದರೂ, ಸೊಸೆಯರಿಗೆ ಏನಾದರೂ ಹೇಳಲು ಸಾಧ್ಯವೆ? ಅವರ ಕೈಗೆ ಸಿಕ್ಕಿ ಬಿದ್ದು ಸ್ವಾತಂತ್ರ್ಯವನ್ನ ಕಳೆದುಕೊಂಡಂತಾಗುತ್ತದೆ. ಹಾಗಾದರೆ ಏನು ಪ್ರಯೋಜನ... ಇದುವರೆಗೂ ರಾಜಯೋಗದಿಂದ ಮೆರೆದೆ.

ಮುಂದೆಯೂ ಬದುಕಿರುವವರೆಗೂ ಹಾಗೆಯೇ ಮೆರೆಯಬೇಕು. ವಿಶಾಲು ಹೇಳಿದಂತೆ, ಒಬ್ಬರು ಹೆಚ್ಚಲ್ಲ, ಇನ್ನೊಬ್ಬರು ಕಡಿಮೆ ಅಲ್ಲ. ಎಲ್ಲಾ ನಮ್ಮ ಮಕ್ಕಳೇ. ಈ ಮನೆಯ ಮಕ್ಕಳೇ.... ನಮ್ಮ ತುತ್ತಿನ ಊಟವನ್ನ ಹೇಗೆ ಎಲ್ಲರಿಗೂ ತಿನ್ನಿಸಿದ್ದೇವೆಯೋ ಹಾಗೆಯೇ, ಈ ಆಸ್ತಿಯಲ್ಲಿ ಎಲ್ಲರಿಗೂ ಸಮಪಾಲು ಸಿಗಬೇಕು, ಅದೇ ಧರ್ಮ.

ಈ ವಿಷಯವನ್ನ ಯಜಮಾನರೊಡನೆ ಚರ್ಚಿಸಿದೆ. ಕೈ ಕಾಲುಗಳ ಶಕ್ತಿ ಕಳೆದುಕೊಂಡು, ಹಾಸಿಗೆ ಹಿಡಿದಿದ್ದು ಚೇತರಿಸಿಕೊಳ್ಳುತ್ತಿದ್ದವರು ನನ್ನ ಮಾತಿನಿಂದ ಬೆರಗಾದರು. ಕಷ್ಟ ಪಟ್ಟು ನುಡಿದಿದ್ದರು. "ನಿನ್ನಿಷ್ಟದಂತೆ ಮಾಡು" ಎಂದಿದ್ದರು.

ಎಲ್ಲರಿಗೂ, ಅವರದ್ದೇ ಅವರಿಗೆ, ಒಬ್ಬರಾದರೂ, ಅಮ್ಮ ಈಗಲಿಂದ ಆಸ್ತಿಯ ಬಗ್ಗೆ ಮಾತೇಕೆ... ನಮಗೇನು ಬೇಡ, ಅಥವಾ ನೀನೇನು ಕೊಡ್ತೀಯೋ ಅದನ್ನ ಸಂತೋಷದಿಂದ ತಗೊಳ್ಳುತ್ತೀವಿ ಎನ್ನಲಿಲ್ಲ ಎಂದು ಹೇಳಿದ್ದರು.

ಆ ಕ್ಷಣದಲ್ಲಿ ಗಂಡು ಮಕ್ಕಳನ್ನ ಒಂದು ಮಾತು ಕೇಳಬೇಕು ಅನ್ನಿಸಿತು. "ನಾನೇನು ಈಗಲೇ ಪಾಲು ಕೊಡ್ತಿಲ್ಲ. ನಾನು ಬದುಕಿರುವವರೆಗೂ ಎಲ್ಲಾ ನಮ್ಮಿಬ್ಬರದು. ನಂತರದ ಮಾತು."

ಕೆಲವರ ಮುಖದ ಕಳೆ ಬದಲಾಯಿಸಿತು.

ಇರುವುದು ಇದೊಂದು ಮನೆ, ಮಾರಿದರೆ ಹದಿನೆಂಟು ಇಪ್ಪತ್ತು ಲಕ್ಷ ಬರಬಹುದು.

ಒಬ್ಬೊಬ್ಬರಿಗೂ ಎರಡೆರಡು ಲಕ್ಷ ಬರುತ್ತೆ.... ಆಗಲೇ ಹಂಚಿಕೆಯ ಮಾತು

ನನಗೆ ಮಾತು ಸಾಕೆನಿಸಿತು. ಏನೊಂದನ್ನ ಇತ್ಯರ್ಥ ಮಾಡದೇ ಮನೆಗೆ ಬಂದೆ. ಗಂಡು ಮಕ್ಕಳೊಡನೆ ಮಾತನಾಡಲು ಬಿಡುವು ಸಿಗಲೇ ಇಲ್ಲ. ಆ ನಂತರ ಹೆಣ್ಣು ಮಕ್ಕಳ ಕಿರುಕುಳ ಜಾಸ್ತಿಯಾಯಿತು.

"ನೋಡ್ತಿದೀಯೋ ಇಲ್ಲವೋ ನಿನ್ನ ಸೊಸೆಯರು ನಿನಗೆ ಮಾಡುತ್ತಿರುವ ಉಪಚಾರಾನ. ನಿನ್ನ ಗಂಡು ಮಕ್ಕಳು ಅವರುಗಳು ಹೇಳಿದ ಹಾಗೆ ಕುಣೀತಾರೆ. ದಿನಾ ಹೋಟೆಲ್ಲಿಗೆ ಹೋಗ್ತಾರೆ. ತಿಂಗಳಿಗೊಂದು ಸೀರೆ, ಬಟ್ಟೆ ಇದ್ದೇ ಇರುತ್ತೆ. ಎಂದಾದರೂ ನಿನಗೇನಾದರೂ ತಂದು ಕೊಟ್ಟಿದ್ದಾರೆಯೆ?"

"ಅದೇನೋ ನಿಜ. ಒಂದೆಳೆ ನೂಲನ್ನು ಒಂದು ದಿನ ಒಬ್ಬ ಸೊಸೆ ತಂದು ಕೊಟ್ಟಿರಲಿಲ್ಲ. ಹೆಣ್ಣು ಮಕ್ಕಳು ಹಬ್ಬ ಹರಿದಿನದಲ್ಲಿ ಅಮ್ಮನಿಗೆ ಅಂತ ಸೀರೆ, ರವಿಕೆ, ಸ್ಟೀಲ್ ಡಬ್ಬಿ ಇತ್ಯಾದಿಗಳನ್ನ ಕೊಟ್ಟಿದ್ದರು. ಆಗ ಈಗ ತಮ್ಮ ಮನೆಯಲ್ಲಿ ಮಾಡಿದ ಸಿಹಿ ತಿಂಡಿಯನ್ನು ನಮ್ಮಿಬ್ಬರಿಗೆಂದು ತಂದುಕೊಡುತ್ತಿದ್ದರು.

ಸೊಸೆಯರು ಮನೆಯಲ್ಲಿ ತಿಂಡಿ ಮಾಡಿದರಲ್ಲವೆ ನಾವು ತಿನ್ನುವುದು! ನನಗಂತೂ ಏನೊಂದನ್ನ ತೀರ್ಮಾನಿಸಲಾಗಿರಲಿಲ್ಲ. ಒಂದು ದಿನ ವಿಶಾಲು ಹೇಳಿ

ದಳು. ಈ ಕಾಲದಲ್ಲಿ ಗಂಡೇನು ಹೆಣ್ಣೇನು ಎಲ್ಲಾ ಒಂದೇ... ನನ್ನೊಬ್ಬಳ ಹೊರತು, ಹೆಣ್ಣು ಮಕ್ಕಳು ಈ ಮನೆಯಿಂದ ಹೋದರೂ, ಹೋಗಿಲ್ಲ... ಸೊಸೆಯರು ಈ ಮನೆಯವರಾದರೂ ಆಗಿಲ್ಲ.... ಎಲ್ಲಾ ಒಂದೇ ಅಲ್ಲವೆ! ಅಳಿಯ ಮಗನಂತೆ ಅಲ್ಲದಿದ್ದರೂ, ಮಗ ಮಾಡುವುದಾದರೂ ಏನು? ಸಧ್ಯ ಅಳಿಯಂದಿರು ಬಾಯಿಗೆ ಬಂದತೆ ಬೈಯುವುದಿಲ್ಲ. ಮರ್ಯಾದೆ ಕೊಟ್ಟು ಮಾತನಾಡ್ತಾರೆ. ಸಧ್ಯ ಅದೊಂದು ಬಾಕಿ ಇತ್ತು." ಚಿಂತೆಯಲ್ಲೂ ನಕ್ಕಿದ್ದೆ.

ಆ ನಂತರ ನಮ್ಮ ಮನೆಯಲ್ಲಿ ಕುರುಕ್ಷೇತ್ರ. ನೀಲಕಂಠ ಇದ್ದಕ್ಕಿದ್ದಂತೆ ಅಲ್ಲದಿದ್ದರೂ, ಎಲ್ಲರನ್ನ ಹೆಚ್ಚಾಗಿ ದ್ವೇಷಿಸತೊಡಗಿದ. ಗಂಡು ಮಕ್ಕಳೆಲ್ಲ ಒಂದಾಗಿ ಮಾತನಾಡಿಕೊಂಡು, ವಿಶಾಲುವನ್ನ ಬೈದರಂತೆ.

"ನಿಮಗೆಲ್ಲ ಯಾಕೆ ಆಸ್ತಿ? ಗಂಡು ಮಕ್ಕಳು, ನಾವು ಈ ಮನೆಯಲ್ಲಿಯೇ ಇರುವವರು, ನಮ್ಮ ಕರ್ತವ್ಯ ನಾವು ಮಾಡಲೇ ಇರುತ್ತೇನೆಯೆ! ಈ ಹೆಣ್ಣು ಮಕ್ಕಳಿಗೆ ಎಷ್ಟು ಕೊಟ್ಟರೂ ಸಾಲದು. ಅಬ್ಬಬ್ಬ ಅದೇನು ದುರಾಸೆ! ಅಮ್ಮನ್ನ ಒಪ್ಪಿಸಿ, ಈ ರೀತಿ ವಿಲ್ ಬರೆಸಲು ಅದೆಷ್ಟು ಕೆ.ಜಿ. ಪೇಡ ತಿನ್ನಿಸಿದೀರಿ! ಎಷ್ಟು ಕೆ.ಜಿ. ಬಣ್ಣೆ ಸವರಿದೀರಿ. ಅಂತ." ಕೇಳಿದ್ದನಂತೆ.

ಇದರಲ್ಲಿ ನನ್ನದೇನಿಲ್ಲ. ನನಗೇನು ಸಿಗುತ್ತೇ ಅದನ್ನ ನಾನೂ ಸಹ ನಿಮಗೆಲ್ಲರಿಗೂ ಕೊಡ್ತೀನಿ. ಬದುಕಿರುವವರೆಗೆ ಎಲ್ಲರೂ ಒಂದಾಗಿಯೇ ಇರಬೇಕು ಅಂತ, ಎಲ್ಲಾ ಈ ಮನೆಯಲ್ಲಿ ಈ ಹುಟ್ಟಿ ಬೆಳೆದವರು. ಅದೇ ರೀತಿ ಒಂದಾಗಿರೋಣ ತಪ್ಪೇನು! ಅಂದಳಂತೆ.

"ತಪ್ಪು ಸರಿ, ನಿನಗೆ ಅರ್ಥವಾಗುಲ್ಲ. ನೀನು ಬೆಳೆದ ರೀತಿಯೇ ಬೇರೆ. ಅತ್ಲಾಗೆ ಗಂಡೂ ಅಲ್ಲ. ಹೆಣ್ಣು ಅಲ್ಲ." ನೀಲಕಂಠ ಜರೆದಿದ್ದನಂತೆ.

ವಿಶಾಲು ಹೇಳುತ್ತ ಹೇಳುತ್ತ ಅತ್ತಿದ್ದಳು. "ಅವನಿಗೆ ಈಗ ಗೊತ್ತಾಗಲ್ಲ. ನೀನು ಸತ್ತ ಮೇಲೆ ತಿಳಿಯುತ್ತೆ. ಈ ಕಾರಣದಿಂದಲೋ ಏನೋ, ಅವಳು ನನ್ನ ಜತೆಗೂಡಿ, ಲಾಯರನ್ನ ಕರೆಸಿ, ವಿಲ್ ಬರೆಸಿ, ಅದನ್ನ ರಿಜಿಸ್ಟರ್ ಸಹ ಮಾಡಿಸಿ, ಎಲ್ಲಾ ಮುಕ್ತಾಯ ಹಾಕಿದಳು. ಮಕ್ಕಳಿಗೆ ಅದರ ಸುಳಿವು ಸಿಕ್ಕಿತ್ತು."

ಹೆಣ್ಣು ಮಕ್ಕಳೆಲ್ಲ ಒಂದು, ಗಂಡು ಮಕ್ಕಳೆಲ್ಲ ಒಂದು. ಹೀಗೆ ಎರಡು ಗುಂಪಾಯಿತು. ಸೊಸೆಯರು ಹೆಣ್ಣು ಮಕ್ಕಳನ್ನು, ಗಂಡು ಮಕ್ಕಳು ಅಳಿಯಂದಿರನ್ನ ಮಾತನಾಡಿಸುವುದು ನಿಂತು ಹೋಯಿತು.

ನೀಲಕಂಠ ತನ್ನ ತಮ್ಮಂದಿರನ್ನ ಸೇರಿಸಿಕೊಂಡು, ಎಲ್ಲಾ ಹತ್ತಿರದ ನೆಂಟರಿಷ್ಟರಿಗೂ ವಿಲ್ ಪ್ರಕರಣವನ್ನ ತಿಳಿಸಿ, ಬಹಿರಂಗ ಪಡಿಸಿ, ಅಮ್ಮ ಮಾಡಿರುವುದು ಸರಿಯೇ? ಎಂದು ಕೇಳಿದ್ದನಂತೆ. ವಕೀಲರನ್ನ ಭೇಟಿಮಾಡಿ ಕಾನೂನಿನ ಸಲಹೆಯನ್ನ

ಕೇಳಿದ್ದನಂತೆ. ಎಲ್ಲ ತಮಗೆ ತೋರಿದಂತೆ ಮಾತನಾಡಿದ್ದರು. ವಕೀಲರು ಕಾನೂನಿನ ನಿಯಮ ತಿಳಿಸಿದ್ದರು. ನೀಲಕಂಠ ಏನೂ ಮಾಡುವಂತಿರಲಿಲ್ಲ. ಗಂಡನೊಡನೆ ಹೇಳಿದ್ದೆ. ಈಗಲೇ ಪಾಲು ಮಾಡಿ ಕೊಡೋಣವೇ ಅಂತ ಕೇಳಿದ್ದೆ.

"ಈಗಿನಿಂದ ಅವರ ಕೈಗೆ ಬಿದ್ದು, ಬೇಗನೇ ಸಾಯೋಣ ಅಂತೀಯ?" ಪ್ರಶ್ನಿಸಿದ್ದರು.

ಸಮಾಧಾನ ಹೇಳಿದ್ದೆ. "ಹಾಗಲ್ಲ... ಈಗ ನಮ್ಮ ಮನೆಯ ವಾತಾವರಣ ಮೊದಲಿನಂತೆ ಇಲ್ಲ. ಎಲ್ಲಾ ಸ್ವಾರ್ಥಿಗಳಾಗಿದಾರೆ. ನಮ್ಮ ಕೈ ನಡೆಯುವವರೆಗೂ ಎಲ್ಲಾ ನಮ್ಮಿಂದ ಮಾಡಿಸಿಕೊಳ್ಳುತ್ತಾರೆ. ಮುಂದೆ ನಮಗೆ ನಿಸ್ವಾರ್ಥವಾಗಿ ಮಾಡುವ ದೊಡ್ಡ ಬುದ್ಧಿಯಾರಿಗಿರುತ್ತದೆ? ನಾವು ನಮ್ಮ ಹಕ್ಕನ್ನ ಕಳೆದುಕೊಳ್ಳಬಾರದು. ಎಲ್ಲರ ಮನೆಯಲ್ಲೂ ನಾಲ್ಕು ನಾಲ್ಕು ದಿನ ಇರುವಂತಹ ಸ್ವತಂತ್ರವನ್ನ ಇಟ್ಟುಕೊಳ್ಳಬೇಕಾದರೆ, ಆಸ್ತಿಯನ್ನು ಸಮಪಾಲು ಮಾಡಬೇಕು."

"ನಿನಗೆ ಹೇಗೆ ಸರಿ ತೋಚುತ್ತೋ ಹಾಗೆ ಮಾಡು. ನನ್ನದೇನಿಲ್ಲ ಈಗ ನಾನು ಬದುಕಿದ್ದೂ ಸತ್ತಂತೆ. ಮುಂದೆ ನೀನು ಒಂಟಿಯಾದಾಗ ನಿನ್ನ ಪಾಡೇನು ಅಂತ ನನಗೆ ಚಿಂತೆ."

"ನಿಮ್ಮ ಕಣ್ಣ ಮುಂದೆ ಮುತ್ತೈದೆಯಾಗಿ ನಾನು ಹೋಗಬೇಕು ಅಂತಾನೇ ನನಗೆ ಆಸೆ. ಆದರೆ ನಿಮ್ಮನ್ನ ಈ ಸ್ಥಿತಿಯಲ್ಲಿ, ಮಕ್ಕಳ ಕೈಗೆ ಹಾಕಿ ಹೋಗುವುದು ಅಂದರೆ ಭಯವೇ.... ಅಲ್ಲದೇ ನಮ್ಮ ಕೈಲಿ ಏನಿದೆ!"

"ಹುಡುಗರನ್ನೆಲ್ಲ ಕೂರಿಸಿಕೊಂಡು, ನಿನ್ನ ನಿರ್ಧಾರ ತಿಳಿಸಿಬಿಡು."

ಅವರ ಮಾತಿನಂತೆ, ಅದೇ ಭಾನುವಾರ ಎಲ್ಲರೂ ನಮ್ಮ ಮನೆಯಲ್ಲಿ ಒಟ್ಟಿಗೇ ಸೇರಿದರು. ಅಡಿಗೆಯವರು ಎಲ್ಲರಿಗೂ ರುಚಿ ರುಚಿಯಾದ ಊಟ ಬಡಿಸಿದರು. ಎಲ್ಲರ ಮಧ್ಯಾಹ್ನದ ನಿದ್ದೆ. ಕಾಫಿ ಮುಗಿದ ನಂತರ, ನಾನು, ವಿಶಾಲು, ನಮ್ಮ ಯಜಮಾರನ್ನ ಗಾಲಿ ಕುರ್ಚಿಯಲ್ಲಿ ಕೂರಿಸಿಕೊಂಡು ಹಾಲಿಗೆ ಕರೆತಂದೆವು. ಸಭೆ ಪ್ರಾರಂಭವಾಯಿತು. ನನ್ನ ಪರವಾಗಿ ವಿಶಾಲುನೇ ಮಾತನಾಡಿದಳು.

ಸಭೆಯ ಮುಖ್ಯ ಉದ್ದೇಶ ತಿಳಿಸಿ, ಇತ್ತೀಚೆಗೆ ನಾನೂ, ಹಾಗೂ ಅಮ್ಮ ಇಬ್ಬರೂ ವಿಲ್ ಬರೆದಿದ್ದೇವೆ. ಬೆಳ್ಳಿ, ಬಂಗಾರ, ಎಲ್ಲರಿಗೂ ಸಮನಾಗಿ ಹಂಚುವುದು. ಮನೆಯನ್ನ ಮಾರಿ, ಬಂದ ದುಡ್ಡನ್ನ ಸಮನಾಗಿ ಹಂಚಿಕೊಳ್ಳುವುದು ಅಂತ. ಇದೇ ರೀತಿ ನನ್ನ ಆಸ್ತಿಯಲ್ಲೂ ಸಹ ಎಲ್ಲರಿಗೂ ಸಮಪಾಲು. ಇದನ್ನ ಎಲ್ಲರೂ ಒಪ್ಪಲೇ ಬೇಕು. ತಿಳಿಸದೇ ಮಾಡಿದರು ಎನ್ನುವ ಅಪಚಾರ ಬಾರದಿರಲಿ ಅಂತ ಎಲ್ಲರಿಗೂ ತಿಳಿಸಿದ್ದೇನೆ.

ಹೆಣ್ಣು ಮಕ್ಕಳು, ಅಳಿಯಂದಿರ ಮುಖಗಳು ಮರದಗಲವಾದವು. ಗಂಡು

ಮಕ್ಕಳು ಸೊಸೆಯರು ಮುಖ ಮುಖ ನೋಡಿಕೊಂಡರು. ನೀಲಕಂಠ ದುರ್ಧ್ಯಾನ ತಗೊಂಡವನಂತೆ ಎದ್ದು ಹೋಗಿದ್ದ.

ಇದೆಲ್ಲ, ಐದಾರು ವರ್ಷದ ಕೆಳಗೆ ನಡೆದ ಹಳೆಯ ವಿಚಾರ. ಒಬ್ಬ ಮೊಮ್ಮಗಳಿಗೆ ಮದುವೆ ಆಗಿದೆ. ಮೊಮ್ಮಗನಿಗೆ ಇಂಜಿನಿಯರಿಂಗ್ ಸೀಟು ಸಿಕ್ಕಿದೆ. ನಡೆಯುವುದೆಲ್ಲ ನಡೆಯುತ್ತಿದೆ. ಹೆಣ್ಣು ಮಕ್ಕಳು ನನ್ನ ಮೇಲೆ ಒಂದು ಕಣ್ಣು ಇಟ್ಟಿದಾರೆ. ಗಂಡು ಹುಡುಗರು ನಿರ್ಲಕ್ಷ್ಯದಿಂದ ಇದಾರೆ. ಇದೆಲ್ಲ ನನಗೆ ತಿಳಿಯದ್ದೇನಲ್ಲ.

ಇದ್ದಕ್ಕಿದ್ದಂತೆ ಇವರ ಆರೋಗ್ಯ ಬಿಗಡಾಯಿಸಿ ಆಸ್ಪತ್ರೆಗೆ ಸೇರಿಸಬೇಕಾಗಿ ಬಂದಾಗ ವಿಶಾಲು ಒಬ್ಬಳೇ ಸಹಾಯ ಮಾಡಿದ್ದು, ನಂತರ ಅಳಿಯಂದಿರು, ಹೆಣ್ಣು ಮಕ್ಕಳು ಬಂದು ವಿಚಾರಿಸಿಕೊಂಡು ಹೋದರು. ನನ್ನ ಕೈಲಿದ್ದ ಹಣ, ವಿಶಾಲು ಕೊಟ್ಟ ಹಣವೆಲ್ಲ ಖರ್ಚಾಯಿತು. "ಅಣ್ಣನಿಗೇನಾಗಿದೆ! ನಿನಗೇನಾದರೂ ಹಣ ಬೇಕೆ" ಎಂದು ಒಂದು ಮಾತನ್ನ ಕೇಳಲಿಲ್ಲ ನೀಲಕಂಠ.

ಅಣ್ಣಂಗೆ ಸುತರಾಂ ಹುಶಾರಿಲ್ಲ. ಒಂದು ಸಾರಿ ಹೋಗಿ ನೋಡಿಕೊಂಡು ಬಾ" ಎಂದು ವಿಶಾಲು ಹೇಳಿದಾಗ ತನಗಲ್ಲ ಎನ್ನುವಂತೆ ತನ್ನ ಪಾಡಿಗೆ ತಾನು ಹೋಗಿದ್ದನಂತೆ. ಕೇಳಿ ಅತೀವ ಸಂಕಟವಾಯಿತು. ಅಂತಹ ಸಂಕಟ, ಇವರು ಕಡೇ ಉಸಿರೆಳೆದಾಗ ಸಹ ಆಗಲಿಲ್ಲವೇನೋ... ಇವನೆಂತಹ ಮಗ....? ಇವನು ಇದ್ದರೆಷ್ಟು ಬಿಟ್ಟರೆಷ್ಟು ಎನ್ನುವಷ್ಟು ರೋಸಿ ಹೋಯಿತು.

ಉಳಿದವರು, ವಿಶಾಲುವಿನ ಬಲವಂತಕ್ಕೆ ಆಸ್ಪತ್ರೆಗೆ ಬಂದು, ದೂರದಿಂದ ಅಪ್ಪನ್ನ ನೋಡಿ ಹೋಗಿದ್ದರು. ಅಷ್ಟೇ ಲಭ್ಯ. ರಾತ್ರೆಯೆಲ್ಲ ತೂಕಡಿಸುತ್ತ ಅಲ್ಲಿಯೇ ಕುಳಿತಿದ್ದ ನನಗೆ, ಅವರ ಗೊರಗೊರ ಸದ್ದಿನಿಂದ ಎಚ್ಚರವಾಗಿತ್ತು. ನೋಡು ನೋಡುತ್ತಿದ್ದಂತೆಯೇ, ಮೇಲು ಗಣ್ಣು ತೇಲು ಗಣ್ಣು ಮಾಡಿ, ಕಡೆ ಉಸಿರು ಎಳೆದಿದ್ದರು. ಅಲ್ಲಿಗೆ ಎಲ್ಲಾ ಮುಗಿಯಿತು.

ನಮ್ಮ ಮನೆಗೆ ಹೆಣ ಸಾಗಿಸಿದರು. ಎಲ್ಲರೂ ಹಾಜರಾಗಿದ್ದರು. ನೀಲಕಂಠ ಮಾತ್ರ ಇರಲಿಲ್ಲ. ಇದೇ ಕಡೆಯ ಅವಕಾಶವೆಂದು, ಎಲ್ಲೋ ಹಠದಿಂದ ಕೂತಿದ್ದ ನೆಂದು ತಿಳಿಯಿತು. ಬರದಿದ್ದರೆ ಅಷ್ಟೇ.... ಬದುಕಿದ್ದಾಗ ಬಂದು ವಿಚಾರಿಸದಿದ್ದವನು ಈಗ ಬಂದು ಏನು ಮಾಡಿದರೇನು ಫಲ ಎಂದುಕೊಂಡೆ.

ಹಿರಿಯ ಮಗನಾಗಿ ಮಾಡುವ ಕರ್ತವ್ಯವನ್ನ ಮಾಡದೇ ಹೇಡಿಯಂತೆ ಮಹಡಿ ಏರಿ ಕೂತಿದ್ದವನನ್ನ ಎಳೆದು ಮನೆಯಿಂದ ಆಚೆ ತಳ್ಳುವ ಮನಸ್ಸಾಯಿತು. ತನ್ನ ಜವಾಬ್ದಾರಿಯನ್ನು ಅರಿತು, ಈ ಸಮಯದಲ್ಲಾದರೂ, ಎಲ್ಲಾ ಮರೆತವನಂತೆ ನಟಿಸಿ, ಅಪ್ಪನ ಅಂತ್ಯಕ್ರಿಯೆ ಮಾಡಿದ್ದರೆ! ತಾನು ಅವನನ್ನ ಖಂಡಿತಾ ಕ್ಷಮಿಸಿರುತ್ತಿದ್ದೆ. ಆದರೆ ಈಗ? ಅವನಿಗೆ ಈ ಜನ್ಮದಲ್ಲಿ ಕ್ಷಮೆ ಇಲ್ಲ...

ಮನೆಯ ವಾತಾವರಣವೇ ಬದಲಾಯಿಸಿ ಹೋಯಿತು. ವಿಶಾಲು ತಂಗಿಯರ ಮನೆಗೆ ಹೋಗಿ ಬರುತ್ತಿದ್ದಳು. ನಾನು ಮನೆಗೆಲ್ಲ ಒಬ್ಬಳೇ, ಅಡಿಗೆಯವರನ್ನ, ಕೆಲಸದವರನ್ನ ವಿಚಾರಿಸಿ ಎಲ್ಲಾ ಮುಗಿಸುವಷ್ಟರಲ್ಲಿ ಸಾಕು ಸಾಕಾಗುತ್ತಿತ್ತು.

ನೀವು ಬದುಕಿದೀರಾ? ಸತ್ತಿದೀರಾ! ಎಂದು ಕೇಳುವವರಿಲ್ಲವಾಯಿತು. ಒಂದು ಲೋಟ ನೀರು ಬೇಕಾದರೂ ನಾನೇ ಎದ್ದು ಹೋಗುವ ಸ್ಥಿತಿ ಬಂತು, ಹೆಣ್ಣು ಮಕ್ಕಳು, ನೀಲಕಂಠ ಜಗಳವಾಡುತ್ತಾನೆಂದು ಹೆದರಿ ಬರುವುದನ್ನೇ ಕಡಿಮೆ ಮಾಡಿದರು. ಒಂದು ದಿನ, ಇದ್ಯಾಕೆ ಹೀಗಾಡ್ತೀಯ ನಿನಗೇನು ಅಸಮಾಧಾನ! ಎಂದು ಕೇಳಿದಾಗ ಸಿಡಿದು ಉತ್ತರಿಸಿದ್ದ.

ಸಮಾಧಾನದಿಂದಿರುವಂತಹ ಯಾವ ಘನಕಾರ್ಯ ಮಾಡಿದೀಯ ನೀನು!

"ನೀನೂ ಮಗನೇ, ಅವರೂ ಮಕ್ಕಳೇ.... ಯಾರೂ ಹೆಚ್ಚಲ್ಲ, ಯಾರೂ ಕಮ್ಮಿ ಅಲ್ಲ."

"ಅದೆಲ್ಲ ನನಗೆ ಗೊತ್ತಿಲ್ಲ. ನಾನು ಮೊದಲಿನಂತೆ ಸಮಾಧಾನ ದಿಂದ ಇರುವಂತೆ ಆಶಿಸುವುದಾದರೆ, ವಿಲ್‌ನ ಬದಲಾಯಿಸು." ಎಂದು ಹೇಳಿ, ನಿಲ್ಲದೇ ಹೊರಟು ಹೋಗಿದ್ದ.

ಅವನ ಮಾತು ಮತ್ತಷ್ಟು ಚಿಂತೆ ಗೀಡು ಮಾಡಿತು. ವಿಶಾಲು ಹತ್ತಿರ ಹೇಳಿದೆ. ಅವಳು ತಂಗಿಯರಿಗೆ ತಿಳಿಸಿರಬೇಕು. ಎಲ್ಲರೂ ಗುಂಪಾಗಿ ಬಂದರು. ಒಬ್ಬೊಬ್ಬರ ಕೈಯಲ್ಲಿ ಒಂದೊಂದು ತಿಂಡಿ ಪೊಟ್ಟಣ.

"ನೀನೇಕೆ ಅವನಿಗೆ ಹೆದರಬೇಕು. ನಾವೆಲ್ಲ ಇದೀವಿ. ಎಲ್ಲಾ ಸರಿ ಹೋಗುತ್ತೆ" ವಿಲ್‌ನ ಬದಲಾಯಿಸದಿರುವಂತೆ ಪುಸಲಾಯಿಸಿದರು.

ದೇವರೇ ನಾನು ಮಾಡಿದ್ದರಲ್ಲಿ ತಪ್ಪೇನಿದೆ! ಎಲ್ಲರಿಗೂ ಒಳ್ಳೆಯ ಬುದ್ಧಿಯನ್ನ ಕೊಡು" ಎಂದು ದೇವರನ್ನ ಬೇಡಿದೆ.

ನನ್ನ ನೆರವಿಗೆ ಗಂಡು ಮಕ್ಕಳು ಸೊಸೆಯರು ಇಲ್ಲ. ಹೆಣ್ಣು ಮಕ್ಕಳೂ ಇಲ್ಲ ಎನ್ನಿಸಿದಾಗ ದುಃಖದ ಕಟ್ಟೆ ಒಡೆದಿತೂ. ಅತ್ತು ಅತ್ತು ನನಗೆ ನಾನೇ ಸಮಾಧಾನ ಹೇಳಿಕೊಂಡಿದ್ದೆ. ಇಷ್ಟೇಯೆ ಈ ಪ್ರಪಂಚ. ಯಾರಿಗೆ ಯಾರುಂಟು ಎರವಿನ ಸಂಸಾರ ಎಂದು ದಾಸರೇ ಹೇಳಿಲ್ಲವೆ! ಆದದ್ದಾಗಲಿ ನಾನು ಈ ಮನೆಗೆ ಯಜಮಾನರ ನಂತರ, ಹಿರಿಯತಲೆ. ನನಗೆ ಸರಿ ಅನ್ನಿಸಿದ್ದನ್ನ ನಾನು ಮಾಡಿದೀನಿ. ಇದನ್ನ ಬದಲಾಯಿಸುವುದಿಲ್ಲ ಎಂದು ನಿರ್ಧರಿಸಿದೆ. ಅಂದಿನಿಂದ ನಾನು ಹೆಚ್ಚು ಒಂಟಿಯಾದೆ. ಮಕ್ಕಳು ನನ್ನ ಮಾತನಾಡಿಸುವುದಿರಲಿ, ನೋಡುವುದನ್ನು ಬಿಟ್ಟರು. ಮೊಮ್ಮಕಳು ನನ್ನನ್ನ ವಿಚಿತ್ರವಾಗಿ ನೋಡುತ್ತ ದೂರ ದೂರವೇ ಇರತೊಡಗಿದರು. ಕ್ರಮೇಣ ಇದೇ ಅಭ್ಯಾಸವಾಯಿತು.

"ನಾನು ಬದುಕಿರುವಾಗಲೇ, ನಾನು ಈ ಮನೆಯನ್ನ ಮಾರಿಬಿಡೋಣ ಅಂತ ತೀರ್ಮಾನಿಸಿದೀವಿ."

"ನಿನಗೇನಾದರೂ ತಲೆ ಕೆಟ್ಟಿದೆಯೆ! ನೀನು ಯಾರ ಮನೇಲಿರ್ತೀಯಾ!"

"ಯಾವುದಾದರೂ ವೃದ್ಧಾಶ್ರಮಕ್ಕೆ ಸೇರಿಕೊಂಡು ಬಿಡ್ತೀನಿ. ಅಲ್ಲಿ ತನ್ನ ಮನೆಯವರಿರುವುದಿಲ್ಲ. ದೂಷಿಸುವವರಿರುವುದಿಲ್ಲ. ಬರಲಿಲ್ಲ, ನೋಡಲಿಲ್ಲ, ಮಾತನಾಡಿಸಲಿಲ್ಲ ಎನ್ನುವ ಬೇಜಾರಿರುವುದಿಲ್ಲ. ಇಲ್ಲಿ ನನ್ನ ಮನೆಯಲ್ಲಿ, ನನ್ನವರ ಎದುರಿಗೆ ಒಂಟಿಯಾಗಿ ಕಾಲ ಹಾಕಲಾರೆ."

"ಯಾಕಮ್ಮ ಹೀಗಂತೀಯಾ...? ನಾವೆಲ್ಲ ಇಲ್ಲವೆ?"

"ನೀನು ಸದಾ ನನ್ನ ಕಣ್ಣೆದುರಿಗೆ ಇರ್ತೀಯಾ ಹೇಳು. ಕೆಲಸಕ್ಕೆ ಹೋಗಬೇಡವೆ?"

"ನಾನು ಬದುಕಿರುವವರೆಗೂ ನೀನು ಎಲ್ಲೂ ಹೋಗಕೂಡದು."

"ಬದುಕು, ಸಾವು ಯಾರ ಕೈಲಿ ಇದೆ ಹೇಳು. ನಾನು ಬದುಕಿರುವಷ್ಟು ದಿನ, ನೆಮ್ಮದಿಯಿಂದ ನನಗೆ ಇಷ್ಟ ಬಂದಂತೆ ಇರಲು ಬಯಸ್ತೀನಿ. ನನ್ನ ಕಷ್ಟ ಸುಖ ನಿನಗೆ ತಿಳಿದಿದೆಯಾ? ನನ್ನ ಈ ಮಾತನ್ನ ನಡೆಸಿಕೊಡು." ಕತ್ತಲೆಯಲ್ಲಿ ಮಗಳ ಕೈ ಹಿಡಿದಳು.

ವಿಶಾಲು "ಆಗಲಮ್ಮ" ಎಂದ ನಂತರವೇ ಮಗಳ ಕೈ ಬಿಟ್ಟಿದ್ದು.

ಮಾರನೇ ದಿನ ವಿಶಾಲು ತಾನೇ ಖುದ್ದಾಗಿ ಹೋಗಿ ಲಾಯರನ್ನ ಕರೆತಂದಳು. ಎಲ್ಲರೂ ಕುತೂಹಲದಿಂದ ನೋಡಿದರೂ, ಸೀತಮ್ಮ ಅಳುತ್ತಲೇ ಲಾಯರಿಗೆ ತಮ್ಮ ಅಹವಾಲನ್ನ ತಿಳಿಸಿದರು.

"ಈಗ ನಾನು ಎಲ್ಲಾ ರೀತಿಯಿಂದಲೂ ಸರಿಯಾಗಿದೀನಿ. ನನ್ನ ತಲೆ ಕೆಟ್ಟು ನಾನು ಏನೂ ಮಾಡಲಾಗದ ಸ್ಥಿತಿಗೆ ತಲಪುವ ಮೊದಲೇ, ಸ್ವಲ್ಪವಾದರೂ ಮನಃಶಾಂತಿ ಪಡೆಯಬೇಕೆಂದು ಆಸೆ. ನನ್ನ ಮರಣದ ನಂತರ, ನನ್ನ ಹೆಸರಿನಲ್ಲಿರುವ ಈ ಮನೆಯನ್ನ ಮಾರುವ ಬದಲು, ನಾನು ಬದುಕಿರುವಾಗಲೇ ಈ ಮನೆಯನ್ನ ಮಾರಲು ಇಚ್ಛಿಸುತ್ತೇನೆ. ನನ್ನ ಯಜಮಾನರು, ನನಗಾಗಿ, ನನ್ನ ಅನುಕೂಲಕ್ಕಾಗಿ ಕಟ್ಟಿಸಿಕೊಟ್ಟ ಮನೆಯನ್ನ, ನಾನು ಇದುವರೆಗೂ ಜೋಪಾನವಾಗಿ ಕಾಪಾಡಿಕೊಂಡು ಬಂದಿದ್ದೇನೆ. ಮುಂದೆ ಏನಾಗುವುದೋ ನನಗೆ ತಿಳಿಯದು."

ಲಾಯರ್‍ರು ಎಲ್ಲರ ಕಡೆ ನೋಡಿ, ಆಕೆಯ ಮಾತಿಗೆ 'ಹೂಂ' ಎಂದರು.

"ಎಲ್ಲಾ ಆದಷ್ಟು ಬೇಗ ಆದರೆ ಒಳ್ಳೆಯದು."

ಮತ್ತೊಮ್ಮೆ 'ಹೂಂ' ಎಂದು ಕೈ ಮುಗಿದು ಆತ ಹೊರಟು ಹೋದರು.

"ಗಂಡು ಮಗ, ಮೊದಲ ಮಗನೆಂದು ಅತಿ ಮುದ್ದು ಮಾಡಿ ಬೆಳೆಸಿದ್ದಕ್ಕೆ

ತಕ್ಕ ಪ್ರತಿಫಲ! ನಾವು ನಿಸ್ವಾರ್ಥವಾಗಿ ಮಾಡಿದ್ದೆಲ್ಲಾ ಎಲ್ಲಿ ಹೋಯಿತು? ಎಲ್ಲಾ ಮರೆಯಲು ಹೇಗೆ ಸಾಧ್ಯವಾಯಿತು? ಅಪ್ಪನ ಸತ್ತ ಮುಖವನ್ನ ಕಡೆಯದಾಗಿ ನೋಡಲೂ ಬಯಸದಷ್ಟು ನಿಷ್ಕರುಣಿ ಆದನೆ? ಅಷ್ಟು ಸ್ವಾರ್ಥಿಯೆ? ಅಷ್ಟು ದುರಾಸೆಯೇ? ಅಥವಾ ನಮ್ಮ ರಕ್ತ ಹಂಚಿಕೊಂಡು, ಹುಟ್ಟಿರುವವನೇ ಹೌದೋ ಅಲ್ಲವೋ ಎಂಬ ಅನುಮಾನ ಬರುತ್ತಿದೆ."

"ಅವನೇಕೆ? ಆತನನ್ನೇ ಅನುಮೋದಿಸುವ ಅವನ ತಮ್ಮಂದಿರು... ಅವರುಗಳೂ ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಲ್ಲವೇನೋ ಎಂಬ ಅನುಮಾನ ಬರುತ್ತಿದೆ... ಗಂಡು ಮಕ್ಕಳೇ ಹೀಗಾದ ಮೇಲೆ, ಇನ್ನ ಹೆಣ್ಣು ಮಕ್ಕಳನ್ನೇಕೆ ಅನ್ನಬೇಕು! "ಕೊಟ್ಟ ಹೆಣ್ಣು ಕುಲಕ್ಕೆ ಹೊರಗು" ಎಂಬ ಗಾದೆಯೇ ಇದೆ. ಅವರು ಸಹ ಅಷ್ಟೇ... ಅಳಿಯ ಮಗನಲ್ಲವೇ ಅಲ್ಲ... ಅಲ್ಲಿಗೆ ನನಗೆ ಯಾರಿಲ್ಲ. ಯಾರೂ ಇಲ್ಲ. ನಾನೂ ಒಂಟಿ..."

"ಇವತ್ತು ನನ್ನನ್ನ ನೋಡಲು, ವಿಚಾರಿಸಲು ಅವನು ಬರಲಿಲ್ಲ. ಕ್ರಮೇಣ, ಒಬ್ಬೊಬ್ಬರಾಗಿ ಎಲ್ಲರೂ ಬರುವುದನ್ನ ನಿಲ್ಲಿಸುತ್ತಾರೆ. ಯಾರನ್ನೂ ಅಂದು ಪ್ರಯೋಜನ ವಿಲ್ಲ... ಇನ್ನ ಈ ಮನೆಯಲ್ಲಿ ಹೀಗೆ ಒಂಟಿಯಾಗಿ ಬಿದ್ದುಕೊಂಡು ಯಾರೂ ಬರಲಿಲ್ಲ. ಮಾತನಾಡಿಸಲಿಲ್ಲ ಎಂದು ಚಡಪಡಿಸುತ್ತ, ಅಳುತ್ತ ಕೂತು ಕಾಲ ಕಳೆಯುವುದೇ ನನ್ನ ಹಣೆಯಲ್ಲಿ ಬರೆದಿದೆಯೆ?"

"ಇಲ್ಲ ಹೀಗಾಗ ಕೂಡದು. ಹಣೆಯಲ್ಲಿ ಏನು ಬರೆದಿದೆಯೋ ನನಗೆ ತಿಳಿಯದು. ಆದರೆ ನನ್ನ ಇಷ್ಟದಂತೆ ಅದನ್ನ ನಾನು ಬರೆಯಬೇಕು. ಅಧಕ್ಕೆ ಮೊದಲು ನಾನು ಬರೆದಿರುವ ವಿಲ್‌ನ ಬದಲಾಯಿಸಿ ಬೇರೆ ಬರೆಯಿಸಬೇಕು. ಆದಷ್ಟು ಬೇಗ ಈ ಕೆಲಸವನ್ನ ಮುಗಿಸಬೇಕು."

ತಕ್ಷಣ ಎದ್ದು, "ವಿಶಾಲು, ವಿಶಾಲು" ಎಂದು ಪಿಸು ದನಿಯಲ್ಲಿ ಕರೆದಳು ಸೀತಮ್ಮ.

"ಏನಮ್ಮ?" ಎಂದಳು ಹತ್ತಿರ ಬಂದು,

"ನಾಳೆ ಲಾಯರನ್ನ ಕರೆದುಕೊಂಡು ಬಾ. ಮುಖ್ಯವಾದ ವಿಚಾರವನ್ನ ಮಾತನಾಡಬೇಕು."

"ಯಾಕಮ್ಮ ಅರ್ಜೆಂಟೇನು? ಏನಾಗ್ತಿದೆ ನಿನಗೆ?"

"ನಂಗೇನಾಗಿಲ್ಲ, ನಂಗೇನಾದರೂ ಆಗುವ ಮೊದಲು ನನಗೆ ನೆಮ್ಮದಿ ಬೇಕು. ಶಾಂತಿ ಬೇಕು... ಅದಕ್ಕೆ ಒಂದು ತೀರ್ಮಾನಕ್ಕೆ ಬಂದಿದೀನಿ."

"ನಾನು ಬದುಕಿರುವಾಗಲೇ, ನಾನು ಈ ಮನೆಯನ್ನು ಮಾರಿಬಿಡೋಣ ಅಂತ ತೀರ್ಮಾನಿಸಿದೀನಿ."

"ನಿನಗೇನಾದರೂ ತಲೆ ಕೆಟ್ಟಿದೆಯೆ? ನೀನು ಯಾರ ಮನೇಲಿರ್ತೀಯ?"

"ಯಾವುದಾದರೂ ವೃದ್ಧಾಶ್ರಮಕ್ಕೆ ಸೇರಿಕೊಂಡು ಬಿಡ್ತೀನಿ. ಇಲ್ಲಿ ನನ್ನ ಮನೆಯಲ್ಲಿರುವಂತೆ ದೂಷಿಸುವವರಿರುವುದಿಲ್ಲ. ಬರಲಿಲ್ಲ, ನೋಡಲಿಲ್ಲ. ಮಾತನಾಡಿಸಲಿಲ್ಲ ಎನ್ನುವ ಬೇಜಾರಿರುವುದಿಲ್ಲ. ಇಲ್ಲಿ ನನ್ನ ಮನೆಯಲ್ಲಿ, ನನ್ನವರ ಎದುರಿಗೆ ಒಂಟಿಯಾಗಿ ಕಾಲ ಹಾಕಲಾರೆ."

"ಯಾಕಮ್ಮ ಹೀಗಂತೀಯಾ! ನಾವೆಲ್ಲ ಇಲ್ಲವೆ?"

"ನೀನು ಸದಾ ನನ್ನ ಕಣ್ಣೆದುರಿಗೆ ಇರ್ತೀಯಾ ಹೇಳು. ಕೆಲಸಕ್ಕೆ ಹೋಗಬೇಡವೆ?"

"ನಾನು ಬದುಕಿರುವವರೆಗೂ ನೀನು ಎಲ್ಲ ಹೋಗಕೂಡದು."

"ಬದುಕು, ಸಾವು ಯಾರ ಕೈಲಿ ಇದೆ ಹೇಳು. ನಾನು ಬದುಕಿರುವಷ್ಟು ದಿನ, ನೆಮ್ಮದಿಯಿಂದ ನನಗೆ ಇಷ್ಟ ಬಂದಂತೆ ಇರಲು ಬಯಸ್ತೀನಿ. ನನ್ನ ಕಷ್ಟ ಸುಖ ನಿನಗೆ ತಿಳಿದಿದೇಯಾ. ನನ್ನ ಈ ಮಾತನ್ನ ನಡೆಸಿಕೊಡು" ಕತ್ತಲೆಯಲ್ಲಿ ಮಗಳ ಕೈ ಹಿಡಿದಳು.

ವಿಶಾಲು "ಆಗಲಮ್ಮ" ಎಂದನಂತರವೇ ಮಗಳ ಕೈ ಬಿಟ್ಟಿದ್ದು.

ಮಾರನೇ ದಿನ ವಿಶಾಲು ತಾನೆ ಖುದ್ದಾಗಿ ಹೋಗಿ ಲಾಯರನ್ನ ಕರೆತಂದಳು. ಎಲ್ಲರೂ ಕುತೂಹಲದಿಂದ ನೋಡಿದರೂ, ಸೀತಮ್ಮ ಅಳುತ್ತಲೇ ಲಾಯರಿಗೆ ತಮ್ಮ ಅಹವಾಲನ್ನ ತಿಳಿಸಿದರು.

ಈಗ ನಾನು ಎಲ್ಲಾ ರೀತಿಯಿಂದಲೂ ಸರಿಯಾಗಿದೀನಿ. ನನ್ನ ತಲೆ ಕೆಟ್ಟು ನಾನು ಏನೂ ಮಾಡಲಾಗದ ಸ್ಥಿತಿಗೆ ತಲುಪುವ ಮೊದಲೇ, ಸ್ವಲ್ಪವಾದರೂ ಮನಃಶಾಂತಿ ಪಡೆಯಬೇಕೆಂದು ಆಸೆ. ನನ್ನ ಮರಣದ ನಂತರ, ನನ್ನ ಹೆಸರಿನಲ್ಲಿರುವ ಈ ಮನೆಯನ್ನ ಮಾರುವ ಬದಲು, ನಾನು ಬದುಕಿರುವಾಗಲೇ ಈ ಮನೆಯನ್ನ ಮಾರಲು ಇಚ್ಛಿಸುತ್ತೇನೆ. ನನ್ನ ಯಜಮಾನರು, ನನಗಾಗಿ, ನನ್ನ ಅನುಕೂಲಕ್ಕಾಗಿ ಕಟ್ಟಿಸಿಕೊಟ್ಟ ಮನೆಯನ್ನ ನಾನು ಇದುವರೆಗೂ ಜೋಪಾನವಾಗಿ ಕಾಪಾಡಿಕೊಂಡು ಬಂದಿದ್ದೇನೆ. ಮುಂದೆ ಏನಾಗುವುದೋ ನನಗೆ ತಿಳಿಯದು.

ಲಾಯರ್ರು ಎಲ್ಲರ ಕಡೆ ನೋಡಿ, ಆಕೆಯ ಮಾತಿಗೆ ಹೂಂ ಎಂದರು.

ಎಲ್ಲಾ ಆದಷ್ಟು ಬೇಗ ಆದರೆ ಒಳ್ಳೆಯದು.

ಮತ್ತೊಮ್ಮೆ 'ಹೂಂ' ಎಂದು ಕೈ ಮುಗಿದು ಆತ ಹೊರಟು ಹೋದರು.

ಎಲ್ಲರ ಕುತೂಹಲಕ್ಕೆ ಸೀತಮ್ಮ ತಣ್ಣೀರೆಚಿದಳು. ಅಪರೂಪಕ್ಕೆ ಹೆಣ್ಣು ಮಕ್ಕಳು ಸೊಸೆಯರು ಒಂದಾಗಿ ಕೂತು ಚರ್ಚಿಸಿದರೂ, ಸೀತಮ್ಮನ ಬದಲಾದ ನಿರ್ಧಾರದ ಬಗ್ಗೆ ತಿಳಿಯಲಾಗಲಿಲ್ಲ.

ಅದರಿಂದ ಮನೆಯ ವಾತಾವರಣದಲ್ಲೂ ಮಹತ್ವದ ಬದಲಾವಣೆ ಕಂಡು ಬಂತು. ನೀಲಕಂಠ ಯಾವ ಜವಾಬ್ದಾರಿ ವಹಿಸದಿದ್ದರೂ, ಸೀತಮ್ಮನೇ ನಿಂತು, ಗಂಡನ ಉತ್ತರ ಕ್ರಿಯೆಗಳನ್ನ ವಿಧಿವತ್ತಾಗಿ, ದಾನ ದಕ್ಷಿಣೆಗಳನ್ನಿತ್ತು ಸಂಬಂಧಿಗಳ ಸಮ್ಮುಖದಲ್ಲಿ ಗಂಡನ ಆತ್ಮಕ್ಕೆ ಶಾಂತಿಯನ್ನ ಕೋರಿದಳು.

ಮನೆಯ ಕಟ್ಟಡ ಚೆನ್ನಾಗಿದ್ದುದರಿಂದ ಮಾರಾಟವಾಗಲು ಯಾವ ತಕರಾರೂ ಇರಲಿಲ್ಲ. ಕಾಗದ ಪತ್ರಗಳೆಲ್ಲ ಸರಿಯಾಗಿಯೇ ಇದ್ದುದರಿಂದ ಏನೂ ತೊಂದರೆ ಇಲ್ಲದೇ ಎಲ್ಲಾ ನಿರ್ಣಯವಾಯಿತು. ಏಕೋ ಏನೋ ನೀಲಕಂಠ ಸಹ ಯಾವ ತಕರಾರನ್ನ ಎಬ್ಬಿಸಲಿಲ್ಲ. ಅಮ್ಮ ಆ ವಿಲ್‌ನ ಬಿಟ್ಟು, ಬೇರೆ ನಿರ್ಧಾರ ತಗೊಂಡಿದಾಳಲ್ಲ ಎನ್ನುವುದೇ ಸಮಾಧಾನವಿರಬೇಕು.

ಮನೆ ಕೊಂಡುಕೊಳ್ಳುವವನು, ಅಡ್ವಾನ್ಸ್ ಹಣ ಕೊಟ್ಟೊಡನೆ, ಸೀತಮ್ಮ ವಿಶಾಲುವಿನ ಜತೆಯಲ್ಲಿ ಹೋಗಿ, ಒಂದು ವೃದ್ಧಾಶ್ರಮದಲ್ಲಿ ತನಗಾಗಿ ಸ್ಥಳವನ್ನ ಕೇಳಿಕೊಂಡಳು. ಚೆನ್ನಾಗಿ ಹಣ ಕೊಡುವವಳಾದ್ದರಿಂದ ಯಾವ ತೊಂದರೆಯೂ ಇರಲಿಲ್ಲ. ಅಲ್ಲದೇ ಹೊಸದಾಗಿ ಕಟ್ಟಡ ನಿರ್ಮಾಣಗೊಳ್ಳುತ್ತಿತ್ತು. ಅವಳಿಗಾಗಿ ಒಂದು ಕೋಣೆಯನ್ನ ಗೊತ್ತು ಮಾಡಿಕೊಂಡು, ಅಡ್ವಾನ್ಸ್ ಹಣವನ್ನ ಕೊಟ್ಟು ವಾಪಸ್ಸಾದರು.

ವಿಶಾಲುವಿನ ಸಹಾಯದಿಂದ ತನ್ನಲ್ಲಿದ್ದ ಒಡವೆಯನ್ನೆಲ್ಲ ತೂಕ ಹಾಕಿಸಿ, ಬೆಳ್ಳಿ ಪಾತ್ರೆಗಳನ್ನ ತೂಕ ಹಾಕಿಸಿ ಚಿಕ್ಕ ತಟ್ಟೆಗಳನ್ನು ಸಿದ್ಧ ಮಾಡಿಸಿದಳು. ಒಡವೆಗಳನ್ನ ಹೆಣ್ಣು ಮಕ್ಕಳಲ್ಲಿ ಸಮನಾಗಿ ಹಂಚಿದಳು. ಬೆಳ್ಳಿಯ ಪಾತ್ರೆ, ಸಾಮಾನುಗಳನ್ನ ಸೊಸೆಯರಿಗೂ, ಎಲ್ಲಾ ಮೊಮ್ಮಕ್ಕಳಿಗೂ ಹಂಚಿದಳು.

ತನಗಾಗಿ ಕೆಲವು ಸೀರೆಗಳನ್ನ ತೆಗೆದಿಟ್ಟುಕೊಂಡು ಉಳಿದ ಸೀರೆಗಳನ್ನ ವಿಶಾಲು ಕೈಗೆ ಕೊಟ್ಟಳು. ಇದರಲ್ಲಿ ಯಾರಿಗೆ ಯಾವ ಸೀರೆ ಬೇಕೋ ಅದನ್ನ ಕೊಡು. ಮೊಮ್ಮಕ್ಕಳಿಗೆ ಲಂಗ ಹೊಲಿಸು. ಯಾರಿಗೂ ಬೇಡವಾದರೆ ಯಾರಿಗಾದರೂ ದಾನ ಮಾಡು. ಎಲ್ಲಾ ಹೇಳಿ ಮುಗಿಸಿದ ನಂತರ ಮತ್ತೆ ನುಡಿದಳು.

ಮುಂದಿನ ವಾರ ನಾನು ವೃದ್ಧಾಶ್ರಮಕ್ಕೆ ಹೋಗುತ್ತೇನೆ. ಸಧ್ಯದಲ್ಲೇ ಈ ಮನೆಯನ್ನ ಖಾಲಿ ಮಾಡಬೇಕಾಗುತ್ತದೆ. ಇಲ್ಲಿರುವ ವಸ್ತುಗಳಲ್ಲಿ ಯಾರಿಗೆ ಏನು ಬೇಕೋ ಅದನ್ನ ತೆಗೆದುಕೊಳ್ಳಿ, ಆದರೆ ಅದಕ್ಕಾಗಿ ಜಗಳ ಕದನವಾಡಬೇಡಿ. ಇನ್ನಾದರೂ ಈ ಮನೆಯ ಒಳ ಜಗಳ ನಿಲ್ಲಲಿ.

ಯಾರೊಬ್ಬರೂ, ನೀನ್ಯಾಕೆ ವೃದ್ಧಾಶ್ರಮಕ್ಕೆ ಹೋಗ್ತೀಯಾ ಎಂದು ಕೇಳಲಿಲ್ಲ. ಎಲ್ಲಾ ಮುಂಚೆಯೇ ತಿಳಿದವರಂತೆ ಸುಮ್ಮನಿದ್ದರು. ಇಷ್ಟೇಯಾ ಮಮತೆ ಎಂದುಕೊಂಡರೂ ತಾನೇ ಮಾತುಗಳನ್ನು ಸೇರಿಸಿದಳು.

"ನಿಮ್ಮಲ್ಲಿ ಯಾರಿಗೆ ಯಾವಾಗ ನನ್ನನ್ನ ನೋಡಬೇಕೆನಿಸಿದರೂ, ಧಾರಾಳವಾಗಿ

ಬರಬಹುದು." ಎಲ್ಲರ ಕಡೆಗೂ ಒಮ್ಮೆ ನೋಡಿ, ತನ್ನ ರೂಮಿಗೆ ಹೊರಟು ಹೋದಳು. ತನಗೆ ಅಗತ್ಯವಾದ ಬಟ್ಟೆಗಳನ್ನ ಕೆಲವು ಪುಸ್ತಕಗಳನ್ನ ಜೋಡಿಸಿ, ಪೆಟ್ಟಿಗೆಗೆ ತುಂಬಿಟ್ಟುಕೊಂಡಳು.

ಇನ್ನು ತನ್ನ ಕೆಲಸ ಮುಗಿಯಿತು ಎಂಬಂತೆ ದೇವರ ಮನೆಗೆ ಬಂದಳು. ದೇವರ ಮುಂದೆ ಉರಿಯುತ್ತಿದ್ದ ನಂದಾದೀಪವನ್ನೇ ನೋಡಿದಳು. ಈ ಮನೆಯಲ್ಲಿ ಸದಾ ಕಾಲವೂ ಉರಿಯುತ್ತಿದ್ದ ದೀಪವಿದು. ನನ್ನ ನಂತರ ಈ ಮನೆಯಲ್ಲಿ ಅದನ್ನ ಉರಿಸುವವರ್‍ಯಾರು? ಎನಿಸಿದಾಗ ದುಃಖ ಒತ್ತರಿಸಿಕೊಂಡು ಬಂದಿತು.

ನಂದಗೋಕುಲದಂತಿದ್ದ ಈ ಮನೆಯನ್ನು ನರಕ ಸದೃಶವನ್ನಾಗಿ ಮಾಡಿದ ಮಕ್ಕಳ ಬಗ್ಗೆ ಜಿಗುಪ್ಸೆ ಮೂಡಿತು. ಆದರೂ ಎಲ್ಲಾದರೂ, ಹೇಗಾದರೂ ಸುಖ ವಾಗಿರಲಿ, ಎಷ್ಟಾದರೂ ನನ್ನ ಮಕ್ಕಳಲ್ಲವೆ ಎಂದು ಮನಸ್ಸಿನಲ್ಲಿಯೇ ಹಾರೈಸಿದಳು.

ಮನೆ ಮಾರಿ ಬಂದ ಹಣದಲ್ಲಿ ತನಗಾಗಿ ಒಂದು ಲಕ್ಷ ರೂಪಾಯಿಯನ್ನ ಇಟ್ಟುಕೊಂಡು. ಉಳಿದ ಹಣವನ್ನ ಎಲ್ಲರ ಹೆಸರಿನಲ್ಲೂ ಸಮನಾಗಿ ಹಂಚಿ, ಚೆಕ್ ಬರೆದಿದ್ದಳು. ತನ್ನ ಎಲ್ಲಾ ಕೆಲಸವನ್ನ ವೀಕ್ಷಿಸುತ್ತಿದ್ದ ಭಗವಂತನನ್ನ ವಂದಿಸುತ್ತಾ ಅಲ್ಲಿಯೇ ಮಣೆಯ ಮೇಲೆ ತಲೆಯನ್ನಿಟ್ಟು ಮಲಗಿದಳು. ಜಂಪು ಹತ್ತಿದಾಗ, ಆ ಮನೆಯಲ್ಲಿ ಕಳೆದ ಒಂದೊಂದು ಕ್ಷಣವೂ ಭೂತಾಕಾರವಾಗಿ ಮನದ ಮುಂದೆ ಕುಣಿಯುತ್ತಿವೆ ಎನಿಸಿದಾಗ ಕಣ್ಣು ಬಿಡಲು ಪ್ರಯತ್ನಿಸಿದಳು. ಏನೂ ಗೋಚರಿಸದೇ ಅಂಧಕಾರದಲ್ಲಿದೇನೆಂಬ ಭಾವನೆ ಬಂದಾಗ ಅವ್ಯಕ್ತ ಭಯ ಆವರಿಸಿಕೊಂಡಿತು. 'ವಿಶಾಲು' ಎಂದು ಕೂಗಲು ಬಾಯಿ ತೆರೆದಂತೆಯೇ ಎಚ್ಚರವಾಯಿತು. ದೇವರ ಮುಂದಿನ ದೀಪವನ್ನ ಕಂಡೊಡನೆ ತಾನು ಕಂಡಿದ್ದು ಕನಸಿರಬಹುದು ಎಂದುಕೊಂಡಳು.

ತಾನು ಇನ್ನ ಮುಂದೆ ಪ್ರತಿಯೊಂದಕ್ಕೂ ವಿಶಾಲು ಎಂದು ಕೂಗುವುದನ್ನ ಬಿಡಬೇಕು. ಅಲ್ಲಿ ವೃದ್ಧಾಶ್ರಮದಲ್ಲಿ ಇವಳಲ್ಲಿ ಸಿಗ್ತಾಳೆ ಎಂದು ತನಗೆ ತಾನೇ ಹೇಳಿಕೊಂಡು ಸಪ್ಪಗೆ ನಗುತ್ತಾ ಮತ್ತೆ ಸರಿಯಗಿ ಮಲಗಿದಳು.

* * *

೧೩. ಸೋತವಳು

ಬೀಗಿತ್ತಿಯ ಸ್ಥಾನದಲ್ಲಿ ಕುಳಿತು, ಕುಳಿತಲ್ಲೇ ಜಬರ್ದಸ್ತು ನಡೆಸುತ್ತಿದ್ದ ಸುಂದರಮ್ಮ ನನ್ನು ಕಂಡು ಎಲ್ಲರಿಗೂ ಜುಗುಪ್ಸೆಯಾಗಿತ್ತು.

ಹಿರಿಮಗನ ಮದುವೆ, ತಾನೇಕೆ ಮೆರೆಯಬಾರದು! ಎಂಬ ಅಹಂನಿಂದ ಸುಂದರಮ್ಮ ಕುಳಿತಲ್ಲೇ ಬೀಗತನವನ್ನು ಚೆನ್ನಾಗಿ ಮಾಡಿಸಿಕೊಂಡಳು. ಸಧ್ಯ, ಮದುವೆಯ ಕಲಾಪಗಳು ಮುಗಿದು ಬೀಗರು ಹೋದರೆ ಸಾಕು ಎಂದು ಚಡಪಡಿಸಿ ದವರೂ ಉಂಟು.

ಆದರೆ ವರನ ತಮ್ಮ ಮದನ ಯಾರಿಗೂ ತಿಳಿಯದಂತೆ, ವಧುವಿನ ತಂಗಿ, ಸರಳಳನ್ನು ಕ್ಷಮೆ ಕೇಳಿದ್ದ.

"ನನ್ನ ತಾಯಿಯ ಪರವಾಗಿ ನಿಮ್ಮೆಲ್ಲರ ಕ್ಷಮೆ ಕೇಳ್ತೀನಿ. ಒಂದು ತರಹ ಹಳೆಯ ಸಂಪ್ರದಾಯದವರು..."

"ನೀವ್ಯಾಕ್ರೀ ಕ್ಷಮೆ ಕೇಳಬೇಕು, ನಿಮ್ಮ ತಾಯಿಗೆ ತಿಳುವಳಿಕೆ ಹೇಳಬಹುದಾಗಿ ತ್ತಲ್ಲ..."

ಅಲ್ಲೇ ನಿಂತಿದ್ದ ವಧು ಗಾಭರಿಯಿಂದ ತಂಗಿಯ ಕೈ ಚಿವುಟಿದಳು. "ಸುಮ್ಮನಿರೇ" ಪಿಸುಗುಟ್ಟಿದಳು.

ನಿನಗೆ ಹೆದರಿಕೇನಾ? ಆಗಲೇ ಅತ್ತೆಯ ಪರಹಿಸಿ ಮಾತನಾಡ್ತಿದೀಯಲ್ಲ ತಂಗಿ ಹಂಗಿಸಿದಳು. ನವವಧು ಮಂಜುಳಳ ಮುಖ ಕೆಂಪಾಯಿತು.

ನೋಡಿ ಮಿಸ್ಟರ್, ನಿಮ್ಮ ತಾಯಿ ಸ್ವಭಾವ ಹೇಗಿದ್ದರೆ ನನಗೇನಂತೆ ಆದರೆ ನನ್ನಕ್ಕ ಮಾತ್ರ ಅಲ್ಲಿ ಯಾವ ಕಷ್ಟಕ್ಕೂ ಒಳಗಾಗಬಾರದು... ಕೇಳಿದ್ದೆಲ್ಲಾ ಕೊಟ್ಟಾಗಿದೆ. ವರದಕ್ಷಿಣೆ ಅದೂ ಇದು ಅಂತ ಹಿಂಸಿಸಬಾರದು...

ಛೆ...ಛೆ... ನಮ್ಮ ಅಣ್ಣ ಅಂತಹವನಲ್ಲ.

"ಎಂತಹವರು ಅಂತ ಗೊತ್ತಾಯ್ತಲ್ಲ." ಗೊಣಗಿದಳು. ತುಟಿ ಸೊಟ್ಟ ಮಾಡಿದಳು.

"ಅದೆಲ್ಲಾ ನಮ್ಮ ತಾಯಿಯ ಆಸೆಗೋಸ್ಕರ ಆದದ್ದು. ಪಾಪ, ಕೆಲವೆಲ್ಲಾ ಅವನಿಗೂ ಗೊತ್ತಾಗಿರುಲ್ಲ.... ಆದರೆ ನಾನು ಒಂದು ಮಾತನ್ನು ಹೇಳ್ತೀನಿ. ಹೀಗೆ

ಈ ತರಹದ ಮದುವೆಯಾಗುಲ್ಲ. ಸಿಂಪಲ್ಲಾಗಿ ಮದುವೆಯಾಗ್ತೀನಿ."

ನೋಡೋಣ... ನೋಡೋಣ... ಮತ್ತೆ ವ್ಯಂಗ್ಯವಾಗಿ ನುಡಿದಳು.

ನೋಡ್ತಿರಿ. ನನ್ನ ಮದುವೆಗೆ ನೀವು ಹೇಗೂ ಬಂದೇ ಬರ್ತೀರಿ.... ಅವನೂ ನಗುತ್ತಾ ನುಡಿದ. ಅವನ ಮಾತು ಅವಳಿಗೆ ತಮಾಷೆಯಾಗಿ ಕಂಡಿತು. ತಾನೂ ಅಣಕಿಸಿ ನಕ್ಕಳು. ಮಂಜುಳ ಸುಮ್ಮನಿರುವಂತೆ ಸಂಜ್ಞೆಮಾಡಿದಳು.

ಬೀಗರು ಹೊರಟರು. ಅದ್ದೂರಿಯಾಗಿ ಮದುವೆ ಮಾಡಿಕೊಟ್ಟು, ಉಡುಗೊರೆಗಳನ್ನು ತುಂಬಿಸಿಕೊಟ್ಟು, ಉತ್ಸವದಂತೆ ಮೆರೆಸಿದ್ದರೂ, ಹೆಣ್ಣಿನ ಮನೆಯವರಿಗೆ ಏನೋ ದಿಗಿಲು. "ಬೀಗಿತ್ತಿ ಜೋರಿನ ಹೆಂಗಸು ಅಂತ ಅನ್ನಿಸುತ್ತೆ. ಮಂಜುಳ ಹೇಗಿರುತ್ತಾಳೋ ಏನೋ" ಅಂತ. ಆದರೂ ಆಕೆಯೊಡನೆ ಮಾತನಾಡುವ ಧೈರ್ಯವಾಗಲೀ ಮನಸ್ಸಾಗಲೀ ಯಾರಿಗೂ ಇಲ್ಲವಾದ್ದರಿಂದ ಸುಮ್ಮನಾದರು.

ಸರಳ, ಮದನನ ಬಳಿ ಬಂದು ನುಡಿದಿದ್ದಳು.

"ರೀ ಮಿಸ್ಟರ್, ನಿಮ್ಮ ಅತ್ತಿಗೆಯ ಕಣ್ಣಲ್ಲಿ ಒಂದು ಹನಿ ನೀರೂ ತೊಟ್ಟಿಕ್ಕಬಾರದು. ಹಾಗೆ ನೋಡಿಕೊಂಡರೆ, ನಾನು ನಿಮ್ಮ ಮಾತನ್ನ ನಂಬ್ತೀನಿ."

ಅವನಿಗೆ ನಗು ಬಂತು. ತಾನು ಆಡಿದ್ದ ಮಾತು ನೆನಪಾಗಿತ್ತು.

"ನನ್ನ ಅತ್ತಿಗೆ ಏಕೆ! ಅವರ ತಂಗಿಯ ಕಣ್ಣಿನಲ್ಲೂ ಒಂದು ತೊಟ್ಟು ನೀರು ಕಾಣದಂತೆ ನೋಡಿಕೊಳ್ತೀನಿ" ನಗುತ್ತಾ ನುಡಿದಾಗ ಅವಳು ಕೆಂಪಾದಳು. ನಾಚಿಕೆಯಿಂದ ಹಿಂದೆ ಸರಿದಿದ್ದಳು.

ಆನಂತರ, ನೆಂಟರಿಷ್ಟರೆಲ್ಲಾ ವಾಪಸ್ಸು ಹೋದಮೇಲೆ, ಮದನನ ಮನೆಯಲ್ಲಿ ಒಂದು ದೊಡ್ಡ ರಾದ್ಧಾಂತವೇ ನಡೆದಿತ್ತು. ಅಣ್ಣ ತಮ್ಮ ಇಬ್ಬರೂ ಸೇರಿ ತಾಯಿಯನ್ನ ಚೆನ್ನಾಗಿ ಹೀಯಾಳಿಸಿದ್ದರು.

"ಏನೇ ಹೇಳು, ನೀನು ಮದುವೆ ಮನೆಯಲ್ಲಿ ನಡೆದುಕೊಂಡ ರೀತಿ ಸರಿಯಿರಲಿಲ್ಲ. ಅವರೆಲ್ಲಾ ನಕ್ಕಿರುತ್ತಾರೆ. ಅಸಹ್ಯ ಪಟ್ಟುಕೊಂಡಿರ್ತಾರೆ"

"ಏನಿಲ್ಲ. ಅಂಥಾದ್ದೇನು ಮಾಡಿದೆ ನಾನು? ಸಂಪ್ರದಾಯದ ಪ್ರಕಾರ ನಾನು ಗಂಡಿನ ತಾಯಿ. ನಮಗೆ ಉಪಚಾರ ಮಾಡಿದಾರೆ ತಪ್ಪೇನು!

"ಅವರಾಗಿಯೇ ಮಾಡಲಿಲ್ಲ. ನೀನು ಕೇಳಿ ಕೇಳಿ ಮಾಡಿಸಿಕೊಂಡೆ. ನಾಚಿಕೆಗೇಡು. ಇವನೂ ಅಷ್ಟೇ...." ಅಣ್ಣ ರವಿಯನ್ನ ದೂಷಿಸಿದ.

"ಏ ನನಗೇನು ಗೊತ್ತಾಯ್ತು? ನಾನು ಹಸೆಮಣೆ ಮೇಲೆ ಕೂತಿದ್ದೆನಲ್ಲ. ಅಮ್ಮನ ಜತೆ ನೀನಿದ್ದೆಯಲ್ಲ.... ನೀನೇಕೆ ಹೇಳಬಾರದಾಗಿತ್ತು!" ರವಿಯೂ ಕೆಣಕಿದ.

"ನಿನ್ನ ಮದುವೆ, ನೀನೇ ಸುಮ್ಮನಿರುವಾಗ ನನಗೇನು ಅಂತ ಸುಮ್ಮನಿದ್ದೆ. ಆದರೆ ಈಗಲೇ ಹೇಳ್ತೀನಿ ಕೇಳಿ... ನಾನು ಮಾತ್ರ ಈ ತರಹದ ಮದುವೆ ಖಂಡಿತಾ

ಮಾಡ್ಕೊಳಲ್ಲ."

ತಾಯಿ ಸಿಟ್ಟಿನಿಂದ ಅವನ ಕಡೆ ನೋಡಿದಳು.

"ನೀನು ಏನೇ ಅನ್ನು, ನಾನು ಸರಳವಾಗಿ ಮದುವೆಯಾಗೋನು..."

ಅಷ್ಟರಲ್ಲಿ ಯಾರೋ ಬಂದುದರಿಂದ ಅವರುಗಳು ಮಾತನ್ನ ನಿಲ್ಲಿಸಿದರು. ರೂಮಿನಲ್ಲಿ ಕೂತು, ಅವರ ಮಾತುಕತೆಗಳನ್ನು ಕೇಳಿಸಿಕೊಂಡಿದ್ದ ಮಂಜುಳಂಗೆ, ಸಂತೋಷ ಭರಿತ ದುಃಖವುಂಟಾಗಿತ್ತು. ತಂದೆ ತಾಯಿಯನ್ನ ಬಿಟ್ಟು ಬಂದ ದುಃಖ ವಿದ್ದರೂ, ಆ ದುಃಖವನ್ನ ಮರೆಸಬಲ್ಲ ಗಂಡ, ಮೈದುನ ತನ್ನ ಕಡೆಗೆ ಇದಾರೆ, ತಾನೇನು ಅತ್ತೆಗೆ ಹೆದರಬೇಕಾಗಿಲ್ಲ ಎಂದುಕೊಂಡು ತನಗೆ ತಾನು ಸಮಾಧಾನ ಹೇಳಿಕೊಂಡಳು.

"ಅತ್ತಿಗೆ, ನಾನು ಊರಿಗೆ ವಾಪಸ್ಸು ಹೋಗ್ತಿದೀನಿ. ನಿಮ್ಮ ತಾಯಿ ಮನೆಯವರಿಗೆ ಏನಾದರೂ ಸಂದೇಶ ಇದೆಯಾ!" ಮದನ ತಮಾಷೆಯಾಗಿ ಕೇಳಿದ್ದ.

"ನನ್ನ ತಂಗಿಗೆ ಏನೋ ಅಸಮಾಧಾನ. ಕಾಗದಾನೇ ಬರೆದಿಲ್ಲ. ನಾನೊಂದು ಕಾಗದ ಬರೆದು ಕೊಡ್ತೀನಿ. ಉತ್ತರ ಬರೆಯಬೇಕಂತೆ ಅಂತ ಒತ್ತಾಯವಾಗಿ ಹೇಳಿ, ಒಪ್ಪಿಸ್ತೀರಾ?

"ಆಗಲಿ, ಪ್ರಯತ್ನ ಪಡ್ತೀನಿ. ಕಾಗದ ಬರೆದುಕೊಡಿ." ಅಂದಿದ್ದ.

ಬಸ್‌ಸ್ಟ್ಯಾಂಡಿನಲ್ಲಿ ಇಳಿದವನೇ, ನೇರವಾಗಿ ಮೊದಲು ತನ್ನ ಅತ್ತಿಗೆಯ ತಾಯಿಯ ಮನೆಗೆ ಹೋದ. ಎಲ್ಲರೂ ಸಂಭ್ರಮದಿಂದ ಅವನನ್ನ ಎದುರುಗೊಂಡರು. ಸರಳ ಎಲ್ಲೂ ಕಾಣದಿದ್ದಾಗ ಅವನು ನಿರಾಶನಾದ.

"ಮಂಜು ಹೇಗಿದಾಳೆ! ಆರೋಗ್ಯವಾಗಿದಾಳ!" ತಂದೆ ತಾಯಿ ವಿಚಾರಿಸಿದರು. ಅತ್ತಿಗೆ ಕೊಟ್ಟ ಕಾಗದವನ್ನ ಅವರ ಕೈಗಿತ್ತ. ಅವರು ಸರಳಳ ವಿಳಾಸವನ್ನ ನೋಡಿ, ಓದದೇ ಹಾಗೇ ಒಂದು ಕಡೆ ಇಟ್ಟು, ಅವನಿಗೆ ಕಾಫಿ ತಿಂಡಿ ಕೊಟ್ಟು ಉಪಚರಿಸಿ, ಅವನ ಯೋಗಕ್ಷೇಮವನ್ನು ವಿಚಾರಿಸಿದರು.

"ಇದೇ ಊರಿನಲ್ಲಿದೀರ ಆಗಾಗ್ಗೆ ಬರ್ತಿರಿ..." ಆಹ್ವಾನವಿತ್ತರು. ಅವನು ಮುದದಿಂದ ಹೂಂ ಗುಟ್ಟಿದ. ಅಷ್ಟರಲ್ಲಿ ಹೊರಗೆ ಹೋಗಿದ್ದ ಸರಳ ಒಳಗೆ ಬಂದಳು. ಅವನನ್ನು ಕಂಡು ಅಲ್ಲೇ ನಿಂತಳು. ಹೊರಟು ನಿಂತಿದ್ದ ಅವನು ಮತ್ತೆ ಅವಳಿಗೆ ಒತ್ತಿ ಹೇಳಿದ.

ಅತ್ತಿಗೆಗೆ, ನಿಮ್ಮ ಮೇಲೆ ಕೋಪ. ನೀವು ಕಾಗದಾನೇ ಬರೆದಿಲ್ಲವಂತೆ.

"ಅವಳು ಅಲ್ಲಿ ಸುಖವಾಗಿಲ್ಲ ಅಂತ ತಿಳಿದುಕೊಂಡು ನಾನು ದುಃಖ ಪಡಲು ನನಗಿಷ್ಟವಿಲ್ಲ." ಅವನು ಅಧೀರನಾದ.

"ಅಂದರೆ... ಅತ್ತಿಗೆ ಹಾಗೆ ಬರೆದಿದಾರಾ!"

ತಕ್ಷಣ ಅವಳು ಎಚ್ಚೆತ್ತಳು.

"ಇಲ್ಲ. ಅವಳು ಏನು ಬರೆದಿದಾಳೋ ನಾನು ಓದಿಯೇ ಇಲ್ಲ. ಕಾಗದವನ್ನ ಓಪನ್ನೇ ಮಾಡಿಲ್ಲ." ಅವನು ನಿರಾಳನಾದ.

ಛೆ ಒಂದು ಗಳಿಗೆಯಲ್ಲಿ ನಮ್ಮನ್ನೆಲ್ಲ ಕೆಟ್ಟವರನ್ನಾಗಿ ಮಾಡಿಬಿಟ್ಟಿದ್ರಲ್ಲ.... ಅವನ ದನಿಯನ್ನು ಗಮನಿಸಿ, ಅವಳು ಮೆತ್ತಗಾದಳು.

"ಸಾರಿ... ನಾನು ನಿಮ್ಮನ್ನ ನೋಯಿಸಿದೆ."

"ಪರವಾಗಿಲ್ಲ. ನಿಮ್ಮಕ್ಕ ಏನು ಬರೆದಿದಾರೆ ಅಂತ ನಿಧಾನವಾಗಿ ಎಲ್ಲಾ ಕಾಗದಗಳನ್ನ ಓದಿ, ಈ ಕಾಗದವನ್ನೂ ಓದಿ, ಆದಷ್ಟು ಬೇಗ ಅವರಿಗೆ ಉತ್ತರ ಬರೆಯಿರಿ. ಇಲ್ಲದಿದ್ದರೆ, ಅವರಿಗೆ ಸಮಾಧಾನವಂತೂ ಖಂಡಿತಾ ಇಲ್ಲ." ಎಂದು ನುಡಿದು, ತನ್ನ ಕ್ವಾರ್ಟರ್ಸ್‌ಗೆ ವಾಪಸ್ಸಾದ.

ಮಾರನೇ ದಿನ, ಅವನು ಆಫೀಸಿನಲ್ಲಿದ್ದಾಗ, ಅವನಿಗೆ ಸರಳಳಿಂದ ಫೋನು ಕರೆ ಬಂತು. "ನಿಮ್ಮ ಹತ್ತಿರ ಮಾತನಾಡಬೇಕು, ಯಾವಾಗ ಸಿಗ್ತೀರಾ!" ಕೇಳಿದ್ದಳು.

"ಅದಕ್ಕೇನಂತೆ ಈಗಲೇ ಬರ್ತಿನಿ... ಅದಿರಲಿ.... ಅತ್ತಿಗೆಗೆ ಕಾಗದ ಬರೆದ್ರಾ!"

ಹುಂ. ಬರೆದು ಪೋಸ್ಟ್ ಬಾಕ್ಸ್‌ಗೆ ಹಾಕಿದ್ದೂ ಆಯಿತು... ನಾನು ಇಲ್ಲೇ ಬ್ಯಾಂಕ್ ಹತ್ತಿರ ನಿಮಗೋಸ್ಕರ ವೈಟ್ ಮಾಡ್ತಿದೀನಿ ಬರ್ತೀರಾ?"

"ಓ.ಕೇ..." ಎಂದ ಸೀಟಿ ಹೊಡೆದು. ರಿಸೀವರ್‌ನ್ನ ಇಟ್ಟು, ತಕ್ಷಣವೇ ಹೊರಟ. ಬ್ಯಾಂಕಿನ ಬಳಿ ನಿಂತಿದ್ದ ಅವಳನ್ನ ಕಂಡು, ಸ್ಕೂಟರಿನ ವೇಗವನ್ನ ಕಡಿಮೆ ಮಾಡಿ, ಪಾರ್ಕಿಂಗ್‌ನಲ್ಲಿ ನಿಲ್ಲಿಸಿ, ಅವಳೆಡೆಗೆ ಬಂದ. ಇವನನ್ನ ಕಂಡು ಮುಗುಳ್ನಕ್ಕವಳನ್ನ ಕಂಡು ಇವನಿಗೆ ಮಹದಾನಂದವಾಯಿತು. ಇಬ್ಬರೂ ಸಮೀಪದ ರೆಸ್ಟೋರೆಂಟ್‌ಗೆ ಬಂದು ಕೂತು, ಮಾತಿಗೆ ಪ್ರಾರಂಭಿಸಿದರು.

"ಪ್ಲೀಸ್, ನನ್ನನ್ನ ಕ್ಷಮಿಸಿ, ನಾನು ನಿಮ್ಮನ್ನ ತಪ್ಪಾಗಿ ತಿಳಿದಿದ್ದೆ" ಎಂದಳು ಮೆಲುದನಿಯಲ್ಲಿ.

"ಅಬ್ಬಾ... ಅತ್ತಿಗೆ ಏನು ಬರೆದು ಬಿಟ್ಟಿದಾರೋ ಅಂತ ಹೆದರಿದ್ದೆ. ಸಧ್ಯ ಸಮಾಧಾನವಾಯಿತು." ಎಂದ ಎದೆ ನೀವಿಕೊಂಡು

ನಿಮ್ಮಿಬ್ಬರನ್ನ ತುಂಬಾ ಹೊಗಳಿ ಬರೆದಿದಾಳೆ. ಅತ್ತೆ ಸಹ ಅವಳನ್ನ ಚೆನ್ನಾಗಿ ನೋಡಿಕೊಳ್ತಿದಾರಂತೆ..

ಅಮ್ಮ ತನ್ನ ಸನ್ಮಾನಗಳಿಗೋಸ್ಕರ ಮದುವೆ ಮನೇಲಿ ಹಾಗೆ ಆಡಿರಬಹುದು. ಆದರೆ ಸ್ವಭಾವತಃ ಅವಳೂ ಕೆಟ್ಟವಳಲ್ಲ. ಅಲ್ಲದೇ ಈಗ ಅವಳಿಗೂ ಹೀನಾಯವಾಗಿರಬಹುದು...

ಹೋಗಲಿ ಬಿಡಿ. ಅಕ್ಕ ಸುಖವಾಗಿದಾಳಲ್ಲ. ಅಷ್ಟೇ ಸಾಕು. ಒಂದು ವೇಳೆ

ಅವಳು ಸುಖವಾಗಿಲ್ಲದಿದ್ದರೆ, 'ಮದುವೆ' ಎನ್ನುವ ಪದದ ಮೇಲೆ ನನಗೆ ದ್ವೇಷ ಹುಟ್ಟುತ್ತಿತ್ತು.... ನಾನೂ ಮದುವೆ ಮಾಡಿಕೊಳ್ಳುವ ಬಗ್ಗೆ ನನ್ನ ಅನಿಸಿಕೆಯನ್ನ ಬದಲಾಯಿಸಿ ಕೊಂಡಿದೀನಿ ಈಗ..."

"ಅಂದರೆ?"

"ಆದಿನ, ಆಕ್ಷಣದಲ್ಲಿ ನಾನು ಮದುವೆಯಾಗಬಾರದು, ಅಪ್ಪ ಅಮ್ಮನ ಜತೆ ಹಾಗೇ ಇದ್ದು ಬಿಡಬೇಕೆಂದು ನಿಶ್ಚಯಿಸಿದ್ದೆ...."

"ಈಗ ಮನಸ್ಸು ಬದಲಾಯಿಸಿದೀರಲ್ಲ... ಒಳ್ಳೇದೇ ಆಯ್ತು..."

ಇಬ್ಬರೂ ಕಾಫಿ, ತಿಂಡಿ ಮುಗಿಸಿ ಎದ್ದರು. ಅವನು ಅವಳನ್ನ ಅವಳ ಮನೆ ತಲುಪಿಸಿ, ಮತ್ತೆ ತನ್ನ ಆಫೀಸಿಗೆ ವಾಪಸ್ಸಾದ.

ಅಂದಿನಿಂದ ಇಬ್ಬರೂ ಆಗಾಗ್ಗೆ ಭೇಟಿಯಾಗುತ್ತಿದ್ದರು. ರಹಸ್ಯವಾಗಿ ಒಬ್ಬರನ್ನೊಬ್ಬರು ಪ್ರೀತಿಸತೊಡಗಿದ್ದರು. ಒಂದು ಶುಭ ಮುಹೂರ್ತದಲ್ಲಿ ಮದನ ತನ್ನ ಪ್ರೀತಿಯನ್ನು ವ್ಯಕ್ತ ಪಡಿಸಿದ.

ಸರಳ... ನಾನು ನಿಮ್ಮನ್ನ ಮದುವೆಯಾಗಬೇಕು ಅಂತ ಆಶಿಸ್ತಿದೀನಿ. ನಿಮ್ಮ ಮನಸ್ಸಿನಲ್ಲಿ ಏನಿದೆ?

"ನನ್ನ ಮನಸ್ಸಿನ ಮಾತನ್ನ ನೀನೇ ಅರ್ಥಮಾಡಿಕೊಳ್ಳಬಹುದಲ್ಲ" ಬಿಗುವಿನ ರೀತಿಯಲ್ಲಿ ನುಡಿದ್ದಳು. ಅಲ್ಲಿಗೆ ಎಲ್ಲಾ ಅರ್ಥವಾಗಿತ್ತು.

ಮೊದಲು ಈ ವಿಷಯವನ್ನ ಮದನ ತನ್ನ ಮನೆಯಲ್ಲಿ ಪ್ರಸ್ತಾಪಿಸಿದ ತಾಯಿ ಒಪ್ಪಿಗೆ ಕೊಡಲಿಲ್ಲ, ಮೊದಲಿಗೆ, "ಒಂದೇ ಮನೆಯಿಂದ ಎರಡು ಹೆಣ್ಣು ತರುವುದು ಸರಿಯಲ್ಲ. ಅವರಿಗೆ ಸದರವಾಗುತ್ತೆ..." ಅಂತಂದಳು.

"ಅದೆಲ್ಲ ಎಂತಹ ಮಾತಮ್ಮ... ಎಷ್ಟೋ ಜನರ ಮನೇಲಿ ಅಣ್ಣ ತಮ್ಮ ಅಕ್ಕ ತಂಗಿಯರನ್ನ ಮದುವೆಯಾಗುತ್ತಾರೆ? ಅಣ್ಣ ನುಡಿದಿದ್ದ.

ಆದರೂ ಏಕೋ ಏನೋ ಆಕೆಗೆ ಸರಳ ಈ ಮನೆಗೆ ಸೊಸೆಯಾಗಿ ಬರುವುದು ಸರಿ ಎನಿಸಲಿಲ್ಲ. ಅಲ್ಲದೇ ಇವನಿಗೆ ಈಗಲೇ ಏನು ಅವಾಂತರ ಮದುವೆಗೆ ಎನ್ನುವ ಧೋರಣೆ ಬೇರೆ...

ನೀನು ಏನೇ ಆಡಿದರೂ, ನಾನು ಅವಳನ್ನೇ ಮದುವೆಯಾಗೋದು.... ನಿನಗೆ ಸರಿ ಹೋಗದೇ ಇದ್ದರೆ, ನಾನೇ ಹೋಗಿ ಅವರ ಮನೇಲಿದ್ದು ಬಿಡ್ತೀನಿ. ಅವರ ಮನೆ ಅಳಿಯನಾಗಿ.... ಬೆದರಿಕೆಯ ಮಾತನ್ನ ಆಡಿದ.

ಯಾಕೋ ಏನೋ ಆಕೆಗೆ ಅವನ ಮಾತು ಸರಿ ಎನಿಸಲಿಲ್ಲ. ತನ್ನ ಸ್ವಂತ ಮಗ ತನ್ನನ್ನ ಬಿಟ್ಟು ಅಲ್ಲಿ ಹೋಗಿ ಮನೆ ಅಳಿಯನಾಗಿರುವುದೆ! ಹೇಗಾದರೂ ಈ ಮದುವೆಯನ್ನು ತಡೆಯಬೇಕು ಎಂದು ಚಿಂತಿಸತೊಡಗಿದಳು. ಆದರೆ ಮಾರ್ಗ

ತಿಳಿಯಲಿಲ್ಲ. ಮನೆಯ ಈ ಕ್ಲೇಶವನ್ನ ಅರಿತ ಮಂಜುಳ ಮೈದುನನೊಡನೆ ಗುಟ್ಟಾಗಿ ಮಾತನಾಡಿದಳು.

ಅಮ್ಮನಿಗೆ ಇಷ್ಟವಿಲ್ಲದ ಮೇಲೆ, ನಿಮಗೆ ತಾನೇ ಯಾಕೆ ಹಠ.... ಅವಳಿಗಿಂತ ಚೆನ್ನಾಗಿರುವ ಹೆಣ್ಣನ್ನ ನೋಡ್ತೀನಿ ನಿಮಗೆ ನಾನು..."

"ಅತ್ತಿಗೆ ನೀವು ಈ ಮಾತು ಹೇಳ್ತಿದೀರಾ? ಏಕೆ ನಿಮ್ಮ ತಂಗಿ, ಸೊಸೆಯಾಗಿ ಈ ಮನೆಗೆ ಬರುವುದು ನಿಮಗೆ ಇಷ್ಟವಿಲ್ಲವೆ? ಅಥವಾ ನನಗಿಂತ ಉತ್ತಮವಾದ ಬೇರೆ ಗಂಡನ್ನ ನಿಮ್ಮ ತಂಗಿಗೆ ನೋಡಬೇಕು ಅಂತ ಅಂದ್ಕೊಂಡಿದೀರಾ?"

"ಛೆ...ಛೆ... ಹಾಗಲ್ಲ. ನಿಮ್ಮಿಬ್ಬರ ಜೋಡಿ ತುಂಬಾ ಸರಿಯಾಗಿರುತ್ತೆ. ಆದರೆ ಯಾರಿಗೂ ತಿಳಿಯದ ಒಂದು ಮಾತು ಇದೆ. ಆಮೇಲೆ ನಿಮ್ಮ ತಾಯಿಗೇನಾದರೂ ತಿಳಿದರೆ, ದೊಡ್ಡ ರಂಪವಾದೀತೆಂದು ಹೆದರಿಕೆ...."

"ಏನದು? ಅಂಥದ್ದು... ಯಾರಿಗೂ ತಿಳಿಸದೇ ಇದ್ದದ್ದು..." ಅವನಿಗೂ ಸ್ವಲ್ಪ ಅಂಜಿಕೆ ಪ್ರಾರಂಭವಾಗಿತ್ತು.

"ನೀವು ಹೆದರಬೇಕಾದ್ದೇನಿಲ್ಲ. ನನ್ನ ತಂಗಿ ಒಳ್ಳೆಯವಳೇ... ಆದರೆ... ಆದರೆ... ಅವಳು ನಮ್ಮ ಮನೆಯಲ್ಲಿ ಹುಟ್ಟಿದವಳಲ್ಲ. ಸಾಕು ಮಗಳು... ಅವಳ ತಂದೆ ತಾಯಿ ಯಾರೋ ನಮಗೆ ತಿಳಿಯದು. ಅಲ್ಲದೇ ಅವಳು ವಯಸ್ಸಿನಲ್ಲಿ ನನಗಿಂತ ದೊಡ್ಡವಳು...."

"ಓ.. ಅದರಿಂದಲೇ ನಿಮ್ಮ ತಂದೆ ಅವಳಿಗೆ ಮದುವೆಯ ಪ್ರಯತ್ನವನ್ನೇ ಮಾಡಿಲ್ಲವೇನೋ... ಪರವಾಗಿಲ್ಲ ಬಿಡಿ. ನಾನು ಅವಳಿಗೆ ಬಾಳನ್ನ ಕೊಡ್ತೀನಿ."

"ಇಲ್ಲ. ಹಾಗಲ್ಲ. ನಿಜವಾದ ಮಾತು ಬೇರೆ. ನಿಮ್ಮ ಅಣ್ಣನನ್ನ ಮೊದಲು ವಿಚಾರಿಸಿದ್ದು ಅವಳಿಗೇನೇ... ಏಕೋ ಏನೋ ಅವಳು ಅವರನ್ನು ಫೋಟೋ ನೋಡಿಯೇ ಖಡಾ ಖಂಡಿತವಾಗಿ ಬೇಡ ಅಂದುಬಿಟ್ಟಳು. ಇಲ್ಲದಿದ್ದರೆ ಈದಿನ ಅವಳೇ ನಿಮ್ಮ ಅತ್ತಿಗೆ ಆಗಿರುತ್ತಿದ್ದಳು."

ಆ ಮಾತಿಗೆ ಏನು ಹೇಳಬೇಕೆಂದು ಅವನಿಗೆ ತಿಳಿಯಲಿಲ್ಲ. ಸುಮ್ಮನೇ ಹೊರಟು ಹೋದ. ಈ ವಿಷಯದ ಬಗ್ಗೆ ಸರಳಳೊಡನೆ ಪ್ರಸ್ತಾಪ ಮಾಡಬೇಕೋ ಬೇಡವೋ ತಿಳಿಯದೇ ಒದ್ದಾಡಿದ. ಕಡೆಗೆ ತಡೆಯಲಾಗದೇ ಅವಳ ತಂದೆಯ ಹತ್ತಿರ ಎಲ್ಲಾ ಆಡುವುದೆಂದು ನಿಶ್ಚಯಿಸಿಕೊಂಡು ಅವರ ಮನೆಗೆ ಹೋದ.

ಅವನು ಹೇಳಿದ ಮಾತು ಕೇಳಿ ಅವರು ಗಂಭೀರವಾದರು. ನಂತರ ನಿಧಾನ ವಾಗಿ ನುಡಿದರು, "ಈ ವಿಷಯವನ್ನ ನಾನಾಗಿಯೇ ಯಾರಿಗೂ ತಿಳಿಸುವ ಇಚ್ಛೆಯೇ ಇರಲಿಲ್ಲ. ಮಂಜು ಏಕೆ ಹೇಳಿದಳೋ ತಿಳಿಯದು. ಸರೂ ನನ್ನ ಸ್ವಂತ ಮಗಳಿಗಿಂತ ಹೆಚ್ಚು ಏಕೋ ಏನೋ ಅವಳು ಮದುವೆಯಾಗುವುದಿಲ್ಲವೆಂದು ಹಠ ಹಿಡಿದಿದ್ದರಿಂದ

ಮಂಜುವಿಗೆ ಮದುವೆ ಮಾಡಿದೆವು. ನಮಗೆ ಇಬ್ಬರೂ ಒಂದೇ... ಈಗ ಅವಳು ಮದುವೆಗೆ ಒಪ್ಪಿರುವುದು ನಿಜಕ್ಕೂ ಸಂತೋಷದ ವಿಷಯವೇ... ಆದರೆ ನಿಮ್ಮ ತಾಯಿ ಒಪ್ಪಿದ್ರೆ ಮಾತ್ರ!"

"ಅವರಿಗೆ ತಿಳಿಸಿದರೆ ಆಯ್ತು." ಸಲೀಸಾಗಿ ನುಡಿದ.

"ಅವರು, ಒಪ್ಪಿಗೆ ಕೊಟ್ಟಿಲ್ಲ ಅಂತ ಅಂದರಲ್ಲಾ ಹೀಗೇನಾದರೂ ವಿಷಯ ಅಂತ ತಿಳಿದರೆ ಕೋಲಾಹಲವಾಗುತ್ತೆ. ನಮ್ಮ ಮಂಜು ಆ ಮನೇಲಿ ಬಾಳಬೇಕು... ಯಾವುದೇ ತರಹದ ಸಮಸ್ಯೆ ಉದ್ಭವವಾಗಬಾರದು."

"ಹಾಗೇನೂ ಆಗುಲ್ಲ. ನಾನು ಮಾತು ಕೊಡ್ತೀನಿ. ನಾನು ಸರಳಂಗೋಸ್ಕರ ಆ ಮನೇನೆ ಬಿಟ್ಟು ಬರಲು ತಯಾರಾಗಿದೀನಿ."

"ಆ ಮಾತು ನಿಮ್ಮ ಬಾಯಿಂದ ಬರಬಾರದು. ಎಷ್ಟಾಗಲೀ ಅವರು ನಿಮ್ಮ ತಾಯಿ. ಅವರ ಒಪ್ಪಿಗೆ ಇಲ್ಲದೇ ನೀವು ದುಡುಕಬಾರದು ಅಂತ ನನ್ನ ಸಲಹೆ. ಆದ್ದರಿಂದ ನಿಧಾನವಾಗಿ ಯೋಚಿಸಿ ತೀರ್ಮಾನಕ್ಕೆ ಬನ್ನಿ. ನಿಮಗೆ ಸರಳಗಿಂತ ಒಳ್ಳೆ ಹೆಣ್ಣು ಸಿಗಬಹುದು..."

"ಇದೇ ಮಾತನ್ನ ಅತ್ತಿಗೆ ಸಹ ಹೇಳಿದ್ದರಲ್ಲವೆ? ಸರಳ ಒಳ್ಳೆಯ ಹೆಣ್ಣು ಅಲ್ಲ ಅಂತ ಇವರುಗಳ ಭಾವನೆಯೇ? ತಂದೆ ತಾಯಿ ಯಾರು ಅಂತ ತಿಳಿಯದೇ ಇರಬಹುದು... ಆದರೆ ಒಂದು ಒಳ್ಳೆಯ ಮನೆಯಲ್ಲಿ ಬೆಳೆದು ಸುಶಿಕ್ಷಿತಳಾಗಿಲ್ಲವೆ? ಇದಕ್ಕಿಂತ ಇನ್ನೇನು ಬೇಕು... ಎಲ್ಲರೂ ಅಮ್ಮನಿಗೆ ಹೆದರುತ್ತಿದಾರೆ. ಅಮ್ಮನಿಗೆ ನಾನೇ ಈ ವಿಷಯ ತಿಳಿಸಿ, ಅವಳ ಒಪ್ಪಿಗೆ ಪಡೆಯಲೇಬೇಕು. ಒಂದು ವೇಳೆ ಅವಳು ಒಪ್ಪದಿದ್ದರೂ ನಾನು ಇವಳನ್ನೇ ಮದುವೆಯಾಗುವುದು... ಅಥವಾ ಆ ಜನ್ಮ ಬ್ರಹ್ಮಚಾರಿಯಾಗಿದ್ದು ಬಿಡ್ತೀನಿ." ತನ್ನಲ್ಲೇ ನಿಶ್ಚಯಿಸಿಕೊಂಡ.

ಅಣ್ಣ ಅತ್ತಿಗೆಯನ್ನ ಬಲವಂತವಾಗಿ ಸಿನಿಮಾಕ್ಕೆ ಕಳುಹಿಸಿ, ತಾಯಿಯೊಡನೆ ಮಾತಿಗಾರಂಭಿಸಿದ, " ಅಮ್ಮ ಸರಳನ್ನ ಕಂಡರೆ ನಿನಗೇಕೆ ಅಸಮಾಧಾನ? ಅವಳು ಒಪ್ಪಿದ್ದರೆ, ಅವಳು ನಿನ್ನ ಹಿರಿಯ ಸೊಸೆಯಗಿ ಬಂದಿರುತ್ತಿದ್ದಳು."

"ಸಧ್ಯ ಒಳ್ಳೆಯದೇ ಆಯ್ತು.. ಆ ಹುಡುಗಿಗೆ ದುರಹಂಕಾರ."

"ನಿನಗೇನು ದುರಹಂಕಾರ ಕಡಿಮೇನಾ ಅದಿರಲಿ, ಆ ಮನೆಯಲ್ಲಿ ಅವಳು ಹುಟ್ಟಿದವಳಲ್ಲ, ಆದರೂ, ಎಲ್ಲರನ್ನ ಮೀರಿಸಿ ಆ ಮನೇಲಿ ಇದಾಳಲ್ಲ. ಅದಕ್ಕೆ ಕಾರಣ ಏನು ಗೊತ್ತಾ?"

"ಏನು? ಅವಳು ಆ ಮನೆಯ ಮಗಳಲ್ಲವೆ? ನಿನಗ್ಯಾರು ಹೇಳಿದರು?"

"ಅದೇನೇ ಇರಲಿ, ಅದರಲ್ಲಿ ಅವಳ ತಪ್ಪೇನಿದೆ! ಸ್ವಂತ ತಂದೆ ತಾಯಿಯಷ್ಟೇ ಪ್ರೀತಿ ಯಿಂದ ಅವರು ಸಾಕಿ ಬೆಳೆಸಿ, ವಿದ್ಯಾವಂತೆಯನ್ನಾಗಿ ಮಾಡಿದಾರೆ. ಮದುವೆ

ಮಾಡಿ ಕೊಡಲು ಸಿದ್ಧವಾಗಿದಾರೆ. ಸ್ವಂತ ಮಗಳು ಎಂದೇ ಎಲ್ಲರಿಗೂ ತಿಳಿಸಿರುವುದು. ನಿನ್ನ ಮೇಲಿನ ಹೆದರಿಕೆಯಿಂದ ಅತ್ತಿಗೆ ಈ ವಿಷಯವನ್ನ ಬಹಿರಂಗ ಪಡಿಸಿದಾರೆ. ಇಲ್ಲದಿದ್ದರೆ ನಮಗ್ಯಾರಿಗೂ ತಿಳಿಯುತ್ತಲೇ ಇರಲಿಲ್ಲ. ನನಗೊಂದು ಸಂದೇಹ, ಒಂದು ವೇಳೆ ನಿನಗೇ ಇಂತಹ ಪರಿಸ್ಥಿತಿ ಬಂದಿದ್ದರೆ ನೀನೇನು ಮಾಡ್ತಿದ್ದೆ!

ಆಕೆ ಸಣ್ಣಗೆ ನಡುಗಿದಳು. ಮಗನ ಮೇಲೆ ಕೋಪ ಉಕ್ಕಿತು. ಏನೂ ಮಾತನ್ನಾಡದೇ ಅಲ್ಲಿಂದ ಎದ್ದು ಹೋದಳು. ಅವನಿಗೆ ಏಕೆಂದು ಅರ್ಥವಾಗಲಿಲ್ಲ. ತನ್ನ ರೂಮಿಗೆ ಹೋಗಿ ಬಾಗಿಲನ್ನು ಹಾಕಿಕೊಂಡು, ಆಕೆ ಅತ್ತಳು.

ತನ್ನ ಸ್ವಂತ ಮಗ ತನ್ನನ್ನ ಈ ರೀತಿ ಪ್ರಶ್ನಿಸಿದನಲ್ಲ. ನನ್ನ ಕಷ್ಟ ಅವನಿಗೇನು ಗೊತ್ತು! ನಾನು ಪಟ್ಟ ಪಾಡು, ನಿಜವಾದ ವಿಷಯ ತಿಳಿದರೆ ಇನ್ನೇನು ಆಡ್ತಾನೋ? ಈ ಮನೆಯಲ್ಲಿ ಖಂಡಿತಾ ಇರುವುದಿಲ್ಲ. ಮನೆಬಿಟ್ಟು ಹೋಗ್ತಾನೆ ಅಷ್ಟೇ. ತಾನು ಅವನಿಗೆ ಈ ವಿಷಯವನ್ನ ತಿಳಿಸಲೇ ಬಾರದು. ಎಂದುಕೊಂಡರೂ, ಮನಸ್ಸು ಒಪ್ಪಲಿಲ್ಲ. ಯಾರಿಗಾದರೂ ಹೇಳಿ ಪರಿತಾಪವನ್ನ ಕಡಿಮೆ ಮಾಡಿಕೊಳ್ಳಬೇಕು ಅಂತ ಅನ್ನಿಸಿದರೂ ಮನಸ್ಸಿನ ಕಡಿವಾಣವನ್ನ ಬಿಗಿಯಾಗಿ ಹಿಡಿದಿರಲಿಲ್ಲವೆ...

ಮದನ ಚಿಕ್ಕ ಮಗುವಾಗಿದ್ದಾಗ, ನನ್ನ ಗಂಡ, ಅತ್ತೆ, ನನ್ನನ್ನ ಸಂಶಯದ ದೃಷ್ಟಿಯಲ್ಲಿ ನೋಡಿ, ಜಗಳವಾಡಿ, ನನ್ನನ್ನ ಮನೆಯಿಂದ ಓಡಿಸಿದ್ದರು. ಅಣ್ಣ ಅತ್ತಿಗೆ ಸಹ ಯಾವ ಕನಿಕರವನ್ನ ತೋರಿರಲಿಲ್ಲ. ಅಣ್ಣ ತಾನಾಗಿಯೇ ನನ್ನನ್ನ ಒಬ್ಬರ ಮನೆಯಲ್ಲಿ ಅಡಿಗೆಯವಳನ್ನಾಗಿ ಗೊತ್ತು ಮಾಡಿದ್ದ.

ಆ ಮನೆಯವರು ಅನುಕೂಲವಾಗಿದ್ದರೂ ಗಂಡ ಹೆಂಡತಿ ಇಬ್ಬರಿಗೂ ಏನೋ ಖಾಯಿಲೆ. ಅವರಿಬ್ಬರ ಮಗ ಈ ರವಿ. ಆಕೆ ತನ್ನ ಕೈ ಹಿಡಿದು ಬೇಡಿಕೊಂಡಿರಲಿಲ್ಲವೆ... ರವಿಯನ್ನ ನಿಮ್ಮ ಸ್ವಂತ ಮಗನಂತೆ ಬೆಳಸಿ.. ಆ ಧರ್ಮ ನಿಮ್ಮನ್ನ ಕಾಪಾಡುತ್ತದೆ ಅಂತ.... ಸಾಯುವ ಮೊದಲು ಯಾರಿಗೂ ತಿಳಿಯದಂತೆ ಕೇಳಿದ್ದರು ನಿಮಗೆ ಇಷ್ಟವಿದ್ದರೆ ನಮ್ಮವರನ್ನ ಮರು ಮದ್ವೆಯಾಗಿ... ಅವರೂ ಒಂಟಿಯಾಗಿ ಬಿಡ್ತಾರೆ ಅಂತ ಅತ್ತಿದ್ದಳು. ಅದಕ್ಕೆ ತಾನೇನನ್ನೂ ಹೇಳಿರಲಿಲ್ಲ. ಅದೇ ರಾತ್ರಿ ಆಕೆ ಸತ್ತು ಹೋಗಿದ್ದಳು. ಆ ನಂತರ ತನಗೆ ಆ ಮನೆಯಲ್ಲಿ ಇರಲು ಗಾಬರಿ ಎನಿಸಿತ್ತು. ಆದರೆ ಸಾಯುತ್ತಿರುವ ಆಕೆಗೆ ಕೊಟ್ಟ ವಾಗ್ದಾನ ನನ್ನನ್ನ ತಡೆ ಹಿಡಿದಿತ್ತು. ಮಕ್ಕಳಿಗಾಗಿ ಆ ಮನೆಯಲ್ಲೇ ಇರಬೇಕಾಯ್ತು.

ಎರಡು ಮೂರು ತಿಂಗಳು ಕಳೆದ ನಂತರ ಆತ ಒಂದು ದಿನ ನನ್ನೊಡನೆ ಮಾತನಾಡಿದ್ದರು.

ನೋಡಿ, ಹೀಗೆ ಹೇಳ್ತೀನಿ ಅಂತ ಬೇಸರಿಸಬೇಡಿ... ಈಗ ಈ ಮನೆಗೆ ನೀವೇ ಹೆಣ್ಣು ದಿಕ್ಕು. ನನ್ನ ಆರೋಗ್ಯ ಚೆನ್ನಾಗಿಲ್ಲ. ನಾನು ಎಷ್ಟು ದಿನ ಬದುಕಿರುತ್ತೇನೋ

ತಿಳಿಯದು. ನಾನಿಲ್ಲವಾದಾಗ ನನ್ನ ದಾಯಾದಿಗಳು ಬಂದು ನಿಮ್ಮನ್ನ ಕಾಡಬಹುದು. ಇರುವ ಚೂರು ಪಾರು ಆಸ್ತಿಯನ್ನ ನನ್ನ ಮಗನಿಗೆ ದಕ್ಕದಂತೆ ಮಾಡಿ ಅವನನ್ನ ಅನಾಥನನ್ನಾಗಿ ಮಾಡಬಹುದು. ಹಾಗಾಗದಂತೆ ತಡೆಯುವುದು ನಿಮ್ಮ ಜವಾಬ್ದಾರಿ... ಅದಕ್ಕೆ ಒಂದು ಸಲಹೆ.

ಆತ ನನ್ನ ಕಡೆಗೆ ತಿರುಗದೇ ಗೋಡೆ ಕಡೆ ನೋಡಿ ಹೇಳತೊಡಗಿದರು.

"ನಾನು ನಿಮ್ಮನ್ನ ಮದುವೆಯಾಗಿ, ನನ್ನ ಆಸ್ತಿಯನ್ನೆಲ್ಲಾ ನಿಮ್ಮ ಹೆಸರಿಗೆ ವರ್ಗಾಯಿಸುತ್ತೇವೆ."

"ನಾನು ಹೆದರಿದ್ದೆ."

"ಹೆದರಬೇಡಿ. ಈ ಮದುವೆ ಕೇವಲ ಆಸ್ತಿಯ ಹಾಗೂ ನನ್ನ ಮಗನ ಸಂರಕ್ಷಣೆ ಗೋಸ್ಕರ. ಆರೋಗ್ಯವಿಲ್ಲದ ನನ್ನಿಂದ ನಿಮಗೆ ಯಾವ ಸುಖ ದೊರೆಯದಿದ್ದರೂ, ನನ್ನಿಂದ ತೊಂದರೆಯೂ ಖಂಡಿತಾ ಆಗುವುದಿಲ್ಲ. ನೀವು ಈ ಮಾತಿಗೆ ಒಪ್ಪಿದರೆ ನನಗೆ ಸಂತೋಷವಾಗುತ್ತದೆ. ನನಗೆ ರವಿ ಹೇಗೋ ಹಾಗೇ ಮದನನೂ ನನ್ನ ಮಗನೇ... ನೀವೂ ಅದೇ ರೀತಿ, ನಿಮ್ಮ ಸ್ವಂತ ಮಗನಂತೆ ರವಿಯನ್ನ ಬೆಳೆಸಿ ಮುಂದೆ ತರಬೇಕು. ಇದೇ ನನ್ನ ಕಡೆಯ ಆಸೆ. ಆತ ಭಾವುಕರಾಗಿ ಅಳತೊಡಗಿದಾಗ ನಾನು ಒಪ್ಪಬೇಕಾಯ್ತು."

"ಕೆಲವೇ ದಿನಗಳಲ್ಲಿ ನಮ್ಮಿಬ್ಬರ ಮದುವೆಯ ಸರ್ಟಿಫಿಕೇಟ್ ಸಿದ್ಧವಾಯಿತು. ಆಮನೆಯನ್ನು ಮಾರಿ, ಆ ಊರನ್ನೇ ಬಿಟ್ಟು ಇಲ್ಲಿಗೆ ಬಂದು ನೆಲೆಸಿದೆವು. ಆದರೆ ಆತ ಈ ಮನೆಗೆ ಬಂದು ಇರಲು ಒಪ್ಪದೇ ಒಂದು ನರ್ಸಿಂಗ್ ಹೋಂಗೆ ಸೇರಿ ಕೊಂಡರು. ತಿಂಗಳಾನುಗಟ್ಟಳೆ ನರಳಿ, ಒಂದು ದಿನ ಪ್ರಾಣ ಬಿಟ್ಟರು. ಅವರ ಆಸ್ತಿ ಯೆಲ್ಲಾ ನನ್ನ ಹೆಸರಿಗೆ ವರ್ಗಾವಣೆಯಾಯಿತು. ಅಡಿಗೆಯವಳಾಗಿದ್ದ ನಾನು ಆ ಆಸ್ತಿಗೆಲ್ಲಾ ವಾರಸುದಾರಳಾಗಿದ್ದೆ. ಅವರು ನನಗೆ ಮಾಡಿದ್ದ ಉಪಕಾರದ ಋಣವನ್ನ ನಾನು ಇಂದಿಗೂ ಮರೆತಿಲ್ಲ. ದಿನೇಶನ ಚೆನ್ನಾಗಿ ಓದಿಸಿ ವಿದ್ಯಾವಂತ ನನ್ನಾಗಿ ಮಾಡಿ, ಸಮಾಜದಲ್ಲಿ ಒಬ್ಬ ಗಣ್ಯವ್ಯಕ್ತಿಯನ್ನಾಗಿ ಮಾಡಿದೆ. ಹಾಗೇ ಮದನನ್ನ ಕೂಡ... ಆದರೆ ಈ ರಹಸ್ಯ ಮದನನಿಗೆ ತಿಳಿದರೆ ನನ್ನ ಬಗ್ಗೆ ಏನನ್ನಿಸಬಹುದು... ತಾನೊಬ್ಬ ಕ್ರೂರಿ ತಂದೆಯ ಮಗ ಎಂದು ತಿಳಿದರೆ, ಅವನಿಗೆ ಜೀವನದಲ್ಲಿ ಯಾವ ಆಸಕ್ತಿ ಇರುತ್ತದೆ... ನಾನಾಗಿಯೇ ಅವನ ಕೊಲೆ ಮಾಡಿದಂತಾಗುತ್ತದೆ. ನನ್ನ ಮೇಲೆ ಅಸಹ್ಯ ಹುಟ್ಟಿ ಅವನು ನನ್ನಿಂದ ದೂರ ಹೊರಟು ಹೋದರೆ! ತಾನು ಹೇಗೆ ಸಹಿಸಬಲ್ಲೆ!

ಆದರೆ... ಈಗ ಸರಳಳ ವಿಷಯ ಬಹಿರಂಗವಾದಂತೆ, ಒಂದಲ್ಲ ಒಂದು ದಿನ ಈ ರಹಸ್ಯವೂ ಹೊರಬಿದ್ದರೆ? ಆಗ ತನ್ನ ಗತಿ! ತನ್ನ ಬಗ್ಗೆ ಜನ ಆಡಿಕೊಳ್ಳದಿರು

ತ್ತಾರೆಯೆ? ರವಿ ಸಹ ಏನಂದುಕೊಂಡಾನು! ನಾನು ಇದುವರೆಗೂ ಮಾಡಿದ್ದೆಲ್ಲಾ ನೀರಿನಲ್ಲಿ ಹೋಮ ಮಾಡಿದಂತಾಗುತ್ತದೆ... ನಾನಾಗಿಯೇ ಈ ವಿಷಯವನ್ನ ಮದನನಿಗೆ ತಿಳಿಸುವುದಂತೂ ಸಾಧ್ಯವಿಲ್ಲ. ರವಿಗೆ ಹೇಳಿದರೆ... ಬೇಡ. ಅವನಿಗೂ ಬೇಡ. ಎಲ್ಲಾ ವಿಷಯವನ್ನ ಮಂಜುಳಂಗೆ ಹೇಳುವುದೇ ಸರಿ. ಅವಳು ನನಗೆ ಸೊಸೆಯಾಗಿ ಬಂದರೂ, ಮಗಳಿಗಿಂತ ಹೆಚ್ಚಾಗಿದಾಳೆ. ನನಗೆ ಹೆದರಿಯೇ ಅಲ್ಲವೆ ಅವಳು ಸರಳನ ವಿಷಯವನ್ನ ತಿಳಿಸಿದ್ದು... ಈಗ ನಾನು ಅವಳಿಗೆ ಎಲ್ಲಾ ತಿಳಿಸಿ ಎಲ್ಲಾ ಜವಾಬ್ದಾರಿಯನ್ನ ಅವಳಿಗೆ ವಹಿಸಿಕೊಟ್ಟು ಇಲ್ಲಿಂದ ಎಲ್ಲಾದರೂ ದೇಶಾಂತರ ಹೊರಟು ಹೋಗ್ತೀನಿ. ಆಗ ಯಾವ ಆತಂಕವೂ ಇರುವುದಿಲ್ಲ...

ಅದೇ ರೀತಿ ಎಲ್ಲಾ ವಿಷಯವನ್ನ ಮಂಜುಳನೊಡನೆ ಹೇಳಿ ಹೃದಯವನ್ನ ಹಗುರ ಮಾಡಿಕೊಂಡಳು ಬೆರಗಾಗಿ ಎಲ್ಲಾವನ್ನ ತಿಳಿದುಕೊಂಡ ನಂತರ, ಮಂಜುಳ, " ಇದನ್ನೆಲ್ಲ ನನಗೇಕೆ ಹೇಳ್ತಿದೀರಿ?" ಅಂತ ಕೇಳಿದಳು.

"ಏಕೆಂದರೆ! ಈ ಆಸ್ತಿಗೆ ನಿಜವಾದ ಹಕ್ಕುದಾರರು ನೀವಿಬ್ಬರು. ನಾನು ತಿಳಿಸದೇ ಇದ್ದಿದ್ದರೆ, ಒಂದು ಘೋರ ಅಪರಾಧ ಮಾಡಿದಂತಾಗುತ್ತದೆ."

"ಹಾಗೇನಾಗುತ್ತಿರಲಿಲ್ಲ. ವಿಲ್‌ನ ಪ್ರಕಾರ ನೀವೇ ಸರ್ವಾಧಿಕಾರಿ. ನೀವು ಅವರ ಪತ್ನಿ."

"ಇಲ್ಲ. ನಾನು ಅವರಿಗೆ ಯಾವ ರೀತಿಯಿಂದಲೂ ಹೆಂಡತಿಯಾಗಿರಲಿಲ್ಲ." ನಾಚಿಕೆಯಿಂದ ಅವಳ ಮುಖ ಸಂಕೋಚಗೊಂಡಿತು.

"ಆದರೆ ನನ್ನ ಗಂಡನನ್ನ ಉದ್ಧಾರ ಮಾಡಿದ ಧರ್ಮವೂ ಅದರಲ್ಲಿ ಸೇರಿರುವುದರಿಂದ ನಿಮಗೆ ಯಾವ ಆತಂಕವೂ ಬೇಡ. ನೀವು ರವಿಯ ತಾಯಿ. ನಾನು ನಿಮ್ಮ ಸೊಸೆ. ನನಗಿನ್ನೇನೂ ತಿಳಿಯದು." ಪ್ರಾಮಾಣಿಕವಾಗಿ ನುಡಿದಳು.

"ನಿನಗಿಷ್ಟು ದೊಡ್ಡ ಗುಣ ಇದೆ ಅಂತ ನನಗೆ ತಿಳಿದಿರಲಿಲ್ಲಮ್ಮ ನೀವಿಬ್ಬರೂ ಮದನನ ಕೈ ಬಿಡಬೇಡಿ."

ಅಮ್ಮ... ಎಂತಹ ಮಾತನಾಡ್ತೀರಿ! ಮದನ ಈ ಮನೆಯಲ್ಲಿಲ್ಲದಿದ್ದರೆ ನಾನು ಈ ಮನೆಗೆ ಬಂದ ಹೊಸದರಲ್ಲಿ ಒಂದು ಗಳಿಗೆ ಕೂಡಾ ಇರುವುದಕ್ಕೆ ಆಗುತ್ತಿರಲಿಲ್ಲ. ಅವರು ನನ್ನ ಸ್ವಂತ ತಮ್ಮನಂತೆ..."

"ಹಾಗಾದರೆ ನೀನೇ ಅವನಿಗೆ ತಿಳುವಳಿಕೆ ಹೇಳು... ಸರಳನ್ನ ಅವನು ಮರೆತು ಬಿಡುವಂತೆ ಹೇಳು."

"ಯಾಕೆ? ಸರಳ ನಿಮಗೆ ಇಷ್ಟವಾಗಲಿಲ್ಲವೆ?"

"ಸುರಳ ನಿನ್ನ ತಂಗಿ ಅಲ್ಲ. ನಿನಗಿಂತ ದೊಡ್ಡವಳು. ಮದನನಿಗಿಂತ ದೊಡ್ಡವಳಿರಬಹುದು. ಈ ಮದುವೆ ಹೇಗೆ ಸಾಧ್ಯ?"

ಮಂಜುಳನ ಮುಖ ಚಿಕ್ಕದಾಯಿತು. ಇಷ್ಟೆಲ್ಲ ಏನೇನೋ ಮಾತುಕತೆ ನಡೆದಿದೆ. ಈಗ ಹೊಸದಾಗಿ ಈ ಅನುಮಾನ ಪ್ರಾರಂಭವಾಗಿದೆ. ಈಕೆಯ ಮನಸ್ಸಿನಲ್ಲೇನಿದೆ... ಛೆ.. ಎಂದುಕೊಂಡು ಅವಳು ಸುಮ್ಮನಾದಳು.

"ಆದರೆ ಒಂದು ಮಾತು... ಈ ವಿಷಯವನ್ನ ರವಿಗಾಗಲೀ. ಮದನನಿಗಾಗಲೀ ತಿಳಿಸಬೇಡಮ್ಮ... ನನಗೆ ಅವರಿಬ್ಬರೂ ಒಂದೇ. ಯಾರೊಬ್ಬರು ನನ್ನಿಂದ ದೂರ ಹೋದರೂ ನಾನು ಸಹಿಸಲಾರೆ."

"ನೀವು ಸರಳನ್ನ ಒಪ್ಪದಿದ್ದರೆ, ಅವನು ನಿಮ್ಮಿಂದ ದೂರ ಹೋಗುವುದು ಖಂಡಿತಾ" ಎಂದು ಹೇಳಬೇಕೆಂದುಕೊಂಡರೂ, ಹೇಳದೇ ಸುಮ್ಮನಾದಳು.

ಇದ್ದಕ್ಕಿದ್ದಂತೆ ಬಂದಿಳಿದ ಮಂಜುಳನ್ನ ಕಂಡು ತಂದೆ ತಾಯಿಗಳು ಆಶ್ಚರ್ಯ ಗೊಂಡರು. ಸರಳ ಸಂತೋಷಗೊಂಡಳು. ಮಂಜುಳ ತಡ ಮಾಡದೇ ತಂದೆ ಯೊಡನೆ ಗುಟ್ಟಾಗಿ ಮಾತುಕತೆ ನಡೆಸಿದಳು.

"ಅಪ್ಪಾ... ಸರಳ ಈ ಮನೆಯಲ್ಲಿ ಹುಟ್ಟಿದವಳು ಅಲ್ಲ ಅಂತ ತಿಳಿಸಿದರಂತೆ. ಸುಮ್ಮನಿರಬಾರದಾಗಿತ್ತೆ? ಅಲ್ಲಿ ತಾನೇ ಏನು ಸರಿಯಾಗಿದೆ? ಮದನ ರವಿಯ ಸ್ವಂತ ತಮ್ಮನಲ್ಲ...."

"ನಿನಗ್ಯಾರು ಹೇಳಿದರು?"

"ನಮ್ಮ ಅತ್ತೇನೇ ಎಲ್ಲಾ ಹೇಳಿದರು... ಅವಳು ಎಲ್ಲಾ ವಿಷಯಗಳನ್ನ ತಿಳಿಸಿದಳು. ಆದರೆ ವರಿಬ್ಬರಿಗೂ ಇನ್ನೂ ಈ ವಿಷಯ ತಿಳಿಯದು."

ಇದ್ದಕ್ಕಿದ್ದಂತೆ ಆತ ಗಂಭೀರವಾದರು.

"ನಾನು ನಿನ್ನ ಜತೆಯಲ್ಲಿ ಊರಿಗೆ ಬಂದು ಆಕೆಯ ಹತ್ತಿರ ಮಾತನಾಡ್ತೀನಿ. ಆಕೆ ಒಪ್ಪಿದರೆ, ಆದಷ್ಟು ಬೇಗ ಮದುವೆ ಮಾಡಿ ಬಿಡೋಣ."

ಸೊಸೆಯೊಡನೆ ಬಂದಿಳಿದ ಬೀಗರನ್ನ ಕಂಡು, ಆಕೆ ಹಿಂಜರಿದು ನಿಂತಳು. ಮಗಳು ಅಳಿಯ ಹೊರಗೆ ಹೋಗಿದ್ದ ಸಮಯ ನೋಡಿಕೊಂಡು, ಆತ ಮಾತಿಗೆ ಪ್ರಾರಂಭಿಸಿದರು, "ಮಂಜುಳ ಎಲ್ಲಾ ಹೇಳಿದ್ದಾಳೆ. ನೀವು ಈ ಮೊದಲು ಯಾವ ಊರಿನಲ್ಲಿ ಇದ್ದಿರಿ ಅಂತ ತಿಳಿಸ್ತೀರಾ?"

ಆಕೆ ಅನುಮಾನಿಸಿದಳು.

"ಹೆದರಬೇಡಿ. ನನ್ನನ್ನ ಒಂದು ಸಂದೇಹ ಕಾಡುತ್ತಿದೆ. ಅದನ್ನ ದೂರ ಮಾಡಿ ಕೊಳ್ಳುವ ಆಸೆ..."

"ತುಮಕೂರಿನಲ್ಲಿ... ಅಲ್ಲಿಯ ಫ್ಯಾಕ್ಟರಿಯೊಂದರಲ್ಲಿ ದೊಡ್ಡ ಹುದ್ದೆಯಲ್ಲಿದ್ದರು ಈ ಮಕ್ಕಳ ತಂದೆ..." ಹೇಳುತ್ತಿರುವಂತೆ ಧ್ವನಿ ನಡುಗಿತು.

"ಅವರ ಹೆಸರು?"

"ಜನಾರ್ಧನ ರಾಯರು ಅಂತ... ನಾನು ಅವರ ಎರಡನೆ ಹೆಂಡತಿ" ತಲೆ ತಗ್ಗಿಸಿದಳು.

"ಇದರಲ್ಲಿ ಹೀನಾಯಗೊಳ್ಳುವಂತಹದ್ದೇನಿದೆ! ನಾನು ಏಕೆ ಎಲ್ಲಾ ಕೇಳ್ತಾ ಇದೀನಿ ಅಂದರೆ... ನನ್ನ ಹೆಂಡತಿಯ ತವರು ಮನೆ ಕೂಡಾ ತುಮಕೂರೇ... ನನ್ನ ಹೆಂಡತಿ ಹೆರಿಗೆಗೆ ಹೋಗಿದ್ದ ಸಂದರ್ಭದಲ್ಲಿ ಆಸ್ಪತ್ರೆಯಲ್ಲಿ ಆಕೆಗೆ ಒಬ್ಬ ಹೆಂಗಸಿನ ಪರಿಚಯವಾಗಿ ಸ್ನೇಹ ಬೆಳೆಯಿತು... ದುರದೃಷ್ಟವಶಾತ್, ನನ್ನ ಹೆಂಡತಿಗೆ ಹೆರಿಗೆ ಯಾದರೂ, ಮಗು ಉಳಿಯಲಿಲ್ಲ. ಆ ಸಮಯದಲ್ಲಿ ಸಾಂತ್ವನ ನೀಡಿದವಳು ಆಕೆಯೇ ... ಆಮೇಲೆ ಎಂಟು ಹತ್ತು ದಿನಗಳ ನಂತರ ಆಕೆಗೆ ಅವಳಿ ಮಕ್ಕಳು ಜನಿಸಿದವು. ಒಂದು ಗಂಡು, ಇನ್ನೊಂದು ಹೆಣ್ಣು. ಆಕೆ ನನ್ನ ಹೆಂಡತಿಯ ದುಃಖ ನೋಡಲಾರದೇ, ತನ್ನ ಒಂದು ಮಗುವನ್ನ ಬೇಕಾದರೆ ಕೊಡುವುದಾಗಿ ತಿಳಿಸಿದಳು. ನಾವು ತಮಾಷೆ ಎಂದೇ ಭಾವಿಸಿದ್ದೆವು. ಆದರೆ ಅನಂತರ ತಿಳಿಯಿತು ಆಕೆಯ ಆರೋಗ್ಯ ಏನೇನೂ ಚೆನ್ನಾಗಿಲ್ಲ. ಹೆಂಡತಿಯ ಖಾಯಿಲೆ ಅಲ್ಲದೇ, ಎರಡೆರಡು ಮಕ್ಕಳ ಶುಶ್ರೂಷೆಗೆ ಆತ ಎಲ್ಲಿಂದ ಹಣ ತಂದಾನು? ವಿಪರೀತ ಖರ್ಚು ಬೀಳುವುದೆಂದು ಹೆದರಿ, ಒಂದು ಮಗುವನ್ನ ನಮಗೆ ಕೊಟ್ಟರೆ ತಮ್ಮ ಕಷ್ಟ ತಪ್ಪುತ್ತದೆಂದು ಭಾವಿಸಿರಬೇಕು. ಗಂಡು ಮಗುವನ್ನಂತೂ ಹೆತ್ತವರು ಕೊಡುವುದಿಲ್ಲ. ಹೆಣ್ಣು ಮಗು ನಮಗೆ ಸಿಕ್ಕಿತು. ನಮಗೂ ಹುಟ್ಟಿದ್ದು ಹೆಣ್ಣು ಮಗುವೇ ಆಗಿದ್ದರಿಂದ ನನ್ನ ಹೆಂಡತಿ ಹಾಗೂ ನಾವೂ ಒಪ್ಪಿಕೊಂಡೆವು. ಹಳೇ ಕಾಲದವರು, ಒಂದೇನು ನಾಲ್ಕು ಮಕ್ಕಳು ನಮಗಾದರೆ, ಗಂಡು ಮಗುವೂ ಹುಟ್ಟಬಹುದು ಎಂದು ನಿರ್ಯೋಚನೆಯಿಂದ ಸುಮ್ಮನಾದೆವು. ನಮಗೆ ದೇವರು ಸಾಕಷ್ಟು ಅನುಕೂಲಗಳನ್ನ ಕೊಟ್ಟಿದ್ದನಾದ್ದ ರಿಂದ, ನಾವು ಚಿಂತಿಸಲಿಲ್ಲ. ಆದರೆ ಮುಂದೆ ಎರಡು ವರ್ಷಗಳ ನಂತರ ಮಂಜುಳ ಹುಟ್ಟಿದಳು. ಹುಟ್ಟಿದ್ದು ಹೆಣ್ಣು ಮಗುವೇ ಆದ್ದರಿಂದ ನಮಗೆ ನಿರಾಶೆ ಯಾದರೂ, ಅದನ್ನ ತೋರ್ಪಡಿಸಿಕೊಳ್ಳಲಿಲ್ಲ. ಅನಂತರ ನನ್ನ ಹೆಂಡತಿಯ ಸಲಹೆ ಯಂತೆ ನಾನು ತುಮಕೂರಿಗೆ ಬಂದು, ಆತ ಕೊಟ್ಟ ವಿಳಾಸವನ್ನ ಹಿಡಿದು ಆತನಿಗಾಗಿ ಹುಡುಕಾಡಿದೆ. ಆದರೆ ಆತ ಸಿಗಲಿಲ್ಲ. ಊರು ಬಿಟ್ಟು ಹೋದರೆಂದು ತಿಳಿಯಿತು. ಏಕೆ ಏನು ಎಂದು ಹೇಳುವವರ್‍ಯಾರು ಇರಲಿಲ್ಲ. ಒಂದು ವೇಳೆ ಆತ ಸಿಕ್ಕಿ ಮತ್ತೆ ತಮ್ಮ ಮಗಳನ್ನ ವಾಪಸ್ಸು ಕೇಳಿದ್ದರೆ ಕೊಡುವ ಯೋಚನೆಯೂ ಇತ್ತು. [illegible] ಆತ ಸಿಗಲೇ ಇಲ್ಲ.

ಅನಂತರ ಒಳ್ಳೆಯದೇ ಆಯಿತು ಎಂದುಕೊಂಡೆವು. ನಮ್ಮ ಮಗಳು ಒಬ್ಬಳೇ ಬೆಳೆಯುವುದಕ್ಕಿಂತ ಅವಳೂ ಜತೆಯಲ್ಲಿದ್ದುದು ಸರಿಯೇ ಎನಿಸಿತು. ನನ್ನ ಮಗಳ ಬೆಳವಣಿಗೆ ಜೋರು. ಅವಳಿಗಿಂತ ಚೆನ್ನಾಗಿ ಬೆಳೆದು, ಇವಳು ಅಕ್ಕ ಆದಳು.

ಅವಳು ತಂಗಿ ಆದಳು ಅಷ್ಟೇ. ಆದರೂ ವಯಸ್ಸಿನ ಲೆಕ್ಕಚಾರದ ಪ್ರಕಾರ ನಾವು ಮೊದಲು ಅವಳಿಗೇ ಗಂಡನ್ನ ನೋಡಿದ್ದು... ಆದರೆ ಅವಳೇಕೋ ಮದುವೆಯಾಗುವ ಮನಸ್ಸನ್ನೇ ಮಾಡಿರಲಿಲ್ಲ. ನಿಮ್ಮ ಹಿರಿಯ ಮಗನನ್ನ ತೋರಿಸಿದಾಗ ಖಡಾ ಖಂಡಿತ ವಾಗಿ ಬೇಡ ಅಂದು ಬಿಟ್ಟಳು. ಅವಳೇ ಸಲಹೆ ಕೊಟ್ಟಿದ್ದರಿಂದ ನಾವು ಮಂಜುಳನ ಪ್ರಸ್ತಾಪ ಮಾಡಿದೆವು."

"ಆದರೆ ಆಮೇಲೆ ಅದೇನು ವಿಚಿತ್ರವೋ, ನಿಮ್ಮ ಎರಡನೆ ಮಗ ಬಂದು ಮದುವೆಯ ಬಗ್ಗೆ ಮಾತನಾಡಿದಾಗ ನನಗೇ ಆಶ್ಚರ್ಯ. ಸರಳ ಒಪ್ಪಿ ಅವರನ್ನ ಪ್ರೀತಿಸುತ್ತಾಳೆ ಅಂತ ನನಗೆ ನಂಬುವುದಕ್ಕೇ ಆಗಲಿಲ್ಲ."

ಇದ್ದಕ್ಕಿದ್ದಂತೆ ಮೌನ ಆವರಿಸಿತು. ಆಕೆ ಮೌನಿಯಾದಳು. "ಈತ ಹೇಳುತ್ತಿರುವ ವ್ಯಕ್ತಿ ರವಿಯ ತಂದೆಯೇ ಇರಬೇಕು. ಆದರೆ ಅವರೆಂದೂ, ಇನ್ನೊಂದು ಮಗುವಿನ ಬಗ್ಗೆ ತಿಳಿಸಿರಲೇ ಇಲ್ಲ. ಕೊಟ್ಟು ಕೈ ತೊಳೆದುಕೊಂಡಿರುವ ಮಗುವಿನ ಬಗ್ಗೆ ತಿಳಿಸುವುದೇನು ಅಂತ ಅಂದುಕೊಂಡಿರಬೇಕು. ಆದರೆ ಈತ? ತನಗೆ ಸ್ವಂತ ಮಗಳು ಹುಟ್ಟಿದ ಕೂಡಲೇ ಸಾಕಿದ ಹುಡುಗಿಯನ್ನ ವಾಪಸ್ಸು ಕೊಟ್ಟು ಬಿಡುವ ಯೋಚನೆ ಸಹ ಮಾಡಿದ್ದರಂತಲ್ಲ. ಛೆ.. ಇಬ್ಬರೂ ಕ್ಷಮೆಗೆ ಅರ್ಹರಲ್ಲ."

"ತಾನು ತನ್ನ ಸ್ಥಿತಿ ಹೀಗಾದ್ದರಿಂದ, ಜಾತಕ ಇತ್ಯಾದಿಗಳಲ್ಲಿ ನಂಬಿಕೆ ಕಳೆದು ಕೊಂಡಿದ್ದೆ. ಆದ್ದರಿಂದ ರವಿಯ ಜಾತಕವಾಗಲೀ, ಮದನನ ಜಾತಕವಾಗಲೀ ನನ್ನಲ್ಲಿಲ್ಲ. ಈ ಹುಡುಗಿ ರವಿಯನ್ನ ಹೇಗೆ ನಿರಾಕರಿಸಿದಳು? ಫೋಟೋ ನೋಡಿ, ಅವನು ತನ್ನ ಒಡಹುಟ್ಟಿದವನೆಂದು ಅರಿವು ಮೂಡಿರಬಹುದೆ? ಒಂದು ವೇಳೆ ಒಪ್ಪಿ ಮದುವೆಯಾಗಿದ್ದರೆ ಎಂಹ ಘೋರ ಅಪರಾಧ ನಡೆದು ಹೋಗುತ್ತಿತ್ತು.... ಹುಡುಗಿ ಮನೆತನದ ಗೌರವವನ್ನ ಉಳಿಸಿದಳು."

"ಆದರೆ ಈಗ ಎಂತಹ ಪರಿಸ್ಥಿತಿ ಒದಗಿದೆ. ಮಹೇಶ ನನ್ನ ಸ್ವಂತ ಮಗ. ನಾನು ಆತನಿಗೆ ಹೆಂಡತಿಯಾಗಿದ್ದೆ. ಕೇವಲ ಕಾನೂನಿನ ಪರವಾಗಿ ಮಾತ್ರ... ನನಗೂ ಆತನಿಗೂ ಯಾವ ಸಂಬಂಧವೂ ಇರಲಿಲ್ಲ. ಆತ ಅದನ್ನ ಎಂದೂ ಬಯಸಿದವರಲ್ಲ. ದೇವರಂತಹ ಮನುಷ್ಯ. ನನಗೆ ಬಾಳು ಕೊಟ್ಟವರು. ಹೆಂಡತಿಯ ಆರೋಗ್ಯದ ಗಮನ ಹೆಚ್ಚಾಗಿ ಹೆಣ್ಣು ಮಗುವನ್ನ ಈತನಿಗೆ ಕೊಟ್ಟಿದ್ದನ್ನ ನನಗೆ ಹೇಳಿದ್ದರೆ, ನಾನು ಕರೆತಂದು ಸಾಕಿದ್ದರೆ ಈ ದಿನ ಈ ಪ್ರಶ್ನೆ ಖಂಡಿತಾ ಉದ್ಭವಿಸು ತ್ತಿರಲಿಲ್ಲ. ಎಲ್ಲಾದಕ್ಕೂ ನಿಯಾಮಕ ಆ ಭಗವಂತನೇ, ಆ ಹುಡುಗಿಯನ್ನ ನಾನು ಸಾಕಲಿಲ್ಲ. ಆದ್ದರಿಂದ ಅವಳು ನನ್ನ ಮಗಳಲ್ಲ. ಈತನ ಮಗಳು."

ಮಗಳಾಗಿ ಈ ಮನೆಯಲ್ಲಿ ಬೆಳೆಯಬೇಕಾದವಳು ಸೊಸೆಯಾಗಿ ಬೆಳಗುತ್ತಾಳೆ ಅಷ್ಟೇ.. ರವಿಗಿಂತ ಮದನ ಐದಾರು ತಿಂಗಳು ದೊಡ್ಡವನೇ. ಆದರೆ ನಾನು

ಅವನನ್ನ ಸ್ಕೂಲಿಗೆ ಸೇರಿಸಿದ್ದು ತಡವಾಗಿ. ನನ್ನ ತಾಪತ್ರಯಗಳಲ್ಲಿ ಅವನನ್ನ ವಯಸ್ಸಿಗೆ ಅನುಗುಣವಾಗಿ ಸ್ಕೂಲಿಗೆ ಸೇರಿಸಬೇಕೆಂದು ಅನ್ನಿಸಲೇ ಇಲ್ಲ. ರವಿಯನ್ನು ಸ್ಕೂಲಿಗೆ ಸೇರಿಸಿದಾಗ, ಏಕೋ ಏನೋ ವಯಸ್ಸನ್ನು ಕಡಿಮೆ ಕೊಟ್ಟು, ಹಿಂದಿನ ತರಗತಿಗೆ ಸೇರಿಸಿದ್ದೆ. ಮೊದಲು, ಆತನ ಮಗ ಮುಂದೆ ಬರಲಿ ಎಂದು ನನ್ನ ಮನಸ್ಸಿನಲ್ಲಿದ್ದುದೇ ಅದಕ್ಕೆ ಕಾರಣ. ರವಿಯ ತಮ್ಮನಾಗಿಯೇ ಮದನ ಬೆಳೆಯಲಿ ಎಂದು ನನಗೆ ಅನ್ನಿಸಿದ್ದರೆ ತಪ್ಪೇನಲ್ಲ. ಮೊದಲ ಅಧಿಕಾರ ನನ್ನ ಮಗನಿಗೆ ಸಿಗಲಿ ಎನ್ನುವ ಸ್ವಾರ್ಥ ನನಗೆ ಖಂಡಿತಾ ಇರಲಿಲ್ಲ. ಆದ್ದರಿಂದ ಸರಳ ಹೆಚ್ಚು ಕಡಿಮೆ ಮದನನ ವಯಸ್ಸಿನವಳೇ. ಸಧ್ಯ ಅವಳು ಮದನನ ಪ್ರೀತಿಸಿದ್ದು ಒಂದು ತರಹಕ್ಕೆ ಒಳ್ಳೆಯದೇ... ಎಂದುಕೊಂಡಳು.

ಆತ ಆಕೆಯನ್ನೇ ಗಮನಿಸುತ್ತಿದ್ದಾಗ, ಆಕೆಗೆ ಮುಜುಗರವೆನಿಸಿತು.

"ಏನೋ ನನಗೆ ಈ ವಿಷಯ ತಿಳಿಯದು. ಅವರು ಎಂದೂ ನನಗೆ ಇನ್ನೊಂದು ಮಗುವಿದ್ದ ವಿಚಾರವನ್ನು ತಿಳಿಸಿದವರಲ್ಲ."

"ಮನೆಯಲ್ಲಿ ಅವರದ್ದು ಯಾವುದಾದರೂ ಫೋಟೋ ಇದೆಯೆ? ನಾನು ನೋಡಿದರೆ ಗುರುತಿಸಬಲ್ಲೆ." ಆತ ಆಕಡೆ ಈ ಕಡೆ ನೋಡಿದಾಗ ಅವಳು ಗಾಬರಿಯಾದಳು. ಯಾವುದಾದರೂ ಮದುವೆಯ ಫೋಟೋ ಮನೆಯಲ್ಲಿ ಇದ್ದ ವೇನೋ, ಆದರೆ ಅದನ್ನ ತಿಳಿಸುವ ಇಚ್ಛೆಯಾಗಲಿಲ್ಲ.

"ಇಲ್ಲಾಂತ ಕಾಣುತ್ತೆ. ಇಬ್ಬರೂ ನಡು ವಯಸ್ಸಿನಲ್ಲೇ ತೀರಿಕೊಂಡರು."

"ಅದೂ ಸರಿ ಎನ್ನಿ, ಎರಡನೆ ಹೆಂಡತಿಯಾಗಿ ಬಂದವರು ನೀವು ಅದನ್ನೆಲ್ಲ ಎಲ್ಲಿ ವಿಚಾರಿಸುಕ್ಕೆ ಆಗುತ್ತೆ. ಅಲ್ಲದೇ ಅವರ ಮದುವೆಯ ಫೋಟೋ ನೋಡುವ ಕುತೂಹಲ ನಿಮಗೆಲ್ಲಿರುತ್ತೆ? ಆದರೆ ನಿಮ್ಮ ಮದುವೆ ಫೋಟೋ ಇಲ್ಲವೆ?"

ಆಕೆಯ ಜೀವ ದಢ್ ಎಂದಿತು. ಇವನೆಂತಹ ಮನುಷ್ಯನಪ್ಪ ಅಂತ ಎನಿಸಿದರೂ, ಗಂಭೀರದಿಂದ ನುಡಿದಳು, "ಆತನ ಮೊದಲ ಹೆಂಡತಿ ತೀರಿದ್ದ ಹೊಸದರಲ್ಲೇ ಮದುವೆ ಯಾದೆವು. ಮನೆಯಲ್ಲಿ ಸರಳವಾಗಿ. ಯಾವ ಫೋಟೋಗ್ರಾಫರ್‌ನನ್ನ ಕರೆಸಿರಲಿಲ್ಲ." ಅನಂತರ ಆತ ಮತ್ತೆ ಕೆದಕಿ ಏನಾದರೂ ಕೇಳಿಯಾನು ಎಂದುಕೊಂಡು, "ನೋಡಿ ಇವೆಲ್ಲಾ ಇಪ್ಪತ್ತೈದು ಮೂವತ್ತು ವರ್ಷಗಳ ಮಾತು. ನಮ್ಮ ಮಕ್ಕಳಿಗೆ ಇದರ ಬಗ್ಗೆ ಗೊತ್ತಿಲ್ಲ. ನಾನು ಮರೆತಿದ್ದೇನೆ. ನೀವೂ ಎಲ್ಲವನ್ನೂ ಮರೆಯುವುದು ಒಳ್ಳೆಯದು ಅಂತ ನನಗನ್ನಿಸುತ್ತೆ."

"ಆದರೂ, ನನಗೆ ಸರಳಳ ತಂದೆಯ ಬಗ್ಗೆ ಸಂದೇಹ ಪರಿಹಾರವಾಗಲೇ ಇಲ್ಲ. ಹಾಗೇ ಉಳಿದು ಬಿಟ್ಟಿತು."

" ಒಳ್ಳೆಯದೇ ಬಿಡಿ."

"ಅವಳಿಗೆ ತಾನು ನಮ್ಮ ಸ್ವಂತ ಮಗಳಲ್ಲ ಅಂತ ಅನ್ನುವುದು ತಿಳಿದಿದೆ."

"ಅದೇ ತಪ್ಪು. ನೀವೇಕೆ ತಿಳಿಸಿದಿರಿ?"

"ನನ್ನ ಹೆಂಡತಿಗೆ ಸ್ವಲ್ಪ ದುಡುಕು ಜಾಸ್ತಿ. ಮಂಜುಳನ್ನ ಬೈಯುವಾಗ, ಮುದ್ದು ಹೆಚ್ಚಾಗಿ, ಈ ರಹಸ್ಯವನ್ನ ಹೊರಗೆಡವಿದ್ದಾಳೆ."

"ಆ ಹುಡುಗಿಯ ಮನಸ್ಸು ಎಷ್ಟು ನೊಂದಿರಬಹುದು.... ಬೇಗ ಮದುವೆ ಮಾಡಿ ಕಳಿಸಿಕೊಡಿ. ನಾನು ತಾಯಿಯ ಪ್ರೀತಿಯನ್ನ ಕೋಡಿಯಾಗಿ ಹರಿಸುತ್ತೇನೆ."

"ನಾನೊಂದು ಮಾತು ಕೇಳಿದರೆ ತಪ್ಪು ಭಾವಿಸಬೇಡಿ. ಇಬ್ಬರು ಹೆಣ್ಣು ಮಕ್ಕಳೂ ಮದುವೆಯಾಗಿ ಹೊರಟು ಹೋದರೆ ಮನೆ ಭಣ ಭಣ ಅನ್ಸುತ್ತೆ. ನಿಮ್ಮ ಇಬ್ಬರು ಮಕ್ಕಳಲ್ಲಿ ಒಬ್ಬನನ್ನ ನನ್ನ ಮನೆಯ ಅಳಿಯನ್ನನ್ನಾಗಿ ಕಳಿಸಿಕೊಡಿ."

ಆಕೆಯ ಎದೆ ಧಸಕ್ಕೆಂದಿತು. ಇದು ಅನಿರೀಕ್ಷಿತವಾದ ಪ್ರಶ್ನೆ, ಮುಖ ಬಿಳುಪೇರಿತು. ರವಿ ಸ್ವಂತ ಮಗನಲ್ಲ. ಆದರೆ ಹಾಗಂತ ಅವನನ್ನ ಕಳಿಸಲು ಮನಸ್ಸು ಒಪ್ಪುವುದಿಲ್ಲ. ಮದನ ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗ. ಅವನನ್ನ ಮಾವನ ಮನೆಗೆ ಕಳಿಸಿ ನಾನು ಹೇಗಿರಲಿ? ಈತನಿಗೇಕೆ ಈ ಆಸೆ ಹುಟ್ಟಿತು?

"ಈ ವಿಷಯದಲ್ಲಿ ನಾನು ಏನೂ ಹೇಳಲಾರೆ. ನ್ಯಾಯವಾಗಿ ಇದು ಸಂಪ್ರದಾಯವಲ್ಲ. ನನ್ನ ಗಂಡು ಮಕ್ಕಳೂ ಒಪ್ಪಲಾರರು."

"ನನ್ನ ಹಿರಿ ಅಳಿಯ ಹೇಗೂ ನಿಮ್ಮ ಜತೇಲಿ ಇಲ್ಲಿಯೇ ಇದಾರೆ. ನನ್ನ ಕಿರಿ ಅಳಿಯ ಮದನ ಇರುವುದು ಆ ಊರಿನಲ್ಲೇ. ಅಲ್ಲೆ ನಮ್ಮ ಮನೆಯಲ್ಲಿರಲಿ. ಏನಂತೀರಿ ಎನ್ನುವಂತೆ ಆತ ಕೇಳಿದಾಗ ಆಕೆಗೆ ಕಿರಿಕಿರಿ ಉಂಟಾಯಿತು.

"ಮದನನನ್ನು ಕೇಳಿ, ಅವನು ಒಪ್ಪಿದರೆ ಆಗಲಿ..." ಇನ್ನು ಮದುವೆಯೇ ಆಗಿಲ್ಲ. ಈಗಲಿಂದ ಕಿರಿ ಅಳಿಯನೇ? ಎಂದುಕೊಂಡಳು. ಈತನ ಪೊಗರನ್ನ ಇಳಿಸಬೇಕು. ಸರಳಳೇ ಅಪ್ಪನ ಮನೆಯಲ್ಲಿ ಇರಲು ಇಷ್ಟ ಪಡದಂತೆ ಏನಾದರೂ ಕಾರಣವನ್ನ ಹುಡುಕಬೇಕು ಎಂದು ತನ್ನಲ್ಲೇ ಯೋಚಿಸಿದಳು.

'ಲಗ್ನ ಪತ್ರಿಕೆಯ ಶಾಸ್ತ್ರ' ಮುಗಿದ ನಂತರ, ಮದನ ಒಂದೆರಡು ದಿನಗಳಿಗೆಂದು ಸರಳಳನ್ನ ತನ್ನ ಮನೆಗೆ ಕರೆತಂದಿದ್ದ. ಆದರೆ ಆರಾತ್ರಿ ಸರಳ ನಿದ್ದೆಯಿಲ್ಲದೇ ಹೊರಳಾಡಿದಳು. ಅವಳ ಚಡಪಡಿಕೆಗೆ ಕಾರಣ ತಿಳಿಯಲಿಲ್ಲ. ರಾತ್ರಿ ಒಂದು ಹೊತ್ತಿನಲ್ಲಿ ಮದನನನ್ನ ಹುಡುಕಿಕೊಂಡು ಅವನ ರೂಮಿಗೆ ಬಂದಳು. ಅವಳ ರೂಮಿನಲ್ಲೇ ಮಲಗಿದ್ದ. ತಾಯಿ ಅವಳ ಹಿಂದೆ ಎದ್ದು ಬಂದಳು. "ಪ್ರೀತಿ ಇಷ್ಟು ದೂರ ಮುಂದುವರೆದಿದೆಯೆ ಎಂಬ ಸಂದೇಹವೂ ಮೂಡಿತು.

"ಮದನ್, ನನಗೆ ಈ ಮನೇಲಿ ಇರುಕ್ಕೆ ಆಗ್ತಿಲ್ಲ ಉಸಿರು ಕಟ್ಟಿದ ಹಾಗಾಗುತ್ತಿದೆ ನನ್ನನ್ನ ಇಲ್ಲಿಂದ ಕರೆದುಕೊಂಡು ಹೋಗಿ" ಸರಳ ಅವನನ್ನ ಎಬ್ಬಿಸಿ ಹೇಳಿದ್ದಳು.

ಏಕೆ ಸರೂ! ಏನಾಯ್ತು! ನಿದ್ದೆ ಬರಲಿಲ್ವಾ! ಕೆಟ್ಟ ಕನಸೇನಾದರೂ ಬಿತ್ತೆ?" ಮದನ ಅವಳನ್ನ ತನ್ನ ಎದೆಗೆ ಆನಿಸಿಕೊಂಡು ಕೂತಿದ್ದ.

ಈ ಮನೆ, ಈ ಜನ ಎಲ್ಲಾ ಏನೋ ಒಂದು ತರಹ ಬೇರೆ ಅಂತ ಅನ್ನಿಸುತ್ತೆ. ಗಾಬರಿಯಾಗುತ್ತೆ.

"ಈ ಮನೆ ನನ್ನದು, ನಿನ್ನದು... ಈ ಜನ ನನ್ನವರು, ನಿನ್ನವರು... ಈ ದಿನ ಹೊಸದಾಗಿ ಕಂಡಿರಬಹುದು. ಕ್ರಮೇಣ ಅಡ್ಜಸ್ಟ್ ಆಗುತ್ತೆ. ಅತ್ತಿಗೆ ಎಂದೂ ಹೀಗೆಲ್ಲಾ ಆಡಿರಲಿಲ್ಲ."

"ಮಂಜುಳಂಗೆ ಇದು ಪತಿಯ ಮನೆ. ನನಗೆ ಹಾಗೆನ್ನಿಸುವುದಿಲ್ಲ. ಇಲ್ಲಿ ಈ ಮುಂಚೆ ನಾನು ಈ ಮನೆಯವಳಾಗಿದ್ದೆ ಅಂತಾನೇ ಅನ್ನಿಸ್ತಿದೆ."

"ಯಾವುದೋ ಜನ್ಮದಲ್ಲಿ ನೀನು ಈ ಮನೆಯಲ್ಲಿದ್ದೆ ಅಂತ ಅಂದ್ಕೋ..." ತಮಾಷೆ ಮಾಡಿದ.

"ತಮಾಷೆ ಮಾಡಬೇಡಿ ಮದನ್... ನಾನು ಈ ಮನೆಯಲ್ಲಿ ಹುಟ್ಟಿದವಳು.... ಈ ಮನೆಯ ಮಗಳು.... ಆಗಿದ್ದೆ ಅನಿಸ್ತದೆ."

"ಓ, ಷಟಪ್, ನನ್ನ ನಿದ್ದೆ ಕೆಡಿಸಿ ಏನೇನೋ ಕತೆ ಹೇಳುಕ್ಕೆ ಬಂದಿದೀಯೋ ಅಥವಾ ನಿದ್ದೆಯಂತೂ ಹೋಯ್ತು, ಬೇರೆ ಏನಾದ್ರೂ ಪ್ರೋಗ್ರಾಂ..."

"ಓ, ಷಟಪ್... ನಿಮಗೆ ಯಾವುದೂ, ಹೇಗೆ ಅಂತ ಅರ್ಥವಾಗುಲ್ಲ." ರೇಗಿದಳು.

"ನೀನೇ ಹೇಳು ಸರೂ, ನಾನು ನಿನ್ನ ವುಡ್‌ಬೀ, ಅರ್ಧರಾತ್ರೀಲಿ ನನ್ನನ್ನ ಎಬ್ಬಿಸಿ ಮಾತನಾಡಿಸಿದರೆ, ಅದರ ಅರ್ಥ ಏನು ಅಂತ ಹೇಳು..." ನಗುತ್ತಾ ಅವಳ ತೋಳನ್ನ ಒತ್ತಿ ಹಿಡಿದ. ಅವಳು ಅವನಿಂದ ದೂರ ಸರಿದಳು.

"ನೀವು ಹೀಗೇ ಆಡಿದರೆ, ನಾನು ನಿಮ್ಮನ್ನೂ ನಿರಾಕರಿಸಿ ಬಿಡ್ತೀನಿ."

"ನಿಮ್ಮನ್ನ ಅಂದರೆ... ಮುಂಚೆ ಯಾರನ್ನಾದರೂ ಪ್ರೀತಿಸಿ, ಆಮೇಲೆ ಅವರನ್ನೂ ನಿರಾಕರಿಸಿದ್ದೆಯಾ?" ಅವನ ಧ್ವನಿಯಲ್ಲಿ ಸಂದೇಹ ಕಂಡಿತು.

ಹೊರಗೆ ನಿಂತಿದ್ದ ತಾಯಿ ದೀಪ ಹಾಕಿ, 'ಮದನಾ...' ಅಂತ ಕೂಗಿದಳು. ಮದನ ಬೆಚ್ಚಿ, 'ಅಮ್ಮ...' ಎಂದ. ಎದ್ದು ನಿಂತ.

"ಮದನ, ಮೊದಲು ಅವಳನ್ನ ಅವಳ ಅಪ್ಪನ ಮನೆಗೆ ಕರೆದುಕೊಂಡು ಹೋಗಿ ಬಿಟ್ಟು ಬಾ."

ಅವನ ಮುಖ ಕೆಂಪಾಯಿತು.

"ಈಗ ಏನಾಯ್ತು ಅಂತ. ಅವಳಿಗೆ ನಿದ್ದೆ ಬರಲಿಲ್ಲ, ಹೆದರಿಕೆಯಾಯ್ತು ಅಂತ ಇಲ್ಲಿಗೆ ಬಂದಳು. ಮಾತಾಡ್ತಾ ಕೂತಿದ್ದೆವು ಅಷ್ಟೇ..." ಸರಳಂಗೆ ಅವಮಾನವಾ

ದಂತಾಯ್ತು. ಅಳಲು ಪ್ರಾರಂಭಿಸಿದಳು.

ನಿನಗೇನು ಅಂದೆ ಅಂತ ನೀನು ಹೀಗೆ ಅಳ್ತೀಯಾ? ನಿನ್ನನ್ನ ನಿಮ್ಮಪ್ಪನ ಮನೆ ತಲುಪಿಸುವುದಕ್ಕೆ ಹೇಳಿದೆ ಅಷ್ಟೆ...."

"ಅಮ್ಮ... ಅದೇನು ಹೇಳಬೇಕು ಅಂತಿದೀಯೋ ಅದನ್ನ ನೇರವಾಗಿ ಹೇಳು... ನಾವು ತಪ್ಪೇನನ್ನೂ ಮಾಡಿಲ್ಲ. ಅಲ್ಲದೇ ನಾವಿಬ್ಬರೂ ಮದುವೆಯಾಗುವವರು."

"ನನಗೆ ಗೊತ್ತು. ನಾನು ಹೇಳಿದಷ್ಟನ್ನ ಕೇಳು..." ಆಕೆ ಅಲ್ಲಿ ನಿಲ್ಲದೇ ಒಳಗೆ ಹೊರಟು ಹೋದಳು.

"ಸಾರಿ ಸರೂ... ಅಮ್ಮ ಏನೋ ತಪ್ಪು ತಿಳಿದುಕೊಂಡಳು. ನೀನು ಇಲ್ಲಿಗೆ ಬರಬಾರದಾಗಿತ್ತು."

"ಏನು ಮದನ್ ಹೀಗಂತೀರಿ. ನನ್ನನ್ನ ಕರೆದುಕೊಂಡು ಬಂದವರು ನೀವು ಈ ಮನೇಲಿ ನನಗೆ ದಿಗಿಲಾಗಿ ನಿದ್ದೆ ಬರದಿದ್ದರೆ, ನಿಮಗಲ್ಲದೇ ಇನ್ಯಾರಿಗೆ ಹೇಳಬೇಕು ನಾನು?"

"ಕೋಪಿಸ್ಕೋ ಬೇಡ ಡಿಯರ್... ಅಮ್ಮಂಗೆ ಏನೋ ತಪ್ಪು...ಕಲ್ಪನೆ."

"ಹಾಂ.... ನಿಮ್ಮಮ್ಮ ಈಗ ಹೇಳಿದ್ರಲ್ಲ... ಈ ಕ್ಷಣ ಇಲ್ಲಿಂದ ನನ್ನನ್ನ ಕರೆದುಕೊಂಡು ಹೋಗಿ. ಇನ್ನು ಇಲ್ಲಿರಲಾರೆ."

ಮದನ ತಲೆ ತಲೆ ಚಚ್ಚಿಕೊಂಡ. ಅಮ್ಮ ಯಾಕೆ ಹೀಗೆ ಆಡಿದಳು ಎಂದು ಅರ್ಥವಾಗಲಿಲ್ಲ. ದಡದಡನೆ ಹೋಗಿ ಅವಳೆದುರು ನಿಂತು ರೇಗಿದ...

"ಏನಮ್ಮ.... ಹೀಗಾಡಿ ಬಿಟ್ಟೆ? ನಾವೇನು ಚಿಕ್ಕ ಮಕ್ಕಳಲ್ಲ. ನಿನ್ನ ಅನುಮಾನ ಎಲ್ಲೆಲ್ಲಿಗೋ ಹೋಗುತ್ತೆ. ನಾವೇನು ತಿಳುವಳಿಕೆ ಇಲ್ಲದವರಲ್ಲ."

"ನನಗೆಲ್ಲಾ ಗೊತ್ತು... ಈ ಹುಡುಗಿಗೆ ಏನೋ ಚಡಪಡಿಕೆ. ನಿದ್ದೆಯಿಲ್ಲದೆ ಹೊರಳಾಡಿದಳು. ಕರೆದುಕೊಂಡು ಹೋಗಿ ಅವಳ ಅಪ್ಪನ ಮನೆಗೆ ಬಿಡು ಅಂತ ಹೇಳಿದರೆ ತಪ್ಪೇನು?"

"ಅಮ್ಮ...."

"ಈಗಲ್ಲ. ಪ್ರತಿ ಸಲ ಅವಳು ಈ ಊರಿಗೆ ಬಂದರೂ ಹಾಗೇ ಅನ್ನಿಸಬಹುದು. ಅವಳನ್ನು ಇನ್ನೆಂದಿಗೂ ಇಲ್ಲಿಗೆ ಕರೆದುಕೊಂಡು ಬರಬೇಡ."

"ಅಮ್ಮ... ಏನಿದು! ನಮ್ಮ ಲಗ್ನ ಪತ್ರಿಕೆ ಸಹ ಆಗಿದೆ."

"ನಾನು ಮದುವೆಯ ಬಗ್ಗೆ ಏನು ಹೇಳಿದೆ? ಮದುವೆ ಮಾಡಿಕೊಂಡು ಸಂತೋಷವಾಗಿರಿ. ಅವಳನ್ನ ಈ ಮನೆಗೆ ಕರೆದುಕೊಂಡು ಬರಬೇಡ, ಆ ಹುಡುಗಿಯ ಮನಸ್ಸು ಹಾಳಾಗಿ ಹೋಗುತ್ತೆ ಅಂದೆ..."

"ಅದಕ್ಕೆ?"

"ನೀನು ಮದುವೆಯಾಗಿ, ಅವಳ ಮನೆಯಲ್ಲಿಯೇ ಇರು. ನಿನಗೆ ನನ್ನನ್ನ ನೋಡಬೇಕೆನಿಸಿದಾಗ ಕಾಗದ ಬರಿ. ಬರ್ತೀನಿ."

"ಅಮ್ಮ... ನಿನಗೇನಾಗಿದೆ ಏನೇನೋ ಮಾತನಾಡ್ತಿದೀಯಲ್ಲ."

"ಏನಿಲ್ಲ. ಎಲ್ಲಾ ಸರಿಯಾಗಿಯೇ ಹೇಳ್ತಿದ್ದೀನಿ. ಆ ಮನೆಗೆ ಗಂಡು ಮಗನಾಗ್ಗಿ ನೀನು ಅಲ್ಲಿರು. ಅವರಿಗೂ ಗಂಡು ಮಕ್ಕಳಿಲ್ಲ." ಅವನಿಗೆ ಈ ಮಾತು ಇಷ್ಟವಾಗಲಿಲ್ಲ.

"ಆ ಮಾತೆಲ್ಲ ಈಗೇಕೆ? ಏನೇನೋ ಹೇಳ್ಬೇಡ."

"ಅದೆಲ್ಲಾ ಈಗಲೇ ನಿರ್ಧಾರವಾಗಬೇಕು. ನಾನು ಏನೋ ಒಂದು ಕಾರಣ ವಿಲ್ಲದೇ ಈ ಮಾತನ್ನ ಹೇಳುತ್ತಿಲ್ಲ. ನಿನ್ನ ಅಮ್ಮ ನಿನ್ನನ್ನ ಇದುವರೆಗೂ ಏನನ್ನೂ ಕೇಳಿಲ್ಲ. ಇದು ನನ್ನ ಕೋರಿಕೆ ಅಂತ ತಿಳ್ಕೋ."

"ಅಮ್ಮ.... ನನ್ನದೇನು ತಪ್ಪು ಅಂತ ಈ ರೀತಿ ಶಿಕ್ಷೆ ಕೊಡ್ತಾ ಇದೀಯ ನನಗೆ?"

"ಶಿಕ್ಷೆ? ತಮಾಷೆಯಾಗಿದೆ ನಿನ್ನ ಮಾತು. ಸುಮ್ಮನೇ ಹೋಗು."

"ಅಮ್ಮ ನಿನ್ನ ಮನಸ್ಸಲ್ಲಿ ಏನೋ ಸಂದೇಹ ಇದೆ. ನಿನಗೆ ಈ ಮದುವೆ ಇಷ್ಟವಿರಲಿಲ್ಲ. ಅದಕ್ಕೆ ಹೀಗಾಡ್ತಿದೀಯ...?"

"ಹೌದು ಕಣೋ... ನನಗೆ ಈ ಮದುವೆ ಇಷ್ಟವಿರಲಿಲ್ಲ. ಆದರೆ ನಾನೆಲ್ಲಿ ಮದುವೆ ಯಾಗಬೇಡ ಅಂತ ಅಂದೆ? ಸಂತೋಷವಾಗಿ ಮದುವೆಯಾಗಿ, ಸುಖ ವಾಗಿರು, ನನ್ನದೇನು? ನನಗೆ ನೀನೊಬ್ಬನೇ ಅಲ್ಲ. ರವಿ ಇದಾನೆ. ಅವನ ಜತೇಲಿರ್ತೀನಿ."

"ಓ.... ನಿನಗೆ ನಾನು ಬೇಡ. ರವಿ ಮಾತ್ರ ಬೇಕು ಅಲ್ಲವೆ! ಸರಿ ನಿನಗೆ ನಾನು ಬೇಡವಾದ ಮೇಲೆ ನಾನು ಇಲ್ಲಿರೋಲ್ಲ. ಆದರೆ ಕಾರಣ ಏನು ಅಂತ ತಿಳಿದುಕೊಳ್ಳದೇ ನಾನಿಲ್ಲಿಂದ ಹೋಗುವುದಿಲ್ಲ."

ಅಷ್ಟರಲ್ಲಿ ಏನೋ ಮಾತಿನ ಗಲಾಟೆ ಕೇಳಿದ್ದರಿಂದ ಮಂಜುಳ ರವಿ ಸಹ ಎದ್ದು ಬಂದಿದ್ದರು. ಮದನ ಸುಮ್ಮನಾದ. ತಾಯಿ ಏನೂ ಅರಿಯದವಳಂತೆ ಮುಸುಕೆಳೆದು ಮಲಗಿದಳು.

ಬೆಳಗಾಗುವುದನ್ನೇ ಕಾದಿದ್ದು, ಮಹೇಶ, ಸರಳ ಅಲ್ಲಿಂದ ಹೊರಟರು. ತಾಯಿ ಏನೂ ನಡೆದಿಲ್ಲವೆಂಬಂತೆ, ಮನೆ ಕೆಲಸಗಳಲ್ಲಿ ತೊಡಗಿದ್ದಳು.

ಕೆಲವೇ ದಿನಗಳಲ್ಲಿ ಮದನ, ಸರಳರ ಮದುವೆ ಸರಳವಾಗಿ ನೆರವೇರಿತು. ತಾಯಿ ಸೋತವಳಂತೆ ಬೀಗಿತ್ತಿಗೆ ಆಗಬೇಕಾದ ಉಪಚಾರಗಳ ಕಡೆ ಗಮನವಿಲ್ಲದೇ ತನ್ನ ಪಾಡಿಗೆ ತಾನು ಕೂತಿದ್ದನ್ನ ಗಮನಿಸಿದ.

ರವಿಯ ಮದುವೆಯಲ್ಲಿ ಇದ್ದ, ಆಟಾಟೋಪ ಈಗೆಲ್ಲಿ ಮಾಯವಾಯಿತು! ತನ್ನ ಮೇಲೇಕೆ ಸಿಟ್ಟು! ಸರಳ ಏನು ತಪ್ಪು ಮಾಡಿದಳು! ಅವನಿಗೂ ಪೆಚ್ಚಾಯಿತು.

ಮದುವೆಯ ಕಲಾಪಗಳೆಲ್ಲ ಮುಗಿದು, ಊರಿಗೆ ಹೊರಟು ನಿಂತಾಗ, ತಾಯಿ ಸುಂದರಮ್ಮನಿಗೆ ದುಗುಡ ಹೆಚ್ಚಾಯಿತು.

"ನಾನು ಏನೇನೋ ಅಂದೆ ಅಂತ, ನೀನು ಅದನ್ನೇ ಮನಸ್ಸಿಗೆ ಹಚ್ಚಿಕೊಂಡು ಬರದೇ ಇರಬೇಡ. ಆದರೆ ಸರೂ ಮಾತ್ರ ಬರುವುದು ಬೇಡ. ಅವಳನ್ನ ಬಿಟ್ಟು ನೀನೊಬ್ಬನೇ ಬರಲು ಇಷ್ಟವಿಲ್ಲದಿದ್ದರೆ ನೀನೂ ಬರಬೇಡ."

"ಬರೀ ಇದಿಷ್ಟನ್ನೇ ಮತ್ತೆ ಮತ್ತೆ ಹೇಳ್ತೀಯಾ? ಕಾರಣಾನಾದ್ರೂ ಏನೂಂತ ಹೇಳಬಾರದಾ! ಹೇಳದಿದ್ದರೆ ದಿನೇಶನ ಮೇಲಿನಾಣೆ...."

"ಯಾಕಪ್ಪ ಹೀಗೆಲ್ಲಾ ಬಲವಂತ ಮಾಡ್ತೀಯಾ? ನನಗೆ ನೀನು ಬೇರೆಯಲ್ಲ ದಿನೇಶ ಬೇರೆಯಲ್ಲ. ಆದರೆ ನಿನ್ನ ಮೇಲೆ ನನಗೆ ಹಕ್ಕು ಜಾಸ್ತಿ. ಏನು ಬೇಕಾದರೂ ಹೇಳಬಲ್ಲೆ. ಅನ್ನ ಬಲ್ಲೆ."

"ಅದೇಕೆ? ಅದೇನು ಹೆಚ್ಚುಗಾರಿಕೆ?"

"ಹೌದು. ಹೆಚ್ಚುಗಾರಿಕೇನೇ. ಇದುವರೆಗೂ ಹೇಳದೇ ಇದ್ದ ವಿಷಯಾನ ನಿನಗೆ ತಿಳಿಸ್ತೀನಿ. ಆದರೆ ನೀನು ಯಾರಿಗೂ ತಿಳಿಸುವುದಿಲ್ಲ ಅಂತ ಮಾತುಕೊಡು."

"ಹೂಂ" ಎಂದ ಆಕೆಯ ಕೈಯೊಳಗೆ ಕೈಯನ್ನಿಟ್ಟು.

ಸುಂದರಮ್ಮ ಎಲ್ಲಾ ಹೇಳಿ ಮುಗಿಸಿ, "ನೀನು ನನ್ನ ಸ್ವಂತ ಮಗ... ನಿನ್ನನ್ನ ರವಿಗೋಸ್ಕರ ನಾನು ತ್ಯಾಗ ಮಾಡಬಲ್ಲೆ.... ರವಿಗೆ ನನ್ನ ಹೊರತು ಇನ್ನ್ಯಾರಿಲ್ಲ. ಅವನನ್ನ ನನ್ನ ಉಸಿರಿರುವ ತನಕ ಚೆನ್ನಾಗಿ ನೋಡಿಕೊಳ್ತೀನಿ ಅಂತ ಭಾಷೆ ಕೊಟ್ಟಿದೀನಿ. ಈ ಕಲಸುಮೇಲೋಗರದ ಕತೆಯಿಂದ ನಿನ್ನತನವನ್ನ ನೀನು ಕಡಿಮೆ ಮಾಡಿಕೊಳ್ಳದಿರಲಿ ಅಂತ ನಾನು ನಿನಗೆ ಇದನ್ನ ತಿಳಿಸಿರಲಿಲ್ಲ. ಆದರೆ ಈ ಹುಡುಗಿ... ನಿನ್ನ ಹೆಂಡತಿ ಎಲ್ಲಾ ಬಹಿರಂಗ ಪಡಿಸಿಬಿಟ್ಟಳು."

"ಈ ಕತೆಗೂ ಅವಳಿಗೂ ಏನೂ ಸಂಬಂಧ?"

"ಇದೆ. ಸಂಬಂಧವಿದೆ. ಅವಳು ದಿನೇಶನ ಜತೆ ಹುಟ್ಟಿದವಳು. ಅವನ ಅವಳಿ ತಂಗಿ. ಹುಟ್ಟಿದ ಮಗುವನ್ನೇ ಇವರಿಗೆ ಕೊಟ್ಟಿದಾರೆ. ಆದರೆ ಆ ಹುಡುಗಿ ಆ ದಿನ ನಮ್ಮ ಮನೆಗೆ ಬಂದವಳು. ಹಳೇ ಆಲ್ಬಂನೆಲ್ಲ ತೆಗೆದು ಫೋಟೋ ನೋಡಿದಾಗಲೇ ನನಗೆ ಗೊತ್ತಾಯ್ತು. ಏಕೋ ಏನೋ ಮುಖ ಚಿತ್ರ ವಿಚಿತ್ರ ಮಾಡುತ್ತಿತ್ತು. ಹೋಗಲಿ ಅಂದರೆ ರಾತ್ರಿ ನಿದ್ದೆ ಬರದೇ ಏನೇನೋ ಕನವರಿಸಿ, ಎದ್ದು ನಿನ್ನ ಬಳಿಗೆ ಬಂತು."

"ಇನ್ನ ಕೆದಕಿ ಬೆದಕಿ ಎಲ್ಲಾ ತಿಳಿದರೆ ಏನು ಗತಿ? ಅಂತ ಯೋಚಿಸಿದೆ. ಈ ಮನೆಯವರು, ತಮ್ಮನ್ನ ಸಾಕಲಾರದೇ, ಪರರಿಗೆ ತನ್ನನ್ನ ಕೊಟ್ಟು ಬಿಟ್ಟರು ಅಂತ ಆ ಹುಡುಗಿಗೆ ತಿಳಿದರೆ, ಅದಕ್ಕಿಂತ ಭಾರಿ ಆಘಾತ ಬೇರೇನಿದೆ! ಮೊದ[illegible] ಆ

ಹುಡುಗಿಗೆ ತಾನು ಆ ಮನೆಯವಳಲ್ಲ ಅಂತ ತಿಳಿದಿದೆ. ಅವಳು ಅದೇ ಮನೆಯವಳು ಅಂತ ಅನ್ನಿಸಬೇಕಾದರೆ ನೀನೂ ಅಲ್ಲಿರಬೇಕು... ನಿನ್ನನ್ನ ಪರರ ಮನೆಗೆ ಕಳಿಸ್ತಿದೀನಿ ಅಂತ ನನ್ನ ಬಗ್ಗೆ ತಪ್ಪು ಭಾವಿಸಬೇಡ. ನಾನು ಎಂದಿದ್ದರೂ ನಿನಗೆ ತಾಯೀನೇ... ನಿನ್ನ ಅತ್ತೆ ಮಾವನಿಗೆ ಗಂಡು ಮಕ್ಕಳಿಲ್ಲ. ಅವರಿಗೆ ಮಗನಾಗಿ ಇರು. ಇಷ್ಟವಿಲ್ಲದಿದ್ದರೆ ಬೇರೆ ಮನೆ ಮಾಡಿಕೊಂಡು ನಿಮ್ಮ ಪಾಡಿಗೆ ನೀವು ಇರಿ. ಆದರೆ ಆ ಮನೆಗೆ ಬಂದು ಅವಳ ಚಿತ್ತ ಕಲಕುವುದು ಮಾತ್ರ ಬೇಡ. ದಿನೇಶನ ಬಗ್ಗೆ ದ್ವೇಷ ಹುಟ್ಟುವುದು ಬೇಡ. ಪರಲೋಕದಲ್ಲಿರುವ ಆತ್ಮಗಳಿಗೆ ನೋವಾಗುವುದು ಬೇಡ.

ನಿನ್ನ ಹೆಂಡತಿಯ ಕಣ್ಣಲ್ಲಿ ನಾನು ಕೆಟ್ಟವಳಾದರೂ ಸರಿ. ನೀನು ಈ ಹುಡುಗಿಯನ್ನ ಮತ್ತೆಂದೂ ಈ ಮನೆಗೆ ಮಾತ್ರ ಕರೆತರಬೇಡ.

"ಆಗಲಮ್ಮ..." ಎಂದ ಆಕೆಯ ಕೈಯನ್ನೆತ್ತಿ, ತನಗಾಗಿ, ರವಿಗಾಗಿ, ತಾನು ಸಾಕದಿದ್ದರೂ, ಸರಳೆಗಾಗಿ, ಅಮ್ಮನ ಜೀವ ಚಡಪಡಿಸುವುದನ್ನು ಕಂಡು ಅವನ ಮನಸ್ಸು ಮೂಕವಾಗಿ ರೋಧಿಸಿತು. ಅಮ್ಮನ ಈ ಸತ್ಕಾರ್ಯಕ್ಕೆ ಸತ್ಫಲ ದೊರಕಲಿ ಎಂದು ದೇವರಲ್ಲಿ ಪ್ರಾರ್ಥಿಸಿಕೊಂಡ. ಅಭಿಮಾನದ ನೋಟವನ್ನು ತಾಯಿಯೆಡೆಗೆ ಬೀರಿದ. ಮುಖದ ಮೇಲಿನ ಭಾವನೆ ಸೋತಂತೆ ಅನ್ನಿಸಿದರೂ, ಅಂತರಾಳದ ಗೆಲುವನ್ನು ಕಂಡ.

* * *

೧೪. ಮಧುವನದಲ್ಲಿ ಮಧುರ ರಾತ್ರಿ

ರಾಕಿ ಚೈನನ್ನು ಜಗ್ಗಿಸುತ್ತಾ ಬೊಗಳ ತೊಡಗಿತು: ರಂಗನಾಥ, "ಏಯ್ ಯಾಕೋ ರಾಕೀ?" ಎನ್ನುತ್ತಾ ನಾಯಿ ಎಳೆದ ಕಡೆಗೆ ಧಾವಿಸಿದ. ಕೈಯಲ್ಲಿದ್ದ ದೊಡ್ಡ ಟಾರ್ಚಿನ ಬೆಳಕನ್ನು ಗಿಡಗಂಟೆಗಳ ಮೇಲೆ ಹರಿಸಿದ. ರಾಕೀ ಬೊಗಳುತ್ತಲೇ ಇತ್ತು. ಗೋಡೆಯ ಮೂಲೆಗೆ ಅಂಟಿಕೊಂಡಂತೆ ಕೂತಿದ್ದ ಹೆಂಗಸಿನ ಮೇಲೆ ಬೆಳಕು ಬಿದ್ದಿತು. ಆ ಹೆಂಗಸು ಬೆಳಕಿಗೆ ಕೈಯನ್ನು ಅಡ್ಡ ಹಿಡಿದಳು.

"ಯಾರದು.....ಯಾರು ನೀನು?" ರಂಗನಾಥ ಗಡುಸಾಗಿಯೇ ಕೇಳಿದ.

ಅವಳು ಕತ್ತು ಬಗ್ಗಿಸಿ, ಕೈ ಮುಗಿದಳು. ಮಾತಾಡಲಿಲ್ಲ. ಅವನು ಅಧೀರನಾದರೂ, ಮತ್ತೆ ಪ್ರಶ್ನಿಸಿದ.

"ಇಲ್ಯಾಕೆ ಅಡಗಿ ಕೂತಿದೀಯ? ಯಾರು ನೀನು..... ಎದ್ದು ಹೊರಕ್ಕೆ ಹೋಗು....." ನಾಯಿ ಜೋರಾಗಿ ಬೊಗಳುತ್ತಾ, ಅವಳಿದ್ದ ಕಡೆಗೆ ಅವನನ್ನು ಎಳೆಯಿತು.

ಅವಳು ಕೆಟ್ಟದಾಗಿ ಕಿರುಚಿಕೊಂಡು, ಅಲ್ಲೇ ಉರುಳಿಕೊಂಡು ಬಿಟ್ಟಳು. ಟಾರ್ಚಿನ ಬೆಳಕು ಅವಳ ಮೈಮೇಲೆ ಹರಿದಾಡಿತು. ಅವಳ ಮೈಮೇಲೆ ಸೀರೆ ಇಲ್ಲದೇ ಇದ್ದುದನ್ನು ಗಮನಿಸಿ, ಬೆಳಕನ್ನು ನಂದಿಸಿದ. ಒಂದು ಗಳಿಗೆ ಯೋಚಿಸಿದ. ಅಲ್ಲಿಂದಲೇ ಆಳನ್ನು ಕರೆದ. ಕೆಂಪಯ್ಯ ಓಡೋಡಿ ಬಂದ.

"ಕೆಂಪಯ್ಯಾ.....ರಾಕೀನ ಕರ್ಕೊಂಡು ಹೋಗಿ ಕಟ್ಹಾಕು. ಹಾಗೇ ನಿನ್ನ ಹೆಂಡ್ತೀನ ಕಳ್ಸು....."

"ಯಾಕ್ಸಾರ್.....ಕೆಲಸ ಎಲ್ಲಾ ಆಯ್ತಲ್ಲಾ.....?" ಕೆಂಪ ಸಂದೇಹದಿಂದ ಕೇಳಿದ.

"ಹೇಳ್ದಷ್ಟು ಕೇಳು ಕೆಂಪಯ್ಯಾ....." ಎನ್ನುತ್ತಾ ಮನೆಯ ಮುಂಬಾಗಿಲ ಮೆಟ್ಟಿಲ ಬಳಿಗೆ ಬಂದ. ಕೆಲವೇ ನಿಮಿಷಗಳಲ್ಲಿ ರತ್ನಮ್ಮ ಬಂದಳು.

"ಎನ್ಸಾರ್ ಕರೆದ್ರಂತೆ......?"

"ಅಲ್ಲಿ ಪಕ್ಕದ ಗೋಡೆ ಹತ್ರ ಯಾರೋ ಹೆಂಗ್ಸು ಮಲಗಿದ ಹಾಗಿದೆ. ಯಾರೂಂತ ವಿಚಾರಿಸು, ಹಾಗೇ ಏನಾದ್ರೂ ಸಹಾಯ ಬೇಕಾ ಅಂತ ಕೇಳು."

"ಯಾರ್ಸಾರ್......?" ಅವಳು ಭಯದಿಂದ ಕೇಳಿದಳು.

"ನಂಗೊತ್ತಿಲ್ಲ ರತ್ನಮ್ಮ. ನಾನು ರಾಕಿ ಜೊತೆ ಸುತ್ತಾಡೋಕೆ ಹೋಗಿರಲಿಲ್ವಾ? ನೀನು ತಾನೇ ಇಲ್ಲಿ ಇದ್ದದ್ದು?"

"ನಂಗೊತ್ತಿಲ್ಲ ಸಾರ್, ನಾನು ನೋಡ್ಲಿಲ್ಲ.....ಯಾರೋ ಏನೋ?"

"ಸರಿ, ನಿನ್ನ ಗಂಡನ್ನ ಕರ್ಕೊಂಡು ಬಾ. ಇಬ್ರೂ ಹೋಗಿ ವಿಚಾರಿಸಿ, ಏನಾದ್ರೂ ಬೇಕಿದ್ರೆ ನಂಗೆ ಹೇಳಿ." ಅವನು ವರಾಂಡದಲ್ಲಿದ್ದ ಉಯ್ಯಾಲೆಯ ಮೇಲೆ ಕುಳಿತ.

ಅಷ್ಟರಲ್ಲಿ ಕೆಂಪಯ್ಯನೂ ಅಲ್ಲಿಗೆ ಬಂದ. ಇಬ್ಬರೂ ಆ ಹೆಂಗಸು ಉರುಳಿಕೊಂಡಿದ್ದೆಡೆಗೆ ಬಂದರು.

"ಏಯ್.....ಯಾರಮ್ಮಾ ಅದು.....? ಇಲ್ಯಾಕೆ ಮಲ್ಗಿದೀಯಾ? ಎದ್ನಡಿ....." ಕೆಂಪಯ್ಯ ಗದರಿದ.

"ಕೆಂಪಯ್ಯಾ ಹಾಗಾ ಮಾತನಾಡೋದು? ಆ ಹೆಂಗಸು ಕಷ್ಟದಲ್ಲಿದ್ದಾಳೆ ಅಂತ ಕಾಣುತ್ತೆ. ನಿನ್ನ ಹೆಂಡ್ತಿ ಮಾತಾಡ್ಲಿ, ನೀನಿತ್ಲಾಗೆ ಬಾ." ರಂಗನಾಥ, ಅವನನ್ನು ಕರೆದ. ರತ್ನಮ್ಮ, ಗಂಡನ ಕೈ ಹಿಡಿದಳು. ಹೋಗದಿರುವಂತೆ ತಡೆದಳು.

"ಸುಮ್ಕಿರು ರತ್ನ, ಸಾರ್ ಹೇಳಿದ್ದು ಕೇಳಿಸ್ಲಿಲ್ವಾ?" ಕೆಂಪಯ್ಯ ಅತ್ಲಾಗೆ ನಡೆದ.

ಆ ಹೆಂಗಸು ಎದ್ದು ನಿಂತು, ರತ್ನಮ್ಮನ ಬಳಿಗೆ ಬಂದಳು. ಕಿಟಕಿಯಿಂದ ತೂರಿ ಬರುತ್ತಿದ್ದ ಬೆಳಕಿನಲ್ಲಿ ಆ ಹೆಂಗಸು, ಅರೆ ಬೆತ್ತಲೆಯಲ್ಲಿರುವುದನ್ನು ರತ್ನಮ್ಮ ಕಂಡಳು. ಹಿಂದೆ ಹಿಂದೆ ಸರಿದಳು.

"ಹೆದರ್ಬೇಡಮ್ಮ, ನಾನೂ ನಿನ್ನ ಹಾಗೇ ಮನುಷ್ಯಳೇ. ನನ್ನ ಸೀರೇನ ಯಾರೋ ಎಳೆದು ಹಾಕಿದಾರೆ ಅಂತ ಕಾಣ್ಸುತ್ತೆ."

"ಅಲ್ಲೇ ನಿಂತ್ಕೋ. ಒಂದು ಸೀರೇನ ತಂದು ಕೊಡ್ತೀನಿ." ರತ್ನಮ್ಮ ತನ್ನ ಮನೆಗೆ ಓಡಿ ಹೋದಳು. ತನ್ನ ಬಳಿ ಇದ್ದ ಸುಮಾರಾದ ಸೀರೆಗಳಲ್ಲಿ ಒಂದನ್ನು ತಂದು, ಆ ಹೆಂಗಸಿನ ಬಳಿ ಎಸೆದಳು. ಅವಳು ಸರ್ರನೆ ಸೀರೆಯನ್ನು ಎತ್ತಿಕೊಂಡು ಸುತ್ತಿಕೊಂಡಳು.

"ಹೂಂ. ಈಗ್ಹೇಳು, ಯಾರ್ ನೀನು.... ಇಲ್ಲಿಗ್ಯಾಕೆ ಬಂದಿದೀಯ.....?"

"ನಂಗೆ ತುಂಬಾ ಹಸಿವಾಗ್ತಿದೆ, ತಿನ್ನೋಕೆ ಏನಾದ್ರೂ ಇದೆಯಾ?"

"ಇಷ್ಟು ಹೊತ್ನಲ್ಲಿ ಏನು ಸಿಕ್ತೈತೆ? ಉಂಡು ಪಾತ್ರೆ ತೊಳೆದಾಯ್ತಲ್ಲ!"

"ಸ್ವಲ್ಪ ಕುಡಿಯೋಕೆ ನೀರನ್ನಾದ್ರೂ ಕೊಡಮ್ಮಾ."

"ಇಲ್ಲೇ ನಿಂತಿರಮ್ಮಾ, ತಂದ್ಕೊಡ್ತೀನಿ." ರತ್ನಮ್ಮ ಸರಿದಳು.

"ಸಾರ್, ಆಯಮ್ಮಂಗೆ ನೀರು ಬೇಕಂತೆ, ಕೊಡ್ಲಾ?" ರತ್ನಮ್ಮ ಕೇಳಿದಾಗ,

ರಂಗನಾಥ ಎದ್ದು ಹೊರಬಂದ.

"ಆ ಹೆಂಗ್ಸು ಯಾರಂತೆ, ವಿಚಾರಿಸಿದ್ಯಾ?"

"ಹೂಂ. ಕೇಳ್ದೆ, ಹೇಳ್ಲಿಲ್ಲ. 'ಹಸಿವಾಗ್ತಿದೆ, ತಿನ್ನೋಕೆ ಏನಾದ್ರೂ ಬೇಕು' ಅಂತು. ಎಲ್ಲಿಂದ ತರ್ಲಿ ಈ ಹೊತ್ನಾಗೆ?"

"ಬ್ರೆಡ್ಡೋ.....ಬನ್ನೋ......ಇರಬಹುದು, ತಂದ್ಕೊಡು." ರತ್ನಮ್ಮ ಗಂಡನ ಕಡೆ ನೋಡಿ, ಮನೆಯೊಳಗೆ ನಡೆದಳು.

ಅವಳು ಹೊರಬಂದಾಗ, ರಂಗನಾಥ ನುಡಿದ, "ಇತ್ಲಾಗೆ ಕರೆದುಕೊಡು. ಅಲ್ಲಿ ಕತ್ಲೇಲಿ ಬೇಡ."

ರತ್ನ ಬ್ರೆಡ್ಡನ್ನು ಅಲ್ಲಿಯೇ ಇಟ್ಟು, ಆ ಹೆಂಗಸನ್ನು ತನ್ನ ಜೊತೆಯಲ್ಲಿ ಕರೆತಂದಳು. ಅನುಮಾನಿಸುತ್ತಾ ಅತ್ತ ಬಂದವಳನ್ನೇ ರಂಗನಾಥ ದಿಟ್ಟಿಸಿದ. ಯಾರೋ ಭಿಕ್ಷುಕಿ ಯಂತೆಯೋ, ಕಳ್ಳಿಯಂತೆಯೋ ಕಂಡು ಬರಲಿಲ್ಲ. ಅವಳು ಅಲ್ಲಿದ್ದ ಮೆಟ್ಟಿಲ ಮೇಲೆ ಕುಳಿತಾಗ, ಅವನಿಗೆ ಕೆಡುಕೆನಿಸಿತು.

"ರತ್ನಮ್ಮ, ಅವರನ್ನು ಒಳಕ್ಕೆ ಕರ್ಕೊಂಡು ಬಾ." ರತ್ನ, ಗಂಡನ ಕಡೆ ಅನುಮಾನದಿಂದ ನೋಡಿದಳು.

"ಹೂಂ. ಒಳಕ್ಕೆ ಹೋಗಮ್ಮ." ಆ ಹೆಂಗಸು ಸಂಕೋಚದಿಂದ ಒಳಬಂದಳು.

ರಂಗನಾಥ ಹತ್ತಿರದಿಂದ ಅವಳನ್ನು ನೋಡಿದ. ಮೈ – ಕೈಯೆಲ್ಲಾ ಮಣ್ಣಾಗಿದೆ. ಮುಖವೆಲ್ಲಾ ಆತಂಕದಿಂದ ಕಪ್ಪಾಗಿದೆ. ರತ್ನಮ್ಮನ ಸಾಧಾರಣ ಸೀರೆಯಲ್ಲೂ, ಆ ಹೆಂಗಸು ಕಳೆ ಕಳೆಯಾಗಿದ್ದಾಳೆ ಎನ್ನವುದನ್ನು ಗಮನಿಸಿದ. 'ಏನೋ ಕಷ್ಟಕ್ಕೆ ಸಿಕ್ಕಿಬಿದ್ದಿದ್ದಾಳೆ. ಸಹಾಯ ಮಾಡಬೇಕು' ಎಂದುಕೊಂಡ. ಅಡುಗೆ ಮನೆಗೆ ಹೋಗಿ, ಬಿಸಿಯಾಗಿದ್ದ ಹಾಲಿಗೆ, ಸಕ್ಕರೆ ಹಾಕಿ ತಂದುಕೊಟ್ಟ.

"ಸಧ್ಯಕ್ಕೆ ಬ್ರೆಡ್, ಹಾಲು ತಗೊಳ್ಳಿ. ಮೊದಲು ಸುಧಾರಿಸಿಕೊಳ್ಳಿ. ಆಮೇಲೆ ಮಾತನಾಡೋಣ." ಅವಳಿಗೆ ಮುಜುಗರವಾಗಬಾರದೆಂದು ತಾನು ಹೊರಬಂದು, ಅಲ್ಲಿದ್ದ ಕಲ್ಲು ಬೆಂಚಿನ ಮೇಲೆ ಕುಳಿತ.

ಅವಳು ಬಿಸಿ ಹಾಲಿನೊಂದಿಗೆ ಬ್ರೆಡ್ಡನ್ನು ತಿಂದು, ಕೈ ಹಾಗೂ ಬಾಯನ್ನು ಒರೆಸಿಕೊಂಡಳು. ಎದ್ದು ಒಳಬಂದ. ಕೂತಿದ್ದವಳು ಎದ್ದು ನಿಂತಳು.

"ಪರ್ವಾಗಿಲ್ಲ ಕೂತ್ಕೊಳ್ಳಿ. ನಿಮ್ಮ ಬಗ್ಗೆ ಹೇಳಿ.....ಬೆಳಿಗ್ಗೆ ನೀವು ಎಲ್ಲಿಗೆ ಹೋಗ್ತೀರೋ ಅಲ್ಲಿಗೆ ಕಳಿಸಿಕೊಡುವ ಏರ್ಪಾಡು ಮಾಡ್ತೀನಿ."

"ಈಗ ಟೈಂ ಎಷ್ಟಾಗಿದೆ?"

ಅವನು, ಕೈ ಗಡಿಯಾರದ ಕಡೆ ನೋಡಿದ.

"ಹನ್ನೊಂದು ಗಂಟೆ ಆಗ್ತಾ ಬಂದಿದೆ. ನೀವು ಇರೋದು ಎಲ್ಲಿ?"

"ನಾನು ಇರೋದು ಪದ್ಮನಾಭನಗರದಲ್ಲಿ. ಇದು ಯಾವ ಊರು?"

"ಇದು ಕೆಂಪಾಪುರ ಅಂತ. ಸಿಟಿಯಿಂದ ಸಾಕಷ್ಟು ದೂರದಲ್ಲಿದೆ. ನೀವು ಇಲ್ಲಿ ಎಲ್ಲಿಗೆ ಬಂದಿದ್ರಿ..... ಹೇಗೆ ಬಂದಿದ್ರಿ? ಜೊತೇಲಿ ಯಾರ್‍ಯಾರು ಇದ್ರು?" ಅವಳು, ಅವನನ್ನು ಪಿಳಿ ಪಿಳಿ ನೋಡಿದಳು. ಹೇಳಲು ಇಷ್ಟವಿಲ್ಲವೆಂದು ಅರಿವಾಗಿತ್ತು.

"ಸರಿ ಬಿಡಿ. ಹೇಳೋಕೆ ಇಷ್ಟವಿಲ್ಲದಿದ್ರೆ ಬೇಡ. ಈಗ ಮಲಗಿ, ನಿದ್ದೆ ಮಾಡಿ. ಬೆಳಿಗ್ಗೆ ಮಾತನಾಡೋಣ. ರತ್ನಮ್ಮ..... ನೀನೂ ಇಲ್ಲೇ ಮಲಕ್ಕೋ....." ರತ್ನ ಗಂಡನ ಕಡೆ ನೋಡಿದಳು.

"ಕೆಂಪಯ್ಯಾ, ಎರಡು ಹೊದಿಕೆ..... ದಿಂಬನ್ನು ತಂದುಕೊಡು" ಎಂದು ಹೇಳಿ, ತನ್ನ ಪಾಡಿಗೆ ತಾನು ಒಳಗೆ ಹೋದ.

"ನೀನೂ ಇಲ್ಲೇ ಮನಿಕ್ಕೋ. ನಂಗೆ ಭಯ ಆಯ್ತೈತೆ."

ಕೆಂಪಯ್ಯ ತನಗೂ ಹೊದಿಕೆ, ದಿಂಬುಗಳನ್ನು ತಂದ.

"ನಾವು ಇಲ್ಲಿ ವರಾಂಡದಲ್ಲಿ ಮಲಗ್ತೀವಿ. ನೀವು ಸೋಫಾದ ಮೇಲೆ ಮಲಕ್ಕಳಿ."

"ಪರವಾಗಿಲ್ಲ. ನಾನು ಇಲ್ಲೇ ಉಯ್ಯಾಲೆ ಮೇಲೆ ಮಲಗ್ತೀನಿ." ದಿಂಬನ್ನು ಹೊದಿಕೆಗಳನ್ನು ಹಿಡಿದಳು.

ರಂಗನಾಥ ಒಳಗಿನಿಂದ ಬಂದ.

"ನೀನೂ ಇಲ್ಲೇ ಮಲಗ್ತೀಯೇನೋ......ಕೆಂಪಯ್ಯಾ?" ಕೆಂಪಯ್ಯ ಪೆದ್ದು ಮುಖ ಮಾಡಿದ.

"ನೀವು ಒಳಗೆ ಸೋಫಾದ ಮೇಲೆ ಮಲಕ್ಕಳಿ......ಇಲ್ಲಿ ಬೇಡ." ಆತನ ಮಾತಿಗೆ ಇಲ್ಲವೆನ್ನಲಾಗದೇ ಆ ಹೆಂಗಸು ಒಳನಡೆದಳು.

೨

ಬೆಳಗಾಗಿತ್ತು. ಎಂದಿನಂತೆ ರಂಗನಾಥ ಎದ್ದು, ಕಾಫೀ ಮಾಡಿಕೊಂಡು ಕುಡಿಯುವಾಗ, ಅವನಿಗೆ ಹಿಂದಿನ ರಾತ್ರಿಯ ನೆನಪಾಗಿತ್ತು. ಊಟದ ಮನೆಯಿಂದ ಹೊರ ಬಂದ. ಸೋಫಾದ ಮೇಲೆ ಮೈತುಂಬಾ ಹೊದ್ದು ಮಲಗಿದ್ದವಳ ಕಡೆ ನೋಡಿದ. ನಿಶ್ಚಿಂತೆಯಾಗಿ ಮಲಗಿದ್ದವಳನ್ನು ಕಂಡು, ತಾನು ಈ ಮುಂಚೆ ಎಲ್ಲಿಯೋ ನೋಡಿರಬಹುದೇ ಎಂಬ ಸಂದೇಹ ಕಾಡಿತು. ಅವಳು ಹೊರಳಿದಾಗ, ಅವನು ಅಲ್ಲಿಂದ ಸರಿದಿದ್ದ. ಹೊರಗೆ ಮಲಗಿದ್ದ ಕೆಂಪಯ್ಯ, ಅವನ ಹೆಂಡತಿ ಇಬ್ಬರೂ ಎದ್ದು ಹೋಗಿದ್ದರು. ತಾನು ಕಾಫೀ ಕುಡಿದು ಮುಗಿಸಿ, ಷರಟು – ಪ್ಯಾಂಟನ್ನು ಧರಿಸಿ ಕೈಯಲ್ಲಿ ಸ್ಟಿಕ್ ಹಿಡಿದು, ನಾಯಿಯನ್ನು ಕಟ್ಟಿದ್ದ ಷೆಡ್ ಬಳಿಗೆ ಬಂದ. ನಾಯಿಯನ್ನು ಹಿಡಿದು ಕೆಂಪಯ್ಯನ ಮನೆ ಬಳಿ ಬಂದ. ಒಳಗಿನಿಂದ ಮಗು

ಅಳುತ್ತಿರುವ ಸದ್ದು ಕೇಳಿಸುತ್ತಿತ್ತು. ಕೆಂಪಯ್ಯನ ತಾಯಿ, ಮಗುವನ್ನು ಸಮಾಧಾನ ಗೊಳಿಸುತ್ತಿದ್ದಳು. ನಾಯಿ ಬೊಗಳಿದ್ದನ್ನು ಕೇಳಿ, ರತ್ನಮ್ಮ ಹೊರಬಂದಳು.

"ನಾನು ವಾಕಿಂಗ್ ಹೋಗಿ ಬರ್ತೀನಿ. ನೀನು ಸ್ವಲ್ಪ ನಮ್ಮ ಮನೇಲಿರು. ಆಕೆ ಇನ್ನೂ ಮಲಗಿದಾಳೆ."

"ಅವರು ಯಾರು ಅಂತ ಗೊತ್ತಾಯ್ತಾ ಸಾರ್?"

"ಇಲ್ಲ. ಅವರು ಎದ್ಮೇಲೆ ಅವರಿಗೆ ಕಾಫೀ ಮಾಡಿಕೊಡು. ಹಾಗೇ ಅವರು ಎಲ್ಲಿಗೆ ಹೋಗ್ಬೇಕು ಅಂತ ಕೇಳಿ ತಿಳ್ಕೋ, ಬಸ್ಸನ್ನು ಹತ್ತಿಸ್ಬಿಟ್ಟು ಬಾ." ರಾಕಿ, ಅವನನ್ನು ಎಳೆಯಿತು. ಅವನು ಮುಂದೆ ಮುಂದೆ ನಡೆದ. ರತ್ನ, ಅವನನ್ನೇ ವಿಸ್ಮಯದಿಂದ ನೋಡುತ್ತಾ ಅವನ ಮನೆಯ ಕಡೆಗೆ ನಡೆದಳು.

ಮಗುವನ್ನು ಎತ್ತಿಕೊಂಡು, ಅವಳ ಅತ್ತೆಯೂ ಅವಳ ಹಿಂದೆ ನಡೆದಳು. ಮಗುವಿನ ಅಳುವಿನ ಸದ್ದನ್ನು ಕೇಳಿ, ಆ ಹೆಂಗಸು ಎದ್ದು ಕುಳಿತಳು.

"ನಮ್ಮ ಸಾರ್ ಹೇಳಿದಾರೆ, ಎದ್ದು ರೆಡಿ ಮಾಡ್ಕೊಳಿ. ಕಾಫೀ ಕುಡ್ಯೋರಂತೆ. ಬಸ್ಸಿಗೆ ಕರ್‍ಕೊಂಡು ಹೋಗಿ ಹತ್ತಿಸ್ತೀನಿ." ರತ್ನ ಹೇಳಿದಳು.

"ನಿಮ್ಮ ಸಾರ್ ಎಲ್ಲಿ......ನಾನು ಅವರ್‍ಹತ್ರ ಮಾತಾಡ್ಬೇಕಲ್ಲ!"

"ಅವರು ವಾಕಿಂಗ್ ಹೋಗಿದಾರೆ. ಬರೋದು ಶಾನೆ ತಡವಾಗುತ್ತೆ. ನೀವು ಕಾಯಬೇಕಾಗಿಲ್ಲ."

"ನಾನು ಅವರಿಗೆ ಥ್ಯಾಂಕ್ಸ್‌ನಾದ್ರೂ ಹೇಳ್ಬೇಕು. ಈ ಸೀರೆ.......ಈ ಸೀರೆ ಯಾರದ್ದು? ಹೇಗೆ ವಾಪಸ್ಸು ತಲುಪಿಸ್ಲಿ?"

"ಪರ್ವಾಗಿಲ್ಲ, ನೀವೇ ಇಟ್ಕೊಳ್ಳಿ. ಸಾರ್, ನಂಗೆ ಬೇರೆ ಸೀರೆ ಕೊಡಿಸ್ತಾರೆ. ಏಳಿ ಮುಖ ತೊಳ್ಕೊಳ್ಳಿ."

"ನಾನು ಸ್ನಾನ ಮಾಡ್ಬೇಕು. ಮೈಯೆಲ್ಲಾ ಕೊಚ್ಚೆಯಾಗಿದೆ. ಹೀಗೆ ಹೇಗೆ ಬಸ್ನಲ್ಲಿ ಹೋಗ್ಲೀ?"

"ಹುಂ, ನಿಮ್ಮ ಬಟ್ಟೆ ಶಾನೇ ಕೊಳೆಯಾಗಿದೆ. ಅದ್ಹೆಂಗಾಯ್ತು? ನಿಮ್ಮ ಸೀರೆಗೇನಾಯ್ತು.....ಯಾರಾದ್ರೂ ಪೋಲಿಗಳು ಅಟ್ಟಿಸ್ಕೊಂಡು ಬಂದ್ರಾ?" ಆ ಹೆಂಗಸಿನ ಮುಖ ಕೆಂಪಾಯಿತು, ಅಳು ಬರುವ ಹಾಗಾಯಿತು. ಸುಮ್ಮನಾಗಿಬಿಟ್ಟಳು.

ರತ್ನ ಅದೇ ಕಾರಣವಿರಬೇಕೆಂದುಕೊಂಡು ಸುಮ್ಮನಾದಳು. ಮತ್ತೆ ಪ್ರಶ್ನಿಸಲಿಲ್ಲ. ಆಕೆ ಮುಖ ತೊಳೆದು ಬಂದು, ಕಾಫೀ ಕುಡಿದು, ಹಾಗೇ ಕುಳಿತುಕೊಂಡಿದ್ದಳು. ಅಳುತ್ತಿದ್ದ ಮಗುವನ್ನು ವಯಸ್ಸಾದ ಹೆಂಗಸು ಆಡಿಸುತ್ತಿದ್ದಳು. ಆಗಾಗ್ಗೆ ಮಗುವನ್ನೇ ನೋಡುತ್ತಿದ್ದುದು ಆ ಹೆಂಗಸಿನ ಗಮನಕ್ಕೆ ಬಂತು. ಮಗುವನ್ನು ಮಲಗಿಸಿ ಎದ್ದು ಬಂದಳು.

"ನನ್ನ ಸೊಸೆ ಎಲ್ಲಿ ಹೋದ್ಲು?" ಎಂದು ತನಗೆ ತಾನೇ ಹೇಳಿಕೊಂಡು, ಇವಳ ಬಳಿಗೆ ಬಂದಳು. ಮೇಲಿನಿಂದ ಕೆಳಗೆ ಅನೇಕ ಸಾರಿ ನೋಡಿದಳು. ಅಷ್ಟರಲ್ಲಿ ನಾಯಿ ಬೊಗಳಿದ ಸದ್ದು ಕೇಳಿ, ಆ ಮುದುಕಿ ಎದ್ದಳು. ರಂಗನಾಥ ನಾಯಿಯನ್ನು ಅದರ ಮನೆಯಲ್ಲಿ ಕಟ್ಟಿ ಹಾಕಿ ಬಂದು, ಅವಳ ಎದುರು ನಿಂತ ಆತ.

"ಓ.....ನೀವಿನ್ನೂ ಹೋಗಿಲ್ವಾ.....ರತ್ನಮ್ಮ ಎಲ್ಲಿಗೆ ಹೋದ್ಲು?"

"ನಾನು, ನಿಮ್ಮ ಹತ್ರ ಸ್ವಲ್ಪ ಮಾತನಾಡ್ಬೇಕಾಗಿತ್ತು." ಉಗುಳು ನುಂಗುತ್ತಾ ನುಡಿದಳು.

"ಹುಂ, ಹೇಳಿ.....?" ಎದುರಿನ ಸೋಫಾದ ಮೇಲೆ ಕುಳಿತ.

"ಮೊದಲು ನಿಮಗೆ ಥ್ಯಾಂಕ್ಸ್ ಹೇಳ್ಬೇಕು. ನಾನು ಈ ಸೀರೇನ ಉಟ್ಕೊಂಡು ಬಸ್ನಲ್ಲಿ ಹೇಗೆ ಹೋಗ್ಲೀ? ಏನ್ಮಾಡ್ಬೇಕೋ ನಂಗೆ ಗೊತ್ತಾಗ್ತಿಲ್ಲ."

"ನಿಮ್ಮ ಮನೆಗೆ ಫೋನು ಮಾಡಿ, ಬಂದು ಕರ್ಕೊಂಡು ಹೋಗ್ತಾರೆ, ಅದಕ್ಯಾಕೆ ಸಂಕೋಚ? ಇಲ್ಲೇ ಫೋನ್ ಇದೆ ನೋಡಿ."

"ಇಲ್ಲ, ನಾನು ಫೋನ್ ಮಾಡೋಕೆ ಆಗೊಲ್ಲ. ಅದೇ ಒಂದು ಹಗರಣ ಆಗುತ್ತೆ. ಚೆನ್ನಾಗಿರೋ ಸೀರೇನ ಕೊಟ್ಟಿರ್ತೀರಾ? ವಾಪಸ್ಸು ತಂದುಕೊಡ್ತೀನಿ."

ಅವನು ನಕ್ಕ. "ನಮ್ಮ ಮನೇಲಿ ಯಾವ ಸೀರೆಗಳಿಲ್ಲ. ಇದ್ದಿದ್ದರೆ ರತ್ನಮ್ಮನ್ನ ಸೀರೇನ ನಿಮಗೆ ಕೊಡ್ತಿರಲಿಲ್ಲ. ಅಂಗಡಿಯಿಂದ ತಂದುಕೊಡ್ತೀನಿ." ಅವನು ಎದ್ದ; ಅವಳು ತಡೆದಳು.

"ನಿಮ್ಮನ್ನು ಈ ಹಿಂದೆ ಎಲ್ಲೋ ನೋಡಿದೀನಿ ಅಂತ ಅನ್ನಿಸ್ತಾ ಇದೆ. ನಿಮಗೂ ಹಾಗೇನಾದ್ರೂ ಅನ್ನಿಸುತ್ತಾ?" ಅವನು ಬೆಚ್ಚಿದ. ಅನುಮಾನ ಕಾಡಿತು.

"ಇಲ್ಲ......" ಅವನು ಗಡುಸಾಗಿ ನುಡಿದರೂ, ಅವಳನ್ನೇ ಮತ್ತೆ ಮತ್ತೆ ನೋಡಿದ. ಅವಳು ನಾಚಿದ್ದಳು, ಮುಖ ಕೆಂಪಾಗಿತ್ತು.

"ನೀವು ಈ ಸ್ಥಿತೀಲಿ ನಮ್ಮ ಮನೆಗೆ ಹೇಗೆ ಬಂದ್ರಿ? ಯಾರಾದ್ರೂ ನಿಮ್ಮನ್ನು ಇಲ್ಲಿಗೆ ಕರೆದು ತಂದು ಬಿಟ್ರಾ? ಹಾಗೇನಾದ್ರೂ ಇದ್ರೆ ಪೋಲೀಸ್ ಕಂಪ್ಲೇಂಟ್ ಕೊಡೋಣ."

"ಇಲ್ಲ, ಹಾಗೇನಿಲ್ಲ" ಅವಳು ಸುಳ್ಳು ಹೇಳುತ್ತಿರಬಹುದೆಂದುಕೊಂಡ. ಬಲವಂತ ಮಾಡಲಿಲ್ಲ.

"ನಾನು ಇವತ್ತೊಂದು ದಿನ ಇಲ್ಲಿ ಇರ್ಲಾ?" ಅವಳು ದೈನ್ಯತೆಯಿಂದ ಕೇಳಿಕೊಂಡಾಗ, ಅವನು ತಲೆಯಾಡಿಸಿದ.

"ಸರಿ, ನಾನು ನಿಮಗೆ ಸೀರೆ, ಬಟ್ಟೆಗಳನ್ನು ತಂದುಕೊಡ್ತೀನಿ. ನೀವು ಸ್ನಾನ ಮಾಡಿ ಸುಧಾರಿಸಿಕೊಳ್ಳಿ. ನಾನು ಹೋಗಿ ಬರುವುದು ಸ್ವಲ್ಪ ಹೊತ್ತಾಗುತ್ತೆ.

ನಿಮಗೇನಾದ್ರೂ ಬೇಕಿದ್ರೆ ರತ್ನಮ್ಮನ್ನ ಕೇಳಿ, ಕೊಡ್ತಾಳೆ." ಅವನು ಕಾರಿನ ಕೀಯನ್ನು ತೆಗೆದುಕೊಂಡು ಹೊರಟಾಗ, ಅವಳು ತನ್ನಲ್ಲೇ ಏನನ್ನೋ ಆಲೋಚಿಸತೊಡಗಿದಳು. 'ಮಧುವನ ಫಾರ್ಮ್‌ನ ಒಡೆಯ ಎಷ್ಟು ಒಳ್ಳೆಯವನು!'

೩

ಅವನು ತಂದುಕೊಟ್ಟ ಹೊಸ ಸೀರೆಯನ್ನು ಉಟ್ಟು ಬಿಸಿಲಲ್ಲಿ ತಲೆಗೂದಲನ್ನು ಒಣಗಿಸಿಕೊಳ್ಳುತ್ತಿದ್ದಳು. ಕಿಟಕಿಯ ಬಳಿ ನಿಂತು, ಅವಳಿಗೆ ತಿಳಿಯದಂತೆ ಅವಳನ್ನೇ ಅನೇಕ ಬಾರಿ ನೋಡಿದ್ದ ರಂಗನಾಥ. ಕಡೆಗೊಮ್ಮೆ ಅವನಿಗೆ ನೆನಪಾಗಿತ್ತು. ತನಗೆ ಈ ಹಿಂದೆ ನೋಡಿದ್ದ ಐದಾರು ಹೆಣ್ಣುಗಳ ಪೈಕಿ ಇವಳೂ ಒಬ್ಬಳು. ಅವನು, ಇವಳನ್ನು ಮೆಚ್ಚಿದ್ದ. ಇವಳ ಹೆಸರು ಉಷಾ. ಆದರೆ ಇವಳೇ ಅವನನ್ನು ಒಪ್ಪಿರಲಿಲ್ಲ.

'ಇವಳು ಈಗೇಕೆ ಇಲ್ಲಿಗೆ ಬಂದಿದಾಳೆ? ಅದೂ ಈ ರೀತಿ ವಿಚಿತ್ರ ಸನ್ನಿವೇಶದಲ್ಲಿ! ಒಂದು ರಾತ್ರಿ ತನ್ನ ಆತಿಥ್ಯವನ್ನು ಸ್ವೀಕರಿಸಿದ್ದಾಳೆ. ಇನ್ನೊಂದು ದಿನ ಇರುವುದಾಗಿಯೂ ಹೇಳಿದ್ದಾಳೆ ಯಾಕೆ?' ಉದ್ದೇಶ ಏನಿರಬಹುದು.

ರತ್ನಮ್ಮ ಬಿಸಿ ಬಿಸಿ ಉಪ್ಪಿಟ್ಟನ್ನು ತಂದಿಟ್ಟಳು. "ರತ್ನಮ್ಮ, ಅವರ ತಿಂಡಿ ಆಯ್ತಾ?"

'ಇಲ್ಲ' ಎನ್ನುವಂತೆ ತಲೆಯಾಡಿಸಿದಳು.

"ಅವರಿಗೂ ತಿಂಡಿ ತಂದಿಡು. ಹಾಗೇ ಒಳಕ್ಕೆ ಕರೆದು ಬಾ. ಬಿಸಿ ಬಿಸಿ ಕಾಫೀಯನ್ನು ತಂದುಕೊಡು." ರತ್ನಮ್ಮ ತಲೆಯಾಡಿಸಿ ನಡೆದಳು.

ಒಣಗಿದ್ದ ಕೂದಲನ್ನು ಎತ್ತಿ ಗಂಟು ಹಾಕಿ, ಒಳಗೆ ಬಂದಳು. ರಂಗನಾಥ ಮಂದಹಾಸ ಬೀರಿದ.

"ಬನ್ನಿ, ತಿಂಡಿ ತಗೊಳ್ಳಿ. ಬಿಸಿಯಾಗಿದೆ." ಅವಳು ಪ್ಲೇಟನ್ನೆತ್ತಿಕೊಂಡು ನಿಧಾನವಾಗಿ ತಿನ್ನ ತೊಡಗಿದಳು.

"ಏನು ನಡೀತು ಅಂತ ತಿಳಿಸಿದರೆ, ನಾನು ನನ್ನ ಕೈಲಾದ ಸಹಾಯ ಮಾಡ್ತೀನಿ. ನೀವು ಇಲ್ಲಿ ಹೆಚ್ಚು ದಿನ ಇರುವಂತಿಲ್ಲ. ಈ ಮನೆಯಲ್ಲಿ ನನ್ನ ಹೊರತು ಬೇರೆ ಯಾರಿಲ್ಲ." ಅವಳ ಕಡೆಯೇ ನೋಡುತ್ತಾ ನುಡಿದ. ಅವಳು ನಸು ನಕ್ಕಳು.

"ನಿಮ್ಮ ಮಿಸೆಸ್ ತವರು ಮನೆಗೆ ಹೋಗಿದಾರಾ?"

"ಇಲ್ಲ.....ಇಲ್ಲಿ......ನಾನು ಒಂಟಿಯಾಗಿ ಇದೀನಿ. ಕೆಂಪಯ್ಯ, ರತ್ನಮ್ಮ ಅಲ್ಲಿದಾರೆ...... ಆ ಮನೆಯಲ್ಲಿ."

"ರತ್ನಮ್ಮನ ಮಗು ತುಂಬಾ ಮುದ್ದಾಗಿದೆ." ರಂಗನಾಥ ವಿಸ್ಮಯದಿಂದ ಅವಳನ್ನೇ

ನೋಡಿದ.

"ಮಗು ತುಂಬಾ ಮುದ್ದಾಗಿದೆ ಅಂತಂದೆ ಅಷ್ಟೇ......ಹೆಸರೇನೋ ತಿಳಿಯಲಿಲ್ಲ."

"ನಂಗೂ ಗೊತ್ತಿಲ್ಲ. ನಾನು ಕೇಳಿಲ್ಲ. ನೀವು, ನಿಮ್ಮ ವಿಷಯವನ್ನು ಹೇಳಲೇ ಇಲ್ಲ! ನಿಮಗೆ, ನಿಮ್ಮದೇ ಆದ ಸಂಸಾರ ಇದೆ ಅಂತ ಅಂದುಕೊಂಡಿದೀನಿ."

"ಇಲ್ಲ. ನನಗೆ ಯಾವ ಸಂಸಾರವೂ ಇಲ್ಲ. ನಾನೂ ಒಂಟಿಯಾಗಿದೀನಿ." ಅವಳು ಸುಳ್ಳು ಹೇಳುತ್ತಿದ್ದಾಳೆಂದುಕೊಂಡ. ಅವಳ ತಟ್ಟೆ ಖಾಲಿಯಾಗಿತ್ತು.

"ರತ್ನಮ್ಮ, ಇವರಿಗೆ ಇನ್ನೂ ಸ್ವಲ್ಪ ಉಪ್ಪಿಟ್ಟನ್ನು ತಂದು ಹಾಕು."

ಅವಳು ಕೈ ಅಡ್ಡ ಹಿಡಿದಳು.

"ಹಾಕಿಸ್ಕೊಳ್ಳಿ ಉಷಾ, ಸಂಕೋಚ ಯಾಕೆ?" ಅಂತಂದು ನಾಲಿಗೆಯನ್ನು ಕಚ್ಚಿಕೊಂಡ.

ಅವಳು ಹುಬ್ಬೇರಿಸಿದಳು.

"ನನ್ನ ಹೆಸರು ಉಷಾ ಅಂತ ನಿಮಗೆ ಹೇಗೆ ಗೊತ್ತಾಯ್ತು?"

"ನೀವೇ ಹೇಳಿದ್ರಲ್ಲ.... ಅಲ್ಲ, ರತ್ನಮ್ಮ ಹೇಳಿದ್ಲು."

"ನಾನು ಯಾರಿಗೂ ಇದುವರೆಗೂ ನನ್ನ ಹೆಸರನ್ನು ಹೇಳಿಲ್ಲ. ನಿಮಗೆ ನನ್ನ ಪರಿಚಯ ಇದೆ. ನನಗೂ ನೀವ್ಯಾರು ಅಂತ ಗೊತ್ತು. ಆದರೆ ನೀವು ಇಲ್ಲಿ, ಈ ಮನೇಲಿ ಇದೀರಿ ಅಂತ ಖಂಡಿತಾ ಗೊತ್ತಿರಲಿಲ್ಲ. ಗೊತ್ತಿದ್ದಿದ್ರೆ, ಖಂಡಿತಾ ಇಲ್ಲಿ ಬಂದು ಅಡಗಿ ಕೂತಿರ್ತಿರ್ಲಿಲ್ಲ." ಪರಿತಾಪ ಪಟ್ಟವಳಂತೆ ಹೇಳಿದಳು.

"ಅಂದ್ಹಾಗೇ ಯಾಕೆ ಅಡಗಿ ಕೂತಿದ್ರಿ ಅಂತ ಹೇಳಲೇ ಇಲ್ಲ ನೀವು! ಯಾರಾದ್ರೂ ಹೆದರಿಸಿದ್ರಾ.....? ಅಟ್ಟಿಸಿಸ್ಕೊಂಡು ಬಂದ್ರಾ?" ತಕ್ಷಣವೇ ಕೇಳಿದ.

"ಇಲ್ಲ, ಹಾಗೇನೂ ಇಲ್ಲ ಅಂತ ಆಗ್ಲೇ ಹೇಳಿದ್ನಲ್ಲ. ನಿಮಗೆ ಮದುವೆ ಆಗಿತ್ತಲ್ಲ. ಒಬ್ಬಳು ಮಗಳೂ ಇರಬೇಕು. ಎಲ್ಲಿ ಅವರೆಲ್ಲ.....ಊರಿಗೆ ಹೋಗಿದಾರಾ?"

"ಇಲ್ಲ. ಇಲ್ಲಿ ನನ್ನ ಜೊತೆ ಯಾರೂ ಇಲ್ಲ. ಆ ವಿಷಯ ಬೇಡ.....ನೀವು ರೆಡಿಯಾಗಿದ್ರೆ, ನಿಮ್ಮನ್ನು ನಿಮ್ಮ ಮನೆಗೆ ಬಿಟ್ಟು ಬರ್ತೀನಿ."

"ನಾನು ರೆಡಿಯಾಗಿಯೇ ಇದೀನಿ. ನನ್ನಿಂದ ನಿಮಗೆ ಈಗಾಗ್ಲೇ ಸಾಕಷ್ಟು ತೊಂದರೆ ಆಗಿದೆ. ಬಸ್‌ನಲ್ಲಿ ಹೋಗ್ತೀನಿ. ಪರವಾಗಿಲ್ಲ. ಆದರೆ ಬಸ್ ಟಿಕೆಟ್‌ಗೂ ನನ್ಹತ್ರ ಹಣ ಇಲ್ಲ. ಪರ್ಸು ಎಲ್ಲಿ ಹೋಯಿತೋ! ಮನೆಯ ಬೀಗದ ಕೈ ಕಳೆದು ಹೋಗಿದ್ದಿದ್ರೆ ನಾನು ಏನು ಮಾಡುತ್ತಿದ್ದೆನೋ....." ಇದ್ದಕ್ಕಿದ್ದಂತೆ ಅವಳ ಧ್ವನಿ ಕುಗ್ಗಿತು. ಮುಖ ಕಪ್ಪಿಟ್ಟಿತ್ತು.

"ಮನೆಗೆ ಬೀಗ ಹಾಕ್ಕೊಂಡು ಬಂದಿದ್ರಾ? ನಿಮ್ಮ ಮನೇಲಿ ಬೇರೆ ಯಾರೂ ಇಲ್ವಾ?"

"ಇಲ್ಲ, ಯಾರೂ ಇಲ್ಲ. ಪಕ್ಕದ ಮನೆಯವರ ಹತ್ರ ಬೀಗದ ಕೈ ಕೊಟ್ಟು ಬಂದಿದ್ದೆ." ಅವಳು ತಲೆ ತಗ್ಗಿಸಿ ನುಡಿದಾಗ, ಅವನಿಗೆ ಕನಿಕರವಾಯಿತು.

"ಸಾರಿ ಉಷಾರವರೇ, ನೀವು ಏನೋ ತೊಂದರೆಯಲ್ಲಿದ್ದೀರಿ ಅಂತ ಅನ್ನಿಸುತ್ತೆ. ಏನಾದ್ರೂ ಬೇಕಾಗಿದ್ರೆ ಕೇಳಿ, ಆದ್ರೆ ಸಹಾಯ ಮಾಡ್ತೀನಿ."

"ನಾನು ಇಲ್ಲಿ ಇನ್ನೊಂದೆರಡು ದಿನ ಇದ್ರೆ ನಿಮಗೆ ತೊಂದರೆ ಆಗುತ್ತಾ?"

ಅವನು ಬೆಚ್ಚಿದ. ಮುಖದಲ್ಲಿ ವಿಚಿತ್ರ ನಗು ಮೂಡಿತು. "ನನಗೊಬ್ಬನಿಗೇ ಅಲ್ಲ. ನಿಮಗೂ ತೊಂದರೆ ಆಗುತ್ತೆ. ಇಲ್ಲಿ ನಾನು ಒಬ್ಬನೇ ಇದೀನಿ; ಅಲ್ಲದೇ ನೀವು ನನಗೆ ಸಂಬಂಧಿ ಅಲ್ಲ."

"ನಾನು ಹೆಂಗಸು ಅಂತ ಹೆದರ್ತಿದ್ದೀರಿ. ಸಂಬಂಧಿ ಅಲ್ಲದಿದ್ದರೇನಾಯ್ತು. ಪರಿಚಯವಿದೆಯಲ್ಲ. ಸ್ನೇಹಿತೆ ಅಂತ ತಿಳ್ಕೊಳ್ಳಿ."

ಅವನು ಗೊಳ್ಳನೆ ನಕ್ಕ.

"ಅದು ಅಷ್ಟು ಸುಲಭವಲ್ಲ. ಕೇಳಿದವರಿಗೆ ಉತ್ತರ ಕೊಡಬೇಕಾಗುತ್ತೆ. ಇಲ್ಲಿ ಎಷ್ಟು ವರ್ಷಗಳಿಂದ ನಾನೊಬ್ಬನೇ ಇದೀನಿ. ಯಾಕೆ.....ಏನು.....ಎತ್ತ......ಅಂತ ಅದನ್ನೆಲ್ಲ ನಾನು ನಿಮಗೆ ಹೇಳಬೇಕಾಗಿಲ್ಲ. ಪ್ಲೀಸ್, ನೀವು ಹೊರಟರೆ ನನಗೆ ಸಹಾಯ ಮಾಡಿದಂತಾಗುತ್ತೆ."

"ಮತ್ತೆ......ನೀವು ನನಗೆ ಸಹಾಯ ಮಾಡ್ತೀನಿ ಅಂದ್ರಲ್ಲ. ಹೆದರಿಬಿಟ್ರಾ? ಹೋಗಲಿ ಬಿಡಿ, ನನಗೆ ಒಂದೈವತ್ತು ರೂಪಾಯಿಗಳನ್ನು ಸಾಲ ಅಂತ ಕೊಟ್ಟಿರಿ. ನಾನು ವಾಪಸ್ಸು ಕೊಡ್ತೀನಿ. ಹಾಗೇ ಈ ಸೀರೇನೂ......"

ಜೇಬಿನಿಂದ ನೋಟುಗಳನ್ನು ತೆಗೆದು ಕೊಡಲು ಹೊರಟವನು, ಇದ್ದಕ್ಕಿದ್ದಂತೆ ಮನಸ್ಸು ಬದಲಾಯಿಸಿದ.

"ಒಂದು ರಾತ್ರಿ ನೀವು ನನ್ನ ಅತಿಥಿಯಾಗಿದ್ರಿ. ಇಲ್ಲಿಂದ ಪದ್ಮನಾಭನಗರ ಬಹಳ ದೂರದಲ್ಲಿದೆ. ನಾನು, ನಿಮ್ಮನ್ನು ಕಾರಿನಲ್ಲಿ ಬಿಟ್ಟು ಬರ್ತೀನಿ. ನಾನು ಅಷ್ಟು ಸಹಾಯ ಮಾಡಬಲ್ಲೆ."

"ಇಲ್ಲಿ ಸಮೀಪದಲ್ಲಿ ಜಲರುಹ ಆಶ್ರಮ ಅಂತ ಇದೆಯಲ್ಲ. ಅಲ್ಲಿಗೆ ಹೋಗಬೇಕಾಗಿತ್ತು. ನಾನು ಅಲ್ಲಿಗೆ ಹೋಗಿ ಸ್ವಾಮೀಜಿಯನ್ನು ನೋಡಿಕೊಂಡು ಹೋಗ್ತೀನಿ, ಪರವಾಗಿಲ್ಲ."

"ಜಲರುಹ ಸ್ವಾಮಿಯ ಆಶ್ರಮ ಇಲ್ಲಿಗೆ ಸಮೀಪದಲ್ಲಿಲ್ಲ. ಇನ್ನು ಎರಡು ಕಿಲೋಮೀಟರ್‌ನಷ್ಟು ದೂರ ಹೋಗ್ಬೇಕು. ನಾನೇ ಕರ್ಕೊಂಡು ಹೋಗಿ ಬಿಡ್ತೀನಿ, ಬನ್ನಿ..."

ಇಬ್ಬರೂ ಮನೆಯಿಂದ ಹೊರಬಿದ್ದರು.

೪

"ಸ್ವಾಮೀಜಿ ಇವತ್ತು ದರ್ಶನ ಕೊಡುವುದಿಲ್ಲ. ನಾಳೆ ಬನ್ನಿ." ಅಲ್ಲಿಯ ಶಿಷ್ಯರೊಬ್ಬರು ತಿಳಿಸಿದಾಗ, ಉಷಾ ಪೆಚ್ಚಾದಳು.

"ಹಾಗಾದ್ರೆ ನಾವು ನಾಳೆ ಬರ್ತೀವಿ." ರಂಗನಾಥ ನುಡಿದಾಗ, ಉಷಾ ಮೌನವಾಗಿ ಅವನನ್ನೇ ನೋಡಿದಳು. ಮತ್ತೆ ಕಾರಿನಲ್ಲಿ ಕುಳಿತರು. ಅವಳು ಅಳುತ್ತಿರಬಹುದೆಂದೆನಿಸಿತ್ತು. ಆಶ್ರಮದಿಂದ ಹೊರಬಂದ ನಂತರ, ರಸ್ತೆ ಬದಿಯಲ್ಲಿ ಕಾರನ್ನು ನಿಲ್ಲಿಸಿದ.

"ಇಷ್ಟಕ್ಕೆಲ್ಲಾ ಅಪ್ಸೆಟ್ ಆಗ್ತಾರಾ? ನಾಳೆ ಬಂದ್ರಾಯ್ತು ಬಿಡಿ." ಸಮಾಧಾನಗೊಳಿಸುವವನಂತೆ ನುಡಿದ.

"ಬೇಜಾರಾಗ್ದೇ ಇರುತ್ತಾ! ನನ್ನ ಅದೃಷ್ಟವೇ ಚೆನ್ನಾಗಿಲ್ಲ. ಸಮಸ್ಯೆಗೆ ಪರಿಹಾರ ಕೇಳೋಕ್ಕೆ ಅಂತ ಬಂದರೆ......ಹೀಗಾಯ್ತಲ್ಲ, ಬೇಜಾರಾಗಲ್ವಾ? ನಾನು ಮತ್ತೆ ಮತ್ತೆ ಇಷ್ಟು ದೂರ ಬರೋಕ್ಕಾಗಲ್ಲ."

"ನಾಳೆ ನಾನೇ ನಿಮ್ಮನ್ನು ಮತ್ತೆ ಕರ್ಕೊಂಡು ಬರ್ತೀನಿ. ಸರೀನಾ?"

"ಏನೂ ಬೇಡ. ನನ್ನಿಂದ ನೀವು ತೊಂದರೆಗೆ ಸಿಕ್ಕಿ ಹಾಕಿಕೊಳ್ತೀರಿ ಅಷ್ಟೇ. ನಿಮ್ಮ ಪಾಡಿಗೆ ನೀವು ಹಾಯಾಗಿದೀರಿ."

ಅವನು ಕೊಂಕು ನಗೆ ನಕ್ಕ.

"ನಾನು ಹಾಯಾಗಿದ್ದೀನಿ, ಹಾಗೇ ಅಂದ್ಕೊಳ್ಳಿ. ಆದರೆ, ನನಗೂ ಸಮಸ್ಯೆಗಳಿವೆ. ಆದರೆ ಅದಕ್ಕೆ ಪರಿಹಾರ ಹುಡುಕ್ಕೊಂಡು ನಾನು ಆಶ್ರಮ, ಸ್ವಾಮೀಜಿ ಅಂತ ಹೋಗೋಲ್ಲ; ಅದು ಮಾತ್ರ ನಿಜ."

"ನೀವು ಗಂಡಸು. ಹೆಂಗಸರಿಗೆ ಸಮಸ್ಯೆ ಜಾಸ್ತಿ, ಕಷ್ಟಗಳೂ ಜಾಸ್ತಿ."

"ಗಂಡಸರಿಗೆ ಸಮಸ್ಯೆಗಳಿಲ್ಲ ಅಂತ ಅಂದ್ಕೊಬೇಡಿ.....ಆದರೆ ನನಗೆ ಇಂಥ ಸ್ವಾಮೀಜಿಗಳಲ್ಲಿ ನಂಬಿಕೆ ಇಲ್ಲ."

"ಒಂದು ವೇಳೆ ನಿಮ್ಮ ಮಿಸೆಸ್‌ಗೆ ನಂಬಿಕೆ ಇದ್ದರೆ.....?"

"ಅವಳ ವಿಷಯ ಈಗ ಯಾಕೆ?" ಅವನು ಗಡುಸಾಗಿ ನುಡಿದು, ಕಾರನ್ನು ಸ್ಟಾರ್ಟ್ ಮಾಡಿದ.

"ಸಾರಿ, ನಿಮಗೆ ಬೇಸರವಾಯಿತು. ನಾನು ಹಾಗೇ, ನನ್ನಿಂದ ಎಲ್ಲರಿಗೂ ಬೇಸರವೇ....." ಅವಳು ಕಾರಿನ ಬಾಗಿಲನ್ನು ತೆಗೆದು, ಇಳಿಯಲು ನೋಡಿದಳು. ಅಷ್ಟರಲ್ಲಿ ಕಾರು ಚಲಿಸಿದ್ದರಿಂದ, ಆಯತಪ್ಪಿ ಬಿದ್ದುಬಿಟ್ಟಳು. ಅವನು ಸರ್ರನೆ ಬ್ರೇಕ್ ಹಾಕಿ ನಿಲ್ಲಿಸಿದ.

"ಅರೆ, ಏನ್ಮಾಡ್ತಿದೀರ ನೀವು! ಮೂವ್ ಆಗ್ತಿರೋ ಕಾರ್ನಿಂದ ಇಳಿಯೋಕೆ ನೋಡ್ತೀರಲ್ಲ.....ನಿಮಗೇನಾದ್ರೂ ಆಗಿದ್ದಿದ್ರೆ?" ಅವನು, ಅವಳ ತೋಳನ್ನು ಹಿಡಿದು ಎಳೆದು ಸರಿಯಾಗಿ ಕೂರಿಸಿದ. ಅವಳು ಕೆಂಪಾಗಿದ್ದಳು. ಅವನು, ಅವಳನ್ನೇ ದಿಟ್ಟಿಸಿ ನೋಡಿದ. ಅವನ ಮೈ ಬಿಸಿಯಾಗಿತ್ತು.

"ಸಾರಿ...... ಸಾರಿ ಪ್ಲೀಸ್. ಅಲುಗಾಡದೇ ಕೂತ್ಕೊಳ್ಳಿ."

ಕಾರು ಸೀದಾ ಮತ್ತೆ ಫಾರ್ಮ್ ಹೌಸ್ ಬಳಿಗೆ ಬಂತು. ಕಾರು ನಿಂತರೂ, ಅವಳು ಹಾಗೇ ಕುಳಿತಿದ್ದಳು. ಅವನು ಕರೆದರೂ ಉತ್ತರಿಸದಿದ್ದಾಗ, ಅವನು ಮೈ ಮುಟ್ಟಿ ಎಚ್ಚರಿಸಿದ. ಆಗ ಅವಳು ಬೆಚ್ಚಿದಳು.

"ಏನಾಯ್ತು.....ನಿದ್ದೆ ಮಾಡ್ತಿದ್ರಾ?" ನಗಿಸಲು ನೋಡಿದ.

"ಇಲ್ಲ, ನನ್ನನ್ನು ಬಸ್ ಸ್ಟಾಪ್ ಬಳಿ ಬಿಟ್ಟು ಬಿಡಿ. ನಾನು ಹೋಗ್ತೀನಿ."

"ಕಾಲಿಗೆ ಚಪ್ಪಲಿ ಇಲ್ಲ, ಮೈ ಮೇಲೆ ಒಳ್ಳೆ ಸೀರೆ ಇಲ್ಲ. ನಿಮ್ಮ ಅಕ್ಕಪಕ್ಕದ ಮನೆಯವರು ಏನಂದು ಕೊಳ್ತಾರೆ? ಸುಮ್ಮನೇ ಇಳಿದು, ಒಳಗೆ ಬನ್ನಿ. ನಾಳೆ ಹೋಗೋರಂತೆ." ಅವನು ಗದರುವ ಧ್ವನಿಯಲ್ಲಿ ನುಡಿದಾಗ, ಅವಳು ಮೆತ್ತಗಾದಳು.

ಕೆಲಸದ ರತ್ನಮ್ಮ, ತನ್ನ ಅತ್ತೆಯ ಕಡೆ ನೋಡಿ ಕಿಸಕ್ಕನೆ ನಕ್ಕಂತೆ ಅನ್ನಿಸಿತು. ಅನುಮಾನಿಸುತ್ತಾ ಕೆಳಗಿಳಿದು, ಮನೆಯೊಳಗೆ ನಡೆದಳು. ಅವಳು ಒಳಗೆ ಹೋದ ನಂತರ ಅವನು ಕಾರನ್ನು ಮತ್ತೆ ರಸ್ತೆಗೆ ಓಡಿಸಿದ.

* * *

ಅವನು ಮತ್ತೆ ವಾಪಸ್ ಬಂದಾಗ, ಅವನು ಅವಳಿಗಾಗಿ ಮತ್ತೆ ಇನ್ನೊಂದು ಸೀರೆಯನ್ನು ಒಂದು ಜೊತೆ ಚಪ್ಪಲಿಯನ್ನು ಕೊಂಡು ತಂದಿದ್ದ. ಅವಳ ಕೈಗೆ ಕೈ ಚೀಲಗಳನ್ನು ಕೊಟ್ಟು ನುಡಿದ.

"ಇದು, ನನ್ನ ಸೆಲೆಕ್ಷನ್, ನಿಮಗೆ ಹಿಡಿಸುತ್ತೋ ಇಲ್ಲವೋ?"

"ಯಾಕೆ ಹಾಗಂತೀರಿ? ಅಲ್ಲದೆ ಇದೆಲ್ಲ ಬೇಕಿರಲಿಲ್ಲ. ಆದರೂ ನಿಮಗೆ ಥ್ಯಾಂಕ್ಸ್. ನನಗೋಸ್ಕರ ತೊಂದರೆ ತಗೊಂಡ್ರೀ."

"ಇರಲಿ, ಈಗ ಊಟಕ್ಕೆ ಏನಿದೆ ಅಂತ ನೋಡೋಣ." ಅವನು ಅಡಿಗೆಮನೆಯ ಕಡೆಗೆ ನಡೆದಾಗ, ಅವಳೂ ಹಿಂಬಾಲಿಸಿದಳು. ರತ್ನಮ್ಮ ಮಾಡಿಟ್ಟಿದ್ದ ಅಡಿಗೆ ಪಾತ್ರೆಯ ಮುಚ್ಚಳಗಳನ್ನು ತೆರೆದು ನೋಡಿದ.

"ಬನ್ನಿ, ಏನಿದೆಯೋ ಅದನ್ನು ಇಬ್ಬರೂ ಹಂಚಿಕೊಂಡು ತಿನ್ನೋಣ."

ಉಷಾ ಸಂಕೋಚದಿಂದ ಡೈನಿಂಗ್ ಕುರ್ಚಿಯ ಮೇಲೆ ಕುಳಿತಳು. ಅವನೇ ಎರಡು ತಟ್ಟೆಗಳನ್ನಿಟ್ಟು ಬಡಿಸಿದ. ರತ್ನಮ್ಮ ಬಂದು ಇಣುಕಿ ನೋಡಿದಳು.

"ಸಾಕಾಗುತ್ತೋ ಇಲ್ವೋ..... ಮತ್ತೆ ಅನ್ನಕ್ಕೆ ಇಡ್ಲಾ?"

"ಏನೂ ಬೇಡ, ನೀನು ಹೋಗು." ಅವನು, ಅವಳನ್ನು ಕಳಿಸಿದ.

ಅನ್ನ, ಚಪಾತಿ, ಸಾರು, ಪಲ್ಯಗಳನ್ನು ಬಡಿಸಿದ. ಅವಳು ಮೌನವಾಗಿ ಊಟ ಮಾಡಿದಳು. ಇಬ್ಬರ ಊಟವೂ ಮುಗಿದಿತ್ತು.

"ನೀವು ಸ್ವಲ್ಪ ಹೊತ್ತು ಮಲಗಿ, ರೆಸ್ಟ್ ತಗೊಳ್ಳಿ. ನಾನು ತೋಟದ ಕಡೆ ಹೋಗಿ ಬರ್ತೀನಿ. ಬೆಳಗ್ನಿಂದ ಹೋಗೇ ಇಲ್ಲ."

"ನಾನೂ ಬರ್ಲಾ?"

"ಆಸಕ್ತಿ ಇದ್ದರೆ ಬನ್ನಿ." ಅವಳು ಹೊಸ ಚಪ್ಪಲಿಯನ್ನು ಮೆಟ್ಟಿ, ಆತನೊಡನೆ ಹೆಜ್ಜೆ ಹಾಕಿದಳು. ಅವನು ತೋಟದಲ್ಲಿ ಬಿಡುವ ತರಕಾರಿಗಳ ಬಗ್ಗೆ, ಮರದಲ್ಲಿ ಬಿಡುವ ಹಣ್ಣುಗಳ ಬಗ್ಗೆ ಹೇಳುತ್ತಾ ನಡೆದ. ಕೆಲಸಗಾರರು ಕೆಲಸದಲ್ಲಿ ನಿರತರಾಗಿದ್ದರು. ಪಂಪ್ ಹೌಸ್ ಬಳಿ ಇದ್ದ ಕಲ್ಲುಬೆಂಚಿನ ಮೇಲೆ ಇಬ್ಬರೂ ಕುಳಿತರು. ಕೆಲಸದ ಆಳು ಇಬ್ಬರಿಗೂ ಎಳನೀರನ್ನು ತಂದುಕೊಟ್ಟ. ಅವನು ಗಟಗಟನೆ ಕುಡಿದ. ಅವಳು ಸೀರೆಯ ಮೇಲೆ ಚೆಲ್ಲಿಕೊಂಡು ನಕ್ಕಳು. ಅವಳ ನಗುಮುಖವನ್ನೇ ಮೆಚ್ಚುಗೆಯಿಂದ ನೋಡಿದ. ಆದರೆ ಕೇಳಬೇಕೆಂದು ಕೊಂಡ ಪ್ರಶ್ನೆ ಗಂಟಲಲ್ಲೇ ಉಳಿಯಿತು. ಕತ್ತಲಾಗುವವರೆಗೂ ಅಲ್ಲಿಯೇ ಕುಳಿತಿದ್ದು, ನಂತರ ಮನೆಯ ಕಡೆಗೆ ಹೊರಟರು.

೫

ಅವಳು, ಪುಸ್ತಕದ ಬೀರುವಿನಲ್ಲಿ ಸಾಲಾಗಿ ಜೋಡಿಸಲ್ಪಟ್ಟಿದ್ದ ಪುಸ್ತಕಗಳ ಕಡೆಗೆ ನೋಟ ಹರಿಸಿದಳು. ರಾಮಾಯಣ, ಮಹಾಭಾರತ, ಸಣ್ಣಕತೆಗಳು, ಕಾದಂಬರಿಗಳು ಎಲ್ಲವೂ ಇದ್ದವು.

"ಯಾವ್ದಾದ್ರೂ ಪುಸ್ತಕ ಓದ್ತೀರಾ?" ಅವನು ಹಿಂದೆ ನಿಂತು ಕೇಳಿದ. ಅವಳು ಬೆಚ್ಚಿ, ಹಿಂತಿರುಗಿ ನೋಡಿದಳು. ಸಮೀಪದಲ್ಲಿ ನಿಂತಿದ್ದವನ ಬಿಸಿ ಉಸಿರು ಅವಳನ್ನು ತಾಕಿತು.

'ಇಲ್ಲ' ಎನ್ನುವಂತೆ ತಲೆಯಾಡಿಸಿದಳು.

"ಟಿ.ವಿ. ನೋಡ್ತೀರಾ?" ಅವನು ಮತ್ತೆ ಪ್ರಶ್ನಿಸಿದ.

"ಬೇಡ" ಎಂದಳು.

"ರಾತ್ರಿಯ ಊಟಕ್ಕೆ ಇನ್ನೂ ಸಾಕಷ್ಟು ಸಮಯವಿದೆ. ರತ್ನಮ್ಮ ಬಂದು ಅಡುಗೆ ಮಾಡ್ಬೇಕು."

"ನಾನು ಅಡುಗೆ ಮಾಡ್ಲಾ?"

"ಬೇಡ, ಬೇಡ. ನೀವು ನನ್ನ ಅತಿಥಿ."

ಅಷ್ಟರಲ್ಲಿ ರತ್ನಮ್ಮ ಬಂದಳು. ಅವಳ ಕಂಕುಳಲ್ಲಿ ಅವಳ ಮಗು ಇತ್ತು. ಉಷಾ, ಅವಳೆಡೆಗೆ ಕೈ ಚಾಚಿದಳು.

"ಮಗೂನ ಇಲ್ಲಿ ಕೊಡು. ನಾನು ಆಡಿಸ್ತೀನಿ." ಅವಳು ಕರೆದೊಡನೆ ಮಗು, ಅವಳ ಕೈಗೆ ಬಂತು. ಅವಳು ಮಗವನ್ನು ಮುದ್ದಿಸುತ್ತಾ, ಅವನೆಡೆ ನೋಡಿದಳು.

ಅವನು ಮಂದಹಾಸ ಬೀರಿದ.

"ಮಗು ಹೆಸರೇನು ರತ್ನಮ್ಮಾ?"

"ಕೃಷ್ಣಾ ಅಂತ."

"ಎಷ್ಟು ಮುದ್ದಾಗಿದ್ದಾನೆ ಅಲ್ವಾ?"

"ಹೌದು. ನಾನೆಂದೂ ಸರಿಯಾಗಿ ನೋಡಿಯೂ ಇಲ್ಲ. ಎತ್ತಿ ಆಡಿಸಿಯೂ ಇಲ್ಲ."

"ಯಾಕೆ ಹಾಗೆ?"

"ಏನೋ ಗೊತ್ತಿಲ್ಲ....."

"ನಾನು ಕೇಳಿದರೆ, ರತ್ನಮ್ಮ ಈ ಮಗೂನ ನಂಗೆ ಕೊಡ್ತಾಳಾ?" ಉಷಾ, ಅವನ ಮಗ್ಗುಲಲ್ಲಿ ನಿಂತು ಪಿಸುದನಿಯಲ್ಲಿ ಕೇಳಿದಾಗ, ಅವನು 'ಗೊಳ್' ಅಂತ ನಕ್ಕ.

"ಯಾವುದೇ ತಾಯಿ, ತನ್ನ ಮಗುವನ್ನು ಇನ್ನೊಬ್ಬರಿಗೆ ಕೊಡಲ್ಲ." ಹಾಗೆ ಹೇಳಿದವನು, ಸರ್ರನೆ ಮುಖವನ್ನು ಅತ್ತ ತಿರುಗಿಸಿದ.

ಅವಳು ಅಡಿಗೆ ಮನೆಯ ಕಡೆಗೆ ನಡೆದಳು. ಅವನು ಕಿಟಕಿಯಿಂದಾಚೆ ಕಾಣುತ್ತಿದ್ದ ಮೋಡಗಳನ್ನು ನೋಡತೊಡಗಿದ. ರತ್ನಮ್ಮ ಅಡಿಗೆ ಕೆಲಸ ಮುಗಿಸಿ, ಹೊರಟು ಹೋಗಿದ್ದಳು. ಉಷಾ ಬಚ್ಚಲು ಮನೆಗೆ ಹೋಗಿ, ಬಾಗಿಲನ್ನು ಹಾಕಿಕೊಂಡಳು. ಅವಳು ಎಷ್ಟು ಹೊತ್ತಾದರೂ ಹೊರಗೆ ಬರದಿದ್ದಾಗ, ಅವನು ಗಾಬರಿಗೊಂಡ. ಮೆಲ್ಲನೆ ಬೆರಳಿನಿಂದ ಬಾಗಿಲನ್ನು ಬಡಿದು. "ಉಷಾ....." ಅಂತ ಕರೆದ. ಅವಳು ಸ್ವಲ್ಪವೇ ಬಾಗಿಲನ್ನು ತೆರೆದು ಇಣುಕಿ, "ಏನು?" ಎಂದಳು.

"ಏನ್ಮಾಡ್ತಿದೀರಿ? ಊಟ ಮಾಡೋಣ ಬನ್ನಿ."

"ಈಗ ಬಂದೆ" ಎಂದು ಹೇಳಿ, ಅವಳು ಮತ್ತೆ ಬಾಗಿಲನ್ನು ಹಾಕಿಕೊಂಡಳು.

ಊಟಕ್ಕೆ ಕುಳಿತಿದ್ದಾಗ, ಅವಳು ನಡುಗುತ್ತಿದ್ದಾಳೆನ್ನುವುದು ಅವನ ಗಮನಕ್ಕೆ

ಬಂತು, "ಯಾಕೆ ಉಷಾ, ನಡುಗುತ್ತಿದ್ದೀರಲ್ಲ.....ಹುಷಾರಿಲ್ಲವೇ ಅಥವಾ ಚಳಿ ಆಗ್ತಿದೆಯಾ?"

"ಹೌದು, ಸ್ವಲ್ಪ ಚಳಿ ಆಗ್ತಿದೆ."

"ಹಾಗಾದ್ರೆ ಫ್ಯಾನನ್ನು ಆರಿಸಿ ಬಿಡ್ತೀನಿ." ಅವನು ಎದ್ದ.

ಅವಳು ತಡೆದಳು.

"ಬೇಡ, ಫ್ಯಾನು ಇರಲಿ....." ಅವನು, ಅವಳನ್ನೇ ವಿಚಿತ್ರವಾಗಿ ನೋಡಿದ. ಅವಳು ಬಿಸಿ ಬಿಸಿ ಅನ್ನವನ್ನು ಬೇಗ ಬೇಗ ಕಲೆಸಿ ತಿನ್ನಲಾರಂಭಿಸಿದಳು.

* * *

ರತ್ನಮ್ಮ ಹಾಸಿಗೆ ಮತ್ತು ದಿಂಬುಗಳೊಂದಿಗೆ ಮಲಗಲೆಂದು ಬಂದಾಗ, ಉಷಾ ನಿರಾಕರಿಸಿದಳು.

"ನಿನ್ನ ಮಗು ಅಳಲ್ವಾ ರತ್ನಮ್ಮ? ಬೇಕಾದ್ರೆ ನೀನು ಮನೇಲೇ ಮಲಕ್ಕೋ, ನಾನು ಇಲ್ಲೇ ಒಬ್ಬಳೇ ಮಲಗ್ತೀನಿ."

"ಸರಿ ಹಾಗಾದ್ರೆ, ಸಾರ್‌ಗೆ ಹೇಳಿ ಬಿಡ್ತೀನಿ." ಅವಳು ಒಳಗೆ ಹೋಗಿ ಅವನಿಗೆ ಏನು ಹೇಳಿದಳೋ, ಅವನು ಏನಂದನೋ, ರತ್ನಮ್ಮ ತನ್ನ ಮನೆಗೆ ಹೊರಟು ಹೋಗಿದ್ದಳು. ಉಷಾ ಮಲಗುವ ಸಿದ್ಧತೆಯಲ್ಲಿದ್ದಾಗ ಅವನು ನುಡಿದ,

"ನೀವು ಒಳಗಿನ ರೂಮ್ನಲ್ಲಿ ಮಲಕ್ಕೊಳ್ಳಿ, ನಾನು ಇಲ್ಲ ಸೋಫಾ ಮೇಲೆ ಮಲಗ್ತೀನಿ."

"ಪರವಾಗಿಲ್ಲ, ನಾನು ಇಲ್ಲೇ ಮಲಗ್ತೀನಿ."

"ಪ್ಲೀಸ್, ಹೇಳಿದಷ್ಟನ್ನು ಕೇಳಿ. ಚಳಿಗೆ ನಡುಗ್ತಿದೀರಿ. ರೂಮ್ನಲ್ಲಿ ರೂಂ ಹೀಟರ್ ಇದೆ." ಅವಳು ಮತ್ತೆ ಮಾತಾಡಲಿಲ್ಲ.

ರೂಮಿನೊಳಕ್ಕೆ ಹೋಗಿ, ಬಾಗಿಲನ್ನು ಭದ್ರಪಡಿಸಿಕೊಂಡಳು. ಅವನು ಮನದಲ್ಲೇ ನಕ್ಕು, ಸೋಫಾದ ಮೇಲೆ ಉರುಳಿಕೊಂಡ. ಕೈಯಲ್ಲಿ ನೆಪಮಾತ್ರಕ್ಕೆ ಒಂದು ಪುಸ್ತಕ. ಎಷ್ಟು ಹೊತ್ತಾದ್ರೂ ನಿದ್ರೆ ಹತ್ತಿರ ಸುಳಿದಿರಲಿಲ್ಲ. ಏನೋ ನೆನಪುಗಳು. ಒಂದು ಹೊತ್ನಲ್ಲಿ ಅವಳು ಕಿಟಾರನೆ ಕಿರುಚಿಕೊಂಡಾಗ, ಅವನು ಬಾಗಿಲನ್ನು ಬಡಿದ. ತಕ್ಷಣವೇ ಅವಳು ಬಾಗಿಲನ್ನು ತೆಗೆದಳು. ಒಳ ಬಂದು, ಅವನು ರೂಮಿನ ದೀಪ ವನ್ನು ಹಾಕಿದ.

"ಏನಾಯ್ತು, ಹಾಗೆ ಕಿರುಚಿಕೊಂಡ್ರಲ್ಲ?" ಎನ್ನುತ್ತಾ ಅವಳನ್ನೇ ಹೊಸಬಳನ್ನು ನೋಡುವವನಂತೆ ನೋಡಿದ. ಅವಳು ನಾಚಿದಳು. ಅವನಿಗೆ ಆಶ್ಚರ್ಯವೂ ಆಗಿತ್ತು, ಕೋಪವೂ ಬಂದಿತ್ತು.

ಅವನ ನೋಟಕ್ಕೆ ಬೆದರಿ, "ಸಾರಿ....." ಎಂದಳು.

"ಇದೇನಿದು ನಿಮ್ಮ ಅವತಾರ? ನನ್ನ ಬಟ್ಟೇನ ಯಾಕೆ ಹಾಕ್ಕೊಂಡಿದ್ದೀರಿ?" ಗಡುಸಾಗಿ ಕೇಳಿದ.

"ನನ್ನ ಬಟ್ಟೆಗಳೆಲ್ಲ ಒದ್ದೆ ಆಗಿವೆ. ಹರವಿ ಹಾಕಿದೀನಿ....." ಕಿಟಕಿಯ ಮೇಲೆ ಜೋತಾಡುತ್ತಿದ್ದ ಸೀರೆ, ರವಿಕೆ, ಲಂಗಗಳನ್ನು ತೋರಿಸಿದಳು. ಅವನು ಗಂಭೀರನಾದ.

"ನಂಗೆ ಹೇಳಿದ್ದಿದ್ರೆ ಇನ್ನೊಂದು ಸೆಟ್ ತಂದುಕೊಡ್ತಿದ್ದೆ. ಯಾಕೆ ಹೀಗೆ ಮಾಡಿದ್ರಿ? ಕೆಲಸದವರು ನೋಡಿದ್ರೆ ಏನಂದುಕೊಳ್ತಾರೆ?"

"ಹಾಗಾದ್ರೆ ಬಿಚ್ಚಿಬಿಡ್ತೀನಿ."

"ಏನೂ ಬೇಡ. ಬೆಳಿಗ್ಗೆ ರೂಮಿನಿಂದ ಹೊರ ಬರುವ ಮೊದಲು ಸೀರೇನ ಉಟ್ಟುಕೊಂಡು ಬಿಡಿ."

"ಯಾಕೆ ಹೆದರ್ತೀರಾ ಅವರುಗಳಿಗೆ?"

"ಹೆದರೋದು ಅಂತಲ್ಲ. ಇದುವರೆಗೂ, ನಮ್ಮ ಮನೆಗೆ ಯಾವ ಹೆಂಗಸೂ ಬಂದಿಲ್ಲ. ಅವರುಗಳಿಗೆ ಏನಾದರೂ ಆಡಲಿಕ್ಕೆ ಅವಕಾಶ ಕೊಡಬಾರದು."

"ಸಾರಿ, ನನ್ನಿಂದ ನಿಮಗೆ ತೊಂದರೆ ಆಯಿತು." ಅವಳು ಮುಖ ಚಿಕ್ಕದು ಮಾಡಿದಾಗ, ಅವನು ಹೊರಬಂದ. ಅವಳು ಬಾಗಿಲನ್ನು ಹಾಕಿಕೊಳ್ಳಲಿಲ್ಲ ಎನ್ನುವುದು ಗಮನಕ್ಕೆ ಬಂದರೂ, ತನ್ನ ಪಾಡಿಗೆ ತಾನು ಬಂದು ಮಲಗಿದ. ಅವಳು ದೀಪ ಆರಿಸಿದ ಸದ್ದು ಕೇಳಿಸಿತ್ತು. ಅವನ ಮನಸ್ಸು ಹೊಯ್ದಾಡಲು ಪ್ರಾರಂಭಿಸಿತ್ತು. ಅವಳ ಬಗ್ಗೆಯೇ ಯೋಚಿಸಿದ. ಅವನ ಉಡುಪುಗಳನ್ನು ಧರಿಸಿದ್ದವಳು, ಚಿಕ್ಕ ಪ್ರಾಯದವಳಂತೆ ಕಂಡು ಬರುತ್ತಿದ್ದಳು. ಒರಟಾದ ನೂಲಿನ ಸೀರೆಗಿಂತ, ಬಿಳಿಯ ಷರಟು ಅವಳಿಗೆ ಚೆನ್ನಾಗಿ ಒಪ್ಪುತ್ತದೆ ಎನಿಸಿತ್ತು. ಮತ್ತೊಮ್ಮೆ ನೋಡಬೇಕೆನ್ನಿಸಿತ್ತು. ಕಳ್ಳ ಹೆಜ್ಜೆಗಳನ್ನಿಡುತ್ತಾ ರೂಮಿನ ಬಾಗಿಲಿಗೆ ಬಂದು ನಿಂತ. ತಾನು ಹೀಗೆ ಕಳ್ಳನಂತೆ ಹೋಗುವುದು ಸರಿಯಲ್ಲ, ಅವಳನ್ನು ಎಬ್ಬಿಸಿ ಕರೆದು ನೋಡಬಹುದು ಅಂತಂದುಕೊಂಡು, ಬೆರಳುಗಳಿಂದ ಬಾಗಿಲ ಮೇಲೆ ಬಡಿದ.

"ಯಾರು?" ಅವಳು ಗಾಬರಿಯಿಂದ ಕೇಳಿದಳು.

"ನಾನು.....ಒಳಗೆ ಬರಬಹುದಾ? ಬೇಡ ಬಿಡಿ, ಅಲ್ಲಿ ಕಬೋರ್ಡ್‌ನಲ್ಲಿ ಅಮೃತಾಂಜನ್ ಇದೆ, ಕೊಟ್ಟು ಬಿಡಿ."

"ನೀವೇ ಬಂದು ತಗೊಳ್ಳಿ, ನಾನು ಮಲಗಿಬಿಟ್ಟಿದೀನಿ." ಅವನು ಒಳಗೆ ಅಡಿ ಇಟ್ಟ. ಆರಿಸಿದ್ದ ದೀಪವನ್ನು ಮತ್ತೆ ಹಚ್ಚಿ, ಮಂಚದ ಕಡೆ ನೋಡಿದ. ಅವಳು ಕತ್ತಿನವರೆಗೂ ಹೊದ್ದು ಮಲಗಿದ್ದಳು. ಮಂಚದ ಮೇಲೆ, ಅವನ ಉಡುಪುಗಳು ಬಿದ್ದಿದ್ದವು....ಒಮ್ಮೆಗೇ ಅವನ ಮೈ ಬಿಸಿಯಾಯಿತು. 'ಇದೇನಿದು? ನನಗೆ ಆಹ್ವಾನವೇ.....' ಬಂದ ಕೆಲಸವನ್ನೇ ಮರೆತವನಂತೆ, ಅವಳನ್ನೇ ನೋಡಿ, ಹಾಗೇ

ಬಾಗಿಲ ಬಳಿ ಬಂದ.

"ಪ್ಲೀಸ್, ದೀಪವನ್ನು ಆರಿಸಿಬಿಡಿ." ಅವನು ದೀಪವನ್ನೂ ಆರಿಸಿ, ಬಾಗಿಲನ್ನು ಎಳೆದುಕೊಂಡು ಬಂದು ಸೋಫಾದ ಮೇಲೆ ಕುಳಿತ. ಸಣ್ಣಗೆ ಮೈ ಬೆವರ್ತಿತ್ತು.

'ಅವಳು, ನನ್ನ ಹಾಸಿಗೆಯಲ್ಲಿ, ಉಡುಪುಗಳನ್ನೂ ಕಳಚಿ ಮಲಗಿದ್ದಾಳೆ. ಇಲ್ಲಿ ನಾನು ಸೋಫಾದ ಮೇಲೆ ಪರಕೀಯನಂತೆ ಮಲಗಬೇಕೆ! ಇದುವರೆಗೂ ಯಾವ ಹೆಂಗಸೂ, ನನ್ನ ಹಾಸಿಗೆಯಲ್ಲಿ ಮಲಗಿರಲಿಲ್ಲ. ಯಾವುದೋ ಒಂದು ಹಳೆಯ ಪರಿಚಯದ ಎಳೆಯನ್ನು ಹಿಡಿದು, ಧೈರ್ಯದಿಂದ ಮಲಗಿದ್ದಾಳೆ. ನನ್ನನ್ನು ಬಯಸುತ್ತಿರಬಹುದೇ......ನನಗಾಗಿ ಕಾಯುತ್ತಿರಬಹುದೇ......ಈಗ ನಾನು ಹೋದರೆ ಏನಾಗಬಹುದು? ಕಿರುಚಿ ಗಲಾಟೆ ಮಾಡಿದರೆ, ಮಾನ ಹೋಗುವುದಂತೂ ಖಂಡಿತಾ. ಅದರ ಬದಲು ಅವಳೊಡನೆ ಮಾತನಾಡಿ, ಅವಳ ಒಪ್ಪಿಗೆಯನ್ನು ಪಡೆದು, ಅವಳೊಂದಿಗೆ ಸುಖಿಸಿದರೆ......? ಛೀ, ನಾನು ಇಷ್ಟು ಕೆಟ್ಟದಾಗಿ ಆಲೋಚಿಸಬಾರದು. ಎಷ್ಟಾಗಲೀ ಅವಳು ಪರಸ್ತ್ರೀ. ಅವಳಿಗೆ ನನ್ನ ಮೇಲೆ ನಂಬಿಕೆ ಇರಬಹುದು. ಆ ನಂಬಿಕೆಯನ್ನು ನಾನು ಉಳಿಸಿಕೊಳ್ಳಬೇಕು. ಆದರೆ ಎರಡು ರಾತ್ರಿ ಅವಳು ಇಲ್ಲಿ ಕಳೆದಳೆಂದರೆ, ಅವಳಿಗೆ ಅಪಕೀರ್ತಿ ಬಾರದೇ ಇರುತ್ತದೆಯೇ? ಅವಳಿಗೆ ಆ ಭಯ ಬೇಡವೇ? ನನ್ನ ಮನೆಗೆ ಆಕಸ್ಮಿಕವಾಗಿ ಬಂದಳೋ ಅಥವಾ ಬೇಕೂಂತ, ತಿಳಿದೂ ಬಂದಿದ್ದಾಳೋ.....' ತಿಳಿದುಕೊಳ್ಳಬೇಕೆಂಬ ಕುತೂಹಲವುಂಟಾಯಿತು. ಎದ್ದು ರೂಮಿನ ಬಾಗಿಲ ಬಳಿ ಬಂದು, ಅವಳ ಹೆಸರನ್ನು ಕರೆದ. ಮೊದಲಿಗೆ ಅವಳು ಉತ್ತರಿಸಲಿಲ್ಲ. ಆದರೆ ಮತ್ತೊಂದು ಬಾರಿ ಕರೆದಾಗ, ನಿದ್ದೆಯಿಂದ ಎದ್ದವಳಂತೆ ಉತ್ತರಿಸಿದಳು. ಅವನು ಒಳಬಂದ.

"ಸಾರಿ, ನಿಮಗೆ ಮತ್ತೆ ಮತ್ತೆ ತೊಂದರೆ ಕೊಡ್ತಿದೀನಿ."

"ಪರವಾಗಿಲ್ಲ.....ಏನು ಬೇಕಾಗಿತ್ತು? ಇದು ನಿಮ್ಮದೇ ರೂಮು."

"ನಾನು, ನಿಮ್ಮ ಹತ್ರ ಸ್ವಲ್ಪ ಮಾತ್ನಾಡ್ಬೇಕಾಗಿತ್ತು. ದೀಪ ಹಾಕ್ಲಾ?"

"ಬೇಡ. ಹಾಗೇ ಮಾತ್ನಾಡಿ."

"ನಿಮಗೆ ನನ್ನ ಮೇಲೆ ಭಯ ಇಲ್ವಾ?"

"ಭಯ ಯಾಕೆ? ನೀವೂ ಮನುಷ್ಯರೇ."

"ನಿಜ. ಆದರೆ ನಾನು ಗಂಡಸು."

"ನಾನು ಹೆಂಗಸು, ಮನುಷ್ಯರಲ್ಲಿ ಇರೋದು ಎರಡೇ ಜಾತಿ. ಅಲ್ಲದೇ ನೀವು ಹೊಸಬರಲ್ಲ. ಪರಿಚಿತರಾಗಿದ್ದವರು."

"ಅದೆಂಥಾ ಪರಿಚಯ? ವಧುಪರೀಕ್ಷೆಗೆಂದು ನಿಮ್ಮ ಮನೆಗೆ ಬಂದಿದ್ದೆ. ನಾನು, ನಿಮ್ಮನ್ನು ನೋಡಿದ್ದೆ, ಮಾತನಾಡಿಸಿದ್ದೆ, ಮೆಚ್ಚಿದ್ದೆ. ಆದರೆ....."

"ನಮ್ಮ ಮದುವೆ ನೆರವೇರಲಿಲ್ಲ. ಅದಕ್ಕೆ ನಾನೇ ಕಾರಣ....."

"ನಿಮಗ್ಯಾಕೆ ನಾನು ಒಪ್ಪಿಗೆಯಾಗಲಿಲ್ಲ.....ಈಗ ಕಾರಣ ಕೇಳಬಹುದಾ?"

"ನಾನು ತಪ್ಪು ಮಾಡಿದೆ ಅಂತ ಈಗ ಅನ್ನಿಸ್ತಾ ಇದೆ. ನಿಮ್ಮಲ್ಲಿ ರೂಪ, ವಿದ್ಯೆ, ಶ್ರೀಮಂತಿಕೆ, ಯೌವನ ಎಲ್ಲವೂ ಇತ್ತು. ಆದರೆ....."

"ನೀವು ಬೇರೆ ಯಾರನ್ನೋ ಪ್ರೀತಿಸ್ತಿದ್ರೆ ಅಲ್ವಾ?"

"ಹೂಂ, ಅವನು ನನ್ನ ಸೋದರ ಮಾವನೇ. ನಮ್ಮ ಮನೆಗೆ ಆಗ – ಈಗ ಬಂದು – ಹೋಗಿ ಮಾಡುತ್ತಿದ್ದ. ಸರಸವಾಗಿ ಮಾತನಾಡುತ್ತಿದ್ದ. ಕೀಟಲೆ ಮಾಡಿ ರೇಗಿಸುತ್ತಿದ್ದ. ಅದೆಲ್ಲಾ ನನಗೆ ಇಷ್ಟವಾಗುತ್ತಿತ್ತು. ಒಮ್ಮೆ ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ಅವನು ನನ್ನೊಡನೆ ದೇಹ ಸಂಬಂಧವನ್ನು ಬೆಳೆಸಿದ. ಆಗಲೇ ನನ್ನ ಮದುವೆಗಾಗಿ ವರಗಳನ್ನು ಹುಡುಕುತ್ತಿದ್ದರು. ಆದರೆ ಮಾವ, ನಮ್ಮ ಮನೆಗೆ ಬಂದಾಗ, ನನಗೆ ಅವನು ಇಷ್ಟವಾಗುತ್ತಿದ್ದ. ಕದ್ದು ಮುಚ್ಚಿ, ನಾವು ಬೆರೆಯುತ್ತಿದ್ದೆವು. ಇದೇ ಸಮಯದಲ್ಲಿ ನೀವು, ನಮ್ಮ ಮನೆಗೆ ಬಂದಿದ್ದು. ನಮ್ಮ ಮನೆಯವರಿಗೆಲ್ಲ ನೀವು ಒಪ್ಪಿಗೆಯಾಗಿದ್ದಿರಿ. ಆದರೆ, ಮಾವ ನನ್ನನ್ನು ಬಿಡುವಂತಿರಲಿಲ್ಲ. ಬೆದರಿಕೆಯನ್ನೂ ಹಾಕಿದ್ದ. ಎಲ್ಲಾ ವಿಧದಲ್ಲೂ ಸರಿಯಾಗಿದ್ದ ನಿಮ್ಮನ್ನು ನಾನು ಒಪ್ಪಲಾಗಲಿಲ್ಲ. ಆಮೇಲೆ ನಿಮ್ಮ ಮದುವೆ ನೆರವೇರಿತೆಂದು ತಿಳಿಯಿತು. ಆದರೆ ನನಗೆ ಏನೂ ಅನ್ನಿಸಲಿಲ್ಲ.....ಇಲ್ಲಿ ನಿಮ್ಮ ಹೆಂಡತಿ ಯಾಕೆ ಜೊತೆಯಲ್ಲಿಲ್ಲ?"

"ಅವಳು ಬದುಕಿಲ್ಲ."

"ಆಂ....." ಎನ್ನುತ್ತಾ ಉಷಾ ಧಿಗ್ಗನೆ ಎದ್ದಳು. ಹೊದಿಕೆ ಜಾರಿತ್ತು. ಅವಳ ಕಣ್ಣುಗಳಿಗೆ, ಕತ್ತಲೆಯಲ್ಲಿ ಏನೂ ಕಾಣಲಿಲ್ಲವಾದರೂ, ಅವಳು ನಾಚಿಕೆಯಿಂದ ಕುಗ್ಗಿದಳು. ಮೆಲ್ಲನೆ, ಕತ್ತಿನವರೆಗೆ ಹೊದಿಕೆಯನ್ನು ಎಳೆದುಕೊಂಡಳು.

"ಹಾಗಾದ್ರೆ, ನೀವು ಈಗಲೂ ಒಂಟಿಯಾಗಿಯೇ ಇದೀರಾ? ಅಥವಾ ಮದುವೆ ಆಯಿತೋ?" ಅವನು ಪ್ರಶ್ನಿಸಿದ್ದ. ಅವಳು ಉತ್ತರಿಸಲಿಲ್ಲ.

"ನಿದ್ದೆ ಬಂತಾ ಉಷಾ.... ಯಾಕೆ ಮಾತಾಡ್ತಿಲ್ಲ?"

"ಏನು ಹೇಳ್ಬೇಕು ಅಂತ ಗೊತ್ತಾಗ್ತಿಲ್ಲ. ನಾನು ಈಗಲೂ ಒಂಟಿಯಾಗಿಯೇ ಇದೀನಿ." ಅವಳು ಅತಿ ಕೆಳಗಿನ ಧ್ವನಿಯಲ್ಲಿ ನುಡಿದಾಗ, ಅವನು ನೆಮ್ಮದಿಗೊಂಡ.

"ನೀನ್ಯಾಕೆ ಮದುವೆಯಾಗ್ಲಿಲ್ಲ? ನಿಮ್ಮ ಮಾವನನ್ನೇ ಆಗಬಹುದಾಗಿತ್ತಲ್ಲ!"

"ಅದ್ನೆಲ್ಲ ನಾನು ಮರೆಯಬೇಕು ಅಂತ ಪ್ರಯತ್ನಿಸುತ್ತಿದ್ದೀನಿ. ಪ್ಲೀಸ್, ಏನೂ ಕೇಳ್ಬೇಡಿ."

"ನಿಮಗೆ ಒಂಟಿತನ ಅಸಹನೀಯ ಅಂತ ಅನ್ನಿಸೋಲ್ವಾ?"

"ನೀವೂ ಒಂಟಿಯಾಗಿದೀರಲ್ಲ.....ನಿಮಗೆ ಏನೂ ಅನ್ನಿಸೋಲ್ವಾ ಅಥವಾ ಯಾರಾದ್ರೂ ಗೆಳತಿಯರಿದ್ದಾರಾ?"

"ನನಗೆ ಯಾವ ಗೆಳತಿಯೂ ಇಲ್ಲ. ಇದುವರೆಗೆ ನನಗೆ ಆ ಆಸೆಯೇ ಬಂದಿರಲಿಲ್ಲ. ಆದರೆ, ಈಗ ನಿಮ್ಮನ್ನು ಕಂಡೆ, ನೀವು ನನ್ನ ಗೆಳತಿ ಆಗ್ತೀರಾ ಉಷಾ?"

"ಬರೀ ಗೆಳೆತನನಾ?" ಅವಳು ನಕ್ಕಂತೆ ಅನ್ನಿಸಿದಾಗ, ಅವನು ಉದ್ವೇಗಗೊಂಡು, ಅವಳ ಬಳಿ ಸಾರಿದ.

"ಗೆಳೆತನ ಅಂತ ನಾನು ಹೇಳುವ ರೀತಿ ನಿಮಗೆ ಅರ್ಥವಾಗಿರಬೇಕು. ನಾನು ವಿಧುರ. ನೀವೂ ಕನ್ಯೆಯಲ್ಲ. ನಿಮಗೆ ಸರಿ ಎನ್ನಿಸಿದರೆ......"

"ನಿಮ್ಮ ಮನಸ್ನಲ್ಲಿ ಇಂಥಾ ಆಸೆ ಒಂದಿದೆ ಅಂತ ನಾನಂದುಕೊಂಡಿರಲಿಲ್ಲ."

"ನನಗೇ ಗೊತ್ತಿಲ್ಲದೇ ಮೂಡಿದ ಆಸೆ ಇದು. ಅದೂ, ನಾನು ನಿಮ್ಮನ್ನು ನನ್ನ ಉಡುಪಿನಲ್ಲಿ ಕಂಡಾಗ......ನಿಮಗೆ ಆ ಉಡುಪು ಚೆನ್ನಾಗಿ ಒಪ್ತಿತ್ತು."

"ನಿಮಗೆ ಇಷ್ಟವಾಗ್ಲಿಲ್ಲ ಅಂತ ನಾನು ಅದನ್ನು ಬಿಚ್ಚಿಬಿಟ್ಟೆ."

"ನನಗೆ ಗೊತ್ತು....." ಅವನ ಕೈ, ಹೊದಿಕೆಯೊಳಗೆ ಹರಿದಾಡಿತು. ಅವಳು ಸಣ್ಣಗೆ ಚೀರಿಕೊಂಡಳು. ಆದರೆ ಅವನನ್ನು ತಳ್ಳುವ ಸಾಹಸ ಮಾಡಲಿಲ್ಲ.

"ಪ್ಲೀಸ್, ನಿಮಗೆ ಇಷ್ಟವಿಲ್ಲದಿದ್ದರೆ ಬೇಡ. ಆದರೆ ಕಿರುಚಬೇಡಿ. ಕೆಲಸದವರಿಗೆ ಕೇಳಿಸುತ್ತೆ......" ಎಂದು ಅವನು ಕೈಯನ್ನು ಹಿಂದಕ್ಕೆ ಎಳೆದುಕೊಂಡಾಗ, ಅವಳು ನಿರಾಸೆಗೊಂಡಳು.

ಅವನ ಕೈಯನ್ನು ಹಿಡಿದಳು.

"ನೆನ್ನೆ ನಾನು ನಿರಾಶ್ರಿತಳಂತೆ ನಿಮ್ಮ ಮನೆಯ ಬಾಗಿಲಲ್ಲಿ ಬಿದ್ದಿದ್ದಾಗ ನನಗೆ ಆಶ್ರಯ ಕೊಟ್ಟಿದ್ದೀರಿ. ನಿಮ್ಮ ಆಸೆಗೆ ನಾನು ಹೇಗೆ ಇಲ್ಲ ಎನ್ನಲಿ?"

"ಛೆ.....ಹಾಗಲ್ಲ. ನಾನು ಯಾವ ಕುಬುದ್ಧಿಯಿಂದಲೂ ನಿಮಗೆ ಆಶ್ರಯ ಕೊಡಲಿಲ್ಲ. ಈಗಲೂ ನೀವು ನನ್ನ ಅತಿಥಿ. ಗೌರವದಿಂದ ನಡೆದುಕೊಳ್ಳುವುದು ನನ್ನ ಕರ್ತವ್ಯ. ನಾನು ಹೋಗ್ತೀನಿ. ಗುಡ್ ನೈಟ್."

"ಪ್ಲೀಸ್ ಹೋಗ್ಬೇಡಿ. ನನ್ನನ್ನು ಕೆರಳಿಸಿದ್ದೀರಿ, ಕಾಮನೆಗಳನ್ನು ಎಬ್ಬಿಸಿದ್ದೀರಿ. ಈಗ ನೀವು ಹೊರಟು ಹೋದರೆ...... ನನಗೆ ನಿರಾಸೆಯಾಗುತ್ತೆ. ನಾನೂ ಸಹ ಬಯಕೆಗಳನ್ನು ತುಂಬಿಕೊಂಡಿರುವವಳು." ಅವಳ ಕೈ, ಅವನನ್ನು ಎಳೆಯಿತು.

ಅವನು ಸಾವಕಾಶವಾಗಿ ಅವಳ ಮಗ್ಗುಲಲ್ಲಿ ಕುಳಿತ.

"ನನ್ನ ಬಗ್ಗೆ ಅಸಹ್ಯ ಭಾವನೆಗಳನ್ನಿಟ್ಟುಕೊಳ್ಳಬೇಡಿ. ನಾನು ನಿಮ್ಮನ್ನು ಮೆಚ್ಚಿದ್ದವನು. ನಿಮ್ಮ ಬಗ್ಗೆ ಗೌರವವಿದೆ! ಆದರೆ ಈಗ ನಿಮ್ಮ ಒಪ್ಪಿಗೆಯೂ ಇರುವಾಗ, ನಿರಾಕರಿಸಲು

ನನ್ನ ಮನಸ್ಸು ಒಪ್ಪುತ್ತಿಲ್ಲ."

"ನಿರಾಕರಿಸಬೇಡಿ...... ನಿಮಗೆ ನನ್ನ ಮೈಯನ್ನು ಒಪ್ಪಿಸಿದರೆ, ನಾನು ಧನ್ಯ ಳಾಗ್ತೀನಿ. ಈ ರಾತ್ರಿ ನನ್ನ ನೆನಪಿನಲ್ಲಿ ಸದಾ ಹಸಿರಾಗಿರುತ್ತದೆ......" ಎನ್ನುತ್ತಾ ಅವನಿಗೆ ತನ್ನನ್ನು ಒಪ್ಪಿಸಿಕೊಂಡಳು.

'ನನ್ನದು ಏನೂ ತಪ್ಪಿಲ್ಲ, ಹಸಿದ ಹೆಣ್ಣಿಗೆ ಸುಖ ಕೊಡುವುದು ನನ್ನ ಧರ್ಮ' ಎಂಬಂತೆ, ರಂಗನಾಥ ಅವಳನ್ನು ತನ್ನ ದೇಹದೊಳಗೆ ಅಡಗಿಸಿಕೊಂಡ.

ಆ ರಾತ್ರಿ ಇಬ್ಬರಿಗೂ ಅಪ್ಯಾಯಮಾನವಾಗಿತ್ತು. ಯಾವ ಅಂಜಿಕೆ, ಅನುಮಾನ ಗಳಿಲ್ಲದ ಪ್ರಕೃತಿ-ಪುರುಷರಂತೆ ಒಂದಾದರು. 'ಕಳೆದುಹೋದುದು ನನಗೆ ಮತ್ತೆ ಸಿಕ್ಕಿತು' ಎಂಬ ಭಾವ ಅವಳಿಗೆ. 'ಇವಳಿಗೆ ಮತ್ತೆ ನಾನೇ ಬೇಕಾಯಿತು' ಎಂಬ ಹೆಮ್ಮೆ ಅವನಿಗೆ. ಸುಖದ ಸೂರೆಯಿಂದ ಸಮಯ ಸರಿದುದೇ ಅರಿವಾಗಲಿಲ್ಲ ಇಬ್ಬರಿಗೂ. ಮೊದಲು ವಾಸ್ತವದ ಅರಿವಾದುದು ರಂಗನಾಥನಿಗೆ. ಸುಖದ ಉತ್ತುಂಗದ ಅನುಭವಕ್ಕೆ ಹೋದವಳು, ಹಾಗೇ ಕಣ್ಣು ಮುಚ್ಚಿ ಮಲಗಿದ್ದಳು. 'ಇದೇನಾಯ್ತು ನನಗೆ ಈ ದಿನ!' ಎಂದು ಸಂಕೋಚಗೊಂಡರೂ, ಮನಸ್ಸು ಕುಣಿದಿತ್ತು, ದೇಹ ದಣಿದಿತ್ತು. ಅವಳ ಮೇಲೆ ಕೈ ಹಾಕಿ, ಅವಳನ್ನು ಬಳಸಿ ಮಲಗಿದ. ಈಗ ತಾನೇನಾದರೂ ಮಾತನಾಡಿದರೆ, ರಸಭಂಗವಾಗುವುದು ಖಂಡಿತಾ ಎಂದುಕೊಂಡು ಹಾಗೇ ನಿದ್ರಿಸಿದರು.

೬

ಬೆಳಗಾಯಿತು. ಹಕ್ಕಿ ಚಿಲಿಪಿಲಿ ಗುಟ್ಟಿತು. ರಾಕಿ ಬೊಗಳಿತು. ರಂಗನಾಥನಿಗೆ ಎಚ್ಚರವಾಯಿತು. ಮೆಲ್ಲಗೆ ಅವಳನ್ನು ಸರಿಸಿ, ಎದ್ದು ಕೂತ. ನಿದ್ರಿಸುತ್ತಿದ್ದವಳ ಮುಖ ವನ್ನೇ ಅವಲೋಕಿಸಿದ. 'ಹೆಂಗಸರ ಮನಸ್ಸನ್ನು ಅರಿಯಲು ಆಗುವುದೇ ಇಲ್ಲ. ಕಿರು ಪರಿಚಯ ಅಷ್ಟೇ, ಆದರೆ ರಾತ್ರಿಯ ಅನುಭವ!' ಆ ಆಲೋಚನೆಯೇ ಮುದ ನೀಡಿತು.

'ಇವಳು ನನ್ನವಳಾಗಿದ್ದಾಳೆ. ಇವಳಿಂದ ಯಾವ ವಿರೋಧವೂ ಇಲ್ಲ' ಎಂದು ಕೊಂಡು, ಮೆಲ್ಲಗೆ ಅವಳ ಮುಖದ ಮೇಲೆ ಬಾಗಿದ. ಅವನ ಬಿಸಿ ಉಸಿರು ತಾಗಿ, ಅವಳು ಎಚ್ಚರಗೊಂಡಳು. ಕಣ್ಣುಗಳನ್ನು ಬಿಟ್ಟವಳು, ಮೆಲ್ಲನೆ ಚೀರಿದಳು. ಅವನು, ಅವಳ ಬಾಯಿ ಮೇಲೆ ಕೈಯನ್ನಿಟ್ಟ,

"ಪ್ಲೀಸ್.....ಕಿರುಚಬೇಡಿ, ಬೆಳಗಾಗಿದೆ" ಎಂದ

ಅವಳು ನಗಲು ಯತ್ನಿಸಿ, ಎದ್ದು ಕುಳಿತಳು. ನಾಚಿಕೆಯಿಂದ ಕೆನ್ನೆಗಳು ರಂಗೇರಿದ್ದವು.

"ಥ್ಯಾಂಕ್ಸ್ ಉಷಾ, ನೆನ್ನೆ ರಾತ್ರಿ ವಂಡರ್ ಫುಲ್ ನೈಟ್ ಆಗಿತ್ತು."

ಅವಳು, ಮುಖವನ್ನು ಕೈಗಳಿಂದ ಮುಚ್ಚಿಕೊಂಡಳು. ಅಷ್ಟರಲ್ಲಿ ಫೋನ್ ರಿಂಗಾಗಿತ್ತು. ರಾಕಿ ಬೊಗಳುತ್ತಲೇ ಇತ್ತು.

'ಇವನೊಬ್ಬ ಈಡಿಯಟ್, ಸಮಯ, ಸಂದರ್ಭ ಒಂದೂ ಗೊತ್ತಾಗೊಲ್ಲ ಇವನಿಗೆ' ಎಂದು ಬೈದುಕೊಳ್ಳುತ್ತಾ ಎದ್ದು ಹೊರಬಂದ.

ಅವಳು ಎದ್ದು ಸರಸರನೆ ಉಡುಪುಗಳನ್ನು ಧರಿಸಿದಳು. ಅಲ್ಲಿದ್ದ ಕನ್ನಡಿಯಲ್ಲಿ ತನ್ನ ಮುಖವನ್ನು ನೋಡಿಕೊಂಡಳು.

'ನಾನು ವಂಚಕಿಯೇ?' ಎಂಬ ಅಳುಕಿನ ಗೆರೆ ಕಂಡೂ ಕಾಣದಂತೆ ಇಣುಕಿತ್ತು. ತಲೆಯನ್ನು ಕೊಡವಿಕೊಂಡಳು. ರಾತ್ರಿಯ ಅನುಭವಗಳನ್ನು ಮೆಲುಕು ಹಾಕಿದಳು. 'ಅವನೇ ನನ್ನ ಬಳಿಗೆ ಬಂದನೋ... ನಾನು ಅವನನ್ನು ಆಹ್ವಾನಿಸಿದೆನೋ..... ಒಟ್ಟಿನಲ್ಲಿ ಆ ಸುಖಾನುಭವ ಇಬ್ಬರಿಗೂ ಬೇಕಾಗಿತ್ತು. ಅವನು ಗಂಡಸು, ಒಂಟಿಯಾಗಿರುವನೆಂದು ತಿಳಿದೂ, ನಾನೇಕೆ ಇಲ್ಲಿ ಉಳಿದುಕೊಂಡೆ? ಹಿಂದಿನ ರಾತ್ರಿಯಂತೆ ರತ್ನಮ್ಮ ಜೊತೆಗಿರಲಿ ಎಂದೇಕೆ ಹೇಳಲಿಲ್ಲ? ಅವನೂ ಅಷ್ಟೇ, ರತ್ನಮ್ಮನನ್ನು ಬೇಕಾಗಿಯೇ ಕಳಿಸಿಬಿಟ್ಟನೇ.... ಒಂಟಿ ಹೆಂಗಸು ಸಿಕ್ಕರೆ, ಅವಕಾಶವನ್ನು ಗಂಡಸು ಬಿಡುವನೇ? ಇಂತಹ ಸಮಯಕ್ಕಾಗಿ ಕಾಯುತ್ತಿದ್ದನೇನೋ ಎಂಬಂತೆ ನನ್ನನ್ನು ಅನುಭವಿಸಿದನಲ್ಲ, ನನಗೂ ಬೇಕಿತ್ತೇ? ನಾನೇಕೆ ಅವನನ್ನು ದೂರ ತಳ್ಳಲಿಲ್ಲ?'

"ಈಗ ಕಳೆದು ಹೋದುದಕ್ಕೆ ಚಿಂತಿಸಿ ಫಲವಿಲ್ಲ ಉಷಾ. ನಿಮ್ಮ ಸಮ್ಮತಿ ಇತ್ತು ಅಂತ ಭಾವಿಸ್ತೀನಿ. ಒಂದು ವೇಳೆ ನಿಮಗೆ ಬೇಸರವಾಗಿದ್ದರೆ ಕ್ಷಮಿಸಿ ಬಿಡಿ, ಪ್ಲೀಸ್." ಅವನು, ಅವಳ ಭುಜದ ಮೇಲೆ ಕೈಯನ್ನಿಟ್ಟು ಹೇಳಿದಾಗ, ಅವಳು ತಲೆಯಾಡಿಸಿದಳು.

"ಇಲ್ಲ, ನಾನು ಆ ಬಗ್ಗೆ ಚಿಂತಿಸಲಿಲ್ಲ. ನಾನೆಂಥಾ ಹೆಂಗಸು ಅಂತ ಚಿಂತಿಸ್ತಿದ್ದೆ. ಹೆಂಗಸಾಗಿ ನನ್ನಲ್ಲಿ ಸಂಯಮವಿರಲಿಲ್ಲ. ಈ ಕಾರಣದಿಂದಲೇ ಸೋದರ ಮಾವನಿಗೆ ನನ್ನನ್ನು ಒಪ್ಪಿಸಿಕೊಂಡಿದ್ದೆ. ನನ್ನಲ್ಲಿಯೂ ಸಂಯಮವಿದ್ದಿದ್ದರೆ, ಈ ದಿನ ನಾನು ನಿಮ್ಮ ಪತ್ನಿಯಾಗಿರಬಹುದಾಗಿತ್ತು."

"ಆ ಬಗ್ಗೆ ಚಿಂತೆಯೇಕೆ? ನಾವಿಬ್ಬರೂ ಆದಷ್ಟು ಬೇಗ ಪತಿ-ಪತ್ನಿಯರಾಗಿ ಬಿಡೋಣ. ಅದು ನನ್ನ ಸೌಭಾಗ್ಯ ಅಂತ ಅಂದ್ಕೊಳ್ತೀನಿ."

"ನನ್ನ ಬಗ್ಗೆ ನಿಮಗೆ ಬೇಸರ, ಅಸಹ್ಯ ಏನೂ ಇಲ್ಲವಾ?"

"ನಿಮ್ಮ ಮೇಲೆ ಅಸಹನೆ ಇದ್ದುದು ನಿಜ. ನನ್ನನ್ನು ನಿರಾಕರಿಸಿದ ಹೆಣ್ಣು ಒಂಟಿಯಾಗಿ ಸಿಕ್ಕಿರುವಾಗ ಅನುಭವಿಸಿ ಸೇಡನ್ನು ತೀರಿಸಿಕೊಳ್ಳಬೇಕು ಎಂಬ ಭಾವನೆ ಮೂಡಿದ್ದು ನಿಜ. ಆದರೆ ನಿಮ್ಮ ಸಮ್ಮತಿಯೇ ಸಿಕ್ಕಿದಾಗ, ನಾನು ಅಪರಾಧ ಮಾಡುವುದು ತಪ್ಪಿತು. ಇದಕ್ಕಾಗಿ ಥ್ಯಾಂಕ್ಸ್."

"ಅಂತೂ ಮತ್ತೊಮ್ಮೆ ನೀವೇ ಒಳ್ಳೆಯವರಾದಿರಿ ತಾನೇ?"

"ಇದನ್ನು ಒಳ್ಳೆಯತನ ಅನ್ನೋಕೆ ಆಗುತ್ತಾ ಉಷಾ! ನಾವು ಮಾಡಿರುವ ತಪ್ಪನ್ನು ಸರಿಪಡಿಸೋಣ. ಆದಷ್ಟು ಬೇಗ ಮದುವೆಯಾಗೋಣ. ನಾನು ಇವತ್ತೇ ನನ್ನ ಅಣ್ಣ–ಅತ್ತಿಗೆಯರ ಹತ್ರ ಮಾತಾಡ್ತೀನಿ."

"ಈಗಲೇ ಬೇಡ." ಅವಳು ತತ್‌ಕ್ಷಣವೇ ನುಡಿದಳು.

"ಯಾಕೆ? ನಾನು ಈಗಲೂ ನಿಮಗೆ ಇಷ್ಟವಾಗಲಿಲ್ವಾ ಅಥವಾ ಈಗಲೂ ಸೋದರಮಾವನಿಗೆ ಹೆದರ್ತೀರಾ?"

"ಹಾಗೇನಿಲ್ಲ" ಅವಳ ನಾಲಿಗೆ ನುಡಿದರೂ, ಮುಖ ಕಪ್ಪಿಟ್ಟಿತ್ತು. ಅವನು ಗಮನಿಸಿದ.

"ಓ.ಕೆ. ನಿಮ್ಮಿಷ್ಟ. ನನ್ನ ಬಲವಂತ ಏನೂ ಇಲ್ಲ. ನನ್ನ ಹೆಂಡತಿ ಹೋದ ನಂತರ, ಎಷ್ಟೋ ವರ್ಷಗಳ ನಂತರ, ನಿಮ್ಮಂಥ ಹೆಂಗಸಿನ ಸಹವಾಸ ಸಿಕ್ಕಿತು. ನಿಮಗೆ ಒಪ್ಪಿಗೆ ಆದರೆ, ಮದುವೆಯಾಗೋಣ. ಆದರೆ ಈ ರೀತಿಯ ಗೆಳೆತನ ಮುಂದುವರೆಯುವುದರಲ್ಲಿ ಅರ್ಥವಿಲ್ಲ. ನಿಮ್ಮನ್ನು, ಈ ರಾತ್ರಿಯನ್ನು ನಾನು ಮರೆಯಲು ಸಾಧ್ಯವಿಲ್ಲ. ನಿಮಗೆ ಏನಾದರೂ ಕಾಣಿಕೆ ಕೊಡಬೇಕು. ಬಹುಶಃ ನಾವಿಬ್ಬರೂ ಮತ್ತೆ ಭೇಟಿಯಾಗ್ತೀವೋ ಇಲ್ಲವೋ?"

'ನನ್ನ ಸ್ನೇಹ, ಗೆಳೆತನ ಇವಳಿಗೆ ಬೇಕಾಗಿಲ್ಲದಿರಬಹುದು. ಈ ಹೆಂಗಸರ ಸ್ವಭಾವವೇ ಇಷ್ಟು, ಮನಸ್ನಲ್ಲಿ ಏನಿದೆ ಅಂತ ತಿಳಿಯುವುದೇ ಇಲ್ಲ'. ಎಂದುಕೊಂಡ. ಮುಂಬಾಗಿಲ ಬೆಲ್ ಹೊಡೆದಿತ್ತು. ಅವನು ಅತ್ತ ಸರಿದ. ಇವಳು ಹೊರಗಡೆಗೆ ಬಂದು ಸೋಫಾದ ಮೇಲೆ ಕುಳಿತಳು. ರತ್ನಮ್ಮ ಹಾಲಿನ ಪ್ಯಾಕೆಟ್‌ಗಳನ್ನು ಹಿಡಿದು ಒಳಬಂದಳು. ಉಷಾಳ ಮೇಲೆ ಓರೆ ನೋಟ ಬೀರಿದಳು. ಉಷಾ ಮುಗುಳ್ನಕ್ಕಳು.

"ಚೆನ್ನಾಗಿ ನಿದ್ದೆ ಬಂತಾ ಮೇಡಂ?"

"ಹೂಂ ರತ್ನಮ್ಮ. ನಿನ್ನ ಮಗು ಎಲ್ಲಿ.....? ಇನ್ನೂ ಎದ್ದಿಲ್ವಾ?"

"ಇಲ್ಲ, ಅಜ್ಜಿ ಎತ್ಕೊಂಡವ್ಳೆ. ಬೇಗ ಹಾಲು ಕಾಯಿಸಿ, ಕಾಫೀ ಮಾಡಿಬಿಡ್ತೀನಿ." ಅವಳು ಅಡಿಗೆ ಮನೆಯ ಕಡೆ ನಡೆದಳು.

ಉಷಾಳ ದೃಷ್ಟಿ ಅವಳ ಬೆನ್ನ ಹಿಂದೆ ಓಡಿತು. ಇವಳೂ ಹೆಂಗಸು, ಇನ್ನೂ ಚಿಕ್ಕವಳು. ಇವನು, ಇವಳ ಸಹವಾಸವನ್ನು ಮಾಡಿರಬಹುದೇ?" ಅಂತಂದುಕೊಂಡಾಗ, ಅಸಹ್ಯವೆನಿಸಿತ್ತು.

ಆದರೆ ಅವನ ನಡೆ, ನುಡಿ, ವರ್ತನೆ ಅಸಹ್ಯಗೊಳ್ಳುವಂತಿರಲಿಲ್ಲ. ಅವನ ಬಗ್ಗೆ ಮೆಚ್ಚುಗೆ ಮೂಡಿತು.

"ಸಾರ್.....ಏನು ತಿಂಡಿ ಮಾಡ್ಲೀ?" ಕಾಫೀಯ ಬಟ್ಟಲುಗಳನ್ನಿಡುತ್ತಾ ಕೇಳಿದಳು.

"ಇವತ್ತು ಏನೂ ತಿಂಡಿ ಬೇಡ. ನಾನು ಅಣ್ಣನ ಮನೆಗೆ ಹೋಗ್ತಾ ಇದೀನಿ.

ಅತ್ತಿಗೆ ಏನಾದ್ರೂ ಸ್ಪೆಷಲ್ ಮಾಡಿರುತ್ತಾರೆ." ಉಷಾಳ ಕಡೆ, ಕಿರುನೋಟ ಬೀರಿ ಮುಗುಳ್ನಕ್ಕಿದ್ದನ್ನು ಗಮನಿಸಿದಳು. ರಂಗನಾಥ ರಾಕಿಯನ್ನು ಕರೆದುಕೊಂಡು ವಾಕಿಂಗ್ ಹೊರಟ. ರತ್ನಮ್ಮ, ಉಷಾಳ ಎದುರಿಗೆ ಬಂದು ನಿಂತಳು.

"ನಿಮಗೆ ಈ ಸಾರ್ ಮೊದಲ್ನಿಂದ್ಲೂ ಪರಿಚಯಾನಾ?" ಇದ್ದಕ್ಕಿದ್ದಂತೆ ಕೇಳಿದಾಗ, ಅವಳು ತಡವರಿಸಿದರೂ 'ಹೂಂ......' ಎಂದಳು.

"ಹೂಂ, ಹಾಗೇ ಅಂದ್ಕೊಂಡೆ. ಸಾರ್ ಯಾರ ಜತೆಯೂ ಹೀಗೆ ವಿಶೇಷವಾಗಿ ಮಾತಾಡೊಲ್ಲ. ಅದೇನಪ್ಪಾ ಅಂತ ಯೋಚಿಸ್ದೆ."

"ಹೂಂ. ರತ್ನಮ್ಮ ಇವರು ನಮ್ಮೂರ್ನೋರೇ, ನಾವಿಬ್ರೂ ಒಟ್ಟಿಗೇ ಬೆಳೆದೆವು."

"ಮತ್ಯಾಕೆ ಹಿಂದೆಂದೂ ಬಂದೇ ಇರ್ಲಿಲ್ಲ ನೀವು! ಇವರು ಎಲ್ಲಿದಾರೆ ಅಂತ ಗೊತ್ತಿರಲಿಲ್ವಾ? ಮತ್ತೆ ಮೊನ್ನೆ ರಾತ್ರಿ ಸೀದಾ ಇದೇ ಮನೆಗೆ ಹೇಗೆ ಬಂದ್ರಿ?"

"ನೀನು ತುಂಬಾ ಪ್ರಶ್ನೆ ಕೇಳ್ತೀಯ ರತ್ನಮ್ಮ. ನಾನು ಹತ್ತಿದ್ದ ಬಸ್‌ಗೆ ಆಕ್ಸಿಡೆಂಟ್ ಆಗಿ, ರಸ್ತೆಯಿಂದ, ಉರುಳಿ ಬಿತ್ತು. ನೂಕು ನುಗ್ಗಲಿನಲ್ಲಿ ನನ್ನ ಸೀರೇನ ತುಳಿದ್ರು. ನಾನು ಮುಗ್ಗರಿಸಿ ಕೆಳಕ್ಕೆ ಬಿದ್ದು ಬಿಟ್ಟೆ. ಆಮೇಲೆ ಎಚ್ಚರವಾದಾಗ, ನಾನೊಂದು ಗುಂಡಿಯೊಳಗೆ ಬಿದ್ದಿದ್ದೆ. ನನ್ನ ಮೈಮೇಲೆ ಸೀರೆ ಇರಲಿಲ್ಲ. ಮೈ-ಕೈಯೆಲ್ಲಾ ಗಾಯ ಆಗಿತ್ತು. ಕೊಚ್ಚೆ ಮೆತ್ತಿಕೊಂಡಿತ್ತು. ಕತ್ತಲಾಗುತ್ತಾ ಬಂದಿತ್ತು. ಭಯದಿಂದ ಹಾಗೇ ತೆವಳಿಕೊಂಡು ಈ ಮನೆಯ ಬಳಿಗೆ ಬಂದೆ. ನಿಮ್ಮ ಸಾರ್, ನಾಯಿಯೊಂದಿಗೆ ಹೊರಕ್ಕೆ ಹೋದರು. ನಾನು ಮೆಲ್ಲಗೆ ಒಳ ಬಂದು ಗೋಡೆಯ ಬಳಿ ಅವಿತು ಕೊಂಡು ಕೂತಿದ್ದೆ."

"ನಿಜ ಹೇಳ್ತಿದೀರಾ ಮೇಡಂ ಅಥವಾ ಯಾವೋನಾದ್ರೂ ಕೇಡಿಗನ ಕೈಗೆ ಸಿಕ್ಕಿ ಬಿದ್ದು, ತಪ್ಪಿಸ್ಕೊಂಡು ಬಂದ್ರೋ?"

"ನೀನು ನಂಬದೇ ಇದ್ರೆ ನಾನೇನ್ಮಾಡ್ಲೀ ರತ್ನಮ್ಮ? ಇಲ್ಲಿಗೆ ಹತ್ತಿರದಲ್ಲಿ ಒಂದು ಆಶ್ರಮವಿದೆಯಲ್ಲ. ಅಲ್ಲಿಯ ಸ್ವಾಮೀಜಿಯ ದರ್ಶನಕ್ಕೆ ಅಂತ ಹೊರಟಿದ್ದೆ. ಮಧ್ಯೆ ಹೀಗಾಗಿ ಹೋಯ್ತು."

"ಅಂದ್ರೆ ಮಧ್ಯಾಹ್ನದಿಂದ ರಾತ್ರಿವರೆಗೂ ಅಲ್ಲೇ ಬಿದ್ದಿದ್ರಾ? ಯಾರನ್ನಾದ್ರೂ ಸಹಾಯಕ್ಕೆ ಕರೆಯಬೇಕಾಗಿತ್ತು?"

"ನನ್ನ ಅವಸ್ಥೆಗೆ ನನಗೇ ಹೀನಾಯವಾಗಿತ್ತು. ಅಲ್ಲದೇ ನಾನು ಬಿದ್ದ ಕಡೆಯಿಂದ ರಸ್ತೆ ಕಾಣ್ತಿರಲಿಲ್ಲ. ನಾನು ಎಲ್ಲಿದೀನಿ ಅಂತ ಸಹ ಗೊತ್ತಿರಲಿಲ್ಲ. ಈ ಮನೆಯ ನಾಯಿ ಬೊಗಳುತ್ತಿದ್ದುದನ್ನು ಕೇಳಿ, ಇಲ್ಲಿ ಮನೆ ಇರಬಹುದು ಅಂತ ಅಂದ್ಕೊಂಡೆ."

"ಇದು ದೊಡ್ಡ ಥಾರಮ್ಮ. ಮನೆ ಚಿಕ್ಕದು. ಇಲ್ಲಿ ಇವರೊಬ್ಬರೇ ಇರೋದು. ನಾನೇ ಅಡುಗೆ, ತಿಂಡಿ, ಕಾಫೀ ಎಲ್ಲಾ ಮಾಡಿ ಕೊಡ್ತೀನಿ. ಸಾರ್ ತುಂಬಾ

ಒಳ್ಳೆಯವ್ರು."

"ಒಳ್ಳೆಯವ್ರು ಅಂದ್ರೇ.....?"

"ಒಳ್ಳೆಯವ್ರು ಅಂತ. ಆದರೆ, ಸಾರ್‌ನ ಹೆಂಡತಿ, ಇಂಥಾ ಒಳ್ಳೇ ಮನುಷ್ಯನ್ನ ಬಿಟ್ಟು ಯಾವೋನ ಹಿಂದೆಯೋ ಓಡಿ ಹೋದ್ಲಂತೆ. ಅದೂ ಒಂದು ಮಗೀನೂ ಬಿಟ್ಟು. ಎಂಥಾ ಕೆಟ್ಟ ಹೆಂಗಸು ಅಲ್ವಾ?"

ಉಷಾ ಎಚ್ಚೆತ್ತಳು.

"ಈ ವಿಷಯ ಎಲ್ಲಾ ನಿಂಗೆ ಹೇಗೆ ಗೊತ್ತಾಯ್ತು.....ಯಾರು ಹೇಳಿದ್ರು?"

"ಇವರ ಅತ್ತಿಗೆಮ್ಮ. ಮಗು ಅವರ ಮನೇಲೇ ಇದೆ. ಮತ್ತೆ ಮದುವೆ ಮಾಡ್ಕೋ ಅಂತಂದ್ರೆ, ಒಪ್ತಾನೇ ಇಲ್ವಂತೆ. ನೀವಾದ್ರೂ ಹೇಳಿ, ಒಂದೇ ಊರ್‍ನೋರು ಅಂತೀರಿ. ಗಂಡಸು ಒಂಟಿಯಾಗಿದ್ರೆ ಏನು ಚೆನ್ನ?"

ಉಷಾ ಬೆವೆತಳು.

"ಇದಕ್ಕೆ ನಾನೇನು ಹೇಳ್ಲಿ ರತ್ನಮ್ಮ? ಇದೆಲ್ಲಾ ಅವರವರ ಇಷ್ಟ."

"ನಿಮಗೆ ಲಗ್ನ ಆಗಿದೆಯಾ.....ಮಕ್ಕಳೆಷ್ಟು?"

"ಇಲ್ಲ ರತ್ನಮ್ಮ, ನನಗೆ ಮಕ್ಕಳಿಲ್ಲ, ಮದುವೇನೂ ಆಗಿಲ್ಲ." ತೊದಲಿದಳು.

"ಮತ್ತೆ ನೀವೇ ಯಾಕೆ ಲಗ್ನ ಆಗ್ಬಾರ್ದು?"

"ರತ್ನಮ್ಮ..... ಹೀಗೆಲ್ಲಾ ಮಾತಾಡು ಅಂತ ನಿಂಗ್ಯಾರು ಹೇಳಿಕೊಟ್ರು?" ಉಷಾ ಗದರುವ ಧ್ವನಿಯಲ್ಲಿ ನುಡಿದಾಗ, ರತ್ನಮ್ಮ ಮೆತ್ತಗಾದಳು.

"ತಪ್ಪಾತು..... ಏನೋ ಹಿಂಗೇ ಆಡ್ಬಿಟ್ಟೆ. ನನಗೀಗ ಮತ್ತೆ ಮೂರು ತಿಂಗಳು. ಬಾಣಂತನಕ್ಕೆ ಹೊರಟು ಹೋಗ್ತೀನಿ. ಆಗ ಸಾರ್‌ಗೆ ಅಡಿಗೆ, ತಿಂಡೀನ ಮಾಡಿ ಹಾಕೋರು ಯಾರು ಅಂತ ಚಿಂತಿಸ್ತಾ ಇದ್ದೆ."

"ಅದನ್ನೆಲ್ಲಾ ಅವರೇ ಯೋಚಿಸಿ ಕೊಳ್ತಾರೆ. ನಂಗೆ- ನಿಂಗೆ ಯಾಕೆ? ಮದುವೆಯಾಗಿ ಎಷ್ಟು ವರ್ಷ ಆಯ್ತು?"

"ಮೂರು ವರ್ಷ ಆಯ್ತು, ಈ ಯುಗಾದಿಗೆ."

"ಮೂರು ವರ್ಷಕ್ಕೆ ಎರಡು ಮಕ್ಕಳು; ಆ ಮಗೂ ಇನ್ನೂ ಚಿಕ್ಕದಲ್ವಾ?"

"ಹೂಂ, ಚಿಕ್ಕದೇಯ, ಏನ್ಮಾಡೋದು? ಶಿವ ಕೊಟ್ಟಾಗ ಬೇಡ ಅನ್ನೋಕೆ ಆಗ್ತದಾ? ಇನ್ನೂ ಎದೆ ಹಾಲು ಬಿಡಿಸಿಲ್ಲ. ಅದೇ ಚಿಂತೆ ನಂಗೆ..." ಉಷಾಳ ಕಣ್ಣುಗಳು, ಅವಳ ತುಂಬಿದ ಎದೆಯ ಮೇಲೆ ನೋಟ ಬೀರಿದವು. ಮನದ ಮೂಲೆಯಲ್ಲೆಲ್ಲೋ ಮುಳ್ಳು ಚುಚ್ಚಿದಂತೆನ್ನಿಸಿತು. ಅವಳು ನಾಚಿದ್ದಳು. ಉಷಾಳ ಎದೆಯಾಳದಲ್ಲಿ ಅಡಗಿದ್ದ ಹಂಬಲ ತಲೆ ಎತ್ತಿತ್ತು. ರತ್ನಮ್ಮ, ಅವಳನ್ನೇ ಗಮನಿಸುತ್ತಿದ್ದಳು.

"ರತ್ನಮ್ಮಾ, ನೀನು ಇವರ ಮಗಳನ್ನು ನೋಡಿದೀಯಾ?"

"ಹೂಂನಮ್ಮಾ, ಚೆನ್ನಾಗಿದಾಳೆ. ನಾಲ್ಕು ವರ್ಷದ ಹುಡುಗಿ. ಸ್ಕೂಲಿಗೆ ಸೇರ್ರೊಂಡಿದೆ. ಅವರ ಅಣ್ಣಂಗೂ ಒಂದು ಹೆಣ್ಣು ಮಗು. ಆರು ವರ್ಷದ ಹುಡುಗಿ. ಒಟ್ಟಿಗೇ ಅಕ್ಕ-ತಂಗಿಯರಂತೆ ಬೆಳೀತಿವೆ. ನೀವು ಸಾರ್‌ರವರ ಲಗ್ನಕ್ಕೆ ಬಂದಿದ್ರಾ? ಆವಮ್ಮ ಹೆಂಗಿತ್ತು ನೋಡಾಕೆ?"

"ನಂಗೊತ್ತಿಲ್ಲ, ನಾನು ಮದುವೆಗೆ ಬಂದಿರ್ಲಿಲ್ಲ."

"ಮನೇಲಿ ಒಂದು ಫೋಟೋ ಕೂಡ ಇಲ್ಲ....." ತನಗೇ ಏನೋ ಅನ್ಯಾಯವಾದಂತೆ ನುಡಿದಳು.

ಅಷ್ಟರಲ್ಲಿ ರಂಗನಾಥ ಕೈ ಚೀಲಗಳನ್ನು ಹಿಡಿದು ಬಂದ.

ರತ್ನಮ್ಮ ಒಳ ನಡೆದಳು.

"ಇವೆಲ್ಲಾ ನನ್ನ ಅತ್ತಿಗೆಗೆ, ಅಣ್ಣನ ಮಕ್ಕಳಿಗೆ." ಉಷಾ ಕೇಳದಿದ್ದರೂ ಹೇಳಿದ.

"ಬನ್ನಿ ಹೋಗೋಣ." ಅವನು ರತ್ನಮ್ಮಂಗೆ ಏನೋ ಹೇಳಿ ಬಂದ.

ಇಬ್ಬರೂ ಮನೆಯಿಂದ ಹೊರಟರು.

"ಆಗಾಗ ಬರ್ತಿರಿ ಮೇಡಂ." ರತ್ನಮ್ಮ ಮೆಲುವಾಗಿ ನಕ್ಕು ನುಡಿದಳು.

"ತಲೆ ಹರಟೆ" ಎಂದು ಕೆಳದನಿಯಲ್ಲಿ ಬೈದರೂ, ಅವಳ ಕಡೆ ನೋಡಿ ನಸು ನಕ್ಕ. ಕಾರಿನಲ್ಲಿ ಕುಳಿತ ನಂತರ ನುಡಿದ.

"ಅವಳು ನನ್ನ ಮನದ ಮಾತನ್ನೇ ನುಡಿದಳು. ಆಗಾಗ ಬರ್ತಾ ಇರಿ ಮೇಡಂ, ಈ ಬಡವನ ಕುಟೀರಕ್ಕೆ."

"ನಿಜವಾಗಿಯೂ ಕರೀತಿದೀರಾ?"

"ಸುಳ್ಳ್ಯಾಕ್ಹೇಳ್ಲಿ?" ಕಾರನ್ನು ರಸ್ತೆಗೆ ಇಳಿಸಿದ.

'ನಾನು ಬರ್ಲೇಬೇಕು. ಮತ್ತೆ ಬರಲೇಬೇಕು' ಅವಳು ಮನದೊಳಗೆ ಹೇಳಿ ಕೊಂಡಳು.

"ಈ ಆಶ್ರಮಕ್ಕೆ ಬಂದಾಗ ಬರ್ತೀನಿ." ಹೊರ ನಾಲಿಗೆ ನುಡಿಯಿತು.

"ಸ್ವಾಮೀಜಿಯ ದರ್ಶನ ಮಾಡಲೇ ಬೇಕು ಎಂಬ ಹಂಬಲ ಯಾಕೆ?"

"ಏನಾದರೂ ಒಂದು ನೆಪ ಬೇಕಲ್ಲ!" ಅವಳು ನಕ್ಕಳು.

ಅವನೂ ದನಿಗೂಡಿಸಿದ.

"ನನ್ನ ಅಣ್ಣನ ಮನೆಗೆ ಎಂದಾದ್ರೂ ಕರ್ರೊಂಡು ಹೋಗ್ತೀನಿ. ಈಗ ಸೀದಾ ನಿಮ್ಮ ಮನೆಗೆ ಹೋಗೋಣ."

ಕಾರು ಸೀದಾ ಅವಳ ಮನೆಯ ಬಳಿಗೆ ಓಡಿತು. ಪಕ್ಕದ ಮನೆಯಿಂದ ಕೀಯನ್ನು ತಂದು, ಬಾಗಿಲನ್ನು ತೆರೆದಳು. ಅವನು ಒಳಬಂದು, ಸುತ್ತಲೂ

ಅವಲೋಕಿಸಿದ.

"ಬಹಳ ಹಳೇ ಮನೆ ಇದ್ಹಾಗಿದೆ. ಇಲ್ಲಿ ನೀವೊಬ್ರೇ ಇದೀರಾ?"

"ಹೂಂ, ಒಬ್ಬಳೇ. ಆದರೆ ಯಾಕೆ ಅಂತ ಕೇಳ್ಬೇಡಿ ಪ್ಲೀಸ್."

"ಸರಿ, ನಾನು ಬರ್ತೀನಿ. ಇದು ನನ್ನ ಫೋನ್ ನಂಬರ್ರು, ಇಟ್ಕೊಳ್ಳಿ."

ಅವಳು ವಿಸಿಟಿಂಗ್ ಕಾರ್ಡ್‌ನ್ನು ತೆಗೆದಿಟ್ಟುಕೊಂಡಳು.

"ಎರಡ್ದಿನದಿಂದ ಮನೆ ಅಸ್ತವ್ಯಸ್ತವಾಗಿದೆ. ಕೂತ್ಕೊಳ್ಳಿ ಅಂತ ಹೇಳೋಕೂ ಮುಜುಗರವಾಗ್ತಿದೆ."

"ಪರವಾಗಿಲ್ಲ" ಎಂದು ಹೇಳಿ ಅವನು ಮನೆಯಿಂದ ಹೊರಬಂದ. ಅಕ್ಕಪಕ್ಕ ನೋಡದೇ ಸೀದಾ ಕಾರಿನ ಬಳಿಗೆ ಬಂದ, ಕಾರು ಚಲಿಸಿತು.

೭

"ನಾನು ಮತ್ತೆ ಮದುವೆಯಾಗೋಣ ಅಂತ ಅಂದ್ಕೊಂಡಿದೀನಿ." ರಂಗನಾಥ, ಅಣ್ಣ ಅನಂತನಿಗೆ, ಹೇಳಿದ.

ಅತ್ತಿಗೆ ಶಾಂತ ಹುಬ್ಬೇರಿಸಿದಳು,

"ಯಾಕತ್ತಿಗೆ, ಆಶ್ಚರ್ಯ ಆಗ್ತಿದೆಯಾ?"

"ಅದೇನು ಹೀಗೆ ದಿಢೀರನೇ ಅಂತ ಯೋಚಿಸ್ತಿದ್ದೆ. ಹುಡುಗೀನ ನಾವು ನೋಡ್ಬೇಕೋ...... ನೀನೇ ನೋಡ್ಕೊಂಡಿದೀಯೋ......?"

"ನಾನೇ ನೋಡ್ಕೊಂಡಿದೀನಿ. ಆದರೆ ಅವಳ ಮನಸ್ನಲ್ಲಿ ಏನಿದೆಯೋ ಗೊತ್ತಿಲ್ಲ."

"ಹುಡುಗಿ ಯಾರು ಅಂತ ಕೇಳಬಹುದಾ?"

"ಹೂಂ. ಉಷಾ ಅಂತ. ಈ ಹಿಂದೆ ನನ್ನನ್ನು ಒಪ್ಪಿರಲಿಲ್ಲ...." ಕ್ಷೀಣವಾಗಿ ನಕ್ಕ.

"ಅವಳು ಈಗ ಒಪ್ತಾಳೆ ಅಂತ ಹೇಗೆ ಹೇಳ್ತೀಯಾ?"

"ಈಗ ಒಂಟಿಯಾಗಿದಾಳೆ. ಇಷ್ಟು ವರ್ಷಗಳ ನಂತರ ನನಗೆ ಅಕಸ್ಮಾತ್ತಾಗಿ ಸಿಕ್ಕಿದಳು. ತುಂಬಾ ಮಾತನಾಡಿದೆವು. ನನ್ನ ಪ್ರಪೋಸಲ್‌ಗೆ ಅವಳು ಇನ್ನೂ ಉತ್ತರ ಹೇಳಿಲ್ಲ."

"ಅವಳು ಒಪ್ಪದಿದ್ದರೆ, ನಿರಾಸೆಯಾಗ್ಬೇಡ. ನಾನು ಬೇರೆ ಹೆಣ್ಣು ನೋಡ್ತೀನಿ."

"ಬೇಡ ಅತ್ಗೆ, ಮದುವೆ ಆದ್ರೆ ಉಷಾನೇ. ಇಲ್ದಿದ್ರೆ ಹೀಗೇ ಇದ್ದು ಬಿಡ್ತೀನಿ."

"ಎಷ್ಟೋ ವರ್ಷಗಳ ನಂತರ ಮನಸ್ಸು ಬದಲಾಯಿಸಿದೀಯ. ಅವಳೇ ಆಗ್ಬೇಕು ಅಂತ ಹಠ ಯಾಕೆ? ಅವಳು ಒಪ್ಪಿದರೆ ಸರಿ....."

"ನೀವು ಅವಳನ್ನು ಒಪ್ಪಿಸಬೇಕು ಅತ್ಗೆ....."

"ನಾನಾ.......ಹೇಗೆ?"

"ಹೇಗೆ ಒಪ್ಪಿಸ್ತೀರೋ ನಂಗೊತ್ತಿಲ್ಲ." ಎನ್ನುತ್ತಾ ಅವಳ ಮನೆಯ ವಿಳಾಸವನ್ನು ಕೊಟ್ಟು ಹೇಳಿದ.

"ಅವಳು ಒಬ್ಬಳೇ ಇದಾಳೆ. ನೀವು ಅವಳ ಪರಿಚಯ ಮಾಡಿಕೊಂಡು ಮಾತನಾಡಿ, ಪ್ಲೀಸ್...."

"ನೀವ್ಯಾರು ಅಂತ ಕೇಳಿದ್ರೆ.....?"

"ನಿಜಾನೇ ಹೇಳಿಬಿಡಿ, ನಿಮ್ಮ ಮಾತಿಗೆ ಅವಳು ಇಲ್ಲ ಎನ್ನುವುದಿಲ್ಲ."

"ಆಯ್ತು, ನಾನು ಪ್ರಯತ್ನ ಪಡ್ತೀನಿ."

"ಥ್ಯಾಂಕ್ಸ್ ಅತ್ಗೇ." ರಂಗನಾಥ ಮುಗುಳ್ನಗೆ ಬೀರಿದ.

* * *

ಮುಂಬಾಗಿಲನ್ನು ತೆರೆದು, ಶಾಂತಳನ್ನೇ ದುರುದುರು ನೋಡಿದ ಶೇಷಾದ್ರಿ.

"ಉಷಾ......ಇದಾರಾ? ನಾನು ಶಾಂತ ಅಂತ, ಅವಳ ಸ್ನೇಹಿತೆ."

"ಕೂತ್ಕೊಳ್ಳಿ ಕರೀತೀನಿ." ಒಳಗಿನಿಂದ ಉಷಾ ಬರಲು ಕೆಲವು ನಿಮಿಷಗಳೇ ಬೇಕಾಯ್ತು. ಉಷಾ ಏನನ್ನಾದರೂ ಪ್ರಶ್ನಿಸುವ ಮೊದಲೇ ಶಾಂತ ಕಣ್ಣು ಸಂಜ್ಞೆ ಮಾಡಿದಳು.

"ಏನೇ ಉಷಾ, ನನ್ನ ಗುರುತು ಸಿಗಲಿಲ್ವೇನೇ?" ಉಷಾ ಬೆಪ್ಪಾಗಿ ನಿಂತಳು.

"ನಿನಗೆ ನನ್ನ ಗುರುತು ಸಿಗಲಿಲ್ಲ ಅಂತ ಕಾಣುತ್ತೆ. ಪಕ್ಕದಲ್ಲೇ ಒಬ್ಬರ ಮನೆಗೆ ಬಂದಿದ್ದೆ. ನಿನ್ನ ಹತ್ರ ತುಂಬಾ ಮಾತನಾಡಬೇಕಾಗಿತ್ತು. ಅದಕ್ಕೇ ಬಂದೆ." ಅವಳ ಕೈ ಹಿಡಿದು ಕೂರಿಸಿದಳು.

ಪಿಸುದನಿಯಲ್ಲಿ, "ನಾನು ರಂಗನ ಅತ್ತಿಗೆ" ಎಂದಷ್ಟೇ ಹೇಳಿದಳು.

ಉಷಾ ಗಾಬರಿಗೊಂಡರೂ, ಸಾವರಿಸಿಕೊಂಡಳು.

"ಕೂತ್ಕೋ.....ಈಗ್ಬಂದೆ" ಎಂದು ಹೇಳಿ ಒಳಗೆ ಹೋದಳು. ಕೆಲವೇ ಸೆಕೆಂಡುಗಳಲ್ಲಿ ಶೇಷಾದ್ರಿ ಕೈ ಚೀಲ ಹಿಡಿದು ಹೊರ ನಡೆದ.

"ನೀವ್ಯಾಕೆ ಬಂದ್ರಿ? ನನ್ನ ಮಾವಂಗೆ ಗೊತ್ತಾದ್ರೆ ಕಷ್ಟ ಆಗುತ್ತೆ."

"ಈಗ್ಲೂ ಯಾಕೆ ಹೆದರ್ತೀಯಾ ಅವರಿಗೆ?"

"ಹಾಗಿದೆ ನನ್ನ ಸ್ಥಿತಿ. ದಯವಿಟ್ಟು ಯಾವ ಮಾತನ್ನೂ ಆಡ್ಬೇಡಿ."

"ಇಲ್ಲ ಆಡಲ್ಲ. ಧೈರ್ಯವಾಗಿರು. ಹೊರಗೇನಾದ್ರೂ ಬರ್ತೀಯಾ ಸುತ್ತಾಡಿ ಬರೋಣ."

"ಇವತ್ತು ಬೇಡ. ನಾಳೆ-ನಾಡಿದ್ದರಲ್ಲಿ ನಾನೇ ಬರ್ತೀನಿ."

"ನಾನು ಬಂದಿದ್ದೆ ಅಂತ ರಂಗನಿಗೆ ಫೋನ್ ಮಾಡಿ ತಿಳಿಸಿ ಬಿಡು. ಅವನಿಗೆ

ಖುಷಿಯಾಗುತ್ತೆ. ನಾನಿನ್ನು ಬರ್ಲಾ?"

"ಕಾಫೀ ಮಾಡಿಕೊಡ್ತೀನಿ. ಮಾವ ಹಣ್ಣು ತರೋಕೆ ಹೋಗಿದಾರೆ."

"ನಿನ್ನ ಮಾವನ್ನ ನೀನು ಮದುವೆಯಾಗಿದ್ದೀಯಾ?"

"ಹೂಂ...... ಆದರೆ ಈ ವಿಷಯವನ್ನು ರಂಗನಾಥನಿಗೆ ಹೇಳಬೇಡಿ."

"ಯಾಕೆ?"

"ಯಾಕೆ? ಅಲ್ಲಿ ಏನು ನಡೀತು ಅಂತ ನಿಮ್ಮ ಮೈದುನ ಹೇಳಿರಬೇಕಲ್ಲ."

"ಏನನ್ನೂ ಹೇಳಲಿಲ್ಲ. ಆದರೆ ನಂಗೆ ಈಗ ಅರ್ಥವಾಗಿದೆ. ಸುಳ್ಳು ಹೇಳಿ ಅವನ ಸಂಗವನ್ನು ಬಯಸಿದೆ. ಪಾಪ, ನಮ್ಮ ರಂಗ ಮುಗ್ಧ. ಅವನಿಗೆ ಸಿಗುವ ಹೆಣ್ಣುಗಳೆಲ್ಲ ಮೋಸಗಾತಿಯರೇ."

"ಅವರೂ ನನಗೆ ಸುಳ್ಳು ಹೇಳಿದಾರೆ. ಹೆಂಡತಿ ಓಡಿಹೋದಳು ಅಂತ ಹೇಳಲಿಲ್ಲ. ಸತ್ತು ಹೋಗಿದಾಳೆ, ವಿಧುರ ಅಂತಂದ್ರು."

"ಮತ್ತೇನ್ಮಾಡ್ತಾನೆ? ಚರಿತ್ರ ಹೀನ ಹೆಣ್ಣಿನ ಗಂಡ ಅಂತ ಹೇಳ್ಕೊಳ್ಳೋಕೆ ಹಿಂಸೆ ಆಗಲ್ವಾ? ಆದರೆ ನೀನ್ಯಾಕೆ ಸುಳ್ಳು ಹೇಳಿದೆ...... ಅವನಿಗೆ ಮೋಸ ಮಾಡಿದೆ.....? ನಿನ್ನ ಗಂಡನಿಗೂ ಮೋಸ ಮಾಡಿದೆಯಲ್ಲ!"

"ನನ್ನ ಗಂಡನಿಗೆ ನಾನು ಮೋಸ ಮಾಡಲಿಲ್ಲ. ಅವರೇ ನನಗೆ ಅನ್ಯಾಯ ಮಾಡಿದಾರೆ. ನಾನು, ಅವರನ್ನು ಪ್ರೀತಿಸಿದೆ. ಹಾಗಾಗಿ ಬೇರೆ ಯಾರನ್ನೂ ಮದುವೆ ಯಾಗಲಿಲ್ಲ ಅಥವಾ ಬೇರೆ ಯಾರ ಸಂಗವನ್ನೂ ಮಾಡಲಿಲ್ಲ. ಅಲ್ಲಿ ನಡೆದುದು ಆಕಸ್ಮಿಕ. ನಾನು ಹೋದದ್ದೂ ಒಂದು ಆಕಸ್ಮಿಕ. ಇನ್ನೆಂದೂ ನಾನು ಅಲ್ಲಿಗೆ ಹೋಗು ವುದಿಲ್ಲ."

"ರಂಗನಿಗೆ ನಿರಾಸೆಯಾಗುತ್ತೆ. ಮೊದಲೇ ನೊಂದವನು."

"ಅದಕ್ಕೆ ನಾನೇನು ಮಾಡ್ಲಿ? ನಾನೂ ಇಕ್ಕಟ್ಟಿನ ಪರಿಸ್ಥಿತಿಯಲ್ಲಿದೀನಿ. ಒಂದು ದಿನ ಅಲ್ಲಿ ಉಳಿದುಕೊಂಡಿದ್ದಕ್ಕೆ ಪ್ರತಿಫಲವನ್ನೂ ಕೊಟ್ಟಿದ್ದೀನಿ..... ನನ್ನ ಬಳಿ ಬೇರೆ ಏನೂ ಇರಲಿಲ್ಲ."

"ಹೀಗೆಲ್ಲಾ ಮಾತನಾಡೊಕ್ಕೆ ನಾಚಿಕೆಯಾಗಲ್ವಾ? ಹೆಂಗಸಿನ ಜಾತಿಗೇ ಅವಮಾನ."

"ಮಾನ, ಅಪಮಾನ ಎಲ್ಲಾ ಹೆಂಗಸಿಗೇ ಮಾತ್ರ ಮೀಸಲಿಲ್ಲ. ನನ್ನ ಕಷ್ಟ ಏನು ಅಂತ ನನಗೆ ಗೊತ್ತು. ನನ್ನಿಂದ ತಪ್ಪಾಗಿದೆ ನಿಜ..... ಕ್ಷಮಿಸಿ....." ಅವಳು ಕೈ ಮುಗಿದಳು. ಗೇಟು ಕಿರ್ರೆಂದಿತು. ಶೇಷಾದ್ರಿ ಒಳ ಬಂದ. ಉಷಾ, ಹಣ್ಣುಗಳನ್ನು ತಟ್ಟೆಯಲ್ಲಿಟ್ಟು ಕೊಟ್ಟಳು. ಶಾಂತ ಹೊರಟಳು. ಶೇಷಾದ್ರಿ ಹಲ್ಲು ಕಿರಿದ. ಗೇಟಿನವರೆಗೆ ಉಷಾ, ಅವಳ ಹಿಂದೆ ಬಂದಳು.

"ರಂಗನಾಥ, ಈಗಾಗ್ಲೇ ತುಂಬಾ ನೊಂದಿದ್ದಾನೆ. ಈಗ ನಿನ್ನ ಮೇಲೆ ಆಸೆಯ ನ್ನಿಟ್ಟುಕೊಂಡಿದ್ದಾನೆ. ನಿರಾಸೆಯ ಪರಿಣಾಮ ಏನಾಗುತ್ತೋ, ಅದಕ್ಕೆ ನೀನೇ ಹೊಣೆಯಾಗ್ತೀಯ."

"ಪ್ಲೀಸ್..... ಹೆದರಿಸ್ಬೇಡಿ. ನಾನೂ ಸಾಕಷ್ಟು ಅನುಭವಿಸಿದೀನಿ. ನಿಮ್ಮ ಮೈದುನಂಗೆ ತಿಳುವಳಿಕೆ ಹೇಳಿ."

"ಇಲ್ಲ ಉಷಾ, ನನ್ನ ತಿಳವಳಿಕೆಯ ಮಾತುಗಳು ಯಾವ ಪರಿಣಾಮವನ್ನೂ ಬೀರುವುದಿಲ್ಲ. ಅವನು ಹಠವಾದಿ. ಆದರೆ ತುಂಬಾ ಒಳ್ಳೆಯವನು. ಅವನ ಮನ ನೋಯುವಂತಹ ಮಾತುಗಳನ್ನು ನಾನು ಹೇಗೆ ಆಡಲಿ? ಒಮ್ಮೆ ನೀನೇ ಅವನೊಡನೆ ಮಾತನಾಡು. ನಿನ್ನ ಮನಸ್ನಲ್ಲಿ ಏನಿದೆ ಅಂತ ಹೇಳು. ಅವನಿಗೆ ಅರ್ಥವಾಗಬಹುದು. ಒಂದೇ ಒಂದು ಸಾರಿ, ಅವನಿಗಾಗಿ ಪ್ಲೀಸ್......"

"ನೋಡೋಣ...." ಅವಳು ಅನುಮಾನದಿಂದ ಮನೆಯ ಕಡೆ ತಿರುಗಿ ನೋಡಿ, ನುಡಿದಳು.

ಶಾಂತ ರಸ್ತೆಗೆ ಇಳಿದಳು.

* * *

ಶೇಷಾದ್ರಿ ನಾಲ್ಕು ದಿನಗಳ ಮಟ್ಟಿಗೆ ಹಳ್ಳಿಗೆ ಹೋಗಿ ಬರುತ್ತೇನೆಂದು ಹೊರಟ. ಅವನು ಅತ್ತ ಹೋದ ಕೂಡಲೇ ಉಷಾ, ರಂಗನಾಥನ ಮನೆಗೆ ಫೋನ್ ಮಾಡಿದಳು. ಅರ್ಧಗಂಟೆಯೊಳಗೆ ಅವನು, ಅವಳ ಮನೆಯ ದಿಕ್ಕಿಗೆ ಕಾರನ್ನು ಓಡಿಸಿದ.

ಅವನಿಗಾಗಿ ಕಾದಿರುವ, ಕಾತುರತೆಯನ್ನೇನೂ ತೋರಲಿಲ್ಲ ಅವಳು. ಆದರೂ ಮುಗುಳ್ನಗುತ್ತಾ ಸ್ವಾಗತಿಸಿದಳು.

"ಬರ್ತೀರಾ..... ನಮ್ಮ ಅಣ್ಣನ ಮನೆಗೆ ಹೋಗಿ ಬರೋಣ." ಉತ್ಸಾಹದಿಂದ ಕೇಳಿದ.

ಅವಳು 'ಇಲ್ಲ' ಎನ್ನುವಂತೆ ತಲೆಯಾಡಿಸಿದಳು.

"ಯಾಕೆ ಉಷಾ ಒಂಥರಾ ಇದೀರಲ್ಲ. ಏನಾಯ್ತು?" ವಿಶ್ವಾಸದಿಂದ ಕೇಳಿದ.

ಅವಳು, ಅವನ ಕೈಗೆ ಷಾಪಿಂಗ್ ಚೀಲವನ್ನು ಕೊಟ್ಟಳು.

"ಇದರಲ್ಲಿ ನೀವು ಕೊಡಿಸಿದ ಸೀರೆ, ಬಟ್ಟೆಗಳಿವೆ. ರತ್ನಮ್ಮನ ಸೀರೆಯನ್ನು ಅವಳಿಗೆ ಕೊಟ್ಟು ಬಿಡಿ."

ಅವನು ಕೆಟ್ಟದಾಗಿ ನಕ್ಕ.

"ಇದಕ್ಕೋಸ್ಕರ ನನ್ನನ್ನು ಬಾ ಅಂತ ಅಂದ್ರಾ? ನಾನು ಅಂದುಕೊಂಡದ್ದೇ ಬೇರೆ....." ತುಂಟತನದಿಂದ ಕೇಳಿದ.

"ಸಾರಿ ರಂಗನಾಥ್, ಒಂದು ಸಾರಿ ಏನೋ ತಪ್ಪು ನಡೆದು ಹೋಯ್ತು.

ಮತ್ತೆ ತಪ್ಪಾಗುವುದು ಬೇಡ."

"ತಪ್ಪು ಒಂದ್ಸಾರಿ ನಡೆದ್ರೂ ತಪ್ಪೇ..... ಮತ್ತೆ ಮತ್ತೆ ನಡೆದರೂ ತಪ್ಪೇ. ತಪ್ಪುಗಳನ್ನು ಸರಿಪಡಿಸಿಕೊಳ್ಳೋಣ. ಅತ್ತಿಗೆಗೆ ಹೇಳಿದ್ದೆ. ಅವರು ಬರಲಿಲ್ವಾ?"

ಅವಳು ಉತ್ತರಿಸಲಿಲ್ಲ.

"ಅತ್ತಿಗೆ, ನನಗೆ ತಾಯಿ ಸಮಾನ. ಅವರ ಸಹಕಾರವಿಲ್ಲದೇ ನಾನು ಯಾವುದನ್ನೂ ಮುಂದುವರೆಸುವುದಿಲ್ಲ."

ಅವಳು ಕೊಂಕು ನಗೆ ನಕ್ಕಳು.

"ಆ ರಾತ್ರಿ ನನ್ನ ಬಳಿಗೆ ಬಂದಾಗ, ಅತ್ತಿಗೆಯ ಪರ್ಮಿಷನ್ ತಗೊಂಡಿದ್ರಾ?" ಸವಾಲೆಸೆದಳು.

"ಅದು ನಡೆದದ್ದು ಆಕಸ್ಮಿಕ. ಅಲ್ಲದೇ ಅದು ಪರ್ಸನಲ್."

"ಆದರೆ ನಮ್ಮ ಪರ್ಸನಲ್ ವಿಷಯವನ್ನು ನಿಮ್ಮ ಅತ್ತಿಗೆ ಹೇಳಿಲ್ಲ ಅಲ್ವಾ..... ಯಾಕೆ?"

"ಬೆಡ್ ರೂಮ್‌ನಲ್ಲಿ ನಡೆಯುವ ಸ್ತ್ರೀ-ಪುರುಷರ ಸಂಬಂಧವನ್ನು ಯಾರೂ, ಯಾರಿಗೂ ಹೇಳೋಲ್ಲ."

"ನಾನು, ನಿಮ್ಮ ಅತ್ತಿಗೆಗೆ ಹೇಳಿಬಿಟ್ಟೆ."

ಅವನ ಮುಖದ ಬಣ್ಣ ಬದಲಾಗಿತ್ತು. ನಿಂತಲ್ಲೇ ಚಡಪಡಿಸಿದ.

"ನೀವು ಹೇಳ್ಬಾರ್ದಾಗಿತ್ತು. ಅತ್ತಿಗೆ ಏನಂದುಕೊಳ್ತಾರೆ?"

"ನಿಮ್ಮ ಒಳ್ಳೆಯತನ ಅವರಿಗೂ ಗೊತ್ತಾಗ್ಲಿ ಅಂತ ಹೇಳ್ದೆ."

"ನಾನು ಕೆಟ್ಟವನು ಅಂತ ಬ್ಲೇಮ್ ಮಾಡ್ತಿದೀರಾ?"

"ನೀವೊಬ್ಬರೇ ಅಲ್ಲ. ಎಲ್ಲಾ ಗಂಡಸರೂ ಕೆಟ್ಟವರೇ, ಸ್ವಾರ್ಥಿಗಳು. ಹೆಣ್ಣಿನ ಮನಸ್ನಲ್ಲಿ ಏನಿದೆ ಅಂತ ಅರ್ಥಮಾಡ್ಕೊಳ್ಳೋಕೆ ಪ್ರಯತ್ನವನ್ನೇ ಮಾಡಲ್ಲ. ಕೇವಲ ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ತಾರೆ. ಹೆಣ್ಣಿನ ಭಾವನೆಗಳಿಗೆ ಬೆಲೆಯನ್ನೇ ಕೊಡಲ್ಲ."

"ಹಾಗೆಲ್ಲಾ ಆಡಿದರೆ ನನಗೆ ನೋವಾಗುತ್ತೆ. ನಾನು ಸ್ವಾರ್ಥಿಯಲ್ಲ. ಸಮಯ, ಸಂದರ್ಭಗಳಲ್ಲಿ, ಕೆಲವೊಮ್ಮೆ ಸಿಕ್ಕಿ ಬೀಳುತ್ತೇವೆ. ನಾನೂ ಅವಮಾನದಿಂದ ನೊಂದು ಬೆಂದಿದ್ದೇನೆ. ಆದರೆ ನಿಮ್ಮನ್ನು ಕಂಡಾಗ, ನನ್ನ ಭಾವನೆಗಳು ಬದಲಾದವು. ಹಾಗೇ ಸತ್ತ ಆಸೆಗಳು ಗರಿಗೆದರಿ ಹಾರಿದವು. ನನ್ನ ಆಸೆಗೆ ನೀವು ಒತ್ತಾಸೆ ನೀಡಿದಿರಿ. ನಮ್ಮಿಬ್ಬರಿಗೂ ಅದು ತಪ್ಪು ಅಂತ ಅನ್ನಿಸಲಿಲ್ಲ. ಯಾಕೆ ಹೀಗೆ ಮಾತಾಡ್ತಿದೀರಿ? ನೀವ್ಯಾಕೋ ಅಪ್ಸೆಟ್ ಆಗಿರುವಂತಿದೆ. ನಾನು ಈಗ ಹೋಗ್ತೀನಿ."

"ದಯವಿಟ್ಟು ಈ ಸೀರೆಗಳನ್ನು ತಗೊಂಡ್ಹೋಗಿ."

"ಬೇಡ, ನಿಮಗೆ ಬೇಡವಾದರೆ, ಕೆಲಸದವಳಿಗೆ ಕೊಟ್ಟು ಬಿಡಿ. ನಾನು ಒಂದು

ಸಲ ಕೊಟ್ಟಿದ್ದನ್ನು ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ."

"ಇಲ್ಲ, ನೀವು ಇದನ್ನು ತೆಗೆದುಕೊಳ್ಳಲೇಬೇಕು." ಎನ್ನುತ್ತಾ ಬಲವಂತವಾಗಿ ಅವನ ಕೈಗೆ ಚೀಲವನ್ನು ತುರುಕಿದಳು. ಕೈಗೆ ಕೈ ತಾಕಿತು. ಅವನು ಬಲವಾಗಿ ಅವಳ ಕೈಯನ್ನು ಹಿಡಿದ.

"ನೀವು, ನನಗೆ ಅವಮಾನ ಮಾಡ್ತಾ ಇದೀರಿ. ನಮ್ಮಿಬ್ಬರಿಂದಲೂ ನಡೆದ ತಪ್ಪಿಗೆ ನನಗೆ ಮಾತ್ರ ಶಿಕ್ಷೆ....... ಇದು ತಪ್ಪಲ್ವಾ? ನೀವು ನನ್ನಿಂದ ಏನನ್ನೋ ಮುಚ್ಚಿಡ್ತಿದೀರಿ. ಅದಕ್ಕೇ ಹೀಗೆ ಬಿಹೇವ್ ಮಾಡ್ತಿದೀರಿ. ನಿಮಗೆ ಏನೇ ಸಮಸ್ಯೆ ಇದ್ದರೂ, ನನ್ನೊಂದಿಗೆ ಹೇಳಿ. ನಾನು ಹೆಲ್ಪ್ ಮಾಡ್ತೀನಿ."

"ನಿಮಗೆ ಹೇಳಿದರೆ ನನಗೇನು ಲಾಭ? ನೀವು ಪರಿಹರಿಸಲಾಗದೇ ಇದ್ದರೆ.....?"

"ಸಮಸ್ಯೆ ಏನೂಂತ ಹೇಳಿ, ನಾನು ಸಹಾಯ ಮಾಡ್ತೀನಿ." ಅವಳ ತಲೆಯನ್ನು ತನ್ನ ಎದೆಗೆ ಒರಗಿಸಿಕೊಂಡು, ನೆರವೇರಿಸಿದ.

ಅವನ ಸಾಂತ್ವನದ ಕೈಯ ಶಾಖ ತಟ್ಟುತ್ತಿದ್ದಂತೆ, ಅವಳ ಕಣ್ಣೀರಿನ ಕಟ್ಟೆ ಕರಗಿತು. ಅಳಲಾರಂಭಿಸಿದಳು. ಅವನು ಮುಖವೆತ್ತಿ ಅವಳ ಕಣ್ಣೀರನ್ನು ಒರೆಸಿದ.

"ಅಳುವಂಥಾದ್ದು ಏನಾಯ್ತು? ನಿಮ್ಮ ಜೊತೆಗೆ ನಾನಿದ್ದೀನಿ. ನಿಮ್ಮ ಸಮಸ್ಯೆ ಏನೂಂತ ನನಗೆ ಧೈರ್ಯವಾಗಿ ಹೇಳಿ, ಯಾವ ಅಳುಕೂ ಬೇಡ."

"ನನಗೆ ಒಂದು ಮಗು ಬೇಕು, ಸನ್ನದೇ ಆದ ಒಂದು ಮಗು ನನಗೆ ಬೇಕು." ಗಹಗಹಿಸಿ ನಕ್ಕ.

"ಇದು ಯಾವ ಮಹಾ ಸಮಸ್ಯೆ? ನಮ್ಮಿಬ್ಬರಿಗೂ ಯೌವನವಿದೆ. ಸಮಯವಿದೆ. ಒಂದಲ್ಲದಿದ್ದರೆ, ಎರಡು, ಮೂರು ಮಕ್ಕಳಾಗಲಿ. ಸಾಕಿ ಬೆಳೆಸುವ ತಾಕತ್ತು ನನಗಿದೆ."

"ಅದು ಹಾಗಲ್ಲ.....ನನಗೆ ಆತಂಕದಿಂದ ಭಯ ಆಗುತ್ತೆ."

"ಭಯ ಯಾಕೆ ಉಷಾ? ಒಬ್ಬ ಸ್ತ್ರೀ ತಾನು ತಾಯಿಯಾಗುವಾಗ, ತನ್ನ ಪ್ರಾಣವನ್ನೇ ಒತ್ತೆ ಇಟ್ಟು, ಪುನರ್ಜನ್ಮ ಪಡೆದು, ಮಗುವಿಗೆ ಜನ್ಮ ಕೊಡುತ್ತಾಳೆ. ಈ ಸೃಷ್ಟಿಯ ವರ ಸ್ತ್ರೀಯರಿಗೆ ಮಾತ್ರ. ತಾಯ್ತನ ಸ್ತ್ರೀಯರ ಹಕ್ಕು. ಈ ಎಲ್ಲಾ ಅನುಭವಗಳು ಸ್ತ್ರೀಯರ ಸ್ವತ್ತು. ನೋವು, ಆತಂಕ ಏನೇ ಇದ್ದರೂ, ತನ್ನದೇ ಆದ ಮಗುವಿನ ಮುಖವನ್ನು ಕಂಡ ಕೂಡಲೇ ನಲಿವು, ನೆಮ್ಮದಿ ಉದ್ಭವಿಸುತ್ತದೆ. ತನ್ನೆಲ್ಲಾ ಕಷ್ಟಗಳನ್ನು ಮರೆಯುತ್ತಾಳೆ. ಇದೇ ಒಂದು ಪವಾಡ.... ಇಲ್ಲಿ ಆತಂಕಕ್ಕೆ ಆಸ್ಪದವೇ ಇಲ್ಲ." ಅವನು ಹೇಳುತ್ತಲೇ ಇದ್ದ. ಅವಳು, ಅವನ ಬಾಯ ಮೇಲೆ ಕೈಯನ್ನಿಟ್ಟಳು.

"ಈ ಅನುಭವಗಳೆಲ್ಲ ನನಗೆ ಬೇಕು. ಈ ಪವಾಡ ನನ್ನೊಂಧಿಗೆ ನಡೆಯಬೇಕು. ನನಗೆ ಒಂದು ಮಗು ಬೇಕು. ನಾನು ತಾಯಿಯಾಗಬೇಕು." ಅವಳು ಉನ್ಮಾದಿನಿ

ಯಂತೆ ಬಡಬಡಿಸಿದಾಗ, ಅವನು ಅವಳನ್ನು ನಿಧಾನವಾಗಿ ಅಲ್ಲಿದ್ದ ದಿವಾನದ ಮೇಲೆ ಕೂರಿಸಿದ.

"ಉಷಾ, ನಮಗೆ ಮಗು ಆಗಿಯೇ ಅಗುತ್ತದೆ. ಆ ಭರವಸೆಯನ್ನು ನಾನು ಕೊಡ್ತೀನಿ."

"ಆ ಭರವಸೆ ನನಗಿಲ್ಲ."

"ಯಾಕೆ ಹೀಗೆ ಮಾತಾಡ್ತೀರಿ, ಉಷಾ? ನನಗೆ ಒಬ್ಬಳು ಮಗಳಿರುವ ವಿಚಾರ ನಿಮಗೆ ಗೊತ್ತು ಅಲ್ವಾ?"

"ನಾನೇ ಬಂಜೆ ಆಗಿದ್ರೆ....?"

"ಹಾಗಾಗಲು ಸಾಧ್ಯವೇ ಇಲ್ಲ. ಯಾವ ಹೆಂಗಸೂ ಬಂಜೆಯಲ್ಲ. ಅವಳಲ್ಲಿ ಮಾತೃತ್ವ ಜನ್ಮಗತವಾಗಿ ಬಂದಿರುತ್ತೆ. ನೀವು ಬಂಜೆಯಲ್ಲ. ತಾಯಿಯಾಗ್ತೀರಿ. ಆದರೆ ಅದಕ್ಕೆ ಸಮಯ ಬೇಕು. ತಾಳ್ಮೆ ಬೇಕು. ಒಂಭತ್ತು ತಿಂಗಳು ಒಡಲಿನಲ್ಲಿ ಮಗು ಬೆಳೆಯಬೇಕು. ನಂತರವೇ ತಾಯಿಯ ಗರ್ಭದಿಂದ ಹೊರಬರುತ್ತೆ. ನಿಮಗೂ ಇದೆಲ್ಲಾ ಗೊತ್ತಿರಬೇಕಲ್ಲ."

"ಗೊತ್ತಿದೆ, ಆದರೆ..... ನಾನ್ಯಾಕೆ ಗರ್ಭಿಣಿಯಾಗಿಲ್ಲ? ನನಗೇಕೆ ಮಗು ಹುಟ್ಟಲಿಲ್ಲ? ಮಾವ ನನಗೆ ಮೋಸ ಮಾಡಿದ."

ರಂಗನಾಥ ಗಂಭೀರನಾದ. ಮಾವನೊಡನೆ ದೇಹ ಸಂಬಂಧ ಇದ್ದುದನ್ನು ತಿಳಿಸಿದ್ದಳಲ್ಲ!

"ಮೊದಲು ನಾನು ಗರ್ಭಿಣಿ ಆಗಬೇಕು. ನಾನು ಬಂಜೆ ಅಲ್ಲ ಅಂತ ನನ್ನ ಮಾವನಿಗೆ ತಿಳಿಯಬೇಕು. ಅವನು, ನನ್ನನ್ನು ಹಂಗಿಸಿದ್ದನಲ್ಲವೇ? ಅದು ಸುಳ್ಳಾಗಬೇಕು. ನಾವು ಸುಳ್ಳು ಮಾಡೋಣ. ನೀವು ಸಹಾಯ ಮಾಡ್ತೀರಿ ಅಲ್ವಾ?"

"ಅದಕ್ಕೇ ನಾನು ಹೇಳಿದ್ದು. ನಾವು ಬೇಗ ಮದುವೆ ಆಗೋಣ."

"ಮದುವೆ ಬೇಡ, ನಾನು ಮೊದಲು ಗರ್ಭವತಿ ಆಗಿದೀನಿ ಅಂತ ಮಾವನಿಗೆ ತಿಳಿಯಬೇಕು. ಅವನು ನನಗೆ ಬಿಡುಗಡೆ ಕೊಡಬೇಕು. ನಂತರವೇ ನಮ್ಮ ಮದುವೆ...."

"ಇದು ಹೇಗೆ ಸಾಧ್ಯ?"

"ಯಾಕೆ ಸಾಧ್ಯವಿಲ್ಲ? ನೀವು ಇದಕ್ಕೆ ಒಪ್ಪಿಕೊಂಡರೆ ನಮ್ಮಿಬ್ಬರ ಮದುವೆ, ಏನಂತೀರಿ?"

"ನಿಮಗೆ ಮಗುವಾಗದಿದ್ದರೂ, ನಾನು ನಿಮ್ಮನ್ನು ದೂಷಿಸೊಲ್ಲ. ನನ್ನ ಸಂಗಾತಿಯಾಗಿ ನೀವು ಬೇಕು ಅಷ್ಟೇ."

"ಆದರೆ, ಆಡಿಸಲು ನನಗೆ ಒಂದಾದರೂ ಮಗು ಬೇಕು. ನಾನು ಗರ್ಭಿಣಿ ಯಾಗಿದೀನಿ ಅಂತ ಖಚಿತವಾದರೆ ಮಾತ್ರ ನಾನು ಮದುವೆಗೆ ಒಪ್ಪುವುದು."

"ನಿಮ್ಮ ಕಂಡೀಷನ್ ವಿಚಿತ್ರವಾಗಿದೆ. ಆದರೆ ನನಗೆ ಯಾವ ಭಯವೂ ಇಲ್ಲ. ಈಗಾಗಲೇ ನಮ್ಮಿಬ್ಬರ ಸಂಬಂಧ ಬೆಳೆದಿದೆ. ನನಗೆ ಯಾವ ಅಭ್ಯಂತರವೂ ಇಲ್ಲ. ಬನ್ನಿ ನಮ್ಮ ಫಾರ್ಮ್ ಹೌಸ್‌ಗೆ ಹೋಗೋಣ."

"ಬೇಡ. ಯಾರೂ ಪರಿಚಯದವರೂ ಇಲ್ಲದ ಸ್ಥಳಕ್ಕೆ ಕರೆದುಕೊಂಡು ಹೋಗಿ, ಅಲ್ಲಿ ನಾವಿಬ್ಬರೇ ಏಕಾಂತವಾಗಿರಬೇಕು. ಯಾರ ಭಯವೂ ಇರಬಾರದು. ನಾವಿಬ್ಬರೇ ಇರಬೇಕು....."

ಅವಳು ಆಸೆಯ ಕಣ್ಣುಗಳನ್ನು ತೇಲಿಸಿದಳು.

"ಈಗ ಸಧ್ಯಕ್ಕೆ ಇಲ್ಲಿ ಯಾರೂ ಇಲ್ಲ. ನನ್ನ ಪರಿಚಯದವರಂತೂ ಯಾರಿಲ್ಲ. ನನಗೆ ಇಲ್ಲೇ ಇರುವ ಆಸೆ ಆಗ್ತಿದೆ." ಅವನು ಆಸೆಯ ಕಣ್ಣುಗಳನ್ನು ಅವಳ ದೇಹದ ಮೇಲೆ ಹರಿಸಿದ.

ಅವಳು ಮಾದಕವಾಗಿ ನಕ್ಕಳು.

ಅವಳನ್ನು ಹಿಡಿದಿದ್ದ ಕೈಗಳು, ಅವಳ ಉಡುಪುಗಳನ್ನು ಸಡಿಲಗೊಳಿಸಿದವು ಇಬ್ಬರ ತುಟಿಗಳೂ ಬೆರೆತವು. ದೇಹಗಳು ಬೆಸೆದುಕೊಂಡವು.

ಅವಳ ಉದ್ವೇಗ ಇಳಿದಿತ್ತು. ಸುಖವಾದ ನಿದ್ರೆಯಲ್ಲಿ ಮುಳುಗಿದ್ದವಳಿಗೆ, ಕನಸು. ಅವಳು ಕನವರಿಸಿಕೊಂಡಾಗ, ಅವನ ಬೆರಳುಗಳು ಅವಳ ಮುಂಗುರುಳಿನೊಂದಿಗೆ ಆಟವಾಡಿದವು. ಅವಳು ಎಚ್ಚರಗೊಂಡಳು.

"ನಾನಿನ್ನು ಹೊರಡ್ತೀನಿ. ಬಂದು, ತುಂಬಾ ಹೊತ್ತಾಯಿತು."

"ನನ್ನನ್ನು ಕರೆದುಕೊಂಡು ಹೋಗಿ."

"ಈಗ ಬೇಡ. ಒಂದು ಹೋಟೆಲ್ಲಿನ ರೂಮನ್ನು ಬುಕ್ ಮಾಡಿ, ನಿಮ್ಮನ್ನು ಕರೆದುಕೊಂಡು ಹೋಗ್ತೀನಿ. ಅಲ್ಲಿ ಎಷ್ಟು ದಿನ ಬೇಕಾದ್ರೂ ಇರಬಹುದು."

"ಎರಡೇ ದಿನ..... ಆಮೇಲೆ ನಾನು ವಾಪಸ್ಸು ಬಂದು ಬಿಡಬೇಕು. ಮಾವ ಊರ್ನಿಂದ ಬರೋದ್ರೊಳಗೆ ನಾನು ಇಲ್ಲಿರಬೇಕು."

"ಈ ಮುಚ್ಚು ಮರೆಯೆಲ್ಲಾ ಯಾಕೆ? ನಾನು, ಅವರ ಹತ್ರ ಮಾತನಾಡ್ತೀನಿ. ಮದುವೆಯಾಗಿ ನಿಮ್ಮನ್ನು ಕರ್‍ಕೊಂಡು ಹೋಗ್ತೀನಿ."

"ಈಗಲೇ ಬೇಡ, ನನ್ನ ಕಂಡೀಷನ್ ನೆನಪಿದೆಯಲ್ಲ!"

"ವಿಚಿತ್ರವಾದ ಕಂಡೀಷನ್, ನಾನು ಎಲ್ಲಿಯೂ ಕೇಳಿರಲಿಲ್ಲ." ಅವಳು ಉತ್ತರಿಸದೆ, ಅತ್ತ ಮುಖವನ್ನು ತಿರುಗಿಸಿಕೊಂಡಳು.

ಅವನೂ ಒಂದು ಗಳಿಗೆ ನಿಂತಿದ್ದು, ಮನೆಯಿಂದ ಹೊರಬಿದ್ದ.

೮

ಹೆಂಡತಿಗೆ ಹುಷಾರಿಲ್ಲವೆಂದು ಆತಂಕಗೊಂಡ ಶೇಷಾದ್ರಿ, ಅವಳನ್ನು ಲೇಡಿ ಡಾಕ್ಟರರ ಕ್ಲಿನಿಕ್‌ಗೆ ಕರೆದೊಯ್ದ. ಅವರು, ಅವಳು ಗರ್ಭಿಣಿಯಾಗಿರುವಳೆಂದು ತಿಳಿಸಿದಾಗ, ಅವನಿಗೆ ಆಘಾತವಾಗಿತ್ತು. ಅವನ ಮುಖ ದಪ್ಪಗಾಗಿತ್ತು. ಮನೆಗೆ ಬಂದವನೇ ಉಷಾಳ ತಲೆಗೂದಲನ್ನು ಜಂಘಿಸಿ ಕೇಳಿದ್ದ.

"ಇದ್ಹೇಗಾಯ್ತು ಇದುವರೆಗೂ ಇಲ್ಲದ್ದು?"

"ನಾನೇನು ಹೇಳ್ಲಿ? ದೇವರಿಗೆ ನನ್ನ ಮೇಲೆ ದಯೆ ಬಂದಿದೆ."

"ಇದು ದಯೆಯಲ್ಲ, ಧೈರ್ಯ. ನಿಜ ಹೇಳು. ಯಾರ ಸಹವಾಸ ಮಾಡಿದೆ? ಬೊಗಳು."

"ನೀನು ದೂರ ನಿಂತು ಮಾತಾಡು ಶೇಷು. ನಾನು, ನಿನ್ನ ಹೆಂಡ್ತಿ. ನೀನು ಹೀಗೆಲ್ಲಾ ಕೇಳೋಕ್ಕೆ ಹೀನಾಯವಾಗಲ್ವಾ?"

"ಮಾನ ಹೋಗುವ ಕೆಲಸ ಮಾಡಿದ್ಯಲ್ಲಾ...... ಈಗ್ಲಾದ್ರೂ ನಿಜ ಹೇಳು, ಅವನನ್ನ ಜೈಲಿಗೆ ಹಾಕಿಸ್ತೀನಿ."

"ನೀನೇ ಅಲ್ವಾ ನನ್ನ ಗಂಡ.... ನಿನಗ್ಯಾಕೆ ಅನುಮಾನವೋ.... ನಿನ್ನ ಮಗುವಿನ ಮೇಲಾಣೆ."

"ಬಾಯ್ಮುಚ್ಚು...... ಮಾಡಿರೋದು ಹಾದರ. ಮಗುವಿನ ಮೇಲಾಣೆ ಬೇರೆ. ಇದು ನನ್ನ ಮಗುವಲ್ಲ. ಇದು ಖಂಡಿತಾ....."

"ಹೀಗೆಲ್ಲಾ ಅನ್ನಿಸ್ಕೊಂಡು ನಾನ್ಯಾಕೆ ಬದುಕಿರ್ಲಿ? ಸತ್ತು ಹೋಗ್ತೀನಿ, ಆಗ ನಿನ್ನನ್ನ ಜೈಲಿಗೆ ಹಾಕ್ತಾರೆ."

"ಸರಿ..... ಪಿಂಡಾನ ತೆಗೆಸಿಬಿಡು. ನಾನು ನಿನ್ನನ್ನು ಕ್ಷಮಿಸ್ತೀನಿ."

"ನೀಸ್ಯಾರು ನನ್ನನ್ನ ಕ್ಷಮಿಸೋಕೆ? ಮದುವೆಯಾದ ಐದು ವರ್ಷಗಳ ನಂತರ ಗರ್ಭಿಣಿಯಾಗಿದೀನಿ. ಸಂತೋಷ ಪಡುವುದನ್ನು ಬಿಟ್ಟು ಹೀಗೆಲ್ಲಾ ರೇಗಾಡ್ತೀಯಲ್ಲ!"

"ಅದಕ್ಕೆ ಕಾರಣ ಇದೆ, ಆದರೆ ನಾನು ನಿನಗೆ ಹೇಳೋಲ್ಲ."

"ನೀನು ಹೇಳಲೇ ಬೇಕು."

"ಇಲ್ಲ, ನಾನು ಸತ್ತರೂ ನಿಂಗೆ ಹೇಳೋಲ್ಲ." ಅವನು ಧುಮುಧುಮುಗುಟ್ಟುತ್ತಾ ಮನೆಯಿಂದ ಆಚೆ ನಡೆದ. ಅವಳಿಗೆ ಸಮಾಧಾನವಾಗಿತ್ತು. 'ಗಂಡ ನನ್ನಿಂದ ಏನನ್ನೋ ಮುಚ್ಚಿಡ್ತಾ ಇದಾನೆ' ಅನ್ನೋ ಸಂಶಯ ಬಲವಾಗಿತ್ತು.

'ರಂಗನಾಥನಿಗೆ ಈಗಲೇ ತಿಳಿಸುವುದು ಬೇಡ' ಎಂದುಕೊಂಡಳು.

ಅವನಿಂದ ಫೋನ್ ಬಂದಿತ್ತು. 'ಅತ್ತಿಗೆಯನ್ನು ಕಳಿಸಿ' ಎಂದು ಹೇಳಿದ್ದಳು.

* * *

"ರಂಗನಾಥನ ಮಗುವಿಗೆ ನಾನು ತಾಯಿಯಾಗ್ತಿದೀನಿ." ಹೆಮ್ಮೆಯಿಂದ ಹೇಳಿದಳು.

"ಈಗ ನಿನ್ನ ಗಂಡನಿಗೆ ಗೊತ್ತಾದರೆ ನಿನ್ನ ಗತಿ?"

"ಅವರಿಗೆ ಈಗಾಗ್ಲೇ ಅನುಮಾನ ಬಂದಿದೆ."

"ಹಾಗಾದ್ರೆ ಅಬಾರ್ಷನ್ ಮಾಡಿಸ್ಕೋ. ನಾನು ರಂಗನ ಹತ್ರ ಮಾತಾಡ್ತೀನಿ."

"ಏನೂ ಬೇಡ. ನಾನು ಈ ಮಗುವಿಗೆ ಜನ್ಮ ಕೊಡ್ತೀನಿ."

"ಆ ಧೈರ್ಯ ನಿನಗಿದೆಯಾ?"

"ನನ್ನ ಗಂಡ ನನ್ನಿಂದ ಏನನ್ನೋ ಮುಚ್ಚಿಡ್ತಾ ಇದಾನೆ ಅನ್ನೋ ಅನುಮಾನ ನನಗೆ ಇದೆ. ಈ ಮಗು ತನ್ನದಲ್ಲ ಅಂತ ವಾದಿಸ್ತಾ ಇದಾನೆ. ನಿಜ ಏನೂಂತ ಅವನ ಬಾಯಿಂದ ಹೊರಬರಬೇಕು."

"ಅದರಿಂದ ನಿನಗೇನು ಲಾಭ ಉಷಾ?"

"ಅವನು ಮಾಡಿದ ಮೋಸ ಎಲ್ಲರಿಗೂ ತಿಳಿಯಬೇಕು."

"ಇದರಿಂದ ನಿನ್ನ ಮಾನವೂ ಹೋಗುತ್ತದೆ. ಅದೆಲ್ಲಾ ಬೇಡ. ನೀನು ನಿಜವನ್ನೇ ಹೇಳು. ಡೈವೋರ್ಸ್ ತೆಗೆದುಕೋ...... ನಿಮ್ಮ ನಿಮ್ಮ ಜಗಳದಲ್ಲಿ, ನನ್ನ ಮೈದುನ ನಾಗಲೀ, ಅವನ ಮಗುವಿಗಾಗಲೀ ತೊಂದರೆ ಆಗಬಾರದು." ಶಾಂತ ಹೊರಟು ಹೋಗಿದ್ದಳು.

* * *

"ನನಗೆ ಡೈವೋರ್ಸ್ ಬೇಕು. ನಾನು ನಿನ್ನ ಜೊತೆ ಇರೊಲ್ಲ." ಉಷಾ, ಗಂಡನಿಗೆ ಹೇಳಿದಳು.

"ಯಾಕೆ...... ನಿನ್ನ ಮಿಂಡನ ಮನೆಗೆ ಹೋಗ್ಬೇಕಾ?"

"ನಾನು ಎಲ್ಲಿಗಾದ್ರೂ ಹೋಗ್ತೀನಿ. ನೀನು ನನಗೆ ಅವಮಾನ ಮಾಡಿದೀಯ."

"ನೀನು ನಿಜ ಹೇಳು."

"ನಿಜ ಹೇಳಿದ್ರೆ, ಡೈವೋರ್ಸ್ ಕೊಡ್ತೀಯಾ?"

"ಸಿಗಿದು ತೋರಣ ಕಟ್ಟಿ ಬಿಡ್ತೀನಿ. ನನಗೆ ದ್ರೋಹ ಮಾಡಿ, ಈಗ ನನ್ನಿಂದ ದೂರ ಆಗ್ತೀಯಾ?"

"ಹೌದು, ನಾನು ನಿಂಗೆ ದ್ರೋಹ ಮಾಡಿದೀನಿ. ನಿನ್ನ ಜೊತೆ ಇರುವ ಯೋಗ್ಯತೆ ನನಗಿಲ್ಲ. ಡೈವೋರ್ಸ್ ಕೊಡು."

"ಅವನ್ಯಾರು ಹೇಳು?"

"ನೀನೇ.....ಇನ್ಯಾರು? ಯಾಕೆ, ನೀನು ಗಂಡಸಲ್ವಾ?"

ಶೇಷಾದ್ರಿ, ಅವಳ ಕೆನ್ನೆಗೆ ಪಟೀರ್ ಅಂತ ಹೊಡೆದ.

“ಹೊಡೆದ್ರೆ ನೀನು ಗಂಡಸಾಗಿ ಬಿಡ್ತೀಯ? ಈಗ ಗೊತ್ತಾಯ್ತು, ನೀನು ನಪುಂಸಕ ಅಂತ.” ಅವಳೂ ದಬಾಯಿಸಿದಳು.

“ಏನಂದೆ..... ನಾನು ನಪುಂಸಕಾನಾ? ನಾನು, ಎರಡು ಮಕ್ಕಳ ತಂದೆ.....” ಪೂರೈಸುವ ಮೊದಲೇ ನಾಲಿಗೆಯನ್ನು ಕಚ್ಚಿಕೊಂಡ. ಅವಳು, ಅವನ ಷರಟಿನ ಕಾಲರನ್ನು ಹಿಡಿದಳು.

“ಏನಂದೆ...... ಎರಡು ಮಕ್ಕಳ ತಂದೆ! ಸುಳ್ಳು ಹೇಳ್ಬೇಡ, ನನಗೆಲ್ಲಾ ಗೊತ್ತು ನಿನ್ನ ಯೋಗ್ಯತೆ.”

“ಸಾರಿ, ಬಿಡು ಉಷಾ, ಈ ಮಾತೆಲ್ಲಾ ಯಾಕೆ? ನಾನು ನಿನ್ನ ಗಂಡ, ನೀನು ನನ್ನ ಹೆಂಡ್ತಿ. ನಿನ್ನನ್ನು ಚೆನ್ನಾಗಿಟ್ಟುಕೊಂಡಿದೀನೋ ಇಲ್ವೋ..... ನಮಗ್ಯಾಕೆ ಬೇಕು ಮಗು? ನಾವಿಬ್ಬರೇ ಆರಾಮವಾಗಿರೋಣ, ನಾನು ತಮಾಷೆ ಮಾಡಿದೆ ಅಷ್ಟೇ......”

“ಇದು ತಮಾಷೆ ಅಲ್ಲ. ನಿಜ ಹೇಳದಿದ್ದರೆ ಪೋಲೀಸ್ ಕಂಪ್ಲೇಂಟ್ ಕೊಡ್ತೀನಿ. ನಿಂಗೆ ಜೈಲು ಶಿಕ್ಷೆ ಆಗುತ್ತೆ.”

ಅವನು, ಅವಳ ಕೈಯಿಂದ ತಪ್ಪಿಸಿಕೊಂಡು ಹೊರಕ್ಕೆ ಓಡಿಬಿಟ್ಟ.

* * *

ಎರಡು, ಮೂರು ದಿನಗಳ ನಂತರ ಉಷಾಳ ಹೆಸರಿಗೆ ಒಂದು ರಿಜಿಸ್ಟರ್ಡ್ ಪೋಸ್ಟ್ ಬಂದಿತ್ತು. ಶೇಷಾದ್ರಿ, ಅವಳಿಗೆ ಪತ್ರ ಬರೆದಿದ್ದ.

‘ನೀನು, ನಂಗೆ ಹೀಗೆ ಮಾಡ್ತೀಯ ಅಂತ ನಾನಂದುಕೊಂಡಿರಲಿಲ್ಲ. ನಾನು ನಿನ್ನನ್ನು ಅಪಾರ ಪ್ರೀತಿಸಿದೆ. ಅಲ್ಲಿ ನಿನಗೆ ಯಾವ ಕೊರತೆಯೂ ಇಲ್ಲ ಅಂತ ಅಂದ್ಕೊಂಡಿದ್ದೆ. ನನಗೆ ಮೋಸ ಮಾಡಿ, ನನ್ನ ಪ್ರೀತಿಗೆ ಅವಮಾನ ಮಾಡಿಬಿಟ್ಟೆ, ನಾನೆಂದೂ, ನಿನ್ನನ್ನು ಕ್ಷಮಿಸೋಲ್ಲ. ನಿನ್ನೊಡನೆ ಬಾಳುವ ಆಸೆ ನನಗಿಲ್ಲ. ನಾನು ನಿನ್ನಿಂದ ದೂರ ಹೋಗ್ತಾ ಇದೀನಿ. ನನಗೆ ಮಾಡಿದ ಮೋಸಕ್ಕೆ ಪ್ರತಿಫಲವಾಗಿ ನೀನು ಒಂಟಿ ಬಾಳನ್ನು ಸವೆಸಬೇಕು.

– ಇತಿ

ಶೇಷಾದ್ರಿ

ಪತ್ರವನ್ನು ಓದಿ, ಉಷಾ ಹರಿದು ಹಾಕಿದಳು.

‘ಈ ಮಾವನಿಂದ ನನಗೆ ಎಂದೂ ನೆಮ್ಮದಿ ಇಲ್ಲ. ಈಗ ಈ ಬೆದರಿಕೆ ಬೇರೆ.’ ಎಂದುಕೊಂಡಳು. ಕರೆಗಂಟೆ ಬಾರಿಸಿತು. ಎದ್ದು ಬಂದು, ಬಾಗಿಲನ್ನು ತೆಗೆದಳು.

ಹೊಸ್ತಿಲಾಚೆ ಒಬ್ಬಳು ಹೆಂಗಸು ನಿಂತಿದ್ದಳು. ಅವಳ ಕೈಯನ್ನು ಹಿಡಿದು ನಿಂತ ಮಗುವೂ ಒಂದಿತ್ತು.

"ನೀವ್ಯಾರು...... ಏನ್ಬೇಕಾಗಿತ್ತು.....?" ಅಸಹನೆಯಿಂದ ಕೇಳಿದಳು.

"ಶೇಷಾದ್ರಿ ಅನ್ನೋರು ಇಲ್ಲಿ ಇದಾರಾ?"

"ಇಲ್ಲಿ ಯಾವ ಶೇಷಾದ್ರಿಯೂ ಇಲ್ಲ......" ರೋಷದಿಂದ ನುಡಿದಳು.

"ಇಲ್ಲಿ ಬಂದು ನನ್ನನ್ನು ನೋಡು ಅಂತ, ನನಗೆ ಈ ಅಡ್ರೆಸ್ ಕೊಟ್ಟಿದ್ದಾರಲ್ಲ!" ಎನ್ನುತ್ತಾ ವಿಳಾಸವನ್ನು ಬರೆದಿದ್ದ ಚೀಟಿಯನ್ನು ತೋರಿಸಿದಳು.

ವಿಳಾಸ ಸರಿಯಾಗಿತ್ತು.

"ನಾನು ಒಳಗೆ ಬರ್ಲಾ...... ಒಂದ್ಲೋಟ ನೀರು ಕೊಡ್ತೀರಾ?"

'ಹೂಂ' ಎನ್ನದೇ ಅವಳು ಒಳಗೆ ಬಂದಳು. ಅವಳ ಹಿಂದೆಯೇ ಆ ಹೆಂಗಸು ಬಂದು ಕುಳಿತಳು. ನೀರನ್ನು ಕುಡಿದು, ಗಂಟಲನ್ನು ಸರಿಪಡಿಸಿಕೊಂಡಳು.

"ನೀವು ಶೇಷಾದ್ರಿಯವರ ಅಕ್ಕನ ಮಗಳು ಉಷಾ ಅಲ್ವಾ?"

"ಹುಂ. ಹೌದು, ನೀವ್ಯಾರೋ ನಂಗೆ ಗೊತ್ತಾಗ್ಲಿಲ್ಲ."

"ನಾನು, ಶೇಷಾದ್ರಿಯ ಪತ್ನಿ ವಸಂತ."

"ಆಂ! ನೀವು ಶೇಷಾದ್ರಿಯ ಹೆಂಡ್ತೀನಾ..... ಸುಳ್ಯಾಕೆ ಹೇಳ್ತಿದೀರಿ?"

"ನಾನ್ಯಾಕೆ ಸುಳ್ಳು ಹೇಳ್ಲೀ? ಇಲ್ಲಿ ನೋಡಿ ಅವರು ಕಟ್ಟಿರುವ ತಾಳಿ ಇದೆ. ನನಗೆ ಮೂರು ಮಕ್ಕಳಿವೆ."

"ಯಾವ ಶೇಷಾದ್ರಿಯೋ ಏನೋ..... ಪ್ಲೀಸ್ ಎದ್ದು ಹೋಗಿ."

"ಇಲ್ಲ, ನಿಮ್ಮ ಸೋದರ ಮಾವ ಶೇಷಾದ್ರಿಯೇ ನನ್ನ ಪತಿ. ನನ್ನ ಮಕ್ಕಳ ಮೇಲಾಣೆ."

ಉಷಾಳಿಗೆ ಉಸಿರು ಕಟ್ಟಿದಂತಾಗಿತ್ತು. ಕುಸಿದು ಕುಳಿತಳು.

"ಸಾರಿ, ನಿಮಗೆ ಈ ವಿಷಯ ಗೊತ್ತಿರಲಿಲ್ಲ ಅಂತ ನನಗೆ ಗೊತ್ತಿರಲಿಲ್ಲ. ನಿಮಗೆ ಶಾಕ್ ಆಯ್ತು."

"ಇಲ್ಲ. ನಿಮಗೆ ತಪ್ಪು ತಿಳಿವಳಿಕೆ ಆಗಿದೆ. ನನ್ನ ಸೋದರ ಮಾವನಿಗೆ ಮದುವೆ ಆಗಿರಲಿಲ್ಲ. ನೀವು ಯಾರೋ, ಯಾಕೆ ಸುಳ್ಳು ಹೇಳ್ತಿದೀರೋ ನಂಗೆ ಗೊತ್ತಾಗ್ಲಿಲ್ಲ..... ನಾನು ಪೋಲೀಸ್ ಕಂಪ್ಲೇಂಟ್ ಕೊಡಬೇಕಾಗುತ್ತೆ." ಎಚ್ಚರಿಸಿದಳು.

"ಕೊಡಿ. ಪೋಲೀಸ್ ಸ್ಟೇಷನ್‌ನಲ್ಲಿ ನಿಜ ಏನು ಅಂತ ನಿಮಗೇ ತಿಳಿಯುತ್ತೆ."

ಉಷಾ ಮುಖ ಮುಚ್ಚಿ ಅಳಲಿಲ್ಲ. ಅಳುವನ್ನು ನುಂಗಿ ಕೊಂಡಳು.

"ಸರಿ, ನಿಮ್ಮ ಪತಿ ಈಗ ನಮ್ಮ ಮನೆಯಲ್ಲಿಲ್ಲ. ಅವರು ಇಲ್ಲಿಗೆ ಇನ್ನು ಮುಂದೆ ಬರುವುದೂ ಇಲ್ಲ. ನನ್ನನ್ನು ಸತಾಯಿಸಬೇಡಿ. ಹೊರಟು ಹೋಗಿ....."

"ನೀವು ಸುಳ್ಳು ಹೇಳ್ತಿದೀರಿ. ನಿಮ್ಮ ತಾಯಿ ಸತ್ತು ಹೋದ ಮೇಲೆ ಅವರು ಇಲ್ಲಿಯೇ ಇರುತ್ತಿದ್ದರು. ಆಗಾಗ್ಗೆ ಹಳ್ಳಿಗೆ ಬರುತ್ತಿದ್ದರು. ನೀವು ಹೀಗೆ ಸುಳ್ಳು ಹೇಳಿದರೆ, ನಿಮಗೆ ಒಳ್ಳೆಯದಾಗೊಲ್ಲ."

"ಇನ್ನೇನ್ರೀ ಒಳ್ಳೆಯದಾಗ್ಬೇಕು? ಸೋದರ ಮಾವನ ದೆಸೆಯಿಂದಾಗಿ ನನ್ನ ಬಾಳು ಎತ್ತೆತ್ತಲೋ ಹೋಯಿತು. ಈಗ ಬಾಕಿ ಏನೂ ಉಳಿದಿಲ್ಲ. ಅವನು ಇಲ್ಲಿಗೆ ಬರುವುದಿಲ್ಲ. ಬಂದರೂ, ನಾನು ಸೇರಿಸೋಲ್ಲ. ನೀವು ಹೋಗ್ತೀರೋ..... ಪೋಲೀಸರಿಗೆ ಫೋನ್ ಮಾಡ್ಲೋ.....?" ಏರುದನಿಯಲ್ಲಿ ನುಡಿಯುತ್ತಿದ್ದವಳು, ಹಾಗೇ ಎಚ್ಚರ ತಪ್ಪಿ ಬಿದ್ದು ಬಿಟ್ಟಳು.

ವಸಂತ ಲೋಟದಲ್ಲಿದ್ದ ನೀರನ್ನು ಮುಖದ ಮೇಲೆ ಚಿಮುಕಿಸಿದಳು. ಉಷಾ ನಿಧಾನವಾಗಿ ಕಣ್ಣು ಬಿಟ್ಟು ನುಡಿದಳು.

"ನೀವಿನ್ನೂ ಇಲ್ಲೇ ಇದೀರಾ..... ದಯವಿಟ್ಟು ಹೋಗಿ."

"ನಿಮಗೇನಾಯ್ತು? ಹುಷಾರಿಲ್ಲ ಅಂತ ಅನ್ನಿಸುತ್ತೆ. ಡಾಕ್ಟರ್ ಹತ್ರ ಕರ್ಕೊಂಡು ಹೋಗ್ತೀನಿ, ಬನ್ನಿ."

"ಏನೂ ಬೇಡ.... ಸ್ವಲ್ಪ ಬಿ.ಪಿ. ಇರಬಹುದು. ನೀವು ಹೋದರೆ ನಾನು ಖಂಡಿತಾ ಸರಿ ಹೋಗ್ತೀನಿ."

"ಸರಿ, ಹೋಗ್ತೀನಿ. ನೆನ್ನೆಯಿಂದ ನನ್ನ ಮಕ್ಕಳು ಊಟ ಮಾಡಿಲ್ಲ. ಒಂದೈವತ್ತು ರೂಪಾಯಿಗಳಿದ್ದರೆ ಕೊಡಿ. ಬ್ರೆಡ್ ತಗೊಂಡು ತಿನ್ನಿಸ್ತೀನಿ."

ಉಷಾ, ಅವಳನ್ನೇ ತದೇಕವಾಗಿ ನೋಡಿದಳು. ಅವಳು ಸುಳ್ಳು ಹೇಳುತ್ತಿಲ್ಲ ವೆಂದೆನಿಸಿತು. ಮಗುವಿನ ಮುಖವನ್ನು ನೋಡಿದಳು. ನಿಷ್ಕಲ್ಮಶವಾದ ಮುಖ ಸಪ್ಪಗಾಗಿತ್ತು.

"ಅಲ್ಲಿ ಟೇಬಲ್ ಮೇಲೆ ಡಬ್ಬಿಯಲ್ಲಿ ಉಪ್ಪಿಟ್ಟಿದೆ. ಸಕ್ಕರೆ ಹಾಕಿ ಮಗುವಿಗೆ ತಿನ್ನಿಸಿ, ನೀವೂ ತಿನ್ನಿ."

"ಪರವಾಗಿಲ್ಲ..... ಸಾಲ ಅಂತ ಹಣ ಕೊಟ್ಟರಿ, ಆದಷ್ಟು ಬೇಗ ಕೊಡ್ತೀನಿ."

"ಅದೆಲ್ಲ ಇರಲಿ. ಈಗ ನೀವು ಮಗುವಿನ ಹೊಟ್ಟೆಗೆ ಕೊಡಿ. ನನಗೂ ಮಾತೃ ಹೃದಯ ಇದೆ."

"ನಿಮಗೆ ಮದುವೆಯಾಗಿ, ಮಕ್ಕಳಿದೆಯಾ....... ಶೇಷಾದ್ರಿ ಹೇಳಲಿಲ್ಲವಲ್ಲಾ?"

"ಇದುವರೆಗೆ ಮಕ್ಕಳಿರಲಿಲ್ಲ. ಈಗ ನಾನು ಎರಡು ತಿಂಗಳ ಗರ್ಭಿಣಿ."

"ಯಾವಾಗ ಮದುವೆಯಾಯ್ತು...... ಯಜಮಾನ್ರು ಎಲ್ಲಿದಾರೆ?"

"ಈಗ ನನ್ನ ಯಜಮಾನ ಮನೇಲಿಲ್ಲ, ಬರೋದೂ ಇಲ್ಲ."

ವಸಂತ ವಿಚಿತ್ರವಾಗಿ ನೋಡಿ, ಮಗುವಿಗೆ ಉಪ್ಪಿಟ್ಟನ್ನು ತಿನ್ನಿಸಿ, ನೀರನ್ನು

ಕುಡಿಸಿದಳು.

"ನೀವೂ ತಿನ್ನಿ. ನಾನೂ ಕಾಫೀ ಮಾಡಿಕೊಡ್ತೀನಿ....." ಕೆಲವೇ ನಿಮಿಷಗಳಲ್ಲಿ ಕಾಫಿಯನ್ನು ಬೆರೆಸಿ ತಂದಳು.

ಅವಳು ಉಪ್ಪಿಟ್ಟನ್ನು ಮುಗಿಸಿದ್ದಳು.

"ಗರ್ಭಿಣಿ ಹೆಂಗಸ್ರು ಜಾಸ್ತಿ ಕಾಫೀನ ಕುಡೀಬಾರ್ದಂತೆ. ಅಂದ್ಹಾಗೆ ಇಷ್ಟು ದೊಡ್ಡ ಮನೇಲಿ ನೀವೊಬ್ರೇ ಇದೀರಾ..... ಭಯ ಆಗೊಲ್ವಾ?"

"ಇಲ್ಲ, ಅಭ್ಯಾಸವಾಗಿದೆ. ಆಗಾಗ್ಗೆ ನನ್ನ ಗಂಡ ಹಳ್ಳಿಗೆ ಹೊಲ – ಗದ್ದೆಯ ಕೆಲಸಕ್ಕೆ ಅಂತ ಹೋದಾಗ, ನಾನು ಒಬ್ಬಳೇ ಇರ್ತಿದ್ದೆ."

"ಯಾವ ಹಳ್ಳಿ..... ಭೈರನ ಹಳ್ಳಿನಾ?"

"ನಿಮಗೆ ಹೇಗೆ ಗೊತ್ತು?"

"ಭೈರನ ಹಳ್ಳೀಲೇ ನಾನು ಇರೋದು. ನಿಮ್ಮ ಯಜಮಾನ ಬರುತ್ತಿದ್ದುದು ನನ್ನ ಮನೆಗೇ, ಬೇಕಾದ್ರೆ ಯಾರನ್ನಾದ್ರೂ ಕೇಳಿ."

"ಮತ್ತೆ ಮತ್ತೆ ಅದೇ ಮಾತನ್ನಾಡ್ತಿದೀರಲ್ಲ.... ನನ್ನ ಸೋದರಮಾವ ನನ್ನನ್ನೇ ಮದುವೆಯಾಗಿದ್ದ. ಈಗ ನಮ್ಮಿಬ್ಬರಿಗೆ ಮಗುವೂ ಆಗ್ತಿದೆ."

ವಸಂತ ವ್ಯಂಗ್ಯ ನಗು ನಕ್ಕಳು. "ಮಗು..... ನಿಮ್ಮಿಬ್ಬರ ಮಗು! ಅಲ್ಲ. ಅದು ಕೇವಲ ನಿಮ್ಮ ಮಗು. ನೀವು ಬೇರೆ ಯಾರದ್ದೋ ಸಂಗ ಮಾಡಿ, ನಿಮ್ಮ ಸೋದರ ಮಾವನ ತಲೆಗೆ ಆ ಪಟ್ಟ ಕಟ್ಟಿದ್ದೀರಿ...."

"ಹಾಗೆಲ್ಲಾ ಏನಿಲ್ಲ. ಮೊದಲಿಗೆ ನೀವ್ಯಾರು ಅಂತ್ಲೇ ನಂಗೆ ಸರಿಯಾಗಿ ಗೊತ್ತಿಲ್ಲ. ನಮ್ಮಿಬ್ಬರ ಮದುವೆಯಾಗಿ ಆರು ವರ್ಷಗಳಾಗಿವೆ. ಆರು ವರ್ಷಗಳ ಬಳಿಕ ನಾನೀಗ ಗರ್ಭಿಣಿಯಾಗಿದೀನಿ."

"ನನಗೆ ನಿಮ್ಮ ಮಾತಿನ ಮೇಲೆ ನಂಬಿಕೆ ಇಲ್ಲ. ನಿಮ್ಮಿಬ್ಬರ ಮದುವೆಯೇ ನಡೆದಿಲ್ಲ. ನಿಮ್ಮಿಬ್ಬರ ಮಧ್ಯೆ ದೇಹ ಸಂಬಂಧ ಇರಬಹುದು. ಎಷ್ಟಾಗಲೀ ಉಪ್ಪು, ಹುಳಿ ತಿನ್ನುವ ದೇಹ. ಅಲ್ಲದೇ ನನ್ನ ಗಂಡ ಹಾಗೇ ಬಿದ್ಕೊಳ್ಳೋ ಮನುಷ್ಯ ಅಲ್ಲ. ಆದರೆ...... ನಂಗೆ ಒಂದು ಅನುಮಾನ, ಇದು ಹೇಗಾಯ್ತು ಅಂತ? ನಿಜ ಹೇಳಿ, ನಿಮಗೆ ಬೇರೆ ಯಾರಾದ್ರೂ ಸ್ನೇಹಿತರು ಇದಾರಾ?"

"ಹೀಗ್ಯಾಕೆ ಕೇಳ್ತಿದೀರಿ..... ಇದೇ ಪ್ರಶ್ನೇನ ನಾನು ನಿಮಗೆ ಕೇಳಿದರೆ.......?"

"ಕೇಳಿ, ಧಾರಾಳವಾಗಿ ಕೇಳಿ, ನಿಮ್ಮ ಸೋದರಮಾವಂಗೂ, ನಂಗೂ ಹತ್ತು ವರ್ಷದ ಕೆಳಗೇ ಸ್ನೇಹ ಇತ್ತು. ದೇವಸ್ಥಾನದಲ್ಲಿ ನಮ್ಮಿಬ್ಬರ ಮದುವೇನೂ ನಡೀತು. ನನಗೆ ಇಬ್ಬರು ಅವಳಿ ಹೆಣ್ಣು ಮಕ್ಕಳು, ನಂತರ ಇವನು ಹುಟ್ಟಿದ. ಗಂಡು ಮಗ ಹುಟ್ಟಿದ ಮೇಲೆ ನನ್ನ ಗಂಡ ಆಪರೇಷನ್ ಮಾಡಿಸ್ಕೊಂಡಿದಾರೆ. ನಮಗೆ ಮಕ್ಕಳಾಗು

ವಂತಿಲ್ಲ. ಮತ್ತೆ ನಿಮಗೆ ಹೇಗಾದೀತು?"

"ಅವನು ಇಂಥ, ಮೋಸಗಾರ ಅಂತ ನನಗೆ ಗೊತ್ತಿರಲಿಲ್ಲ. ನಾನು ಪೋಲೀಸ್ ಕಂಪ್ಲೇಂಟ್ ಕೊಟ್ಟು ಜೈಲಿಗೆ ಕಳಿಸದೇ ಬಿಡುವುದಿಲ್ಲ."

"ದಯವಿಟ್ಟು ಹಾಗೆ ಮಾಡ್ಬೇಡಿ. ನನ್ನ ಸಂಸಾರ ಹಾಳಾಗುತ್ತದೆ."

"ಇನ್ನೇನಿದೆ ಸಂಸಾರದಲ್ಲಿ? ನಿಮಗೂ ಮೋಸ ಮಾಡಿದಾನಲ್ಲ."

"ಇರಬಹುದು. ಆದರೆ ಅವರು ನನ್ನ ಗಂಡ, ನನ್ನ ಮಕ್ಕಳಿಗೆ ತಂದೆ. ನಮಗೆ ಅವರೇ ದಿಕ್ಕು. ನಿಮ್ಮ ಕಾಲಿಗೆ ಬೀಳ್ತೀನಿ."

"ಏನೂ ಬೇಡ. ಇದರಲ್ಲಿ ನೀವೂ ಶಾಮೀಲಾಗಿದೀರಿ ಅಂತ ಅನ್ನಿಸ್ತಿದೆ." ನಂಗೆ.

"ಇಲ್ಲ, ನಂಗೇನೂ ಗೊತ್ತಿಲ್ಲ. ನಿಮ್ಮ ತಾಯಿ ಸತ್ತು ಹೋದ ಮೇಲೆ, ನಿಮಗೆ ಅವರೇ ದಿಕ್ಕು ಅಂತ ಹೇಳಿದ್ದರು. ನೀವು ಮದುವೆಯಾಗಿ ನಿಮ್ಮ ಗಂಡನ ಮನೆಗೆ ಯಾಕೆ ಹೋಗಲಿಲ್ಲ? ಮದುವೇನೇ ಬೇಡ ಅಂತ ಅಂದ್ರಂತೆ."

"ಹಾಗಂದ್ನಾ ಆ ಭಂಡ? ನನ್ನ ಬಾಳನ್ನು ಹಾಳು ಮಾಡಿ, ನನ್ನ ಮದುವೆ ಯಾಗದಂತೆ ಮಾಡಿ, ನನಗೆ ಮೋಸ ಮಾಡಿ, ಈಗ ತಲೆ ಮರೆಸಿಕೊಂಡು ಹೋಗಿ ದಾನೆ. ಪೇಪರ್‌ನಲ್ಲಿ ಪ್ರಕಟಣೆ ಹಾಕಿಸಿ, ಪೋಲೀಸರಿಂದ ಹಿಡಿಸಿ, ಶಿಕ್ಷೆ ಕೊಡಿಸದೇ ಸುಮ್ಮನಿರುವುದಿಲ್ಲ. ಸರಿ, ನನ್ನ ಹಾಗೇ ನೀವೂ ಮೋಸಕ್ಕೆ ಒಳಗಾಗಿದೀರಿ. ನಿಮಗೆ ಗೊತ್ತಾಗಿಲ್ಲ ಅಷ್ಟೇ. ನಿಮ್ಮ ಆ ಮಕ್ಕಳೆಲ್ಲಿ? ಸದ್ಯಕ್ಕೆ ನೀವುಗಳು ಇಲ್ಲಿ ನನ್ನ ಜೊತೆಯಲ್ಲಿರ ಬಹುದು. ಊಟ – ತಿಂಡಿಗೆ ಕೊರತೆಯಾಗೊಲ್ಲ. ನಿಮ್ಮನ್ನು ಹುಡುಕಿಕೊಂಡು ಅವನು ಬಂದರೂ ಬರಬಹುದು."

ವಸಂತ ಮುಖ ಮುಚ್ಚಿ ಅಳತೊಡಗಿದಳು. ಇವಳೇ ಸಮಾಧಾನ ಮಾಡ ಬೇಕಾಯ್ತು.

"ಆದದ್ದಾಯ್ತು. ಸಮಾಧಾನ ಮಾಡ್ಕೊಳ್ಳಿ. ನಿಮ್ಮ ಮಕ್ಕಳಿಗೆ ಏನೂ ತೊಂದರೆ ಆಗೊಲ್ಲ. ನಾನು ನೋಡಿಕೊಳ್ತೀನಿ. ಆದರೆ, ನೀವು ನನ್ನ ಕಡೆಗಿರಬೇಕು. ಅವನು ನಮ್ಮಿಬ್ಬರಿಗೂ ಮೋಸ ಮಾಡಿದ್ದಾನೆ. ನೆನಪಿರಲಿ......"

"ಬೇಡ, ನನ್ನ ಕಷ್ಟ ನನಗಿರಲಿ. ನನ್ನ ಪಾಡಿಗೆ ನಾನು ಮಕ್ಕಳೊಂದಿಗೆ ಇರ್ತೀನಿ. ನೀವುಂಟು, ನಿಮ್ಮ ಮಾವ ಉಂಟು. ಅವನ ಸಹವಾಸವೇ ಬೇಡ ನನಗೆ. ಪೋಲೀಸು, ಕೋರ್ಟು, ಕಛೇರಿಯಿಂದ ಏನು ಸಾಧಿಸಿದ ಹಾಗಾಗುತ್ತೆ?"

"ಹಾಗಾದರೆ ಈಗ ನೀವೇ ಹೇಳಿ.... ನನ್ನನ್ನು ಪ್ರೀತಿಸಿದಂತೆ ನಟಿಸಿ, ನಂಬಿಸಿ, ಮೋಸ ಮಾಡಿದ; ಯಾಕೆ ಹೀಗೆ ಮಾಡಿರಬಹುದು? ಮದುವೆಯಾಗಿದ್ದ, ಮಕ್ಕಳಿದ್ದವು. ಆಸ್ತಿ ಇದ್ದವು, ಹಾಗೆ ನೋಡಿದರೆ, ನಿಮ್ಮಷ್ಟು ನಾನು ಚೆನ್ನಾಗಿಯೂ ಇಲ್ಲ....."

"ಗಂಡಸರಿಗೆ ಚೆನ್ನಾಚಾರ ಏನು ಗೊತ್ತಾಗುತ್ತೆ! ಹೆಣ್ಣು ಅಂತ ಇದ್ದರೆ ಸಾಕು. ನಾನೂ ಅವರ ಮಾತಿನ ಜಾಲಕ್ಕೆ ಮರುಳಾಗಿ, ಬಲೆಗೆ ಬಿದ್ದೆ."

"ಮದುವೆಯಾದ ವಿಷಯಾನ ನಮ್ಮ ಅಮ್ಮನಿಗಾದ್ರೂ ತಿಳಿಸಬಾರ್ದಾಗಿತ್ತಾ? ಅವಳೊಬ್ಬಳೇ ಅಕ್ಕ ಇದ್ದದ್ದು."

"ಯಾಕೆ ಹೀಗೆ ಮಾಡಿದ್ರೋ....?" ನಂಗೆ ನಂಬುಕ್ಕೇ ಆಗ್ತಿಲ್ಲ.

"ಇನ್ನೇನು.... ಆಸ್ತಿ ಆಸೆ. ತಾತನ ಆಸ್ತಿಯನ್ನು ಎರಡು ಭಾಗ ಮಾಡಿ, ಅಮ್ಮ ವಿಧವೆ ಅಂತ ಅವಳಿಗೂ ಒಂದು ಭಾಗ ಕೊಟ್ಟಿದ್ದರು. ಅವನ ಭಾಗದ ಆಸ್ತಿಯನ್ನೆಲ್ಲಾ ಮಾರ್ಕೊಂಡು ತಿಂದ. ನನ್ನ ಭಾಗದ ಆಸ್ತಿ ನನ್ನ ಹೆಸರಿನಲ್ಲಿದೆ. ಅದಕ್ಕೆ ನನ್ನನ್ನು ಮದುವೆಯಾದ."

"ಹಾಗಾದ್ರೆ ನಿಮ್ಮನ್ನು ನಿಜವಾಗಿಯೂ ಮದುವೆಯಾಗಿದ್ರಾ..... ಸಾಕ್ಷಿಗಳು ಇದಾರಾ?"

"ಇಲ್ಲ, ಯಾರೂ ಸಾಕ್ಷಿ ಇರಲಿಲ್ಲ. ಅಮ್ಮ ಸತ್ತು ಹೋಗುವ ಮುಂಚೆಯೇ ನನ್ನನ್ನು ಅನುಭವಿಸಿದ್ದ. 'ನಿನ್ನ ಮಗಳನ್ನ ನಾನೇ ಮದುವೆಯಾಗ್ತೀನಿ' ಅಂತ ಅಮ್ಮಂಗೆ ಮಾತು ಕೊಟ್ಟಿದ್ದ. ದೇವರ ಮುಂದೆ ನಿಂತು, ಹಾರ ಹಾಕಿದ. ತಾಳಿ ಕಟ್ಟಿದ. ಒಂದು ಫೋಟೋ ಸಹ ಇಲ್ಲ. ನಾನೂ ಅವನನ್ನು ಅಷ್ಟೇ ನಂಬಿದೆ. ನನಗೆ ಒಂದು ಮಗುವನ್ನಾದರೂ ಕೊಟ್ಟಿದ್ದಿದ್ದರೆ, ನಾನು ಅವನನ್ನು ಕ್ಷಮಿಸುತ್ತಿದ್ದೆನೋ ಏನೋ....."

"ಹಾಗಾದರೆ ಈ ಮಗು ಅವರದ್ದಲ್ಲ!"

ಉಷಾ ಪೆಚ್ಚಾದಳು, ಸಿಕ್ಕಿ ಬಿದ್ದವಳಂತೆ ಚಡಪಡಿಸಿದಳು.

"ಸರಿ ಬಿಡಿ, ಅವರು ಮೋಸ ಮಾಡಿದರು. ನೀವು ನಿಮ್ಮ ದಾರಿಯನ್ನು ಆರಿಸಿಕೊಂಡಿರಿ. ಇದೇ ಕಾರಣಕ್ಕೆ ನಿಮ್ಮ ಮಾವ ಮನೆಬಿಟ್ಟು ಹೋಗಿರಬಹುದು ಅಲ್ವಾ? ಎಂಥೋರಿಗಾದ್ರೂ ಸಿಟ್ಟು ಬರೋಲ್ವಾ?"

"ನಾನು ನಂಗೆ ಡೈವೋರ್ಸ್ ಕೊಡು ಅಂತ ಎಷ್ಟೋ ತಿಂಗಳಿಂದ ಕೇಳ್ತಾನೇ ಇದ್ದೆ. ನನ್ನ ಮಾತಿಗೆ ಬೆಲೆಯನ್ನೇ ಕೊಟ್ಟಿರಲಿಲ್ಲ."

"ಡೈವೋರ್ಸ್ ಆಗಿ ಬೇರೆ ಮದುವೆ ಆಗ್ಬೇಕು ಅಂತ ಆಸೇನಾ?"

"ನಮಗೆ ಮಕ್ಕಳಾಗಲಿಲ್ಲ ಅನ್ನೋ ವಿಷಯಕ್ಕೆ ಆಗಾಗ್ಗೆ ನಮ್ಮಿಬ್ಬರಲ್ಲಿ ಬಿರುಸಾಗಿ ಮಾತುಕತೆ ನಡೀತಿತ್ತು. ನನ್ನನ್ನೇ ಬಂಜೆ ಎಂದು ಹಂಗಿಸಿ ಹೀಯಾಳಿಸಿದ್ದ. ಡಾಕ್ಟರ್ ಹತ್ರ ಪರೀಕ್ಷೆ ಮಾಡಿಸ್ಕೊಂಡು ಬಂದಿದ್ದೆ. ನಾನು ಎಲ್ಲಾ ರೀತಿಯಿಂದಲೂ ಸರಿಯಾಗಿದ್ದೆ. 'ನೀವೂ ಮಾಡಿಸ್ಕೊಳ್ಳಿ' ಎಂದಾಗ, ಒಪ್ಪಿರಲಿಲ್ಲ. ಮಕ್ಕಳೇ ಬೇಡ ಎನ್ನುವಂತೆ ಮಾತಾಡುತ್ತಿದ್ದ. ನನಗೂ ಕೋಪ ಬರೋಲ್ವಾ?"

"ಆ ಕೋಪಕ್ಕೆ ಹೀಗೆ ಮಾಡಿದ್ರಾ?"

"ಇಲ್ಲ, ನಾನು ಬೇಕೂಂತ ಮಾಡಿದ್ದಲ್ಲ. ಇದೊಂದು ಆಕಸ್ಮಿಕ. ತಾನಾಗಿಯೇ ಪುಟಿದದ್ದು. ಆದರೆ ನಾನು ಒಪ್ಪಿಕೊಂಡೆ. ಈ ವಿಷಯ ತಿಳಿದರೆ, ಕೋಪಿಸ್ಕೊಂಡು ಡೈವೋರ್ಸ್ ಕೊಟ್ಟರೆ ಕೊಡಲಿ ಎಂದುಕೊಂಡೆ ಅಥವಾ ಒಪ್ಪಿಕೊಂಡಿದ್ದರೂ ಆಗ್ತಿತ್ತು. ತಾನೇ ತಪ್ಪಿತಸ್ಥಾಂತ ಹೆದರಿ ಹೇಡಿಯಂತೆ ಓಡಿ ಹೋಗಿದಾನೆ....."

"ಹುಟ್ಟಲಿರುವ ಮಗುವಿನ ತಂದೆಗೆ ಈ ವಿಷಯ ಗೊತ್ತಾ?"

"ಇಲ್ಲ, ನಾನು, ಅವನನ್ನು ಮತ್ತೆ ಭೇಟಿಯಾಗಿಲ್ಲ."

"ನಿಜವಾಗಿಯೂ......? ನಂಬೋಕೆ ಕಷ್ಟವಾಗ್ತಿದೆ."

"ನೀವು ನಂಬಲೇಬೇಕೂಂತ ಏನಿಲ್ಲ. ಇದು ನನ್ನ ಜೀವನಕ್ಕೆ ಸಂಬಂಧಿಸಿದ ವಿಷಯ. ನನ್ನ ಇಷ್ಟಕ್ಕೆ ಬಿಟ್ಟ ವಿಷಯ."

"ಹೌದು, ಇದು ನಿಮ್ಮ ಸ್ವಂತ ವಿಷಯ. ಆದರೆ ಶೇಷಾದ್ರಿಗೆ ಏನು ಉತ್ತರ ಕೊಡ್ತೀರಿ? ಅವನು ಏನು ಬೇಕಾದರೂ ಮಾಡಬಹುದು......"

"ನಾನು ಪೋಲೀಸ್ ರಕ್ಷಣೆ ತಗೊಳ್ತೀನಿ. ಹಾಗಂತ, ಅವನು ಸಿಕ್ಕಿದರೆ ಅವನಿಗೂ ಹೇಳಿಬಿಡಿ. ಇನ್ನು ಮುಂದೆ ನನಗೂ – ಅವನಿಗೂ ಯಾವ ಸಂಬಂಧ ವಿಲ್ಲ." ಎನ್ನುತ್ತಾ ಅವಳ ಕೈಗೆ ನೂರು ರೂಪಾಯಿಗಳನ್ನು ಕೊಟ್ಟಳು.

"ಥ್ಯಾಂಕ್ಸ್, ಇದನ್ನು ಆದಷ್ಟು ಬೇಗ ತೀರಿಸಿ ಬಿಡ್ತೀನಿ."

"ಅದರ ಅಗತ್ಯವಿಲ್ಲ. ನೀವೇ ಈಗ ಕಷ್ಟದಲ್ಲಿದ್ದೀರಿ. ಈ ಹಣ ಎಷ್ಟು ದಿನಕ್ಕೆ ಬರುತ್ತೆ. ಮುಂದೇನ್ಮಾಡ್ತೀರಿ?"

"ಅದೇ ನನಗೆ ಚಿಂತೆ ಆಗಿದೆ. ನನ್ನ ಗಂಡ, ನನ್ನ ಕೈಗೆ ಹಣ ಕೊಡದ ಹೊರತೂ, ನಾನು ಈ ಮಕ್ಕಳನ್ನು ಹೇಗೆ ಸಾಕಲಿ?" ಅವಳು ಹೊರಟು ಹೋದರೂ, ಇವಳು ಹಾಗೆಯೇ ಕುಳಿತಿದ್ದಳು.

* * *

"ಮುಂಬಾಗಿಲನ್ನು ಹೀಗೆ ತೆಗೆದು, ಒಬ್ಬರೇ ಕೂತ್ಕೊಂಡಿದೀರಲ್ಲ!" ಉಷಾ ಬೆಚ್ಚಿ ಇತ್ತ ತಿರುಗಿದಳು. ಅವಳ ಹಿಂದೆ ರಂಗನಾಥ ನಿಂತಿದ್ದ. ಅವಳು ಬಲವಂತವಾಗಿ ನಕ್ಕಳು.

"ಯಾಕೆ ಹುಷಾರಿಲ್ವಾ? ಈಗ್ತಾನೇ ಒಬ್ಬ ಹೆಂಗಸ್ರು ಇಲ್ಲಿಂದ ಹೋದ್ರಲ್ಲ..... ಯಾರು ಅವರು?" ಅವನನ್ನು ಕಂಡು ಅವಳು ಪುಲಕಿತಳಾಗಿದ್ದಳು.

ಉಷಾ ಎದ್ದು ಹೋಗಿ, ಮುಂಬಾಗಿಲನ್ನು ಭದ್ರ ಪಡಿಸಿ, ಅವನನ್ನು ಅಪ್ಪಿ ಕೊಂಡು, ಅವನಿಗೆ ಮುತ್ತನಿತ್ತಳು.

"ನಿಮಗೊಂದು ಗುಡ್ ನ್ಯೂಸ್....." ಎಂದಳು.

"ನಿನ್ನ ಮಾವ ಡೈವೋರ್ಸ್ ಕೊಡೋಕೆ ಒಪ್ಪಿಕೊಂಡ್ರಾ?"

"ಅವನು, ನನ್ನ ಗಂಡ ಅಲ್ಲ. ನಾನು, ಅವನನ್ನು ಮದುವೆಯಾಗಿಲ್ಲ."

"ಮತ್ತೆ..... ಯಾವ ಸಂಬಂಧವೂ ಇಲ್ಲದೇ ಒಟ್ಟಿಗೆ ಇದ್ರಾ? ಅತ್ತಿಗೆ ಹೇಳಿದರು, ನೀವಿಬ್ಬರೂ ಮದುವೆಯಾಗಿದ್ದೀರಂತೆ. ನನಗೆ ಈ ವಿಷಯ ಹೇಳಲೇ ಇಲ್ಲ." ಆಕ್ಷೇಪಿಸಿದ.

"ಹೇಳಿದ್ದಿದ್ರೆ, ನೀವು ನನ್ನ ಹತ್ತಿರ ಖಂಡಿತಾ ಬರುತ್ತಿರಲಿಲ್ಲ. ಅಲ್ಲದೇ ನಾನು ಅವನ ಪತ್ನಿ ಎಂದು ಹೇಳಿಕೊಳ್ಳುವುದರಲ್ಲಿ ಯಾವ ಹೆಮ್ಮೆಯೂ ಇರಲಿಲ್ಲ."

"ಆದರೂ ನಾವು ತಪ್ಪು ಮಾಡಿದೆವು. ನಿಮ್ಮ ಗಂಡಂಗೆ ನಮ್ಮಿಬ್ಬರ ಸಂಬಂಧದ ಬಗ್ಗೆ ತಿಳಿದರೆ?"

"ತಿಳಿಯಲಿ ಬಿಡಿ. ನಿಮಗ್ಯಾಕೆ ಭಯ?"

"ಪರಪುರುಷನ ಹೆಂಡತಿಯನ್ನು ಮುಟ್ಟುವುದು ಅಪರಾಧವಾಗುತ್ತೆ."

"ಪರಪುರುಷನ ಸಂಗವನ್ನು ಬಯಸಿ ಹೆಂಡತಿ ಓಡಿ ಹೋದರೆ ಅದೂ ಅಪರಾಧವೇ. ಆದರೆ ಅದಕ್ಕೆ ಕಾನೂನಿನಲ್ಲಿ ಯಾವ ಶಿಕ್ಷೆ ಇದೆ?" ಅವನು ಉತ್ತರಿಸದೆ, ಸಂಶಯದಿಂದ ಅವಳನ್ನೇ ನೋಡಿದ.

"ನೀವ್ಯಾಕೆ ಸುಳ್ಳು ಹೇಳಿದಿರಿ? ನಮ್ಮ ಹೆಂಡತಿ ಬದುಕಿಲ್ಲ ಅಂತ. ಓಡಿಹೋದರು ಅಂತ ತಿಳಿದರೆ, ನಾನು ನಿಮ್ಮ ಬಗ್ಗೆ ಏನಂದು ಕೊಳ್ತೀನೋ ಅಂತ ಅನ್ನಿಸ್ತಾ?"

"ಇಲ್ಲ, ಹಾಗೆ ಹೇಳಲು ಮನಸ್ಸು ಹಿಂಜರಿಯಿತು. ಅವಳು ನನಗೆ ದ್ರೋಹ ಮಾಡಿದಳು. ಅವಮಾನ ಮಾಡಿದಳು."

"ನೀವ್ಯಾಕೆ ಮತ್ತೆ ಮದುವೆಯಾಗಲಿಲ್ಲ?"

"ನನಗೆ ಹೆಂಗಸರ ಮೇಲೆ ನಂಬಿಕೆಯೇ ಹೊರಟು ಹೋಗಿತ್ತು. ನಿಜ ಹೇಳ್ತೀನಿ. ನೀವು ಬೇರೊಬ್ಬನ ಮಡದಿ ಅಂತ ತಿಳಿದಿದ್ರೆ ನಾನು ನಿಮ್ಮ ಕಡೆ ಕಣ್ಣೆತ್ತಿ ಸಹ ನೋಡ್ತಿರಲಿಲ್ಲ. ನನ್ನ ಅತ್ತಿಗೆಯಂತೆ ಗೌರವಿಸುತ್ತಿದ್ದೆ."

ಉಷಾ ನಕ್ಕಳು. ಗೌರವದಿಂ ಅವನ ಕಡೆ ನೋಡಿದಳು.

"ನಿಮ್ಮಂಥ ಗಂಡಸು ಈ ಕಾಲದಲ್ಲಿ ವಿರಳ. ನಿಮ್ಮನ್ನು ಹೊಗಳಬೇಕೋ, ತೆಗಳ ಬೇಕೋ ತಿಳಿಯದು. ಆದರೆ ನಿಮ್ಮಿಂದ ನನಗೆ ಉಪಕಾರವೇ ಆಯಿತು. ಸೋದರ ಮಾವನಿಂದ ಬಿಡುಗಡೆ ಸಿಕ್ಕಿತು. ಹಾಗೇ ಒಂದು ಸಂತಸದ ಸುದ್ದಿ, ನಾನೀಗ ಎರಡು ತಿಂಗಳ ಗರ್ಭಿಣಿ."

"ಹೌದಾ?" ಎನ್ನುತ್ತಾ ಅವಳ ರಾಗರಂಜಿತವಾದ ಮುಖವನ್ನು ಚುಂಬಿಸಿ, ಅವಳ ಹೊಟ್ಟೆಯ ಮೇಲೆ ಕೈಯಾಡಿಸಿದ. ಅವನಿಗೂ ಏನೋ ಖುಷಿಯಾಗಿತ್ತು.

"ಈಗ್ಲಾದ್ರೂ ಬೇಗ ಮದುವೆಯಾಗೋಣ, ಇನ್ನು ತಡಮಾಡಬಾರದು."

“ಈಗಲೇ ಬೇಡ. ಕೆಲವು ವಿಷಯಗಳು ಇತ್ಯರ್ಥವಾಗಬೇಕಾಗಿದೆ. ಒಂದಿಷ್ಟು ಸಮಯ ಕೊಡಿ.”

“ಇಲ್ಲ, ಇನ್ನೂ ನೀವಿ ಇಲ್ಲಿರುವುದು ಕ್ಷೇಮವಲ್ಲ. ಈಗಲೇ ನಮ್ಮ ಅಣ್ಣನ ಮನೆಗೆ ಕರ್ಕೊಂಡು ಹೋಗ್ತೀನಿ.”

“ಇವತ್ತು ಬೇಡ, ಯಾಕೋ ನನ್ನ ಮೂಡ್ ಚೆನ್ನಾಗಿಲ್ಲ.”

“ಹಾಗಾದ್ರೆ ನಾನೇ ಇಲ್ಲಿ ಇರ್ತೀನಿ.”

“ಬೇಡ, ಮತ್ತೆ ಆ ಹೆಂಗಸು ಬಂದರೂ ಬರಬಹುದು.” ಎನ್ನುತ್ತಾ ನಡೆದ ವಿಚಾರಗಳನ್ನು ತಿಳಿಸಿದಳು.

“ಅವಳು ಇಲ್ಲಿದ್ದರೆ, ಮಾವನೂ ಇಲ್ಲಿಗೆ ಬರುತ್ತಾನೆ. ನಾನು ಪೋಲೀಸರಿಗೆ ವಿಷಯ ತಿಳಿಸಿ, ಅವನು ಕೆಲವು ದಿನಗಳಾದರೂ ಲಾಕಪ್‌ನಲ್ಲಿರುವಂತೆ ಮಾಡಬೇಕು. ಆಗಲೇ ನನಗೆ ಸಮಾಧಾನ.” ಹಲ್ಲು ಕಡಿದಳು.

“ಇಂಥ ರೋಷ, ಗರ್ಭಿಣಿ ಸ್ತ್ರೀಗೆ ಒಳ್ಳೆಯದಲ್ಲ. ನನ್ನ ಮಗು ಆರೋಗ್ಯವಂತ ವಾಗಿರಬೇಕು.” ಎನ್ನುತ್ತಾ ಹೊಟ್ಟೆಯನ್ನು ಚುಂಬಿಸಿದ. ಅವಳು ವಿಸ್ಮಯಗೊಂಡಳು.

“ಈಗ ಅನ್ನಿಸ್ತಾ ಇದೆ, ನಾನು ಇಷ್ಟು ಬೇಗ ಗರ್ಭಿಣಿಯಾಗಬಾರದಿತ್ತು. ನಿಮಗೆ ನನಗಿಂತ ಹುಟ್ಟಲಿರುವ ಮಗುವಿನ ಮೇಲೆ ಪ್ರೀತಿ ಹೆಚ್ಚಾಗ್ತಿದೆ.”

“ಹಾಗೇನಿಲ್ಲ ಉಷಾ.....ಮೊದಲು ನೀವು,ನಿಮ್ಮ ನಂತರ ನಮ್ಮ ಮಗು. ಆದರೆ ದಿನ ದಿನದ ಅನುಭವಗಳನ್ನು ನೀವು ನನ್ನೊಂದಿಗೆ ಹಂಚಿಕೊಳ್ಳಬೇಕು. ನನಗೂ ಈ ಸಂತಸದಲ್ಲಿ ಪಾಲು ಸಿಗಲಿ. ಒಂದೆರಡು ದಿನಗಳ ಮಟ್ಟಿಗಾದರೂ ನೀವು ನನ್ನ ಜೊತೆಯಲ್ಲಿರಬೇಕು. ನನಗೆ ನಿಮ್ಮನ್ನು ಬಿಟ್ಟಿರುವುದು ಕಷ್ಟವಾಗ್ತಿದೆ.” ನೀವು ನನ್ನವರೇ ಅಂತ ಅನ್ನಿಸ್ತಿದೆ.

“ನನಗೂ ಹಾಗೇ ಅನ್ನಿಸ್ತಿದೆ. ಆದರೆ, ಈ ಮಾವನಿಗೆ ಮೊದಲು ಬುದ್ಧಿ ಕಲಿಸಬೇಕಲ್ಲ!”

“ಮಾವ..... ಮಾವ..... ನಿಮ್ಮ ಮಾವನ ದೆಸೆಯಿಂದ, ನಮ್ಮ ಸಂತೋಷದ ದಿನಗಳನ್ನು ಯಾಕೆ ಹಾಳು ಮಾಡಿಕೊಳ್ಳಬೇಕು? ಅವರಿಗೆ ಬುದ್ಧಿ ಕಲಿಸಲು ಸಾಕಷ್ಟು ಸಮಯವಿದೆ. ಮೊದಲು ಮದುವೆ, ನಂತರ ಮಗುವಿನ ಜನನ, ಆಮೇಲೆ ಮಾವನಿಗೆ ಶಿಕ್ಷೆ. ಸದ್ಯಕ್ಕೆ ನನಗೆ ನಮ್ಮಿಬ್ಬರದೇ ಚಿಂತೆ. ನನ್ನನ್ನು ಯಾಕೆ ಹೀಗೆ ಸತಾಯಿಸ್ತೀರಾ...... ಅದರಲ್ಲೇನು ಮಜಾ?”

ಅವಳು ಕಚಗುಳಿ ಇಡಿಸಿಕೊಂಡವಳಂತೆ ನಕ್ಕಳು.

“ಸರಿ. ಈಗಲೇ ನಿಮ್ಮ ಅತ್ತಿಗೆಗೆ ಫೋನ್ ಮಾಡಿ, ಮುಹೂರ್ತವನ್ನು ಗೊತ್ತು ಮಾಡುವಂತೆ ಹೇಳಿ. ನಾನು ವಧುವಾಗಿ ನಿಮ್ಮ ಮನೆಗೆ ಬರ್ತೀನಿ.”

ಆ ದಿನ ರತ್ನಮ್ಮ ಕೇಳಿದ್ದ ಮಾತನ್ನು ನೆನಪಿಸಿಕೊಂಡು ನಕ್ಕಳು.

"ರತ್ನಮ್ಮನಿಗೆ ಏನೋ ಅನುಮಾನ ಬಂದಿರಬೇಕು. ಅವತ್ತೇ ನೀವ್ಯಾಕೆ ಸರ್‌ನ ಮದುವೆಯಾಗ್ಬಾರ್ದು ಅಂತ ಕೇಳಿದ್ದಳು."

"ಅವಳೊಬ್ಬಳು ತಲೆಹರಟೆ. ಸಲುಗೆ ಜಾಸ್ತಿಯಾಯಿತು. ನೀವು ಬಂದ ಮೇಲೆ ತೆಪ್ಪಗಾಗ್ತಾಳೆ."

"ನಿಜ ಹೇಳಿ ರಂಗನಾಥ್, ನೀವೆಂದೂ ಅವಳ ಸಹವಾಸ ಮಾಡಿಲ್ವಾ?"

"ಛೀ..... ನನ್ನ ಮೇಲೆ ನಂಬಿಕೆ ಇಲ್ವಾ? ನಾನು ಸಂಯಮ ಇರುವ ಮನುಷ್ಯ. ಅಲ್ಲದೇ ಅವಳು ಪರ ಪುರುಷನ ಪತ್ನಿ."

"ನಾನೂ ಪರಸ್ತ್ರೀಯಾಗಿದ್ದೆ. ಆದರೆ ಸಂಯಮ ನಿಮಗಿರಲಿಲ್ಲವಲ್ಲ! ಕೊಚ್ಚೆಯಲ್ಲಿ ಬಿದ್ದು, ಎದ್ದು ಬಂದವಳು ನಾನಾಗಿದ್ದೆ. ಮೈಮೇಲೆ ಬಟ್ಟೆ ಇರಲಿಲ್ಲ. ಸರಿಯಾಗಿ ಸ್ನಾನ ಮಾಡಿರಲಿಲ್ಲ. ರತ್ನಮ್ಮನ ಕಾಟನ್ ಸೀರೆಯಲ್ಲಿ ನಾನು ನಿಮಗೆ ಸುಂದರವಾಗಿ ಕಂಡ್ನಾ?" ತಮಾಷೆಯಾಗಿಯೂ ಇತ್ತು. ವ್ಯಂಗ್ಯವೂ ಇತ್ತು. ಪರೀಕ್ಷಿಸುವಂತೆ ಪ್ರಶ್ನಿಸಿದಳು.

"ಕೆಸರಿನ ಕಮಲದಂತೆ ಕಂಡಿರಿ ಅಂತ ಹೇಳ್ಲಾರೆ. ನಿಮ್ಮ ಈ ಯೌವನ ನನ್ನನ್ನು ಆಕರ್ಷಿಸಿದ್ದು ನಿಜ, ಆಕಸ್ಮಿಕವಾಗಿ ಬಂದು, ಧೈರ್ಯವಾಗಿ ನನ್ನ ಉಡುಪನ್ನು ಧರಿಸಿ ನಿಂತಿದ್ದ ಭಂಗಿ, ನನ್ನನ್ನು ಈಗಲೂ ಮತ್ತನನ್ನಾಗಿ ಮಾಡುತ್ತೆ." ಎನ್ನುತ್ತಾ ಅವಳನ್ನು ತನ್ನ ಬಳಿಗೆ ಎಳೆದುಕೊಂಡ.

"ನನ್ನ ಪತ್ನಿಯೊಡನೆ ನಾನೆಂದೂ ಇಷ್ಟು ಆನಂದವಾಗಿರಲಿಲ್ಲ. ಅವಳಲ್ಲಿ ನನಗಾಗಿ ಈ ಕಾತುರತೆ ಇರಲಿಲ್ಲ. ನೀವು ನನಗಾಗಿಯೇ ಸೃಷ್ಟಿಯಾದವರು. ನಿಮ್ಮಿಂದ ವಿಪರೀತ ವಸೂಲಿಯಾಗಬೇಕಾಗಿದೆ." ಎನ್ನುತ್ತಾ ಅವಳನ್ನು ಬಿಗಿಯಾಗಿ ಆಲಂಗಿಸಿದ. ದೇಹಗಳು ಅಂಟಿಕೊಂಡವು.

೬

ಕರೆಗಂಟೆ ಸದ್ದಾದಾಗ ಇಬ್ಬರೂ ಎಚ್ಚೆತ್ತರು. ರಂಗನಾಥ ಉಡುಪನ್ನು ಧರಿಸಿ, ಸೋಫಾದ ಮೇಲೆ ಕುಳಿತ. ಉಷಾ, ಸೀರೆಯನ್ನು ಸರಿಪಡಿಸಿಕೊಂಡು ಮುಂಗೂದಲನ್ನು ಸವರಿಕೊಂಡು, ಎದ್ದು ಬಂದು ಬಾಗಿಲನ್ನು ತೆಗೆದಳು. ಎದುರಿಗೆ ಶೇಷಾದ್ರಿ ನಿಂತಿದ್ದ. ಅವನ ಹಿಂದೆ ಅವನ ಪತ್ನಿ ಹಾಗೂ ಮಕ್ಕಳು ನಿಂತಿದ್ದರು. ಅವಳನ್ನು ತಳ್ಳಿಕೊಂಡಂತೆಯೇ ಒಳಬಂದ. ಅವನ ಹೆಂಡತಿಯೂ ಮಕ್ಕಳೊಂದಿಗೆ ಒಳ ಬಂದಳು. ಅವನು ರಂಗನಾಥನನ್ನು ಕಂಡ.

"ಉಷಾ...... ಯಾರಿವ್ರು? ಇಲ್ಲೇನು ಮಾಡ್ತಿದಾರೆ?" ಜಬರ್ದಸ್ತಿನಿಂದ ಕೇಳಿದ.

ಉಷಾ ಉತ್ತರಿಸಲಿಲ್ಲ. ರಂಗನಾಥ ಮಾತನಾಡಿದ.

"ನಾನು, ಇವರ ಲಾಯರ್ರು, ಇನ್ನು ಮುಂದೆ ನನ್ನತ್ರ ಮಾತಾಡಿ....."

"ನೀವು ಲಾಯರ್ರೋ....... ಇವಳ ಮಿಂಡನೋ...... ಅದನ್ನು ಇವಳು ಹೇಳಲಿ. ನೀವು ಮಾತಾಡ್ಬೇಡಿ. ಬೊಗಳು, ಇವರು ಯಾರೂಂತ?" ಅವಳ ಮುಖವನ್ನು ತಿವಿದ. ರಂಗನಾಥ ಬಾಗಿಲಾಚೆಗೆ ಬಂದು ನಿಂತ.

"ಇವರು ರಂಗನಾಥ್ ಅಂತ. ನಾನು ಇವರನ್ನು ಮದುವೆ ಆಗ್ತಿದೀನಿ. ನಾನೀಗ ಇವರ ಮಗುವಿಗೆ ಗರ್ಭಿಣಿಯಾಗಿದೀನಿ....." ಅಳುಕು ಇಲ್ಲದೇ ಹೇಳಿದಳು.

"ಓಹೋ..... ಪ್ರವರ ಹೇಳ್ತಿದಾಳೆ. ನಾನು, ನಿನ್ನ ಗಂಡ ಬದುಕಿರುವಾಗ, ನೀನು ಮತ್ತೆ ಮದುವೆಯಾಗ್ತೀಯಾ? ಎಷ್ಟೇ ಧೈರ್ಯ ನಿನಗೆ?"

"ನೀನು, ನನ್ನ ಗಂಡ ಅಲ್ಲ. ನೀನು, ಇವಳ ಗಂಡ. ಇವು ನಿನ್ನ ಮಕ್ಕಳು. ನೀನು, ನನ್ನ ಗಂಡನಾಗಿರುವುದಕ್ಕೆ ಏನು ಸಾಕ್ಷಿ ಇದೆ, ಅದನ್ನು ಹೇಳು." ಬೆಟ್ಟು ತೋರಿದಳು.

ಇವಳು, ನಿನ್ನ ಹೆಂಡತಿ ಅನ್ನುವುದಕ್ಕೆ ನೀನು ಕಟ್ಟಿರುವ ಮಾಂಗಲ್ಯ ಇವಳ ಕತ್ತಿನಲ್ಲಿದೆ. ಈ ಮೂರು ಮಕ್ಕಳಿವೆ. ನಿನ್ನ ಮದುವೆ ಮಾಡಿಸಿದವರು ಸಾಕ್ಷಿ ಇದಾರೆ..... ಇವಳೇ ನಿನ್ನ ಪತ್ನಿ. ಕಾನೂನಿನಲ್ಲಿ ಇವಳೇ ಧರ್ಮಪತ್ನಿ. ಎಲ್ಲಾ ಅಧಿಕಾರ, ಹಕ್ಕು ಇವಳಿಗೆ. ನನಗೆ, ಏನು ಕೊಟ್ಟಿದೀಯ? ಒಂದೇ ಒಂದು ಮಗುವನ್ನು ಕೊಡುವುದು ಸಾಧ್ಯವಾಗಲಿಲ್ಲ ನಿನಗೆ. ಆಪರೇಷನ್ ಮಾಡಿಸ್ಕೊಂಡು, ಸುಳ್ಳು ಹೇಳಿ, ಈ ಮದುವೆ ಯನ್ನು ಮುಚ್ಚಿಟ್ಟು, ನನ್ನ ಮಾನ ಹಾನಿ ಮಾಡಿ, ನನ್ನನ್ನು ದೇವರ ಮುಂದೆ ನಿಲ್ಲಿಸಿ, ಹೆಂಡತಿ ಅಂತ ನೀನು ಹೇಳಿದ ಮಾತ್ರಕ್ಕೆ ನಾನು, ನಿನ್ನ ಹೆಂಡತಿ ಆಗಲಿಲ್ಲ. ಕೇವಲ ನನ್ನ ದೇಹಕ್ಕಾಗಿ, ನನ್ನ ಈ ಆಸ್ತಿಗಾಗಿ ಮದುವೆಯ ನಾಟಕವನ್ನಾಡಿ ದೀಯ. ನಾನು ನಿನ್ನನ್ನು ಧಿಕ್ಕರಿಸುತ್ತೇನೆ. ನಮ್ಮ ಈ ಮದುವೆಗೆ ಯಾವ ಮಹತ್ವವಿಲ್ಲ. ಇದು ನನ್ನ ಮನೆ, ಇಲ್ಲಿಂದ ಹೊರಟು ಹೋಗು."

"ನಾನು ನಿನ್ನ ಮೇಲೆ ಕೇಸ್ ಹಾಕ್ತೀನಿ. ಅದ್ಹೇಗೆ ಮತ್ತೆ ಮದುವೆಯಾಗ್ತೀಯ ನಾನೂ ನೋಡ್ತೀನಿ. ನಿನ್ನ ಮೇಲಿನ ಅಧಿಕಾರ ಏನೇ ಇದ್ದರೂ ಅದು ನನಗೆ....."

"ಸರಿ ಹಾಗಾದ್ರೆ..... ನಾನೂ ನಿನ್ನ ಮೇಲೆ ಪೋಲೀಸ್ ಕಂಪ್ಲೇಂಟ್ ಕೊಡ್ತೀನಿ. ಶಿಕ್ಷೆ ಆಗೋದು ನಿನಗೆ, ನನಗಲ್ಲ."

"ಮಹಾ ಕಾನೂನು ಗೊತ್ತಿರೋಳು..... ಇದೆಲ್ಲಾ ನಮ್ಮ ಅಪ್ಪನ ಆಸ್ತಿ, ಎಲ್ಲಾ ನನಗೆ ಸೇರಬೇಕು."

"ನನಗೂ ಕಾನೂನು ಗೊತ್ತಿದೆ. ಎಲ್ಲಾ ಕೋರ್ಟ್‌ನಲ್ಲೇ ಇತ್ಯರ್ಥವಾಗಲಿ."

"ಹಾಗೆ ಮಾಡಬೇಡಿ. ನಮ್ಮ ಸಂಸಾರ ದಿಕ್ಕು ತಪ್ಪಿ ಹೋಗುತ್ತೆ. ಈ ಮಕ್ಕಳು

ಅನಾಥರಾಗಿ ಹೋಗ್ತಾರೆ." ವಸಂತ ಉಷಾಳ ಕಾಲಿಗೆ ಬಿದ್ದಳು.

"ಏಯ್..... ನೀನು ಅತ್ಲಾಗೆ ಸರಿ. ಅವಳ ಕಾಲಿಗ್ಯಾಕೆ ಬೀಳ್ತೀಯ? ಎಲ್ಲವನ್ನೂ ಹೇಗೆ ಕಿತ್ಕೋಬೇಕು ಅಂತ ನಂಗೆ ಗೊತ್ತು."

"ಇನ್ನೆಂದೂ ಈ ಮನೆಗೆ ಬರೋಲ್ಲ ಅಂತ ಪತ್ರ ಬರೆದೋನು ಮತ್ಯಾಕೆ ಬಂದಿದೀಯ? ಸುಮ್ನೆ ಹೋಗು, ನಾನು ನಿಂಗೆ ಹೆದರೋಲ್ಲ."

"ನಾನೂ ಹೆದರೋಲ್ಲ. ಅನ್ಯಾಯ ನನಗೆ ನಿನ್ನಿಂದ ಆಗಿದೆ."

"ನಾನು ಯಾವ ದ್ರೋಹವನ್ನೂ ಮಾಡಿಲ್ಲ."

"ಈಗ ಮಾಡಿಲ್ವಾ? ಕದ್ದು ಬಸಿರಾಗಿದೀಯ." ಅಣಕಿಸಿದ.

"ನಿನ್ನಂಥ ಷಂಡನಿಗೆ ಬುದ್ಧಿ ಕಲಿಸೋಕೆ ಅಂತ್ಲೇ ನಾನು ಈ ದಾರಿ ಹಿಡಿದದ್ದು."

"ನಾನು ಷಂಡ, ಇವಳು ದೊಡ್ಡ ಹೆಂಗಸು. ನಾನೂ ಸಂಸಾರಸ್ಥ. ನನಗೂ ಮಕ್ಕಳಿವೆ. ನೀನು, ನನಗೆ ಸಹಕರಿಸಲಿಲ್ಲ, ಅದಕ್ಕೆ ಇವಳನ್ನು ಮದುವೆಯಾದೆ, ಅಲ್ವಾ ವಸಂತ?"

"ನೀವು ಸುಮ್ನಿರಿ, ಏನೇನೋ ಮಾತಾಡ್ಬೇಡಿ. ನಿಮ್ಮಿಂದ ಇವರಿಗೆ ಅನ್ಯಾಯ ವಾಗಿದೆ. ಇವರ ಪಾಡಿಗೆ ಇವರನ್ನು ಬಿಟ್ಟು ಬಿಡಿ."

"ನಾನು ಬಿಡೋಲ್ಲ... ನೀನು ಈ ವಿಷಯದಲ್ಲಿ ಬಾಯಿ ಹಾಕಬೇಡ."

"ಹಾಗಾದ್ರೆ ಒಂದು ಕೆಲಸ ಮಾಡಿ. ನನಗೆ ಡೈವೋರ್ಸ್ ಕೊಟ್ಟು ಬಿಡಿ. ಇವರನ್ನು ಶಾಸ್ತ್ರೋಕ್ತವಾಗಿ ಮದುವೆಯಾಗಿ. ನಾನು ಮಕ್ಕಳನ್ನು ಕೆರೆಗೆ ನೂಕಿ, ನಾನೂ ಹಾರ್ಕೋತೀನಿ."

"ಮುಚ್ಚುಬಾಯಿ. ನಡತೆಗೆಟ್ಟೋಳನ್ನು ಮದುವೆಯಾಗೋದಾ? ಇವಳ ಮಿಂಡ ನಿಗೆ ಹುಟ್ಟುವ ಮಗುವನ್ನು ನನ್ನದೆಂದು ಒಪ್ಪಿಕೊಳ್ಳೋದಾ?"

ರಂಗನಾಥ ಮತ್ತೆ ಒಳಕ್ಕೆ ಬಂದ, "ರೀ ಮಿಸ್ಟರ್..... ಸರಿಯಾಗಿ ಮಾತನಾಡಿ. ನಾನು ಉಷಾಳನ್ನ ಸದ್ಯದಲ್ಲೇ ಮದುವೆಯಾಗ್ತಿದೀನಿ." ಉಷಾಳ ಪಕ್ಕಕ್ಕೆ ಸರಿದು ನಿಂತು ನುಡಿದ.

"ನಿಮಗೆ ಏನೂ ಗೊತ್ತಿಲ್ಲ. ಇವಳು ಸುಳ್ಳು ಹೇಳಿದಾಳೆ. ಇವಳು, ನನ್ನ ಪತ್ನಿ. ಇಬ್ಬರು ಹೆಂಡತಿಯರು ಇರಬಾರದು ಅಂತೇನಿಲ್ಲವಲ್ಲ....? ನೀವಿ ಮಾತಾಡ್ಬೇಡಿ."

"ಇವರಿಗೆ ನಿಮ್ಮೊಂದಿಗೆ ಇರಲು ಇಷ್ಟವಿಲ್ಲ. ಬಲವಂತ ಮಾಡುವ ಅಧಿಕಾರ ನಿಮಗಿಲ್ಲ. ಅದು ಶಿಕ್ಷಾರ್ಹ ಅಪರಾಧವಾಗುತ್ತೆ. ಕಾನೂನು ನಿಮಗೆ ವಿರುದ್ಧವಾಗಿಯೇ ಇರುತ್ತೆ. ನೀವು ಏನನ್ನೂ ಮಾಡುವಂತಿಲ್ಲ. ಇವರ ಪಾಡಿಗೆ ಇವರನ್ನು ಬಿಡಿ."

"ಇವಳು, ನಿಮಗೆ ಏನೋ ಮೋಡಿ ಮಾಡಿದಾಳೆ. ಇವಳ ಬುದ್ಧಿಯೇ ಅಂಥದು. ನನಗೆ ಮೋಸ ಮಾಡಿದ ಹಾಗೆ, ನಿಮಗೂ ಮಾಡದೇ ಬಿಡುವವಳಲ್ಲ.

ತಿಳವಳಿಕಸ್ಥರಂತೆ ಕಾಣ್ತೀರಿ. ನಿಮಗೆ ಯಾಕೆ ಬೇಕು ಇವಳ ಸಹವಾಸ. ಎರಡ್ದಿನ ಸುಖ ಅನುಭವಿಸಿದ್ದಾಯ್ತಲ್ಲ, ಇನ್ನು ಬಿಟ್ಟು ಬಿಡಿ." ಅಸಹ್ಯವಾಗಿ ನಕ್ಕ.

"ಅದೆಲ್ಲಾ ನಿಂಗ್ಯಾಕೆ? ಇನ್ನಾದರೂ ನೀನು ನನ್ನ ಪಾಡಿಗೆ ನನ್ನನ್ನು ಬಿಡು. ಅಮ್ಮನೇ ಬದುಕಿಲ್ಲ, ಇನ್ನು ನಿನ್ನ ಸಂಬಂಧ ಎಲ್ಲಿದೆ? ಮಾವನಾಗಿ ನನಗೆ ಮೋಸ ಮಾಡಿದವನು ನೀನು. ನನಗೆ ಈಗ ಒಳ್ಳೆಯವನಾಗಲು ಸಾಧ್ಯವಿಲ್ಲ. ನಿನ್ನ ಸುದ್ದಿಯೇ ಬೇಡ ನನಗೆ."

"ಸರಿ ಹಾಗಾದ್ರೆ, ನಿನಗೆ ಬಿಡುಗಡೆ ಕೊಡ್ತೀನಿ. ಆದರೆ ಈ ಆಸ್ತಿಯಲ್ಲಿ ನಿನಗೆ ಯಾವ ಹಕ್ಕೂ ಇಲ್ಲ. ಹಾಗಂತ ಬರೆದುಕೊಡು."

"ನಾಚಿಕೆಯಾಗೋಲ್ವಾ ನಿನಗೆ? ಈ ಮನೆ ನನಗೆ ಸೇರಿದ್ದು. ನಿನಗಲ್ಲ."

"ಹಾಗಾದ್ರೆ ಇಲ್ಲೇ ನನ್ನ ಜೊತೆಯಲ್ಲಿ ಬಿದ್ದಿರು. ಈ ದರಿದ್ರ ಪಿಂಡಾನ ತೆಗೆಸಿ ಬಿಸ್ಹಾಕು."

"ದಯವಿಟ್ಟು ಹಾಗೆಲ್ಲಾ ಮಾತಾಡ್ಬೇಡಿ. ನಮಗೂ ಮಕ್ಕಳಿವೆ. ಭ್ರೂಣಹತ್ಯೆಯು ಒಳ್ಳೆಯದಲ್ಲ..... ತಪ್ಪು ನಿಮ್ಮದೇ ಇರುವಾಗ, ಹೀಗ್ಯಾಕೆ ಆಡ್ತೀರಿ?" ವಸಂತ ಅಂದಳು.

"ಹೋಗೇ ಅತ್ಲಾಗೇ, ಬಂದುಬಿಟ್ಲು ಬಾಯಿ ಹಾಕ್ಕೊಂಡು. ನಾನು ಹೇಳಿದ್ದು ಸರಿಯಾಗಿಯೇ ಇದೆ. ಇದ್ದರೆ ನಾಯಿ ತರಹ ನನ್ನ ಜತೆ ಇರಬೇಕು. ಇಲ್ದಿದ್ರೆ ಎಲ್ಲಾ ಬಿಟ್ಟು ಹೋಗ್ತಿರಬೇಕು."

"ನಾನು ಇಲ್ಲಿಯೂ ಇರೋಲ್ಲ. ನಿನಗೆ ಮನೆಯನ್ನೂ ಕೊಡೊಲ್ಲ. ಅದೇನು ಮಾಡ್ತೀಯೋ ಮಾಡು. ನಾನು ಈಗ್ಲೇ ಪೋಲೀಸ್ ಕಂಪ್ಲೇಂಟ್ ಕೊಡ್ತೀನಿ." ಎನ್ನುತ್ತಾ ಫೋನನ್ನಿಟ್ಟ ಕಡೆಗೆ ನಡೆದಳು.

ಅವನು ಅಡ್ಡ ಬಂದು, ರಿಸೀವರ್‌ನ ಕಿತ್ತುಕೊಂಡ. ಉಷಾ, ಅವನ ಕೆನ್ನೆಗೆ ಪಟಾರನೆ ಹೊಡೆದಳು.

ಅವನು ತತ್ತರಿಸಿದ.

"ಬಾಯಿಗೆ ಬಂದ ಹಾಗೆ ಮಾತಾಡ್ತೀಯ? ನಾನು ನಿನಗೆ ಬುದ್ಧಿ ಕಲಿಸದೇ ಬಿಡೋಲ್ಲ."

ಮತ್ತೆ ರಿಸೀವರ್‌ನ ಎತ್ತಿಕೊಂಡಾಗ, ವಸಂತ ಉಷಾಳ ಕೈ ಹಿಡಿದಳು.

"ಪ್ಲೀಸ್, ಹಾಗೆಲ್ಲಾ ಮಾಡ್ಬೇಡಿ. ನಮ್ಮ ಮಾನ ಹೋಗುತ್ತೆ. ನಾವೆಲ್ಲಾ ಅನಾಥರಾಗಿ ಹೋಗ್ತೀವಿ. ಪೋಲೀಸ್ನೋರು ದನ ಬಡಿದ ಹಾಗೆ ಬಡಿದು ಸಾಯಿಸ್ತಾರೆ." ದೈನ್ಯತೆಯಿಂದ ಕೇಳಿದಳು.

"ಹಾಗಾದ್ರೆ ಇವನಿಗೆ ತಿಳುವಳಿಕೆ ಹೇಳಿ, ಇಲ್ಲಿಂದ ಕರ್ಕೊಂಡು ಹೋಗಿ. ಮತ್ತೆಂದೂ ಇವನು ನನ್ನ ಕಣ್ಣಿಗೆ ಬೀಳಬಾರದು. ನಿಮ್ಮನ್ನು ನೋಡಿದರೆ 'ಅಯ್ಯೋ'

ಅಂತ ಅನ್ನಿಸುತ್ತೆ. ನೀವೂ ಇವನಿಗೆ ಡೈವೋರ್ಸ್ ಕೊಟ್ಟು ಬಿಡಿ. ಒಂಟಿಯಾಗಿ ಬಿದ್ದಿರಲಿ. ಭಿಕ್ಷೆ ಬೇಡಿದರೂ ಪರವಾಗಿಲ್ಲ. ಇಂಥೋನ ಜೊತೆಯಲ್ಲಿ ಮಾತ್ರ ಬಾಳ ಬಾರದು."

"ನಿಮಗೆ ಯಾವ ಬಂಧನವೂ ಇಲ್ಲ. ಸುಲಭವಾಗಿ ಹೇಳ್ತೀರಿ. ನಾನು ಈ ಮೂರು ಮಕ್ಕಳನ್ನು ಕಟ್ಟಿಕೊಂಡು ಬಾವಿಗೆ ಬೀಳಬೇಕು ಅಷ್ಟೇ."

"ಇದುವರೆಗೂ ಸರಿಯಾಗಿತ್ತಲ್ಲ. ಇವಳ ತಲೆ ಕೆಟ್ಟಿದೆ. ಮಗುವಿನ ಆಸೆಗೆ ದೇಹಾನ ಮಾರಿಕೊಂಡಿದಾಳೆ. ಅದ್ಹೇಗೆ ಬಾಳ್ತಾಳೋ ನಾನೂ ನೋಡ್ತೀನಿ." ಹೂಂಕರಿಸಿದ.

"ಇನ್ನೂ ಬುದ್ಧಿ ಬರಲಿಲ್ವಾ ನಿಮಗೆ! ಲಾಕಪ್‌ನಲ್ಲಿ ಪೋಲೀಸ್ನೋರು ಒದೀತಾರೆ. ಮರ್ಯಾದೆ ಹೋಗುತ್ತೆ. ಇವರ ಪರವಾಗಿ ನಾನು ಕ್ಷಮೆ ಕೇಳ್ತೀನಿ. ನಿಮ್ಮ ತಂಟೆಗೆ ಬರದಂತೆ ನೋಡಿಕೊಳ್ತೀನಿ. ನೀವು ಹಾಯಾಗಿರಿ...."

"ನೀನೂ ಇವಳ ಜೊತೆ ಸೇರಿ ನನಗೆ ಅವಮಾನ ಮಾಡ್ತೀದೀಯಾ? ಹೆಂಗಸರ ಜಾತಿಯೇ ಅಂಥದ್ದು. ನೀನೂ ಹೋಗು ಇವನ ಹಿಂದೆ. ನಿನ್ನನ್ನೂ ಇಟ್ಕೋತಾನೆ......" ರಂಗನಾಥ ಮತ್ತೆ ಮುಂಬಾಗಿಲಿಗೆ ಹೋಗಿ ನಿಂತ.

"ಅಂಥಾ ಹಲ್ಕಾ ನೀನು..... ಇವಳ ಕೈ ಹಿಡಿದು, ನನ್ನನ್ನು ಕೆಡಿಸಿದೆ. ನಮ್ಮಿಬ್ಬರ ಮದುವೆಯನ್ನು ತಪ್ಪಿಸಿದೆ. ಅಂಥ ಗೋಮುಖ ವ್ಯಾಘ್ರ ನೀನು. ನಿನಗಿಂಥ ಹದಿನೈದು ವರ್ಷಕ್ಕೆ ಚಿಕ್ಕವಳಾದವಳ ಮೇಲೆ ನಿನಗೆ ಯಾವ ಕನಿಕರವೂ ಇರಲಿಲ್ಲ. ಅಮ್ಮನ ಮೇಲೆ ಗೌರವ ಇರಲಿಲ್ಲ. ನಿನ್ನ ದುರುದ್ದೇಶ ಏನೂಂತ ಈಗ ಗೊತ್ತಾಗಿದೆ. ನಿನಗೆ ಬೇಕಾಗಿದ್ದುದು ನನ್ನ ಪ್ರೀತಿ ಅಲ್ಲ. ಈ ಮನೆಯ ಮೇಲೆ, ನನ್ನ ಆಸ್ತಿಯ ಮೇಲೆ ನಿನ್ನ ದೃಷ್ಟಿ. ನಿನಗೆ ನಾಚಿಕೆ ಅನ್ನೋದೇ ಇಲ್ವಾ?"

"ನಾಚಿಕೆ ಯಾಕೆ? ಇದು ನನ್ನ ಅಪ್ಪನ ಮನೆ. ನಿನ್ನ ಅಮ್ಮನಿಗೆ ಯಾವ ಅಧಿಕಾರವೂ ಇರಲಿಲ್ಲ. ವಿಧವೆ ಹೆಂಗಸು ಅಂತ, ಅಪ್ಪ ಬಿಟ್ಟು ಕೊಟ್ಟಿದ್ದು. ಅದು ಬೇರೆಯವರ ಪಾಲಾಗದಿರಲಿ ಅಂತ ನಿನ್ನನ್ನು ಮದುವೆಯಾದೆ."

"ಯೌವನಕ್ಕೆ ಬಂದ ನಿನಗೂ, ಒಬ್ಬ ಗಂಡಸಿನ ಸಹವಾಸ ಬೇಕಾಗಿತ್ತು. ಆಗ ಮಜವಾಗಿತ್ತು. ಈಗ ಇವನು ಸಿಕ್ಕ ಮೇಲೆ, ನಾನು ಬೇಡ ಆದೆ, ಅಲ್ವಾ? ನೀನು ಉದ್ಧಾರ ಆಗೊಲ್ಲ, ನೋಡ್ತಿರು."

"ನಿನ್ನ ಮಾತಿಗೆ ಏನು ಬೆಲೆ? ಸುಮ್ಮನೆ ಹೋಗು, ಇದೆಲ್ಲಾ ನನಗೆ ಸೇರಿದ್ದು. ನಿನಗೆ ಬಿಡಿಗಾಸೂ ಸಿಕ್ಕೊಲ್ಲ."

"ಯಾಕೆ ಸಿಕ್ಕೋಲ್ಲ? ನೀನು ಇವನನ್ನು ಮದುವೆಯಾಗಿ ಹೋದರೆ, ನಾನು ಕೇಸು ಹಾಕ್ತೀನಿ. ಮನೆಯನ್ನು ನನಗೇ ದಕ್ಕಿಸಿಕೊಳ್ತೀನಿ ನೋಡ್ತಿರು. ಸುಮ್ಮನೇ

ಮಾತ್ರ ಇರೋಲ್ಲ."

"ಏನಾದರೂ ಮಾಡ್ಕೋ. ಈ ಮನೆ ಯಾರಿಗೆ ಸೇರಬೇಕು ಅನ್ನೋದನ್ನು ಕೋರ್ಟು ನಿರ್ಣಯಿಸಲಿ. ಅಲ್ಲಿಯವರೆಗೂ ಅದು ನನ್ನ ಮನೆ. ಇಲ್ಲಿ ನಿನಗೆ ಯಾವ ಹಕ್ಕೂ ಇಲ್ಲ. ಈಗ ನಿನ್ನ ಸಂಸಾರದೊಂದಿಗೆ ತೊಲಗಿ ಹೋಗು."

"ಕೇಸು ನಡೆಯುವಾಗ ನೀನೂ ಇರುವಂತಿಲ್ಲ. ಹೇಗೂ ಗೆಳೆಯ ಸಿಕ್ಕಿದಾನಲ್ಲ. ಮನೆ ಖಾಲಿ ಮಾಡಿ ಹೋಗು." ವಿಕಟವಾಗಿ ನಕ್ಕ.

"ಸುಮ್ಮನೇ ಬನ್ನಿ. ನಿಮ್ಮ ಮರ್ಯಾದೆ ಬೀದಿ ಪಾಲಾಗುತ್ತೆ ಅಷ್ಟೇ."

"ನೀನು ಹೋಗು ವಸಂತ. ನಾನು ಒಂದು ಇತ್ಯರ್ಥ ಮಾಡಿಯೇ ಬರ್ತೀನಿ."

"ಇನ್ನೂ ನಿಮಗೆ ಬುದ್ಧಿ ಬರಲಿಲ್ಲವಲ್ಲ. ಏನಾದ್ರೂ ಮಾಡ್ಕೊಳ್ಳಿ ನನಗೇನು." ಎಂದು ಮಕ್ಕಳನ್ನೂ ಎಳೆದುಕೊಂಡು, ಅವಳು ಮನೆಯಿಂದಾಚೆ ನಡೆದಳು.

"ಏ ವಸಂತಾ, ಕೇಳಿಲ್ಲಿ..... ಹೋಗ್ಬೇಡ." ಅವನು, ಅವಳನ್ನು ಕರೆಯಲು ಅವಳ ಹಿಂದೆ ನಡೆದ.

ಹೊರಬಾಗಿಲಲ್ಲಿ ನಿಂತಿದ್ದ ರಂಗನಾಥ ಒಳ ಬಂದ. ಮುಜುಗರಗೊಂಡಿದ್ದ.

"ಇದೆಲ್ಲಾ ಏನು ರಂಪಾ ಉಷಾ? ನೀವು ಇಲ್ಲಿದ್ರೆ, ನಿಮ್ಮ ಮಾವ ಗಲಾಟೆ ಮಾಡ್ತಾನೇ ಇರ್ತಾನೆ. ಈಗಲೇ ನಾವೂ ಇಲ್ಲಿಂದ ಹೊರಟು ಹೋಗೋಣ." ಅವನು ಅವಳ ತೋಳನ್ನೂ ಹಿಡಿದು ಎಳೆದ.

"ಸರಿ ಹಾಗೇ ಮಾಡ್ತೀನಿ." ಎನ್ನುತ್ತಾ ಹ್ಯಾಂಡ್ ಬ್ಯಾಗನ್ನು ಹಿಡಿದು, ಮನೆಯ ಆಚೆಗೆ ಬಂದು, ಮುಂಬಾಗಿಲಿಗೆ ಬೀಗ ಜಡಿದು, ಕಾರನ್ನು ಹತ್ತಿದಳು. ವಾದ ಮಾಡುತ್ತಾ ನಿಂತಿದ್ದವರ ಮುಂದೆಯೇ ಕಾರು ಬುರ್ರನೆ ಸರಿದು ಹೋಯಿತು.

೧೦

ಎಷ್ಟೋ ದೂರ ದಾರಿ ಸವೆದ ನಂತರ, ರಂಗನಾಥ ಕಾರನ್ನು ಒಂದು ಕಡೆ ನಿಲ್ಲಿಸಿ, ಅವಳ ಕಡೆ ತಿರುಗಿದ. ಅವಳ ಮುಖ ಧುಮುಗುಟ್ಟುತ್ತಿತ್ತು, "ಹೀಗೆ ಉದ್ವೇಗಗೊಳ್ಳುವುದು, ನಿಮ್ಮಿಬ್ಬರ ಆರೋಗ್ಯಕ್ಕೆ ಒಳ್ಳೆಯದಲ್ಲ. ಇನ್ನಾದರೂ ಶಾಂತ ವಾಗಿ." ಎನ್ನುತ್ತಾ ಅವಳ ಭುಜದ ಮೇಲೆ ಕೈಯನ್ನಿಟ್ಟ.

ಅವಳು, ಅವನ ಭುಜಕ್ಕೆ ಒರಗಿ ಬಿಕ್ಕಿದಳು.

"ಪ್ಲೀಸ್, ಅಳಬೇಡಿ. ಯಾರಾದ್ರೂ ನೋಡಿದ್ರೆ ನಾನು ಕಿಡ್ನ್ಯಾಪ್ ಮಾಡಿದೀನಿ ಅಂತ ಅಂದ್ಕೋತಾರೆ ಅಷ್ಟೇ." ಅವಳ ಗಲ್ಲವನ್ನೆತ್ತಿ ಕಣ್ಣೀರನ್ನೂ ಒರೆಸಿದ. ಅವಳ ತುಟಿಗಳನ್ನು ಚುಂಬಿಸಿದ.

"ಇನ್ನಾದರೂ ಈ ತುಟಿಗಳು ಬಿರಿದು ಮುಗುಳ್ನಗಲಿ. ಬಿಗಿಯಾಗಿದ್ದರೆ ಬಿರುಸಾಗಿ

ಬಿಡುತ್ತವೆ." ಅವಳು ಕ್ಷೀಣವಾಗಿ ನಕ್ಕಳು.

"ನಿಮಗೆ ಏನೂ ಅನ್ನಿಸ್ತಿಲ್ವಾ ರಂಗನಾಥ್..... ಅವನು ಅಷ್ಟು ಹಾರಾಡ್ತಿದ್ರೂ ಸುಮ್ಮನಿದ್ರಲ್ಲ! ಕೆನ್ನೆಗೆ ಎರಡು ಬಾರಿಸಬೇಕಾಗಿತ್ತು....."

"ಆ ಅಧಿಕಾರ ನನಗೆ ಇರಲಿಲ್ಲ. ಅಪರಾಧ ಆಗ್ತಿತ್ತು. ಪೋಲೀಸ್ ಕೇಸು ಅದೂ – ಇದೂ ಅಂತ ಆದರೆ, ನಮಗೇ ಕಷ್ಟ ಆಗ್ತಿತ್ತು...."

"ಒಟ್ನಲ್ಲಿ ನನ್ನ ಬಾಳನ್ನೇ ಹಾಳು ಮಾಡಿ ಬಿಟ್ಟ ಪಾಪಿ..."

"ಇನ್ನು ಮುಂದೆ ಎಲ್ಲಾ ಸರಿ ಹೋಗುತ್ತೆ, ನಾನಿದೀನಲ್ಲ......" ಅವಳನ್ನು ತನ್ನೆಡೆಗೆ ಎಳೆದುಕೊಂಡ.

"ಇನ್ನು ಮುಂದೆ ಯಾವುದೇ ರೀತಿಯ ಕೋಪ, ತಾಪ, ಉದ್ವೇಗಕ್ಕೆ ಒಳಗಾಗ ಬಾರದು.....ನಿಮಗೂ ಹುಟ್ಟಲಿರುವ ಮಗುವಿಗೂ ತೊಂದರೆಯಾಗಬಾರದು......"

"ನಾನೇನು ಮಾಡ್ಲೀ? ಇನ್ನು ಇವನಿಂದ ಏನೇನು ತೊಂದರೆಗಳನ್ನು ಎದುರಿಸಬೇಕೋ? ಕೋರ್ಟು ಕೇಸು ಅಂತ ಅಲೆಯಬೇಕಲ್ಲ."

"ನಾನೊಂದು ಮಾತು ಹೇಳ್ತೀನಿ, ಈ ತಲೆನೋವೆಲ್ಲಾ ಯಾಕೆ? ಸುಮ್ಮನೆ ಮನೇನ ಬಿಟ್ಟು ಕೊಡಿ. ಹೇಗೂ ನನ್ನ ಮನೆ ಇದೆಯಲ್ಲ!"

"ನೀವು ಈ ಮಾತನ್ನು ಹೇಳ್ತಿದೀರಾ? ಲಕ್ಷಾಂತರ ಬೆಲೆ ಬಾಳುವ ಮನೆ ಇದು, ನಮ್ಮ ಅಮ್ಮನದು.....ಬಿಡಬೇಕು ಅಂದ್ರೆ ಹೇಗೆ?"

"ತವರು ಮನೆಯ ಯಾವ ಸಂಬಂದ ಉಳಿದಿದೆ? ತಾಯಿಯಿಲ್ಲ, ಮಾವನನ್ನು ನೋಡಿದರೆ ಹೀಗೆ. ಈ ನೆನಪುಗಳೆಲ್ಲ ಕಹಿಯಾಗಿರುವಾಗ, ತವರಿನ ಹಂಬಲ ಯಾಕೆ? ಕರೆದು ಆದರಿಸುವವರು ಯಾರಿದ್ದಾರೆ?"

"ಹಾಗಾದ್ರೆ ಮಾರಿ ಬಿಡ್ತೀನಿ."

"ಮಾರಿ ಬಂದ ಹಣವನ್ನು ಏನು ಮಾಡ್ತೀರಿ? ನನಗೆ ಸಾಕಷ್ಟು ಜಮೀನಿದೆ. ಆ ಮನೆಗೆ, ಆ ಆಸ್ತಿಗಳಿಗೆ ಇನ್ನು ಮುಂದೆ ನೀವೇ ಒಡತಿ. ಅಲ್ಲದೇ ನಿಮ್ಮ ಮಾವನ ಅಸಮಾಧಾನಕ್ಕೆ ಕಾರಣವಾದ ಈ ಆಸ್ತಿಯ ಹಣ ಸಿಗಲಿ ಎಂಬ ಆಸೆ ನನಗೆ ಇಲ್ಲವೇ ಇಲ್ಲ."

"ಹಾಗಾದ್ರೆ ನಾನು ಏನು ಮಾಡ್ಲಿ?"

"ಈ ಮನೆಯನ್ನು ವಸಂತನಿಗೆ ವಹಿಸಿ ಕೊಟ್ಟು ಬಿಡಿ. ಪಾಪ ನೊಂದು ಕೊಂಡಿದ್ದಾಳೆ, ಚೆನ್ನಾಗಿ ಬದುಕಲಿ."

"ನಿಮಗ್ಯಾಕೆ ಅವಳ ಮೇಲೆ ಕರುಣೆ? ನನ್ನ ಸುಖಕ್ಕೆ ಅಡ್ಡಿ ಬಂದವಳು."

"ಕರುಣೆ ಅಂತಲ್ಲ. ನಿಮ್ಮ ಮಾವನನ್ನು ಮದುವೆಯಾದ ತಪ್ಪಿಗೆ, ಮಕ್ಕಳನ್ನೂ ಹೆತ್ತು, ಸಾಲ ಮಾಡುವ ಹಂತದಲ್ಲಿ ನಿಂತಿರುವ ಹೆಂಗಸಿಗೆ, ನಿಮ್ಮಿಂದ ಸಹಾಯ

ಆಗುತ್ತೆ. ಎಷ್ಟಾಗಲೀ ಅದು ನಿಮ್ಮ ತಾತನ ಮನೆ, ಆಕೆ ಅವರ ಸೊಸೆ."

"ನಿಮ್ಮ ತರ್ಕ ಏನೋ ಸರಿಯಾಗಿದೆ. ಆದರೆ ನಾನು ಯೋಚಿಸಬೇಕು. ಅಮ್ಮನ ಒಡವೆಗಳಿವೆ; ಅದು ನನಗೆ ಬೇಕು."

"ಒಡವೆ, ಸೀರೆ, ಎಲ್ಲಾ ಬೇಕೇ ಬೇಕಾ? ನನಗೆ ಆಸಕ್ತಿಯಿಲ್ಲ. ನೀವು ನಿರಾಭರಣ ಸುಂದರಿ....."

"ಎಲ್ಲಾ ಸ್ತ್ರೀಯರೂ ಅವರ ಗಂಡಂದಿರಿಗೆ ನಿರಾಭರಣ ಸುಂದರಿಯಾಗಿರಲಿ ಅಂತಲೇ ಆಸೆ." ಮಾರ್ಮಿಕವಾಗಿ ನಕ್ಕಳು.

"ನಾನು ನಿಮಗೆ ಪ್ಯಾಂಟು-ಷರಟು ತೆಗೆಸಿ ಕೊಡ್ತೀನಿ. ನೈಟ್ ಸೂಟ್ ಕೊಡಿಸ್ತೀನಿ. ಆ ದಿನ ನಿಮಗೆ ನೆನಪಿದೆಯಾ? ನನ್ನ ಉಡುಪನ್ನು ಧರಿಸಿದ್ದಿರಿ.....ನಿಮಗೆ ತುಂಬಾ ಚೆನ್ನಾಗಿ ಒಪ್ಪುತ್ತಿತ್ತು."

"ನಿಮಗೆ ಬೇಸರವಾಯ್ತು ಅಂತ ಬಿಚ್ಚಿ ಬಿಟ್ಟೆನಲ್ಲ....."

"ನನಗೆ ಬೇಸರವಾಯ್ತು ಅಂತಲೋ ಅಥವಾ ನನ್ನ ಬೇಸರವನ್ನು ಕಳೆಯ ಲೆಂದೋ?" ಓರೆಗಣ್ಣಿನಲ್ಲಿ ನೋಡಿದ.

"ಥೂ ಹೋಗೀಪ್ಪಾ." ಅವಳು ನಾಚುತ್ತಾ, ಅವನನ್ನು ತಳ್ಳಿದಳು.

"ನೈಟ್ ಸೂಟನ್ನು ಧರಿಸುವ ಕೆಲಸ ನಿಮ್ಮದು, ಅದನ್ನು ಬಿಚ್ಚುವ ಕೆಲಸ ನನ್ನದು."

"ನೀವು ತುಂಬಾ ಪೋಲಿಯಾಗಿ ಮಾತಾಡ್ತೀರಪ್ಪಾ."

"ಪೋಲಿ ಎನ್ನಬೇಡಿ, ಅಶ್ಲೀಲವಾಗಿ ಕೇಳಿಸುತ್ತೆ. ರಸಿಕ ಎನ್ನಿ." ಅವಳ ಗಲ್ಲವನ್ನು ಚಿವುಟಿದ. ಗಲ್ಲ ಕೆಂಪಾಗಿತ್ತು, ಮುದ್ದಿಸಿದ.

"ಒಳ್ಳೆ ಕೆಂಪು ಗುಲಾಬಿಯ ಥರ ಇದೀರಿ. ನಿಮ್ಮ ರೂಪಕ್ಕೆ ನಾನು ಮೆಚ್ಚಿದ್ದು."

"ಆಗಿನಂತೆಯೇ ಈಗಲೂ ಇದೀನಾ?"

"ಆವಾಗ್ಲಿಂತ, ಈಗ ಇನ್ನೂ ಸೊಗಸಾಗಿದೀರಿ. ನಿಮ್ಮ ಯೌವನವಂತೂ ಕಚ್ಚಿ ತಿನ್ನುವ ಹಾಗಿದೆ."

ಅವಳ ಕೆಂಪಾಗಿದ್ದ ಕೆನ್ನೆಯನ್ನು ಕಚ್ಚಿದ.

"ಇದು ರಸ್ತೆ ನೆನಪಿರಲಿ."

"ನಾವಿಬ್ಬರೂ ಸದ್ಯದಲ್ಲೇ ಮದುವೆಯಾಗಲಿದ್ದೇವೆ. ಈ ರಸ ನಿಮಿಷಗಳು ಇದ್ದರೆ ಚೆನ್ನ. ಈ ನೆನಪುಗಳು ಸದಾಕಾಲ ಹಸಿಯಾಗಿರಬೇಕು. ಆಗಲೇ ಜೀವನಕ್ಕೆ ಒಂದು ಸೊಗಸು."

ಇದ್ದಕ್ಕಿದ್ದಂತೆ ಇಬ್ಬರೂ ಗಂಭೀರವಾದರೂ ಇಬ್ಬರನ್ನೂ ಕಹಿ ನೆನಪುಗಳು ಮುತ್ತಿದ್ದವು. ಆದರೆ ಮೊದಲಿಗೆ ಚೇತರಿಸಿಕೊಂಡವನು ಅವನೇ.

"ಉಷಾ..... ಈಗ ಎಲ್ಲಿಗೆ ಹೋಗೋಣ? ನಮ್ಮ ಮನೆಗೋ...... ನಮ್ಮ ಅಣ್ಣನ ಮನೆಗೋ......?"

"ನೀವೇ ನಿರ್ಧರಿಸಿ."

"ಅಣ್ಣನ ಮನೆಗೆ ಹೋಗೋಣ. ಅಣ್ಣ-ಅತ್ತಿಗೆಗೆ ತಿಳಿಸದೇ ನಿಮ್ಮನ್ನು ಸೀದಾ ನನ್ನ ಮನೆಗೆ ಕರೆದುಕೊಂಡು ಹೋಗುವುದು ಚೆನ್ನಲ್ಲ."

ಕಾರು ಸೀದಾ ಅಣ್ಣನ ಮನೆಗೆ ಬಂದು ನಿಂತಿತು.

ರಂಗನಾಥ, ಮನೆಯವರನ್ನೂ ಉಷಾಳಿಗೆ ಪರಿಚಯಿಸಿದ. ಶಾಂತ ಆತ್ಮೀಯತೆಯಿಂದ ಅವಳನ್ನು ಒಳಕ್ಕೆ ಕರೆದೊಯ್ದಳು. ಊಟವಾದ ನಂತರ ರಂಗನಾಥ, ತನ್ನ ಮನೆಗೆಂದು ಹೊರಟ. ಅತ್ತಿಗೆ ತಡೆದಳು.

"ಇಲ್ಲಿ ಈ ಮನೆಗೆ ಅವರು ಹೊಸಬರು, ಸಂಕೋಚವಾಗುತ್ತೆ. ನೀನು ಹೋಗ್ಬೇಡ." ಅಷ್ಟು ಹೇಳಿದ್ದು ಸಾಕು ಎಂಬಂತೆ ರಂಗನಾಥ ಉಳಿದುಕೊಂಡ.

"ಇವತ್ತು ನಾವಿಬ್ರೂ ನಮ್ಮ ರೂಂನಲ್ಲಿ ಮಲಗ್ತೀವಿ. ನೀವಿಬ್ರೂ ಮೇಲಿನ ರೂಂನಲ್ಲಿ ಮಲಗಿ." ಶಾಂತ ಆದೇಶವಿತ್ತಳು.

ರಂಗನಾಥ, ಅಣ್ಣನನ್ನು ಎಬ್ಬಿಸಿಕೊಂಡು ಮಹಡಿಯನ್ನು ಹತ್ತಿದ.

"ಈ ಹೆಂಗಸ್ರು ಬಹಳ ಸ್ವಾರ್ಥಿಗಳು. ತಮ್ಮ ಸುಖಾನೇ ನೋಡ್ಕೋತಾರೆ. ಅವರೇ ಯಾಕೆ ಮಹಡಿ ಹತ್ತ ಬಾರದಾಗಿತ್ತು? ವಯಸ್ನಲ್ಲಿ ನಮಗಿಂತ ಚಿಕ್ಕೋರು."

ಕಾಲನ್ನು ನೀವಿಕೊಳ್ಳುತ್ತಾ ಅನಂತ ನುಡಿದಾಗ, ರಂಗನಾಥ ಸುಮ್ಮನೆ ನಕ್ಕ. ಆ ನಂತರ ಮದುವೆ ತಯಾರಿಯ ಬಗ್ಗೆ ಮಾತನಾಡಿದರು.

ಶಾಂತ ಮತ್ತು ಉಷಾ, ನಿದ್ದೆ ಬರುವವರೆಗೂ ಹರಟೆ ಹೊಡೆದರು. ಶಾಂತ ತಾನಾಗಿಯೇ ಕೆದಕಿ ಕೆದಕಿ ಕೆಲವು ವಿಚಾರಗಳನ್ನು ಕೇಳಿ ತಿಳಿದುಕೊಂಡಳು.

"ನಿಮ್ಮ ಮಾತುಗಳನ್ನು ಕೇಳಿದರೆ, ನಿಮ್ಮ ಮಾವ ಅಪಾಯಕಾರಿ ಮನುಷ್ಯ ಅಂತ ಅನ್ನಿಸುತ್ತೆ. ಆದಷ್ಟು ಜಾಗ್ರತೆಯಲ್ಲಿರಿ. ಎರಡು, ಮೂರು ದಿನಗಳಲ್ಲೇ ಮದುವೆ ನೆರವೇರುವಂತೆ ಏರ್ಪಾಡು ಮಾಡ್ತೀನಿ. ಆಮೇಲೆ ಅವರು ಏನೂ ಮಾಡೋಕ್ಕಾಗುಲ್ಲ. ನಾವು ನಿಮ್ಮ ಜತೆಗಿದೀವಿ. ನೀವು ಚಿಂತಿಸಬೇಡಿ." ಶಾಂತ ಸಮಾಧಾನ ಹೇಳಿದಳು.

೧೧

ಎರಡೇ ದಿನಗಳಲ್ಲಿ ಮದುವೆಯ ಸಿದ್ಧತೆಗಳು ಮುಗಿದವು. ಸಮೀಪದ ದೇವಾಸ್ಥಾನವೊಂದರಲ್ಲಿ ರಂಗನಾಥ-ಉಷಾ ದಂಪತಿಗಳಾದರು. ಉಡುಗೊರೆ, ಉತ್ಸವ, ಊಟದ ನಂತರ ಎಲ್ಲರೂ ದೇವಸ್ಥಾನದ ಫಾರ್ಮ್‌ಹೌಸಿನ ಮನೆಗೆ ಬಂದರು.

'ಮಧುವನ' ನವ ದಂಪತಿಗಳಿಗಾಗಿ ಸಿಂಗಾರಗೊಂಡಿತ್ತು.

ಕಾರ್‌ನ ಹಾರನ್‌ನ ಶಬ್ದ ಕೇಳಿದ ಕೂಡಲೇ, ರಾಕಿ ರಾಕೆಟ್‌ನಂತೆ ವೇಗವಾಗಿ ಬಂದು, ರಂಗನಾಥನ ಮೇಲೆ ಎಗರಿತು. ಉಷಾ ಚೀರಿದಳು, ಅವಳು ಭಯದಿಂದ ಬೆವೆತಳು. "ರತ್ನಮ್ಮ, ರಾಕೀನ ಕಟ್ಹಾಕು."

ಅನಂತ ಹೇಳಿದ ಕೂಡಲೇ, ರಾಕಿ ಅಲ್ಲಿಂದ ಪರಾರಿಯಾಗಿತ್ತು.

ದೂರ ನಿಂತು ಬೊಗಳತೊಡಗಿತ್ತು.

"ರಾಕಿಗೆ ನನ್ನ ಮೇಲೆ ಕೋಪ. ಅವನಿಗೆ ಹೇಳದೇ ಮದುವೆಯಾಗಿಬಿಟ್ಟೆನಲ್ಲ! ನಿಮ್ಮ ಮೇಲೆ ಅಸೂಯೆ ಉಂಟಾಗಿರುತ್ತೆ. ಆದರೆ ತುಂಬಾ ಫ್ರೆಂಡ್ಲೀ. ತಡೀರಿ, ಕರೆದು ಪರಿಚಯ ಮಾಡಿಸ್ತೀನಿ. ಏ ರಾಕೀ ಕಮಾನ್..... ಬಾಯಿಲ್ಲಿ." ಅವನು ಪ್ರೀತಿಯಿಂದ ಕರೆದಾಗ, ರಾಕಿ ಓಡಿ ಬಂದು, ಅವನಿಗೆ ಒರಗಿ ನಿಂತು ಬಾಲವನ್ನಾಡಿಸ ತೊಡಗಿತು. ಉಷಾ ಹೆದರಿ, ರಂಗನಾಥನ ತೋಳನ್ನು ಹಿಡಿದು, ಅವನಿಗೆ ಒತ್ತಿ ನಿಂತಳು. ರಾಕಿ, ಅವಳ ಕಡೆ ತಿರುಗಿ ಬೊಗಳಿತು.

"ನಂಗೆ ಭಯ ಆಗುತ್ತೆ. ಪ್ಲೀಸ್ ಕಳಿಸಿ, ಕಚ್ಚಿಬಿಟ್ಟರೇ.....?"

"ರಾಕಿ ಅಂಥೋನಲ್ಲ. ಕೆಲವೇ ದಿನಗಳಲ್ಲಿ ಆಪ್ತನಾಗಿ ಬಿಡ್ತಾನೆ. ಅವನು ನನ್ನ ಆಪ್ತ ಸ್ನೇಹಿತ. ನನ್ನ ಒಂಟಿ ದಿನಗಳಲ್ಲಿ ನನಗೆ ಇವನದ್ದೇ ಮಾರಲ್ ಸಪೋರ್ಟ್." ರಂಗನಾಥ, ರಾಕಿಯ ತಲೆಯನ್ನು ಸವರುತ್ತಾ, ಹೆಮ್ಮೆಯಿಂದ ಹೊಗಳಿದ.

ಉಷಾ ಭಯದಿಂದ ಕಣ್ಣು ಮುಚ್ಚಿ ನಿಂತಳು.

"ಮೇಡಂ, ಇತ್ಲಾಗೆ ಬನ್ನಿ." ರತ್ನಮ್ಮ ಕರೆದಳು. ಇಬ್ಬರನ್ನೂ ಮುಂಬಾಗಿಲಿನಲ್ಲಿ ನಿಲ್ಲಿಸಿ, ಶಾಂತ ಹಣೆಗೆ ಕುಂಕುಮವನ್ನಿಟ್ಟು, ಆರತಿಯನ್ನು ಎತ್ತಿ, ಕೆನ್ನೀರನ್ನೂ ನೀವಾಳಿಸಿ ಚೆಲ್ಲಿದಳು.

"ಬಲಗಾಲನ್ನಿಟ್ಟು ಒಳಗೆ ಬಾ ಉಷಾ. ಇವತ್ತಿನಿಂದ ಈ ಮನೆ ನಿನ್ನದು. ಈ ರಂಗ, ನಿನ್ನವನು. ಈ ಸಮಸ್ತ ಆಸ್ತಿ ನಿನ್ನದು. ಏನೇ ಸಮಸ್ಯೆಯಿದ್ದರೂ ನನಗೆ ಹೇಳು. ಹಂಚಿಕೊಂಡು ಅಕ್ಕ-ತಂಗಿಯರಂತೆ ಬಾಳೋಣ." ಶಾಂತ ಆತ್ಮೀಯತೆಯಿಂದ ಸ್ವಾಗತವನ್ನು ಕೋರಿದಳು. ಇಬ್ಬರೂ ಅಣ್ಣ-ಅತ್ತಿಗೆಯವರಿಗೆ ನಮಸ್ಕರಿಸಿ ಆಶೀರ್ವಾದವನ್ನು ಪಡೆದರು. ಮದುವೆ ಮನೆಯಲ್ಲಿ ಮಿಕ್ಕಿದ್ದ ಅಡುಗೆಯನ್ನು ತಂದಿದ್ದರು. ರತ್ನಮ್ಮನೇ ಎಲ್ಲರಿಗೂ ಬಡಿಸಿದಳು. ಊಟದ ನಂತರ, ಅಣ್ಣ, ಅತ್ತಿಗೆ, ಮಕ್ಕಳೊಂದಿಗೆ ತಮ್ಮ ಮನೆಗೆ ಹಿಂತಿರುಗಿದರು. ರತ್ನಮ್ಮನೂ ಹೊರಟು ಹೋಗಿದ್ದಳು ಈಗ ಇವರಿಬ್ಬರೇ ಎದುರು ಬದುರಿಗೆ ಕುಳಿತಿದ್ದರು.

"ನಾನು ಒಂದು ನಿರ್ಧಾರಕ್ಕೆ ಬಂದಿದೀನಿ." ಏನು ಎನ್ನುವಂತೆ ಅವನು, ಅವಳ ಕಡೆ ನೋಡಿದ.

"ಅಮ್ಮನ ಒಡವೆಗಳು ನನಗಿರಲಿ. ಉಳಿದುದೆಲ್ಲವನ್ನೂ ವಸಂತಂಗೆ ಕೊಟ್ಟು

ಬಿಡ್ತೀನಿ. ಮನೇನ ಅವಳ ಮಗನ ಹೆಸರಿಗೆ ಬರೆಸ್ತೀನಿ. ಆದಷ್ಟು ಬೇಗ ಲಾಯರ್ರ ಹತ್ರ ಮಾತನಾಡಿ....."

"ಮದುವೆಗೆ ಮುಂಚೇನೇ ಇವನೆಲ್ಲಾ ಮುಗಿಸಿ ಬಿಡಬೇಕಾಗಿತ್ತು. ಈಗ ನನಗೂ ನೆಮ್ಮದಿಯಾಯಿತು. ಯಾರ ಹಂಗೂ ಇರುವುದಿಲ್ಲ."

"ಹೌದು, ರಂಗನಾಥ್, ನಾನೂ ಯೋಚಿಸಿದೆ. ನಿಮ್ಮ ಮಾತು ಸರಿಯೆನಿಸಿತು. ನಿಮಗೆ ಥ್ಯಾಂಕ್ಸ್ ಹೇಳಬೇಕು."

"ಓ.ಕೆ. ಆಮೇಲೆ.....?"

"ಮಲಗೋಣ, ನನಗೆ ಆಯಾಸವಾಗಿದೆ. ಯಾಕೋ ಸುಸ್ತು."

"ಇದೆಲ್ಲ ಸುಳ್ಳು ನೆವ. ಕಾಲು ನೋವಾಗಿದ್ದರೆ, ಕಾಲನ್ನು ಒತ್ತುತ್ತೀನಿ. ನಡೆಯೋಕೆ ಆಗ್ದಿದ್ರೆ ಎತ್ಕೊಂಡು ಹೋಗ್ತೀನಿ."

"ಹಾಗೇ ಮಾಡಿ." ಎನ್ನುತ್ತಾ, ಅವಳು ತೋಳುಗಳನ್ನು ನೀಡಿದಳು. ಅವನು ಅವಳನ್ನು ಎತ್ತಿಕೊಂಡು, ಮುಖಕ್ಕೆ ಮುಖವನ್ನು ತಂದ.

"ನೀನು ತುಂಬಾ ಅಂದವಾಗಿದೀಯ ಉಷಾ, ನೀನು ನನಗೆ ಮೋಸ ಮಾಡಿಬಿಟ್ಟೆ."

"ಆ ಮಾತು ಯಾಕೆ? ನನಗೂ ಮೋಸವಾಗಿದೆಯಲ್ಲ!"

"ಆ ಮೋಸವನ್ನು ಸರಿಪಡಿಸಲು ದೇವರು ಮತ್ತೆ ನಮ್ಮಿಬ್ಬರನ್ನೂ ಹತ್ತಿರಕ್ಕೆ ಕರೆ ತಂದಿದಾನೆ...... ದೇವರಿಗೆ ಥ್ಯಾಂಕ್ಸ್ ಹೇಳಬೇಕು." ಎಂದು ಹೇಳುತ್ತಾ, ಅವಳನ್ನು ಬೆಡ್ ರೂಂಗೆ ಎತ್ತಿ ತಂದು, ಮಂಚದ ಮೇಲೆ ಕೂರಿಸಿದ. ಅವಳ ಕೈಗೆ ಪ್ಯಾಂಟು, ಷರಟನ್ನು ಇತ್ತ.

"ನೀನು ಈ ಉಡುಪನ್ನು ಹಾಕ್ಕೋ..... ನಾನು ನಿನ್ನನ್ನು ಕಣ್ತುಂಬಾ ನೋಡಬೇಕು."

"ಇದೆಂಥಾ ಆಸೆ..... ಅದೂ ಈ ದಿನ!" ನಾಚಿಕೆಯನ್ನು ನಟಿಸಿದಳು.

"ಆ ದಿನ ನನ್ನ ಪರ್ಮಿಷನ್ ಇಲ್ಲದೇ ನನ್ನ ಉಡುಪನ್ನು ಧರಿಸಿ, ನನ್ನನ್ನು ಉನ್ಮತ್ತನಾಗಿ ಮಾಡಿದ್ದೆ. ಮತ್ತೆ ಈ ದಿನವೂ ಹಾಗೆಯೇ ಉನ್ಮತ್ತನಾಗುವ ಆಸೆ."

"ಆಮೇಲೆ ನಿಮಗೆ ಹೆದರಿ, ಆ ಬಟ್ಟೆಗಳನ್ನು ಕಳಚಿಬಿಟ್ಟಿದ್ದೆನಲ್ಲ!"

"ಈ ದಿನ ನಿನ್ನ ಬಟ್ಟೆಗಳನ್ನೂ ಕಳಚುವ ಕೆಲಸ ನನಗಿರಲಿ."

"ಥೂ......ಹೀಗೆ ಮಾತಾಡಿದ್ರೆ ನಂಗೆ ನಾಚ್ಕೆ ಆಗುತ್ತೆ, ನೀವು ಹೊರಗೆ ಹೋಗಿ."

"ನಾನ್ಯಾಕೆ ಹೊರಗೆ ಹೋಗ್ಬೇಕು! ನಾನು, ನಿನ್ನ ಗಂಡ."

"ಆದರೂ ನಿಮ್ಮ ಎದುರಿಗೆ ಸೀರೆ ಬಿಚ್ಚೋಕೆ ಮುಜುಗರವಾಗುತ್ತೆ. ಪ್ಲೀಸ್ ಹೋಗಿ. ನಾನು ಕರೀತೀನಿ, ಆಮೇಲೆ ಬನ್ನಿ."

"ಓ.ಕೆ. ಅಪ್ಪಣೆ." ಎನ್ನುತ್ತಾ ಅವಳ ಗಲ್ಲವನ್ನು ಹಿಡಿದು ಅಲುಗಾಡಿಸಿ, ಹೊರಗೆ ಬಂದ.

ಅವಳ ಕರೆ ಕೇಳೀತೇ ಎಂದು ಆಲಿಸುತ್ತಾ ನಿಂತಿದ್ದ. ಇದ್ದಕ್ಕಿದ್ದಂತೆ ಅವಳ ಕಿರುಚುವ ಧ್ವನಿ ಕೇಳಿದಾಗ, ಅವನು ದಾವಿಸಿ ಒಳ ಬಂದ. ಅವಳು ಪ್ಯಾಂಟು, ಷರಟನ್ನು ಧರಿಸಿ, ಕನ್ನಡಿಯ ಎದುರಿಗೆ ನಿಂತಿದ್ದಳು. ಕಣ್ಣುಗಳು ಹೆದರಿಕೆಯಿಂದ ಅಗಲವಾಗಿದ್ದವು. ಅವನು ಉನ್ಮತ್ತನಂತೆ, ಅವಳೆಡೆಗೆ ಧಾವಿಸಿದ. ಅವಳು ಮೂಲೆಗೆ ಬೆರಳನ್ನು ತೋರಿದಳು. ಅವನು ಅತ್ತ ನೋಡಿ, ಗೊಳ್ಳನೆ ನಕ್ಕ. ಮೂಲೆಯಲ್ಲಿ ರಾಕಿ ನಿಂತಿತ್ತು.

"ಏ......ರಾಕಿ ನೀನಾ.....ಇಲ್ಲೇನ್ಮಾಡ್ತಿದೀಯ?" ಪ್ರೀತಿಯಿಂ ಗದರಿದ

"ನನ್ನನ್ನೇ ಹೇಗೆ ನೋಡ್ತಿದೆ......" ಭಯದಿಂದ ನಡುಗುತ್ತಿದ್ದಳು.

"ನೋಡಲಿ ಬಿಡು, ಅವನಿಗೆ ಏನು ಗೊತ್ತಾಗುತ್ತೆ......" ರಾಕಿ ಬೊಗಳಿತು. ರಂಗನಾಥ ನಸು ನಕ್ಕ.

"ಸಾರಿ ಸಾರಿ, ಅವನಿಗೆ ಎಲ್ಲಾ ಗೊತ್ತಾಗಿದೆ ಅವನೇನೂ ಮಾಡೊಲ್ಲ." ಎನ್ನುತ್ತಾ ಅವಳನ್ನು ತಬ್ಬಿ ಕೊಂಡ.

ರಾಕಿ ಮತ್ತೆ ಬೊಗಳಿತು. ಅವನು ಹಿಂದಕ್ಕೆ ಸರಿದ.

"ಆಪ್ತ ಸ್ನೇಹಿತ ಅಂತೀರಿ. ಗಂಡ್ಸು ಜಾತಿ. ನನಗೆ ನಾಚಿಕೆ ಆಗುತ್ತೆ. ರಾಕೀನ ಹೊರಕ್ಕೆ ಕಳಿಸಿ."

"ರಾಕಿ.....ಹೊರಕ್ಕೆ ಹೋಗು, ನೀನು ಹೀಗೆಲ್ಲಾ ಡಿಸ್ಟರ್ಬ್ ಮಾಡಬಾರದು."

ರಾಕಿ ಅಲ್ಲಾಡಲಿಲ್ಲ.

"ದೀಪ ಆರಿಸಿ ಮಲಗೋಣ, ಅಷ್ಟೇ....." ಎಂದು, ಅವಳು ಮಂಚದ ಮೇಲೆ ಮಲಗಿದಳು.

"ನೋವೇ....." ರಂಗನಾಥ ರಾಕಿಯನ್ನು ರಮಿಸುತ್ತಾ ಮನೆಯಿಂದಾಚೆ ಬಿಟ್ಟು ಬಂದ.

"ಆ ಮಧುರ ರಾತ್ರಿಯ ನೆನಪಿನೊಂದಿಗೆ, ಈ ಮೊದಲ ರಾತ್ರಿಯನ್ನೂ ಎಂಜಾಯ್ ಮಾಡೋಣ." ಎನ್ನುತ್ತಾ ಅವಳ ಉಡುಪನ್ನು ಬಿಚ್ಚಲಾರಂಭಿಸಿದ.

ಕಿಟಕಿಯ ಗಾಜು ಪರಪರನೆ ಸದ್ದಾಯಿತು. ರಾಕಿ ಬೊಗಳುತ್ತಲೇ ಇತ್ತು. ಅದು ಹಾರೈಕೆಯೋ, ಕೋಪವೋ ಇಬ್ಬರಿಗೂ ತಿಳಿಯುವಂತಿರಲಿಲ್ಲ. ಬೆಚ್ಚನೆಯ ಅಪ್ಪುಗೆಯಲ್ಲಿ ಮಲಗಿದ್ದವರು ರಾಕಿಯನ್ನು ಮರೆತರು.

ರಾಕಿಯ ಬೊಗಳುವಿಕೆ ಇಬ್ಬರಿಗೂ ಕೇಳಿಸಲಿಲ್ಲ. ರಾಕಿ ಬೊಗಳುತ್ತಲೇ ಇದ್ದ.

* * *

೧೫. ಅನ್ಯ – ಅನನ್ಯಾ

ಜಯನಗರದ ಷಾಪಿಂಗ್ ಕಾಂಪ್ಲೆಕ್ಸ್ ಬಳಿ, ರಸ್ತೆ ಕ್ರಾಸ್ ಮಾಡಲೆಂದು ಫುಟ್‌ಪಾತ್‌ನಲ್ಲಿ ನಿಂತಿದ್ದಾಗ, ಪ್ರಾಮ್‌ನಲ್ಲಿ ಮಗುವನ್ನು ಮಲಗಿಸಿಕೊಂಡು ನಿಂತಿದ್ದ ಹೆಂಗಸಿನ ಕಡೆ ಪಂಕಜಳ ದೃಷ್ಟಿ ಹರಿಯಿತು. ಈ ಮುಖದ ಪರಿಚಯ ಇದ್ದಂತಿದೆ ಎಂದು ಯೋಚಿಸುವಷ್ಟರಲ್ಲಿ ಆ ಹೆಂಗಸು ಇವಳನ್ನು ಕಂಡು ಬಟ್ಟಲ ಕಣ್ಣುಗಳನ್ನು ಅರಳಿಸಿ ಸಮೀಪಕ್ಕೆ ಬಂದಳು.

"ಹಾಯ್ ಪಂಕಜಾ.... ಇಲ್ಲೇನು ಮಾಡ್ತಿದೀಯಾ?" ಪಂಕಜಾ ತಬ್ಬಿಬ್ಬು ಗೊಂಡಳು.

"ರಸ್ತೆ ಕ್ರಾಸ್ ಮಾಡ್ಬೇಕು ಅಂತ ನಿಂತಿದೀನಿ. ನೀವ್ಯಾರು ಅಂತ ಗೊತ್ತಾಗ್ಲಿಲ್ಲ."

"ಏಯ್.... ಏನೇ..... ನನ್ನ ಗುರುತು ಸಿಗಲಿಲ್ವಾ....? ನಾನು ಕಲಾವತಿ..... ಸಹ್ಯಾದ್ರಿ ಕಾಲೇಜ್ನಲ್ಲಿ ಡಿಗ್ರಿ ಕ್ಲಾಸ್‌ನಲ್ಲಿ....." ನೆನಪಿನ ದಾರವನ್ನು ಎಳೆದಳು.

"ಹ್ಞಾಂ.... ಕಲಾವತೀನಾ....? ನೀನೂ ಇದೇ ಊರ್ನಲ್ಲಿದೀಯಾ? ಗೊತ್ತೇ ಇರಲಿಲ್ಲ." ಅಚ್ಚರಿಯನ್ನು ಪ್ರಕಟಿಸಿದಳು.

"ಎಂಟು ವರ್ಷದಿಂದ ಇಲ್ಲೇ ಇದೀನಿ....." ತನ್ನ ಬಗ್ಗೆ ಹೇಳಿಕೊಳ್ಳಲು ಶುರು ಮಾಡಿದಳು. "ನನ್ನ ಗಂಡ ದೊಡ್ಡ ಸಿವಿಲ್ ಕಂಟ್ರಾಕ್ಟರ್. ನಮ್ಮದೇ ಗ್ರಾನೈಟ್ ಫ್ಯಾಕ್ಟರಿ ಇದೆ. ಕೋರಮಂಗಲದಲ್ಲಿ ಬಂಗಲೆ ಇದೆ. ಬನ್ನೇರುಘಟ್ಟದ ಬಳಿ ಫಾರಂ ಗಳಿವೆ....." ಪಂಕಜ ಮಾತನ್ನು ಮುರಿದು ಪ್ರಶ್ನಿಸಿದಳು.

"ನಿನ್ನ ಮದುವೆ ಯಾವಾಗ ಆಯ್ತು.....? ಗೊತ್ತೇ ಆಗ್ಲಿಲ್ಲ..... ನಿಮ್ಮ ತಾಯಿಯ ಮನೇಲಿ ಎಲ್ಲಾ ಹೇಗಿದ್ದಾರೆ?"

"ಎಲ್ಲಾ ಹಾಗೇ ಇದಾರೆ. ಅದೇ ಮನೆಯಲ್ಲಿ..... ಬಾರೇ ನಮ್ಮ ಮನೆಗೆ..... ಇದು ನನ್ನ ಫೋನ್ ನಂಬರ್ರು....." ಎನ್ನುತ್ತಾ ಗಂಡನ ಹೆಸರಿನ ವಿಸಿಟಿಂಗ್ ಕಾರ್ಡನ್ನು ಇತ್ತಳು.

"ಬರ್ತೀನಿ. ಇಲ್ಲೇ ಹತ್ತಿರದಲ್ಲೇ ನಮ್ಮ ಮನೆ ಬಾ – ಕರ್‍ಕೊಂಡು ಹೋಗ್ತೀನಿ." ಪಂಕಜ ಕರೆದಳು.

"ಇಲ್ಲ. ಈಗಾಗೋಲ್ಲ. ಬೇಬಿನೂ ಕರ್ಕೊಂಡು ಬಂದಿದೀನಿ. ಇನ್ನೂ ಷಾಪಿಂಗ್ ಮಾಡಿಲ್ಲ ಹೊತ್ತಾಗುತ್ತೆ" ಪಂಕಜಳ ನೋಟ ಪ್ರಾಮ್ ನತ್ತ ಹರಿಯಿತು.

"ಬೇಬಿ ಮುದ್ದಾಗಿದೆ. ಏನು ಹೆಸರು, ಎಷ್ಟು ವರ್ಷ?" ಬಾಗಿ, ಗಲ್ಲವನ್ನು ಸವರಿದಳು.

"ಅನನ್ಯ ಅಂತ ಹೆಸರಿಟ್ಟಿದೀವಿ..... ಒಂದೂವರೆ ವರ್ಷ..... ಡ್ಯಾಡಿಯ ಮುದ್ದಿನ ಮಗಳು...." ಸವಲ್ಪ ಅಸೂಯೆ ಇತ್ತು. ದನಿಯಲ್ಲಿ ಬೇಸರವಿತ್ತು. ಉದಾಸೀನತೆಯಿಂದ ಹೇಳಿದಳು, "ನನಗೂ ಮುದ್ದೇನೇ.....ಆದರೂ"

"ಯಾಕೇ ಹೆಣ್ಣು ಮಗು ಅಂತ ಬೇಸರವೇನೇ?"

"ಹಾಗೇನಿಲ್ಲಪ್ಪ.... ನಾವು ಹೆಣ್ಣು ಮಕ್ಕಳಾಗಿ, ಹೆಣ್ಣನ್ನು ಇಷ್ಟಪಡದೇ ಇರಬಹುದು. ಹಾಗೆ ನೋಡ್ತಾ ಹೋದ್ರೆ, ನನ್ನ ಗಂಡಂಗೆ ಗಂಡು ಮಗೂನ ದತ್ತು ತಗೋಬೇಕು ಅಂತ ಆಸೆ ಇತ್ತು..... ಆದರೆ, ನಾನೇ ಹೆಣ್ಣು ಮಗುವೇ ಇರಲಿ ಅಂತ ಹಠ ಮಾಡ್ದೆ."

"ಅಂದ್ರೆ..... ಈ ಮಗು....."

"ಹೌದೇ ಪಂಕಜ.. ಇವಳು ನಮ್ಮ ದತ್ತು ಮಗಳು. ಅನಾಥಾಶ್ರಮದಲ್ಲಿಂದ ಕರ್ಕೊಂಡು ಬಂದು ಸಾಕ್ತಾ ಇದೀವಿ.... ಆದರೆ ಬೇಜಾರೇನಿಲ್ಲ. ನಮಗೆ ಮಕ್ಕಳಾಗೊಲ್ಲ ಅಂತ ಡಾಕ್ಟರ್ಸ್ ರಿಪೋರ್ಟ್ ಹೇಳಿತು. ಜ್ಯೋತಿಷ್ಯ ಭವಿಷ್ಯ ಹೇಳಿತು. ಮನೆ ಅಂದ್ಮೇಲೆ ಮಕ್ಕಳಿರ ಬೇಕಲ್ವಾ? ನನ್ನ ಗಂಡಂಗೆ ಆಫೀಸ್ ಕೆಲಸದಿಂದ ಬಿಡುವೇ ಇಲ್ಲ. ನಾವೂ ಐದಾರು ವರ್ಷ ಕಾದೆವು.... ಒಂಟಿಯಾಗಿ ಇರುವುದು ಬೇಸರ ಅಂತ ಅನ್ನಿಸ್ತು....."

"ಸರಿ ಮತ್ತೆ, ಒಳ್ಳೆಯ ಕೆಲಸ ಮಾಡಿದೆ ಬಿಡು."

"ನಾನೂ ಖುಷಿಯಾಗಿದೀನಿ, ಬಿಜಿಯಾಗಿದೀನಿ, ಇವಳು ಬಂದ ಮೇಲೆ ನಂಗೆ ಸಮಯ ಹೋಗೋದೇ ಗೊತ್ತಾಗುಲ್ಲ."

"ನ್ಯಾಚುರಲಿ.... ಇನ್‌ಫ್ಯಾಕ್ಟ್ ಸಮಯಾನೇ ಸಾಲೋಲ್ಲ ಅಲ್ಲವೇನೇ.....?"

"ಹೌದು ಪಂಕಜಾ.....ನಮ್ಮ ಮನೆಗೆ ನೀನು ಖಂಡಿತಾ ಬರ್ಬೇಕು. ಬೇಬಿ ಬರ್ತ್‌ಡೇಗೆ ಕಾರ್ಡ್ ಕಳಿಸ್ತೀನಿ. ಫೋನೂ ಮಾಡ್ತೀನಿ. ನೀನು ಮಿಸ್ ಮಾಡ್ಬಾರ್ದು ..... ಬೇಬೀ ಆಂಟಿಗೆ ಟಾ ಟಾ ಹೇಳು....." ಮಗಳ ಕೈಯಿಂದ ಟಾ ಟಾ ಮಾಡಿಸಿದಳು. "ಡ್ರೈವರು ಅಲ್ಲೆಲ್ಲೋ ಕಾರನ್ನು ಪಾರ್ಕ್ ಮಾಡಿದಾನೆ ಬರ್ಲಾ?"

"ಒಳ್ಳೇದು" ಪಂಕಜಾ ಕೈ ಬೀಸಿದಳು. ಕಲಾವತಿ ಪೆರಾಂಬುಲೇಟರ್‌ನನ್ನು ತಳ್ಳಿಕೊಂಡು, ಕಾರ್ ಪಾರ್ಕಿಂಗ್ ಮಾಡಿದ್ದೆಡೆಗೆ ನಡೆದಳು.

* * *

ಕಲಾವತಿ! ಹೇಗಿದ್ದವಳು ಹೇಗಾಗಿದಾಳೆ? ಗುರುತು ಹೇಗೆ ಸಿಗುತ್ತೆ? ಗೂಷ್ಲು ಇದ್ದ ಹಾಗೆ ಇದ್ದಳು. ಕಾಲೇಜಿನ ದಿನಗಳಲ್ಲಿ ಅವಳಿದ್ದ ರೀತಿ ನೆನಪಿಗೆ ಬಂತು

ಪಂಕಜಳಿಗೆ.

ಸಹ್ಯಾದ್ರಿ ಕಾಲೇಜಿನಲ್ಲಿ ಮೊದಲನೇ ವರ್ಷದ ಬಿ.ಎ. ತರಗತಿಗೆ ಸೇರಿದ್ದ ಹೊಸದು. ಕೋ ಎಜುಕೇಷನ್ ಕಾಲೇಜು. ಹುಡುಗರ ಸಂಖ್ಯೆಯೇ ಜಾಸ್ತಿ. ಹುಡಗಿ ಯರು ಹದಿಮೂರು ಜನ. ಅವರುಗಳಿಗೆ ಮುಂದಿನ ಮೂರು ಸಾಲು ಬೆಂಚುಗಳು ಸಾಕು. ಬೇರೆ ಬೇರೆ ಪಿರಿಯಡ್ಡುಗಳಲ್ಲಿ ಬೇರೆ ಬೇರೆ ರೂಮುಗಳಲ್ಲಿ ಮುಂದಿನ ಮೂರು ಬೆಂಚುಗಳಲ್ಲಿ ಯಾರು ಎಲ್ಲೆಂದರಲ್ಲಿ ಕುಳಿತುಕೊಳ್ಳುತ್ತಿದ್ದರು. ಈ ಕಲಾವತಿ ಯಾರೊಡ ನೆಯೂ ಹೆಚ್ಚು ಬೆರೆಯುತ್ತಿರಲಿಲ್ಲ. ಹೆಚ್ಚು ಮಾತಿಲ್ಲ ಕತೆಯಿಲ್ಲ. ಅವಳ ಪಾಡಿಗೆ ಅವಳು ಕ್ಲಾಸಿಗೆ ಬರುತ್ತಿದ್ದಳು. ಮುಗಿದ ಕೂಡಲೇ ಮನೆಗೆ ಹೊರಟು ಹೋಗುತ್ತಿದ್ದಳು.

ಸಾಧಾರಣ ರೂಪಿನ, ಲಂಗ ಜಂಪರ್ರು ಧರಿಸಿ ಯಾವ ಅಲಂಕಾರವೂ ಇಲ್ಲದೇ ಇದ್ದವಳ ಬಗ್ಗೆ ಯಾರಿಗೂ ಕುತೂಹಲವಿರಲಿಲ್ಲ. ಸೊಟ್ಟ ಬೈತಲೆಯನ್ನು ತೆಗೆದು, ತಲೆಗೆ ಧಾರಾಳವಾಗಿ ಎಣ್ಣೆ ಹಚ್ಚಿ, ಒತ್ತಿ ಬಾಚಿ, ಬಿಗಿಯಾಗಿ ಒಂದು ಜಡೆಯನ್ನು ಹೆಣೆದಿರುತ್ತಿದ್ದಳು. ತುದಿಯಲ್ಲಿ ಬಣ್ಣದ ರಿಬ್ಬನ್ ನ್ನು ಕಟ್ಟಿರುತ್ತಿದ್ದಳು. ಬಹುಶಃ, ಬರೀ ನೀರಿನಲ್ಲಿ ತೊಳೆದ ಮುಖಕ್ಕೆ ಯಾವದೇ ಪೌಡರನ್ನಾಗಲೀ, ಸ್ನೋ ಆಗಲೀ ಬಳಸುತ್ತಿರಲಿಲ್ಲ. ಡಬ್ಬಿಯಲ್ಲಿರುವ ಪುಡಿ ಕುಂಕುಮವನ್ನು ಹಣೆಯ ಮಧ್ಯಕ್ಕೆ ಒತ್ತಿ ಇಟ್ಟಿರುತ್ತಿದ್ದಳು. ಕೆಲವೊಮ್ಮೆ ಪುಡಿ ಕುಂಕುಮ ಉದುರಿ ಹೋಗಿರುತ್ತಿತ್ತು ಕತ್ತಿನಲ್ಲಿ ಒಂದೆಳೆ ಕರಿಯ ದಾರ. ಅದಕ್ಕೆ ಪೋಣಿಸಿದ ಒಂದು ಕಾಸು. ಅದೆಂಥದು ಅಂತ ಯಾರೂ ನೋಡಿರಲಿಲ್ಲ. ಅವಳ ಬಗ್ಗೆ ಹೆಚ್ಚು ತಿಳಿದುಕೊಳ್ಳುವ ಆಸಕ್ತಿ ಯಾರಿಗೂ ಇರಲಿಲ್ಲ.

ಮೊದಲ ವರ್ಷದ ಪರೀಕ್ಷೆ. ಯೂನಿವರ್ಸಿಟಿ ಪರೀಕ್ಷೆಯಾಗಿರಲಿಲ್ಲ. ಕ್ಲಾಸ್ ಪರೀಕ್ಷೆ. ಎಲ್ಲರೂ ಪಾಸಾಗಿ, ಎರಡನೇ ವರ್ಷದ ಡಿಗ್ರಿಯ ತರಗತಿಗೆ ಬಂದಾಗ. ಒಬ್ಬರನ್ನೊಬ್ಬರು ಪರಿಚಯ ಮಾಡಿಕೊಳ್ಳುವುದು ಸ್ವಲ್ಪ ಮಟ್ಟಿಗೆ ಅನಿವಾರ್ಯವಾಗಿತ್ತು. ಎರಡನೇ ವರ್ಷದ ಪಬ್ಲಿಕ್ ಪರೀಕ್ಷೆಗೆ ಹೆಚ್ಚು ಹೆಚ್ಚು ಓದಬೇಕಾಗಿತ್ತು. ಕಲಾವತಿ ಓದಿನಲ್ಲಿ ಜಾಣೆಯಾಗಿದ್ದಳು. ಆದರೆ, ಜಾಣೆ ಎಂಬ ಗರ್ವವೂ ಅವಳಿಗಿರಲಿಲ್ಲ ಅಥವಾ ಹೆಚ್ಚು ಹೆಚ್ಚು ಓದಿ, ಹೆಚ್ಚು ಹೆಚ್ಚು ಅಂಕಗಳಿಸಬೇಕೆಂಬ ಅಭಿಲಾಷೆಯೂ ಅವಳಲ್ಲಿ ಇದ್ದಂತಿರಲಿಲ್ಲ. ಕ್ಲಾಸಿಗೆ ಬಂದರೆ ಬಂದಳು, ಇಲ್ಲದಿದ್ದರೆ ಇಲ್ಲ. ಅಟೆಂಡೆನ್ಸ್ ಕಡಿಮೆ ಆಗುತ್ತದೆಂಬ ಆತಂಕವೂ ಇದ್ದಂತಿರಲಿಲ್ಲ.

ಇದ್ದಕ್ಕಿದ್ದಂತೆ ಅವರ ತಾಯಿ ತೀರಿ ಹೋದರೆಂದು ತಿಳಿದಿತ್ತು. ಕ್ಲಾಸಿನ ಹುಡುಗಿ ಯರೆಲ್ಲಾ ಒಟ್ಟಾಗಿ ಒಂದು ದಿನ ಅವರ ಮನೆಗೆ ಹೋದರು. ಮನೆ ಎಷ್ಟು ನಿಶ್ಶಬ್ಧ ವಾಗಿತ್ತೆಂದರೆ ಊಹಿಸಲೂ ಅಸಾಧ್ಯ. ಮನೆಯಲ್ಲಿ ಜನರೇ ಇಲ್ಲವೇನೋ ಎನ್ನುವಷ್ಟು, ಕಲಾವತಿಯ ಅಕ್ಕ ಬಂದು ಬಾಗಿಲನ್ನು ತೆರೆದಳು. ಅವಳ ಮುಖವೂ ನಿಸ್ತೇಜವಾಗಿತ್ತು.

ಕಲಾವತಿ ಇದ್ದ ರೂಮಿಗೆ ಎಲ್ಲರನ್ನೂ ಕರೆದುಕೊಂಡು ಹೋದಳು.

ತಿಂಗಳಾನುಗಟ್ಟಲೆಯಿಂದ ಕಾಯಿಲೆ ಮಲಗಿದ್ದವಳಂತೆ ಕಾಣುತ್ತಿದ್ದಳು. ಅವಳ ಬಟ್ಟಲುಗಣ್ಣುಗಳಲ್ಲಿ ಹೊಳಪೇ ಇರಲಿಲ್ಲ. ಮುಖದಲ್ಲಿ ಕಾಂತಿ ಇರಲಿಲ್ಲ. ನೋಡಿದರೆ ಭಯವಾಗುವಂತಿದ್ದಳು. ಯಾರಿಗೂ ಮಾತನಾಡಿಸುವ ಆಲೋಚಲೆ ಇರಲಿಲ್ಲ. ಅವಳು ಅಳುತ್ತಲೂ ಇರಲಿಲ್ಲ. ಯಾವ ಮಾತನ್ನೂ ಆಡಲಿಲ್ಲ. ಅಲ್ಲಿ ಇರುವ ಮನಸ್ಸಾಗದೇ ಎಲ್ಲರೂ ಹೊರ ಬಿದ್ದಿದ್ದರು.

ಎರಡನೇ ವರ್ಷದ ರಿಸಲ್ಟ್ ಹೊರಬಿದ್ದಿತ್ತು. ಕಲಾವತಿ ಇಂಗ್ಲಿಷ್ ವಿಷಯದಲ್ಲಿ ಮಾತ್ರ ಪಾಸಾಗಿದ್ದಳು. ಉಳಿದ ಪೇಪರ್ರುಗಳಿಗೆ ಅವಳು ಬರೆದೇ ಇರಲಿಲ್ಲ. ಫೈನಲ್ ಇಯರ್‌ನ ಕ್ಲಾಸ್‌ಗಳಿಗೆ ಅವಳು ಬರಲೇ ಇಲ್ಲ. ಅವಳನ್ನು ಬೆಂಗಳೂರಿಗೆ, ಅಕ್ಕನ ಮನೆಗೆ ಕರೆದುಕೊಂಡು ಹೋಗಿದ್ದಾರೆಂದು ಯಾರೋ ತಿಳಿಸಿದ್ದರು. ಕಲಾವತಿಯನ್ನು ಮತ್ತೆ ಯಾರೂ ಭೇಟಿಯಾಗಿರಲೇ ಇಲ್ಲ. ಕೊನೆಯ ವರ್ಷದ ಪರೀಕ್ಷೆಯ ನಂತರ ಉಳಿದವರೂ ಭೇಟಿಯಾಗುವುದು ಬಹಳವೇ ಅಪರೂಪ ವಾಗಿದ್ದಿತು. ಕೆಲವರು ಓದನ್ನು ಮುಂದುವರಿಸಿದ್ದರು, ಕೆಲವರಿಗೆ ಮದುವೆಯಾಗಿತ್ತು.

* * *

ಈಗ ಎಂಟು – ಹತ್ತು ವರ್ಷಗಳ ನಂತರ ಕಲಾವತಿ ಪಂಕಜಾಳನ್ನು ಗುರುತಿಸಿ ಮಾತನಾಡಿಸಿದ್ದಳು. ಪಂಕಜಳಿಗೆ ಅವಳನ್ನು ಗುರುತಿಸುವುದು ಸುಲಭ ವಾಗಿರಲಿಲ್ಲ. ಶ್ರೀಮಂತಿಕೆಯ ಗರ್ವ ಮುಖದಲ್ಲಿ ಎದ್ದು ಕಾಣುತ್ತಿತ್ತು. ಕತ್ತರಿಸಿದ ತಲೆ ಕೂದಲನ್ನು ಎತ್ತಿ ಕಟ್ಟಿದ್ದಳು. ಕ್ರೀಮ್ ಹಚ್ಚಿ ಮುಖಕ್ಕೆ ಪೌಡರನ್ನು ಧಾರಾಳವಾಗಿ ಬಳಸಿದ್ದಳು. ಹಣೆಯಲ್ಲಿ ಸೀರೆಗೆ ಒಪ್ಪುವಂಥ ಹೊಳೆಯುವ ಬಿಂದಿ, ತುಟಿಗಳಿಗೆ ಲಿಪ್ ಸ್ಟಿಕ್ ಹಚ್ಚಿದ್ದಳು. ಕತ್ತಿನಲ್ಲಿ ಎರಡೋ ಮೂರೋ ಚಿನ್ನದ ಸರಗಳು!! ದೊಡ್ಡ ಕತ್ತಿನ ರವಿಕೆ, ಸೀರೆಗೆ ಹೊಂದುವಂಥದ್ದು..... ಕಾಲೇಜಿನ ದಿನಗಳಲ್ಲಿ ಫ್ಯಾಷನ್ನಿನ ಸೋಂಕೇ ಇಲ್ಲದಂತೆ ಬರುತ್ತಿದ್ದವಳು ಇವಳೇನಾ? ಎನ್ನುವಷ್ಟು ಬದಲಾವಣೆ! ದಟ್ಟ ರೋಜಾ ಬಣ್ಣದ ಸೀರೆ ಅವಳಿಗೆ ಒಪ್ಪುತ್ತಿರಲಿಲ್ಲವಾದರೂ ಸೀರೆ ಬಹಳ ಬೆಲೆ ಬಾಳು ವಂಥದ್ದು.... ಅದರ ಅಂದದಲ್ಲಿ ಇವಳು ತೇಲಿ ಹೋಗಿದ್ದಳು. ಎಣ್ಣೆ ಜಿನು ಗುವ ಮುಖ, ತಲೆಗೆ ಧಾರಾಳವಾಗಿ ಎಣ್ಣೆಯನ್ನು ಸುರಿದು ಬಾಚಿಕೊಂಡು ಒಂದು ಜಡೆಯನ್ನು ಸೊಟ್ಟವಾಗಿ ಹೆಣೆದುಕೊಂಡು, ರಿಬ್ಬನ್ನುಕಟ್ಟಿ ಚೀಟಿಯ ಲಂಗವನ್ನು ಜಂಪರನ್ನು ಧರಿಸಿ ಬರುತ್ತಿದ್ದ ಆ ಕಲಾವತಿ ಎಲ್ಲಿ? ಶ್ರೀಮಂತಿಕೆಯನ್ನು ಪ್ರದರ್ಶಿಸುವ ಈ ಕಲಾವತಿ ಎಲ್ಲಿ? ಶ್ರೀಮಂತ ಪತಿ, ಮನೆಯಲ್ಲಿ ಆಳು – ಕಾಳು, ಓಡಾಡಲು ಕಾರು, ಡ್ರೈವರ್ರು.... ಜೀವನದಲ್ಲಿ ಉತ್ಸಾಹವನ್ನು ತುಂಬಿಸಿಕೊಂಡ ಕಲಾವತಿಗೆ ಮಕ್ಕಳಾಗಿಲ್ಲ ಎಂಬ ಒಂದೇ ಕೊರತೆ. ಮದುವೆಯಾಗಿ ಏಳು ವರ್ಷಗಳಾಗಿವೆ. ಆ

ಕೊರತೆಯನ್ನು ತುಂಬಲು, ಅನಾಥಾಶ್ರಮದಿಂದ ಹೆಣ್ಣು ಮಗುವನ್ನು ದತ್ತು ತೆಗೆದು ಕೊಳ್ಳುವಂಥ ಉಚಿತವಾದ ತೀರ್ಮಾನವನ್ನು ತೆಗೆದುಕೊಂಡದ್ದು ಶ್ಲಾಘನೀಯ ವೆನಿಸಿತ್ತು. ದೈಹಿಕ, ಮಾನಸಿಕ ಬದಲಾವಣೆಗಳೊಂದಿಗೆ ಸಾಮಾಜಿಕವಾಗಿಯೂ ಮುಂದುವರೆದಿದ್ದಾಳೆ ಎಂದು ಹೊಗಳುವಷ್ಟು ಅವಳ ಬಗ್ಗೆಯೇ ಚಿಂತಿಸಿದಳು.

ಮಗುವಿನ ಹುಟ್ಟಿದ ಹಬ್ಬಕ್ಕೆ ಕರೆದರೆ ಹೋಗಿ ಬರಬೇಕೆಂದುಕೊಂಡಿದ್ದಳು. ಅವಳ ಶ್ರೀಮಂತಿಕೆ, ಆಡಂಬರಗಳನ್ನು ನೋಡಬೇಕೆಂಬ ಆಸೆಯಿಂದಲ್ಲ..... ಒಂದು ಕಾಲದಲ್ಲಿ ಸಹಪಾಠಿಯಾಗಿದ್ದವಳು ಬಹಳಷ್ಟು ಬದಲಾಗಿರುವವಳು..... ಕರೆದರೆ ಹೋಗಿ ಬರುವಷ್ಟಾದರೂ ಸ್ನೇಹ ಉಳಿದಿರಲಿ ಎಂದುಕೊಂಡಳು. ಆದರೆ ಅದೇನು ಕಾರಣವೋ, ಕಲಾವತಿಯಿಂದ ಆಮಂತ್ರಣ ಬರಲಿಲ್ಲ.

ಮತ್ತೆ ಸಾಕಷ್ಟು ದಿನಗಳು ಉರುಳಿದವು. ಮೂರ್‍ನಾಲ್ಕು ವರುಷಗಳೇ ಕಳೆದು ಹೋದವು.... ಪಂಕಜಳ ಗಂಡನಿಗೆ ಬೇರೆ ಊರಿಗೆ ವರ್ಗವಾಗಿತ್ತು. ಪಂಕಜ, ಮಕ್ಕಳೊಡನೆ ಬಸವನ ಗುಡಿಯಲ್ಲಿ ಬೇರೆ ಒಂದು ಮನೆಯನ್ನು ಬಾಡಿಗೆಗೆ ಗೊತ್ತು ಮಾಡಿಕೊಂಡು ಅಲ್ಲಿ ವಾಸವಾಗಿದ್ದಳು. ಮಕ್ಕಳು ದೊಡ್ಡವರಾಗುತ್ತಿದ್ದರು. ಜವಾಬ್ದಾರಿ ಹೆಚ್ಚಾಗಿತ್ತು. ಮನೆಯ ಒಳಗಿನ, ಹೊರಗಿನ ಕೆಲಸಗಳೆಲ್ಲಾ ಪಂಕಜಳದ್ದೇ. ಅನಿವಾರ್ಯ ವಾಗಿ ಹೊರಗೆ ಹೋಗಲೇ ಬೇಕಾಗುತ್ತಿತ್ತು.....

ನ್ಯಾಷನಲ್ ಕಾಲೇಜಿನ ಬಳಿ ಬಸ್‌ಗಾಗಿ, ಸ್ಟಾಪ್‌ನಲ್ಲಿ ಕಾಯುತ್ತಾ ನಿಂತಿದ್ದಾಗ, ಅವಳ ಸಮೀಪದಲ್ಲಿ ಬಿಳಿಯ ಮಾರುತಿ ಕಾರೊಂದು ಬಂದು ನಿಂತಿತು. "ಹಾಯ್..... ಪಂಕಜಾ....." ಧ್ವನಿ ಬಂದತ್ತ ತಿರುಗಿದಳು. ಡ್ರೈವರ್ ಸೀಟಿನಲ್ಲಿ ಕಲಾವತಿ ಕುಳಿತಿದ್ದಳು. ಅತಿ ಖುಷಿಯಲ್ಲಿರುವಂತೆ ಕಂಡು ಬರುತ್ತಿದ್ದಳು.

"ಎಲ್ಲಿಗೆ ಹೋಗ್ಬೇಕು ಹೇಳು. ನಾನು ಡ್ರಾಪ್ ಕೊಡ್ತೀನಿ." ಎನ್ನುತ್ತಾ ತನ. ಕಾರಿನ ಪಕ್ಕದ ಬಾಗಿಲನ್ನು ತೆರೆದಳು.

"ಪರವಾಗಿಲ್ಲ ಬಿಡೇ..... ಬಿ.ಡಿ.ಎ. ಆಫೀಸ್ಗೆ ಹೋಗಬೇಕಾಗಿತ್ತು. ಬಸ್‌ನಲ್ಲಿ ಹೋಗ್ತೀನಿ....." ಎಂದಳು.

"ನಾನೂ ಸದಾಶಿವ ನಗರಕ್ಕೆ ಹೋಗ್ತಾ ಇದೀನಿ. ನಿನ್ನನ್ನು ಬಿ.ಡಿ.ಎ. ಆಫೀಸ್ ಹತ್ರ ಡ್ರಾಪ್ ಮಾಡ್ತೀನಿ. ಬಾ....." ಪಂಕಜ ಕಾರನ್ನೇರಿದಳು.

"ನೀನೇ ಡ್ರೈವ್ ಮಾಡ್ತೀಯಾ? ಡ್ರೈವರ್ ಇಲ್ವಾ?"

"ಅವನು ರಜದ ಮೇಲಿದ್ದಾನೆ. ನನ್ನ ಪರ್ಸನಲ್ ಕೆಲಸಗಳಿಗೆ ಒಮ್ಮೊಮ್ಮೆ ನಾನೇ ಡ್ರೈವ್ ಮಾಡ್ತೀನಿ. ನನ್ನ ಗಂಡನ ಬಲವಂತಕ್ಕೆ ಡ್ರೈವಿಂಗ್ ಕಲಿತೆ." ಅವಳು ಕಾರನ್ನು ಸ್ಟಾರ್ಟ್ ಮಾಡುವಷ್ಟರಲ್ಲಿ ಹಿಂದಿನ ಸೀಟಿನಿಂದ ಒಂದು ಸಣ್ಣ ಮಗು ಅತ್ತ ಸದ್ದು ಕೇಳಿ ಪಂಕಜ ಹಿಂದೆ ತಿರುಗಿದಳು.

"ಮರೆತೇ ಬಿಟ್ಟಿದ್ದೆ ಪಂಕಜಾ..... ಇವಳು ನನ್ನ ಬೇಬಿ. ಕ್ಯೂಟ್ ಆಗಿದ್ದಾಳೆ ಅಲ್ವಾ?" ಸುಮಾರು ಒಂದು ವರ್ಷದ ಮಗುವನ್ನು ಕಂಡು ಪಂಕಜ ಹುಬ್ಬೇರಿಸಿದಳು.

"ಅದೇನೇ, ಇನ್ನೊಂದು ಮಗೂನ ಅಡಾಪ್ಟ್ ಮಾಡ್ಕೊಂಡ್ಯಾ?" ಕೇಳಿದಳು.

"ಥೂ, ಮತ್ಯಾಕೆ ಮಾಡ್ಕೊಳ್ಳಲಿ.....ಇದು ನನ್ನ ಸ್ವಂತ ಮಗು, ನಾನೇ ಹೆತ್ತದ್ದು"

"ನಿಜವಾಗಿಯೂ....? ಅದ್ಹೇಗೆ ಸಾಧ್ಯವಾಯಿತು.....?"

"ಫಾರಿನ್‌ನಲ್ಲಿ ನನ್ನ ಗಂಡನ ಸ್ನೇಹಿತರೊಬ್ಬರು ಡಾಕ್ಟರ್ ಇದ್ದಾರೆ. ಅವರ ಸಹಾಯದಿಂದ ನಾನು ಆರ್ಟಿಫಿಷಿಯಲ್ ಆಗಿ ಕನ್ಸೀವ್ ಮಾಡಿಸ್ಕೊಂಡೆ....."

"ಅಂದ್ರೇ.....ಇದಕ್ಕೆ ನಿನ್ನ ಗಂಡನ ಒಪ್ಪಿಗೆ ಇತ್ತಾ.....?"

"ಛೇ... ನೀನು ತಪ್ಪು ತಿಳಿದುಕೊಂಡಿದ್ದೀಯ..... ನಾನು ಅವರ ಸಂಬಂಧ ಮಾಡಲಿಲ್ಲ. ಇದು ನಮ್ಮಿಬ್ಬರದೇ ಮಗು. ಲ್ಯಾಬ್‌ನಲ್ಲಿ, ಟೆಸ್ಟ್ ಟ್ಯೂಬ್‌ನಲ್ಲಿ ಬೆಳೆಸಿ, ಆಮೇಲೆ, ನನ್ನ ವೂಂಬ್‌ಗೆ ವರ್ಗಾಯಿಸಿದರು.... ಆಮೇಲೆ ನಾನು ಈ ಮಗುವಿಗೆ ತಾಯಿಯಾದೆ" ಅವಳ ಹೆಮ್ಮೆಯ ಮುಖವನ್ನು ನೋಡುವಂತಿತ್ತು.

"ಹಾಗೆ ಸಾಧ್ಯ ಆಗುತ್ತೆ ಅಂತ ಗೊತ್ತಿದ್ದಿದ್ರೆ ನಾನು ಅವಳನ್ನು ಅಡಾಪ್ಟ್ ಮಾಡ್ಕೊಳ್ತಾನೇ ಇರ್ಲಿಲ್ಲ." ಒಂಥರಾ ಬೇಸರದ ಧ್ವನಿಯಲ್ಲಿ ನುಡಿದಳು.

"ಅಂದ್ಹಾಗೇ ಅವಳೆಲ್ಲಿ? ಸ್ಕೂಲಿಗೆ ಹೋಗಿದಾಳಾ? ಯಾವ ಕ್ಲಾಸು?"

"ಕ್ಲಾಸೂ ಇಲ್ಲ, ಸ್ಕೂಲೂ ಇಲ್ಲ..... ವಾಪಸ್ಸು ಅನಾಥಾಶ್ರಮಕ್ಕೆ ಕಳಿಸೋದು ಸರಿ ಇಲ್ಲ ಅಂತ ನಾನೇ ಇಟ್ಕೊಂಡಿದೀನಿ." ಜಿಗುಪ್ಸೆಯಿಂದ ನುಡಿದಳು.

"ಮನೇಲಿ ಒಬ್ಬಳನ್ನೇ ಬಿಟ್ಟು ಬಂದಿದೀಯಾ?"

"ಅಷ್ಟು ದೊಡ್ಡ ಮನೇಲಿ ಒಬ್ಬಳನ್ನೇ ಬಿಟ್ಟು ಬರೋಕೆ ಆಗುತ್ತಾ? ಅಲ್ಲದೇ ಈ ಬೇಬೀನ ಎತ್ಕೊಂಡು ನಾನು ಹೇಗೆ ಡ್ರೈವ್ ಮಾಡುಕ್ಕೆ ಆಗುತ್ತೆ? ಅದಕ್ಕೇ ಅವಳನ್ನು ನಮ್ಮ ಜೊತೇಲಿ ಕರ್ಕೊಂಡು ಬಂದಿದೀನಿ"

"ಎಲ್ಲಿ? ಕಾಣಲಿಲ್ಲವಲ್ಲ......?"

"ಅವಳೇ... ಮಗೂ ಪಕ್ಕದ ಸೀಟಿನಲ್ಲಿ ಮಲಗಿದಾಳಲ್ಲ. ಅವಳೇ... ಏಯ್ ಅನ್ನೀ ... ಏಳೇ... ಮಗೂ ಅಳ್ತಿದೆ.... ಎದ್ದೇಳು..." ತಿವಿದು ಎಬ್ಬಿಸಿದಳು. ಅನನ್ಯ ಬೆಚ್ಚಿ ಎದ್ದಳು.

"ಇಷ್ಟೇ ಇವಳ ಕೆಲಸ. ತಿನ್ನೋದು.... ನಿದ್ದೆ ಮಾಡೋದು.... ಮಗೂ ಅತ್ತರೂ ಎಚ್ಚರವಾಗೋಲ್ಲ ಅಂಥಾ ನಿದ್ದೆ....."

"ಪಾಪ.... ಅವಳೂ ಚಿಕ್ಕವಳೇ ಅಲ್ವೇನೇ?"

"ಏನು ಚಿಕ್ಕವಳು....? ಕುಳ್ಳಿ ಅಷ್ಟೇ.... ಏಳು ವರ್ಷ ಆಗಿದೆ. ಅನಾಥಾಶ್ರಮ ದವರು ಮೋಸ ಮಾಡಿ, ವಯಸ್ಸನ್ನು ಮುಚ್ಚಿಟ್ಟರು.... ಎಲ್ಲಾ ಗೊತ್ತಾಗುತ್ತೆ...."

"ಮತ್ತೆ ಈಗ......?"

"ಅಡಾಪ್ಟ್ ಮಾಡ್ಕೊಂಡ ತಪ್ಪಿಗೆ, ನಮ್ಮ ಜೊತೇನೇ ಇಟ್ಕೊಂಡಿದೀನಿ.....ಅನ್ನ ಹಾಕ್ತೀವಿ, ಬಟ್ಟೆ ಕೊಡಿಸ್ತೀವಿ.... ಹೇಗೂ ಮಗೂನ ನೋಡ್ಕೊಳ್ಳೋಕೆ ಒಬ್ಬ ಕೆಲಸದ ಹುಡುಗಿಯ ಅವಶ್ಯಕತೆ ಇತ್ತು.... ಅದನ್ನೂ ಸರಿಯಾಗಿ ಮಾಡೋಲ್ಲ. ಸೋಮಾರಿ ಮುಂಡೇದು...." ಅದರ ಮುಖವನ್ನು ತಿವಿದಳು.... ಪಂಕಜಳ ಬಾಯಿ ಕಟ್ಟಿದಂತಾಗಿತ್ತು. ಆ ಹುಡುಗಿ, ಫೀಡಿಂಗ್ ಬಾಟಲಿನಲ್ಲಿದ್ದ ಹಾಲನ್ನು ಮಗುವಿಗೆ ಕುಡಿಸ ತೊಡಗಿದಳು.

"ಇನ್ನೊಂದು ನ್ಯೂಸ್ ಗೊತ್ತಾ! ನಾನೀಗ ಮತ್ತೆ ಪ್ರೆಗ್ನೆಂಟ್....."

ಪಂಕಜಳಿಗೆ ಆ ನ್ಯೂಸ್ ಮೇಲೆ ಆಸಕ್ತಿ ಇರಲಿಲ್ಲ. ಅನನ್ಯಳನ್ನೇ ಕನಿಕರದಿಂದ ನೋಡುತ್ತಿದ್ದಳು.... ಒಂದು ಅನಾಥ ಹೆಣ್ಣು ಮಗುವನ್ನು ಆಡಂಬರವಾಗಿ ದತ್ತು ತೆಗೆದುಕೊಂಡು ಬೆಳೆಸಿದ್ದನ್ನು ಈಗ ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಿರುವವಳ ಬಗ್ಗೆ ಒಂದು ರೀತಿಯ ತಿರಸ್ಕಾರದ ಭಾವನೆ ಉಂಟಾಗಿತ್ತು. ಒಂದು ವೇಳೆ ಸ್ವಂತದ ಮಗಳೇ ಆಗಿದ್ದಿದ್ರೆ, ಹೀಗೆ ಕೆಲಸದವಳಂತೆ ಕಾಣಲು ಸಾಧ್ಯವಿತ್ತೇ....? ಇನ್ನು ಎಷ್ಟು ವರ್ಷ ಈ ಮನೆಯಲ್ಲಿರಬೇಕೋ! ಈಗ ಹುಟ್ಟಿರುವ, ಮುಂದೆ ಹುಟ್ಟಲಿರುವ ಇವಳ ಮಕ್ಕಳನ್ನು ಪುಟ್ಟ ತಾಯಿಯಂತೆ ನೋಡಿಕೊಳ್ಳುವ ಜವಾಬ್ದಾರಿ ಈ ಪುಟ್ಟ ಹುಡುಗಿಗೆ.....

ಹುಟ್ಟಿದ ಈ ಹೆಣ್ಣು ಮಗು, ಏನು ಕಾರಣವೋ, ಸ್ವಂತ ತಂದೆ – ತಾಯಿಯರ ಮಡಿಲಲ್ಲಿ ಬೆಳೆಯಲಿಲ್ಲ. ಅದ್ದೂರಿಯಿಂದ ಅಲ್ಲಿಂದ ತಂದು, ಈಗ ದೂರ ಮಾಡುತ್ತಿರುವ ಈ ತಾಯಿ ತಂದೆಯರಿಗೆ ಏನು ಹೇಳಬೇಕು?

ಮಗುವಿಗೆ 'ಅನನ್ಯ' ಅಂತ ಹೆಸರನ್ನಿಟ್ಟು ಈಗ ಅನ್ಯಳನ್ನಾಗಿ ಮಾಡಿ, ಅನ್ಯಾಯ ಮಾಡುತ್ತಿರುವ ಕಲಾವತಿಯ ಬಗ್ಗೆ ಒಳ್ಳೆಯ ಭಾವನೆ ಮೂಡುವುದಂತೂ ಸಾಧ್ಯವಿರಲಿಲ್ಲ... ಅವಳು ಮತ್ತೆ ಕಾರನ್ನು ಸ್ಟಾರ್ಟ್ ಮಾಡುವ ಮುನ್ನ ಕಾರಿನಿಂದ ಇಳಿದಳು.

"ನಂಗೆ ಇಲ್ಲಿಯ ಪೋಸ್ಟ್ ಆಫೀಸ್ನಲ್ಲಿ ಸ್ವಲ್ಪ ಕೆಲಸವಿದೆ" ಎಂದಳು.

"ಸರಿ ನಿನ್ನಿಷ್ಟ. ನನ್ನ ಮಗುವಿಗೆ ಬರ್ತ್‌ಡೇ ಮುಂದಿನ ವಾರ. ಕಾರ್ಡ್ ಕಳಿಸ್ತೀನಿ. ಖಂಡಿತಾ ಬರಬೇಕು.... ಫೋನ್ ನಂಬರ್ರು ಅದೇ ತಾನೇ......? ನಿನಗೆ ಫೋನ್ ಮಾಡ್ತೀನಿ."

ಪಂಕಜ ಪೆಚ್ಚಾಗಿ ತಲೆಯಾಡಿಸಿ, ಕುಳಿತಿದ್ದ ಆ ಹುಡುಗಿಯ ಕಡೆ ನೋಡಿದಳು. ಹಿರಿಯ ಮಗಳಾಗಿ ಬೆಳೆಯಬೇಕಾದವಳು, ಕೆಲಸದ ಹುಡುಗಿಯಾಗಿ ಕಾಲಕಸವಾದ ಳಲ್ಲ...... ಈ ಕಲಾವತಿಯ ದೊಡ್ಡಸ್ತಿಕೆ ಇಷ್ಟೇನಾ? ಅಂತಂದುಕೊಂಡಾಗ, ಇವಳು ತನಗೆ ಮತ್ತೆ ಸಿಗದೇ ಇದ್ದಿದ್ದರೇ ಚೆನ್ನಾಗಿತ್ತು.... ಈಗಿನ ಈ ಕಲಾವತಿಗಿಂತ, ಹಿಂದಿನ ಕಲಾವತಿಯೇ ವಾಸಿಯಾಗಿದ್ದಳು ಅಂದುಕೊಂಡು, ರಸ್ತೆಯನ್ನು ದಾಟಿದ.

*   *   *

೧೬. ವಜ್ರದ ಓಲೆ

ಹಸೆಯ ಮಣೆಯ ಮೇಲೆ ಕೂತಿದ್ದ ಗೀತ ಮಂಕಾಗಿದ್ದಳು. ತನ್ನ ಗಂಡನ ಅತ್ತಿಗೆ, ತಂಗಿಯರು, ತನ್ನ ಅತ್ತೆ ಎಲ್ಲರ ಕಿವಿಯಲ್ಲೂ ಫಳ ಫಳನೆ ಹೊಳೆಯುವ ವಜ್ರದ ಓಲೆಗಳು! ಮೂಗು ಚುಚ್ಚಿಸಿಕೊಂಡಿರುವವರ ಮೂಗಿನಲ್ಲಿ ವಜ್ರದ ಮೂಗು ಬೊಟ್ಟುಗಳು! ಮುಖ ಅತ್ತಿತ್ತ ತಿರುಗಿಸಿದರೆ ಸಾಕು..... ಕಣ್ಣು ಕೋರೈಸುವ ಕಾಂತಿಯನ್ನು ಬೀರುವ ವಜ್ರಗಳು!

ಅವಳ ಅತ್ತೆಯ ಮನೆಯವರು ಶ್ರೀಮಂತರು ಎಂದು ಅವಳಿಗೆ ಗೊತ್ತಿತ್ತು. ಅವರದು ದೊಡ್ಡ ಸಂಸಾರ. ನಾಲ್ಕು ಜನ ಹೆಣ್ಣು ಮಕ್ಕಳು, ನಾಲ್ಕು ಜನ ಗಂಡು ಮಕ್ಕಳು. ಹೆಣ್ಣು ಮಕ್ಕಳಿಗೆ ಮದುವೆ ಮಾಡಿದ್ದರು. ಎಲ್ಲರಿಗೂ ಒಂದು ಜೊತೆ ವಜ್ರದ ಓಲೆಯನ್ನು ಕೊಟ್ಟಿದ್ದರು. ಹಿರಿಯ ಮಗ ರಾಧಾಕೃಷ್ಣ ಡಾಕ್ಟರು, ತನ್ನ ಅಂತಸ್ತಿಗೆ ತಕ್ಕಂತೆ ಶ್ರೀಮಂತ ಕನ್ಯೆಯನ್ನೇ ಮದುವೆಯಾಗಿದ್ದ. ಅವರು ಅಳಿಯನಿಗೆ ವಜ್ರದ ಉಂಗುರವನ್ನೂ, ವಜ್ರದ ಪದಕವಿರುವ ಸರವನ್ನು ಕೊಟ್ಟಿದ್ದರು. ಅವನ ಹೆಂಡತಿ ರುಕ್ಮಿಣಿ ವಜ್ರದ ಒಡವೆಗಳ ಮಧ್ಯೆ ಮಿನುಗುತ್ತಿದ್ದಳು.

ಗೀತನ ಗಂಡ ವೇಣುಗೋಪಾಲ ಹೆಚ್ಚು ಓದಲಿಲ್ಲ. ವಿದ್ಯೆ ಅವನ ತಲೆಗೆ ಹತ್ತಲಿಲ್ಲ. ಕಾಲೇಜಿಗೆ ಸೇರಿದವನು ಷೋಕಿಯಿಂದ ಕಾಲ ಕಳೆದು ಫೇಲಾಗಿ ಮನೆ ಯಲ್ಲಿಯೇ ಉಳಿದ. ಮತ್ತೆ ಪರೀಕ್ಷೆಗೆ ಕಟ್ಟುವ ಚಿಂತೆಯನ್ನೇ ಬಿಟ್ಟ, ನೋಡಲು ದಾಂಡಿಗನಂತೆ ಬೆಳೆದಿದ್ದ. ಕೆಲಸ ಕಾರ್ಯವಿಲ್ಲದೇ ಉಂಡಾಡಿಯಂತೆ ಇದ್ದವನಿಗೆ ತಂದೆ ರಾಮಸ್ವಾಮಿ, ಯಾವುದೋ ಶಿಫಾರಸ್ಸಿನ ಮೇಲೆ, ಒಂದು ಕಂಪೆನಿಯಲ್ಲಿ ಸೇಲ್ಸ್ ರೆಪ್ರಸೆಂಟಿಟಿವ್ ಕೆಲಸವನ್ನು ಕೊಡಿಸಿದ್ದರು. ಕೈ ತುಂಬಾ ಸಂಬಳ ಬರದಿದ್ದರೂ, ಊರೂರು ತಿರುಗುವ ಕೆಲಸ, ವೇಣು ಒಪ್ಪಿಕೊಂಡು ಕೆಲಸಕ್ಕೆ ಸೇರಿದ್ದ. ಟಿ.ಎ., ಡಿ.ಎ. ಸಿಗುತ್ತಿತ್ತು. ಅವನ ಷೋಕಿಗೆ ತಕ್ಕಂತೆ ಸೊಗಸಾದ ಉಡುಗೆ ತೊಡುಗೆಗಳನ್ನು ತೊಟ್ಟು ಠೀವಿಯಿಂದ ಕೆಲಸಕ್ಕೆ ಹೋಗುತ್ತಿದ್ದ.

ತನ್ನ ಕೈಯ ಹಣ ಮುಗಿದಾಗ ನಿರ್ದಾಕ್ಷಿಣ್ಯವಾಗಿ ತಾಯಿಯಿಂದ ಹಣವನ್ನು ವಸೂಲು ಮಾಡುತ್ತಿದ್ದ. ಇಲ್ಲ ಎಂದರೆ, ನಾನು ಕೆಲಸ ಬಿಟ್ಟು ಮನೇಲೇ ಇರ್ತೀನಿ.

ಆಗ ನನ್ನ ಪಾಕೆಟ್ ಮನಿಯನ್ನು ನೀವೇ ಕೊಡಬೇಕಾಗುತ್ತದೆ ಎಂದು ಹೆದರಿಸುತ್ತಿದ್ದ. ಈ ಮಗನಿಗೆ ತಿಳುವಳಿಕೆ ಸಾಲದು. ಜವಾಬ್ದಾರಿ ಇಲ್ಲ, ಹೆತ್ತ ತಪ್ಪಿಗೆ ನಿಭಾಯಿಸಬೇಕು ಎಂದುಕೊಂಡು, ತನ್ನಲ್ಲಿದ್ದ ಹಣವನ್ನು ಮಗನ ಕೈಗೆ ತುರುಕುತ್ತಿದ್ದಳು.

ರಾಮಸ್ವಾಮಿಗೆ ಗೊತ್ತಾದಾಗ ಹೆಂಡತಿಯನ್ನು ಹೀಯಾಳಿಸಿದ್ದರು.

"ಜವಾಬ್ದಾರಿ ಇಲ್ಲದವನು.... ಅವನಿಗೆ ದುಡ್ಡು ಕೊಟ್ಟು ಹಾಳು ಮಾಡ್ತಿದ್ದೀಯ ನೀನು. ಅವನು ಜವಾಬ್ದಾರಿ ಕಲಿಯುವುದು ಯಾವಾಗ?"

"ಅವನಿಗೂ ಮದುವೆಯಾಗಿ, ಸಂಸಾರ ಅಂತ ಶುರು ಮಾಡಿದ ಮೇಲೆ ಜವಾಬ್ದಾರಿ ತಾನೆ ತಾನಾಗಿ ಬರುತ್ತೆ."

"ಹುಂ. ಬರುತ್ತೆ! ಬರುತ್ತೆ ಸಂಸಾರ ಬೆಳೆಯುತ್ತೆ ಅಷ್ಟೆ! ಅಂಥಾ ಅವಿವೇಕದ ಕೆಲಸ ಮಾತ್ರ ಮಾಡಬೇಡ. ಪಾಪ ಯಾವುದೋ ಹುಡುಗಿಯ ಗ್ರಹಚಾರ ಕೆಟ್ಟಿದ್ದರೆ ಇವನ ಹೆಂಡತಿಯಾಗಿ ಬರಬೇಕು ಅಷ್ಟೆ."

"ನಿಮಗೆ ಅವನನ್ನು ಕಂಡರೆ ಹಾಗೇನೇ..... ಅವನೂ ನಮ್ಮ ಮಗನೇ ಅಲ್ಲವೇ? ಏನೋ ರಾಧಾಕೃಷ್ಣನ ಹಣೆಯಲ್ಲಿ ವಿದ್ಯೆ ಬರೆದಿತ್ತು ಮುಂದೆ ಬಂದ. ಈ ಮುಂಡೇದರ ಹಣೇಲಿ ವಿದ್ಯೆ ಬರೆದಿರಲಿಲ್ಲ. ಹಾಗಂತ ಮದುವೆ ಮಕ್ಕಳೂ ಬೇಡವೇ? ಒಂಟಿಯಾಗಿ ಎಷ್ಟು ದಿನ ಇರ್ತಾನೆ?"

"ಈಗಲೂ ನಿನ್ನ ಕೈನಿಂದ ಹಣ ಕಸೀತಾನೆ... ಆಮೇಲೆ ನೀನು ಅವನ ಸಂಸಾರ ವನ್ನು ಸಾಕಬೇಕಾಗುತ್ತೆ. ನೆನಪಿರಲಿ." ರಾಮಸ್ವಾಮಿ ವ್ಯಂಗ್ಯವಾಗಿ ನಕ್ಕಾಗ ಕನಕವಲ್ಲಿಗೆ ವ್ಯಥೆಯಾಯ್ತು. ಎಲ್ಲರಂತೆ ಇವನೂ ಇದ್ದಿದ್ದರೇ ಅಂತನ್ನಿಸಿತು. ಆದರೆ ಅವನ ಮದುವೆ ಮಾಡುವ ಆಸೆ ಕಡಿಮೆಯಾಗಲಿಲ್ಲ. ಯಾರಿಗೂ ತಿಳಿಯದಂತೆ, ತನ್ನ ಗಮನದಲ್ಲಿಟ್ಟುಕೊಂಡು, ವೇಣುಗೆ ಸರಿಹೊಂದುವಂತಹ ಕನ್ಯೆಯನ್ನು ಹುಡುಕುತ್ತಿದ್ದಳು.

ಅಂತೂ ಕಡೆಗೂ ಒಂದು ದಿನ ಈ ಗೀತ ಕಣ್ಣಿಗೆ ಬಿದ್ದಳು. ನೀಲಿಗಣ್ಣಿನ ಸುಂದರ ತರುಣಿ, ಅವಳಿಗೆ ಮೆಚ್ಚುಗೆಯಾದಳು. ಅವಳ ವಿಷಯವನ್ನೆಲ್ಲಾ ತಿಳಿದು ಕೊಂಡಳು. ತಾನೇನೋ ಇವಳನ್ನು ಒಪ್ಪಿದ್ದೇನೆ. ವೇಣು ಒಪ್ಪುತ್ತಾನೋ ಇಲ್ಲವೋ ಎಂಬ ಅನುಮಾನ ಸಹ ಮೂಡಿತು. ಏಕೆಂದರೆ ಗೀತಳಿಗೆ ತಂದೆ ಇರಲಿಲ್ಲ. ಹಿರಿಯ ಅಣ್ಣನೇ ಮನೆಯ ಜವಾಬ್ದಾರಿ ಹೊತ್ತಿದ್ದವನು. ಅವನಿಗೂ ಮದುವೆಯಾಗಿ ಮಕ್ಕಳಿದ್ದರು. ಗೀತಳಿಗೆ ಇಬ್ಬರು ತಂಗಿಯರು, ಅವರಿಗೂ ಮದುವೆಯಾಗಬೇಕು. ತಮ್ಮಂದಿರುವ ಇಬ್ಬರೂ ಓದುತ್ತಿದ್ದಾರೆ. ಅವರ ಓದು ಮುಗಿದು ಅವರಿಗೆ ಕೆಲಸ ಸಿಗಬೇಕು. ಗೀತ ಹೈಸ್ಕೂಲಿನಲ್ಲಿ ಟೀಚರ್ರು ಆಗಿದ್ದಳು. ಬರುವ ಸಂಬಳ ಮನೆಯ ಖರ್ಚಿಗೆ ಸರಿ ಹೋಗುತ್ತದೆ.

ಯಾಕೋ ಏನೋ ತಮ್ಮ ಅಂತಸ್ತಿಗೆ ತಕ್ಕವಳಲ್ಲ ಅಂತ ಅನ್ನಿಸಿದರೂ, ವೇಣುಗೆ

ತಕ್ಕನಾದ ಹುಡುಗಿ ಅಂತನ್ನಿಸಿತು. ವೇಣುವಿನ ಹತ್ತಿರ ಗೀತಳ ಬಗ್ಗೆ ಹೇಳಿದಾಗ ಅವನು ಮೊದಲಿಗೆ ಒಪ್ಪಲಿಲ್ಲ.

"ಯಾಕೆ ನಾನು ಫ್ರೀಯಾಗಿರುವುದು ನಿನಗೆ ಸರಿ ಹೋಗ್ತಿಲ್ವಾ?" ಅಂತ ಕೇಳಿದ್ದ.

"ಹಾಗಲ್ಲ ಕಣೋ.... ನಿನ್ನ ಮದುವೆಯಾದರೆ, ನಿನ್ನ ತಮ್ಮಂದಿರ ಮದುವೆಗೆ ದಾರಿ ಆಗುತ್ತೆ ಅಂತ."

"ಅಯ್ಯೋ ರಾಮ....... ನಾನೇನು ಅವರ ಮದುವೆಗೆ ಅಡ್ಡವಾಗಿ ನಿಂತಿದೀನಾ? ದಾರಿ ಮುಚ್ಚಿ ಹೋಗೋಕೆ.....?"

"ಥೂ ಹಾಗಲ್ವೋ ನಿನ್ನ ಮದುವೆಯಾಗದೇ ಅವರು ಹೇಗೆ ಮದುವೆ ಯಾಗ್ತಾರೆ?"

"ಹೇಗೆ ಅಂತ ನನಗೇನು ಗೊತ್ತು? ನನಗೆ ಮಾತ್ರ ಮದುವೆ ಬೇಡ."

"ಹೀಗೆ ಒಂಟಿಯಾಗಿ ಜೀವಮಾನವೆಲ್ಲಾ ಇರೋಕೆ ಆಗಲ್ಲ. ವಯಸ್ಸಿರುವಾಗ ಮದುವೆಯಾಗದೇ ಮುದುಕನಾದ ಮೇಲೆ ಆಗ್ತೀಯಾ?"

"ನಾನೆಲ್ಲಿ ಒಂಟಿಯಾಗಿದೀನಿ? ನೀವೆಲ್ಲಾ ಇದೀರಲ್ಲ."

"ನಾವೇನು ಶಾಶ್ವತಾನೇ.... ಈಗಲೇ ಎಲ್ಲರೂ ಒಂದೊಂದು ದಿಕ್ಕಿನಲ್ಲಿದ್ದಾರೆ. ನಾವಿಬ್ಬರೂ ಇರೋ ತನಕ ಚೆನ್ನಾಗಿರುತ್ತೆ. ಆಮೇಲೆ ನಿನಗೆ ಯಾರಿದ್ದಾರೆ ಹೇಳು."

"ಯಾರೂ ಬೇಡ. ಒಬ್ಬನೇ ಇರುಕ್ಕೆ ಆಗಲ್ಲ ಅಂತ ಅಂದಕೋಬೇಡ."

"ಹಾಗಲ್ಲ ಕಣೋ.... ಸಮಯ ಬಂದರೆ ಯಾರಾದರೂ ಆಪ್ತರು ಬೇಡವೇನೊ... ಹೆಂಡತಿ ಬಂದರೆ ನಿನ್ನ ಕಷ್ಟ ಸುಖದಲ್ಲಿ ಸಮಭಾಗಿಯಾಗ್ತಾಳೆ."

"ಬರೀ ಕಷ್ಟ ಸುಖದಲ್ಲಿ ಸಮಭಾಗಿಯಾಗಲ್ಲ, ಹಣಕಾಸಿಗೂ ಸಮಭಾಗಿ ಯಾಗ್ತಾಳೆ ಗೊತ್ತಾ?"

"ಹೇಗೋ ನಡೆಯುತ್ತೆ. ನಾನೀಗ ಒಂದು ಹುಡಗೀನ ನೋಡಿದೀನಿ. ಆ ಹುಡುಗೀನೂ ಕೆಲಸದಲ್ಲಿದ್ದಾಳೆ. ನೀನು ಅವಳನ್ನು ನೋಡಿದರೆ ಖಂಡಿತಾ ಬೇಡ ಅನ್ನಲ್ಲ. ಹಾಗಿದ್ದಾಳೆ. ರತೀ ತರಹ."

"ರತೀ ತರಹ ಇದ್ದರೆ! ಸದಾ ರತೀ ಜತೆ ಇರೋಕ್ಕೆ ಆಗಲ್ಲ. ಅವಳನ್ನು ಸಾಕ ಬೇಡವೇ? ನನಗೆ ಮದುವೆ ಮಾತ್ರ ಬೇಡ" ಎಂದು ರೇಗಿದ್ದ. ಆದರೂ ಕನಕವಲ್ಲಿ ಒಂದು ದಿನ ಆ ಹುಡುಗಿಯನ್ನು ತನ್ನ ಮನೆಗೆ ಕರೆಸಿದ್ದಳು. ಸುಮ್ಮನೇ ವೇಣು ಅವಳನ್ನು ನೋಡಿದ್ದ. ಮಿಂಚು ಹೊಡೆದಂತಾಗಿತ್ತು. 'ವ್ಹಾ' ಎಂದ.

ನಂತರ ತಾಯಿ ಮತ್ತೆ ಪ್ರಸ್ತಾಪ ಮಾಡಿದಾಗ ತಾನು ನೋಡಿದ ಹುಡುಗಿಯೇ ಅವಳು ಎಂದುಕೊಂಡು ಮದುವೆಗೆ ಒಪ್ಪಿದ. ಮದುವೆ ನಿಶ್ಚಯವಾಯಿತು. ಆದರೆ

ವೇಣು ಕೆಲವು ಕಂಡೀಷನ್‌ಗಳನ್ನು ಹಾಕಿದ. 'ಮೊದಲು, ಅವಳು ಕೆಲಸಕ್ಕೆ ರಾಜೀನಾಮೆ ಕೊಡಬೇಕು. ತನ್ನ ಅಪ್ಪಣೆ ಇಲ್ಲದೆ ಅವಳು ಮನೆಯಿಂದ ಹೊರಗೆ ಎಲ್ಲಿಯೂ ಹೋಗಬಾರದು' ಅಂತ.

'ಅದೇನು ಮಹಾ!' ಎಂದು ತಾಯಿ ನುಡಿದಳು. ಗೀತಳ ಮನೆಯವರ ಪರಿಸ್ಥಿತಿಯ ಅರಿವಿದ್ದುದರಿಂದ, ಮದುವೆಯ ಖರ್ಚನೆಲ್ಲಾ ತಾವೇ ವಹಿಸಿಕೊಂಡು ತಮ್ಮೆಲ್ಲಾ ಉಳಿದ ಮಕ್ಕಳ ಮದುವೆಯಂತೆ ವಿಜೃಂಭಣೆಯಿಂದ ಮದುವೆ ಮಾಡಬೇಕೆಂಬ ಆಸೆ. ಈ ಕಾರಣದಿಂದಾಗಿ ಸೊಸೆಗೆ ವಜ್ರದ ಓಲೆಯನ್ನಾಗಲೀ, ಮೂಗುಬೊಟ್ಟನ್ನಾಗಲೀ ತರಲಿಲ್ಲ. ಎಷ್ಟು ಬೇಕೋ ಅಷ್ಟು ಒಡವೆಗಳನ್ನೂ, ಅವೂ ಆಕೆಯದೇ.... ಅದನ್ನು ಸೊಸೆಗೆ ಇಟ್ಟಳು. ಮದುವೆ ಸಾಂಗವಾಗಿ ನೆರವೇರಿತು.

ಆ ರಾತ್ರಿ ವೇಣು ಖುಷಿಯಿಂದ ಹಿಗ್ಗಿಹೋಗಿದ್ದರೆ, ಗೀತ ವಜ್ರದ ಓಲೆಗಳ ಕನಸನ್ನು ಕಾಣುವ ಪ್ರಯತ್ನ ಮಾಡುತ್ತಿದ್ದಳು. ಗೀತ ಕೆಲಸಕ್ಕೆ ರಾಜೀನಾಮೆ ಕೊಟ್ಟಳು. ಕೆಲವೇ ದಿನಗಳಲ್ಲಿ ಗಂಡನ ಬಂಡವಾಳ ಬಯಲಿಗೆ ಬಂದಿತ್ತು.

"ನಿಮಗೆ ಬರುವ ಸಂಬಳ ಸಂಸಾರಕ್ಕೆ ಸಾಲದು ಅಂತ ತಿಳಿದೂ ನನ್ನನ್ನು ಕೆಲಸ ಬಿಡುವಂತೆ ಯಾಕೆ ಒತ್ತಾಯ ಮಾಡಿದ್ರಿ?" ಅಂತ ಜಗಳವಾಡಿದ್ದಳು.

"ನನ್ನ ಹೆಂಡತಿಯಾದವಳು ಬೀದಿ ತಿರುಗಿ ಸಂಪಾದಿಸುವುದು ನಮಗೆ ಬೇಕಿಲ್ಲ. ನಮ್ಮ ಅತ್ತಿಗೆ ಮನೇಲೇ ಇಲ್ವಾ?"

"ಅವರು ಶ್ರೀಮಂತರು, ಮನೇಲೇ ಇದ್ದಾರೆ, ನಾವು ಹಾಗಲ್ಲವಲ್ಲ."

"ಶ್ರೀಮಂತಿಕೆ ಬೇಕೂಂತ ಸೂಳೆಗಾರಿಕೆ ಮಾಡೋಕೆ ಆಗುತ್ತಾ, ಬಾಯಿ ಮುಚ್ಚಿಕೊಂಡು ನಾನು ಹೇಳಿದ ಹಾಗೆ ಕೇಳಿಕೊಂಡು ಬಿದ್ದಿರುವುದಾದರೆ ಬಿದ್ದಿರು. ಇಲ್ಲದಿದ್ದರೆ ನಿಮ್ಮಪ್ಪನ ಮನೆಗೆ ಹೊರಟು ಹೋಗು."

"ಹೀಗೆಲ್ಲಾ ಆಡೋರು ಮದುವೆ ಯಾಕೆ ಆದ್ರಿ?..... ಅವಳು ಅಳುತ್ತಾ ಪ್ರಶ್ನಿಸಿದಾಗ ಅವನು ಸೋತಿದ್ದ..... ರಮಿಸುತ್ತಾ ನುಡಿದ ಚಿನ್ನಾ.... ನನಗೆ ಸ್ವಲ್ಪ ಕೋಪ ಜಾಸ್ತಿ. ನೀನು ಎದುರು ಮಾತಾಡಿದರೆ, ಏನೇನೋ ಆಡಿ ಬಿಡ್ತೀನಿ. ಆದರೆ ನಾನು ಕೆಟ್ಟವನಲ್ಲ. ನಾನು ಉಪವಾಸವಿದ್ದರೂ ಸರಿ, ನಿನಗೆ ಎರಡು ಹೊತ್ತಿನ ಊಟಕ್ಕೆ ಕೊರತೆಯಾಗದಂತೆ ನೋಡಿಕೊಳ್ತೀನಿ." ಅವನ ಪ್ರೀತಿಯ ಮಾತುಗಳಿಗೆ ಅವಳು ಮರುಳಾದಳು. ಸಮಯ ನೋಡಿ ಒಂದು ದಿನ ತನ್ನ ಆಸೆಯನ್ನು ವ್ಯಕ್ತಪಡಿಸಿದಳು.

"ನಿಮ್ಮ ಮನೇಲಿ ಎಲ್ಲರ ಹತ್ತಿರಾನೂ ವಜ್ರದ ಓಲೆ ಇದೆ. ನನ್ನ ಹತ್ತಿರ ಮಾತ್ರ ಇಲ್ಲ. ನನಗೂ ಆಸೆ" ಎಂದಳು ಮೂತಿ ಊದಿಸಿ.

"ನಿನಗ್ಯಾಕೆ ಚಿನ್ನ ವಜ್ರದ ಓಲೆ. ವಜ್ರಕ್ಕಿಂತ ಮಿಗಿಲಾದ ನಿನ್ನ ಈ ನೀಲಿ

ಕಣ್ಣುಗಳೇ ಸಾಕು,. ನಿನಗೆ" ಎಂದು ಮುಗಳ್ನಗುತ್ತಾ.

"ನೀಲಿ ಕಣ್ಣುಗಳನ್ನು ಕಿತ್ತು ಕಿವಿಗೆ ಇಟ್ಟುಕೊಳ್ಳೋಕೆ ಆಗಲ್ಲವಲ್ಲ" ಎಂದಳು ಅವಳು ವೈಯ್ಯಾರವಾಗಿ.

"ಬೇಡ ಕಣೋ ಬಂಗಾರ, ನೀಲಿ ಕಣ್ಣುಗಳ ಮುಂದೆ ಅವುಗಳು ಪ್ರಕಾಶವಾಗಿ ಕಾಣುವುದೇ ಇಲ್ಲ. ಮಂಕಾಗಿ ಬಿಡುತ್ತೆ. ಸುಮ್ಮನೇ ದುಡ್ಡು ದಂಡ."

"ಬೇಡ..... ದುಡ್ಡಿಲ್ಲ..... ದುಡ್ಡು ದಂಡ ಇದನ್ನೆಲ್ಲ ಸುತ್ತಿ ಬಳಸಿ ಹೇಳಬೇಕಾಗಿಲ್ಲ. ನನ್ನ ಕೈಲಿ ಆಗಲ್ಲ ಅಂತ ಹೇಳಿ ಸಾಕು."

"ನೋಡು, ಮಾತು ಮಾತಿಗೂ ಜಗಳ ಆಡಿದರೆ, ನನ್ನ ಪ್ರೀತಿನೂ ಕಳೆದುಕೊಳ್ತೀಯಾ ಅಷ್ಟೆ..... ಪ್ರೀತಿಗಿಂತ ನಿಜವಾದದ್ದು ಬೇರೆ ಇಲ್ಲ ತಿಳಕೊ...."

"ಹೆಂಡತಿ ಕೇಳಿದ್ದನ್ನು ಪ್ರೀತಿಯಿಂದ ತೆಗೆಸಿಕೊಡಲಾಗದ್ದನ್ನು ನಾನು ಪ್ರೀತಿ ಅಂತ ಒಪ್ಪಲ್ಲ." ಅಂತ ಹೇಳಿ ಸೊರ ಸೊರ ಅಂತ ಅಳುತ್ತಾ ಮಲಗಿದಳು.

"ವಜ್ರದ ಓಲೆ ಮೇಲೆ ಅಷ್ಟು ಆಸೆ ಇದ್ದರೆ ನನ್ನಂಥ ಬಡವನ್ನ ಏಕೆ ಮದುವೆಯಾದೆ? ಅವನು ನಿನ್ನ ಮೈ ತುಂಬಾ ಒಡವೆ ಹೇರಿ, ತಾನು ಒಬ್ಬ ನಿರಾಭರಣ ಸುಂದರಿಯ ಹಿಂದೆ ಓಡಿ ಹೋಗ್ತಿದ್ದ." ಎಂದು ನುಡಿದ ಅವಳನ್ನು ತನ್ನಡೆಗೆ ತಿರುಗಿಸಿಕೊಂಡ.

ಮದುವೆಯಾದ ಮೂರೇ ವರ್ಷದಲ್ಲಿ ಇಬ್ಬರು ಮಕ್ಕಳು ಹುಟ್ಟಿದಾಗ ಅವರ ಮನೆಯ ಖರ್ಚು ವೆಚ್ಚಗಳು ಹೆಚ್ಚಿದವು. ಗೀತ ಅವಡುಗಚ್ಚಿ ತನ್ನ ಆಸೆಯನ್ನು ಅದುಮಿಟ್ಟುಕೊಂಡಳು.

ಇದ್ದಕ್ಕಿದ್ದಂತೆ ಒಂದು ದಿನ ರಾಮಸ್ವಾಮಿ ಹೃದಯಾಘಾತದಿಂದ ತೀರಿ ಹೋದಾಗ, ರಾಧಾಕೃಷ್ಣ ತನ್ನ ಹೆಂಡತಿಯೊಡನೆ ಬೇರೆ ಮನೆಗೆ ಹೊರಟು ಹೋದ. ತಮ್ಮಂದಿರು ಬೇರೆ ಊರಿನಲ್ಲಿ ಕೆಲಸದಲ್ಲಿದ್ದವರು ತಮ್ಮೊಡನೆ ತಮ್ಮ ತಾಯಿಯನ್ನು ಕರೆದುಕೊಂಡು ಹೋದರು. ಹೋಗುವ ಮೊದಲು ಕನಕವಲ್ಲಿ, ಗೀತಳ ಕೈಯಲ್ಲಿ ಹತ್ತು ಸಾವಿರ ರೂಗಳನ್ನಿಟ್ಟು, 'ಇದನ್ನು ನಿನ್ನ ಮಕ್ಕಳ ಹೆಸರಿನಲ್ಲಿ ಫಿಕ್ಸೆಡ್ ಡಿಪಾಜಿಟ್ ನಲ್ಲಿಡು. ಅವರ ವಿದ್ಯಾಭ್ಯಾಸಕ್ಕೆ ಆಗುತ್ತೆ.' ಎಂದಳು.

ಆಗಲಿ ಅತ್ತೆ ಎಂದು ಆಸೆ ಗಣ್ಣುಗಳಿಂದ ಆ ಹಣವನ್ನು ತನ್ನ ಕೈಗೆತ್ತಿಕೊಂಡಳು. ಮನದಲ್ಲಿ ಏನೋ ದೂರದ ಆಸೆ. ಗಂಡನಿಗೆ ತಿಳಿಯದಂತೆ ಆ ಹಣವನ್ನು ಬ್ಯಾಂಕಿನಲ್ಲಿ ಜಮಾ ಮಾಡಿದಳು.

ತಾಯಿಯೂ ದೂರ ಹೊರಟು ಹೋದ ಮೇಲೆ ವೇಣುವಿನ ಸಂಪಾದನೆ ಕಡಿಮೆ ಆಗಿತ್ತು. ಮನೆಯ ಖರ್ಚು ವೆಚ್ಚನ್ನು ತೂಗಿಸಲೆಂದು ಬೇರೆ ಇನ್ನೊಂದು ಕಡೆ ಏಜೆಂಟ್ ಆಗಿ ಕೆಲಸ ಮಾಡಲಾರಂಭಿಸಿದ.

ತಾನು ವಜ್ರದ ಓಲೆಯನ್ನು ತೆಗೆದುಕೊಳ್ಳುವ ಆಸೆ ಹೂತು ಹೋಗುತ್ತದೆಯೋ, ಏನೋ ಎಂಬ ಅಂಜಿಕೆಯಿಂದ ಗಂಡನನ್ನು ಕೇಳಿಕೊಂಡಳು.

"ಮಕ್ಕಳೂ ದೊಡ್ಡವರಾಗ್ತಿದ್ದಾರೆ. ಸ್ಕೂಲಿಗೆ ಸೇರಿಸಬೇಡವೇ..... ಹಣಕ್ಕೆ ಏನು ಮಾಡೋದು? ನಾನು ಎಲ್ಲಾದ್ರೂ ಕೆಲಸಕ್ಕೆ ಸೇರಿಕೊಳ್ತೀನಿ."

"ಏನೂ ಬೇಡ, ಇನ್ನೂ ನಿಮ್ಮನ್ನೆಲ್ಲಾ ಸಾಕುವ ತಾಕತ್ತು ನನ್ನಲ್ಲಿದೆ. ಮಕ್ಕಳ ಜತೆ ಮನೇಲಿ ಸುಮ್ಮನೆ ಇರು."

"ಹೋಗಲಿ, ಮನೇಲಿ ನಾಲ್ಕು ಜನ ಹುಡುಗರಿಗೆ ಪಾಠ ಹೇಳಿಕೊಡ್ತೀನಿ. ಈಗ ಅತ್ತೇನೂ ಮನೇಲಿಲ್ಲ. ನನಗೆ ಸಮಯ ಕಳೆಯುವುದೇ ಕಷ್ಟವಾಗಿದೆ."

"ಅದೆಲ್ಲ ಸುಳ್ಳು ನೆವ. ನಾಲ್ಕು ಜನ ಹುಡುಗರಿಗೆ ಪಾಠ ಹೇಳಿಕೊಟ್ಟರೆ ಸಿಗುವ ಸಂಪಾದನೆ ಅಷ್ಟರಲ್ಲೇ ಇದೆ. ಏನೂ ಬೇಡ ಸುಮ್ಮನಿರು."

"ಪ್ಲೀಸ್ ಬೇಡ ಎನ್ನಬೇಡಿ. ನಮಗೀಗ ಹಣದ ಅಗತ್ಯ ತುಂಬಾ ಇದೆ. ಎಷ್ಟೇ ಒಪ್ಪ ಮಾಡಿದರೂ, ತಿಂಗಳಿಗೆ ಐದು ರೂಪಾಯಿ ಉಳಿಯಲ್ಲ."

"ಯಾಕೆ ಉಳಿಸಬೇಕು? ನಿನ್ನ ವಜ್ರದ ಓಲೆಯ ಆಸೆ ಇನ್ನು ಹೋಗಿಲ್ವಾ?" ಎಂದು ಅವನು ಹಾಸ್ಯವಾಗಿ ಕೇಳಿದಾಗ ಅವಳು ಮುಖ ತಿರುಗಿಸಿದಳು.

"ನೋಡಿದ್ಯಾ ನನ್ನಂಥೋನ್ನ ಮದುವೆಯಾದರೆ ಎಂಥಾ ಸ್ಥಿತಿ ಅಂತ. ವಜ್ರದ ಓಲೆ ಇರಲಿ, ಒಲೆ ಹಚ್ಚೋಕೆ ಇಜ್ಜಲು ಸಹ ಇರುಲ್ಲ." ಎಂದು ಹೇಳಿ ಅವಳನ್ನು ನಗಿಸಲು ಯತ್ನಿಸಿ ಸೋತ. ಕಡೆಗೆ ನುಡಿದ, "ಆಗಲಿ ನಿನ್ನ ಮಾತನ್ನೇ ಒಪ್ತೀನಿ. ಪಾಠದಿಂದ ಎಷ್ಟು ಹಣ ಸಂಪಾದಿಸುಕ್ಕೆ ಆಗುತ್ತೆ ಅಂತ ನಾನೂ ನೋಡಿ ಬಿಡ್ತೀನಿ." ಎಂದು ಅವಳ ಗಲ್ಲ ಸವರಿ ಅವಳಿಗೆ ಒಪ್ಪಿಗೆ ಕೊಟ್ಟಿದ್ದ.

ಅವನು ಒಪ್ಪಿಗೆ ಕೊಟ್ಟಿದ್ದು, ಅವಳಿಗೆ ವಜ್ರದ ಓಲೆಯನ್ನು ಕೊಂಡಷ್ಟೇ ಖುಷಿಯಾಗಿತ್ತು. ಮಾರ್ಕೆಟ್ ಕಡೆ ಹೋದಾಗ ಚಿನ್ನ ಬೆಳ್ಳಿಯ ಅಂಗಡಿಯಲ್ಲಿ ಒಂದು ಜತೆ ವಜ್ರದ ಓಲೆಯ ಬೆಲೆಯನ್ನು ಅಂದಾಜಾಗಿ ಕೇಳಿ ತಿಳಿದುಕೊಂಡಿದ್ದಳು. "ಹನ್ನೆರಡರಿಂದ ಹದಿನೈದು ಸಾವಿರದವರೆಗೆ ಆಗುತ್ತೆ" ಅಂತ ಅಂಗಡಿಯವನು ನುಡಿದಾಗ ಮೂಕಿಯಾಗಿದ್ದಳು. ಅಬ್ಬಾ! ಅಷ್ಟೊಂದು. ಈಗ ನನ್ನ ಹತ್ತಿರ ಅತ್ತೆ ಕೊಟ್ಟಿರುವ ಹತ್ತು ಸಾವಿರ ರೂಪಾಯಿಗಳು ಇವೆ. ಇನ್ನೂ ಮೂರು ನಾಲ್ಕು ಸಾವಿರವಾದರೂ ಬೇಕು. ದಿನಕ್ಕೆ ಎಷ್ಟು ರೂಪಾಯಿ ಉಳಿತಾಯ ಮಾಡಿದರೆ, ಎಷ್ಟು ದಿನಗಳಲ್ಲಿ ಮೂರು ಸಾವಿರವನ್ನು ಕೂಡಿ ಹಾಕಬಹುದು? ತನ್ನಲ್ಲೇ ಲೆಕ್ಕ ಹಾಕುತ್ತಾ ನಡೆದಳು. ಕಲ್ಲನ್ನು ಎಡವಿ ಬಿದ್ದಿದ್ದಳು. ಕೈಯಲ್ಲಿದ್ದ ಚೀಲದಂದ ತರಕಾರಿಗಳು ಚೆಲ್ಲಾಪಿಲ್ಲಿಯಾದುದಲ್ಲದೇ, ಮೊಣಕೈ ತರಚಿ ರಕ್ತ ಒಸರುತ್ತಿತ್ತು. ಅಲ್ಲೇ ಹತ್ತಿರದಲ್ಲಿದ್ದ ಕ್ಲಿನಿಕ್‌ಗೆ ಹೋಗಿ, ಒಂದು ಇಂಜೆಕ್ಷನ್ ಚುಚ್ಚಿಸಿಕೊಂಡು ಮನೆಗೆ ಬಂದಿದ್ದಳು.

ಕೈಯಲ್ಲಿದ್ದ ಹಣದಲ್ಲಿ ಇಪ್ಪತ್ತೈದು ರೂಪಾಯಿಗಳು ಖರ್ಚಾಗಿದ್ದವು. "ತಥ್ ಇನ್ನು ಮೇಲೆ ಡಾಕ್ಟರಿಗೆ ಹಣ ಖರ್ಚು ಮಾಡಬಾರದು." ಎಂದುಕೊಂಡಳು.

ಪಾಠಕ್ಕೆ ನಾಲ್ಕು ಜನ ಹುಡುಗರು ಬರಲು ಪ್ರಾರಂಭಿಸಿದರು. ಇವಳು ತಾನಾಗಿಯೇ ಕೇಳಿದರೂ ಮುಂಗಡವಾಗಿ ಆ ಹುಡುಗರು ಹಣ ತಂದು ಕೊಟ್ಟಿರಲಿಲ್ಲ. ಇವಳಿಗೆ ಬೇಸರವೆನಿಸಿತು. ಎರಡು ಮಕ್ಕಳನ್ನು ಇಟ್ಟುಕೊಂಡು, ಬೇರೆ ಮಕ್ಕಳಿಗೆ ಟ್ಯೂಷನ್ ಹೇಳಿಕೊಡುವುದು ಕಷ್ಟ ಅಂತನ್ನಿಸಿದಾಗ ಉತ್ಸಾಹ ಕಡಿಮೆಯಾಯಿತು. ಗಂಟಲು ಒರಲಿಕೊಂಡು ಪಾಠ ಹೇಳಿ ಕೊಟ್ಟಿದ್ದರೂ, ತಿಂಗಳ ಖರ್ಚಿನಲ್ಲಿ ಹತ್ತು ರೂಪಾಯಿ ಉಳಿಸಲಾಗುತ್ತಿರಲಿಲ್ಲ. ಥೂ ಗಂಡನ ಮಾತು ಕೇಳಿ, ಟೀಚರ್ ಕೆಲಸವನ್ನು ಬಿಡಬಾರದಾಗಿತ್ತು ಎಂದು ಹತ್ತು ಹಲವು ಸಾರಿ ಪೇಚಾಡಿಕೊಂಡಳು.

ಗಂಡ ಮನೆಗೆ ಒಂದೊಂದು ದಿನ ಲೇಟಾಗಿ ಬರುತ್ತಿದ್ದ. ಅಂತಹ ದಿನಗಳಲ್ಲಿ ಅವನಿಗೆ ಮಾತ್ರ ಊಟಕ್ಕೆ ಬಡಿಸಿ, ತಾನು ತಣ್ಣೀರು ಕುಡಿದು ಮಲಗುತ್ತಿದ್ದಳು. ಕೇಳಿದರೆ ತನ್ನ ಊಟ ಆಯಿತೆಂದು ಸುಳ್ಳು ಹೇಳುತ್ತಿದ್ದಳು. ಹೀಗೆ ಗಂಡ ದಿನವೂ ತಡವಾಗಿ ಬಂದರೆ, ತನ್ನ ರಾತ್ರಿಯ ಊಟದ ಖರ್ಚು ಉಳಿಯುತ್ತದೆಂದು ಲೆಖ್ಖ ಹಾಕಿದಳು. ಆದರೆ ಬೆಳಿಗ್ಗೆ ಆಗುವಷ್ಟರಲ್ಲಿ ಹೊಟ್ಟೆ ಹಸಿವು ತಾಳಲಾರದೇ ಹತ್ತಾರು ಸಾರಿ ನೀರು ಕುಡಿಯುತ್ತಿದ್ದಳು.

ಮಕ್ಕಳಿಗೆ ಚಾಕಲೇಟು ಬದಲಿಗೆ ಬೆಲ್ಲ ಕೊಟ್ಟು ರಮಿಸುತ್ತಿದ್ದಳು, ಮನೆಗೆ ಬಂದ ನಾದಿನಿಯರು ಮಕ್ಕಳ ಕೈಗೆ ಹಣ ಕೊಟ್ಟರೆ, ಸರ‍್ರನೆ ತೆಗೆದಿಟ್ಟುಕೊಳ್ಳುತ್ತಿದ್ದಳು. ವೇಣು ಒಂದು ಸಾರಿ ತಮಾಷೆ ಮಾಡಿದ್ದ.

"ಅದೇನು ಎಂದೂ ಹಣ ಕಾಣದವಳ ಹಾಗೆ ಆಡ್ತೀಯಲ್ಲ. ಅವರೆಲ್ಲಾ ಏನಂದುಕೊಳ್ತಾರೆ! ನೀನು ಕೆಲಸದಲ್ಲಿದ್ದೆ. ಸಂಪಾದನೆ ಮಾಡ್ತಿದ್ದೆ."

"ಈಗ ಸಂಪಾದನೆಯೇ ಇಲ್ಲವಲ್ಲ."

"ನಿನಗೆ ಪಾಕೆಟ್ ಮನಿ ಬೇಕಾ ಗೀತಾ?" ಕರುಣೆಯಿಂದ ಕೇಳಿದ್ದ.

"ಕೊಡ್ತೀರಾ?" ಆಸೆಯಿಂದ ಕೇಳಿದಳು.

"ಕೊಡ್ತೀನಿ. ಆದರೆ ಅದನ್ನು ನೀನು ಖರ್ಚು ಮಾಡಬೇಕು. ನಿನಗೆ ನಿನ್ನ ಮಕ್ಕಳಿಗೆ ಏನು ಬೇಕೋ ಅದನ್ನು ತಗೋಬೇಕು. ಸಾಸಿವೆ ಡಬ್ಬದಲ್ಲೋ ಬೇಳೆ ಡಬ್ಬದಲ್ಲೋ ಮುಚ್ಚಿಡಬಾರದು."

"ಇಲ್ಲ ಕೊಡಿ. ತಿಂಗಳಿನಲ್ಲಿ ಉಳಿದರೆ ಮಾತ್ರ ಒಂದು ಡಬ್ಬಿಗೆ ಹಾಕಿಡ್ತೀನಿ.." ಎಂದಿದ್ದಳು. "ಅಂತೂ ನಿನ್ನ ವಜ್ರದ ಓಲೆ ಆಸೆ ಉಳಿಸಿಲ್ಲ ಅನ್ನು." ಎಂದ ಅವಳ ಕೆನ್ನೆ ತಟ್ಟಿ, ಅವಳ ಕಣ್ಣಲ್ಲಿ ನೀರೂರಿತು.

ಪಾಕೆಟ್ ಮನಿ ಕೈಗೆ ಸಿಕ್ಕಿದ ದಿನ ಅವಳನ್ನು ಹಿಡಿಯುವವರೇ ಯಾರಿಲ್ಲ. ಆ

ಹಣವನ್ನು ನಾಲ್ಕಾರು ಸಾರಿ ಎಣಿಸಿದಳು. ಎಲ್ಲೆಲ್ಲಿ ತೆಗೆದಿಟ್ಟರೂ ತೃಪ್ತಿ ಇಲ್ಲ. ಆದರೆ ತಿಂಗಳ ಕೊನೆಯ ಹೊತ್ತಿಗೆ ಅದೂ ಇದು ಅಂತ ಯಾವುದೋ ಖರ್ಚುಗಳಿಗೆ ಆ ಹಣ ಕರಗಿತ್ತು. ಅವಳಿಗೆ ಅತಿ ದುಃಖವಾಗಿತ್ತು. ಆದರೂ ಹಠದಿಂದ ಆಗ ಈಗ ಹತ್ತಾರು ರೂಪಾಯಿಗಳನ್ನು ತನ್ನ ಕಣ್ಣಿಗೆ ಬೀಳದಂತೆ ಮುಚ್ಚಿಟ್ಟಳು. ಎಣಿಸಿ ಲೆಖ್ಖ ಹಾಕಿದರೆ ಎಲ್ಲಿ ಕಡಿಮೆಯಾಗುತ್ತದೋ ಎಂದುಕೊಂಡು ಆ ಕಡೆ ನೋಡುತ್ತಲೇ ಇರಲಿಲ್ಲ.

ಮಗ ರವಿಯನ್ನು ನರ್ಸರಿ ಸ್ಕೂಲಿಗೆ ಸೇರಿಸಿದಾಗ ಕೂಡಿಟ್ಟ ಹಣವೆಲ್ಲಾ ಖರ್ಚಾಗಿತ್ತು. ವೇಣು ತಾನು ಆಫೀಸಿನಲ್ಲಿ ಅಡ್ವಾನ್ಸ್ ತೆಗೆದುಕೊಂಡಿರುವುದಾಗಿ ಹೇಳಿ, ತಿಂಗಳ ಖರ್ಚಿಗೆ ಕಡಿಮೆ ಹಣ ಕೊಟ್ಟಿದ್ದ. ಫೀಸು, ಯೂನಿಫಾರಂ, ಬುಕ್ಸ್, ಆಟೋರಿಕ್ಷಾ ಇತ್ಯಾದಿಗಳ ಖರ್ಚು ಹೆಚ್ಚಾಗತೊಡಗಿತು. ಮನೆಯಲ್ಲಿದ್ದ ಹಳೆಯ ಹಿತ್ತಾಳೆ ಪಾತ್ರೆಗಳನ್ನೆಲ್ಲಾ ಒಂದೊಂದಾಗಿ ಮಾರಿ, ಹಣ ಶೇಖರಿಸಿದಳು. ಆ ದಿನ ಗಂಡ ಹೆಂಡತಿಗೆ ಹಣಾ ಹಣಿ ಜಗಳ.

"ಹಿತ್ತಾಳೆ ಪಾತ್ರೆಗಳನ್ನು ಯಾರನ್ನು ಕೇಳಿ ಮಾರಿದೆ? ಅದೆಲ್ಲಾ ನಮ್ಮ ಅಪ್ಪನ ಮನೇದು, ನಿಮ್ಮ ಅಪ್ಪನ ಮನೇದಲ್ಲ, ತಿಳೀತೆ?" ರೇಗಿದ್ದ.

"ನಿಮ್ಮ ಅಪ್ಪನ ಮನೇದೇ ನನಗೂ ಗೊತ್ತು. ನಿಮ್ಮ ಅಪ್ಪನ ಮೊಮ್ಮಕ್ಕಳ ಭವಿಷ್ಯಕ್ಕಾಗಿಯೇ ನಾನು ಅದನ್ನು ಮಾರಿದ್ದು ತಿಳೀತೆ? ಎಂದು ಹಂಗಿಸಿದಾಗ ತೆಪ್ಪಗಾದ". ಆದರೂ,

"ಈ ನಡುವೆ ನಿನ್ನ ದರ್ಪ ಜಾಸ್ತಿ ಆಗಿದೆ. ಮಾತಿಗೆ ಎದುರು ಮಾತು. ನನ್ನ ಅಣ್ಣ ತಮ್ಮಂದಿರು ಕೇಳಿದರೆ ಏನು ಹೇಳಲಿ? ಅವರೆಲ್ಲಾ ಆಡಿಕೊಂಡು ನಗಲ್ವೆ?"

"ಆಡಿಕೊಂಡು ನಗೋರು ನಮ್ಮ ಸಹಾಯಕ್ಕೆ ಬಂದಿಲ್ಲ. ನಿಮ್ಮ ಅಣ್ಣ ಶ್ರೀಮಂತ, ನಿನ್ನ ತಮ್ಮಂದಿರು ಇನ್ನೂ ಬ್ರಹ್ಮಚಾರಿಗಳು, ನಿಮ್ಮ ತಾಯಿ, ಅವರಾದರೂ ಯೋಚಿಸ ಬೇಡವೆ? ನಮ್ಮ ಗತಿ ಏನೂಂತ...... ಹೋಗಲಿ, ನಿಮ್ಮ ಅಮ್ಮನ್ನ ಕೇಳಬಾರದಾ ನೀವು....."

"ಅಮ್ಮನಿಗೆ ಈಗ ಏನೂ ಸಂಪಾದನೆ ಇಲ್ಲ. ಅವಳಿರುವುದೇ ತಮ್ಮಂದಿರ ಮನೆಯಲ್ಲಿ. ನಮಗೆ ಕಷ್ಟವಾಗಬಾರದು ಅಂತ ಈ ಮನೇನ ನಮಗೆ ಬಿಟ್ಟುಕೊಟ್ಟು ಹೋಗಿದ್ದಾಳೆ. ಇದನ್ನೆಲ್ಲ ಉಳಿಸಿಕೊಳ್ಳುವುದು ನಮ್ಮ ಕರ್ತವ್ಯ. ಅದನ್ನು ಬಿಟ್ಟು ಒಂದೊಂದನ್ನೇ ಮಾರಿಕೊಂಡು ತಿಂದರೆ ಎಕ್ಕಡ ತಗೊಂಡು ಹೊಡೀತಾರೆ ಅಷ್ಟೆ."

"ಎಕ್ಕಡದಲ್ಲಿ ಹೊಡಿಸಿಕೊಳ್ಳುವಂಥ ಕೆಲಸ ನಾನೇನೂ ಮಾಡಿಲ್ಲ ಬಿಡಿ. ನೀವು ಈಗಲೂ ಹೂಂ ಅನ್ನಿ, ನಾನು ಕೆಲಸಕ್ಕೆ ಸೇರಿಕೊಳ್ತೀನಿ" ಎಂದು ಬೇಡಿಕೊಂಡಿದ್ದಳು.

"ಅದು ಮಾತ್ರ ಸಾಧ್ಯವಿಲ್ಲ" ಎಂದು ಗಡುಸಾಗಿ ಹೇಳಿ, "ನಾನು ಇವತ್ತು

ರಾತ್ರಿಯ ಟ್ರೈನಿನಲ್ಲಿ ಮದ್ರಾಸಿಗೆ ಹೋಗ್ತಿದೀನಿ. ಬರುವುದು ನಾಲ್ಕಾರು ದಿನಗಳಾಗ ಬಹುದು, ನಾನು ಬರೋವಷ್ಟರಲ್ಲಿ ಹಣ ಇಲ್ಲ ಅಂತ ಮಕ್ಕಳನ್ನು ಮಾರಿಬಿಟ್ಟೀಯೇ" ಎಂದು ನಗುತ್ತಾ ಅವಳ ತಲೆಯ ಮೇಲೆ ಮೊಟಕಿ, ಅವಳ ಕೈಗೆ ಖರ್ಚಿಗೆ ಬೇಕಾಗುಷ್ಟು ಹಣವನ್ನು ಎಣಿಸಿಕೊಟ್ಟ.

"ಎಣಿಸಿ ಕೊಡೋದು ನೋಡು.... ಎಷ್ಟು ಜಿಪುಣ" ಎಂದಳು.

"ಜಿಪುಣತನ ಮಾಡ್ತೀನಿ. ಆದರೆ ಎಂದಾದ್ರೂ ನಿನ್ನನ್ನು ಲೆಖ್ಖ ಕೇಳಿದೀನಾ ಹೇಳು!" ಎಂದು ಸವಾಲು ಹಾಕಿದ.

"ನಾನು ಎಲ್ಲಾ ಲೆಖ್ಖ ಬರೆದಿಟ್ಟಿದ್ದೀನಿ. ಬೇಕಾದ್ರೆ ತೋರಿಸ್ತೀನಿ. ಎಷ್ಟೋ ಸಲ ನೀವು ಕೊಟ್ಟ ಹಣಕ್ಕಿಂತ ಹೆಚ್ಚು ಖರ್ಚಾಗಿರತ್ತೆ ಗೊತ್ತಾ?"

"ಗೊತ್ತು.... ಅದಕ್ಕೇ ನನಗೆ ಮದುವೆ ಬೇಡ ಅಂತ ಬಡ್ಕೊಂಡೆ. ಈ ಅಮ್ಮ ಬಿಡಲಿಲ್ಲ. ನಿನ್ನನ್ನು ತೋರಿಸಿದಳು. ನಿನ್ನ ನೀಲಿಗಣ್ಣಿನ ಕಡಲಲ್ಲಿ ಮುಳುಗಿ ಬಿಟ್ಟೆ, ಏಳಕ್ಕೇ ಆಗದೇ ಒದ್ದಡ್ತಾ ಇದೀನಿ," ಎಂದ ಹತ್ತಿರ ಬರುತ್ತಾ.

"ನಿಮ್ಮ ರಸಿಕತನ ಮಾತ್ರ ಕಡಿಮೆ ಆಗಿಲ್ಲ." ಎಂದಳು, ಅವನನ್ನು ತಳ್ಳುತ್ತಾ.

"ನಮ್ಮಂತಹ ಬಡವರ ಮನರಂಜನೆ ಇದೊಂದೇ, ರಸಿಕತನವೇ ನಮ್ಮ ಜೀವನದ ಜೀವಾಳ," ಎಂದ.

"ಈ ರಸಿಕ ಶಿಖಾಮಣಿಗಳು, ಬೇರೆ ಊರಿಗೆ ಟೋರ್‌ಗೆ ಹೋದಾಗ ಹೇಗಿರ್ತಾರೋ ಅಥವಾ ರಸಿಕರನ್ನು ಹುಡುಕಿಕೊಂಡು ಹೋಗ್ತಾರೋ.....?"

"ಥೂ ಎಂಥಾ ಮಾತಾನಾಡ್ತೀ.... ನನ್ನ ಮಕ್ಕಳ ಮೇಲಾಣೆ. ನಾನು ಇದುವರೆಗೂ ಅಂತಾ ಕೆಲಸ ಮಾತ್ರ ಮಾಡಿಲ್ಲ."

"ನಿಮ್ಮ ಹತ್ತಿರವೂ ಸಿಕ್ಕಾಬಟ್ಟೆ ಹಣ ಇದ್ದಿದ್ರೆ ಹೋಗ್ತಿದ್ದರೇನೋ...."

"ಹುಂ ಹೋಗ್ತಿದ್ದೆ. ಅದಕ್ಕೆ ಮುಂಚೆ ಏನು ಮಾಡ್ತಿದ್ದೆ ಗೊತ್ತಾ? ನಿನಗೆ ವಜ್ರದ ಓಲೆ, ಮೂಗುತಿ ತೆಗೆಸಿಕೊಟ್ಟು, ನಿನಗೆ ತಿಳಿಯದಂತೆ ನಿನ್ನನ್ನು ಬಿಟ್ಟು ಹೋಗ್ತಿದ್ದೆ. ಈಗ ಆಫೀಸಿಗೆ ಹೊತ್ತಾಯ್ತು. ನನ್ನ ಲಗೇಜ್‌ನೆಲ್ಲಾ ರೆಡಿ ಮಾಡು. ಬರ್ತಿದ್ದ ಥಾಗೆ ಹೊರಡಬೇಕು."

ಮಡದಿ ಮಕ್ಕಳನ್ನು ಮುದ್ದಿಸಿ ಮದ್ರಾಸಿಗೆಂದು ಹೊರಟವನು ಒಂದು ವಾರ ಕಳೆದರೂ ವಾಪಸ್ಸು ಬರದಿದ್ದಾಗ, ಗೀತ ಆತಂಕಕ್ಕೆ ಒಳಗಾದಳು. ಅವನ ಆಫೀಸಿಗೆ ಹೋಗಿ ವಿಚಾರಿಸಿದಾಗ ಅವರು, ಯಾಕೆ ಬರಲಿಲ್ಲವೋ ಅಂತ ನಾವು ಯೋಚಿಸು ತ್ತಿದ್ದೆವು. ರಜ ಹಾಕಿ ಮನೆಯಲ್ಲಿರಬಹುದು ಅಂತ ಭಾವಿಸಿದ್ದೆವು ಅಂತ ಹೇಳಿದಾಗ ಅವಳು ನಡುಗಿ ಹೋದಳು. ತಕ್ಷಣ ತನ್ನ ಅತ್ತೆಗೆ, ಮೈದುನರಿಗೆ ಬರುವಂತೆ ಟೆಲಿ ಗ್ರಾಂ ಕೊಟ್ಟಳು. ಅವರುಗಳು ಬಂದರೂ ಗಂಡನ ಸುಳಿವಿಲ್ಲ. ಎಲ್ಲಾ ಕಡೆಗೂ

ಸುದ್ದಿ ತಿಳಿಸಿ, ಪೋಲೀಸ್ ಕಂಪ್ಲೇಂಟನ್ನು ಕೊಟ್ಟಾಯಿತು.

ಇನ್ನೂ ಎರಡು ದಿನ ಕಳೆದ ನಂತರ, ಹೈದರಾಬಾದಿನಿಂದ ಬಂದ ಸುದ್ದಿ ಎಲ್ಲರನ್ನು ನಡುಗಿಸಿತು. ಹೈದರಾಬಾದಿನ ರೈಲ್ವೇ ಷೆಡ್‌ನಲ್ಲಿ ನಿಲ್ಲಿಸಿದ್ದ ರೈಲ್ವೇ ಕ್ಯಾರೇಜ್ ಒಂದರಲ್ಲಿ ಅನಾಥವಾಗಿ ಬಿದ್ದಿದ್ದ ಶವವನ್ನು ಕೂಲಿಯವನೊಬ್ಬ ಕಂಡು, ರೈಲ್ವೆ ಅಧಿಕಾರಿಗಳಿಗೆ ಸುದ್ದಿ ತಿಳಿಸಿದನು. ಶವದ ಜೊತೆಯಲ್ಲಿದ್ದ ಲಗೇಜ್‌ಗಳ ನೆರವಿನಿಂದ ಅವನೇ ವೇಣುಗೋಪಾಲ್ ಎಂದು ಗುರುತಿಸಿ, ಸಂಬಂಧಪಟ್ಟವರಿಗೆ ತಿಳಿಸಿಯಾಗಿತ್ತು. ಹಿಂದಿನ ದಿನವಷ್ಟೇ ಆ ಬೋಗಿಯನ್ನು ಶೆಡ್‌ಗೆ ಕಳಿಸಿದ್ದರಿಂದ, ಹೆಣವನ್ನು ಗುರುತಿಸ ಲಾಗದಷ್ಟು ವಿಕಾರವಾಗಿರಲಿಲ್ಲವಾದ್ದರಿಂದ ಹೆಣವನ್ನು ವ್ಯಾನಿನಲ್ಲಿ ಊರಿಗೆ ವಾಪಸ್ಸು ಕಳಿಸುವ ಏರ್ಪಾಡನ್ನು ಕಂಪೆನಿಯವರು ವಹಿಸಿಕೊಂಡರು. ಆದರೂ ದುರ್ಮರಣ ವಾದುದರಿಂದ ಕೇಸ್ ರಿಜಿಸ್ಟರ್ ಮಾಡಿ, ಬಾಡಿಯನ್ನು ಪೋಸ್ಟ್‌ಮಾರ್ಟಂ ಮಾಡಿ, ಆ ವ್ಯಕ್ತಿ ಹೃದಯಾಘಾತದಿಂದ ಮರಣ ಹೊಂದಿದ್ದಾನೆ ಎಂದು ಸರ್ಟಿ ಫಿಕೇಟ್ ಕೊಟ್ಟು ಕಳಿಸುವ ಏರ್ಪಾಟನ್ನು ಮಾಡಿದರು..

ಅಷ್ಟರಲ್ಲಿ ವಿಷಯ ತಿಳಿದು, ಸಾಕಷ್ಟು ಜನ ಅವನ ಮನೆ ಮುಂದೆ ಸೇರಿದ್ದರು. ದಿಗ್ಭ್ರಾಂತಳಾದ ಗೀತ ಮಗುವನ್ನೆತ್ತಿಕೊಂಡು ನಿರ್ಜೀವ ಶವದಂತೆ ಕುಳಿತಿದ್ದಳು. ಗಂಡ ಮದ್ರಾಸಿನಿಂದ ಸೀದಾ ಮನೆಗೆ ವಾಪಸ್ಸು ಬರದೇ ಹೈದರಾಬಾದಿಗೆ ಏಕೆ ಹೋಗಿದ್ದನೆಂದು ಚಿಂತಿಸುತ್ತಿದ್ದಳು.

ಪೋಸ್ಟ್ ಮಾರ್ಟ್ಂ ಮಾಡಿದ್ದರಿಂದ ಕಡೇ ಸಲ ಮುಖವನ್ನು ಸಹ ನೋಡುವಂತಿರಲಿಲ್ಲ. ದುರ್ಮರಣವಲ್ಲವಾದರೂ, ಹೆಚ್ಚಿಗೆ ಹೊತ್ತುಮಾಡದೇ ಬೇಗ ಬೇಗ ದಹನಕ್ರಿಯೆಗೆಂದು ತೆಗೆದುಕೊಂಡು ಹೊರಟೇ ಹೋದರು.

ಬಿಕ್ಕಿ ಬಿಕ್ಕಿ ಅಳುತ್ತಿದ್ದ ಅತ್ತೆಗೆ ಸಮಾಧಾನ ಹೇಳಬೇಕೆಂದೆನಿಸಿದರೂ, ನನ್ನ ಹೊಟ್ಟೆ ಉರಿದು ಬೂದಿಯಾಗಿದೆ. ನನಗೀಗ ಸಮಾಧಾನ ಯಾರು ಹೇಳಿದರೂ, ಅದು ತಣ್ಣಗಾಗುವುದಿಲ್ಲ ಎಂದು ಅತ್ತ ಮುಖ ತಿರುಗಿಸಿದಳು. ನಾಲ್ಕು ವರ್ಷದ ಮಗ, ಅಲ್ಲಿದ್ದ ಸೂಟ್‌ಕೇಸ್‌ನೊಳಗೆ ಕೈಹಾಕಿ, ಒಂದೊಂದೇ ವಸ್ತುಗಳನ್ನು ಆಚೆಗೆ ತೆಗೆದ. ಹೈದರಾಬಾದಿನ ಕಲ್ಲಿನ ಬಳೆಗಳು, ಹರಳಿನ ಸರದೊಂದಿಗೆ ನೆಲಕ್ಕೆ ಬಿದ್ದು ಸದ್ದು ಮಾಡಿತು. ಬಳೆ ಸರ ಓಲೆಗಳನ್ನು ತನ್ನ ಮಡಿಲಿಗೆ ಹಾಕಿಕೊಂಡು ಬಿಕ್ಕಿ ಬಿಕ್ಕಿ ಅತ್ತಳು. ನನಗೆ ಯಾವ ಒಡವೆಯೂ ಬೇಡ.... ಓಲೆಯ ಭಾಗ್ಯವೇ ಇಲ್ಲವಾದ ಮೇಲೆ ನನಗ್ಯಾಕೆ ಈ ಒಡವೆಗಳು ಎಂದು ಅಳುತ್ತಾ ಒಂದೊಂದನ್ನೇ ಮಡಿಲಿನಿಂದ ತೆಗೆದು ಆಚೆಗೆ ಎಸೆದಳು. ಅಲ್ಲಿಗೆ ಅವಳ ವಜ್ರದ ಓಲೆಯ ಆಸೆ ಅಳಿದಿತ್ತು.

* * *

೧೭. ಗುರುದಕ್ಷಿಣೆ

"ಜ್ಞಾನವೊಂದೇ ಸಾಕು ಮುಕ್ತಿಗೆ ।
ಇನ್ನೇನು ಬೇಕು ಹುಚ್ಚು ಮಾನವನೇ ।"

ಎಂಬ ಪುರಂದರದಾಸರ ದೇವರನಾಮವನ್ನು ಯಾರೋ ಕಲಾವಿದೆ ಸುಶ್ರಾವ್ಯವಾಗಿ ಹಾಡುತ್ತಿದ್ದರು. ಗಾನಮಾಧುರ್ಯವನ್ನೂ ಪದಲಾಲಿತ್ಯವನ್ನೂ ಆಲಿಸುತ್ತಾ ರೇಡಿಯೋ ಮುಂದೆ ಕೂತಿದ್ದ ಉಷಾ ಕೈಯಲ್ಲಿ ಬಿಸಿ ಬಿಸಿ ಕಾಫಿಯ ಕಪ್‌ನ್ನು ಹಿಡಿದು, ಮುಂದಿದ್ದ ದಿನಪತ್ರಿಕೆಯ ಮೇಲೆ ಕಣ್ಣಾಡಿಸುತ್ತಿದ್ದಳು. ಹಾಡೂ ಮುಗಿದಿತ್ತು. ಕಾಫಿಯೂ ಮುಗಿದಿತ್ತು. ಪತ್ರಿಕೆಯ ಪುಟವನ್ನು ತಿರುವಿದಳು.

ನಿಧನದ ವಾರ್ತೆಯ ಕೆಳಗಿದ್ದ ಭಾವಚಿತ್ರವನ್ನು ನೋಡಿದಳು. ತಕ್ಷಣ ಗುರುತು ಸಿಕ್ಕಿತ್ತು. ಹೌದು, ಅವರೇ.... ಶಕುಂತಲಾ ಮೇಡಂ, ಪಾಪ ಏನಾಗಿತ್ತೋ ಎಂದುಕೊಂಡು ವಿವರಗಳನ್ನು ಓದಿದಳು.

'ಗಾನ ಕಲಾವಿದೆ ಶಕುಂತಲಾ ದೇವಿಯವರು ಇನ್ನಿಲ್ಲ' ಎನ್ನುವುದರೊಂದಿಗೆ, ಅವರ ಸಾಧನೆ ಅವರ ಬಿರುದು ಬಾವಲಿಗಳ ವಿವರದೊಂದಿಗೆ 'ಅವರು ಅನೇಕ ಸಂಗೀತ ಪ್ರೇಮಿಗಳನ್ನು ಅಗಲಿ ಹೋಗಿದ್ದಾರೆ' ಎನ್ನುವ ವಿಷಯವನ್ನು ಓದಿ, ಸ್ವಲ್ಪ ಉತ್ಪ್ರೇಕ್ಷೆ ಎನಿಸಿತು. ಆದರೂ, ಅವರ ಬಗ್ಗೆ ಮನಸ್ಸು ಮಿಡುಕಿತು.

ಒಂದು ಕಾಲದಲ್ಲಿ ಅವರು ತನಗೆ ಸಂಗೀತದ ಮೇಡಂ ಆಗಿದ್ದವರು.... ಆ ದಿನಗಳನ್ನು ಮನ ನೆನೆಯಿತು.

ಒಂಭತ್ತು ವರ್ಷದ ಹುಡುಗಿ ಉಷಾ, ಅತಿ ಆಸಕ್ತಿಯಿಂದ ಸಂಗೀತ ಪಾಠಗಳನ್ನು ಕಲಿಯುತ್ತಿದ್ದಳು. ಉಳಿದ ಕೆಲವು ಹುಡುಗಿಯರಂತೆ, ತಂದೆ ತಾಯಿಗಳ ಬಲವಂತಕ್ಕೆ ಬಂದು ಕೂರುತಿದ್ದವಳಲ್ಲವಾದ್ದರಿಂದ ನಿಷ್ಠೆಯಿಂದ, ಶ್ರದ್ಧೆಯಿಂದ ಹೇಳಿಕೊಟ್ಟುದುದನ್ನು ಅಭ್ಯಾಸ ಮಾಡಿ, ಮೇಡಂಗೆ ಒಪ್ಪಿಸಿ ಶಾಭಾಸ್‌ಗಿರಿಯನ್ನು ಪಡೆಯುತ್ತಿದ್ದಳು. ಇದರಿಂದ ಕೆಲವು ಸಹಪಾಠಿಗಳಿಗೆ ಅವಳನ್ನು ಕಂಡರೆ ಅಸೂಯೆ.

'ನಿನಗೆ ಮಾತ್ರ ಚೆನ್ನಾಗಿ ಹೇಳ್ತೀಯಾಂತ ಜಾಸ್ತಿ ಹೇಳಿಕೊಡ್ತಾರೆ' ಅಂತ ಅವರುಗಳು ನುಡಿದಾಗ ಅವಳಿಗೆ ಹಮ್ಮೆ ಎನಿಸುತ್ತಿತ್ತು. ಆ ಮೇಡಂಗೆ 'ಸಿಡುಕುವ ಮೇಡಂ' ಎಂಬ ಬಿರುದು ಶಿಷ್ಯೆಯರಿಂದ ಸಿಕ್ಕಿತ್ತು. ಎಷ್ಟೋ ಹುಡುಗಿಯರು ಈ ಕಾರಣದಿಂದಾಗಿ ಅವಳೊಡನೆ ಸೇರುತ್ತಿರಲಿಲ್ಲ. ಒಂದೊಂದು ಸಲ ಅವಳಿಗೆ ಬೇಸರವೆನಿಸುತ್ತಿತ್ತು.

'ನೋಡೀ.... ನೀವೂ ಇದೀರಾ ದಂಡಕ್ಕೆ.... ಇವಳ ಕಾಲ ಕೆಳಗೆ ನುಸೀರಿ.... ಒಂದಿಷ್ಟು ತಲೆಗೆ ಹತ್ತುತ್ತೆ.... ಸರಿಯಾಗಿ ಮುಖ ತೊಳೆಯೋಕೆ ಬರುಲ್ಲ ಬಂದು ಬಿಡ್ತೀರಿ. 'ಆ' ಅಂತ ಕೂಗೋಕೆ....' ಹೀಗೆ ಬೈಗುಳ ಕೆಲವರಿಗೆ ಪ್ರಾರಂಭವಾದರೇ.... ಇನ್ನು ಕೆಲವರಿಗೆ

'ಆಹಾಹಾ.... ಏನು ಧ್ವನಿಯೋ, ಕತ್ತೆ ಕಿರುಚಿದ ಹಾಗೆ ಕಿರುಚಿದರೆ ಅದನ್ನು ಸಂಗೀತ ಅಂತ ಅನ್ನೊಲ್ಲ.... ನಿಮಗ್ಯಾಕೆ ಈ ಗಂಧರ್ವ ವಿದ್ಯೆ...., ಎಲ್ಲಾದರೂ ಕತ್ತೆ ಕಾಯೋಕೆ ಹೋಗಿ.'

ಈ ತರಹದ ಬೈಗುಳವನ್ನು ಕೇಳಲಾರದೇ ಅನೇಕ ಹುಡುಗಿಯರು ಬಿಟ್ಟು ಬೇರೆ ಕಡೆ ಸೇರಿಕೊಳ್ಳುತ್ತಿದ್ದರು. ಆಗಲೂ ಬೈಗುಳವೇ....

'ಮಾಡೋಕೆ ಕೆಲಸವಿಲ್ಲ.... ಮನೇಲಿ ಗೋಳು ಹುಯ್ದುಕೊಳ್ಳುತ್ತವೆ ಅಂತ ಅಪ್ಪ ಅಮ್ಮ ಇಲ್ಲಿಗೆ ಸಾಗಿಹಾಕ್ತಾರೆ.... ಕೂತು ಎದ್ದು ಹೋಗೋಕೆ ಇಲ್ಲಿಗೇಕೆ ಬರ್ತೀರಿ. ಈ ಚೆಂದಕ್ಕೆ ಬೈದರೆ ಸಿಟ್ಟು ಬೇರೆ.... ಆಹಹಾ ಅಲ್ಲಿ ಎಷ್ಟು ದಿನ ಇರ್ತೀರಿ.... ಹೀಗೆ ಹೀಯಾಳಿಸಿ ಅನ್ನುತ್ತಿದ್ದರೂ ಉಂಟು.'

ಆದರೂ ಹತ್ತಿರದ ನಿವಾಸಿಗಳ ಮನೆ ಹುಡುಗಿಯರು ಹೊಸ ಹೊಸದಾಗಿ ಬಂದು ಸೇರಿಕೊಳ್ಳುತ್ತಿದ್ದರು. ಫೀಸು ಸರಿಯಾದ ಸಮಯಕ್ಕೆ ತಂದು ಕೊಡಲಾಗದ ಹುಡುಗಿಯರನ್ನು ನಿರ್ದಾಕ್ಷಿಣ್ಯವಾಗಿ ಬೈಯುತ್ತಿದ್ದಳು. "ನಿಮ್ಮ ಮುಂದೆ ಗಂಟೆಗಟ್ಟಲೆ ಗಂಟಲು ಹರಿದು ಕೊಳ್ತೀನಿ, ಅಷ್ಟು ತಿಳೀಬೇಡವಾ ನಿಮ್ಮ ಅಪ್ಪ ಅಮ್ಮನಿಗೆ.... ಫೀಸು ಕೊಡೋಕೆ ಹಿಂದು ಮುಂದೆ ನೋಡೋದಾದ್ರೆ ಬರಲೇ ಬೇಡಿ...."

ಆ ಮಕ್ಕಳ ತಂದೆ ತಾಯಿಗಳು ಇವಳ ಹಿಂದೆ ಆಡಿಕೊಳ್ಳುತ್ತಿದ್ದರು. ಅಲ್ಲ ನೋಡ್ರೀ.... ಆರು ತಿಂಗಳಿಂದ ಹೋದರೂ, ಇನ್ನು ಸರಳೆ ವರಸೆಯಿಂದ ಮುಂದೆ ಹೋಗಿಲ್ಲ. ಹೀಗೇ ಹೇಳಿಕೊಡ್ತಾ ಇದ್ದರೆ, ಕೀರ್ತನೆ ಕಲಿಯುವುದು ಯಾವ ಕಾಲಕ್ಕೋ.... ಅದಕ್ಕೇ ಹೋಗುಲ್ಲ ಅಂತ ಅಂದಳು ನನ್ನ ಮಗಳು.... ನಾನೇ ಬಲವಂತ ಮಾಡಿ ಕಳಿಸಿದೆ.

"ಹೌದು ಸರಳಾ.... ಮೇಡಂ ಅತೀ ಸಿಡುಕಿ ಅಂತ ನನ್ನ ಮಗನೂ ಹೇಳಿದ. ನನ್ನ ಮಗನಿಗೆ ಸಂಗೀತ ಕಲಿಯುವ ಆಸೆ.... ಅದಕ್ಕೇ ಬೇಡಾಂದ್ರೂ ಹೋಗ್ತಾನೆ...."

"ಗಂಡು ಹುಡುಗ ಅವನಿಗೇಕೆ ಹಾಡುಗಾರಿಕೆ? ಸುಮ್ಮನೇ ಬಿಡಿಸಿ, ಮುಂದೆ ಇಂಜಿನಿಯರೋ, ಡಾಕ್ಟರೋ ಆಗುವುದನ್ನು ಬಿಟ್ಟು ಏನು ಸಂಗೀತ ಕಛೇರಿ ಮಾಡ್ತಾನಂತಾ? ಅದೆಲ್ಲಾ ನಮ್ಮಂತಹವರಿಗಲ್ಲ."

"ಹೌದು.... ಆದರೆ ಸಂಗೀತದಿಂದ ಮನಸ್ಸು ಉಲ್ಲಾಸವಾಗುತ್ತೆ. ಮಾನಸಿಕ ವಿಕಾಸವಾಗುತ್ತೆ. ಅಂತ ಓದಿದ ನೆನಪು ಅದಕ್ಕೆ ಕಳಿಸ್ತೀನಿ." ಸರಳ ನುಡಿದಾಗ ಪ್ರಭಾವತಿಯೂ ನುಡಿದಳು. ಅಲ್ಲಿಯೇ ಇದ್ದ ಉಷಳ ತಾಯಿ ಪಂಕಜಳು ನುಡಿದಳು.

ಮನೆಗೆ ಹತ್ತಿರದಲ್ಲಿದ್ದಾರೆ. ಮಕ್ಕಳಿಗೆ ಎಷ್ಟು ದಿನ ಸಾಧ್ಯವೋ ಅಷ್ಟು ದಿನ ಹೋಗಿ ತಮ್ಮ ಕೈಲಾದರೆ ಕಲಿಯುತ್ತಾರೆ. ಇಲ್ಲದಿದ್ದರೆ ಇಲ್ಲ.... ಈಗ ನೋಡಿ ನಮ್ಮ ಉಷಾನ್ನ.... ಬೇಡಾಂದ್ರೂ ಬಿಡುಲ್ಲ. ಚಿಕ್ಕ ಮಗುವಾಗಿದ್ದಾಗಿನಿಂದ ಹಾಡಿನ ಮೋಹ.... ಚೆನ್ನಾಗಿ ಹೇಳ್ತಾಳೆ ಅಂತ ಎಲ್ಲಾ ಹೇಳ್ತಾರೆ.... ಮೇಡಂ ಅವಳನ್ನು ಬೈಯುಲ್ಲವಂತೆ. ಅವಳಿಗೆ ಅದೇ ಖುಷಿ.

"ಅದೇನು ನಿಜವೋ ಸುಳ್ಳೋ.... ನೀವು ಬೇಡ ಅಂತಿರೇನೋ ಅಂತ ಸುಳ್ಳು ಹೇಳಿರಬಹುದು.... ಅಥವಾ ನೀವು ಫೀಸು ಜಾಸ್ತಿ ಕೋಡ್ತೀರೇನೋ.... ಒಬ್ಬಾಕೆ ನಗುತ್ತಾ ಪ್ರಶ್ನಿಸಿದಾಗ ಪಂಕಜಳ ಮುಖ ಕೆಂಪಾಯಿತು. ತಟ್ಟನೆ ನುಡಿದಳು."

ಮೇಡಂ ಕೇಳಿದಷ್ಟನ್ನು, ತಪ್ಪಿಸದೇ ಪ್ರತಿ ತಿಂಗಳೂ ಕೊಡ್ತೀವಿ. ನೀವೆಲ್ಲಾ ಏನು ಮಾಡ್ತಿರೋ....? ಎನ್ನುತ್ತಾ ಬೆನ್ನು ತಿರುಗಿಸಿ ಆ ಜಾಗದಿಂದ ಸರಿದಾಗ ಅವರುಗಳು ಅವಳನ್ನೇ ಆಡಿಕೊಂಡಿದ್ದರು.

ಏನೋ ಇದೆ ಒಳಗುಟ್ಟು. ಕೇಳಿದ್ರೆ ನೋಡು ಹೇಗೆ ಮಾತಾಡ್ತಾಳೆ. ತನ್ನ ಮಗಳು ಒಬ್ಬಳೇ ಜಾಣೆ ಅಂತ ಇವಳಿಗೆ ಜಂಭ. ಒಂದು ದಿನ ಇವಳಿಗೂ ತಗಲಿದರೆ ಷಾಕ್.... ಗೊತ್ತಾಗುತ್ತೆ.

ಸಂಗೀತದ ಮೇಡಂ ಮನೆಯಲ್ಲಿ ಹಬ್ಬ ಹುಣ್ಣಿಮೆಗಳು ಜಾಸ್ತಿ. ಹಾಗಾಗಿ, ಶಿಷ್ಯರಿಗೆಲ್ಲ ಆಗಾಗ್ಗೆ ಹಬ್ಬದ ತಿಂಡಿಗಳು ಸಿಗುತ್ತಿದ್ದವು. ಕರಿದ ತಿಂಡಿಗಳನ್ನು, ಅವರಿವರು ಕೊಟ್ಟು ಕೋಸಂಬರಿ ಇತ್ಯಾದಿಗಳನ್ನು ಮಕ್ಕಳ ಕೈಗೆ ಚೂರು ಹಾಕಿ ಎಲ್ಲವನ್ನು ಖರ್ಚು ಮಾಡುತ್ತಿದ್ದಳು. ಮೇಡಂಗೆ ಅಸಹ್ಯ ಜಾಸ್ತಿ. ಬೇರೆಯವರು ಕೊಟ್ಟ ತಿನಿಸನ್ನು ತಾನು ತಿನ್ನುತ್ತಿರಲಿಲ್ಲ. ಇದು ಆ ಮಕ್ಕಳಿಗೆ ತಿಳಿಯುತ್ತಿರಲಿಲ್ಲ. ಸಿಹಿ ತಿಂಡಿ ಕೊಟ್ಟಾಗ ಮೇಡಂ ಅತಿ ಒಳ್ಳೆಯವರಾಗಿ ಕಂಡಿದ್ದರೂ ಅತಿಶಯವಲ್ಲ.

ಶ್ರಾವಣ ಮಾಸದಲ್ಲಿ ಹಬ್ಬಗಳು ಸಾಲು ಸಾಲಾಗಿ ಬರುತ್ತವೆ. ಎಲ್ಲರ ಮನೆಯಲ್ಲೂ ಹಬ್ಬ, ವಿಶೇಷ ತಿಂಡಿಗಳು. ಜೊತೆಗೆ ಮಳೆ ಇದ್ದರಂತೂ, ಮನೆಯಿಂದ ಹೊರಗೆ, ಹೋಗಲೇ ಬೇಜಾರು. ಈ ಸಮಯದಲ್ಲಿ ಕ್ಲಾಸಿಗೆ ಚಕ್ಕರ್ ಹೊಡೆದು ಮನೆಯಲ್ಲೇ ಉಳಿಯುವ ಆಸೆ ಮಕ್ಕಳಿಗೂ. ಆದರೆ ಆ ಆಸೆ ಉಷಾಳಿಗಿಲ್ಲ. ನಾಲ್ಕಾರು ದಿನದಿಂದ,

ಹಬ್ಬದ ಕಾರಣದಿಂದ ಕ್ಲಾಸಿಗೆ ಹೋಗಲಾಗಿರಲಿಲ್ಲ. ಮನೆಯಿಂದ ಹೊರಟರೆ ಸಾಕು ಎನ್ನುವ ಉತ್ಸಾಹದಿಂದ ಕ್ಲಾಸಿಗೆ ಹೊರಟಳು ಉಷ. ಎರಡು ವರ್ಷದ ಪರಿಶ್ರಮದಿಂದ ಅವಳೀಗ ಚೆನ್ನಾಗಿ ಹಾಡುತ್ತಿದ್ದಳು. ಸಣ್ಣ ಸಣ್ಣ ಕೀರ್ತನೆಗಳು ಅವಳಿಗೆ ಇಷ್ಟವಾಗಿದ್ದವು. ಮೇಡಂನ ಹೊಗಳಿಕೆ ಅವಳನ್ನು ಉಬ್ಬಿಸಿದ್ದವು.

ನೀನೊಂದು ದಿನ ಶ್ರೇಷ್ಠ ಗಾಯಕಿಯಾಗುವುದರಲ್ಲಿ ಸಂಶಯವಿಲ್ಲ. ಎಂದು ಮೇಡಂ ಹೊಗಳಿದ್ದನ್ನು ಮನೆಯವರೊಡನೆ ಹೇಳಿಕೊಂಡು ಮೆರೆದಿದ್ದಳು. ಮೇಡಂಗಾಗಿ ಕಾಯುತ್ತಾ ಕೂತಿದ್ದವಳಿಗೆ ಏಕೋ ಏನೋ ಸಣ್ಣಗೆ ತಲೆನೋವು ಪ್ರಾರಂಭವಾಗಿತ್ತು. ಯಾರದೋ ಮನೆಯಲ್ಲಿ ಏನೋ ತಿಂಡಿಯನ್ನು ಕರಿಯುತ್ತಿದ್ದರು. ಅದರ ಕನುಗು ಮನೆಯನ್ನು ಸುತ್ತಿತ್ತು. ಇವಳಿಗೆ ವಾಕರಿಕೆ ಬರುವಂತಾಗಿತ್ತು. ಕುಳಿತಲ್ಲೇ ಚಡಪಡಿಸತೊಡಗಿದಳು. ಸ್ವಲ್ಪ ಹೊತ್ತಿನಲ್ಲೇ ಉಳಿದ ಹುಡುಗಿಯರೂ ಬಂದು ಸೇರಿದರು.

ಮೇಡಂ ಅಡಿಗೆ ಕೆಲಸ ಮುಗಿಸಿ, ಚೆನ್ನಾಗಿ ಸಿಂಗರಿಸಿಕೊಂಡು ಬಂದು, ತನಗಾಗಿ ಪ್ರತ್ಯೇಕವಾಗಿ ಇಟ್ಟುಕೊಂಡಿದ್ದ ಮಣೆಯ ಮೇಲೆ ಕುಳಿತಳು. ಉಳಿದ ಹುಡುಗಿಯರು ಚಾಪೆಯ ಮೇಲೆ ತಮ್ಮ ತಮ್ಮ ಪುಸ್ತಕಗಳನ್ನು ತೆಗೆದಿಟ್ಟುಕೊಂಡಿದ್ದರು. ಎಲ್ಲರಿಗಿಂತ ಮುಂದೆ ಕೂತಿದ್ದ ಉಷ ತನ್ನ ಕೈಗೆ ತಂಬೂರಿಯನ್ನು ತೆಗೆದುಕೊಂಡು ತಂತಿಯನ್ನು ಮೀಟತೊಡಗಿದಳು. ಶೃತಿಯ ನಾದಕ್ಕೆ ತಮ್ಮ ದನಿಯನ್ನು ಸೇರಿಸಿ ಹುಡುಗಿಯರು.... ಸಾ... ಪಾ... ಸಾ... ಎಂದು ಪ್ರಾರಂಭಿಸಿದರು.... ಅಷ್ಟೆ... ಉಷಾಳ ತಲೆನೋವು ಜಾಸ್ತಿಯಾಗಿತ್ತು. ಹೊಟ್ಟೆ ತೊಳೆಸಲು ಪ್ರಾರಂಭವಾಗಿತ್ತು.... ತಡೆಯಲಾರದೇ ಮೇಡಂನ ಮುಖವನ್ನು ನೋಡುತ್ತಾ ತಂಬೂರಿಯನ್ನು ಕೆಳಗಿಡಬೇಕೆನ್ನುವಷ್ಟರಲ್ಲಿ ಹೊಟ್ಟೆಯಲ್ಲಿದ್ದುದೆಲ್ಲಾ ಈಚೆಗೆ ಬಂದಿತ್ತು. ಏನಾಯ್ತು ಅಂತ ಅಲ್ಲಿದ್ದವರಿಗೆ ತಿಳಿಯುಷ್ಟರಲ್ಲಿ ವಾಕ್.... ವಾಕ್ ಎಂದು ಉಷಾ ವಾಂತಿ ಮಾಡಿದ್ದಳು.

ಛಂಗನೆ ಮಣೆಯಿಂದ ಹಾರಿ ನಿಂತ ಮೇಡಂ ಉಷಳ ಕಡೆ ಸಿಡಿಗಣ್ಣಿನಿಂದ ಅಸಹ್ಯದಿಂದ ನೋಡಿದಳು. ಮೂಗಿಗೆ ಸೀರೆಯ ಸೆರಗನ್ನು ಹಿಡಿದಳು. ತಂಬೂರಿಯ ಮೇಲೆ, ಚಾಪೆಯ ಮೇಲೆ, ಮುಂದಿದ್ದ ಪುಸ್ತಕದ ಮೇಲೆ, ಅಲ್ಲೆಲ್ಲಾ ವಾಂತಿ ಸಿಡಿದಿದೆ.

ಹೆದರಿ ಅಳುತ್ತಿದ್ದ ಉಷಳ ಕಡೆ ಅವಳ ಗಮನವಿಲ್ಲ..... ಉಳಿದ ಹುಡುಗಿಯರು ಮುಂದೇನೋ ಎನ್ನುವಂತೆ ಗಾಭರಿಯಿಂದ ಎದ್ದು ದೂರ ನಿಂತು ಅವಳನ್ನೇ ನೋಡುತ್ತಿದ್ದರು. ಮೇಡಂ ಕಡೆ ನೋಡುವ ಧೈರ್ಯವಿಲ್ಲ ಅವರಿಗೆ. ಪ್ರಾರಂಭವಾಯಿತು ಬೈಗುಳದ ಸುರಿಮಳೆ.

ನಿನಗೇನೇ ಬಂತು ಹೊತ್ತು ಪ್ರಾರಬ್ಧ ಮುಂಡೇದೇ.... ಹಾಳಾಯ್ತಲ್ಲ ತಂಬೂರಿ.

ನಿಮ್ಮಪ್ಪ ತಂದು ಕೊಡ್ತಾನಾ? ಹೊತ್ತಿಲ್ಲ ಗೊತ್ತಿಲ್ಲ. ಸಿಕ್ಕಿ ಸಿಕ್ಕಿದ್ದನ್ನೆಲ್ಲಾ ಮೂಗಿನ ತನಕ ತಿಂದು ಬರೋದು. ಇಲ್ಲಿ ಬಂದು ಗಲೀಜು ಮಾಡೋದು.... ಈಗ ಯಾರು ಬಳೀತಾರೆ ಇದನ್ನೆಲ್ಲಾ.... ಏಳು ಎದ್ದು ಮನೆಗೆ ಹೋಗಿ ನಿಮ್ಮಮ್ಮನ ಕರೆದುಕೊಂಡು ಬಾ ತಗೀಲಿ, ಈ ಹಾಳಾದ್ದನ್ನೆಲ್ಲಾ.... ನೋಡಲಿ ಮಗಳು ಮಾಡಿರುವ ಘನಂಧಾರಿ ಕೆಲಸಾನಾ....

ಉಷಾ ಹೆದರುತ್ತಾ ತಂಬೂರಿಯನ್ನು ಕೆಳಗಿಟ್ಟು ಎದ್ದು ನಿಂತಳು. ಒದ್ದೆಯಾಗಿದ್ದ ಲಂಗದ ಮೇಲೆ ಹರಡಿದುದೆಲ್ಲಾ ಇನ್ನಷ್ಟು ತಂಬೂರಿಯ ಮೇಲೆ ಬಿತ್ತು. ತೂರಾಡುತ್ತಾ ಬೀಳಲಿದ್ದ ಉಷಳನ್ನು ಪಕ್ಕದಲ್ಲಿ ನಿಂತಿದ್ದ ಹುಡುಗಿಯೊಬ್ಬಳು ಹಿಡಿದಳು.

"ಹೋಗ್ರೇ ಏನು ಮಿಕಿ ಮಿಕಿ ಅಂತ ನೋಡ್ತಾ ಇದೀರಿ. ಈಗ್ಲೇ ಹೋಗಿ ಅವರಮ್ಮನ್ನ ಕರೆದುಕೊಂಡು ಬನ್ನಿ" ಎನ್ನುತ್ತಾ ತಾನು ಮೂಗು ಮುಚ್ಚಿಕೊಂಡು, ಬಚ್ಚಲು ಮನೆಯ ಕಡೆ ನಡೆದಳು.

ವಿಷಯ ತಿಳಿದ ಉಷಳ ತಾಯಿ ತಕ್ಷಣವೇ ಬಂದಳು. ಅಷ್ಟರಲ್ಲಿ ಮತ್ತೆ ಸ್ನಾನ ಮಾಡಿ, ಮಡಿ ಬಟ್ಟೆ ಧರಿಸಿದ ಮೇಡಂ ಅವಳೆದುರಿಗೆ ಪ್ರತ್ಯಕ್ಷಳಾದಳು. ಹೆದರಿ ನಿಂತಿದ್ದವಳನ್ನು ಸಮಾಧಾನ ಮಾಡುತ್ತಿದ್ದ ತಾಯಿಯನ್ನು ಕಂಡು ಎತ್ತರದ ಸ್ವರದಲ್ಲಿ ನುಡಿದಳು.

"ಏನ್ರೀ... ಏನು ನೋಡ್ತಾ ಇದೀರಾ? ಇದು ನಿಮ್ಮ ಮಗಳು ಮಾಡಿರುವ ಅವಾಂತರವೇ.... ಅಷ್ಟು ಜ್ಞಾನ ಬೇಡ ನಿಮಗೆ? ಫೀಸು ಕೊಡ್ತೀವಿ. ಅನ್ನೋ ಸಂಕಟಕ್ಕೆ ಹುಶಾರಿಲ್ಲದವಳನ್ನು ಕ್ಲಾಸಿಗೆ ಕಳಿಸೋದಾ? ಈಗ ನೋಡಿ ಇಲ್ಲಿ, ಥೂ ಎಷ್ಟು ಅಸಹ್ಯ...."

"ಏನ್ರೀ ಅಸಹ್ಯ.... ಸ್ವಲ್ಪ ಮೆಲ್ಲಗೆ ಮಾತಾಡಿ.... ಏನು ಆಗಬಾರದ್ದು ಆಗಿ ಹೋಗಿದೆ. ಅಸಹ್ಯವಂತೆ ಅಸಹ್ಯ.... ನಿಮಗೆ ಹುಶಾರೇ ತಪ್ಪಲ್ಲವಾ.... ನಿಮಗೆ ಹೊಟ್ಟೆನೇ ಕೆಡುಲ್ಲವಾ. ನಿಮ್ಮ ಮಾತು ಎಷ್ಟು ಅಸಹ್ಯವಾಗಿ ಕಾಣ್ತದೆ ನನಗೆ," ಎಂದು ಉಷಳ ತಾಯಿಯೂ ಅಸಹನೆಯಿಂದ ನುಡಿದಾಗ ಮೇಡಂ ಮತ್ತಷ್ಟು ಕೆರಳಿದಳು.

"ಓಹೋಹೋ.... ಏನ್ರೀ ಜೋರ್ಮಾಡ್ತೀರಿ? ನನ್ನ ಮನೇಲಿ ನಿಂತುಕೊಂಡು, ನನ್ನನ್ನೇ ಅನ್ನೊವಷ್ಟು ಧೈರ್ಯ...? ಮೊದಲು ಅದನ್ನೆಲ್ಲಾ ಕ್ಲೀನ್ ಮಾಡಿ, ನಿಮ್ಮನ್ನ ಕರೆಸಿದ್ದು ನನ್ನನ್ನು ಅನ್ನೋಕಲ್ಲ. ಇದನ್ನೆಲ್ಲ ಬಳಿಯೋಕೇ...."

"ಬಂದದೀನಲ್ಲ.... ಇನ್ನೇನು? ನನಗೂ ಗೊತ್ತು.... ನಿಮ್ಮಂತಹವರಿಗೇಕೆ ಸಂಗೀತ ಸಾಹಿತ್ಯ.... ದೊಡ್ಡ ಹೃದಯವೇ ಇಲ್ಲದವರಿಗೇ.... ಪಾಪ ಹುಡುಗಿ ಹೆದರಿ ಅಳುತ್ತಾ ಇದ್ದಾಳೆ ಅನ್ನೋ ಕರುಣೆ ಬೇಡವಾ ನಿಮಗೇ...."

"ವಾಂತಿ ಭೇದಿ ಮಾಡೋರಿಗೆಲ್ಲಾ ಏನು ಕರುಣೆ ತೋರಿಸೋದು? ಅಷ್ಟಿದ್ದರೆ

ನಿಮ್ಮ ನಿಮ್ಮ ಮನೇಲಿಟ್ಟುಕೊಂಡು, ಅದೇನು ಮುಚ್ಚಟೆ ಮಾಡ್ತೀರೋ ಮಾಡಿ. ನಮ್ಮಂಥೋರ ಮನೆಗೆ ಕಳಿಸಬೇಡಿ ನಮ್ಮ ಪ್ರಾಣ ತಿನ್ನೋಕೇ...."

"ನಿಮ್ಮ ಪ್ರಾಣ ಏಕೆ ಹೋಗುತ್ತೆ? ತಗೊಳ್ಳಲ್ಲವೇ ಫೀಸು? ಏನು ಬಿಟ್ಟಿ ಹೇಳಿ ಕೊಡೋ ತರಹ ಆಡ್ತೀರಲ್ಲಾ...."

"ಫೀಸು ಬಿಸಾಕ್ತೀನಿ ಅಂತ ಜಂಭ ತೋರಿಸಬೇಡಿ. ಇದು ನಿಮ್ಮ ಮನೆಯಲ್ಲಿ ಮೊದಲು ಇದನ್ನೆಲ್ಲಾ ಕ್ಲೀನ್ ಮಾಡಿ.... ಬೇರೆ ತಂಬೂರಿ ತರಿಸಿಕೊಡಿ.... ಮಾತು ಸಾಕು ಮಾಡಿ...."

ಆಕೆ ಗೊಣಗುತ್ತಾ ಎಲ್ಲವನ್ನು ಕ್ಲೀನ್ ಮಾಡಿದಳು. ದೂರ ನಿಂತು ನೋಡುತ್ತಿದ್ದ ಮೇಡಂ ಉಳಿದ ಹುಡುಗಿಯರಿಗೂ ಕೆಲಸ ಹಚ್ಚಿದಳು. ಅರ್ಧ ಗಂಟೆಯಲ್ಲಿ ಎಲ್ಲರೂ ಹೊರಟು ಹೋಗಿದ್ದರು....

ನಂತರ ವಾರ ಕಳೆದರೂ ಯಾವ ಹುಡುಗಿಯರೂ ಕ್ಲಾಸಿಗೆ ಬರದಿದ್ದಾಗ ಮೇಡಂನ ಆತಂಕ ಪ್ರಾರಂಭವಾಗಿತ್ತು. ರೂಮಿನ ತುಂಬಾ ದುರ್ವಾಸನೆ ಅಡಗಿದೆ ಎಂಬ ಭ್ರಮೆಯಿಂದ ಆ ರೂಮಿನ ಕಡೆ ಹೋಗುವುದನ್ನೇ ಬಿಟ್ಟಿದ್ದಳು. ತಂಬೂರಿಯ ಕಡೆ ಕಣ್ಣೆತ್ತಿ ಸಹ ನೋಡಿರಲಿಲ್ಲ. ಈಗ ನಿಧಾನವಾಗಿ ತನ್ನ ತಪ್ಪಿನ ಅರಿವಾಗಿತ್ತು. ಈ ವಿಷಯ ತಿಳಿಯದ ಹೊಸದಾಗಿ ಬಂದು ಸೇರಿದ ಹುಡುಗಿಯರ ಮುಖಾಂತರ ಹಳೆಯ ವಿದ್ಯಾರ್ಥಿಗಳಿಗೆ ಹೇಳಿ ಕಳಿಸಿದಳು. ಕೆಲವರು ಬಂದರು. ಕೆಲವರು ಬರಲಿಲ್ಲ. ಉಷಾ ಮಾತ್ರ ಮತ್ತೆಂದೂ ಬರಲೇ ಇಲ್ಲ.

ಮೆಚ್ಚಿನ ಪ್ರತಿಭಾವಂತ ಶಿಷ್ಯೆಯನ್ನು ಕಳೆದುಕೊಂಡದ್ದು ಶಕುಂತಲಾಗೆ ಅತಿ ವ್ಯಥೆಯನ್ನುಂಟು ಮಾಡಿತ್ತು. ಹೇಗಾದರೂ ಆ ಶಿಷ್ಯೆಯನ್ನು ಮತ್ತೆ ಪಡೆದು, ತನ್ನ ಸಂಗೀತ ವಿದ್ಯೆಯನ್ನು ಧಾರೆಯೆರೆಯ ಬೇಕೆಂಬ ಹಂಬಲ ಹೆಚ್ಚಾಯಿತು. ಅವಳು ಹೋಗುತ್ತಿದ್ದ ಸ್ಕೂಲಿಗೇ ಹೋಗಿ, ಅವಳನ್ನು ಮಾತನಾಡಿಸಿ, ಕ್ಲಾಸಿಗೆ ಬಾ ಎಂದು ಹೇಳಿ ಬಂದದ್ದೂ ಆಯಿತು. ಆದರೆ ಉಷ ಬರಲೇ ಇಲ್ಲ.

ಉಷಳ ತಾಯಿಯೂ ಹಠಮಾರಿಯೇ. ಉಷ ಮತ್ತೆ ಸಂಗೀತ ಪಾಠಕ್ಕೆ ಹೋಗ್ತೀನಿ ಅಂತ ನುಡಿದಾಗ ಗದರಿದ್ದಳು. "ನೀನೇನು ಗತಿ ಇಲ್ಲದೋಳೇ...... ಫೀಸು ತೆತ್ತರೆ ಅವಳಂತಹ ಹತ್ತಾರು ಜನ ಮೇಡಂ ಸಿಗ್ತಾರೆ....." ಎಂದು ಅವಳನ್ನು ಬೇರೆ ಕಡೆಗೆ ಸೇರಿಸಿದ್ದಳು.

ಇದೆಲ್ಲಾ ನಡೆದು ಹತ್ತಾರು ವರುಷಗಳೇ ಕಳೆದು ಹೋಗಿವೆ. ಉಷಾ ತನ್ನ ಸಾಮರ್ಥ್ಯದಿಂದ, ಸಾಧನೆಯಿಂದ ಸಂಗೀತ ಶಿಕ್ಷಣದಲ್ಲಿ ಸಾಕಷ್ಟು ಪರಿಣತಿಯನ್ನು ಪಡೆದಿದ್ದಾಳೆ. ಉತ್ತಮ ಹಿನ್ನೆಲೆ ಗಾಯಕಿಯಾಗಿ ಆಯ್ಕೆಯಾಗಿ ನಾಲ್ಕಾರು ಚಲನಚಿತ್ರ ಗಳಿಗೆ ಹಾಡಿದ್ದಾಳೆ. ಈಗ ಸಾಕಷ್ಟು ಯಶಸ್ಸನ್ನು ಹಣವನ್ನು ಗಳಿಸಿದ್ದಾಳೆ. ಆದರೆ

ಹಳೆಯ ದಿನಗಳ ಈ ನೋವನ್ನು ಅವಳು ಮರೆತಿಲ್ಲ.

ಮೇಡಂನಿಂದ ತನಗೆ ಅವಮಾನವಾಯಿತು ಅಂತ ಅನ್ನಿಸಿರಲಿಲ್ಲ. ಮೇಡಂ ತನ್ನನ್ನು ಬೈದರಲ್ಲ ಎಂದು ದುಃಖವಾಗಿತ್ತು. ತಾಯಿಯ ಮಾತಿಗೆ ಒಪ್ಪಿ ಬೇರೆ ಸಂಗೀತ ಪಾಠಕ್ಕೆ ಹೋಗಲಾರಂಭಿಸಿದ್ದಳು. ಆ ಮೇಡಂ ಸಹ ಹೊಗಳುತ್ತಿದ್ದರು. ಸಂಗೀತ ಪರೀಕ್ಷೆಗಳಲ್ಲಿ ಉತ್ತಮ ಶ್ರೇಣಿಯಲ್ಲಿ ಪಾಸಾದಳು. ಆಗೆಲ್ಲಾ ಶಕುಂತಲಾ ಮೇಡಂ ನೆನಪಾಗುತ್ತಿತ್ತು. "ನನ್ನ ಮೊದಲ ಗುರು ಅವರೇ.... ನನ್ನ ಈ ಯಶಸ್ಸಿಗೆ ಅವರೇ ಕಾರಣ.... ಎಂದು ಪದೇ ಪದೇ ಅನ್ನಿಸುತ್ತಿತ್ತು.... ಆದರೆ ತಾಯಿ ತನ್ನ ಮೇಲೆ ಆಣೆ ಇಟ್ಟುಕೊಂಡು ಮೇಡಂ ಮನೆಯ ಕಡೆ ಕಾಲು ಹಾಕದಂತೆ ತಡೆದಿದ್ದಳು." ಒಂದೇ ಒಂದು ಸಲ ಅವರನ್ನು ಮಾತನಾಡಿಸಿ, ಪಾಸಾದ ಸುದ್ದಿಯನ್ನು ತಿಳಿಸಿ ಬರ್ತೀನಿ ಎನ್ನುವ ಆಸೆ, ಆಸೆಯಾಗಿಯೇ ಉಳಿದಿತ್ತು. ತಾಯಿಯ ಮಾತನ್ನು ಮೀರುವ ಧೈರ್ಯವಿರಲಿಲ್ಲ. ನಂತರ ದಿನಗಳು ತಾನಾಗಿಯೇ ಉರುಳಿ ಹೋದವು.

ಈಗ ತಾಯಿ ಬದುಕಿಲ್ಲ. ತೀರಿ ಹೋಗಿ ವರ್ಷ ಕಳೆದಿದೆ. ಏನೋ ಒಂದು ರೀತಿಯಲ್ಲಿ ಅವಳ ಬದುಕಿನಲ್ಲಿಯೂ ನಾನಾ ರೀತಿಯ ಬದಲಾವಣೆಗಳಾಗಿವೆ. ಈಗ ಬಿಡುವಿಲ್ಲದಷ್ಟು ಅದೂ ಇದೂ ಕಾರ್ಯಕ್ರಮಗಳು. ಆದರೆ ಈ ದಿನ. ಈ ಸುದ್ದಿಯನ್ನು ಓದಿ ಅವಳ ಮನಸ್ಸು ಕಲಕಿ ಹೋಯಿತು. ತಾನೆಂತಹ ಪಾಪಿ! ಗುರುವಿನ ಮನಸ್ಸನ್ನು ನೋಯಿಸಿದ ಮಹಾಪಾಪಿ! ಎಷ್ಟು ಬಾರಿ ಹೇಳಿ ಕಳಿಸಿದರೂ, ಹೋಗಿ ಮಾತನಾಡಿಸದೇ, ಜಂಭಗಾತಿ ತಾಯಿಯ ಮಾತನ್ನು ಮೀರಲಾಗದೇ ಎಂತಹ ಪಾಪವನ್ನು ಮಾಡಿಬಿಟ್ಟೆನಲ್ಲಾ.... ಅಪರೋಕ್ಷವಾಗಿ ಗುರುನಿಂದೆಗೆ ಕಾರಣ ನಾದೆನಲ್ಲಾ ಎಂದು ಪರಿತಪಿಸಿದಳು. ಈಗ ಇನ್ನೆಂದೂ, ಎಂದೆಂದೂ ಬಯಸಿದರೂ, ತಾನು ಅವರನ್ನು ಮಾತನಾಡಿಸುವಂತಿಲ್ಲ. ಕ್ಷಮೆ ಕೇಳುವಂತಿಲ್ಲ. ಈಗ ಕಡೆಯ ಬಾರಿ ಅವರ ಮುಖದರ್ಶನವನ್ನಾದರೂ ಮಾಡಲೇಬೇಕು. ಇಲ್ಲದಿದ್ದರೆ ನನಗೆ ನೆಮ್ಮದಿ ಇಲ್ಲ ಎಂದುಕೊಂಡು ಎದ್ದಳು.

ಮೇಡಂ ಮನೆಯ ಮುಂದೆ ನಿಂತ ಬಿಳಿಯ ಬಣ್ಣದ ಕಾರಿನಿಂದ, ಬಿಳಿಯ ಸೀರೆಯನ್ನುಟ್ಟು ಉಷಾ ಇಳಿದಳು. ಆಗಲೇ ನೆರೆದಿದ್ದ ಜನರು ಅತ್ತ ತಿರುಗಿ, ಅವ ಳಿಗೆ ಜಾಗ ಮಾಡಿಕೊಟ್ಟರು. ಅದೇ ರೂಮಿನಲ್ಲಿ ಅದೇ ಸಿಡುಕು ಮುಖದ ದೇಹವನ್ನು ಮಲಗಿಸಿದ್ದರು. ಹಾಡುವಾಗ ಕಂಡು ಬರುತ್ತಿದ್ದ ಹಣೆಯ ಮೇಲಿನ ನೆರಿಗೆಗಳು ಇಂದಿಗೂ ಹಾಗೇ ಇವೆ. ಆದರೆ ಮುಖದ ಮೇಲಿನ ಕಳೆಯು ನೋವಿನಿಂದ ಕೂಡಿದ್ದೇ, ನೆಮ್ಮದಿಯಿಂದ ಕೂಡಿದ್ದೋ ಎಂದು ಅವಳಿಂದ ಗುರುತಿಸಲಾಗಲಿಲ್ಲ.

ದೇಹದ ಮುಂದೆ ನಿಂತು ಕೈ ಜೋಡಿಸಿದಳು. ಆ ದಿನ ನೀವು ಕರೆದರೂ ನಾನು ಬರಲಿಲ್ಲ. ಆದರೆ ಈ ದಿನ ನೀವು ಕರೆಯದಿದ್ದರೂ ನಾನಾಗಿ ಬಂದಿದ್ದೇನೆ.

ನನ್ನನ್ನು ಕ್ಷಮಿಸಿಬಿಡಿ ಮೇಡಂ, ಎಂದು ಮನದಲ್ಲೇ ಕ್ಷಮೆ ಬೇಡಿದಳು. ನಿಮಗಾಗಿ ನಾನು ಯಾವ ಹೂವನ್ನು ತರಲಿಲ್ಲ. ಆದರೆ ಈ ನನ್ನ ನಮನವೇ ನಿಮಗೆ ತಂದಿರುವ ಗುರುದಕ್ಷಿಣೆ ಎಂದುಕೊಂಡು ಬಾಗಿ ಮೇಡಂನ ಪಾದಗಳನ್ನು ಮುಟ್ಟಿ ಕಣ್ಣಿಗೊತ್ತಿಕೊಂಡಳು. ಏನನ್ನೋ ಸಾಧಿಸಿದ ಅನುಭವವಾಯಿತು. ಬಂದಂತೆಯೇ ಹಾಗೇ ಹಿಂತಿರುಗಿ ತನ್ನ ಕಾರನ್ನೇರಿ, ಕೀ ತಿರುವಿದಳು. ಮನವನ್ನಾವರಿಸಿದ್ದ ಮೌನವನ್ನು ಕಳೆಯಲೆಂಬಂತೆ ರೇಡಿಯೋ ತಿರುಗಿಸಿದಳು. ಕಾರು ಚಲಿಸಿತು.

ಗುರುಃಬ್ರಹ್ಮಾ ಗುರುಃವಿಷ್ಣುಃ । ಗುರುಃ ದೇವೋ ಮಹೇಶ್ವರಾಃ ।
ಗುರುಃ ಸಾಕ್ಷಾತ್ ಪರಬ್ರಹ್ಮಾ । ತಸ್ಮೈಶ್ರೀ ಗುರುವೇ ನಮಃ ॥

ಎಂಬ ಶ್ಲೋಕವನ್ನು ರಾಗ ಕಲ್ಯಾಣಿಯಲ್ಲಿ ಯಾರೋ ಸುಶ್ರಾವ್ಯವಾಗಿ ಹಾಡುತ್ತಿದ್ದರು. ಶಕುಂತಲಾ ಮೇಡಂ ನಿನ್ನನ್ನು ಕ್ಷಮಿಸಿದ್ದಾರೆ ನಿನ್ನ ಲೋಕ ಕಲ್ಯಾಣವಾಯಿತು ಎಂದು ಯಾರೋ ನುಡಿದಂತಾಯಿತು. ಮನವನ್ನಾವರಿಸಿದ್ದ ಅಪರಾಧಿಭಾವ ಕಡಿಮೆಯಾಯಿತು. ಉಷಾಳ ಮುಖದಲ್ಲಿ ಒಂದು ವಿಲಕ್ಷಣವಾದ ಕಳೆ ಮೂಡಿತು. ಹೊಸ ಚೈತನ್ಯ ಗರಿಗೆದರಿ ಕುಣಿದಿತ್ತು.

*   *   *

೧೮. ಕ್ಷಮೆ

ಅಂಬುಜಳಿಗೆ ಬಂದಿದ್ದ ಜ್ವರ ಒಂದು ವಾರವಾದರೂ ಬಿಟ್ಟಿರಲಿಲ್ಲ. ಡಾಕ್ಟರು ಟೈಫಾಯಿಡ್ ಜ್ವರವಿರಬಹುದೆಂದು ಅನುಮಾನಿಸಿದ್ದರು. ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕಟ್ಟಿದ್ದಳು. ಪರೀಕ್ಷೆ ಹತ್ತಿರವಾಗುತ್ತಿತ್ತು. ಓದಲು ಆಗುತ್ತಿಲ್ಲವೆಂದು ಅವಳು ಅತ್ತು ಅತ್ತು ಜ್ವರವನ್ನು ಹೆಚ್ಚಿಸಿಕೊಳ್ಳುತ್ತಿದ್ದಳು.

ಅವಳ ತಂದೆ ಸರ್ಕಾರಿ ಕೆಲಸದಲ್ಲಿದ್ದವರು. ಪ್ರತಿ ಎರಡು ಮೂರು ವರ್ಷಗಳಿಗೊಮ್ಮೆ ಬೇರೆ ಬೇರೆ ಊರಿಗೆ ವರ್ಗವಾಗುತ್ತಿತ್ತು. ಚಿತ್ರದುರ್ಗದಲ್ಲಿ ಕಳೆದ ಎರಡು ವರ್ಷದಿಂದ ಇದ್ದವರು, ಮಂಡ್ಯಕ್ಕೆ ವರ್ಗವಾಗಿ ಹೊರಟು ಹೋಗಿದ್ದರು. ಮಗಳ ಪರೀಕ್ಷೆ ಮುಗಿದ ಮೇಲೆ, ಮಂಡ್ಯದಲ್ಲಿ ಮನೆ ಮಾಡಿ ಎಲ್ಲರನ್ನೂ ಕರೆಸಿಕೊಳ್ಳುವ ಉದ್ದೇಶವಿತ್ತು.

ಮಗಳಿಗೆ ಜ್ವರ ಬಿಟ್ಟರೆ ಸಾಕು ಎಂದು ದೇವರಲ್ಲಿ ಹರಕೆ ಹೊತ್ತಿದ್ದ ಕಮಲಮ್ಮ ತನ್ನ ಇನ್ನೊಬ್ಬಳು ಮಗಳೊಡನೆ, ಹತ್ತಿರದ ದೇವಸ್ಥಾನಕ್ಕೆ ಹೋಗಿದ್ದಳು. ಮಗ ಸತ್ಯನನ್ನು ಅಂಬುಜಳ ಜತೆಗೆ ಇರುವಂತೆ ಬಿಟ್ಟು ಹೋಗಿದ್ದಳು.

ಒಳಗೆ ಅಕ್ಕನ ಎದುರಿಗೆ ಕುಳಿತಿರಲು ಬೇಸರವಾಗಿ ಸತ್ಯ ಮುಂಬಾಗಿಲ ಜಗುಲಿಯ ಮೇಲೆ ಕೂತ. ಮುಂದೆ ರಸ್ತೆಯಲ್ಲಿ ಆಟ ಆಡುತ್ತಿದ್ದವರನ್ನೇ ಆಸೆಗಣ್ಣುಗಳಿಂದ ನೋಡುತ್ತಾ ಇದ್ದವನನ್ನು ಸ್ನೇಹಿತರು ಕರೆದಿದ್ದೇ ಸಾಕು ಎಂಬಂತೆ ಓಡಿ ರಸ್ತೆಗಿಳಿದಿದ್ದ.

ಕೋಟೆಯ ರಸ್ತೆಯ ಕಡೇ ಮನೆ. ಅಲ್ಲಿ ಜನ ಸಂಚಾರ ಕಡಿಮೆ. ಕತ್ತಲಾಗುತ್ತಾ ಬಂದಿದ್ದರೂ, ಮುಬ್ಬುಗತ್ತಲೆಯಲ್ಲೇ ಸತ್ಯ ತನ್ನ ಸ್ನೇಹಿತರೊಂದಿಗೆ ಆಟ ಮುಂದುವರೆಸಿದ್ದ ಜ್ವರದ ತಾಪ ಹೆಚ್ಚಿ ಅಂಬುಜ ನರಳತೊಡಗಿದಳು. ಕಣ್ಣು ಮುಚ್ಚಿದರೂ ನಿದ್ದೆಯಿಲ್ಲ. ಏನೋ ಮಂಪರು. ಬಾಯಿಯೆಲ್ಲಾ ಒಣಗಿದಂತಾಗಿದೆ. ಬಾಯಾರಿಕೆ ಹೆಚ್ಚಿದಂತಾಗಿ, ನೀರು.... ನೀರು.... ಎಂದು ಮೆಲುದನಿಯಲ್ಲಿ ಕೇಳಿದಳು. ಯಾರೂ ಬಂದು ನೀರನ್ನು ಕುಡಿಸಲಿಲ್ಲವಾದ್ದರಿಂದ ಮತ್ತೆ ಅಮ್ಮಾ.... ಸತ್ಯಾ.... ಅಂತ ಕ್ಷೀಣ ಸ್ವರದಲ್ಲಿ ಕರೆದಳು. ಕಣ್ಣು ಬಿಟ್ಟು ನೋಡಿದಳು. ಮನೆಯೊಳಗಿನ ಕತ್ತಲೆ ಹೆಚ್ಚಾಗಿತ್ತು.

ಎದುರಿಗೆ ನಿಂತ ಆಕೃತಿಯನ್ನು ಕಂಡು ಹೆದರಿಕೆಯಾದಂತಾಗಿ ಮತ್ತು ಗಂಟಲು ಒಣಗಿ, ಕೂಗಲು ಶಕ್ತಿಯಿಲ್ಲದೇ ಬೆ..... ಬೆ..... ಎಂದಳು.

ಪಕ್ಕದಲ್ಲಿ ನಿಂತಿದ್ದ ಆ ಆಕೃತಿ, ಪಕ್ಕದ ಸ್ಟೂಲ್ ಮೇಲೆ ಇಟ್ಟಿದ್ದ ತಂಬಿಗೆಯಿಂದ ನೀರನ್ನು ಲೋಟಕ್ಕೆ ಬಗ್ಗಿಸಿ, ಅವಳ ಬಾಯಿಗೆ ಸ್ವಲ್ಪ ಸ್ವಲ್ಪವನ್ನೇ ಬಗ್ಗಿಸಿತು. ಗಂಟಲು ತಣ್ಣಗಾಗಿ ಹಿತವೆನಿಸಿತು. ತನ್ನ ಮೇಲೆ ಬಾಗಿ ತನ್ನ ಮುಖದ ಸಮೀಪವೇ ಕಂಡು ಬಂದ ಆಕೃತಿಯನ್ನು ಕಂಡು ಕಿಟಾರನೆ ಕಿರುಚಲೆಂದು ಬಾಯಿ ತೆರೆದರೂ ಶಬ್ದ ಹೊರಡಲಿಲ್ಲ. ಆ ವ್ಯಕ್ತಿ "ಶ್" ಎಂದು ನುಡಿದು ಅವಳ ಬಾಯಿ ಮೇಲೆ ಕೈ ಒತ್ತಿದಾಗ, ಹೆದರಿಕೆಯಿಂದ ಅವಳಿಗೆ ಎಚ್ಚರತಪ್ಪಿ ಹೋಯಿತು. ಮುಂದೇನಾಯಿತೆಂದು ಅವಳಿಗೆ ಗೊತ್ತಾಗಲಿಲ್ಲ.

ಗೊಣಗುತ್ತಾ ಒಳ ಬಂದ ಕಮಲಮ್ಮ ಮನೆಯ ದೀಪಗಳನ್ನೆಲ್ಲಾ ಹೊತ್ತಿಸಿ, ಮಗಳಿಗೆ ತೀರ್ಥವನ್ನು ಕುಡಿಸಲೆಂದು ಹತ್ತಿರ ಬಂದಳು. ಬೆದರು ಗಣ್ಣು ಬಿಡುತ್ತಾ ಮಲಗಿದ್ದ ಮಗಳ ಮುಖವನ್ನು ನೋಡಿ ಹೆದರಿದಳು. 'ಏನಾಯ್ತೇ.... ಏನಾಯ್ತೇ....?' ಎನ್ನುತ್ತಾ ಕೆಟ್ಟ ಸ್ವರದಲ್ಲಿ ಕೇಳುತ್ತಾ, ಅವಳ ಕತ್ತನ್ನು ಎತ್ತಿದಳು. ಮಗಳ ಮುಖದಲ್ಲಿ ಏನೋ ವ್ಯತ್ಯಾಸ ಕಂಡು ಬರುತ್ತಿದೆಯೆಂದು ಅನುಮಾನದಿಂದ ಪರೀಕ್ಷಿಸುವಂತೆ ನೋಡಿದ ನಂತರ ತಕ್ಷಣವೇ ಗೊತ್ತಾಗಿತ್ತು.

ಕತ್ತು, ಕಿವಿ, ಬೋಳಾಗಿದೆ. ಕತ್ತಿನಲ್ಲಿದ್ದ ಒಂದೆಳೆ ಸರವನ್ನು, ಕಿವಿಯಲ್ಲಿದ್ದ ಮುತ್ತಿನ ಓಲೆಯನ್ನು ಯಾರೋ ತೆಗೆದಿದ್ದಾರೆ. 'ಓಲೆ, ಸರ ಏನಾಯ್ತೇ....?' ಎನ್ನುತ್ತಾ ಮಗಳ ತಲೆಯನ್ನು ಜುಂಗಿಸಿದಳು. ನೋವಿನಿಂದ ಅಂಬುಜ ಕಿರುಚಿದಳು. ಪಕ್ಕದಲ್ಲಿದ್ದ ಕೌಸ್ತುಭ, ಅಮ್ಮನ ಕೈಹಿಡಿದು ತಡೆದಳು. 'ಸುಮ್ಮನಿರಮ್ಮಾ.... ಮೊದಲೇ ಅವಳು ನರಳ್ತಾ ಇದ್ದಾಳೆ.... ಅವಳಿಗೇನು ಗೊತ್ತು? ಯಾರೋ ಕಳ್ಳ ಬಂದು ತೆಗೆದುಕೊಂಡು ಹೋಗಿರಬಹುದು."

ಹೌದೇನೇ ಎನ್ನುವಂತೆ ಮಗಳ ಕಡೆ ನೋಡಿದಾಗ, ಅವಳು ಹೌದು ಎನ್ನುವಂತೆ ತಲೆಯಾಡಿಸಿದಳು. ಅಯ್ಯೋ.... ಕಳ್ಳ, ಕಳ್ಳ ನುಗ್ಗಿ ಎಲ್ಲಾ ಕದ್ದುಕೊಂಡು ಹೋಗಿದಾನಲ್ಲ, ಯಾರೂ ಇಲ್ಲವೇ.... ಎಂದು ಕಮಲಮ್ಮ ಬೊಬ್ಬೆ ಇಟ್ಟಾಗ ಅಕ್ಕಪಕ್ಕದವರೆಲ್ಲಾ ಬಂದು ಸೇರಿದರು.

ಕ್ಷಣ ಮಾತ್ರದಲ್ಲಿ ಎಲ್ಲರಿಗೂ ತಿಳಿದಿತ್ತು. ಒಂಟಿಯಾಗಿ, ಹುಶಾರಿಲ್ಲದೇ ಮಲಗಿದ್ದ ಅಂಬುಜಳ ಮೈಮೇಲಿದ್ದ ಒಡವೆಗಳನ್ನು ಕಳ್ಳ ಅಪಹರಿಸಿಕೊಂಡಿದ್ದಾನೆ ಅಂತ. ಅವರುಗಳು ತಲಾತಟ್ಟೆ ಮಾತನ್ನಾಡಿದರು.

"ಜ್ವರ ಬಂದ ಹುಡುಗೀನ್ನ ಯಾರಾದ್ರೂ ಒಬ್ರೇ ಬಿಟ್ಟು ಹೋಗ್ತಾರಾ ಕಮಲಮ್ಮ. ನಿಮಗೆ ಬುದ್ಧಿ ಇಲ್ಲ."

"ಇಲ್ಲ ಶಾಂತಮ್ಮ..... ಸತ್ಯನ್ನ ಅವಳ ಜತೆಗೆ ಅಂತ ಬಿಟ್ಟು ಹೋಗಿದ್ದೆ. ಎಲ್ಲಿ ಹಾಳಾಗಿ ಹೋಗಿದ್ನೋ ಈ ಮುಂಡೇ ಮಗ....." ಎನ್ನುತ್ತಾ ಅಲ್ಲಿಯೇ ನಿಂತಿದ್ದ ಸತ್ಯನ ಬೆನ್ನ ಮೇಲೆ ದಬ ದಬ ನಾಲ್ಕು ಹೇರಿದಾಗ ಆಕೆ ತಡೆದಳು.

"ಈಗ ಅವನನ್ನು ಹೊಡೆದು ಏನು ಪ್ರಯೋಜನ? ಮೊದಲು ಪೊಲೀಸ್ ಕಂಪ್ಲೇಂಟ್ ಕೊಡಿ. ಇನ್ನೇನು ಕಳುವಾಗಿದೆ ಅಂತ ನೋಡಿ."

ಪಕ್ಕದ ಮನೆಯವರು ಪೋಲೀಸ್ ಸ್ಟೇಷನ್ನಿಗೆ ಓಡಿದರು. ಕಮಲಮ್ಮ ಬೀರು ಬಾಗಿಲು ತೆಗೆದು ಒಡವೆಗಳನ್ನು ಪರೀಕ್ಷಿಸಿದಳು. ಎಲ್ಲಾ ಸರಿಯಾಗಿದೆ. ಆದರೆ ಅಲ್ಲಿಟ್ಟಿದ್ದ ಹಣ ಮಾತ್ರ ಮಾಯವಾಗಿದೆ. ಆದರೆ ಕಮಲಮ್ಮ ತಕ್ಷಣವೇ ಉಳಿದ ಒಡವೆಗಳನ್ನು ಸೀರೆಗಳ ಸಂದಿಯಲ್ಲಿ ಮುಚ್ಚಿಟ್ಟು ಹೊರಬಂದು "ಬೀರುವಿನಲ್ಲಿ ಒಂದಿಷ್ಟು ಹಣ ಇಟ್ಟಿದ್ದೆ. ಅದನ್ನು ತಗೊಂಡು ಹೋಗಿದಾನಮ್ಮಾ ಆ ಪಾಪಿ. ಇನ್ನು ನಮ್ಮಂತಹ ಬಡವರ ಮನೆಯಲ್ಲಿ ಒಡವೆಗಳು ಎಲ್ಲಿಂದ ಬರಬೇಕು!"

ಅಷ್ಟರಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್, ತನ್ನ ಸಹಾಯಕರೊಂದಿಗೆ ಬಂದ. ಹೇಳಿದ್ದನ್ನೆಲ್ಲಾ ಬರೆದುಕೊಂಡು, "ನಿಮಗೇನಾದ್ರೂ ಬುದ್ಧಿ ಗಿದ್ದಿ ಇದೆಯೇನಮ್ಮ.... ಕತ್ತಲೆ ಹೊತ್ತಿನಲ್ಲಿ ಮಕ್ಕಳನ್ನು ಮಾತ್ರ ಬಿಟ್ಟು ಬಾಗಿಲನ್ನು ತೆಗೆದು ಯಾರಾದ್ರೂ ಹೋಗ್ತಾರಾ?" ಅಂತ ಗದರಿದ. ಅಂಬುಜಳ ಬಳಿ ಬಂದು ಅವನು ಹೇಗಿದ್ದ? ಎಂತಹ ಉಡುಪನ್ನು ಧರಿಸಿದ್ದ? ಯಾವ ಭಾಷೆ ಮಾತನ್ನಾಡುತ್ತಿದ್ದ? ಎಂದೆಲ್ಲಾ ಕೇಳಿದಾಗ, ಅಂಬುಜ ಉತ್ತರಿಸುವ ಸ್ಥಿತಿಯಲ್ಲಿರಲಿಲ್ಲ, ಸುಮ್ಮನೇ ಅತ್ತಳು.

"ಹುಡುಗಿ ಸಿಕ್ಕಾಬಟ್ಟೆ ಹೆದರಿ ಬಿಟ್ಟಿದೆ...." ಎಂದು ಪಕ್ಕದಲ್ಲಿ ನಿಂತಿದ್ದವರೊಬ್ಬರು ನುಡಿದಾಗ, ಕೇಡಿಗನೊಬ್ಬ ಮೆತ್ತಗೆ ಹೆದರದೇ.... ಹುಡುಗಿ ಒಬ್ಬಳೇ ಇದ್ದಾಳೆ ಅಂತ ನೋಡಿದ.... ಮೈಮೇಲೆಲ್ಲಾ ಕೈಯಾಡಿಸಿದ್ದಾನೆ.... ಕಡೆಗೆ ಕತ್ತಿನಲ್ಲಿದ್ದುದನ್ನು ಕಿವಿಯಲ್ಲಿದ್ದುದನ್ನು ಕಿತ್ತುಕೊಂಡು ಹೋಗಿದ್ದಾನೆ. ಅಂತ ನುಡಿದಾಗ ಕೆಲವರು ಮುಸಿ ಮುಸಿ ನಕ್ಕರು.

"ಹೌದು, ಮತ್ತೇ, ಒಂಟಿ ಹುಡುಗಿ ಸಿಕ್ಕಾಗ ಸುಮ್ಮನೇ ಬಿಟ್ಟಿರುತ್ತಾನೆ? ಏನೇನು ನಡೀತೋ?" ಯಾರೋ ಲೊಚಗುಟ್ಟಿದರು.

"ಏನಾದರಾಗಲೀ, ಅವಳನ್ನು ಡಾಕ್ಟರ ಹತ್ತಿರ ಕರೆದುಕೊಂಡು ಹೋಗಿ ಸರಿಯಾಗಿ ಪರೀಕ್ಷೆ ಮಾಡಿಸಿ..... ಕಾಲ ಕೆಟ್ಟದು. ಪಾಪ ಹೆಣ್ಣು ಹುಡುಗಿ ಅವಳ ಬಾಳು ಹಾಳಾಗಬಾರದು."

ಹೀಗೆಲ್ಲಾ ತಲೆಗೊಬ್ಬರಂತೆ ಮಾತನಾಡಿದಾಗ, ಪಕ್ಕದ ಮನೆಯ ಗಂಡಸರು ನುಡಿದರು. "ಮನೆಗೆ ಕಳ್ಳ ನುಗ್ಗಿದ ಮಾತ್ರಕ್ಕೆ ಹೀಗೆಲ್ಲಾ ಮಾತನಾಡಬಾರದು. ಪಾಪ, ಅವರ ಕಷ್ಟ ಅವರಿಗೆ, ನಿಮ್ಮ ಕೈಯಲ್ಲಿ ಏನಾದರೂ ಸಹಾಯ ಮಾಡಕ್ಕೆ

ಆಗೋದಾದ್ರೆ ಮಾಡಿ. ಏನೇನೋ ಮಾತನಾಡಬೇಡಿ" ಆತನನ್ನೇ ದುರು ದುರು ನೋಡುತ್ತಾ ಉಳಿದವರು ಹೊರಟು ಹೋದರು.

ಇದೆಲ್ಲಾ ಆಗಿ ಒಂದೆರಡು ತಿಂಗಳುಗಳು ಕಳೆದು ಹೋದವು. ಪೋಲಿಸ್ನೋರು ಯಾವ ಕಳ್ಳನನ್ನು ಹಿಡಿಯಲಿಲ್ಲ. ಆದರೆ ಅಂಬುಜಳ ಮೇಲೆ ನಡೆದ ಅಪಪ್ರಚಾರ ಮಾತ್ರ ಅಪಾರ.

ಖಾಯಿಲೆಯಿಂದ ಹುಶಾರಾಗಿ ಎದ್ದು, ಸ್ಕೂಲಿಗೆ ಪುನಃ ಹೋದ ದಿನವೇ ಒಬ್ಬೊಬ್ಬ ಗೆಳತಿಯರೂ ಒಂದೊಂದು ತರಹ ಪ್ರಶ್ನಿಸಿದ್ದರು. ಟೀಚರ್ ಸಹ ಅವಳನ್ನು ಕರೆಸಿ ತಮಾಷೆ ಮಾಡಿದ್ದರು.

"ಏನೇ ಅಂಬುಜ, ನಿಮ್ಮ ಮನೆಗೆ ಬಂದಿದ್ನಂತಲ್ಲ ಕಳ್ಳ.... ಅವನು ಬರೀ ನಿನ್ನ ಮುತ್ತಿನ ಓಲೆ ಕದ್ದನೋ..... ಅಥವಾ ಮುತ್ತು ಗಿತ್ತು ಕೊಟ್ಟನೋ.....?" ಅಂಬುಜಳ ಮುಖ ನಾಚಿಕೆಯಿಂದ ಅವಮಾನದಿಂದ ಕೋಪದಿಂದ ಕೆಂಪಾಗಿತ್ತು. ಅವತ್ತೇ ಕಡೆ ತಾನು ಮತ್ತೆ ಸ್ಕೂಲಿಗೆ ಹೋಗುವುದಿಲ್ಲವೆಂದು ಹೇಳಿಬಿಟ್ಟಳು.

ಅಪವಾದದ ಮೂಟೆಯನ್ನು ಹೊತ್ತ ಅವಳು ಆ ಊರಿನಲ್ಲಿರಲು ಇಷ್ಟಪಡಲಿಲ್ಲ. ತಮ್ಮನಿಗೆ ತಂಗಿಗೆ ಪರೀಕ್ಷೆ ಆಗೋವರೆಗೂ ಆ ಊರನ್ನು ಬಿಡುವಂತಿರಲಿಲ್ಲವಾದ್ದರಿಂದ ತಂದೆ ತಮ್ಮ ಮಗಳನ್ನು ತಮ್ಮೊಂದಿಗೆ ಕರೆದೊಯ್ದರು. ಅಂಬುಜ ಆ ವರ್ಷ ಪರೀಕ್ಷೆಗೆ ಕೂರಲಿಲ್ಲ.

ನಂತರ ಪ್ರೈವೇಟ್‌ನಲ್ಲಿ ಕಟ್ಟಿ ಎಸ್.ಎಸ್.ಎಲ್.ಸಿ.ಯನ್ನು ಪಾಸು ಮಾಡಿಕೊಂಡು ಕಾಲೇಜು ಸೇರಿದಳು. ಆದರೂ ನಡೆದ ಈ ಘಟನೆಯನ್ನು ಮರೆತಿರಲಿಲ್ಲವಾದ್ದರಿಂದ, ಅಂಬುಜಳಲ್ಲಿ ಒಂದು ತರಹ ಮಂಕುತನ ಬೆಳೆಯಿತು. ಯಾರೊಂದಿಗೂ ಬೆರೆಯಲು ಇಷ್ಟಪಡುತ್ತಿರಲಿಲ್ಲ. ತಾನಾಯಿತು, ತನ್ನ ಓದಾಯಿತು. ಬಿ.ಎಸ್ಸಿ. ಎಂ.ಎಸ್ಸಿ. ಮುಗಿಸಿ ಮೈಸೂರಿನ ಕಾಲೇಜೊಂದರಲ್ಲಿ ಲೆಕ್ಚರರ್ ಆಗಿ ಕೆಲಸಕ್ಕೆ ಸೇರಿದಳು. ಯಾಕೋ ಏನೋ ಮದುವೆಯಾಗಲು ಮನಸ್ಸೇ ಇರಲಿಲ್ಲ. ನೋಡಲು ಬಂದ ಗಂಡುಗಳನ್ನು ತಾನೇ ಒಪ್ಪುತ್ತಿರಲಿಲ್ಲ. ಹೀಗಾಗಿ ವಯಸ್ಸು ಮೀರುತ್ತಾ ಹೋಯಿತು. ತಂದೆಗೆ ರಿಟೈರ್ ಆಗಿದ್ದರಿಂದ ಅವರು ಚಿಂತೆಗೀಡಾಗಿದ್ದರು. ತಂಗಿ ಕೌಸ್ತುಭ ತಾನೇ ಪ್ರೀತಿಸಿದ ಹುಡುಗನನ್ನು ಮದುವೆಯಾಗಿ ಹೊರಟು ಹೋಗಿದ್ದಳು. ಸತ್ಯ ಓದು ಮುಗಿಸಿ ಡೆಲ್ಲಿಯಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದ. ತಂದೆ ತಾಯಿಯರನ್ನು ಅಲ್ಲಿಗೆ ಬರುವಂತೆ ಪೀಡಿಸುತ್ತಿದ್ದ. ಆದರೆ ಅವರಿಬ್ಬರಿಗೆ ಅಂಬುಜಳನ್ನು ಒಬ್ಬಳನ್ನೇ ಬಿಟ್ಟು ಹೋಗಲು ಇಷ್ಟವಿಲ್ಲ.

"ಮೊದಲೇ ಒಂಟಿ. ನಾವೂ ಇಲ್ಲಿ ಇರದಿದ್ದರೆ ಒಂಟಿತನ ಹೆಚ್ಚುತ್ತೆ." ಎಂದು ಅವರಿಬ್ಬರೂ ಮಾತನಾಡಿಕೊಳ್ಳುತ್ತಿದ್ದುದನ್ನು ಅಂಬುಜ ಕೇಳಿಸಿಕೊಂಡಿದ್ದಳು.

ಅವಳಿಗೂ ಬೇಸರವಾಗಿತ್ತು. ತಾನು ಜೀವಮಾನವೆಲ್ಲಾ ಹೀಗೆ ಒಂಟಿಯಾಗಿಯೇ ಇರಬೇಕೇ? ಅದೂ ಯಾವನೋ ಒಬ್ಬ ಕಳ್ಳ ಮಾಡಿದ ತಪ್ಪಿಗೆ? ಛೇ.... ಎಂದು ಪೇಚಾಡಿಕೊಂಡಳು.

ಹೊಸದಾಗಿ ಕಾಲೇಜಿಗೆ ಪಾರ್ಟ್‌ಟೈಂ ಲೆಕ್ಚರರ್ ಆಗಿ ಕೆಲಸಕ್ಕೆ ಬಂದು ಸೇರಿ ಕೊಂಡಿದ್ದ ಸುಧೀರ. ಅವನ ಸಹೋದ್ಯೋಗಿಗಳನ್ನೆಲ್ಲಾ ಸಹೋದ್ಯೋಗಿಯೊಬ್ಬರು ಪರಿಚಯ ಮಾಡಿಕೊಟ್ಟಾಗ ಅವನು ಅಂಬುಜಳನ್ನು ಗಮನಿಸಿದ. ಉದಾಸೀನತೆ ಯನ್ನೆತ್ತಿ ತೋರುವ ಸರಳವಾದ ಮುಖ ಅವನಲ್ಲಿ ಕುತೂಹಲವನ್ನುಂಟು ಮಾಡಿತ್ತು. ಕೆಲವೇ ದಿನಗಳಲ್ಲಿ ಅವಳ ವಿಷಯಗಳನ್ನು ಅವಳಿಗೆ ತಿಳಿಯದಂತೆ ಸಂಗ್ರಹಿಸಿದ. ಎಷ್ಟೋ ವರ್ಷಗಳಾದರೂ ಕುಮಾರಿಯಾಗಿಯೇ ಇದ್ದಾಳೆ. ಮದುವೆಯಾಗಿಲ್ಲ ಎಂದು ತಿಳಿದ ದಿನದಿಂದ ಅವಳನ್ನು ತಾನಾಗಿಯೇ ಹೆಚ್ಚು ಹೆಚ್ಚು ಮಾತನಾಡಿಸಿ, ಅವಳ ಸ್ನೇಹವನ್ನು ಗಳಿಸಿದ. ಸ್ನೇಹ ನಿಕಟವಾದಂತೆ ಅವಳನ್ನು ಪ್ರೀತಿಸಲಾರಂಭಿಸಿದ್ದ. ಒಂದು ದಿನ ತಾನಾಗಿಯೇ ತನ್ನ ಪ್ರೀತಿಯನ್ನು ನಿವೇದಿಸಿಕೊಂಡ.

ನೀವು ನನ್ನನ್ನು ಪ್ರೀತಿಸದೇ ಇರಬಹುದು. ಆದರೆ ನನಗೆ ನಿಮ್ಮನ್ನೇ ಮದುವೆ ಯಾಗಬೇಕೆಂಬ ಆಸೆ. ನೀವು ಒಪ್ಪಿಕೊಂಡರೆ ನನಗೆ ತುಂಬಾ ಸಂತೋಷ. ಅಂಬುಜ ಅವಾಕ್ಕಾದಳು. ಅವಳು ಅವನ ಬಗ್ಗೆ ಯಾವ ಭಾವನೆಯನ್ನು ಇಟ್ಟುಕೊಂಡಿರಲಿಲ್ಲ. ಅವನೇ ಅವಳಿಗೆ ಸಲಹೆಯವನ್ನು ಕೊಟ್ಟ,

"ನಿಮಗೆ ಎಷ್ಟು ದಿನ ಬೇಕೋ ಅಷ್ಟು ದಿನ ತಗೊಂಡು ಯೋಚಿಸಿ, ನಿಮ್ಮ ಅಭಿಪ್ರಾಯವನ್ನು ತಿಳಿಸಿ. ನನ್ನ ಅಭ್ಯಂತರವೇನಿಲ್ಲ" ಅಂತಂದ.

ಸಾಕಷ್ಟು ಸಮಯವನ್ನು ತೆಗೆದುಕೊಂಡು ಒಪ್ಪಿಗೆ ನೀಡಲು ನಿರ್ಧರಿಸಿದಳು. ಆದರೆ, ಮೊದಲು ಅವನೊಡನೆ ಕೆಲವು ವಿಷಯಗಳನ್ನು ತಿಳಿಸಬೇಕೆಂದು ಹೇಳಿದಳು. ಅವಳು ಓ... ಕೆ... ಅಂದಿದ್ದ.

ಅಂಬುಜ ಚಿತ್ರದುರ್ಗದಲ್ಲಿದ್ದಾಗ ತಮ್ಮ ಮನೆಯಲ್ಲಿ ನಡೆದ ಘಟನೆಯನ್ನು ವಿವರಿಸಿ, ತನಗೆ ತಗುಲಿದ ಅಪವಾದವನ್ನು ತಿಳಿಸಿ, ಏಕೋ ಏನೋ ಮದುವೆ ಎಂದೊಡನೆ ಆ ವಿಷಯ ನೆನಪಿಗೆ ಬರುತ್ತೆ. ಈ ವಿಷಯವನ್ನು ನಾನಾಗಿಯೇ ತಿಳಿಸಿರುವ ಗಂಡು ಎಂದರೆ ನೀವೊಬ್ಬರೇ..... "ನೀವೇ ಮೊದಲು ಬಹುಶಃ ನೀವೇ ಕೊನೆಯವರು." ಎಂತಂದಳು. ಅವಳು ಮುಗುಳ್ನಕ್ಕು "ಥ್ಯಾಂಕ್ಸ್" ಎಂದು ನುಡಿದ. ಅವಳು ಅಭಿಮಾನದಿಂದ ಅವನನ್ನೇ ನೋಡಿದಳು. ನಂತರ ಕೆಲವೇ ದಿನಗಳಲ್ಲಿ ಅವರಿಬ್ಬರೂ ದಂಪತಿಗಳಾದರು.

ಆ ದಿನ ಅವಳು, ಬಲಗಾಲನ್ನಿಟ್ಟು ಅವನ ಮನೆಯನ್ನು ಪ್ರವೇಶಿಸಿದಳು. "ಒಂದು ನಿಮಿಷ, ನೀವು ಇಲ್ಲೇ ಕೂತಿರಿ ಎಂದು ಹೇಳಿ ಅವಳನ್ನು ಕುಳ್ಳಿರಿಸಿ,

ಬೀರುವಿನಿಂದ ಒಂದು ಸಣ್ಣ ಪೆಟ್ಟಿಗೆಯನ್ನು ತೆಗೆದು ಅವಳ ಕೈಗಿತ್ತ. ಇದು ನನ್ನ ಉಡುಗೊರೆ ಸ್ವೀಕರಿಸಬೇಕು." ಎಂದ ನಾಟಕೀಯವಾಗಿ. ಅವಳು ಪ್ರಶ್ನಾರ್ಥಕವಾಗಿ ಅವನನ್ನೇ ನೋಡಿ ಕುತೂಹಲದಿಂದ ಆ ಸಣ್ಣ ಡಬ್ಬಿಯ ಮುಚ್ಚಳವನ್ನು ತೆಗೆದಳು. "ಮುತ್ತಿನ ಓಲೆಗಳು!" ಮತ್ತೆ ಮತ್ತೆ ಅದನ್ನೇ ನೋಡಿದಳು. ಏನೋ ಅನುಮಾನ. ಅವನ ಕಡೆ ನೋಡಿದಾಗ ಅವನು ತಲೆ ತಗ್ಗಿಸಿ ಅವಳ ಕೈ ಹಿಡಿದು ಕ್ಷಮೆ ಕೇಳಿದ.

ನನ್ನನ್ನು ಕ್ಷಮಿಸು ಅಂಬುಜ. ಆ ದಿನ ನಿಮ್ಮ ಮನೆಗೆ ಬಂದ ಕಳ್ಳ ನಾನೇ. ನನ್ನ ಸ್ನೇಹಿತನೊಬ್ಬನಿಗೆ ಹಣದ ಅಗತ್ಯವಿತ್ತು. ಆದ್ದರಿಂದ ನಾವಿಬ್ಬರೂ, ಕೋಟೆಯ ಹತ್ತಿರವಿದ್ದ ನಿಮ್ಮ ಮನೆಗೆ ಸುಲಭವಾಗಿ ನುಗ್ಗಿದೆವು. ನರಳುತ್ತಿದ್ದವಳಿಗೆ ನೀರು ಕುಡಿಸಿದವನು ನಾನೇ.... ಬೀರುವಿನಲ್ಲಿನ ಹಣ ಸಿಕ್ಕಿದ ಮೇಲೆ, ಸರ, ಓಲೆಯನ್ನು ನಿನ್ನ ಬಳಿ ಇಡಲೆಂದು ಬಂದೆ. ಆದರೆ ಯಾರೋ ಮನೆಗೆ ಬಂದ ಸಪ್ಪಳಕ್ಕೆ ಹೆದರಿ, ಹಾಗೇ ಜೇಬಿಗೆ ಇಳಿಬಿಟ್ಟು ಹಿತ್ತಲ ಗೋಡೆ ಹಾರಿ ಓಡಿದೆ. ಹಣಕ್ಕಾಗಿ ನಿನ್ನ ಸರ ವನ್ನು ಮಾರಬೇಕಾಗಿ ಬಂತು. ಆದರೆ ಈ ಓಲೆಯನ್ನು ನಾನು ನನ್ನ ಬಳಿಯೇ ಇಟ್ಟುಕೊಂಡೆ. ಕೆಲಸಕ್ಕೆ ಸೇರಿಕೊಂಡ ಆ ಸ್ನೇಹಿತ ನನಗೆ ಓದಲು ಸಹಾಯ ಮಾಡಿದ. ಆದರೆ ಈಗ ಅವನು ನಮ್ಮೊಡನೆ ಇಲ್ಲ. ಈಗ ನಾನೂ ಒಂಟಿ. ಒಂಟಿತನದ ಬೇಸರ ಏನೂಂತ ನನಗೆ ಅರ್ಥವಾಗುತ್ತೆ. ನಿಮ್ಮ ಒಂಟಿತನ ನನ್ನನ್ನು ಆಕರ್ಷಿಸಿತು. ಈಗ ನಾವಿಬ್ಬರೂ ದಂಪತಿಗಳು. ನಮ್ಮಿಬ್ಬರಲ್ಲೂ ಯಾವ ರಹಸ್ಯವಿರಬಾರದು ಅಲ್ವಾ?"

ಅಂಬುಜ ದಿಗ್ಮೂಢಳಾಗಿದ್ದಳು. ಸಮ್ಮಿಶ್ರ ಭಾವನೆಗಳಿಂದ ಮೂಕಿಯಂತಾಗಿದ್ದಳು. ಅವನು ಅವಳ ಭುಜವನ್ನು ಒತ್ತಿದ. "ನಿನಗೆ ಅಪವಾದ ಬರಲು ಕಾರಣನಾದ ನನ್ನಂತಹವನನ್ನು ಕ್ಷಮಿಸುವುದು ಕಷ್ಟವೇ. ಆದರೆ ಓಲೆಗಳ ಒಡತಿ ಸಿಗಬಾರದೇ.... ಅವಳ ಕೈಗೆ ಹಿಂತಿರುಗಿ ಕ್ಷಮೆ ಕೇಳಬೇಕೆಂದು ದಿನಾ ನಾನು ದೇವರಲ್ಲಿ ಬೇಡುತ್ತಿದ್ದೆ. ಅಂತೂ ದೇವರು ನನಗೆ ಸಹಾಯ ಮಾಡಿದ. ಆದರೆ ನಿನ್ನ ಕ್ಷಮೆ ಸಿಗುವವರೆಗೂ, ನಾನು ಸುಖವಾಗಿರಲಾರೆ. ಅಥವಾ ಕ್ಷಮಿಸಲಾಗದಿದ್ದರೆ ನನಗೆ ಶಿಕ್ಷೆಯನ್ನಾದರೂ ಕೊಡು. ನಾನು ಶಿಕ್ಷೆ ಅನುಭವಿಸಿ ನನ್ನ ಪಾಪವನ್ನು ಕಳೆದುಕೊಳ್ತೀನಿ" ಅಂತಂದ.

ದೀರ್ಘವಾಗಿ ಅವನು ಇದಿಷ್ಟು ಮಾತನ್ನಾಡುವವರೆಗೂ ಶಿಲಾಮೂರ್ತಿಯಂತೆ ಕುಳಿತವಳು, ನಿಧಾನವಾಗಿ ಕತ್ತೆತ್ತಿ ಅವನನ್ನೇ ನೋಡಿದಳು.

"ಪ್ಲೀಸ್, ನನ್ನನ್ನು ಹಾಗೆ ನೋಡಬೇಡ. ನಾನು ತಪ್ಪು ಮಾಡಿದೀನಿ. ಆದರೆ ಪಶ್ಚಾತ್ತಾಪವನ್ನು ಪಟ್ಟಿದ್ದೇನೆ. ನೀನು ನನಗೆ ಸಿಕ್ಕಿದ್ದು, ಅದರಲ್ಲೂ ನನ್ನ ಪತ್ನಿಯಾಗಿ ಬಂದದ್ದು ನನ್ನ ಭಾಗ್ಯ ಅಂತ ಅಂದುಕೊಳ್ಳುತ್ತೇನೆ. ಎಂದೂ ನಿನ್ನ ಮನಸ್ಸು ನೋಯಿಸುವುದಿಲ್ಲ. ನನ್ನ ಕೈಲಾದಷ್ಟು ಸುಖವಾಗಿಟ್ಟುಕೊಳ್ಳಲು ಪ್ರಯತ್ನಿಸ್ತೀನಿ." ಅಂತ ನುಡಿದ. ಆಗಲೂ ಅವಳು ಏನೂ ನುಡಿಯದಿದ್ದಾಗ ಅವನಿಗೆ ಹಿಂಸೆ

ಯಾಯಿತು.

"ಓಕೆ.... ನಿನಗೆ ನನ್ನನ್ನು ಕ್ಷಮಿಸಲು, ಶಿಕ್ಷಿಸಲು ಇಷ್ಟವಿಲ್ಲ ಅಂತಾಯ್ತು. ನಿನ್ನಂತೆ ಮುಂಚೆ ವಿಷಯ ತಿಳಿಸದೇ ನಾನು ಮತ್ತೊಮ್ಮೆ ತಪ್ಪು ಮಾಡಿದೆ. ನಿನಗೆ ನನ್ನ ಜತೆ ಇರಲು ಇಷ್ಟವಿಲ್ಲದಿದ್ದರೆ.... ನಾನು ಬಲವಂತ ಮಾಡುವುದಿಲ್ಲ. ನಿನಗೆ ಪೂರ್ಣ ಸ್ವಾತಂತ್ರ್ಯವಿದೆ," ಎಂದು ಹೇಳಿ ಕಿಟಕಿಯ ಬದಿ ನಿಂತು ಆಚೆ ನೋಡಲಾರಂಭಿಸಿದ.

ಅಂಬುಜಳ ಮನದಲ್ಲಿ ಮಥನ ಪ್ರಾರಂಭವಾಗಿತ್ತು. ನನ್ನ ಜೀವನದ ಖುಷಿಯನ್ನು ಕಿತ್ತುಕೊಂಡವನು ಇವನೇ. ಈಗ ನನಗೆ ಮತ್ತೆ ಖುಷಿಯನ್ನು ಕೊಡುವ ಆಶ್ವಾಸನೆ ನೀಡುತ್ತಿದ್ದಾನೆ. ಇವನ ದೆಸೆಯಿಂದ ನನ್ನ ಬಾಳು ಬರಡಾಗಿತ್ತು. ಈಗ ಇವನಿಂದಲೇ ನನ್ನ ಬಾಳು ಬಂಗಾರವಾಗಬಹುದು. ಓಲೆ ಕಳುವಾದದಕ್ಕಿಂತ ಹೆಚ್ಚಾಗಿ ಅಪವಾದ ದಿಂದ ಬಳಲಿ ಹೋಗಿದ್ದೆ. ಪಶ್ಚಾತ್ತಾಪದ ಬೇಗೆಯಲ್ಲಿ ಬೆಂದು ಚೊಕ್ಕ ಚಿನ್ನದಂತೆ ಮಿನುಗುತ್ತಿದ್ದಾನೆ. ಮನುಷ್ಯನಿಗೆ ಇದೇ ಭೂಷಣ. ಅವನು ಅಷ್ಟು ಕೇಳಿಕೊಳ್ಳುತ್ತಿರು ವಾಗ ನಾನು ಕ್ಷಮಿಸದಿದ್ದರೆ ಇವನೆದುರಿಗೆ ಸಣ್ಣವಳಾಗಿ ಬಿಡ್ತೀನಿ ಎಂದುಕೊಂಡು, ತನ್ನ ಕೈಯಲ್ಲಿದ್ದ ಮುತ್ತಿನ ಓಲೆಗಳನ್ನು ತನ್ನ ಕಿವಿಯಲ್ಲಿ ಧರಿಸಿದಳು. ಕಿಟಕಿಯ ಬಳಿ ನಿಂತಿದ್ದ ಅವನ ಬಳಿಗೆ ಹೋಗಿ ಅವನನ್ನು ತನ್ನಡೆಗೆ ತಿರುಗಿಸಿಕೊಂಡಳು. ಅವನು ಅವಳನ್ನೇ ನೋಡಿದ. ಮೊದಲಿಗೆ ಗೊತ್ತಾಗದಿದ್ದರೂ, ನಿಧಾನವಾಗಿ ಅವಳ ಮುತ್ತಿನ ಓಲೆಗಳನ್ನು ಧರಿಸಿರುವಳೆಂದು ಗೊತ್ತಾಯಿತು. ಅವಳ ಭುಜಗಳನ್ನು ಹಿಡಿದು, "ಥ್ಯಾಂಕ್ ಯೂ... ಅಂಬುಜಾ.... ಥ್ಯಾಂಕ್‌ಯೂ ವೆರಿಮಚ್... ಎಂದ." ಅವನ ಕಣ್ಣಲ್ಲಿ ಅರಳಿದ ಸಂತಸದ ಹೊಳಪಿನ ಮುಂದೆ ಈ ಮುತ್ತಿನ ಓಲೆಗಳ ಹೊಳಪು ಕಡಿಮೆ ಅಂತನ್ನಿಸಿತು. ಅವನ ಎದೆಗೆ ಒರಗಿ ಬಿಕ್ಕಿ ಬಿಕ್ಕಿ ಅತ್ತಳು. ಅವನ ಕೈಗಳು ಅವಳನ್ನು ಬಳಸಿದವು. ಕಳೆದು ಹೋಗಿದ್ದ ಮುತ್ತಿನ ಓಲೆಗಳನ್ನು ಹಿಂತಿರುಗಿಸಿದ ಆ ದೊಡ್ಡ ವ್ಯಕ್ತಿಯನ್ನು ಧಾರಾಳವಾಗಿ ಕ್ಷಮಿಸಿದ್ದಳು....

* * *

೧೯. ಪೆಡಂಭೂತ

"ಎಸ್ ಕಮಿನ್." ಎಂದು ನುಡಿದು, ಒಳಗೆ ಬಂದ ವ್ಯಕ್ತಿಯನ್ನು ನೋಡಿ, ತನ್ನ ಕೆಲಸದಲ್ಲಿ ಮಗ್ನಳಾದಳು ಪ್ರಿನ್ಸಿಪಾಲ್ ನಂದಿನಿ. ಬಂದವನ ಪರಿಚಯ ಸಿಕ್ಕಿತ್ತು. ಆದರೆ ಅಪರಿಚಿತರನ್ನು ಮಾತನಾಡಿಸುವಂಥ ಸೌಜನ್ಯವನ್ನು ತೋರಲಿಲ್ಲ ಅವಳು. ನಟೇಶ ತಾನಾಗಿಯೇ ಅವಳ ಮುಂದಿದ್ದ ಕುರ್ಚಿಯಲ್ಲಿ ಕೂತ. ಅವಳು ಕತ್ತೆತ್ತಿ ಸಹ ನೋಡದಿದ್ದಾಗ ಪ್ರಶ್ನಿಸಿದ.

"ನನ್ನ ಗುರುತು ಸಿಗಲಿಲ್ವಾ ನಂದಿನಿ...... ನಾನು ನಟೇಶ." ಎಂತಂದ.

"ಓ.... ನಿಮ್ಮನ್ನು ಮರೆಯುಕ್ಕೆ ಆಗುತ್ತಾ?" ಎಂದಳು ವ್ಯಂಗ್ಯವಾಗಿ.

"ಅಂದರೇ.... ನನ್ನನ್ನು ಆಗಾಗ್ಗೆ ನೆನಪಿಸಿಕೊಳ್ಳುತ್ತಾ ಇರ್ತೀಯಾ ಅಂತಾಯ್ತು." ನಗೆ ಸೂಸುತ್ತಾ ಅವನು ಕೇಳಿದಾಗ ಸಿಡಿದು ನುಡಿದಳು.

"ರೀ ಮಿಸ್ಟರ್.... ಇದು ಕಾಲೇಜು ಅಸಂಬದ್ಧ ಮಾತುಗಳನ್ನಾಡಿದರೆ ಪೋಲೀಸರನ್ನು ಕರೆಸಬೇಕಾಗುತ್ತದೆ. ಹುಶಾರ್..... ಯೂ ಕೆನ್ ಗೋ ನೌ." ಎಂದು ನುಡಿದಾಗ ಮೇಜಿನ ಮೇಲಿದ್ದ ಕಾಲಿಂಗ್ ಬೆಲ್‌ನ ಒತ್ತಿದಳು. ಜವಾನ ಒಳಗೆ ಬಂದಾಗ, ನಟೇಶ ವಿಧಿ ಇಲ್ಲದೇ ಏಳಬೇಕಾಯ್ತು.

ಸಾಯಂಕಾಲ ಇವಳು ತನ್ನ ಮನೆಗೆ ಬಂದಾಗ, ಬಾಗಿಲ ಬಳಿ ಇವಳಿಗಾಗಿ ಕಾಯುತ್ತಾ ನಿಂತಿದ್ದ ನಟೇಶನನ್ನು ಕಂಡು ಮೈಯಲ್ಲಾ ಉರಿಯಿತು. ಅವನ ಕಡೆ ನೋಡದೇ, ಮನೆಯ ಒಳಗೆ ನಡೆದಳು. ನಾಚಿಕೆ, ಸಂಕೋಚವಿಲ್ಲದೇ ಅವನು ಅವಳ ಹಿಂದೆ ನಡೆದ.

"ಸಾರಿ ನಂದಿನಿ. ನಿನಗೆ ಬೇಜಾರಾಗ್ತಿದೆಯೇನೋ? ಆದರೆ ನಾನೇನು ಮಾಡಲಿ? ನಾನು ನಿನ್ನ ಹತ್ತಿರ ಮಾತನ್ನಾಡಲೇ ಬೇಕು. ಅದಕ್ಕೇ ಮತ್ತೆ ಬಂದೆ." ಅವಳೀಗ ಇಕ್ಕಟ್ಟಿಗೆ ಸಿಕ್ಕಿ ಬಿದ್ದಳು. ಅವನು ಮನೆಯೊಳಗೆ ಬಂದಾಗಿದೆ. ಮತ್ತೆ ಬೈದು ಕಳಿಸಿದರೆ, ಮತ್ತೆ ಖಂಡಿತಾ ಬಂದೇ ಬರುತ್ತಾನೆ. ಪಿಶಾಚಿಯ ತರಹ ಕಾಡ್ತಾನೆ ಎಂದುಕೊಂಡು.

"ಓ...ಕೆ... ಕೂತಿರಿ...." ಎಂದು ಹೇಳಿ ಒಳಗೆಲ್ಲೋ ಹೊರಟು ಹೋದಳು. ನಟೇಶ ವರಾಂಡದಲ್ಲಿದ್ದ ಮರದ ಕುರ್ಚಿಯ ಮೇಲೆ ಕೂತಿದ್ದ.

ಸುಮಾರು ಆರೇಳು ವರ್ಷಗಳ ಹಿಂದೆ, ನಟೇಶನ ಮದುವೆ ನಂದಿನಿಯೊಡನೆ ನಿಶ್ಚಯವಾಗಿ, ಅದ್ದೂರಿಯ ಲಗ್ನಪತ್ರಿಕೆ ಶಾಸ್ತ್ರ ಸಹ ನೆರವೇರಿತ್ತು. ಅನಂತರ ಈ ಮನೆಗೆ ಅವನು ಅದೆಷ್ಟೋ ಸಲ ಬಂದಿದ್ದ. ಕಡೆಯ ಸಲ ಈ ಮನೆಗೆ ಬಂದಿದ್ದಾಗ ನಡೆದದ್ದೆಲ್ಲಾ ಇನ್ನೂ ಹಸಿಯಾಗಿಯೇ ಮನದಲ್ಲಿ ಉಳಿದಿದೆ.

ಅವಳೀಗ ಒಂದು ಕಾಲೇಜಿನ ಪ್ರಿನ್ಸಿಪಾಲ್ ಆಗಿದ್ದಾಳೆ. ಏಕೋ ಏನೋ ಮದುವೆ ಮಾಡಿಕೊಂಡಿಲ್ಲ ಎನ್ನುವುದನ್ನು ತಿಳಿದುಕೊಂಡಿದ್ದ. ಅವನ ಮನ ಮರ್ಕಟನಂತೆ ನೆಗೆದಿತ್ತು. ಏನೋ ಒಂದು ಆಸೆಯಿಂದ ಅವಳ ಬಳಿಗೆ ಮತ್ತೆ ಬಂದಿದ್ದ!

ಆದರೆ ನಂದಿನಿ ಯಾವ ಆಸಕ್ತಿಯನ್ನು ತೋರುತ್ತಿಲ್ಲ. ಆಗಿನಂತೆ ಮಾತನಾಡಿ ತನ್ನನ್ನು ಅಟ್ಟಿದರೇ.... ಇಲ್ಲ. ಈಗ ಹಾಗೆ ಮಾಡಲಾರಳು. ಗೊತ್ತಾಗಿದ್ದ ಮದುವೆ ನಿಂತುಹೋಗಿದ್ದರಿಂದ ಇವಳನ್ನು ಯಾರೂ ಮದುವೆಯಾಗಿಲ್ಲ. ಅವಳಿಗೂ ಆಸೆ ಇರುವುದಿಲ್ಲವೇ....? ಅವಳು ಒಪ್ಪುವಂತೆ ತಾನು ನಯವಾಗಿ ಮಾತನ್ನಾಡಬೇಕು. ಆಗ ತಾನು ತನ್ನ ಅಮ್ಮನ ಮಾತು ಕೇಳಿ ಹಾಳಾದೆ. ಈಗ ಹಾಗಾಗಬಾರದು. ಈ ಬುದ್ದಿ ಈ ಮೊದಲೇ ತನಗೇಕೆ ಇರಲಿಲ್ಲ? ದುರಾಸೆಯಿಂದ ಅಮ್ಮನ ಮಾತಿಗೆ ಕುಣಿದಿದ್ದೆನಲ್ಲ!

ಚಿಕ್ಕವಯಸ್ಸಿನ ಆಕರ್ಷಕ ಮೈಕಟ್ಟಿನ, ರೂಪವತಿ ನಂದಿನಿಯನ್ನು ನಟೇಶ ನೋಡಿದ ಕೂಡಲೇ ಮೆಚ್ಚಿದ್ದ. ತನಗೆ ಅನುರೂಪಳಾದವಳು ಸಿಕ್ಕಿದಳೆಂದು ಹೆಮ್ಮೆ ಯಿಂದ ಬೀಗಿದ್ದ. ಲಗ್ನಪತ್ರಿಕೆಯ ಶಾಸ್ತ್ರದ ನಂತರ, ಅವರಿಬ್ಬರೂ ಒಟ್ಟೊಟ್ಟಿಗೇ ಎಷ್ಟೋ ಕಡೆ ತಿರುಗಾಡಿ ಬಂದಿದ್ದರು. ಅವನು ಕರೆದಾಗಲೆಲ್ಲಾ, ಉಲ್ಲಾಸದಿಂದ, ಯಾವ ಸಂದೇಹವನ್ನ ಪ್ರಕಟಿಸದೇ ಅವನು ಕರೆದಲ್ಲಿಗೆ ಬರುತ್ತಿದ್ದಳು. ಆದರೆ ಆ ದಿನ ಆ ಗಳಿಗೆಯಲ್ಲಿ ಮಹಾಕಾಳಿಯಾಗಿ ಬಿಟ್ಟಳಲ್ಲ.... ನೆನೆಸಿಕೊಂಡರೆ ಈಗಲೂ ಮುಜುಗರವಾಗುತ್ತದೆ.

ಪದೇ ಪದೇ ಅವನ ತಾಯಿ ಒತ್ತಾಯ ಮಾಡಿದ್ದರೂ, ನಟೇಶನಿಗೆ ನಂದಿನಿ ಯೊಡನೆ ಆ ಮಾತುಗಳನ್ನಾಡಲು ಆಗಿರಲಿಲ್ಲ. ಅವಳನ್ನು ಕಂಡೊಡನೆ ಮಧುರ ಭಾವನೆಗಳು ಮೂಡಿ, ಸರಸ ಸಲ್ಲಾಪದ ಮಾತುಗಳನ್ನಾಡಿ ಖುಷಿಯಿಂದ ಕಾಲ ಕಳೆದು ಹೊರಟು ಹೋಗುತ್ತಿದ್ದ.

ತಾಯಿಯ ಒತ್ತಾಯ ಅತಿಯಾದಾಗ, ನಾಲ್ಕಾರು ದಿನ ಅವಳು ಮನೆಯ ಕಡೆಗೇ ಬರದೇ ಕಾಲ ಕಳೆದಿದ್ದ. ಕಡೆಗೆ ಒಂದು ದಿನ ಒಂದು ನಿರ್ಧಾರ ತೆಗೆದುಕೊಂಡು ಅವಳ ಮನೆಗೆ ಬಂದಿದ್ದ. ಅವನನ್ನು ಕಂಡೊಡನೆ ಅವಳು ಹುಸಿ

ಮುನಿಸನ್ನು ಪ್ರಕಟಗೊಳಿಸಿದಳು. ತಾನು ಇಷ್ಟು ದಿನ ಬರಲಾಗದಕ್ಕೆ ಕ್ಷಮೆಯನ್ನು ಯಾಚಿಸದೇ, ಕಾರಣವನ್ನು ತಿಳಿಸದೇ, ಇದ್ದಕ್ಕಿದ್ದಂತೆ ಪ್ರಶ್ನಿಸಿದ್ದ.

"ನೀವು ಇರುವುದು ನಿಮ್ಮ ಸ್ವಂತ ಮನೆ ತಾನೆ......?"

"ಹುಂ. ಹೌದು. ಅದ್ಯಾಕೆ ಹಾಗೆ ಕೇಳ್ತಿದೀರಿ?"

"ಈ ಮನೇನ ನಿನ್ನ ಹೆಸರಿಗೆ ಬರೆದುಕೊಡುವಂತೆ ನಿಮ್ಮ ತಂದೆಗೆ ಹೇಳಿಬಿಡು."

"ಜೋಕ್ ಮಾಡ್ತಿದೀರಾ?" ಅವಳು ನಗಲು ಯತ್ನಿಸಿದಳು.

"ಇಲ್ಲ. ಸೀರಿಯಸ್ಸಾಗಿ ಹೇಳ್ತಿದೀನಿ. ಆದಷ್ಟು ಬೇಗ.... ನಮ್ಮ ಮದುವೆಗೆ ಮುಂಚೆ ಈ ಮನೆಯನ್ನು ನಿನ್ನ ಹೆಸರಿಗೆ ಬರೆಸಿಕೋಬೇಕು."

"ನಿಮ್ಮ ಮಾತು ನನಗೆ ಅರ್ಥವಾಗ್ತಿಲ್ಲ ನಟೇಶ್.... ಮುಂದೆ ನಮ್ಮ ತಂದೆ ಅವರಾಗಿಯೇ ನಮಗೆ ಕೊಡುತ್ತಾರೆ. ಆತುರವೇಕೆ? ಅವರಿಗೆ ನಾವು ಇಬ್ಬರೇ ಮಕ್ಕಳು. ಎಲ್ಲಾ ಆಸ್ತಿ ನಮ್ಮಿಬ್ಬರಿಗೇ ತಾನೇ......."

"ಅದೇ..... ಅದೇ ನನಗೆ ಇಷ್ಟವಿಲ್ಲ. ಮುಂದೆ ಯಾವ ಕಾಲಕ್ಕೋ ಅಷ್ಟರಲ್ಲಿ ಏನೇನು ಬದಲಾವಣಗಳಾಗಿರುತ್ತೋ ಅಲ್ಲಿವರೆಗೂ ನಾನು ಕಾಯಲು ಸಾಧ್ಯವಿಲ್ಲ."

"ಅಂದರೇ...... ನಿಮಗೆ ನನ್ನ ತಂದೆ ಮೇಲೆ ನಂಬಿಕೆ ಇಲ್ವಾ?"

"ಇಲ್ಲ. ನನಗೆ ಯಾರ ಮೇಲೂ ನಂಬಿಕೆ ಇಲ್ಲ." ಈ ಮಾತು ಅವಳನ್ನು ಸಿಡಿದೇಳುವಂತೆ ಮಾಡಿತು.

"ನಿಮ್ಮನ್ನು ಯೋಗ್ಯ ಅಂತ ತಿಳಿದುಕೊಂಡಿದ್ದೆ. ನೀವು ಸಂಭಾವಿತರಲ್ಲ. ನಿಮ್ಮಲ್ಲಿ ತುಂಬಿರುವುದು ದುರಾಸೆ. ನಿಮಗೆ ಬೇಕಾಗಿರುವುದು ನಾನಲ್ಲ. ನನ್ನ ಮನೆ. ವಿದ್ಯಾವಂತರು, ಉದ್ಯೋಗದಲ್ಲಿರುವವರು, ನಿಮಗೆ ಹೀನಾಯವಾಗಲ್ಲ ಇಂತಹ ಮಾತನ್ನಾಡುವುದಕ್ಕೆ?"

"ಹೀನಾಯ ಏಕೆ? ಮುಂದೆ ಎಂದೋ ನಮ್ಮದಾಗುವ ಈ ಮನೆ ಈಗಲೇ ಆಗಲಿ ಅಂತ ಅಂದೆ.... ನಾವು ತಾನೇ ಎಷ್ಟು ದಿನಾಂತ ಬಾಡಿಗೆ ಮನೇಲಿ ಇರೋದು. ನಮ್ಮದೇ ಅಂತ ಸ್ವಂತ ಮನೆ ಇದ್ದರೆ ಎಷ್ಟು ಚೆನ್ನ ಅಲ್ವಾ?"

"ನಿಮಗೆ.... ಸ್ವಂತ ಮನೇಲಿ ಇರಬೇಕೂಂತ ಆಸೆ ಇದ್ದರೇ.... ನೀವೇ ಒಂದು ಕಟ್ಟಿಸಿ.... ಅಯೋಗ್ಯನಂತೆ ಇಂತಹ ಮಾತನ್ನಾಡಬೇಡಿ."

"ಇದರಲ್ಲಿ ತಪ್ಪೇನು? ನಿನ್ನ ತಂಗಿ ಇನ್ನು ತುಂಬಾ ಚಿಕ್ಕವಳು. ನಿನ್ನ ತಂದೆ, ನಿನ್ನ ತಂಗಿ ನಮ್ಮ ಜತೆಯಲ್ಲೇ ಇರಲಿ.... ನಾನು ಬೇಡ ಎನ್ನುವುದಿಲ್ಲ." ಎಂದು ಧಾರಾಳವಂತನಂತೆ ನುಡಿದಾಗ ಅವಳು ಕನಲಿದಳು.

"ಇಲ್ಲ.... ಅವರು ಎಲ್ಲಿಯೂ ಇರುವುದಿಲ್ಲ. ಅವರ ಸ್ವಂತ ಮನೆಯಲ್ಲಿ ಅವರು ಇರ್ತಾರೆ. ಈಗ ಈ ಮನೆಯಿಂದ ಹೊರಗೆ ಹೋಗುವವರು ನೀವು.

ಗೆಟೌಟ್.... ಗೆಟ್ ಔಟ್," ಬಾಗಿಲ ಕಡೆ ಕೈ ಮಾಡಿ ಕಾಳಿಯಂತೆ ಎತ್ತರದ ಧ್ವನಿಯಲ್ಲಿ ನುಡಿದಾಗ ಅವನು ಏನೋ ತೊದಲಿದ.

"ಇನ್ನು ಯಾಕೆ ಇಲ್ಲಿ ನಿಂತಿದೀಯ? ಹೊರಟು ಹೋಗು..... ಹೋಗು ನಿನ್ನ ಮುಖವನ್ನು ನೋಡು ನನಗಿಷ್ಟವಿಲ್ಲ." ಎಂದು ಅವಳು ಅಬ್ಬರಿಸಿದಾಗ ಅವಳ ಕೈ ಹಿಡಿದು ಏನೋ ಹೇಳಲು ಹೊರಟವನನ್ನು ಹಿಂದಕ್ಕೆ ತಳ್ಳಿ ತಾನು ಒಳಗೆ ನಡೆದು ಬಿಟ್ಟಳು. ಬೆಪ್ಪನಂತೆ ಒಂದು ಗಳಿಗೆ ನಿಂತಿದ್ದ ನಟೇಶ, ಅವಳಿಗಾಗಿ ಕಾದು ಸಾಕಾಗಿ; ಹಾಗೇ ಹೊರಟು ಹೋಗಿದ್ದ.

ಈಗಲೂ ಅದೇ ರೀತಿ, ಇಷ್ಟು ವರ್ಷಗಳ ನಂತರ, ಅವಳ ಮನೆಯಲ್ಲಿ ಅವಳು ಹೊರಗೆ ಬರುವುದನ್ನೇ ಕಾದು ಕೂತಿದ್ದಾನೆ. ಅವಳ ಸುಳಿವೇ ಇಲ್ಲ. ಒಳಗಿನಿಂದ ಬರುತ್ತಾಳೋ ಇಲ್ಲವೋ ಎಂದು ಚಡಪಡಿಸುತ್ತಾ ಇದ್ದ. ಕಡೆಗೂ ಹೊರಗೆ ಬಂದಿದ್ದಳು. ಅವಳು ಪ್ರಶ್ನಿಸುವ ಮೊದಲು ತಾನೇ ಮಾತನಾಡಿದ್ದ.

"ಆಗ.... ನಿನ್ನ ಹತ್ತಿರ ಅವಿವೇಕಿಯ ತರಹ ಮಾತನ್ನಾಡಿ ನನ್ನ ಬಾಳನ್ನು ನಾನೇ ಕೈಯಾರೆ ಹಾಳು ಮಾಡಿಕೊಂಡೆ ನಂದಿನಿ.... ಇದಕ್ಕೆಲ್ಲಾ ಕಾರಣ ನಮ್ಮ ಅಮ್ಮ.... ಅವಳು ಈಗ ನನ್ನ ಜತೆಯಲ್ಲಿ ಇಲ್ಲ.... ಅವಳು ಅವಾಂತರದಲ್ಲಿ ಮಾಡಿಸಿದ ಮದುವೆಯೂ ಸರಿಯಾಗಲಿಲ್ಲ. ನಮ್ಮ ಮದುವೆ ಮುರಿಯಿತು. ನಾನೀಗ ಒಂಟಿ. ಆದರೆ ಒಂಟಿಯಾಗಿ ನಾನು ಬದುಕಿರಲಾರೆ. ನನಗೆ ನೀನು ಬೇಕು ನಂದಿನಿ.... ನೀನು ಒಪ್ಪಿದರೆ ನಾವು ಮತ್ತೆ ಮದುವೆಯಾಗಿ ಸುಖವಾಗಿರಬಹುದು."

ನಂದಿನಿ ವಿಚಿತ್ರವಾಗಿ ನಕ್ಕಳು. "ಬಹುಶಃ ನೀವು ಇಂಥದೇ ಒಂದು ಆಸೆಯನ್ನು ಇಟ್ಟುಕೊಂಡು ಬಂದಿರಬಹುದು ಅಂತ ನಾನು ಊಹಿಸಿದ್ದೆ. ಅದು ನಿಜವಾಯ್ತು. ನಿಮ್ಮ ತಾಯಿಯ ಆದೇಶದಂತೆಯೇ ನಡೆಯುವವರು ನೀವು.... ನಿಮ್ಮದೇ ಆದ ಒಂದು ಸ್ವತಂತ್ರವಾದ ವ್ಯಕ್ತಿತ್ವ ನಿಮ್ಮಲ್ಲಿಲ್ಲ. ಈಗಲೂ ನನ್ನ ಬಳಿಗೆ, ನಿಮ್ಮ ತಾಯಿಯ ಮಾತನ್ನು ಮೀರಲಾರದೇ ನನ್ನಲ್ಲಿಗೆ ಬಂದಿರಬಹುದು ಅಲ್ವಾ? ನನಗಾಗಿ ನಿಮ್ಮ ತಾಯಿಯನ್ನೂ ದೂರ ಮಾಡಿರುವಂತೆ ನಾಟಕವನ್ನು ಆಡ್ತಿದೀರಿ. ನೀವು ನಂಬಿಕೆಗೆ ಅರ್ಹವಾದ ವ್ಯಕ್ತಿ ಅಲ್ಲ."

"ಹಾಗೆನ್ನ ಬೇಡ ನಂದಿನಿ. ನನ್ನನ್ನು ನಂಬು.... ನಿನ್ನ ಅವಶ್ಯಕತೆ ನನಗಿದೆ. ಇಲ್ಲದಿದ್ದರೆ ನಾನು ಬದುಕಿರಲಾರೆ."

"ಸಾಕು ಮಾಡಿ ಈ ನಾಟಕವನ್ನು ನೀವು ಬದುಕಿದರೆಷ್ಟು ಬಿಟ್ಟರೆಷ್ಟು? ನಾನಿಲ್ಲದೇ ನೀವು ಐದಾರು ವರ್ಷಗಳನ್ನು ಕಳೆದಿದ್ದೀರಿ ಅದು ಸುಳ್ಳಲ್ಲವಲ್ಲ."

"ಅದು.... ಅದು.... ಹಾಗಲ್ಲ. ನಾನು ಮರು ಮದುವೆಯಾದರೂ ಸುಖ ವಾಗಿರಲಿಲ್ಲ. ನಾನು ದುಡುಕಿಬಿಟ್ಟೆ..... ಆದರೆ ಈಗ ನೀನು ಒಂಟಿಯಾಗಿಯೇ

ಇದೀಯಲ್ಲ.... ನನ್ನನ್ನು ಮದುವೆಯಾಗಲು ಏನು ಅನುಮಾನ."

ನಂದಿನಿ ನಕ್ಕಳು. "ನಾನು ಒಂಟಿಯಿಲ್ಲ, ನನ್ನ ಜತೆ ನನ್ನ ತಂದೆ, ನನ್ನ ತಂಗಿ ಇದ್ದಾರೆ. ನನ್ನ ಈ ಮನೆ ನನಗಿದೆ. ನನ್ನ ವಿದ್ಯೆ, ನನ್ನ ಉದ್ಯೋಗ ನನ್ನ ಬಳಿ ಇದೆ. ನೂರಾರು ಜನ ಹುಡುಗಿಯರು ನನ್ನ ವಿದ್ಯಾರ್ಥಿಗಳು..... ಅವರ ನಡುವೆ ನಾನು ಒಂಟಿ ಎನ್ನುವ ಭಾವನೆಯೇ ನನಗಿಲ್ಲ. ಎಲ್ಲಕ್ಕಿಂತ ಹೆಚ್ಚಾದ ಆತ್ಮವಿಶ್ವಾಸ ನನ್ನಲ್ಲಿದೆ. ನಾನು ನಿಮ್ಮ ಹಾಗೆ ಹೇಡಿ ಅಲ್ಲ."

"ನಂದಿನಿ.... ಯಾವುದೋ ಹಳೇ ಮಾತನ್ನೇ ಹಂಗಿಸಿ ಆಡಬೇಡ ನೀನು".

"ಸಾಕು ಮಾಡಿ ನಿಮ್ಮೊಂದಿಗೆ ನಿಶ್ಚಯವಾದ ಮದುವೆ ನಿಂತು ಹೋದ ಮಾತ್ರಕ್ಕೆ ನಾನು ಬದುಕಲಾರೆನೇ....?"

"ನಿನ್ನ ಧೈರ್ಯ ನನ್ನಲ್ಲಿರಲಿಲ್ಲ ನಂದಿನಿ.... ಈಗ ನಾನು ನಿನ್ನ ಕ್ಷಮೆ ಯಾಚಿಸಿ ನಿನ್ನ ಬಳಿಗೆ ಬಂದಿದ್ದೀನಿ. ನನ್ನನ್ನು ಕ್ಷಮಿಸಿದರೆ ನಿನ್ನ ಅರ್ಹತೆ ಹೆಚ್ಚುತ್ತದೆ."

"ಇಂಥಾ ಮಾತುಗಳಿಗೆ ನಾನು ಮರುಳಾಗಿ ಮತ್ತೆ ನನ್ನ ಬಾಳನ್ನು ಹಾಳು ಮಾಡಿಕೊಳ್ಳುವುದಿಲ್ಲ. ನಿಮಗಿಂತ ಯೋಗ್ಯರಾದ ವ್ಯಕ್ತಿ ನನಗಾಗಿ ಕಾದು ನಿಂತಿದ್ದಾರೆ. ಅವರ ಬೆಂಬಲ ನನ್ನನ್ನು ಮುಂದಕ್ಕೆ ತಂದಿದೆ. ಅಂತಹ ವ್ಯಕ್ತಿಯ ಕಾಲಿನ ಧೂಳಿಗೂ ನೀವು ಸಮಾನರಲ್ಲ."

"ಅಂದರೇ.... ನಿನ್ನ ಮದುವೆ? ಎಲ್ಲಿದ್ದಾರೆ? ಹೇಗಿದ್ದಾರೆ?" ಅನುಮಾನದಿಂದ ಪ್ರಶ್ನಿಸಿದ.

"ಏಕೆ ಅನುಮಾನವೆ? ನಾನು ನಿಮ್ಮಂತೆ..... ಓತಿಕೇತ ಅಲ್ಲ. ಮೊದಲಿನಿಂದ ನನ್ನನ್ನು ಬಲ್ಲ, ನನ್ನ ಮನಸ್ಸನ್ನು ಅರಿತ ಸದ್ಭಾವನೆಯನ್ನುಳ್ಳ ವ್ಯಕ್ತಿಯೊಬ್ಬರು, ನನ್ನ ವಿದ್ಯೆಗೆ ಪ್ರೋತ್ಸಾಹವನ್ನು ಸಹಕಾರವನ್ನು ನೀಡಿ ಉತ್ತೇಜನ ಕೊಟ್ಟುದರಿಂದಲೇ ನಾನು ಈ ದಿನ ಈ ಹುದ್ದೆಯಲ್ಲಿರುವುದು. ಅವರ ಉಪಕಾರವನ್ನು ನಾನು ಮರೆಯುವಂತಿಲ್ಲ."

"ಬಹುಶಃ ಅವರಿಗೆ ನಿನ್ನ ಮದುವೆ ನಿಂತು ಹೋದ ವಿಷಯ ತಿಳಿದಿರಲಾರದು."

"ಏಕೆ ತಿಳಿದಿಲ್ಲ? ಅವರು ಬೇರೆ ಯಾರೂ ಅಲ್ಲ. ನನ್ನ ಸೋದರ ಮಾವನೇ..! ಆ ದಿನವೇ ನನ್ನ ನಿಮ್ಮ ದಾರಿ ಬೇರೆ ಬೇರೆ ಆಯ್ತು. ಅದು ಮತ್ತೆ ಎಂದಿಗೂ ಕೂಡಲು ಸಾಧ್ಯವಿಲ್ಲ. ಸಧ್ಯದಲ್ಲೇ ನಾನು ನನ್ನ ತಂದೆ ಹಾಗೂ ತಂಗಿಯೊಡನೆ ಅಮೇರಿಕಾಕ್ಕೆ ಹೋಗುತ್ತಿದ್ದೇನೆ. ಅಲ್ಲಿರುವ ನನ್ನ ಸೋದರ ಮಾವನೊಂದಿಗೆ ನನ್ನ ಮದುವೆ ನಡೆಯಲಿದೆ. ಅವರಿಗೆ ನನ್ನ ಮನೆ ಮೇಲೆ ಆಸೆ ಇಲ್ಲ. ನನ್ನ ಆಸ್ತಿಯ ಮೇಲೆ ಕಣ್ಣು ಇಲ್ಲ. ನನ್ನ ತಂದೆಯ ಮೇಲೆ ಅಪಾರ ಗೌರವ. ನನ್ನ ತಂಗಿಯ ಮೇಲೆ ಅತಿ ಪ್ರೀತಿ. ಅವರು ನನ್ನ ಬಾಳ ಸಂಗಾತಿಯಾಗುತ್ತಿರುವುದು ನನ್ನ ಸೌಭಾಗ್ಯ....

ನಾನು ನಿಮ್ಮ ದುರಾಸೆಯ ಹೊಂಡದಲ್ಲಿ ಎಂದೋ ಹೂತು ಹೋಗಿರುತ್ತಿದ್ದೆ."

"ಪ್ಲೀಸ್ ನಂದಿನಿ ನನ್ನನ್ನು ಕ್ಷಮಿಸಿ ಬಿಡು.... ನನಗೆ ಈಗ ಯಾವ ಆಸೆಯೂ ಇಲ್ಲ. ನೀನು ನನ್ನನ್ನು ಕ್ಷಮಿಸಿ...."

"ಈ ಸ್ಥಿತಿ ನಿಮಗೆ ಬರಬಾರದಾಗಿತ್ತು ನಟೇಶ. ಆದರೆ ನನಗೆ ನಿಮ್ಮ ಬಗ್ಗೆ ಪರಿತಾಪ ಸಹ ಮಾಡುತ್ತಿಲ್ಲ. ದಯವಿಟ್ಟು ಹೊರಟು ಹೋಗಿ."

"ಮತ್ತೆ ಮತ್ತೆ ಅವಮಾನ ಮಾಡ್ತಿದೀಯ ನಂದಿನಿ......"

"ಮಾನವಿದ್ದವರಿಗೆ ಅವಮಾನದ ಚಿಂತೆ. ನಿಮಗೇಕೆ ಚಿಂತೆ. ಎಲ್ಲರನ್ನು ಮರೆತವರಂತೆ ಸೋಗು ಹಾಕಿ ನನ್ನ ಮನೆ ಬಾಗಿಲಿಗೆ ನೀವು ಬರಬೇಕಾದರೆ, ನಿಮ್ಮ ಅಂದಾಜು ಮಾಡಬಲ್ಲೆ ನಾನು. ಈಗ ನಮ್ಮ ತಂದೆ ವಾಕಿಂಗ್ ಮುಗಿಸಿ ಮನೆಗೆ ಬರುವ ಸಮಯವಾಯ್ತು. ಅವರ ಕಣ್ಣಿಗೆ ನೀವು ಬಿದ್ದರೆ ಪರಿಣಾಮ ನೆಟ್ಟಗಾಗುವುದಿಲ್ಲ. ಅವರು ಪೋಲೀಸರಿಗೆ ಫೋನ್ ಮಾಡಿದರೂ ಮಾಡಿದರೇ.... ಹಾಂ ಇನ್ನೊಂದು ಮಾತು. ನನ್ನನ್ನು ಮತ್ತೆಂದೂ ಕಾಣುವ ಪ್ರಯತ್ನವನ್ನು ಮಾಡಬೇಡಿ." ಎಂದು ಹೇಳಿ ಒಳಗೆ ಹೋಗಲೆಂದು ತಿರುಗಿದವಳ ಕೈಹಿಡಿದು ನಿಲ್ಲಿಸುವ ಮನಸ್ಸಾಗಿತ್ತು. ನಾನು ಏನು ಬೇಕಾದರೂ ಮಾಡಬಲ್ಲೆ ಎಂದು ಬೆದರಿಸುವ ಕೆಟ್ಟ ಆಲೋಚನೆ ಸಹ ಮೂಡಿತು.

ಅಷ್ಟರಲ್ಲಿ ಹೊರಬಾಗಿಲಲ್ಲಿ ನಾಯಿ ಬೊಗಳಿದ ಸದ್ದು ಕೇಳಿ ಬೆದರಿ ಹಿಂತಿರುಗಿ ನೋಡಿದ. ನಂದಿನಿ ನಾಯಿ ಮರಿಯನ್ನು ತನ್ನೆಡೆಗೆ ಕರೆದಳು. ನಂದಿನಿಯ ತಂಗಿ, ನಾಯಿ ಮರಿಯೊಂದಿಗೆ ಒಳಗೆ ಬಂದವಳು ಇವನ ಕಡೆ ನೋಡದೇ ಒಳಗೆ ಅಕ್ಕನ ಜತೆ ಹೊರಟು ಹೋದಳು. ಎಷ್ಟು ಹೊತ್ತಾದರೂ ಯಾರೂ ಹೊರಗೆ ಬರದಿದ್ದಾಗ ಏಕಾಂಗಿಯಾಗಿ ವರಾಂಡದಲ್ಲಿ ನಿಂತ. ಅವನ ಸ್ಥಿತಿ ಅವನಿಗೇ ಅಸಹ್ಯವಾಗಿ ತೋರಿತ್ತು. 'ಕೈ ತೋರಿಸಿ ಅವಲಕ್ಷಣ' ಎಂದು ಅನ್ನಿಸಿಕೊಂಡಂತಾಯಿತು ಎಂದುಕೊಂಡು ತಲೆ ತಗ್ಗಿಸಿ ಹೊಸ್ತಿಲು ದಾಟಿ, ಗೇಟಿನಿಂದ ಆಚೆಗೆ ನಡೆದು ರಸ್ತೆ ಸೇರಿದ.

ಅವನು ಹೋಗುವುದನ್ನೇ ಕಾದಿದ್ದವಳಂತೆ, ನಂದಿನಿ ಮುಂಬಾಗಿಲನ್ನು ದಢಾರನೇ ಹಾಕಿ, ಭದ್ರಪಡಿಸಿ, ನೆಮ್ಮದಿಯ ನಿಟ್ಟುಸಿರನ್ನು ಬಿಟ್ಟಳು. ಬಳಿಗೆ ಬಂದ ತಂಗಿಯನ್ನು ಅಪ್ಪಿಕೊಂಡು ಮುದ್ದಿಟ್ಟಳು. ನಾಯಿ ಮರಿ ಅವಳ ಮಡಿಲನ್ನೇರಿತು. ಭೂತನನ್ನು ಅಟ್ಟಿಯಾಗಿತ್ತು. ನಿರ್ಭಯದಿಂದ ನಂದಿನಿ ನಕ್ಕಳು ಪೆಡಂಭೂತ ತೊಲಗಿತ್ತು.

* * *

೨೦. ಪುನರ್ಮಿಲನ

ತನ್ನ ಎದುರು ನಿಂತು "ಎಕ್ಸ್‌ಕ್ಯೂಸ್ ಮೀ" ಎಂದ ದನಿಯನ್ನು ಕೇಳಿ ಅಚ್ಚರಿಯಿಂದ ಕತ್ತೆತ್ತಿದಳು ದಿವ್ಯಾ. ಕಿವಿಗಳು ದನಿಯನ್ನು ಗುರುತಿಸಿದ್ದಂತೆ, ಕಣ್ಣುಗಳು ಅವನನ್ನು ಗುರುತಿಸಿದವು. ಮುಖದಲ್ಲಿ ಪರಿಚಯದ ಮುಗುಳ್ನಗೆ ಮೂಡಲಿಲ್ಲ. ಬದಲಿಗೆ ಹುಬ್ಬುಗಳು ಸಂಕುಚಿತಗೊಂಡವು. ಆದರೂ ಕರ್ತವ್ಯವನ್ನು ಮರೆಯದೇ "ಎಸ್... ಏನಾಗ್ಬೇಕಿತ್ತು" ಎಂದು ಕೇಳಿದಳು.

"ನಾನ್ಯಾರು ಅಂತ ಗೊತ್ತಾಗ್ಲಿಲ್ವಾ ದಿವ್ಯಾ?... ನೀನು ಹೇಗಿದಿಯಾ?" ಎದುರು ನಿಂತಿದ್ದ ಯುವಕ ಕೇಳಿದಾಗ, ಅವಳು ಉತ್ತರಿಸಲು ಇಷ್ಟ ಪಡದೇ ತಲೆ ಬಗ್ಗಿಸಿದಳು.

"ಓ... ನನ್ನನ್ನ ಪೂರಾ ಮರೆತೇ ಬಿಟ್ಟಿದೀಯ..." ಕೆಟ್ಟದಾಗಿ ನಕ್ಕ.

''ನೆನಪಿಸಿಕೊಳ್ಳುವಂಥದ್ದನ್ನು ಏನೂ ಉಳಿಸಲಿಲ್ಲ ನೀನು ಎಂದು ಹೇಳಬೇಕೆಂದುಕೊಂಡರೂ ಹೇಳಲು ಬಯಸಲಿಲ್ಲ. ಬದಲಿಗೆ ಅಲ್ಲಿಂದ ಎದ್ದು ಒಳಗೆಲ್ಲೋ ಹೊರಟು ಹೋದಳು. ಕೆಲವೇ ನಿಮಿಷಗಳಲ್ಲಿ ಅಲ್ಲಿಗೆ ಬೇರೊಬ್ಬ ಯುವತಿ ಬಂದು ಕುಳಿತಳು.

"ಹಲೋ ಮೇಡಂ... ಅವರು ದಿವ್ಯಾ ಅಲ್ವಾ... ಎಲ್ಹೋದ್ರು?" ಕೇಳಿದ.

"ನೀವ್ಯಾರು? ನಿಮಗೇನಾಗ್ಬೇಕು ಹೇಳಿ... ಇಲ್ಲಿ ನಾನು ಇರೋದು." ಸ್ವಲ್ಪ ಖಾರವಾಗಿ ಹೇಳಿದಳು.

"ಸಾರಿ... ಮೇಡಂ... ನಾನು ದಿವ್ಯಾಳ ಹಸ್ಬೆಂಡ್..."

"ವ್ಹಾಟ್!..." ಅವಳು ಅಚ್ಚರಿಯಿಂದ ಕಣ್ಣರಳಿಸಿದಳು, ನೀವು ಅವರ ಹಸ್ಬೆಂಡ್...! ಇಂಪಾಸಿಬಲ್... ಈಗ ಕೆಲವು ತಿಂಗಳ ಕೆಳಗೆ ಅವರ ಹಸ್ಬೆಂಡ್ ಅನಾರೋಗ್ಯದಿಂದ ತೀರಿ ಹೋದರು."

"ವ್ಹಾಟ್..." ಈಗ ಅಚ್ಚರಿಯನ್ನು ಸೂಸುವ ಸರದಿ ಇವನದಾಗಿತ್ತು.

"ಎಸ್... ಮಧುಸೂಧನ್ ಅಂತ. ಇವರ ಹಸ್ಬೆಂಡ್‌ಗೆ ಹುಷಾರಿರಲಿಲ್ಲ, ಆಸ್ಪತ್ರೆಯಲ್ಲಿದ್ದರು...ಸುಳ್ಳುಪಳ್ಳು ಹೇಳ್ಕೊಂಡು ಲೇಡಿಸ್‌ನ ಇಂಪ್ರೆಸ್ ಮಾಡೋಕೆ ನೋಡ್ಬೇಡಿ."

"ಸಾರಿ ಮೇಡಂ... ನಾನು ಅಂಥೋನಲ್ಲ. ಬೇಕಾದ್ರೆ ದಿವ್ಯಾಳನ್ನೇ ಕೇಳ್ಕೋಡಿ.

ನಾನು ಅವಳ ಹತ್ರ ಸ್ವಲ್ಪ ಮಾತಾಡ್ಬೇಕು ಕರೀತೀರಾ? ..." ಅವಳು ಸಂಶಯದಿಂದ ಅವನನ್ನೇ ನೇರವಾಗಿ ನೋಡಿದಳು.

"ಇಲ್ಲ, ಅವಳು ಅಪ್ಸೆಟ್ ಆಗಿದಾಳೆ... ಅವಳ ಮೂಡ್ ಚೆನ್ನಾಗಿಲ್ಲ..."

"ಸರಿ ಬಿಡಿ... ಹೋಗ್ಲಿ ಅವರ ಫೋನು ನಂಬರನ್ನಾದ್ರೂ ಕೊಡ್ತೀರಾ? ನಾನು ಆಮೇಲೆ ಮಾತಾಡ್ತೀನಿ."

"ಹಾಗೆಲ್ಲಾ ಅವಳನ್ನು ಕೇಳ್ದೆ ಕೊಡಕ್ಕಾಗುಲ್ಲ. ಈಗ ನೀವು ಯಾತಕ್ಕೆ ಬಂದಿದ್ರಿ ಆ ಕೆಲಸದ ವಿಷಯ ಹೇಳಿ. ನಾನು ಆಟೆಂಡ್ ಮಾಡ್ತೀನಿ."

"ಈಗ ನಾನು ಮೂಡ್ ಕೆಡಿಸ್ಕೊಂಡಿದ್ದಾಗಿದೆ. ನಾಳೆ ಮತ್ತೆ ಬರ್ತೀನಿ." ಎಂದು ಹೇಳಿ ಅಲ್ಲಿಂದ ಮುರಳೀಧರ ಹೊರಕ್ಕೆ ಹೋಗಿದ್ದ.

* * *

"ದಿವ್ಯಾ ನಾನೊಂದು ಪ್ರಶ್ನೆ ಕೇಳ್ಲಾ?" ಲಂಚ್ ಸಮಯದಲ್ಲಿ ಚಂದ್ರಿಕಾ ಕೇಳಿದಾಗ ಅವಳು ಕತ್ತೆತ್ತಿ ನೋಡಿದಳು. ಕಣ್ಣುಗಳು ಸೊರಗಿದ್ದವು, ಮುಖ ಬಾಡಿತ್ತು.

"ನೀವೇನು ಕೇಳ್ಬೇಕು ಅಂತ ನಂಗೆ ಗೊತ್ತು ಚಂದ್ರಿಕಾ. ಅವನು ನಿಮ್ಹತ್ರ ಏನೇನೆಲ್ಲಾ ಹೇಳಿದಾನೆ ಅಲ್ವಾ?" ಚಂದ್ರಿಕಾ ತಲೆಯಾಡಿಸಿದಳು.

"ಹೌದು, ಅವನು ಹೇಳಿದ್ದು ನಿಜ. ಆದರೆ ಅವನು ನನ್ನ ಎಕ್ಸ್ ಹಸ್ಬೆಂಡ್. ಎಂಟು ವರ್ಷಗಳ ಕೆಳಗೆ ನಮ್ಮಿಬ್ಬರ ಮದುವೆ ಆಗಿತ್ತು. ಎರಡೇ ವರ್ಷಗಳಲ್ಲಿ ಡೈವೋರ್ಸ್ ಆಯ್ತು."

"ಡೈವೋರ್ಸಾ? ಡೌರಿ ಕೇಸಾ?"

"ಇಲ್ಲ ಚಂದ್ರಿಕಾ ವರದಕ್ಷಿಣೆ ವಿಷಯ ಅಲ್ಲ, ನಮ್ಮಿಬ್ಬರದ್ದೂ ಪ್ರೇಮ ವಿವಾಹ. ಎರಡೇ ವರ್ಷಗಳಲ್ಲಿ ಅವನಿಗೆ ನಾನು ಬೇಡವಾದೆ..."

"ಹೌದಾ? ... ಯಾಕೆ?"

"ನಂಗೂ ಸರ್ಯಾಗಿ ಗೊತ್ತಿಲ್ಲ... ಮದುವೆಗೆ ಮುಂಚೆ ಎಷ್ಟು ಪ್ರೀತಿಸ್ತಿದ್ನೋ, ಆ ಪ್ರೀತಿ ಕಡಿಮೆಯಾಗಿ ಅಷ್ಟೇ ದ್ವೇಷಿಸಲಾರಂಭಿಸಿದ. ನಾನು ಕಾರಣ ಕೇಳಲಿಲ್ಲ. ನನಗೂ ಅವನ ಬಗ್ಗೆ ಬೇಸರ ಮೂಡಿತು. ಡೈವೋರ್ಸ್‌ಗೆ ಹಾಕಿದೆ. ಬೇಗ ಸಿಕ್ಕಿಬಿಡ್ತು. ಈ ಕೆಲಸಕ್ಕೆ ಸೇರ್ಕೊಂಡೆ..."

"ಈ ವಿಷಯ ನಿನ್ನ ಈಗಿನ ಗಂಡನಿಗೆ ಗೊತ್ತಿತ್ತಾ?"

"ಹೂಂ, ಗೊತ್ತಿತ್ತು. ನಾನು ಎಲ್ಲವನ್ನೂ ಹೇಳಿದ್ದೆ, ಒಪ್ಪಿಯೇ ಮದುವೆಯಾಗಿದ್ದರು. ಆದರೆ ನೋಡು ಎಂಥಾ ಅನ್ಯಾಯ ಆಯ್ತು. ನನ್ನ ಭಾಗ್ಯಕ್ಕೆ ಎರಡೆರಡು ಮದುವೆ! ಆದರೆ ಈಗ ನನ್ನ ಭಾಗಕ್ಕೆ ಒಬ್ಬ ಗಂಡನೂ ಇಲ್ಲ."

"ನೀವು ಮನಸ್ಸು ಮಾಡಿದ್ರೆ ಈಗಲೂ ಮತ್ತೆ ಮದುವೆಯಾಗಬಹುದು ದಿವ್ಯಾ...

ನಾನು ನಿಮಗೆ ಹೆಲ್ಪ್ ಮಾಡ್ತೀನಿ."

"ಏನೂ ಬೇಡ ಚಂದ್ರಿಕಾ... ಎರಡೆರಡು ಮದುವೆಗಳಿಂದ ಸಾಕಷ್ಟು ಅನುಭವ ಗಳಾಗಿವೆ. ಗಂಡನ ಯೋಗ ನನ್ನ ಹಣೆಯಲ್ಲಿ ಇಲ್ಲದಿದ್ರೆ ಮೂರು ಮದುವೆಯಾದ್ರೂ ಅಷ್ಟೇ. ಮೂವತ್ತು ಮದುವೆಯಾದ್ರೂ ಅಷ್ಟೇ" ನೋವಿನ ನಗೆಯನ್ನು ನಕ್ಕಳು.

"ತಮಾಷೆ ಅಲ್ಲ ದಿವ್ಯಾ. ಸೀರಿಯಸ್ ಆಗಿ ಯೋಚಿಸಿ. ನಿಮಗೆ ಇನ್ನೂ ಯೌವನವಿದೆ. ಹೀಗೆ ಎಷ್ಟು ವರ್ಷ ವಿರಹಿನಿ ಥರ ಇರೋಕ್ಕೆ ಆಗುತ್ತೆ..."

"ಪ್ಲೀಸ್ ನನ್ನ ಪಾಡಿಗೆ ನನ್ನನ್ನು ಬಿಟ್ಬಿಡಿ. ನಾನು ಏನ್ಮಾಡ್ಬೇಕು ಅಂತ ನಂಗೊತ್ತು" ಅವಳು ಒರಟಾಗಿ ಹೇಳಿದಾಗ ಚಂದ್ರಿಕಾ ಅವಳ ಕೈ ಹಿಡಿದಳು.

"ಸಾರೀ ಕಣ್ರೀ ದಿವ್ಯಾ. ನಿಮ್ಮ ಮನಸ್ಸು ಸರ್‍ಯಾಗಿಲ್ಲ ಅಂತ ನಂಗೊತ್ತು" ಇಬ್ಬರೂ ನಿಧಾನವಾಗಿ ಲಂಚ್ ಡಬ್ಬಿಯನ್ನು ಖಾಲಿ ಮಾಡಿದರು.

* * *

ಮುರಳಿಯ ಮನಸ್ಸು ಕೆಟ್ಟು ಹೋಗಿತ್ತು ದಿವ್ಯಾ ಮತ್ತೆ ಮದುವೆಯಾಗಿರುವಳೆಂದು ಅವನು ಖಂಡಿತಾ ಊಹಿಸಿರಲಿಲ್ಲ. ಕಾಲೇಜಿನಲ್ಲಿ ಓದುತ್ತಿದ್ದವರು ಒಬ್ಬರನ್ನೊಬ್ಬರು ಮೆಚ್ಚಿದ್ದರು. ಪ್ರೀತಿಸಿದ್ದರು. ಮನೆಯವರನ್ನು ಒಪ್ಪಿಸಿ ಮದುವೆಯಾಗಿದ್ದರು. ಅವನು ಮೆಡಿಕಲ್ ಕಂಪನಿಯೊಂದರಲ್ಲಿ ರೆಪ್ರೆಸೆಂಟೆಟಿವ್ ಆಗಿದ್ದ. ಇವಳು ಪ್ರೈಮರಿ ಸ್ಕೂಲೊಂದರಲ್ಲಿ ಟೀಚರ್ ಆಗಿದ್ದಳು. ಅವನು ಆಗ ಈಗ ಟೂರ್ ಎಂದು ಮನೆ ಯಿಂದ ಹೊರಗೆ ಹೋಗುತ್ತಿದ್ದ. ಅಂಥಾ ಸಮಯದಲ್ಲಿ ಒಂದು ಸಾರಿ ಅವನು ಟೂರ್‌ನಿಂದ ವಾಪಸ್ಸಾದಾಗ, ಇವಳು ಮನೆಯಲ್ಲಿರಲಿಲ್ಲ. ಇವಳಿಗಾಗಿ ಕಾದು ಕಾದು ಬೇಸರವಾಗಿ, ಹೋಟೆಲ್ಲಿನಲ್ಲಿ ತಿಂದು ಬಂದು ಮಲಗಿದ್ದ. ಸ್ಕೂಟರ್ ನಿಂತ ಸದ್ದು ಕೇಳಿ ಎಚ್ಚರಗೊಂಡು ಕಿಟಕಿಯಿಂದ ನೋಡಿದಾಗ, ದಿವ್ಯಾ ತನ್ನ ಸಹೋದ್ಯೋಗಿ ಯೊಡನೆ ಮಾತನಾಡುತ್ತಾ ನಿಂತಿದುದನ್ನು ಕಂಡ. ಸಂಶಯದ ಮುಳ್ಳು ನಾನಾ ದಿಕ್ಕುಗಳಿಂದ ಚುಚ್ಚಿಕೊಂಡವು. ಅವಳು ಒಳಗೆ ಬರುವಷ್ಟರಲ್ಲಿ ನಿದ್ದೆಯನ್ನು ನಟಿಸಿದ್ದ. ನೇರವಾಗಿ ಅವಳನ್ನು ಕೇಳುವುದು ಬೇಡ ಅಂತ ಎನ್ನಿಸಿತು. ಅಂದಿನಿಂದ ಅವಳನ್ನು ಸಂಶಯದಿಂದ ನೋಡಲಾರಂಭಿಸಿದ್ದ. ಅವಳೂ ಆ ಬಗ್ಗೆ ಯಾವ ಮಾತುಗಳನ್ನು ಆಡಿರಲಿಲ್ಲ. ಎಂದಿನಂತೆಯೇ ನಡೆದುಕೊಂಡಿದ್ದಳು.

ಆದರೆ ಇದ್ದಕ್ಕಿದ್ದಂತೆ ಅವಳನ್ನ ಕೆಲಸ ಬಿಡುವಂತೆ ಒತ್ತಾಯ ಮಾಡಲಾರಂಭಿ ಸಿದ್ದ. "ನೀನು ಕೆಲಸ ಮಾಡುವುದು ನನಗಿಷ್ಟವಿಲ್ಲ" ಎಂದಿದ್ದ.

ಆ ವರ್ಷದ ಪರೀಕ್ಷೆಗಳು ಮುಗಿದ ನಂತರ ಅವಳು ತನ್ನ ಟೀಚರ್ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟಿದ್ದಳು. ಆದರೂ ಅವನ ಸಂಶಯ ಕಡಿಮೆ ಆಗಿರಲಿಲ್ಲ. ತನಗೆ ತಿಳಿಯದಂತೆ ಅವಳು ಆ ಸಹೋದ್ಯೋಗಿಯನ್ನು ಭೇಟಿಯಾಗುತ್ತಾಳೆಂದು

ಭಾವಿಸಿದ್ದ. ಇದ್ದಕ್ಕಿದ್ದಂತೆ ತನ್ನ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟು ಮನೆಯಲ್ಲೇ ಇರಲಾರಂಭಿಸಿದ್ದ. ಅವಳು ಒಮ್ಮೆ ಪ್ರಶ್ನಿಸಿದಾಗ ಅವಳ ಮೇಲೆ ರೇಗಿದ್ದ.

"ನಾನು ನಿನ್ನನ್ನೇನೋ ಉಪವಾಸ ಕೆಡವ್ತಿಲ್ಲ. ಬೇರೆ ಕೆಲಸಕ್ಕೆ ಪ್ರಯತ್ನ ಪಡ್ತಿದೀನಿ."

"ಅದಕ್ಯಾಕೆ ರೇಗ್ಬೇಕು? ನಾನು ಮತ್ತೆ ಕೆಲಸಕ್ಕೆ ಸೇರ್ಕೊಳ್ತೀನಿ. ಸಂಪಾದ್ನೆ ಇಲ್ದಿದ್ರೆ ಜೀವನ ಹೇಗೆ ನಡೆಯುತ್ತೆ?" ಅವನ ಎದೆಯ ಮೇಲೆ ಕೈಯಾಡಿಸಿದಳು.

ಅವನು ಕೈಯನ್ನು ಕಿತ್ತೆಸೆದಿದ್ದ. ಸಂಪಾದ್ನೆ ಮಾಡೋಕೆ ಗಂಡ್ಸು ನಾನಿದೀನಿ. ಇನ್ನು ಸತ್ತಿಲ್ಲ. ನಿನ್ನ ಸಂಪಾದ್ನೆಯಿಂದ ಈ ಮನೆ ನಡೆಯಬೇಕಾಗಿಲ್ಲ ಎಂದು ಕೂಗಾಡಿದ್ದ.

"ಯಾಕೆ ಹೀಗೆ ಕೂಗ್ತಾಡ್ತೀರಿ ಬೇಡ ಅಂದ್ರೆ ಬೇಡ. ಸುಮ್ನೆ ಕೇಳ್ದೆ, ಈ ನಡುವೆ ನಿಮಗೆ ನನ್ಮೇಲೆ ಪ್ರೀತಿನೇ ಇಲ್ಲ... ಏನಾಗಿದೆ ನಿಮ್ಗೆ?

"ಹೌದು ನನ್ಗೆ ಸಂಪಾದ್ನೆ ಇಲ್ಲ. ಪ್ರೀತಿ ಇಲ್ಲ. ನಿನಗೆ ಸರಿ ಹೋಗದಿದ್ದರೆ ನೀನು ನನ್ನನ್ನು ಬಿಟ್ಟು ಹೋಗ್ಬಹುದು" ಗುಡುಗಿದ್ದ.

"ಯಾಕೆ ಹೀಗೆ ಮಾತಾಡ್ತೀರಿ? ನೀವು ಹೇಳಿದ ಹಾಗೆ ಕೇಳಿಲ್ವಾ ನಾನು? ನಿಮಗೆ ಇಷ್ಟವಿಲ್ಲ ಅಂತ, ನಾನು ಇದುವರೆಗೂ ತಾಯಿಯಾಗುವ ಆಸೆಯನ್ನು ಕೂಡ ಹೇಳ್ಕೊಂಡಿಲ್ಲ... ಗಂಡನ ಕಡೆ ವಾರೆ ನೋಟವನ್ನು ಬೀರಿದಳು.

"ಅದೊಂದು ಬಾಕಿ ಇತ್ತು ನಿಂಗೆ... ನನಗೆ ಅರ್ಹತೆ ಇಲ್ಲ ಅಂತ ಹಂಗಿಸಿ ಮಾತಾಡ್ಬೇಡ. ನಾನು ಹೇಳಿದ ಹಾಗೆ ಕೇಳ್ಕೊಂಡು, ನನ್ನಿಷ್ಟದಂತೆ ಬದುಕ್ತಿದೀನಿ ಅಂತ ತಾನೇ ನಿಂಗೆ ಬೇಸರ? ... ನಾನು ಹೀಗೇನೆ... ನನಗೆ ಪ್ರೀತಿಸೋಕೂ ಬರುತ್ತೆ. ದ್ವೇಷಿಸೋಕೂ ಬರುತ್ತೆ, ನೀನು ನಿಜವಾಗಿಯೂ ನನ್ನನ್ನು ಪ್ರೀತಿಸಿದ್ರೆ ನನ್ನನ್ನ ಅರ್ಥ ಮಾಡ್ಕೊತ್ತಿದ್ದೆ." ಎಂದು ಹೇಳಿ ಅವಳನ್ನು ತಳ್ಳಿ ಎದ್ದು ಹೋಗಿದ್ದ. ಅವಳು ಅಳುತ್ತಿರುವಳೆಂದು ತಿಳಿದರೂ ಸಮಾಧಾನಗೊಳಿಸಿರಲಿಲ್ಲ. ದಿನ ದಿನಕ್ಕೆ ಅವಳ ಬಗ್ಗೆ ಕಠೋರನಾದ. ಕೆಲವು ದಿನಗಳ ನಂತರ ಅವಳು ತನ್ನ ತವರು ಮನೆಗೆ ಹೊರಟು ಹೋಗಿದ್ದಳು. ಅನಂತರ ಬಹಳ ಬೇಗ ಡೈವೋರ್ಸ್ ಸಿಕ್ಕಿತ್ತು. ಅನಂತರ ಅವಳ ಬಗ್ಗೆ ತಿಳಿದುಕೊಳ್ಳಲು ಅವನೆಂದೂ ಪ್ರಯತ್ನಿಸಿರಲಿಲ್ಲ.

* * *

ಅವನ ತಂಗಿ ಹಾಗೂ ಅವಳ ಗಂಡ ಕಡಲ ತೀರದಲ್ಲಿ ಎದ್ದ ಬಿರುಗಾಳಿಯ ರಭಸಕ್ಕೆ ಅಲೆಯೊಡನೆ ಕೊಚ್ಚಿ ಹೋಗಿದ್ದರು. ಅವರ ಚಿಕ್ಕ ಮಗು ಕೀರ್ತಿ ಅನಾಥವಾಗಿತ್ತು. ಈಗ ಆ ಮಗುವಿನ ಯೋಗಕ್ಷೇಮ ಇವನದಾಗಿತ್ತು. ತಂಗಿಯ ಗಂಡನ ಆಸ್ತಿಗಳಿಗೆ ಇವನು ಗಾರ್ಡಿಯನ್ ಆದ. ಮಗುವನ್ನು ತಾಯಿ ಚೆನ್ನಾಗಿಯೇ

ನೋಡಿ ಕೊಳ್ಳುತ್ತಿದ್ದರು. ಯಾಕೋ ಏನೋ ಇವನು ಮರು ಮದುವೆಯಾಗುವ ಮನಸ್ಸನ್ನು ಮಾಡಲೇ ಇಲ್ಲ. ತಾಯಿ ಅನೇಕ ಬಾರಿ ಹೇಳಿದ್ದಳು.

"ಮನೆಗೊಂದು ಹೆಣ್ಣು ದಿಕ್ಕು ಬೇಕು ಮುರಳೀ... ಈ ಕೀರ್ತಿಯೂ ಹೆಣ್ಣು ಮಗು. ಬೆಳೆದು ದೊಡ್ಡವಳಾದ ಮೇಲೆ ಜವಾಬ್ದಾರಿಗಳು ಹೆಚ್ಚುತ್ತವೆ. ನನಗೂ ವಯಸ್ಸಾಗಿದೆ. ನೀನು ಮದುವೆಯಾಗು, ಕೀರ್ತಿಯನ್ನು ನೋಡಿಕೊಳ್ಳುವಂಥ ಸೊಸೆ ಬಂದರೆ ನಂಗೂ ನಿಶ್ಚಿಂತೆ"

"ಇಲ್ಲಮ್ಮ ನಂಗೆ ಮದುವೆ ಯಾಗುವ ಆಸೆಯೇ ಇಲ್ಲವಾಗಿದೆ... ನೀನೇನೂ ಯೋಚಿಸ್ಬೇಡ. ಕೀರ್ತಿಗೆ ನಾನೇ ತಂದೆ ನಾನೇ ತಾಯಿ... ಮತ್ತೇನೂ ಹೇಳ್ಬೇಡ."

"ಒಂದ್ಮಾತು ಕೇಳ್ತೀನಿ ಮುರಳಿ ಇದುವರೆಗೂ ಒಂದು ದಿನವೂ ನಂಗೆ ಸರ್‍ಯಾಗಿ ಹೇಳಿಲ್ಲ. ದಿವ್ಯಾ ಯಾಕೆ ನಿನ್ನನ್ನು ಬಿಟ್ಟು ಹೋದ್ಲು? ... ಅವಳೂ ನಿನ್ನನ್ನು ಪ್ರೀತಿಸ್ತಿದ್ಲು ಅಲ್ವಾ?"

"ಪ್ರೀತಿ ಕಡಿಮೆಯಾಗೋಕೆ ಎಷ್ಟು ದಿನ ಬೇಕಮ್ಮ? ನನಗೆ ಕೆಲಸವಿರಲಿಲ್ಲ. ಸಂಪಾದ್ನೆ ಇರಲಿಲ್ಲ. ಅವಳಿಗೆ ಕಷ್ಟ ಆಯ್ತು. ಬಿಟ್ಟು ಹೋದ್ಲು."

"ನಂಗೆ ಹಾಗೆ ಅನ್ಸಲ್ಲ, ಅವಳು ಕೆಟ್ಟೋಳು ಅಂತ ನಂಗೆ ಅನ್ಸಲ್ಲ."

"ಹೌದು, ನಾನೇ ಕೆಟ್ಟೋನು...ನನ್ನ ಸಹವಾಸ ಅವಳಿಗೆ ಬೇಡವಾಯ್ತು. ಬಿಟ್ಟು ಹೋದ್ಲು. ನಿನಗ್ಯಾಕೆ ಅವಳ ಬಗ್ಗೆ ಕನಿಕರ?"

"ಹಾಗಲ್ಲ ಕಣೋ...ಅವಳು ಮನನೊಂದು ಈ ಮನೆಯಿಂದ ಹೋಗಿದ್ದರೆ ನಾನು ಸಮಾಧಾನ ಹೇಳಿ ಕರ್‍ಕೊಂಡು ಬರ್ತಿದ್ದೆ. ಅದಕ್ಕೆ ನೀವಿಬ್ರೂ ಅವಕಾಶನೇ ಕೊಡ್ಲಿಲ್ಲ. ಹಿರಿಯೋಳು ನಾನು ಇದ್ರೂ ನಂಗೊಂದು ಮಾತು ತಿಳಿಸ್ದೇ ಡೈವೋರ್ಸ್ ತಗೊಂಡ್ರಿ. ಈಗ ಎಲ್ಲಿದಾಳೋ...ಏನು ಮಾಡ್ತಿದಾಳೋ...?"

"ಎಲ್ಲಾದ್ರೂ ಇರ್‍ಲಿ...ಏನು ಬೇಕಾದರೂ ಮಾಡ್ಕೊಳ್ಳಲಿ. ನಂಗ್ಯಾಕೆ? ಅವನು ಹಾಗೆ ಹೇಳಿದರೂ, ತಾಯಿ ಸುಮ್ಮನಿರಲಿಲ್ಲ. ಸೊಸೆ ಮನನೊಂದು ಮನೆಬಿಟ್ಟು ಹೋದಳು. ಅದಕ್ಕೇ ಈ ಅಪಘಾತ ಸಂಭವಿಸಿತು. ಈಗ ಈ ಮಗುವಿಗೆ ತಾಯಿಯ ನೆರಳಿಲ್ಲ. ... ಇವನೂ ಹೀಗೆ ಒಂಟಿಯಾಗಿ ಎಷ್ಟು ದಿನ ಇದ್ದಾನು? ...ಒಂದಲ್ಲ ಒಂದು ದಿನ ಯಾವುದೋ ಹೆಣ್ಣಿನ ಸಹವಾಸ ಮಾಡಿ, ಈ ಮಗುವನ್ನು ಅನಾಥ ಮಾಡಿದರೆ? ಆ ಚಿಂತೆ ಅವಳನ್ನು ಬಾಧಿಸತೊಡಗಿತು. ಅವರಿವರ ಮುಖಾಂತರ ವಿಚಾರಿಸಿದಾಗ ಅವಳು ಬೇರೆ ಊರಿನಲ್ಲಿ ಬ್ಯಾಂಕಿನಲ್ಲಿ ಕೆಲಸಕ್ಕೆ ಸೇರಿಕೊಂಡಿರುವಳೆಂಬ ವಿಚಾರವು ತಿಳಿಯಿತು. ಮನಸ್ಸಿಗೆ ಬೇಸರವೂ ಆಗಿತ್ತು.

ಮಗ ಒಂಟಿಯಾಗಿಯೇ ಇದಾನೆ ಎಂಬ ಬೇಸರ ಒಂದು ಕಡೆ ಆದರೆ, ಸೊಸೆಯಾಗಿದ್ದವಳು ಒಂಟಿತನವನ್ನು ದೂರ ಮಾಡಿಕೊಂಡಿದ್ದಾಳೆ, ಎಲ್ಲಾದರೂ.

ಹೇಗಾದರೂ ಕೊರಗದೆ ಇದ್ದರೆ, ತನ್ನ ಮನೆಗೆ ಕ್ಷೇಮ ಎಂಬ ಸಮಾಧಾನವೂ ಉಂಟಾಗಿತ್ತು.

* * *

ಮಗ ಏನ್ನನ್ನೋ ಯೋಚಿಸುತ್ತಾ ಮಲಗಿರುವುದನ್ನು ಕಂಡು ತಾಯಿ ಆತಂಕ ಗೊಂಡಿದ್ದಳು. "ಕಾಫಿ ಕೊಡ್ಲೇನೋ ಮುರಳಿ..." ಸಮೀಪದಲ್ಲಿ ನಿಂತು ಕೇಳಿದಳು. ಅವನು ತಟ್ಟನೇ ಬೆಚ್ಚಿ ಬಿದ್ದವನಂತೆ ಎದ್ದು ಕೂತ.

"ಏನು ಯೋಚಿಸ್ತಾ ಇದ್ದೋ..." ಬೆಚ್ಚಿ ಬಿದ್ದೆ? ನಗುತ್ತಾ ಪ್ರಶ್ನಿಸಿದಳು.

"ಏನಿಲ್ಲಮ್ಮಾ...ಕೀರ್ತಿ ಎಲ್ಲಿ...? ಮಲಗಿದಳಾ?"

"ಇಲ್ಲ, ಪಕ್ಕದ ಮನೆ ಹುಡುಗ್ರು ಕರ್ಕೊಂಡು ಹೋಗಿದಾರೆ, ಮನೇಲಿ ಒಂದಕ್ಕೇ ಬೇಜಾರು. ಈ ಮುದುಕಿ ಜೊತೆ ಏನಿರುತ್ತೆ ಆಟ?"

"ಮೊಮ್ಮಕ್ಕಳಿಗೆ ಅಜ್ಜೀನೆ ಸ್ನೇಹಿತೆ..."

"ಹೌದು ನಂಗೆ ಅದೇ ಸ್ನೇಹಿತೆ... ಅದಕ್ಕೆ ನಾನೇ ಸ್ನೇಹಿತೆ... ಆದರೂ ಸಹಾ ಮನೇಲಿ ಕೂತಿರು ಅಂದ್ರೆ ಬೇಸರವಾಗುಲ್ವಾ? ಅದಿರ್ಲಿ ನಿನ್ನ ಪಾಡೇನು ಹೇಳು... ಇನ್ನು ಎಷ್ಟು ವರ್ಷ ಹೀಗೇ ಇರೋದು ಅಂತ ತೀರ್ಮಾನಿಸಿದೀಯಾ? ... ನಿನ್ನ ಒಂಟಿತನ ನಂಗೆ ಬೇಸರವಾಗುತ್ತೆ ನೋಡು."

"ಬಿಡಮ್ಮ ಈ ಒಂಟಿತನವನ್ನು ನಾನಾಗಿಯೇ ನಾನು ತಂದುಕೊಂಡಿದ್ದು"

"ಇದರಲ್ಲಿ ಸುಖ ಇದೆ ಅಂತೆ ಅನ್ಸುತ್ತೇನೋ...ಕೀರ್ತಿ ಬೆಳೆದು ದೊಡ್ಡೋಳಾಗಿ ಗಂಡನ ಮನೆಗೆ ಹೊರಟು ಹೋಗ್ತಾಳೆ. ನಾನೋ ಮುದುಕಿ. ನನ್ನ ಕೈಕಾಲು ಗಟ್ಟಿಯಾಗಿ ಇರೋವರ್ಗೆ ಬೇಯ್ಸಿ ಹಾಕ್ತೀನಿ. ಆಮೇಲೆ ನಿನ್ನ ಪಾಡೇನು?"

"ಕೀರ್ತಿ ಮನೇಲಿ ಇದ್ದು ಬಿಡ್ತೀನಿ"

"ಕೀರ್ತಿ ಇಟ್ಕೋ ಬೇಕಲ್ಲ... ನೀನೇನು ಸ್ವಂತ ಅಪ್ಪನೇ...ಈಗ್ಲೂ ನಿಂಗೆ ವಯಸ್ಸು ಮೀರಿಲ್ಲ. ಮದುವೆ ಆಗು. ನಿಂಗೇ ನಾಲ್ಕು ಮಕ್ಕಳಾಗುತ್ತವೆ... ನಿನ್ನ ಸ್ವಂತ ಮಕ್ಕಳು ನಿನ್ನನ್ನ ನೋಡ್ಕೊಳುತ್ವೆ"

"ಚೆನ್ನಾಗಿದೆ ನಿನ್ಮಾತು..." ಒಣನಗೆಯನ್ನು ನಕ್ಕ.

"ಮತ್ತಿನ್ನೇನು? ... ಈಗ ನೀನು ನನ್ನ ಜತೇಲಿ ಇಲ್ವೇ... ತಂದೆ ತಾಯಿ ಮಕ್ಕಳನ್ನು ಬೆಳಸೋದೇ ಆ ಅಪೇಕ್ಷೆಯಿಂದ ನೀನೂ ಮುಂದೆ ಚೆನ್ನಾಗಿರ್ಲಿ ಅಂತ ನನ್ನ ಮನಸ್ಸು ಬಯಸುತ್ತೆ ಕಣೋ..." ದನಿಯನ್ನು ಎಳೆದಳು.

"ಈ ಬಯಕೆ ಒಂದನ್ನು ಬಿಟ್ಟು ಬೇರೆ ಏನನ್ನಾದ್ರೂ ಕೇಳು., ನಾನು ನೆರವೇರಿಸಿಕೊಡ್ತೀನಿ..."

"ಯಾಕೋ ಮರುಮದುವೆ ಆಸೆ, ಗಂಡಸಾಗಿ ನಿನಗಿಲ್ವ! ದಿವ್ಯಾ ನಿನ್ನ ಹಾಗೇ

ಒಂಟಿಯಾಗಿ ಕಾಲ ಕಳೀತಿದಾಳೆ ಅಂತ ಅಂದ್ಕೊಂಡ್ಯಾ? ... ಕೆಲಸಕ್ಕೆ ಸೇರ್ಕೊಂಡಿದಾಳೆ. ಮತ್ತೆ ಮದುವೆಯಾಗಿರ್ತಾಳೆ...ಮಕ್ಕಳೂ ಆಗಿರಬಹುದು..." ನಿಟ್ಟುಸಿರನ್ನು ಬಿಟ್ಟಳು.

"ಇಲ್ಲಮ್ಮ...ಅವಳು ಈಗ ಒಂಟಿಯಾಗಿಯೇ ಇದಾಳೆ"

"ಆಂ! ...ನಿಂಗ್ಹೇಗೆ ಗೊತ್ತು?" ಆಶ್ಚರ್ಯದಿಂದ ಬಾಯಿ ಬಿಟ್ಟಳು.

"ಅವಳೂ ಇದೇ ಊರ್ನಲ್ಲಿದಾಳೆ. ನಾನು ಅವಳನ್ನು ನೋಡ್ದೆ"

"ನೀನು ನೋಡಿದ್ಯಾ? ಮಾತನ್ನಾಡಿಸ್ದ್ಯಾ?"

"ಹೂಂ ನಮ್ಮ, ನೋಡ್ದೆ, ಆದರೆ ಅವಳು ಮಾತನಾಡೋಕೆ ಒಪ್ಲಿಲ್ಲ. ಎನ್ನುತ್ತಾ ಎಲ್ಲವನ್ನು ತಿಳಿಸಿದ. ತಾಯಿ ಚು...ಚು... ಎಂದು ಲೊಚಗುಟ್ಟಿಳು.

"ನಾನೊಂದ್ಸಾರಿ ಅವಳನ್ನು ನೋಡಿ ಮಾತಾಡಿಸ್ಬೇಕು. ನನ್ನನ್ನ ಅವಳು ಕೆಲಸಮಾಡುವ ಜಾಗಕ್ಕೆ ಕರ್ಕೊಡ್ಹೋಗು" ಅವನು ಒಪ್ಪಿಕೊಂಡ.

* * *

"ನಿಮ್ಮನ್ನ ನೋಡೋಕೆ ಯಾರೋ ಲೇಡಿಸ್ ಬಂದಿದಾರೆ" ಎಂದು ಅಟೆಂಡರ್ ಹೇಳಿದಾಗ, ದಿವ್ಯಾ ಆಫಿಸ್ ರೂಮಿಗೆ ಬಂದಳು. ಅಲ್ಲಿ ಕುಳಿತಿದ್ದ ಅತ್ತೆಯನ್ನು ಕಂಡು ಮುಖವನ್ನು ತಿರುಗಿಸಿದಳು.

"ದಿವ್ಯಾ, ಹೇಗಿದ್ದೀಯಮ್ಮ? ನೀನೂ ಇದೇ ಊರ್ನಲ್ಲಿದೀಯ ಅಂತ ನಂಗೆ ಗೊತ್ತೇ ಇರ್ಲಿಲ್ಲ. ಆಕೆ ಅವಳ ಮೈದಡವಿ ಹೇಳಿದಾಗ ಅವಳು ಕಲ್ಲಾದಳು. "ನನ್ನ ಮಗನ ಅವಿವೇಕವನ್ನು ಕ್ಷಮಿಸಿ ಬಿಡಮ್ಮಾ, ನಾನು ಮಗಳ ಮನೆಗೆ ಹೋಗಿ ಬರುವಷ್ಟರಲ್ಲಿ ನಮ್ಮಿಬ್ಬರ ಮಧ್ಯೆ ಅದೇನು ನಡೆದಿತ್ತೋ ನೀನು ತವರಿಗೆ ಹೊರಟು ಹೋಗಿದ್ದೆ."

"ಯಾಕತ್ತೆ ನಿಮ್ಮ ಮಗ ಏನು ನಡೀತು ಅಂತ ಹೇಳ್ಲೇ ಇಲ್ವಾ!"

"ಇಲ್ಲ ದಿವ್ಯಾ ನಂಬಿದ್ರೆ ನಂಬು, ಇಲ್ದಿದ್ರೆ ಬಿಡು. ಇದುವರೆಗೂ ಏನಾಯ್ತು ಅಂತ ಅವನು ನಂಗೆ ಹೇಳಿಲ್ಲ. ಈಗ್ಲಾದ್ರೂ ನೀನು ಹೇಳು."

"ಈಗ ಕೇಳಿ ಏನು ಪ್ರಯೋಜನ ಅತ್ತೆ? ಆಗ ನನ್ನ ಕಡೆಗೆ ಯಾರೂ ಇರ್ಲಿಲ್ಲ" ಬೇಸತ್ತು ನುಡಿದಳು.

"ಎಂಥಾ ಮಾತಾಡ್ತೀ ದಿವ್ಯಾ? ನನಗೆ ಹೇಳ್ಬಾರ್ದಿತ್ತಾ?"

"ಕಾರಣ ಏನೂಂತ ನಂಗೆ ಗೊತ್ತಿದ್ರೆ ತಾನೆ ನಿಮ್ಗೆ ಹೇಳೋಕೆ. ಕಾರಣವಿಲ್ಲದೆ ದೂಷಿಸುತ್ತಿದ್ದರು, ದ್ವೇಷಿಸುತ್ತಿದ್ದರು. ನಮ್ಮಿಬ್ಬರ ಮಧ್ಯೆ ಯಾವ ಸಂಬಂಧವೂ ಉಳಿದಿರಲಿಲ್ಲ. ನಾನು ಏನ್ಮಾಡ್ಬೇಕಾಗಿತ್ತು? ... ಪ್ರೀತಿಯನ್ನು ವಿಶ್ವಾಸವನ್ನು ಕೇಳಿ ಪಡೆಯಲು ನನ್ನ ಮನಸ್ಸು ಒಪ್ಪಲಿಲ್ಲ."

"ನಿನ್ನ ಮನಸ್ಸನ್ನು ನೋಯಿಸಿ, ದೂರ ಮಾಡಿದ್ದಕ್ಕೆ ಪ್ರಾಯಶ್ಚಿತ ಪಡ್ತಿದಾನೆ...

ಒಂಟಿಯಾಗಿ ಜೀವನಾನ ಸವೆಸ್ತಾ ಇದಾನೆ."

"ಇದು ನನ್ನ ತಪ್ಪಲ್ಲ ಅತ್ತೆ..."

"ಹೌದು ತಪ್ಪು ನಿನ್ನದಲ್ಲ. ಅದಕ್ಕೇ ತಕ್ಕ ಶಿಕ್ಷೆ ಆಯಿತು. ಮಗಳನ್ನು ಅಳಿಯನನ್ನು ಒಟ್ಟಿಗೇ ಕಳೆದುಕೊಳ್ಳುವ ದೌರ್ಭಾಗ್ಯ ನನಗೆ ಒದಗಿದೆ. ಮಗ ಒಂಟಿಯಾಗಿ ಸನ್ಯಾಸಿಯಂತೆ ಇರುವುದನ್ನು ನೋಡಬೇಕಾದ ಸ್ಥಿತಿ ಒದಗಿದೆ. ಮೊಮ್ಮಗು ಒಂದು ಇಲ್ದೇ ಇದ್ದಿದ್ರೆ ಎಂದೋ ನಾನು ದೇಶಾಂತರ ಹೊರಟು ಹೋಗ್ತಿದ್ದೆ." ಆಕೆ ಗದ್ಗದದ ದನಿಯಲ್ಲಿ ನುಡಿದಾಗ ದಿವ್ಯಾ ಪೆಚ್ಚಾದಳು.

"ಏನಾಯ್ತೂ ಅತ್ತೆ...? ಗೀತಂಗೆ ಅವಳ ಗಂಡಂಗೆ?"

"ಸುನಾಮಿ ಬಂತಲ್ಲಮ್ಮ, ಆಗ ಇಬ್ಬರೂ ಕೊಚ್ಚಿ ಹೋದ್ರು..ಈ ಸಣ್ಣ ಕೂಸನ್ನು ನನ್ನ ಹೆಗಲಿಗೆ ಕಟ್ಟಿ..." ಸೊರ ಸೊರ ಅತ್ತಳು.

ಸಾರಿ ಅತ್ತೆ, ನನಗೆ ಈ ವಿಷಯಗಳೊಂದೂ ಗೊತ್ತಿರಲಿಲ್ಲ...".

"ಹೇಗಮ್ಮಾ ಗೊತ್ತಾಗುತ್ತೆ. ನೀನೂ ಒಂಟಿಯಾಗಿಯೇ ಇದ್ದೀಯಂತೆ, ಯಾರೋ ಹೇಳಿದ್ರು, ನೀನು ಮದುವೆಯಾಗಿದೀಯಾಂತ..."

"ನನ್ನ ವಿಷಯ ಈಗ್ಯಾಕೆ ಬೇಡ ಬಿಡಿ."

"ಯಾಕಮ್ಮಾ ಹೀಗಂತೀಯಾ? ನೀನು ಈಗ್ಲೂ ನಮ್ಮವಳೇ... ನಿಮ್ಮ ನಿಮ್ಮಲ್ಲಿ ಏನೋ ಬಿರುಕು ಮೂಡಿ ದೂರ ಆಗಿರಬಹುದು. ಆದರೆ ಇಂದಿಗೂ ನೀನು ನನ್ನ ಸೊಸೆಯೇ... ಸೊಸೆಯೊಡನೆ ಇರುವ ಯೋಗ ನಂಗಿಲ್ಲ ಅಷ್ಟೇ..."

"ಅತ್ತೇ ಕಾಫಿ ಕುಡಿತೀರಾ ತರಿಸ್ಲಾ?"

"ಬೇಡಮ್ಮ... ಕಾಫಿ, ತಿಂಡಿ ಏನೂ ಬೇಡ...ನಿನ್ನನ್ನ ನೋಡಿ ಮಾತನ್ನಾಡಿಸ್ದನ್ನಲ್ಲ. ಈಗ ಸಮಾಧಾನ ಆಯ್ತು...ಹೊರಗೆ ಮುರಳಿ ಕಾಯ್ತಾ ಇದಾನೆ. ನಾನಿನ್ನು ಇನ್ನು ಹೊರಡ್ತೀನಿ. ಮನೆಗೆ ಎಂದಾದ್ರೂ ಬಾ, ನನ್ನ ಮೊಮ್ಮಗಳನ್ನು ನೋಡೂವಂತೆ."

* * *

"ತನಗೆ ಅನ್ಯಾಯ ಮಾಡಿದ್ದು ಮುರಳೀ, ಆದರೆ ಕಷ್ಟ ಅನುಭವಿಸುತ್ತಿರುವವರು ಅತ್ತೆ... ಆಕೆಯ ಬಗ್ಗೆ ಅಯ್ಯೋ ಅಂತೆನ್ನಿಸಿತ್ತು... ಮಗಳ ಮನೆಗೆ ಬಾಣಂತನಕ್ಕೆ ಹೋಗಿದ್ದವರು, ತಿಂಗಳಾನುಗಟ್ಟಲೆ ಅಲ್ಲಿಯೇ ಉಳಿದುಕೊಂಡಿದ್ದರು. ಮಗ ಮಾಡಿದ್ದು ತಪ್ಪು ಅಂತ ಈಗ ಅನ್ನಿಸ್ತಿದೆ. ಆಗ ತನ್ನನ್ನು ಕರೆಸಿ, ಒಂದು ಸಾಂತ್ವನದ ಮಾತುಗಳನ್ನು ಆಡಲಿಲ್ಲ ಅಂತ ಆಕೆಯ ಮೇಲೆ ಕೋಪ ಬಂದಿತು. ಆಕೆ ಕರೆಸಿ ಕಾರಣವನ್ನು ಕೇಳಿ ತನ್ನನ್ನು ಒಪ್ಪಿಸಿದ್ದರೂ ತಾನು ವಾಪಸ್ಸು ಹೋಗುತ್ತಿರಲಿಲ್ಲ... ತನ್ನದೇನೂ ತಪ್ಪಿರಲಿಲ್ಲ. ಆದರೂ ಶಿಕ್ಷೆಯನ್ನು ಅನುಭವಿಸಿದವಳು ತಾನು... ತಾನು ಮಾಡಿದ್ದು ತಪ್ಪು...ಕಾರಣವನ್ನು ಅರಿಯದೇ ಅಲ್ಲಿಂದ ಹೊರಟಿದ್ದು ತಪ್ಪು... ಸ್ವಾಭಿಮಾನ

ಹೆಚ್ಚಾಗಿತ್ತು. ದುರಭಿಮಾನ ಅಲ್ಲಿಂದ ದೂರಕ್ಕೆ ತಳ್ಳಿತ್ತು. ತಾನು ಪ್ರೀತಿಸುತ್ತಿದ್ದವನು, ದ್ವೇಷಿಸಲು ಪ್ರಾರಂಭಿಸಿದ ಎಂದರೇ... ಅದು ನ್ಯಾಯವೇ? ..."

"ಅತ್ತೆಗೆ ಯಾವ ವಿಷಯವೂ ತಿಳಿಯದು. ನಿಜವೋ ಸುಳ್ಳೋ ... ಅನುಭವಿಸಿದ್ದು ತಾನು... ಈಗ ಅವರುಗಳೂ ಅನುಭವಿಸುತ್ತಿದ್ದಾರಲ್ಲಾ! ಅಯ್ಯೋ... ಪಾಪ ಗೀತಾ ಹಾಗೆ ಹೋಗಬಾರದಾಗಿತ್ತು...ಆ ನೋವು ಎಂಥದು ಅಂತ ನಂಗೆ ಅರ್ಥವಾಗುತ್ತೆ. ನನಗೂ ನೋವು ಇದೆ ಅಲ್ಲವೆ? ಈ ನೋವನ್ನು ಕೊಟ್ಟವನು ಮಧುಸೂಧನ... ಇವನು ಮಾಡಿದ್ದೂ ತಪ್ಪೇ... ದುರ್ಬಲ ಹೃದಯದವನು ತನ್ನನ್ನೇಕೆ ಮದುವೆಯಾಗ ಬೇಕಾಗಿತ್ತು! ತಾನು ಡೈವೋರ್ಸಿ ಎಂದು ತಿಳಿದರೂ ತನ್ನನ್ನು ಒಪ್ಪಿದ್ದ. ... ಆದರೆ ತನ್ನ ಖಾಯಿಲೆಯ ವಿಷಯವನ್ನು ಮುಚ್ಚಿಟ್ಟಿದ್ದ. ಮದುವೆಯಾದ ನಂತರವೇ ತನಗೆ ತಿಳಿದಿದ್ದು. ಆಗ ತನಗಾದ ಆಘಾತವೆಷ್ಟು? ... ಆಗಲೇ ತಾನು ಈ ಕೆಲಸಕ್ಕೆ ಸೇರಿಕೊಂಡಿದ್ದು, ಕೆಲಸಕ್ಕೆ ಸೇರಿಕೊಳ್ಳುತ್ತೇನೆಂದರೆ ಬೇಡ ಎಂದಿರಲಿಲ್ಲ.... ತಾನು ಹೇಳಿದಂತೆ ಕೇಳುತ್ತಿದ್ದ... ಇವನ ಸ್ವಭಾವ ಮುರಳಿಗಿರಲಿಲ್ಲ."

ಮೊದಲು ಮುರಳಿ ಹೀಗಿರಲಿಲ್ಲ. ಇದ್ದಕ್ಕಿದ್ದಂತೆ ಬದಲಾಗಲು ಕಾರಣವೇನು? ತಿಳಿದುಕೊಳ್ಳಲೇ ಬೇಕು. ತಿಳಿದುಕೊಂಡು ಛೀಮಾರಿ ಹಾಕಲೇ ಬೇಕು. ಆಗಲೇ ತನಗೇ ಸಮಾಧಾನ ಎಂದು ತನ್ನಲ್ಲೇ ನಿರ್ಧರಿಸಿದಳು. ಅವನು ಮತ್ತೆ ಬಂದೇ ಬರುವನೆಂಬ ನಂಬಿಕೆ ಅವಳಲ್ಲಿತ್ತು.

* * *

ಬಸ್ ಸ್ಟ್ಯಾಂಡ್‌ನಲ್ಲಿ ಬಸ್ಸಿಗಾಗಿ ಕಾಯುತ್ತಾ ನಿಂತಿದ್ದವಳ ಮುಂದೆ ಒಂದು ಕಾರು ನಿಂತಿತ್ತು.... ಡ್ರೈವರ್ ಸೀಟಿನಲ್ಲಿ ಕುಳಿತಿದ್ದ ಮುರಳೀ ಅವಳಿಗೆಂದು ಬಾಗಿಲನ್ನು ತೆರೆದ. ಅವಳು ಸುಮ್ಮನೇ ನಿಂತಿದ್ದಳು.

"ನಿನ್ಹತ್ರ ಸ್ವಲ್ಪ ಮಾತಾಡ್ಬೇಕು, ಪ್ಲೀಸ್ ಬಾ...." ಎಂದ ನಯವಾಗಿ.

ಅಕ್ಕ ಪಕ್ಕ ನಿಂತಿದ್ದವರು ಅವಳನ್ನೇ ಗಮನಿಸುತ್ತಿದ್ದರು. ಅತ್ತಿತ್ತ ನೋಡಿ ಕಾರನ್ನು ಹತ್ತಿದಳು. ಕಾರು ಸೀದಾ ಅವನ ಮನೆಯ ಮುಂದೆ ನಿಂತಿತು. ಅವಳು ಇಳಿಯಲಿಲ್ಲ. ಅಷ್ಟರಲ್ಲಿ ಅತ್ತೆ ಹೊರಕ್ಕೆ ಬಂದಿದ್ದರು.

"ಓ.... ನೀನಾ? ನೀನು ಬರ್ತೀಯ ಅಂತ ನಂಗೆ ಗೊತ್ತಿತ್ತು...." ಆಕೆ ನಗುಮುಖದಿಂದ ಹೇಳಿದಾಗ ಇವಳು ಮೌನವಾಗಿ ಇಳಿದಳು. ಎಲ್ಲರೂ ಒಳಗೆ ಬಂದರು. ಅಲ್ಲಿಯೇ ಕುಳಿತು ಹೋಂ ವರ್ಕ್ ಮಾಡುತ್ತಿದ್ದ ಕೀರ್ತಿ, ಅವನನ್ನು ಕಂಡೊಡನೆ ಓಡಿ ಬಂದು ತಬ್ಬಿಕೊಂಡಳು.

"ಇವಳು ಕೀರ್ತಿ.... ಗೀತನ ಮಗಳು...." ಆಂಟಿಗೆ ಹಾಯ್ ಹೇಳು...." ಎಂದ. ಆ ಹುಡುಗಿ ಮುದ್ದಾಗಿ 'ಹಾಯ್ ಆಂಟೀ' ಎಂದಿತ್ತು. ಇವಳು ನಸುನಕ್ಕು

"ಹಲೋ.... ಬೇಬಿ...." ಎಂದಿದ್ದಳು. ಆಕೆ ಒಳಗಿನಿಂದ ಎಲ್ಲರಿಗೂ ಕಾಫಿ ತಿಂಡಿಯನ್ನು ತಂದಿತ್ತಳು.

"ಅಮ್ಮಾ ನಾನು ಕೀರ್ತಿಯನ್ನು ಪಾರ್ಕಿಗೆ ಕರ್ಕೊಂಡು ಹೋಗ್ತೀನಿ" ಎಂದು ಹೇಳಿ ಅವನು ಅವಳೊಡನೆ ಹೊರಟು ಹೋಗಿದ್ದ. ಆಕೆ ಇವಳೆದುರಿಗೆ ಕುಳಿತರು.

"ನಿನ್ನ ವಿಷಯ ತಿಳಿದು ತುಂಬಾ ಬೇಸರ ಆಯಿತು... ದಿವ್ಯಾ ಮುರಳಿ ಈಗ್ಲೂ ನಿನ್ನನ್ನು ಪ್ರೀತಿಸ್ತಾನೆ... ಹಾಗಾಗಿಯೇ ಮದುವೆಯಾಗದೆ ಬ್ರಹ್ಮಚಾರಿಯಂತೆ ಜೀವಿಸ್ತಿದಾನೆ... ನಾನು ಈಗ್ಲೂ ನಿನ್ನನ್ನು ನನ್ನ ಸೊಸೆ ಅಂತಲೇ ಅಂದ್ಕೊಂಡಿದೀನಿ"

"ಈ ಮಾತೆಲ್ಲಾ ನಂಗೆ ಬೇಡ... ನಂಗ್ಯಾಕೆ ಹೇಳ್ತಿದೀರಿ. ... ನಾನು ಬರ್ತೀನಿ" ಎದ್ದಳು.

"ಕೂತ್ಕೋ... ಅವನು ನಿನ್ನನ್ನು ಮನೆಗೆ ಬಿಟ್ಟು ಬರ್ತಾನೆ...ಎಲ್ಲಿದೆ ನಿಮ್ಮ ಮನೆ?"

"ನಾನು ಹಾಸ್ಟೆಲ್ ನಲ್ಲಿದ್ದೀನಿ... ನಾನು ಹೊರಡ್ತೀನಿ... ಸುಳ್ಳು ಹೇಳಿದ್ದಳು.

"ನನ್ನ ಮಾತಿಗೆ ನೀನು ಉತ್ತರವನ್ನು ಹೇಳಲಿಲ್ಲ..."

"ನೀವು ಕೇಳ್ತಾ ಇರೋದು ನ್ಯಾಯಾನಾ ಅತ್ತೆ?"

"ನ್ಯಾಯವಲ್ಲ. ತಪ್ಪು ಅಂತ್ಲೇ ಇಟ್ಕೋ... ಆ ತಪ್ಪನ್ನು ಸರಿ ಪಡಿಸೋಕೆ ಅವಕಾಶವೇ ಇಲ್ವಾ?"

"ನಿಮ್ಮ ಮಗ ಮಾಡಿದ್ದು ಸರಿ ಅಂತ ಅಂತೀರಾ?"

"ನೀನೂ ಮಾಡಿದ್ದು ಸರೀನಾ! ನನ್ನ ತಪ್ಪೇನು ಅಂತ ಕಾಲರ್‌ನ ಹಿಡಿದು ಕೇಳ್ಬೇಕಾಗಿತ್ತು. ಆ ಅಧಿಕಾರ ನಿನಗಿತ್ತು. ಕಾರಣವನ್ನು ತಿಳಿದುಕೊಳ್ಳದೇ ಅವನಿಂದ ದೂರ ಹೋದದ್ದು ನಿಂದೂ ತಪ್ಪಲ್ವಾ ದಿವ್ಯಾ?"

"ಒಂದೇ ಒಂದು ಬಾರಿ ನನ್ನ ಬಳಿಗೆ ಬಂದು, ಪ್ರೀತಿಯಿಂದ ಕರೆದಿದ್ದರೆ... ವಾಪಸ್ಸು ಬರುತ್ತಿದ್ದೆನೋ ಏನೋ...?"

"ನಿನ್ನ ಹಾಗೆ ಅವನಿಗೂ ದುರಭಿಮಾನ...ಈಗ ಅವನು ತನ್ನ ತಪ್ಪನ್ನು ಒಪ್ಪಿಕೊಂಡು, ಪ್ರೀತಿಯಿಂದ ಕರೆದರೆ ...ಮತ್ತೆ ಅವನ ಬಳಿಗೆ ವಾಪಸ್ಸು ಬರ್ತೀಯ ಅಲ್ವಾ!" ಆಸೆಯಿಂದ ಕೇಳಿದಳು.

"ಇಲ್ಲ ಅತ್ತೆ, ಕಾಲ ಮಿಂಚಿ ಹೋಗಿದೆ..."

"ಇಲ್ಲ, ಕಾಲ ಮಿಂಚಿಲ್ಲ, ಅವನು ನಿನಗಾಗಿಯೇ ಕಾದು ಕುಳಿದ್ದನೋ ಏನೋ... ವಿಧಿ ಮತ್ತೆ ನಿಮ್ಮಿಬ್ಬರನ್ನು ಒಂದು ಗೂಡಿಸಲು ಸಂಚು ನಡೆಸಿರಬೇಕು. ನೀನು ಬರಲಿ ಎಂದು ನನ್ನ ಮನಸ್ಸು ಹಾರೈಸುತಿದೆ. ನಿನ್ನ ಸಕಾರಾತ್ಮಕವಾದ ಉತ್ತರಕ್ಕೆ ನಾವಿಬ್ಬರೂ ಕಾಯ್ತಾ ಇರ್ತೀವಿ...ನಿಧಾನವಾಗಿ ಯೋಚಿಸಿ, ಸರಿಯಾದ ನಿರ್ಧಾರಕ್ಕೆ

ಬಾ... ಒಮ್ಮೆ ದುಡುಕಿನಿಂದ ನಡೆದು ಹೋದ ಅವಿವೇಕಕ್ಕೆ ಅವನು ಪಶ್ಚಾತಾಪ ಪಡ್ತಿದಾನೆ. ಅದನ್ನು ಸರಿಪಡಿಸುವ ಅವಕಾಶ ಒದಗಿದೆ...ಈಗ"

"ಇಲ್ಲ ಅತ್ತೆ ನಾನು ಮತ್ತೆ ಮತ್ತೆ ತೊಂದರೆಗಳಿಗೆ ಸಿಕ್ಕಿ ಬೀಳುವುದಿಲ್ಲ. ಈಗಾಗ್ಲೇ ಬೇಕಾದಷ್ಟನ್ನು ಅನುಭವಿಸಿದ್ದಾಗಿದೆ"

"ಅವನಿಂದ ಯಾವ ತೊಂದರೆಯೂ ನಿನಗೆ ಆಗದಂತೆ ನಾನು ನೋಡಿ ಕೊಳ್ತೀನಿ. ಈಗ ಕೈ ತುಂಬಾ ಹಣ ಇದೆ. ಅನುಕೂಲಗಳಿವೆ. ನೀನು ದುಡಿಯ ಬೇಕಾಗಿಲ್ಲ. ನಮ್ಮ ಕೀರ್ತಿಗೆ ತಾಯಿಯಾಗು ಅಂತ ಕೇಳ್ಕೊಳ್ತಾ ಇದೀನಿ. ನೀನು ತಾನೇ ಎಷ್ಟು ವರ್ಷ ಹೀಗೇ ಒಂಟಿಯಾಗಿರ್ತೀಯಾ?"

"ನನಗೋಸ್ಕರ ಯಾರೂ ಚಿಂತಿಸಬೇಕಾಗಿಲ್ಲ"

"ಸರಿಯಮ್ಮ... ಏನೋ ನನಗೆ ಅನ್ನಿಸಿದ್ದ ನ್ನು ನಾನು ಹೇಳ್ದೆ. ನನ್ನದು ಸ್ವಾರ್ಥತನ ಅಂತ ಭಾವಿಸಿದ್ರೆ ಅದು ಸರಿಯೇ... ನಾನು ಬಲವಂತ ಮಾಡುವುದಿಲ್ಲ. ಇನ್ನು ನಿನ್ನಿಷ್ಟ" ಆಕೆಯ ಮುಖದಲ್ಲಿ ದುಗುಡವೂ ಇತ್ತು, ಅಸಂತೋಷವೂ ಇತ್ತು.

"ಸಾರೀ ಅತ್ತೆ... ನನ್ನಿಂದ ನಿಮಗೆ ಬೇಸರವಾಗಿದ್ದರೆ ಕ್ಷಮಿಸಿ ಬಿಡಿ..." ಆಕೆ ಉತ್ತರಿಸಲಿಲ್ಲ.

* * *

"ಯಾಕೆ ದಿವ್ಯಾ ಒಂಥರಾ ಇದೀರಲ್ಲ... ಮನೇಲಿ ಏನಾದ್ರೂ ಬೇಜಾರಾಗುವಂಥ ಘಟನೆ ನಡೀತಾ?" ಚಂದ್ರಿಕಾ ಕೇಳಿದಳು.

"ಇಲ್ಲ, ಈಗ ಒಂದು ವಾರದಿಂದ ಮನಸ್ಸೇ ಸರಿಯಾಗಿಲ್ಲ, ಟ್ರಾನ್ಸ್‌ಫರ್ ಮಾಡಿಸ್ಕೊಳ್ಳೋಣ ಅಂತಿದೀನಿ..."

"ಯಾಕೆ? ನಿಮ್ಮ ಅತ್ತೆ ಮಾವ ಏನಾದ್ರೂ ಅಂದ್ರಾ?.."

"ಅವರು ಏನೂ ಅನ್ಲಿಲ್ಲ... ಆದರೆ ನನ್ನ ಹಿಂದಿನ ದಿನಗಳನ್ನೆಲ್ಲಾ ಕೆದಕಿದ್ನಲ್ಲ ಆ ಮಹಾಶಯ... ಅವನು ಕಣ್ಣಿಗೆ ಬಿದ್ದಾಗ್ನಿಂದ ಮನಸ್ಸೂ ಕೆದಕಿ ಹೋಗಿದೆ."

"ಅದು ಮುಗಿದ ಕತೆ ಅಲ್ವಾ! ... ಅದನ್ಯಾಕೆ ಚಿಂತಿಸ್ತೀರಿ!"

"ಮತ್ತೊಂದು ಅಧ್ಯಾಯ ಪ್ರಾರಂಭವಾಗ್ತಿದೆ..." ಎನ್ನುತ್ತಾ ನಡೆದುದನ್ನೆಲ್ಲಾ ತಿಳಿಸಿದಳು. ಈಗ ತಾಯಿ ಮಗ ಸೇರಿ ನನ್ನನ್ನು ತಮ್ಮ ಬಲೆಗೆ ಎಳೀತಿದಾರೆ..."

"ಓ... ಅದರಲ್ಲಿ ಚಿಂತಿಸೋದು ಏನಿದೆ, ನಿಮಗೆ?"

"ಇಲ್ಲಿಂದ ಬೇರೆ ಕಡೆಗೆ ವರ್ಗ ಮಾಡಿಸ್ಕೊಂಡು ಹೊರಟು ಹೋಗ್ತೀನಿ..."

"ಇಷ್ಟಕ್ಕೆಲ್ಲಾ ಯಾಕೆ ಹೆದರ್ಬೇಕು ದಿವ್ಯಾ! ... ನಿಮ್ಮ ಪಾಡಿಗೆ ನೀವು ಇರಿ... ನಿಮ್ಮನ್ನ ಯಾರೂ ಬಲವಂತ ಮಾಡೋಕ್ಕೆ ಆಗುಲ್ಲ. "ದಿವ್ಯಾ ನಸುನಕ್ಕು ಸುಮ್ಮನಾದಳು. ಆದರೆ ಚಂದ್ರಿಕಾ ಸುಮ್ಮನಿರಲಿಲ್ಲ. ಮತ್ತೆ ಪ್ರಾರಂಭವಾದ ಅಧ್ಯಾಯಕ್ಕೆ ಪುಟಗಳನ್ನು

ಸೇರಿಸುವ ಪ್ರಯತ್ನವನ್ನು ಮಾಡಿದಳು. ದಿವ್ಯಾಳಿಗೆ ತಿಳಿಯದಂತೆ ಅವಳ ಈಗಿನ ಅತ್ತೆ ಮಾವನನ್ನು ಭೇಟಿಯಾದಳು, ತನ್ನ ಪರಿಚಯವನ್ನು ಹೇಳಿಕೊಂಡಳು.

"ದಿವ್ಯ ಮುಂಚಿನಂತಿಲ್ಲ. ಮಂಕಾಗಿ ಬಿಟ್ಟಿದ್ದಾಳೆ. ಅವಳು ಒಂಟಿಯಾಗಿ ಹೇಗೆ ಇರ್ತಾಳೆ! ಅವಳಿಗೆ ಮರುಮದುವೆ ಮಾಡಿದರೆ ಅವಳಿಗೆ ಜೀವನದಲ್ಲಿ ಉತ್ಸಾಹ ಬರುತ್ತದೆ" ಎಂದೂ ಸೇರಿಸಿದಳು.

"ಈ ವಿಚಾರದಲ್ಲಿ ನಾವೇನು ಹೇಳೋಕಾಗುತ್ತೆ? ನಾವೂ ಸಹ ಬೇಸರದಲ್ಲಿ ದಿನಗಳನ್ನು ಕಳೀತಾ ಇದೀವಿ. ಇವಳಾದರೋ ಹೊರಗೆ ಕೆಲಸದ ನೆವದಲ್ಲಿ ಎಲ್ಲವನ್ನೂ ಮರೆಯುತ್ತಾಳೆ..."

"ಇಲ್ಲ, ನೀವು ತಪ್ಪು ತಿಳಿದುಕೊಂಡಿದೀರಿ... ಅವಳ ಮನಸ್ನಲ್ಲಿ ಏನೋ ಕೊರಗು ಇದೆ... ಯಾರಿಗೂ ಹೇಳುವುದಕ್ಕಾಗದೇ ಒದ್ದಾಡ್ತಿದಾಳೆ."

"ನೀನು ಸ್ನೇಹಿತೆ. ನೀನೇ ಕೇಳಿ ತಿಳಿದ್ಕೋ... ಇವಳಿಗೆ ಇಲ್ಲಿ ನಮ್ಮ ಮನೆಯಲ್ಲಿ ಸರಿ ಹೋಗದಿದ್ದರೆ, ತಾಯಿ ಮನೆಗೆ ಹೋಗಲಿ...."

"ಅವಳಿಗೆ ತಾಯಿಯ ಮನೆಗೆ ಹೋಗುಕ್ಕೆ ಇಷ್ಟವಿಲ್ಲ, ಬೇಕಾದರೆ ಹಾಸ್ಟೆಲ್‌ನಲ್ಲಿರ್ತಾಳೆ..."

"ಹಾಸ್ಟೆಲ್ಲಿನಲ್ಲಾ! ಬೇಡಮ್ಮ, ಜನ ಆಡ್ಕೊಂಡು ನಗ್ತಾರೆ... ಈಗ ನಾವೇ ಇವಳಿಗೆ ತಂದೆ ತಾಯಿ..."

"ಹಾಗಾದ್ರೆ ಅವಳ ಹತ್ರ ಮಾತಾಡಿ... ಅವಳ ಮನಸ್ನಲ್ಲೇನಿದೆ ಅಂತ ತಿಳಿದ್ಕೊಳ್ಳಿ.. ಮರು ಮದುವೆಗೆ ಒಪ್ಪಿಸಿ...."

"ಇವಳು ಒಪ್ಪದಿದ್ದರೆ? ... ಈಗಾಗ್ಲೆ ಎರಡು ಮದುವೆಗಳಾಗಿವೆ... ಆದರೆ, ಇವಳಿಗೆ ಗಂಡನ ಸುಖವಿಲ್ಲ. ಅವನನ್ನು ಬಿಟ್ಟು ಇವಳು ಬಂದಳು. ಇವನು ಇವಳನ್ನು ಬಿಟ್ಟು ಹೊರಟೇ ಹೋದ... ನಾವು ಇವಳ ಮುಖ ನೋಡಿಕೊಂಡು, ದುಃಖ ಪಡ್ಬೇಕೋ, ದುಃಖವನ್ನು ಮರೀಬೇಕೋ ಒಂದೂ ಗೊತ್ತಾಗ್ತಿಲ್ಲ."

"ಅವಳು ನಗ್ತಾ ನಗ್ತಾ ಇರ್ಲಿ ಅಂತ ನಿಮಗೆ ಅನ್ನಿಸುತ್ತೆ ತಾನೇ..."

"ಹೂಂ. ನಮಗೆ ಬೇಕಾಗಿರೋದೂ ಅದೇ... ಇವಳಿಗೇ ಒಂದೆರಡು ಮಕ್ಕಳಾಗಿದಿದ್ದರೆ...ಮೊಮ್ಮಕ್ಕಳನ್ನ ಆಡಿಸ್ಕೊಂಡು ಕಾಲ ಕಳೆಯಬಹುದಾಗಿತ್ತು..."

"ದಿವ್ಯಳಿಗೆ ಆದಷ್ಟು ಬೇಗ ಮದುವೆ ಮಾಡಿ... ಮೊಮ್ಮಕ್ಕಳನ್ನು ಆಡಿಸುವ ಭಾಗ್ಯ ಖಂಡಿತಾ ಬರುತ್ತೆ..." ಆಸೆಯನ್ನು ತೋರಿದಳು.

"ನಿನ್ನ ಬಾಯ ಹರಕೆಯಿಂದ ಹಾಗೇ ಆಗಲಿ. ನಾವು ಇವತ್ತೇ ಇವಳ ಹತ್ರ ಮಾತಾಡ್ತೀವಿ"

"ಆದರೆ, ನಾನು ಬಂದ ವಿಷಯ ಅವಳಿಗೆ ತಿಳಿಯಬಾರದು" ಎಂದಳು.

ಅವರು ತಲೆಯಾಡಿಸಿದರು.

* * *

ನಮ್ಮ ಕಡೆಯ ಹುಡುಗನೊಬ್ಬ ನಿನ್ನನ್ನು ಮದುವೆಯಾಗೋಕೆ ಸಿದ್ಧವಾಗಿದ್ದಾನೆ. ಅವನು ನಿನ್ನ ಹತ್ರ ಮಾತಾಡ್ಬೇಕಂತೆ." ಅತ್ತೆ ಹೇಳಿದಳು.

"ಇಲ್ಲ, ನಾನು ಯಾರನ್ನೂ ಮದುವೆಯಾಗೊಲ್ಲ." ಬೇಸರದಿಂದ ನುಡಿದಳು.

"ಯಾಕೆ? ಜೀವಮಾನವೆಲ್ಲಾ ನಮ್ಮ ಕಣ್ಣೆದುರಿಗೆ ಇದ್ದು ನಮ್ಮ ವ್ಯಥೆಯನ್ನು ಹೆಚ್ಚಿಸ್ಬೇಕು ಅಂತ ನಿರ್ಧರಿಸಿದೀಯಾ? ..." ಆಕೆಯ ನುಡಿ ಕುಟುಕಿತ್ತು.

"ಏನತ್ತೆ ಹೀಗೆ ಮಾತಾಡ್ತೀರಿ! ... ನಾನು ನಿಮ್ಮ ಮಗನಿಗೆ ಮಾತು ಕೊಟ್ಟಿದೀನಿ... ನಿಮ್ಮ ಜೊತೇಲ್ಲಿ ಇರ್ತೀನಿ ಅಂತ..."

"ಅದರ ಅಗತ್ಯ ನಮಗಿಲ್ಲ"

"ಇಷ್ಟು ಬೇಗ ನಾನು ಬೇಡವಾದ್ನಾ? ನಿಮ್ಮ ಮನಸ್ನಲ್ಲಿ ಏನಿದೆ ಅಂತ ನೇರವಾಗಿ ಹೇಳ್ಬಿಡಿ... ನಿಮಗೆ ನನ್ನಿಂದ ತೊಂದರೆ ಆಗ್ತಿದ್ರೆ ನಾನು ಹಾಸ್ಟೆಲ್ ನಲ್ಲಿರ್ತೀನಿ..."

"ಯಾಕಮ್ಮ? ಸೊಸೇನ ಮನೆಯಿಂದ ಆಚೆ ನೂಕಿದರು ಅಂತ ಜನ ಆಡಿಕೊಳ್ಳಲಿ ಅಂತ ನಿಂಗೆ ಆಸೇನಾ..."

"ಮತ್ತಿನ್ನೇನು ಹೇಳ್ಲಿ? ... ಕೆಟ್ಟು ತವರನ್ನ ಸೇರಬಾರದು ಅಂಥ ನೀವೇ ಹೇಳ್ತೀರಿ, ಆಗ ಮದುವೆಯಾದೆ... ಆಗ ವಿಧಿ ಇರಲಿಲ್ಲ ತವರಿಗೆ ವಾಪಸ್ಸು ಹೋಗಿದ್ದೆ. ಈಗ ಕೆಲಸ ಇದೆ. ನಿಮ್ಮಿಬ್ಬರೊಡನೆ ಇರುವ ಅವಕಾಶವಿದೆ, ನಾನು ಏನಾದ್ರೂ ನಿಮಗೆ ಬೇಸರವಾಗುವ ಹಾಗೆ ನಡ್ಕೊಂಡಿದೀನಾ ಅತ್ತೆ?"

"ಇಲ್ಲಮ್ಮ ಇಲ್ಲ. ಖಂಡಿತಾ ಇಲ್ಲ. ಸುಳ್ಳು ಹೇಳಿದರೆ ನನ್ನ ನಾಲಿಗೇಲಿ ಹುಳು ಬೀಳಲಿ... ಆದರೆ ಈ ವಯಸ್ನಲ್ಲಿ ನೀನು ಒಂಟಿಯಾಗಿರೋದನ್ನ ನಾವು ನೋಡೋಕೆ ಆಗ್ತಿಲ್ಲ ದಿವ್ಯಾ... ಮನಸ್ಸು ಕುದ್ದು ಹೋಗುತ್ತೆ..."

ಅವಳು ಸುಮ್ಮನಿದ್ದಳು, ಉತ್ತರಿಸಲಿಲ್ಲ.

"ನಮ್ಮ ಮಾತನ್ನು ಕೇಳು, ಮತ್ತೆ ಮದುವೆಯಾಗು... ಈ ಸಂಬಂಧವೂ ಉಳಿಯುತ್ತೆ. ನಾವೇ ನಿಂತು ಧಾರೆ ಎರೆದುಕೊಟ್ಟು ಕಳಿಸಿಕೊಡ್ತೀವಿ..."

"ಇಲ್ಲ, ಅತ್ತೆ. ನಂಗೆ ಮದುವೆ ಮೇಲಿನ ಆಸೆಯೇ ಹೊರಟು ಹೋಗಿದೆ. ನಂಬಿಕೆಯಂತೂ ಉಳಿದಿಲ್ಲ ಜನರು ನಗ್ತಾರೆ ಅಷ್ಟೆ."

"ಹಾಗೆನ್ಬೇಡ, ನಗೋ ಜನ ಸಮಯಕ್ಕಾಗುಲ್ಲ. ನಿನಗೂ ಮಕ್ಕಳು ಮರಿ, ಸಂಸಾರ ಅಂತ ಒಂದು ಬೇಕು ದಿವ್ಯಾ. ನಿನ್ನನ್ನು ಪ್ರೀತಿಸುವ ಗಂಡ ಬೇಕು... ಮಧು ನಿನ್ನನ್ನ ಪ್ರೀತಿಯಿಂದ ನೋಡ್ಕೊಂಡ... ಆದರೆ ತಾಯಿಯಾಗುವ ಭಾಗ್ಯವನ್ನು

ಅವನು ಕರುಣಿಸಲಿಲ್ಲ. ನಮ್ಮಿಂದ ನಿಂಗೆ ಅನ್ಯಾಯವಾಗಿದೆ. ಅದನ್ನು ನಾವು ಸರಿಪಡಿಸಬೇಕು. ಇಲ್ಲದಿದ್ದರೆ ನಮಗೆ ನೆಮ್ಮದಿಯೇ ಇರೋಲ್ಲ." ಆಕೆ ಅಳುವಿನ ಧ್ವನಿಯಲ್ಲಿ ಹೇಳಿದಾಗ ಇವಳು ಮೆತ್ತಗಾದಳು.

"ನನಗೆ ಸ್ವಲ್ಪ ಸಮಯಬೇಕು" ಉಗುಳಿ ನುಂಗಿ ನುಡಿದಳು.

* * *

"ಇದ್ದಕ್ಕಿದ್ದಂತೆ ಈ ಅತ್ತೆ ಮರು ಮದುವೆಯಾಗು ಅಂತ ಪೀಡಿಸ್ತಿದಾರೆ. ಆ ಅತ್ತೆ ಮತ್ತೆ ಸಂಬಂಧವನ್ನು ಜೋಡಿಸು ಬಾ ಅಂತ ಕರೀತಿದಾರೆ. ನಂಗೆ ಏನ್ಮಾಡ್ಬೇಕು ಅಂತ ಗೊತ್ತಾಗ್ತಿಲ್ಲ" ಚಂದ್ರಿಕಾಗೆ ಹೇಳಿದಳು. ಅವಳು ಒಳಗೊಳಗೇ ನಕ್ಕಳು.

"ಅವರು ಹೇಳೊದ್ರಲ್ಲಿ ತಪ್ಪೇನಿದೆ! ... ಇಬ್ಬರೂ ನಿಮ್ಮ ಒಳಿತನ್ನೇ ಬಯಸ್ತಾರೆ ತಾನೇ? ..."

"ಸ್ವಾರ್ಥವೋ... ಒಳಿತೋ ಗೊತ್ತಾಗುಲ್ಲ..." ಅಡ್ಡಡ್ಡ ತಲೆಯಾಡಿಸಿದಳು.

"ಜೀವಮಾನವೆಲ್ಲಾ ಅತ್ತೆ ಮಾವನ ಸೇವೆ ಮಾಡ್ಕೊಂಡು ವಿರಾಗಿನಿ ಥರ ಯಾಕೆ ಇರ್ಬೇಕು? ... ಅವರ ಆಸೇನೂ ಪೂರೈಸಿದ್ರೆ ಸಂಬಂಧವೂ ಉಳಿಯುತ್ತೆ."

"ಮಧುವಿನ ಆತ್ಮಕ್ಕೆ ನೋವಾಗುತ್ತೆ... ಚಂದ್ರಿಕಾ"

"ಇಲ್ಲ, ನೋವಾಗುಲ್ಲ, ಸಂತೋಷವಾಗುತ್ತೆ, ಡೈವೋರ್ಸಿ ಅಂತ ತಿಳಿದೂ ನಿಮ್ಮನ್ನು ತಮ್ಮ ಸ್ವಾರ್ಥಕ್ಕಾಗಿ ಮದುವೆಯಾದರು. ಅವರ ಅನಾರೋಗ್ಯವನ್ನು ನಿಮ್ಮಿಂದ ಮುಚ್ಚಿಟ್ಟರು. ಅದು ಮೋಸ ತಾನೇ? ಈಗ ಆ ಆತ್ಮಕ್ಕೆ ಪಶ್ಚಾತಾಪವಾಗಿರುತ್ತದೆ. ನಿಮ್ಮ ಸುಖವನ್ನೇ ಬಯಸುತ್ತಿರುತ್ತೆ... ಖಂಡಿತಾ ನೊಂದ್ಕೊಳೊಲ್ಲಾ"

"ಸುಖ? ಸುಖ ಎಲ್ಲಿದೆ? ..."

"ಈ ಬ್ಯಾಂಕಿನ ಕೆಲಸದಲ್ಲಿ ಸುಖ ಇದೆ ಅಂತ ಅನ್ಸುತ್ತಾ? ... ವಾರವೆಲ್ಲಾ ಬಿಸಿಯಾಗಿರ್ತೀರಿ... ಆದರೂ ನಿಮಗೆ ಕೊರಗು ಇದೆ... ರಿಟೈರ್ ಆದ್ಮೇಲೆ ಏನು ಮಾಡ್ತೀರಿ.! ... ಅತ್ತೆ ಮಾವ ಇರ್ತಾರೋ ಇಲ್ವೋ? ಮನೆಯ ಕಿಟಕಿ ಬಾಗಿಲುಗಳನ್ನು ನೋಡ್ಕೊಂಡು ಒಂಟಿಯಾಗಿ ಕಾಲ ಕಳೀತೀರಾ? ..."

"ಯಾವುದಾದರೂ ಆಶ್ರಮಕ್ಕೆ ಸೇರ್ಕೊಳ್ತೀನಿ..."

"ಹಾಗೆ ನೀವು ಡಿಸೈಡ್ ಮಾಡಿದ್ದರೆ ಹಾಗೇ ಮಾಡಿ..." ಎಂದು ಬಿಟ್ಟಳು. ಇವಳಿಗೆ ಪೆಚ್ಚಾಗಿತ್ತು.

"ನನ್ನ ಮಾತ್ನಿಂದ ನಿಮಗೆ ಸಮಾಧಾನವಾಗಿಲ್ಲ ... ನಾನೇನು ಮಾಡ್ಲಿ! ನೀವೊಬ್ಬರೇ ನನ್ನ ಆಪ್ತಗೆಳತಿ, ನನಗೆ ಬೇರೆ ಯಾರೂ ಇಲ್ಲ..."

"ನನ್ನ ಮನಸ್ನಲ್ಲಿ ಏನಿದೆ ಅಂತ, ನನ್ನ ಮಾತ್ನಿಂದ ನಿಮಗೆ ಅರ್ಥವಾಗಿದೆ. ನೀವೊಬ್ಬರೇ ಕುಳಿತುಯೋಚಿಸಿ. ನಿರ್ಧಾರ ತಗೋಳ್ಳಿ... ಯಾರದ್ದೂ ಬಲವಂತವಿಲ್ಲ.

"ಮತ್ತೆ ಮದುವೆ ಅಂದ್ರೆ ದಿಗಿಲಾಗುತ್ತೆ ಚಂದ್ರಿಕಾ ... ಅದೂ ಮೂರನೇ ಮದುವೆ.? ... ಮದುವೆಯಾದೋನು ಕೇಳುವ ಪ್ರಶ್ನೆಗಳಿಗೆ ನಾನು ಉತ್ತರಿಸ್ಲಾರೆ"

"ಹಾಗಾದ್ರೆ, ಮೊದಲು ಮದುವೆಯಾದವನ ಬಳಿಗೇ ಯಾಕೆ ಹಿಂತಿರುಗಿ ಹೋಗ್ಬಾರ್ದು?" ಅಳೆದಳೆದು ನುಡಿದಳು.

"ಚಂದ್ರಿಕಾ... ನೀವೂನೂ? ಈ ಮಾತನ್ನು ಹೇಳ್ತೀರಲ್ಲಾ ...?"

"ಇದರಲ್ಲಿ ತಪ್ಪೇನಿದೆ? ಅವರು ನಿಮ್ಮನ್ನು ಬಲ್ಲವರು, ನಿಮ್ಮನ್ನು ಪ್ರೀತಿಸುತ್ತಿದ್ದವರು. ಅವರು ಏನನ್ನೂ ಪ್ರಶ್ನಿಸುವುದಿಲ್ಲ. ನೀವು ಯಾವ ಉತ್ತರವನ್ನೂ ಕೊಡಬೇಕಾಗಿಲ್ಲ"

"ಆದರೆ? ನಾನು ಸೋತಂತೆ ಆಗುವುದಿಲ್ವಾ ಚಂದ್ರಿಕಾ?"

"ಇಲ್ಲಿ ಯಾವ ಸೋಲೂ ಇಲ್ಲ; ಯಾರಿಗೂ ಗೆಲುವಿಲ್ಲ. ಇದು ಜೀವನ ಕಲ್ಪಿಸಿ ಕೊಟ್ಟಿರುವ ಮತ್ತೊಂದು ಅವಕಾಶ... ಇದರಲ್ಲಿ ಗೆದ್ದು ಸಾಧಿಸುವುದಾದ್ರೂ ಏನು? ... ಬೇಕಾದ್ರೆ ನಿಮ್ಮದೇ ಆದ ಕೆಲವು ಕಂಡೀಷನ್‌ಗಳನ್ನು ಹಾಕಿ, ಅವರು ಖಂಡಿತಾ ಒಪ್ಕೋತಾರೆ."

"ಹಾಗಾದ್ರೆ, ನನಗೆ ಬೇರೆ ಮಾರ್ಗವೇ ಇಲ್ವಾ ಬಾಳೋಕೆ?"

"ಇಲ್ಲ ಅಂತ ಹೇಳ್ಲಾರೆ... ಆದರೆ ಈಗಿನ ಸ್ಥಿತಿಯ ಬಗ್ಗೆ ವಿಚಾರ ಮಾಡಿ...ಈ ಮನೆಯವರು ಕಳಿಸಲು ಸಿದ್ಧರಾಗಿದಾರೆ... ಆ ಮನೆಯವರು ಕರೆಸಿಕೊಳ್ಳಲು ಕಾತುರದಿಂದ ಕಾಯುತ್ತಿದ್ದಾರೆ... ಈ ಅವಕಾಶ ಎಲ್ಲರಿಗೂ ಸಿಗುವುದಿಲ್ಲ... ತವರಿಗೆ ಹೋಗಿ ಇರಲು ನಿಮ್ಮ ಮನಸ್ಸು ಒಪ್ಪುವುದಿಲ್ಲ. ಅವರಾದರೂ ಇದನ್ನು ಸಂತೋಷದಿಂದ ಸ್ವೀಕರಿಸುತ್ತಾರೆ. ನಿಮ್ಮ ಈ ಆಯ್ಕೆಯಿಂದ ಎಲ್ಲರಿಗೂ ಸಂತೋಷವಾಗುತ್ತದೆ.

"ಅಂದರೆ! ನಾನೊಂದು ಸೂತ್ರದ ಗೊಂಬೆಯ ಥರ, ಪರರ ಖುಷಿಗೋಸ್ಕರ ನನ್ನ ಬಾಳನ್ನು ಸವೆಸಬೇಕಾ?"

"ಒಂದು ಅರ್ಥದಲ್ಲಿ ಹೌದು. ಇಲ್ಲಿ ಬ್ಯಾಂಕಿನಲ್ಲೂ ಅಷ್ಟೇ ತಾನೇ. ಕೈ ತುಂಬಾ ಕೆಲಸ ಮಾಡ್ತೀರಿ... ಸಂಬಳ ತಗೋತೀರಿ. ಆದರೆ ಮೇಲಿನವರಿಗೆ ತೃಪ್ತಿ ಯಾಗುವಂತೆ, ಕಸ್ಟಮರ್ಸ್‌ಗೆ ತೃಪ್ತಿಯಾಗುವಂತೆ ಕೆಲಸವನ್ನು ನಿಷ್ಠೆಯಿಂದ ಮಾಡ್ತೀರಿ. ಇದರಿಂದ ನಿಮಗೆ ಖುಷಿಯೂ ಸಿಗುತ್ತೆ ಅಲ್ವಾ? ... ಒಳ್ಳೆಯ ಕೀರ್ತಿ ನಿಮಗೆ ಸಿಗುತ್ತೆ ಅಲ್ವಾ? "ಹಾಗೆ ನೋಡ್ತಾ ಹೋದ್ರೆ, ಈ ದಿನ ನೀವು ಈ ಹುದ್ದೇಲಿರುವುದು ನಿಮ್ಮ ಮೊದಲ ಗಂಡನ ಕಾರಣದಿಂದಲೇ ತಾನೇ... ಇಲ್ದಿದ್ರೆ...

"ಸಾಕು ಚಂದ್ರಿಕಾ... ಒಟ್ನಲ್ಲಿ ನನ್ನನ್ನ ಒಪ್ಪಿಸಲು ಸಾಹಸ ಪಡ್ತಿದೀರಿ, ಇದರಿಂದ ನಿಮಗೆ ಏನು ಲಾಭ?"

"ನನಗೇನು ಲಾಭ? ನಿಮ್ಮ ಒಳಿತಿಗೇ ನಾನು ಹೇಳ್ತಾ ಇರೋದು. ಇನ್ನು

ಕೆಲವು ತಿಂಗಳುಗಳಲ್ಲಿ ಈ ಒಂಟಿತನ ನಿಮ್ಮನ್ನು ಕಾಡದೇ ಇರುತ್ತಾ? ... ನಿಮ್ಮನ್ನು ಕಂಡು ನಿಟ್ಟುಸಿರು ಬಿಡುವ ಅತ್ತೆ ಮಾವನ ಬಗ್ಗೆ ತಂದೆ ತಾಯಿಯರ ಬಗ್ಗೆ ಬೇಸರ ಹುಟ್ಟದೇ ಇರುತ್ತಾ? ನೆಮ್ಮದಿಯನ್ನು ಅರಸಿಕೊಂಡು ಒದ್ದಾಡುವ ಸ್ಥಿತಿಗಿಂತ, ನಿಮಗಾಗಿ ಒದ್ದಾಡುವ ಪತಿ, ನಿಮ್ಮನ್ನು ಪ್ರೀತಿಯಿಂದ ಅಪ್ಪಿಕೊಳ್ಳುವ ಮಕ್ಕಳು... ಬೇಕು ಅಂತ..."

"ಸಾಕು... ಇಷ್ಟೆಲ್ಲಾ ಅಪೇಕ್ಷೆ ನಂಗಿಲ್ಲ... ಆದರೂ, ನನ್ನ ಮದುವೆಯನ್ನು ಕುರಿತು ನಾನೇ ನೇರವಾಗಿ ಅತ್ತೆ ಮಾವನೊಡನೆ ಮಾತಾಡ್ಲಾರೆ. ನೀವು ಸಹಾಯ ಮಾಡ್ತೀರಾ? ಚಂದ್ರಿಕಾ, ಸಂತೋಷದಿಂದ ರಾಯಭಾರಕ್ಕೆ ಒಪ್ಪಿಕೊಂಡಳು.

* * *

ಕೆಲವೇ ದಿನಗಳೊಳಗೆ, ದಿವ್ಯಾ ಮತ್ತೆ ಮುರಳಿಯ ಮಡದಿಯಾಗಿ, ಅವರ ಮನೆಯನ್ನು ತುಂಬಿದಳು. ಆದರೆ ಅವನ ಮನವನ್ನು ತುಂಬಲು ಸಿದ್ಧಳಾಗಿರಲಿಲ್ಲ. ಒಂದು ಅಂತರ ಇದ್ದೇ ಇತ್ತು. ಸಮಯವನ್ನು ಕಾದಿದ್ದು ಅವನು ಅವಳೊಡನೆ ಮಾತನಾಡಿದ.

"ನನ್ನನ್ನು ಬಿಟ್ಟು ಹೋಗ್ಬಾರ್ದಿತ್ತು ನೀನು... ನನ್ನ ತೊಳಲಾಟ ನಿಂಗೆ ಅರ್ಥವಾಗಲೇ ಇಲ್ಲ"

"ಅದಕ್ಕೆ ಕಾರಣ ನೀವೇ... ಈಗ ಆ ಮಾತೆಲ್ಲ ಯಾಕೆ?"

"ಇಲ್ಲ ದಿವ್ಯಾ... ನನ್ನ ಪ್ರೀತಿಯೇ ಅದಕ್ಕೆ ಕಾರಣ... ನಿನ್ನನ್ನು ಅತಿಯಾಗಿ ಪ್ರೀತಿಸುತ್ತಿದ್ದೆ. ಆ ಕಾರಣದಿಂದಲೇ ನಿನ್ನ ಮೇಲೆ ಸಂಶಯ ಪಟ್ಟೆ... ಆ ಪ್ರೀತಿಯೇ ಮತ್ತೆ ನಮ್ಮಿಬ್ಬರನ್ನು ಒಂದುಗೂಡಿಸಿದೆ. ...ನಿನಗೆ ಥ್ಯಾಂಕ್ಸ್ ಹೇಳ್ಬೇಕು ನಾನು..."

"ಇದು ಪ್ರೀತಿಸುವ ಲಕ್ಷಣವಲ್ಲ. ಯಾರಾದ್ರೂ ಹೀಗೆ ವರ್ತಿಸ್ತಾರಾ? ಪರಸ್ಪರ ನಂಬಿಕೆ ಇರಬೇಡ್ವಾ? ... ಥ್ಯಾಂಕ್ಸ್ ಹೇಳಿದರೆ ಎಲ್ಲಾ ಸರಿ ಹೋಗುತ್ತಾ?"

"ಹೌದು ದಿವ್ಯಾ... ಮತ್ತೆಂದೂ ನೀನು ನನ್ನಿಂದ ದೂರ ಹೋಗ್ಬಾರ್ದು..."

"ನೀವು ಸಂಶಯ ಪಡಬಾರದು, ನಾನು ಈಗಲೂ ಕೆಲಸದಲ್ಲಿದ್ದೀನಿ. ನಾಲ್ಕಾರು ಜನ ಸಹೋದ್ಯೋಗಿಗಳ ಜೊತೆ ಮಾತಾಡ್ತೀನಿ... ನನಗೆ ಅವಮಾನವಾಗುವಂತೆ ನಡೆದುಕೊಳ್ಳಬಾರದು ನೀವು..." ಎಚ್ಚರಿಸಿದಳು.

"ಇಲ್ಲ, ಮತ್ತೆ ಮತ್ತೆ ಮೂರ್ಖನಾಗಲಾರೆ ನಾನು..." ಒಂದು ಬಾರಿ ಅವಿವೇಕಿ ಯಾಗಿದ್ದೆ. ಈಗ ವಿವೇಕ ಬಂದಿದೆ. ಅವು ನಿಂಗೂ ಅರಿವಿಗೆ ಬಂದಿದೆ ಅಲ್ವಾ? ..."

"ಇಲ್ಲ ನಾನ್ಯಾರು ಅದನ್ನೆಲ್ಲಾ ಯೋಚಿಸೋಕ್ಕೆ..."

"ಹೀಗೆ ಮಾತಾಡ್ಬೇಡ... ನಾನಂತೂ ನಿನಗಾಗಿ ಪರಿತಪಿಸಿದ್ದೀನಿ..."

"ನಿಮ್ಮ ಪರಿತಾಪವನ್ನು ನೋಡಿ, ನಾನು ಮತ್ತೆ ಇಲ್ಲಿಗೆ ಬರಲಿಲ್ಲ. ಅಥವಾ ಯಾವ ಸ್ವಾರ್ಥತನವೂ ನನಗೆ ಇಲ್ಲ... ನನ್ನ ವಯಸ್ಸಾದ ತಂದೆ ತಾಯಿಗಳ ಅತ್ತ

ಮಾವನವರ ನೆಮ್ಮದಿಗಾಗಿ, ನಿಮ್ಮ ತಾಯಿಯ ಆಸೆಗಾಗಿ, ಕೀರ್ತಿಗೆ ತಾಯಿಯಾಗಲು ಮಾತ್ರ ಬಂದಿರೋದು... ಈ ವಿಷಯ ನೆನಪಿನಲ್ಲಿರಲಿ... ನಮ್ಮಿಬ್ಬರ ನಡುವಿನ ಮಾನಸಿಕ ಅಂತರದ ಅಳತೆ ಎಂದಿಗೂ ಕಡಿಮೆಯಾಗಲು ಸಾಧ್ಯವಿಲ್ಲ."

"ಗೊತ್ತು ದಿವ್ಯಾ... ನಾನು ನಿನ್ನಿಂದ ಮೊದಲಿನ ಪ್ರೀತಿಯನ್ನು ಅಪೇಕ್ಷೆ ಮಾಡುವುದು ಅಪಹಾಸ್ಯವಾಗಿ ಕಾಣುತ್ತದೆ... ಆದರೆ ಕಳೆದುಕೊಂಡಿದ್ದ ನಿಧಿಯನ್ನು ಮತ್ತೆ ಪಡೆದಿದ್ದೇನೆ. ಅದನ್ನು ಜೋಪಾನವಾಗಿ ನನ್ನ ಬಳಿಯೇ ಇಟ್ಟುಕೊಳ್ಳುವ ಆಸೆಯಷ್ಟೇ ನನ್ನದು... ನೀನು ನಿನಗೆ ಹೇಗೆ ಬೇಕೋ ಹಾಗೆ ಇರಬಹುದು. ಅದಕ್ಕೆ ನಾನು ಅಡ್ಡಿ ಬರುವುದಿಲ್ಲಾ" ಅವನು ಅವಳನ್ನು ಧನ್ಯತೆಯ ಭಾವದಿಂದ ನೋಡಿದಾಗ, ಅವಳಿಗೆ ಮುಜುಗರವಾಗಿತ್ತು. ತಲೆಯನ್ನು ತಗ್ಗಿಸಿ 'ಥ್ಯಾಂಕ್ಸ್' ಎಂದಳು.

ಅವರಿಬ್ಬರ ಪುನರ್ಮಿಲನವನ್ನು ಎಲ್ಲರಿಗೂ ಸಾರುವಂತೆ, ಗೋಡೆಯ ಮೇಲಿನ ಗಡಿಯಾರ 'ಢಣ್' ಎಂದು ಜೋರಾಗಿ ಹೊಡೆದುಕೊಂಡಿತು.

* * *

೨೧. ಮನದ ಮಲ್ಲಿಗೆ

ರಾಮನಾಥ ವಾಕಿಂಗ್ ಮುಗಿಸಿ ಮನೆಗೆ ಹಿಂತಿರುಗಿದ್ದ. ಗೇಟನ್ನು ತೆರೆದು ಒಳಗೆ ಹೆಜ್ಜೆ ಇಡುವಷ್ಟರಲ್ಲಿ ಅವನ ದೃಷ್ಟಿ ತನ್ನ ಮನೆಯ ಕಡೆ ತಿರುಗಿತ್ತು. ಕಾಲುಗಳು ಹಾಗೇ ನಿಂತವು. ಯುವತಿಯೊಬ್ಬಳು ಕಷ್ಟಪಟ್ಟು, ಮೇಲಿದ್ದ ಬಳ್ಳಿಯನ್ನು ಎಳೆದೆಳೆದು ಮಲ್ಲಿಗೆಯಹೂವನ್ನು ಕೊಯ್ಯುತ್ತಿದ್ದಾಳೆ. ಯಾರಿರಬಹುದು! .... ತಾಯಮ್ಮ ಎಲ್ಲಿ? .... ನಾಲ್ಕು ಹೆಜ್ಜೆ ನಡೆದು ತಾಯಮ್ಮ ಎಂದು ಕೂಗುವಷ್ಟರಲ್ಲಿ ಅ ಯುವತಿ ಇತ್ತ ತಿರುಗಿದ್ದಳು. ಅವನನ್ನು ಕಂಡು ಕೈಗಳು ನಡುಗಿದ್ದವು. ಮಡಿಲಲ್ಲಿದ್ದ ಹೂಗಳು ಕೆಳಕ್ಕೆ ಬಿದ್ದವು.

"ಯಾರ್‍ರೀ ನೀವು? ...." ಎನ್ನುತ್ತಾ ಅವಳನ್ನು ಸಮೀಪಿಸಿದ. ದಷ್ಟಪುಷ್ಟವಾದ ಅವಳ ದೇಹವನ್ನು ನೋಡಿದೊಡನೆಯೇ ಅವಳು ಗರ್ಭಿಣಿ ಎಂದು ಅರಿವಾಗಿತ್ತು, ಮೆತ್ತಗಾದ. ಅವನು ಮತ್ತೆ ಪ್ರಶ್ನಿಸುವಷ್ಟರಲ್ಲಿ ಅವಳು ಪಕ್ಕದ ಓಣಿಯಲ್ಲಿ ನಡೆದು ಮಾಯವಾಗಿದ್ದಳು. ಅವನು ಮುಂಬಾಗಿಲಿಗೆ ಹಾಕಿದ್ದ ಬೀಗವನ್ನು ತೆರೆಯುವಷ್ಟರಲ್ಲಿ ತಾಯಮ್ಮ ಪ್ರತ್ಯಕ್ಷವಾದಳು.

"ಯಾರದು ತಾಯಮ್ಮ? .... ಮಲ್ಲಿಗೆ ಹೂವನ್ನು ಕೊಯ್ಯುತ್ತಿದ್ದರು.... ನೋಡಿ ಇಲ್ಲೆಲ್ಲಾ ಬಿದ್ದಿದೆ."

ಅವಳು ನನ್ನ ಮೊಮ್ಮಗಳು ಅಹಲ್ಯಾ.... ಬೆಳಿಗ್ಗೆ ಬಂದಳು. ಅವಳಿಗೆ ಮಲ್ಲಿಗೆ ಹೂವು ಅಂತಂದ್ರೆ ಭಾಳ ಇಷ್ಟ.... ಅಲ್ಲದೇ...."

"ಸರಿ, ಹೂವನ್ನು ಕೊಯ್ದು ಕಟ್ಟಿ ಕೊಡಿ. ಇಲ್ದಿದ್ರೆ ಕೊಂಡ್ಕೊಂಡು ತಂದು ಕೊಡಿ. ಮುಡಿದುಕೊಳ್ಳಲಿ."

"ಬೇಜಾರು ಮಾಡ್ಕೊಬೇಡಿ ಸಾರ್.... ಏನೋ ಆಸೆ ಪಟ್ಟಳು" ಅವನು ಉತ್ತರಿಸದೇ ತನ್ನ ಮನೆಯೊಳಕ್ಕೆ ನಡೆದಿದ್ದ.... ಹೂ ಕೊಯ್ಯುತ್ತಿದ್ದ ಹುಡುಗಿಯ ಬಗ್ಗೆಯೇ ಚಿಂತಿಸುತ್ತಾ.... ತಾಯಮ್ಮ ತನ್ನ ಮನೆಗೆ ಹೋಗಿ ಅಹಲ್ಯಾಳನ್ನು ಕರೆತಂದಿದ್ದಳು. "ಸಾರ್‌ನ ಕ್ಷಮಾಪಣೆ ಕೇಳು.... ಅವರಿಗೆ ಸಿಟ್ಟು ಬಂದಿದೆ."

"ಸಾರಿ ಸಾರ್...." ಆ ಯುವತಿ ಹೇಳಿದಾಗ ಅವನಿಗೆ ನಗು ಬಂದಿತ್ತು.

"ತಾಯಮ್ಮ, ಸಾರಿ ಕೇಳುವಂಥ ತಪ್ಪೇನಾಗಿದೆ ಈಗ? ನೀವೊಬ್ರು" ನಗಲು ಪ್ರಯತ್ನಿಸಿದ.

"ಹಾಗಲ್ಲ ಸಾರ್.... ಹೂಗಳನ್ನು ಅಂದಕ್ಕೋಸ್ಕರ ಗಿಡದಲ್ಲೇ ಬಿಟ್ಟಿರ್ತೀರ.... ನಿಮಗೆ ಕೋಪ ಬರೋದು ಸಹಜವೇ."

"ನನಗೆ ಕೋಪ ಬಂದಿದೆ ಅಂತ ಯಾರು ಹೇಳಿದ್ರು? ಕೋಪ ಏನಿಲ್ಲ ಇವರು ನಿಮ್ಮ ಮೊಮ್ಮಗಳು ಅಂತ ನಂಗೆ ಗೊತ್ತಿರ್ಲಿಲ್ಲ ಅಷ್ಟೇ. ಹೂಗಳೆಲ್ಲಾ ಕೆಳಗೆ ಬಿದ್ದಿದೆ. ಆರಿಸ್ಕೊಂಡು ಕಟ್ಕೊಂಡು ಮುಡ್ಕೊಳ್ಳಿ. .... ಮೇಲಿನ ಹೂಗಳನ್ನು ನಾನು ಕೊಯ್ದು ಕೊಡ್ತೀನಿ." ಅವನು ಚಪ್ಪರದ ಬಳ್ಳಿಗೆ ಕೈ ಹಾಕಿದ.

"ಬೇಡ ಅಂತ ಹೇಳಿ...." ತಾಯಮ್ಮ ಪಿಸುದನಿಯಲ್ಲಿ ಹೇಳಿದ್ದು ಅವನಿಗೆ ಕೇಳಿಸಿತ್ತು, ತಿರುಗಿ ನೋಡಿದ.

"ಬಿಡಿ ಅಜ್ಜಿ.... ಅವರೇ ಕೊಯ್ದು ಕೊಡ್ತೀನಿ ಅಂತ ಹೇಳಿದ್ರಲ್ಲ.... ಅವಳು ಸುಮ್ಮನೇ ನಿಂತಳು. ತಾಯಮ್ಮ ಅವನ ಮನೆಯ ಒಳಕ್ಕೆ ನಡೆದಿದ್ದಳು. ರಾಮನಾಥ ಅವನ ಕೈ ತುಂಬುವಷ್ಟು ಹೂಗಳನ್ನು ಕೊಯ್ದು ಅವಳ ಮಡಿಲಿಗೆ ಹಾಕಿದ. ಅವಳು ಕಷ್ಟದಿಂದ ಬಾಗಿ ಕೆಳಗೆ ಬಿದ್ದಿದ್ದ ಹೂಗಳನ್ನು ಆರಿಸಿಕೊಂಡಳು.

"ಸಾಕೋ.... ಇನ್ನು ಬೇಕೋ....?" ನಗುತ್ತಾ ಕೇಳಿದ.

"ಸಾಕು ಸಾರ್.... ಥ್ಯಾಂಕ್ಸ್...." ಎಂದು ಹೇಳಿ ಅವಳು ಅಲ್ಲೇ ಮೆಟ್ಟಿಲ ಮೇಲೆ ಕುಳಿತು, ಅಜ್ಜೀ....ಅಜ್ಜೀ.... ಎಂದು ಕರೆದಿದ್ದಳು. ತಾಯಮ್ಮ ಒಳಗಿನಿಂದ ವೇಗವಾಗಿ ಬಂದಳು. "ಅಜ್ಜೀ ದಾರ ಇದ್ದರೆ ಕೊಡಿ.... ಹೂ ಕಟ್ತೀನಿ" ಎಂದಳು.

"ಸಾಕು, ಮನೆಗ್ಹೋಗೇ.... ನಿಧಾನವಾಗಿ ಕಟ್ಟಿ ಮುಡ್ಕೋ.... ಅವಾಂತರವೇನು?"

"ಯಾಕೆ ತಾಯಮ್ಮ ರೇಗ್ತೀರಿ? ದಾರಾನ ತಂದ್ಕೊಡಿ" ಎನ್ನುತ್ತಾ ರಾಮನಾಥ ಒಳಗೆ ಹೋಗಿದ್ದ.

"ಸಾರ್, ಒಳ್ಳೆಯವರು, ನೀವು ಸುಮ್ನೆ ಏನೇನೋ ಹೇಳ್ತೀರಿ" ಎಂದು ಅವಳು ಹೇಳಿದ್ದು ಕೇಳಿಸಿತ್ತು.

"ನಾನು ಒಳ್ಳೆಯವನೋ ಕೆಟ್ಟವನೋ ನಂಗೆ ಗೊತ್ತಿಲ್ಲ. ಆದರೆ ತಾಯಮ್ಮ ಯಾಕೆ ಆ ಹುಡುಗೀನ ಹೆದರಿಸ್ತಾರೆ ಅಂತಂದುಕೊಂಡ. ತಾಯಮ್ಮ ಅವಳನ್ನು ಎಬ್ಬಿಸಿಕೊಂಡು ಮನೆಗೆ ಕರೆದುಕೊಂಡು ಹೋಗಿದ್ದಳು. ಮತ್ತೆ ವಾಪಸ್ಸು ಬಂದು ಅಡಿಗೆ ಮನೆಯ ಕೆಲಸದಲ್ಲಿ ತೊಡಗಿದ್ದಳು.

"ತಾಯಮ್ಮ, ನಿಮ್ಮ ಮೊಮ್ಮಗಳು ಬರ್ತಾಳೆ ಅಂತ ನೀವು ನಂಗೆ ಹೇಳ್ಲೇ ಇಲ್ಲ."

"ನಂಗೂ ಬರ್ತಾಳೆ ಅಂತ ಗೊತ್ತಿರ್ಲಿಲ್ಲ, ಏಕಾಏಕೀ ಕರ್ಕೊಂಡು ಬಂದು

ಬಿಟ್ಟಿದಾನೆ ಇವಳ ಗಂಡ ....ಅಜ್ಜೀನ ನೋಡ್ಬೇಕು ಅಂತ ಅಂದ್ಲಂತೆ"

"ಹೋಗ್ಲಿ ಬಿಡಿ ಏನಾಯ್ತೀಗ? ...."

"ಇಲ್ಲಿ ನಾನು ಇರೋದು ಅಡಿಗೆಯವಳಾಗಿ.... ನಿಮಗೆ ತೊಂದರೆ ಆಗುಲ್ವಾ?"

"ತೊಂದ್ರೆ ಏನ್ಬಂತು? ನಾನೇನಂದೆ ಈಗ?"

"ನೀವು ಏನೂ ಅನ್ನಲ್ಲ. ಒಳ್ಳೆಯವರೇ ಆದರೆ ನಮ್ಮ ಇತಿ ಮಿತಿಯಲ್ಲಿ ನಾವು ಇರಬೇಡ್ವಾ ಸಾರ್.... ಹೇಳಿದ್ದಿದ್ರೆ ನಾನೇ ಒಂದು ದಿನದ ಮಟ್ಟಿಗೆ ರಜ ಹಾಕಿ ನೋಡ್ಕೊಂಡು ಬರ್ತಿದ್ದೆ."

"ಪರವಾಗಿಲ್ಲ ಬಿಡಿ. ನೀವ್ಯಾಕೆ ಇಷ್ಟು ಬೇಸರ ಮಾಡ್ಕೊಂಡಿದೀರೋ?"

"ನನ್ನ ಕಷ್ಟ ಯಾರಿಗೂ ಅರ್ಥವಾಗುಲ್ಲ ಸಾರ್.... ಈ ಹುಡುಗಿ ಗರ್ಭಿಣಿ.... ಮೆಲ್ಲಗೆ ಬಾಣಂತನಕ್ಕೆ ಕರ್ಕೊಂಡು ಬಂದು ಬಿಡಕ್ಕೆ ಇವೆಲ್ಲಾ ನೆವ. ನಾನು ಆರಾಮವಾಗಿ ಕಾಲ ಕಳೆದ್ಕೊಂಡಿದೀನಿ ಅಂತ ಅವರೆಲ್ಲಾ ಅದ್ಕೊಂಡಿದಾರೆ...."

"ಹೇಗೋ ಆಗುತ್ತೆ ಬಿಡಿ.... ನೀವು ಹಿರಿಯೋರು, ನಿಮಗೆ ಅನುಭವವಿದೆ ಅಂತ...."

"ಇಲ್ಲಾ ಸಾರ್.... ನಿಮಗೆ ಕಷ್ಟ ಆಗುತ್ತದೆ, ನನಗೆ ಇಲ್ಲಿ ಸಹಾಯಕರು ಯಾರೂ ಇಲ್ಲ.... ಎಲ್ಲಾ ತೊಂದರೇನೆ...."

"ನಿಮಗೆ ಹಣಕಾಸಿನ ತೊಂದರೆ ಇದ್ದರೆ ನಂಗೆ ಹೇಳಿ ತಾಯಮ್ಮ.... ಹಾಗೇ ಇನ್ನೂ ಒಬ್ಬರು ಕೆಲಸದವರನ್ನು ಇಟ್ಕೊಂಡ್ರಾಯ್ತು.... ಎರಡು ಮೂರು ತಿಂಗಳಿನ ಮಾತು ತಾನೇ...."

"ನೋಡೋಣ ಆ ಬಗ್ಗೆ ಮಾತುಗಳು ಇನ್ನೂ ಬಂದಿಲ್ಲ, ನಾನಾಗಿಯೇ ಖಂಡಿತಾ ಕರೆದು ಮೈ ಮೇಲೆ ಎಳೆದುಕೊಳ್ಳಲ್ಲ." ತಾಯಮ್ಮ ಖಡಾ ಖಂಡಿತವಾಗಿ ಹೇಳಿದಾಗ ಅವನು ಸುಮ್ಮನಾಗಿದ್ದ.... ಹೊರಕ್ಕೆ ಬಂದು ನೋಡಿದ. ಅಹಲ್ಯಾ ಹೊರಟು ಹೋಗಿದ್ದಳು, ಮುಂಬಾಗಿಲನ್ನು ಹಾಕಿ, ಸ್ನಾನದ ಮನೆಗೆ ಬಂದ.

* * *

ರಾಮನಾಥ ತಂದೆ ತಾಯಿಗೆ ಮೂರನೇ ಮಗ. ವಿದ್ಯಾಭ್ಯಾಸಲ್ಲಿ ಜಾಣನಾಗಿದ್ದ ವನು, ತಂದೆ ತಾಯಿಗಳ ಮಾತನ್ನು ಮೀರಿ ವಿದೇಶಕ್ಕೆ ಹೋಗಿ ಕೆಲಸಕ್ಕೆ ಸೇರಿಕೊಂಡಿದ್ದ. ಅಲ್ಲಿ ಪರಿಚಯವಾದವಳು ಎಲಿಸಾ, ನೋಡಲು ಚೆನ್ನಾಗಿದ್ದಳು. ಇವನೂ ಅವಳನ್ನು ಮೆಚ್ಚಿಕೊಂಡಿದ್ದ.... ಅವಳೊಡನೆ ಓಡಾಡುವಾಗ ಒಮ್ಮೆ ಕೇಳಿದ್ದ, "ನನ್ನನ್ನ ಮದುವೆಯಾಗ್ತೀರಾ?" ಅಂತ. ಅವಳು ನಕ್ಕು ಬಿಟ್ಟಿದ್ದಳು.

"ತನಗೆ ಮದುವೆಯಾಗಿ ಒಂದು ಮಗು ಇದೆಯಂತಲೂ, ತಾನು ಡೈವೋರ್ಸಿ ಎಂದೂ ತಿಳಿಸಿದ್ದಳು. ಇವನಿಗೆ ನಿರಾಸೆಯಾಗಿತ್ತು. ಅವಳೊಡನೆಯ ಸ್ನೇಹವನ್ನು

ಮುಂದುವರೆಸಲು ಇಷ್ಟವಾಗಲಿಲ್ಲ.

ನಿಂಗೆ ಬೇರೆ ಗರ್ಲ್‌ಫ್ರೆಂಡ್ ಸಿಕ್ಕಿದಾಳಾ ಅಂತ ಅವಳು ಕೇಳಿದಾಗ ಇಲ್ಲ ಎಂದಿದ್ದ. ಇಲ್ಲಿ ಫ್ರೀಯಾಗಿ ಯಾರು ಬೇಕಾದ್ರೂ ಯಾರ ಜತೆಯಲ್ಲಾದ್ರೂ ಫ್ರೆಂಡ್‌ಶಿಪ್ ಇಟ್ಕೋಬಹುದು. ನಿಂಗ್ಯಾಕೆ ಸಂಕೋಚ? ಎಂದು ಚುಡಾಯಿಸಿದ್ದಳು. ಇವನು ಒಂದೆರಡು ಬಾರಿ ಅವಳ ಸಂಗವನ್ನು ಮಾಡಿದ್ದ.... ಆದರೆ ಏನೋ ಅತೃಪ್ತಿ ಅವನನ್ನು ಕಾಡುತ್ತಿತ್ತು. ತಾನು ಮದುವೆಯಾಗಿ ಸಂಸಾರವನ್ನು ಪ್ರಾರಂಭಿಸಬೇಕೆಂದು ಆಸೆಯಿಂದ ಇಂಡಿಯಾಕ್ಕೆ ವಾಪಸ್ಸಾಗಿದ್ದ.

ಅಣ್ಣಂದಿರು ಮದುವೆಯಾಗಿರಲಿಲ್ಲ. ಅವರ ಮದುವೆಯಾಗದೇ ತಾನು ಮದುವೆಯಾಗುವಂತಿಲ್ಲವೆಂದು ತಾಯಿ ಹೇಳಿದ್ದಳು. ಅವನಿಗೆ ತಾಯಿಯ ಮೇಲೆ ಅಸಮಾಧಾನ ಉಂಟಾಗಿತ್ತು. ಅಣ್ಣಂದಿರು ಗೇಲಿ ಮಾಡಿದ್ದರು.

"ವಿದೇಶದಲ್ಲಿ ಯಾರೋ ಬಿಳಿ ಹುಡುಗೀನ ನೋಡ್ಕೊಂಡಿದಾನೆ. ಅದಕ್ಕೇ ಇವನಿಗೆ ಮದುವೆಗೆ ಅವಸರ" ಅಂತ. ತಾಯಿ ಕಣ್ಣೀರು ಹಾಕಿದ್ದಳು. ಇವನಿಗೆ ಅಸಹ್ಯವೆನಿಸಿತ್ತು. ಯಾರಿಗೂ ತಿಳಿಸದೇ ಮತ್ತೆ ವಿದೇಶಕ್ಕೆ ಹಾರಿದ್ದ. ಎಲಿಸಾ ಮರು ಮದುವೆಯಾಗಿದ್ದಳು. ಇವನು ಅವಳನ್ನು ಬೈದ.

"ನನಗೆ ಒಂದ್ಮಾತು ಹೇಳಿದ್ದರೆ ನಾನೇ ನಿನ್ನನ್ನು ಮದುವೆಯಾಗ್ತಿದ್ದೆ" ಅಂತಂದ. ಅವಳು ಉತ್ತರಿಸಲಿಲ್ಲ. "ನೀನು ಮೋಸಗಾತಿ" ಅಂತ ಬೈದ. ಆ ನಂತರ ಎಷ್ಟೋ ದಿನಗಳ ನಂತರ ತಿಳಿಯಿತು. ಅವಳು ತನ್ನ ಮೊದಲ ಗಂಡನನ್ನೇ ಮರು ಮದುವೆ ಯಾಗಿದ್ದಳು. ಇವನು ಫೋನಿನಲ್ಲಿ ಕಂಗ್ರಾಟ್ಸ್ ಹೇಳಿದ್ದ, ಅವಳು ಬೇರೆ ಕೆಲಸಕ್ಕೆ ಸೇರಿಕೊಂಡಿದ್ದಳು. ಆ ನಂತರ ಅವನು ಕೆಲವಾರು ಗರ್ಲ್‌ಫ್ರೆಂಡ್‌ಗಳೊಂದಿಗೆ ಸ್ನೇಹವನ್ನಿಟ್ಟುಕೊಂಡಿದ್ದ. ಆದರೆ ಯಾರೂ ಎಲಿಸಾಳಂತೆ ಅಲ್ಲ ಎಂದೇ ಅನಿಸುತ್ತಿತ್ತು. ಒಂದೆರಡು ಬಾರಿ ಫೋನು ಮಾಡಿ ಅವಳೊಡನೆ ಮಾತನಾಡಿದ್ದ. ಒಮ್ಮೆ ಧೈರ್ಯಮಾಡಿ, ತನಗೆ ಅವಳು ಬೇಕು ಎಂದೂ ಕರೆದಿದ್ದ, ಅವಳು ನಿರಾಕರಿಸಿದ್ದಳು.

"ನನ್ನ ಗಂಡನಿಗೆ ಗೊತ್ತಾದರೆ ಕೊಂದು ಹಾಕಿ ಬಿಡ್ತಾನೆ" ಅಂತ ಅಂದಿದ್ದಳು.

ಆದರೂ ಇವನು ಮತ್ತೆ ಮತ್ತೆ ಫೋನು ಮಾಡಿದಾಗ, ಅವಳು ಒಂದು ಸಾರಿ ಇವನ ಅಪಾರ್ಟ್‌ಮೆಂಟ್‌ಗೆ ಬಂದಿದ್ದಳು. ಇವನು ಖುಷಿಯಿಂದ ಅವಳ ಕೈ ಹಿಡಿದು, ಅವಳನ್ನು ತನ್ನ ಬೆಡ್‌ರೂಮಿಗೆ ಕರೆದೊಯ್ದ, ಅವಳು ಕೊಸರಿಕೊಂಡಳು.

ಸಾರಿ, ರಾಮನಾಥ್, ನಾನೀಗ ಪ್ರೆಗ್ನಂಟ್ ಆಗಿದೀನಿ, ಡಾಕ್ಟರ್ ಕೇರ್ ಫುಲ್ ಆಗಿರೋಕೆ ಹೇಳಿದಾರೆ ಅಂತಂದಳು. ಅವನು ಹಿಂದೆ ಸರಿದ.

"ಮಗು ಯಾರದ್ದು?" ತಡೆ ತಡೆದು ಕೇಳಿದ.

"ಅಫ್‌ಕೋರ್ಸ್ ನನ್ನ ಗಂಡಂದು, ನಿಂದಂತೂ ಅಲ್ಲ" ಎಂದಳು ನಗುತ್ತಾ.

"ಸರಿ, ನೀನಿನ್ನು ಹೋಗಬಹುದು" ಎಂದಿದ್ದ ಒರಟಾಗಿ.

"ಕೋಪ ಯಾಕೆ ರಾಮನಾಥ್" ಅವಳು ಶಾಂತವಾಗಿ ಕೇಳಿದಳು.

"ನನ್ನ ಆಸೆಗಳಿಗೆ ತಣ್ಣೀರು ಎರಚಿಬಿಟ್ಟೆ.... ಹೊರಟು ಹೋಗು." ಎಂದಿದ್ದ.

"ಇಂಡಿಯಾಕ್ಕೆ ಹೋಗು.... ನಿನಗೆ ಸರಿ ಹೊಂದುವಂಥ ಹೆಣ್ಣನ್ನು ಮದುವೆಯಾಗಿ ಸುಖವಾಗಿರು. ಐ ವಿಶ್ ಯು ಆಲ್ ದಿ ಹ್ಯಾಪಿನೆಸ್" ಎಂದು ಹೇಳಿ ಅವಳು ಹೊರಟು ಹೋಗಿದ್ದಳು. ಇವನು ಎಲ್ಲವನ್ನೂ ಕಳೆದುಕೊಂಡವನಂತೆ ರೋಧಿಸಿದ್ದ. ಅವಳನ್ನು ತಾನು ಗಾಢವಾಗಿ ಪ್ರೀತಿಸುತ್ತಿದ್ದೇನೆಂದು ಅರಿವಾಗಿತ್ತು. ಅವಳನ್ನು ದ್ವೇಷಿಸಲು ಇವನಿಂದ ಆಗಲಿಲ್ಲ...."

ಸ್ನಾನ ಮಾಡುತ್ತಿದ್ದವನಿಗೆ, ಎಲಿಸಾ ನೆನೆಪಿಗೆ ಬಂದಳು. ಅಹಲ್ಯಾ ಎಲಿಸಾಳನ್ನೇ ಹೋಲುತ್ತಾಳೆಂದು ಅನ್ನಿಸಿತು.... ಎಲಿಸಾ ಎರಡು ಮಕ್ಕಳ ತಾಯಿ. ಈ ಅಹಲ್ಯಾ ತಾಯಿಯಾಗಲಿದ್ದಾಳೆ.... ಇಬ್ಬರೂ ತನ್ನವರಲ್ಲ.... ಆ ಮಕ್ಕಳು ನನ್ನವಲ್ಲ. .... ಯಾಕೋ ಏನೋ. ಎಲ್ಲವೂ ಖಾಲಿ ಖಾಲಿ ಎನಿಸಿತು.

ಅಣ್ಣಂದಿರು ಮದುವೆಯಾಗಿದ್ದರು. ತಾಯಿ ಇವನಿಗಾಗಿ ಹೆಣ್ಣುಗಳನ್ನು ನೋಡಿದಾಗ, ಇವನು ಆ ಮನೆಯಿಂದ ಹೊರ ಬಂದಿದ್ದನು. ನನಗೆ ಬೇಕಾದ ಹೆಣ್ಣನ್ನು ನಾನೇ ಆರಿಸಿಕೊಳ್ತೀನಿ" ಎಂದು ಹೇಳಿಬಿಟ್ಟಿದ್ದ. ಆದರೆ ಅವನಿಗೆ ಮೆಚ್ಚುಗೆಯಾಗುವಂಥ ಹುಡುಗಿ ಇದುವರೆಗೂ ಕಣ್ಣಿಗೆ ಬಿದ್ದಿರಲಿಲ್ಲ.

ಈ ದಿನ ಅಹಲ್ಯಾ ಕಣ್ಣಿಗೆ ಬಿದ್ದಳು. ಆದರೆ ಅವಳು ಬೇರೊಬ್ಬನ ಮಡದಿ ಅವನ ಮಗುವಿಗೆ ತಾಯಿಯಾಗಲಿದ್ದಾಳೆ.... ಅವಳು ನನ್ನವಳಲ್ಲ, ನನ್ನವಳಾಗಲು ಸಾಧ್ಯವೂ ಇಲ್ಲ. ಮನಸ್ಸು ಖತಿಗೊಂಡಿತು. ತಲೆಯ ಮೇಲೆ ತಣ್ಣೀರನ್ನು ಸುರಿದುಕೊಂಡ.

* * *

ವಾಕಿಂಗ್ ಮುಗಿಸಿ ಬಂದವನು, ಮಲ್ಲಿಗೆ ಹೂಗಳನ್ನು ಅಹಲ್ಯಾಳಿಗಾಗಿ ಕೊಯ್ದು ಇಟ್ಟಿರುತ್ತಿದ್ದ. ಅವಳು ಹೂಗಳನ್ನು ಕಟ್ಟುವುದ್ನು ದೂರದಿಂದಲೇ ನೋಡುತ್ತಿದ್ದ. ಒಮ್ಮೊಮ್ಮೆ ತನ್ನ ಬಗ್ಗೆಯೇ ಕಸಿವಿಸಿ ಉಂಟಾಗುತ್ತಿತ್ತು. ತಾನೇಕೆ ಈ ಯುವತಿಯ ಬಗ್ಗೆ ಆಕರ್ಷಿತನಾಗುತ್ತಿದ್ದೇನೆ, ತಾಯಮ್ಮ ನೋಡಿದರೆ ಏನಂದು ಕೊಳ್ಳಬಹುದು ಎಂದೂ ಅನ್ನಿಸುತ್ತಿತ್ತು. ಆದರೂ, ಅವಳನ್ನು ಕದ್ದು ಕದ್ದು ನೋಡುವುದರಲ್ಲಿ ಏನೋ ಆನಂದ ಸಿಗುತ್ತಿತ್ತು. ಅವಳಿಗೆ ತಾನು ಏನಾದರೂ ಉಡುಗೊರೆಯನ್ನು ಕೊಡ ಬೇಕು ಎಂದು ಪದೇ ಪದೇ ಅನ್ನಿಸುತ್ತಿತ್ತು. ಅವಳು ವಾಪಸ್ಸು ಹೊರಡುವಾಗ ಕೊಡ್ತೀನಿ ಅಂತ ಅಂದುಕೊಂಡಿದ್ದ.

ತಾನೇನು ಕೊಡಬಹುದು? ಸೀರೆ, ಒಡವೆ, ಹಣ....? ಯಾವುದನ್ನೇ ಕೊಟ್ಟರೂ

ಒಂದು ತರಹ ವಿಚಿತ್ರ ಎನ್ನಿಸುತ್ತದೆ, ತನಗೆ ಪರಿಚಿತಳಲ್ಲ.... ಹತ್ತಿರದ ಸಂಬಂಧಿಯೂ ಅಲ್ಲ, ಅವರ ಬಡತನವನ್ನು ಎತ್ತಿ ತೋರಿಸಿದಂತಾಗುತ್ತದೆ. ಅವರು ನಿರಾಕರಿಸಬಹುದು. .... ನನ್ನ ಬಗ್ಗೆ ಅನುಮಾನ ಮೂಡಬಹುದು.... ಏನು ಮಾಡಿದರೆ, ನನ್ನ ಹಂಬಲ ತೀರುತ್ತದೆ? ಅವಳಿಗೆ ಸಂತೋಷವಾಗುತ್ತದೆ. ಮೊದಲು ಅವಳೊಡನೆ ಆಗ ಈಗ ಮಾತನಾಡಿ, ಅವಳ ಮನಸ್ನಲ್ಲಿ ಏನಿದೆ ಅಂತ ತಿಳ್ಕೋಬೇಕು.... ನನ್ನ ಮನದಲ್ಲಿ ಏನಿದೆ ಅಂತ ತಿಳಿಸಬೇಕು, ಇದು ಸಾಧ್ಯವೇ ಅಂತ ಯೋಚಿಸುತ್ತಿದ್ದ..... ಆದರೆ ಎಷ್ಟಾಗಲೀ ಪರರ ಮನೆಯ ಹೆಣ್ಣು ತನ್ನ ಭಾವನೆಗಳು ಬಿತ್ತರಗೊಂಡರೆ, ತಾನು ಕೆಟ್ಟವನೆಂದೆನಿಸಿಕೊಳ್ಳುವುದು ಖಚಿತ ಎಂದು ವಿವೇಕವೂ ಸಾರುತ್ತಿತ್ತು.

ತನ್ನ ತಂದೆ ತಾಯಿಯರ ಮೇಲೆ, ಅಣ್ಣಂದಿರ ಮೇಲೆ ಸಿಟ್ಟು ಮರುಕಳಿಸಿತು. ನನ್ನ ಭಾವನೆಗಳನ್ನು ಅರಿಯದವರನ್ನು ನಮ್ಮವರೆಂದು ಹೇಗೆ ಹೇಳಿಕೊಳ್ಳುವುದು.... ಎಲಿಸಾಳನ್ನು ತಾನು ಪ್ರೀತಿಸಿದ್ದೆ. ತನ್ನ ಪ್ರೀತಿಗೆ ಬೆಲೆ ಕೊಡದವಳನ್ನು ಸ್ನೇಹಿತೆ ಎಂದು ಹೇಗೆ ಭಾವಿಸುವುದು.... ನನ್ನ ಈ ಒಂಟಿತನಕ್ಕೆ ಇವರೆಲ್ಲರೂ ಕಾರಣರೇ.... ಹೆಂಗಸರ ಸಹವಾಸ ತನಗೆ ತಿಳಿಯದ್ದೇನಲ್ಲ. ಆದರೆ ಅವರ್‍ಯಾರೂ ಪವಿತ್ರರಾಗಿರಲಿಲ್ಲ.... ಈಗ ನಾನೂ ಅಪವಿತ್ರನೇ.... ಆದರೆ ಈಗ ಅವರುಗಳ ಬಗ್ಗೆ ನನಗೆ ಅಸಹ್ಯ ಮೂಡುತ್ತಿದೆ. ಹಾಗೇ ನನ್ನ ಬಗ್ಗೆಯೇ ನನಗೆ ಅಸಹ್ಯ ಮೂಡುತ್ತಿದೆ. ಆದರೂ ಮನದ ಹಂಬಲವೇ ಬೇರೆಯಾಗಿದೆ. ತಾನೂ ಎಲ್ಲರಂತೆ ಬದುಕಿ ಬಾಳಬೇಕು. ಸಂಸಾರ ಮಾಡಬೇಕು. .... ನನ್ನದೇ ಆದ ಹೆಂಡತಿ ಮಕ್ಕಳಿರಬೇಕು. ಈಗಲೂ ತನಗೆ ಹೆಣ್ಣು ಸಿಗಬಹುದು. ಆದರೆ ಈಗ ನನ್ನ ತಾಯಿ ಬದುಕಿಲ್ಲ. ಅಣ್ಣ ಅತ್ತಿಗೆಯವರಿಗೆ ನನ್ನ ವಿಷಯವೇ ಬೇಕಿಲ್ಲ. ಅಕ್ಕ ತಂಗಿಯರಿಲ್ಲ. ಈಗ ನನ್ನವಳು ಅಂತಂದ್ರೆ ಈ ತಾಯಮ್ಮ ಒಬ್ಬಳೇ....ಆದರೆ ನನ್ನ ಮನದ ತುಮುಲಗಳನ್ನೆಲ್ಲಾ ಹೇಳಿ ಕೊಳ್ಳುವಷ್ಟು ಆಪ್ತಳಲ್ಲ.....

"ಸಾರ್....ಅಡಿಗೆ ಆಗಿದೆ.... ನಾನು ಸ್ವಲ್ಪ ಡಾಕ್ಟರ ಷಾಪಿಗೆ ಹೋಗಿ ಬರ್ತೀನಿ. ಬರೋದು ಎಷ್ಟು ಹೊತ್ತಾಗುತ್ತೋ.... ಬಡಿಸಿ ಬಿಡ್ಲಾ?"

"ಈಗ್ಲೇ ಊಟ ಬೇಡ.... ಆಮೇಲೆ ಮಾಡ್ತೀವಿ, ಯಾಕೆ ಹುಷಾರಿಲ್ವಾ ತಾಯಮ್ಮ.... ಏನಾಯ್ತು?"

"ನಂಗಲ್ಲ ಸಾರ್.... ನನ್ನ ಮೊಮ್ಮಗಳು.... ಮಲಗಿ ಬಿಟ್ಟಿದ್ದಾಳೆ. ನೆನ್ನೆಯಿಂದ ಜ್ವರ, ಕಷಾಯ ಮಾಡಿ ಕುಡಿಸ್ದೆ. ಕಡಿಮೆ ಆಗೇ ಇಲ್ಲ...."

"ಜ್ವರಾನಾ? ಜ್ವರ ಯಾಕ್ಬಂತು? ...."

"ಬೈಡೇಡಿ ಸಾರ್, ನಿಮಗೆ ತಿಳೀದ ಹಾಗೆ ಫ್ರಿಜ್‌ನಲ್ಲಿದ್ದ ನೀರನ್ನು ಆಸೆ ಪಟ್ಟಳು ಅಂತ ಕೊಟ್ಬಿಟ್ಟೆ. .... ಗಂಟಲು ನೋವು ಬಂತು. ಹಿಂದೆಯೇ ಜ್ವರ....

ಅವಳ ಗಂಡನ ಮನೆಯವರ್ಗೆ ತಿಳಿದ್ರೆ ಬೈಯಲ್ವಾ?"

"ಗಂಟಲ್ನೋವು, ಜ್ವರಕ್ಕೆಲ್ಲಾ ಯಾರಾದ್ರೂ ಹೆದರ್ತಾರಾ ತಾಯಮ್ಮ? .... ಅಭ್ಯಾಸವಿಲ್ಲದೆ ತಣ್ಣೀರನ್ನು ಕುಡಿದದ್ದಕ್ಕೆ ಆಗಿರಬಹುದು...."

"ಅದಕ್ಕಲ್ಲ ಸಾರ್ ಭಯ.... ಇವಳು ಗರ್ಭಿಣಿ.... ಹೊಟ್ಟೇಲಿರೋ ಮಗೀಗೆ ಏನಾದ್ರೂ ಆದರೆ, ಅವರುಗಳು ನನ್ನನ್ನು ಸುಮ್ಮನೆ ಬಿಡ್ತಾರಾ?"

"ಸರಿ, ಲೇಡಿ ಡಾಕ್ಟರ್ ಹತ್ರ ಕರ್ಕೊಂಡ್ಹೋಗಿ.... ದುಡ್ಡು ಏನಾದ್ರೂ.... ಬೇಕಾಗಿತ್ತಾ? ...."

"ಹೂಂ. ಅವಳು ಸಂಕೋಚದಿಂದ ಮುದುರಿ ನಿಂತಳು. ಅವನು ಕೊಟ್ಟ ಹಣವನ್ನು ತೆಗೆದುಕೊಂಡು ಅವಳು ಹೊರಟು ಹೋಗಿದ್ದಳು.... ಹೆಂಗಸರು ಗಟ್ಟಿ ಅಂತ ಅಮ್ಮ ಹೇಳ್ತಿದ್ಲು.... ತಣ್ಣೀರನ್ನು ಕುಡಿದ್ರೆ ಜ್ವರ ಬರುವಷ್ಟು ಸೂಕ್ಷ್ಮ ಅಂತ ತನಗೆ ಗೊತ್ತಿರಲಿಲ್ಲ ಅಂತ ಅಂದ್ಕೊಂಡ.

ಎರಡು ಮೂರು ದಿನಗಳಾದ್ರೂ ಅವಳಿಗೆ ಜ್ವರ ಕಡಿಮೆ ಆಗದಿದ್ದಾಗ ತಾಯಮ್ಮ ಹೆದರಿದ್ದಳು.

"ಯಾಕೋ ಏನೋ ಜ್ವರ ಬಿಟ್ಟೇ ಇಲ್ಲ. ಯಾರ ದೃಷ್ಟಿ ಬಿತ್ತೋ ಏನೋ. ಚೆನ್ನಾಗಿದ್ದವಳು ಮಲಗಿ ಬಿಟ್ಟಿದ್ದಾಳೆ. ನಂಗೆ ತುಂಬಾ ಆತಂಕವಾಗ್ತಿದೆ. ಊರಿಗೆ ಕರ್ಕೊಂಡ್ಹೋಗಿ ಬಿಟ್ಟು ಬಿಡ್ತೀನಿ. ಅವರುಗಳು ಏನಾದ್ರೂ ಮಾಡ್ಕೊಳ್ಳಲಿ ನಾನೆಲ್ಲಿ ಒದ್ದಾಡ್ಲಿ.?"

"ಹೀಗಂತೀರಲ್ಲ? ತಾಯಮ್ಮ? .... ನಿಮ್ಮದೂ ಜವಾಬ್ದಾರಿ ಇದೆ.... ಸರಿಯಾದ ಡಾಕ್ಟರಿಗೆ ತೋರಿಸಿ.... ಎಷ್ಟೇ ಖರ್ಚಾದ್ರೂ ಪರವಾಗಿಲ್ಲ. ನಾನು ದುಡ್ಡು ಕೊಡ್ತೀನಿ. ಚಿಂತಿಸ್ಬೇಡಿ. ವಾಸಿ ಮಾಡದೇ ಕಳಿಸುವ ಮಾತನ್ನಾಡ್ಬೇಡಿ"

"ಮಂತ್ರ ಹಾಕಿಸೋಣ ಅಂತ.... ಇಲ್ಲೆಲ್ಲೋ ಮಂತ್ರವಾದಿ ಇದಾರಂತೆ. ನೋಡ್ಕೊಂಡು ಬರ್ತೀನಿ.... ಒಬ್ಬಳೇ ಇದಾಳೆ....ಬೇಗ ಬಂದ್ಬಿಡ್ತೀನಿ."

"ಮಂತ್ರ ತಂತ್ರದಿಂದ ವಾಸಿಯಾಗುತ್ತೆ ಅನ್ನೋ ನಂಬಿಕೆ ನನಗಿಲ್ಲ ತಾಯಮ್ಮ. ನಿಮ್ಮ ಮನಸ್ಸಿನ ಸಮಾಧಾನಕ್ಕೋಸ್ಕರ ಬೇಕಾದ್ರೆ ವಿಚಾರಿಸಿ.... ನಿಮ್ಮ ಮಗಳಿಗೆ ಹೇಳಿ ಕಳ್ಸಿ.... ಈಗ್ಲಾದ್ರೂ ಬರ್ಬೇಡ್ವಾ?"

"ಎಲ್ರೂ ಬಂದ್ರೆ ಹೇಗಾಗುತ್ತೆ? .... ಸ್ವಲ್ಪ ಮೇಲಾಗಲೀ, ನಾನೇ ಕರ್ಕೊಂಡ್ಹೋಗಿ ಬಿಟ್ಟು ಬರ್ತೀನಿ. ಇವರುಗಳ ಸಹವಾಸವೇ ಬೇಡ. ತಾಯಮ್ಮ ಎಲ್ಲವನ್ನು ತಪ್ಪಿಸಿ ಕೊಳ್ಳಲು ನೋಡಿದಳು. ಅವಳು ಅತ್ತ ಹೋದ ಕೂಡಲೇ, ರಾಮನಾಥ ಅನುಮಾನಿ ಸುತ್ತಾ ಔಟ್ ಹೌಸ್ ಗೆ ಬಂದ. ಬಾಗಿಲನ್ನು ತಳ್ಳಿ ಒಳಗೆ ಅಡಿ ಇಟ್ಟ, ಅಮ್ಮಾ.... ಅಮ್ಮಾ.... ಎಂದು ಅಹಲ್ಯಾ ನರಳುತ್ತಿರುವುದು ಕೇಳಿಸಿತ್ತು. ಅವಳು ಮಲಗಿದ್ದೆಡೆಗೆ

ನಡೆದ. ನೆಲದ ಮೇಲೆ ಹಾಸಿದ್ದ ಹಾಸಿಗೆಯ ಮೇಲೆ ಮಲಗಿದ್ದವಳ ಬಳಿ ನಿಂತು ಅವಳನ್ನೇ ವೀಕ್ಷಿಸಿದ. ಜ್ವರದ ತಾಪಕ್ಕೆ ಮುಖವೆಲ್ಲಾ ಕೆಂಪಾಗಿತ್ತು. ತುಟಿಗಳು ಒಣಗಿದ್ದವು.... ಬಿಸಿ ಉಸಿರನ್ನು ಬಿಡುತ್ತಿದ್ದಳು.... ಏನನ್ನೋ ಬಡಬಡಿಸುತ್ತಿದ್ದಳು. ಇವನಿಗೆ ಅವಳ ಹಣೆಯ ಮೇಲೆ ಕೈಯಿಡಬೇಕೆನ್ನಿಸಿತು. ನೆಲದ ಮೇಲೆ ಮಂಡಿ ಊರಿ, ಕುಳಿತು ಅವಳ ಹಣೆಗೆ ಕೈಯನ್ನು ತಗುಲಿಸಿದ. ಅವಳು ಕಿಟಾರನೆ ಕಿರುಚಿ ಕೊಂಡಳು. ಅವನು ಹಿಂದಕ್ಕೆ ಹಾರಿ ನಿಂತ. ಅವಳಿಗೆ ಎಚ್ಚರವಾಗಿ ತನ್ನನ್ನೆಲ್ಲಿ ಗುರುತಿಸಿ ಬಿಡುವಳೋ ಎಂದುಕೊಂಡು ಹಾಗೇ ಹಿಂದೆ ಹಿಂದಕ್ಕೆ ನಡೆದು, ಬಾಗಿಲನ್ನು ದಾಟಿ, ಬಾಗಿಲನ್ನು ಮುಂದಕ್ಕೆಳೆದುಕೊಂಡು, ತನ್ನ ಮನೆಗೆ ಬಂದುಬಿಟ್ಟ. ಅವಳು ಕಿರುಚಿದ ಧ್ವನಿ, ಅವನ ಕಿವಿಯಲ್ಲಿ ಮಾರ್ದನಿಗುಟುತ್ತಿತ್ತು. ಯಾಕೆ ಹೀಗೆ ಕಿರುಚಿದಳು! ತನ್ನನ್ನು ಕಂಡಳೇ? ತನ್ನ ಮೇಲೆ ಸಂಶಯ ಬಂದಿತೇ? ಕುಳಿತಲ್ಲೇ ಚಡಪಡಿಸಿದ. ಪದೇ ಪದೇ ತಣ್ಣೀರನ್ನು ಕುಡಿದ. ಆದರೂ ಅವನ ಚಡಪಡಿಕೆ ಕಡಿಮೆ ಆಗಿರಲಿಲ್ಲ.

ತಾಯಮ್ಮ ಒಬ್ಬಳೇ ಬಂದಿದ್ದಳು. ಜೊತೆಯಲ್ಲಿ ಮಂತ್ರ ಹಾಕುವವನು ಇಲ್ಲದುದು ಕಂಡು ನಿರಾಳವಾಗಿತ್ತು. ಅವನು ಏನಂದ ಎಂದು ಕೇಳುವ ಧೈರ್ಯವಾಗಿರಲಿಲ್ಲ. ಮನೆಯೊಳಗೆ ಹೋದ ತಾಯಮ್ಮ ಕ್ಷಣಮಾತ್ರದಲ್ಲಿ ಹಿಂತಿರುಗಿದಳು. ಅವಳು ಭಯದಿಂದ ತಲ್ಲಣಗೊಂಡಿದ್ದಳು. ಮಾತನ್ನಾಡುವ ಸ್ಥಿತಿಯಲ್ಲಿದ್ದಂತೆ ಅನ್ನಿಸಲಿಲ್ಲ. ಇವನಿಗೂ ಭಯ ಆವರಿಸಿತು. "ತಾಯಮ್ಮ .... ಏನಾಯ್ತು? .... ಯಾಕೆ ಹೀಗೆ ಗಾಬರಿಯಾಗಿದೀರಿ? ...." ತಡವರಿಸುತ್ತಾ ಕೇಳಿದ.

"ಅನಾಹುತ ಆಗ್ಹೋಯ್ತು ಸಾರ್ .... ಮಂತ್ರವಾದಿ ಹೇಳಿದ್ದು ನಿಜ ಆಗ್ಹೋಯ್ತು. ಏನ್ಮಾಡ್ಲಿ? ಏನ್ಮಾಡ್ಲಿ?"

"ಏನಾಯ್ತು? ಮಂತ್ರವಾದಿ ಏನ್ಹೇಳ್ದ?"

"ಗರ್ಭ ನಿಲ್ಲುಲ್ಲ, ಬಿದ್ಹೋಗುತ್ತೇ .... ಅಂತಾಂದ. ಹಾಗೇ ಅಗ್ಹೋಗಿದೆ .... ಹೊರಳಾಡ್ತಾ ಇದಾಳೆ. ನೋವಿನಿಂದ ಒದ್ದಾಡ್ತಾ ಇದಾಳೆ. ನಾನೇನು ತಪ್ಪು ಮಾಡಿದ್ದೆ ಶಿವನೇ ...." ತಲೆ ತಲೆ ಚಚ್ಚಿಕೊಂಡಳು.

"ಅಂದರೆ? ಏನ್ಹೇಳ್ತಿದೀರ ತಾಯಮ್ಮ?....ಈಗ್ಲೇ ಆಸ್ಪತ್ರೆಗೆ ಕರ್ಕೊಂಡು ಹೋಗೋಣ .... ನಾನು ಈಗ್ಲೇ ಟ್ಯಾಕ್ಸಿ ತಂದ್ಕೊಡ್ತೀನಿ. ನಿಮ್ಮ ಕಡೆಯವರಿಗೆ ಫೋನು ಮಾಡೋದಾದ್ರೆ ಮಾಡಿ ಅವಳ ಗಂಡನ ಮನೆಗೆ ತಿಳ್ಸಿ ...."

"ಬೇಡ, ಅವರಿಗೆ ತಿಳಿಸೋದು ಬೇಡ .... ನಾನೇ ಏನಾದ್ರೂ ಮಾಡ್ತೀನಿ. ಸೂಲಗಿತ್ತೀನ ಕರ್ಕೊಂಡು ಬರ್ತೀನಿ...."

"ಅವಳ್ಬಂದು ಏನ್ಮಾಡ್ತಾಳೆ? .... ನಾನೇ ಕಾರನ್ನು ಹೊರಕ್ಕೆ ತಗೀತೀನಿ. ಎಬ್ಬಿಸ್ಕೊಂಡ್ಬನ್ನಿ. ಆಸ್ಪತ್ರೆಗೆ ಕರ್ಕೊಂಡು ಹೋಗೋಣ. ಡಾಕ್ಟರು ಎಲ್ಲಾ ಸರಿ ಮಾಡ್ತಾರೆ.

ನೀವು ಅಳ್ಬೇಡಿ" ಅವಳಿಗೆ ಸಮಾಧಾನವನ್ನು ಹೇಳಿ, ಷೆಡ್‌ನಿಂದ ಕಾರನ್ನು ಹೊರಕ್ಕೆ ತಂದ .... ತಾಯಮ್ಮ ಪಕ್ಕದಲ್ಲೆಲ್ಲೋ ಕೆಲಸ ಮಾಡುತ್ತಿದ್ದ ಹೆಣ್ಣಾಳುಗಳನ್ನು ಕರೆತಂದು ಅವರ ಸಹಾಯದಿಂದ ಅಹಲ್ಯಾಳನ್ನು ಕಾರಿನಲ್ಲಿ ಮಲಗಿಸಿದಳು. ರಾಮನಾಥ ಕಾರನ್ನು ಸಮೀಪದ ಆಸ್ಪತ್ರೆಯ ಕಡೆಗೆ ಓಡಿಸಿದ. ತಕ್ಷಣವೇ ಅವಳನ್ನು ಅಲ್ಲಿ ಅಡ್ಮಿಟ್ ಮಾಡಿಸಿದರು. ತಾಯಮ್ಮ ಕುಳಿತಲ್ಲೇ ಅನೇಕ ದೇವರಿಗೆ ಹರಕೆ ಹೊತ್ತಳು. ರಾಮನಾಥ ಗಲಿಬಿಲಿಗೊಂಡಿದ್ದ. ಅಹಲ್ಯೆಯ ಬಗ್ಗೆ ಮರುಕ ಹುಟ್ಟಿತ್ತು. ಏಕೆ ಹೀಗಾಯ್ತು .... ಎರಡು ಮೂರು ದಿನಗಳ ಕೆಳಗೆ ಚೆನ್ನಾಗಿಯೇ ಇದ್ದಳಲ್ಲ. ತಾಯಮ್ಮ ಹೇಳಿದ್ದು ನಿಜವೇ? ನನ್ನ ದೃಷ್ಟಿಯೇ ತಾಗಿರಬಹುದೇ?" ಕೈ ಕೈ ಹೊಸಕಿಕೊಂಡ.

ಆ ರಾತ್ರಿ ಕಳೆಯಿತು. ಡಾಕ್ಟರು, ಗರ್ಭಾಪಾತವಾಗಿರುವುದನ್ನು ಖಚಿತ ಪಡಿಸಿದ್ದರು. ಜ್ವರ ಬಂದುದಕ್ಕೆ ಹೀಗಾಗಿದೆ. ಸಣ್ಣ ಪ್ರಮಾಣದಲ್ಲಿ ದಢಾರವೂ ಕಂಡಿದೆ .... ಗರ್ಭಿಣಿಗೆ ದಢಾರ ಅಥವಾ ಸಿಡುಬು ಎದ್ದರೆ, ಮಗುವಿನ ಮೇಲೆ ಪರಿಣಾಮ ಬೀರುತ್ತದೆ. ಅಬಾರ್ಷನ್ ಆದುದು ಒಳ್ಳೇದೇ ಆಯ್ತು.... ಇಲ್ಲದಿದ್ದರೂ, ನಾವು ಆ ಸಲಹೆಯನ್ನೇ ಕೊಡುತ್ತಿದ್ದೆವು ಎಂದಳು. ತಾಯಮ್ಮ ಕುಸಿದು ಕುಳಿತಳು.

ಇಲ್ಲಿಯೇ ಒಂದೆರಡು ದಿನಗಳು ಇರಲಿ. ಪ್ರತ್ಯೇಕವಾದ ವಾರ್ಡಿನಲ್ಲಿ ಮಲಗಿಸ್ತೀವಿ .... ಇನ್ನೇನು ಆತಂಕವಿಲ್ಲ ಎಂದು ಡಾಕ್ಟರು ಹೇಳಿದ್ದರೂ ತಾಯಮ್ಮ ಗೋಳೋ ಎಂದು ಅತ್ತಳು. ರಾಮನಾಥನೇ ಅವಳನ್ನು ಸಮಾಧಾನಗೊಳಿಸಬೇಕಾಯಿತು. ತಾಯಮ್ಮನಿಂದ ಫೋನು ನಂಬರನ್ನು ಪಡೆದು, ಆಕೆಯ ಮಗಳಿಗೆ ಫೋನಿನ ಮುಖಾಂತರ ವಿಷಯವನ್ನು ತಿಳಿಸಿದ. ಮೂರ್ನ್ನಾಲ್ಕು ಗಂಟೆಗಳಲ್ಲಿ ಮಗಳು ಬಂದಿದ್ದಳು. ತಾಯಿ ಮಗಳಲ್ಲಿ ಭಾರೀ ವಾಗ್ವಾದವೇ ನಡೆಯಿತು. ರಾಮನಾಥ ಅಸಹನೆಯಿಂದ ಮುಖ ತಿರುಗಿಸಿದ್ದ.

"ಇನ್ನೆರಡು ದಿನಕ್ಕೆ ಡಿಸ್ಚಾರ್ಜ್ ಮಾಡಿಸ್ಕೊಂಡು, ನಿನ್ನ ಮಗಳನ್ನು ನಿನ್ನ ಮನೆಗೆ ಕರ್ಕೊಂಡ್ಹೋಗು .... ನನಗೆಲ್ಲಿಯ ಜವಾಬ್ದಾರಿ? ...." ಎಂದಿದ್ದಳು.

"ಬೀಗರಿಗೆ ಏನು ಉತ್ತರ ಕೊಡ್ಲಿ? ....ಅಲ್ಲ ಕಣಮ್ಮಾ .... ಜ್ವರ ಬಂದ್ಕೂಡ್ಲೆ ಡಾಕ್ಟರ ಹತ್ರ ಕರ್ಕೊಂಡು ಬರಬಾರದಾಗಿತ್ತಾ? .... ಹೀಗಾಗ್ತಿರ್ಲಿಲ್ಲ" ಮಗಳೂ ಆಡಿದ್ದಳು.

"ಒಟ್ನಲ್ಲಿ ನನ್ನ ಹಣೇ ಬರಹ ಚೆನ್ನಾಗಿಲ್ಲ. ನಿಮ್ಮನ್ನೆಲ್ಲಾ ಹೆತ್ತು ಬೆಳೆಸಲಿಲ್ಲವಾ? .... ಅಜ್ಜಿಯ ಮನೆಗ್ಹೋಗು ಅಂತ ಕಳಿಸ್ದೋಳು ನೀನೇ .... ಏನಾದ್ರೂ ಹೇಳ್ಕೋ ಉಗಿದ್ರೆ ಉಗಿಸ್ಕೋ ...."

"ಸಾಕ್ಮಾಡಿ. ಮುಂದೇನು ಮಾಡ್ಬೇಕು ಅಂತ ಯೋಚಿಸಿ .... ನೀವು ನೀವೇ ಕಿತ್ತಾಡ್ತೀರಲ್ಲ" ರಾಮನಾಥ ಅಸಹನೆಯಿಂದ ನುಡಿದಿದ್ದ, ಇಬ್ಬರೂ ಸುಮ್ಮನಾಗಿದ್ದರು. ಆಸ್ಪತ್ರೆಯ ಖರ್ಚು ಅದೇನಾಗುತ್ತೋ .... ಎಲ್ಲವನ್ನೂ ನಾನು ಕೊಡ್ತೀನಿ ....

ಅಹಲ್ಯೆಯ ಗಂಡನ ಮನೆಯವರನ್ನು ಕರೆಸಿ, ನಾನು ಅವರ್ಹತ್ರ ಮಾತಾಡ್ತೀನಿ ...."

"ಅವರ್‍ಯಾರೂ ಊರಲಿಲ್ಲ. ಎಲ್ಲರೂ ತೀರ್ಥಯಾತ್ರೆಗೆ ಹೋಗಿದಾರೆ ...."

"ತೀರ್ಥಯಾತ್ರೆಗಾ! ಈಗ ಅರ್ಜೆಂಟೇನಿತ್ತು? ಅಂತಂದುಕೊಂಡ...."

"ಅವರು ಎಂದಿಗೆ ಬರ್ತಾರೋ ....ಏನೇನು ಆಡ್ತಾರೋ .... ಪಾಪ, ಅಹಲ್ಯೆಗೆ ಈ ಸ್ಥಿತಿ ಬರಬಾರದಾಗಿತ್ತು" ಅಂತೆನ್ನಿಸಿತು. ಡಾಕ್ಟರ ಹತ್ರ ಮಾತನ್ನಾಡಿ ಬರ್ತೀನಿ ಎಂದು ಹೇಳಿ ಹೋಗಿದ್ದ. ತನ್ನ ಪರಿಚಯವನ್ನು ಹೇಳಿಕೊಂಡ.

"ಅಹಲ್ಯಾ ತುಂಬಾ ಹೆದರಿ ಬಿಟ್ಟಿದ್ದಾಳೆ. ಮದುವೆಯಾಗಿ ಒಂದು ವರ್ಷ ಆಗಿದೆ. ಅಷ್ಟೆ. ಇದು ಮೂರನೆಯ ಅಬಾರ್ಷನ್ .... ಹೀಗಾದ್ರೆ ಅವಳ ಆರೋಗ್ಯ ಸರಿ ಹೋಗುವುದಾದ್ರೂ ಹೇಗೆ? .... ಸಧ್ಯಕ್ಕೆ ಅವಳ ಗಂಡನ ಮನೆಗೆ ಕಳಿಸದೇ ಇರೋದೆ ಒಳ್ಳೇದು" ಆಕೆ ಅಂದಳು.

"ಅವರ ಮನೆಯವರು ಒಪ್ಪಬೇಕಲ್ಲ. ಅವರ ಹತ್ರ ಮಾತಾಡಿ ಪ್ಲೀಸ್ .... ಇಲ್ಲಿ ನಮ್ಮ ಮನೆಯಲ್ಲಿ ಆಕೆ ಅಡಿಗೆಯವರು .... ಯಾವ ಅನುಕೂಲಗಳಿಲ್ಲ."

"ಅವರು ಬೇರೆ ಎಲ್ಲಿಯಾದ್ರೂ ಇರ್ಲಿ. .... ಆದರೆ, ಗಂಡ ಹೆಂಡತಿ ಸಧ್ಯಕ್ಕೆ ಒಟ್ಟಿಗೆ ಇರುವಂತಿಲ್ಲ. .... ಅವಳು ಮತ್ತೆ ತಕ್ಷಣವೇ ಗರ್ಭಿಣಿ ಆಗಬಾರದು .... ಅದರಿಂದ ಇವಳ ಜೀವಕ್ಕೇ ಅಪಾಯ." ರಾಮನಾಥ ಮುಜಗರಗೊಂಡ. ಇದನ್ನೆಲ್ಲಾ ಈಕೆ ನನ್ನ ಬಳಿ ಹೇಳಿದ್ರೆ ಏನುಪಯೋಗ ಅಂತೆನ್ನಿಸಿತು.

"ಅವರು ಬಂದ್ಮೇಲೆ ನಿಮ್ಮ ಹತ್ರಕ್ಕೆ ಕಳಿಸ್ತೀನಿ ...." ಎಂದು ಹೇಳಿ ಕೈಮುಗಿದು ಎದ್ದ. ತಾನ್ಯಾವ ಫಜೀತೀಲಿ ಸಿಕ್ಕಿ ಬಿದ್ದೆ ಅಂತೆನ್ನಿಸಿತು.

* * *

ಅಹಲ್ಯಾಳನ್ನು ಡಿಸ್ಚಾರ್ಜ್ ಮಾಡಿಸಿಕೊಂಡು ಮನೆಗೆ ಕರೆತಂದಿದ್ದರು. ಅವಳ ಆರೋಗ್ಯ ಸ್ವಲ್ಪ ಮಟ್ಟಿಗೆ ಸುಧಾರಿಸಿತ್ತು. ತಾಯಿಯ ಜೊತೆಯಲ್ಲಿ ತಾನು ಹೋಗುವುದಿಲ್ಲವೆಂದು ಬಿಟ್ಟಳು. ಅಮ್ಮ ಬಲವಂತ ಮಾಡಿ ಗಂಡನ ಮನೆಗೆ ಕಳಿಸಿ ಬಿಡ್ತಾಳೆ. ಅಲ್ಲಿ ಅತ್ತೆಯ ಮನೆಯಲ್ಲಿ ತನಗೆ ಯಾವ ಸುಖವೂ ಇಲ್ಲ" ಎಂದು ಅತ್ತಿದ್ದಳು.

"ಇಲ್ಲಿ ಅಜ್ಜಿ ಮನೇಲಿ ಏನು ಸುಖ ಸುರಿಯುತ್ತಿದೆ ಅಂತ ಇಲ್ಲಿರ್ತೀಯಾ .... ಮದುವೆ ಮಾಡ್ಕೊಟ್ಮೇಲೆ, ಕಷ್ಟವೋ ಸುಖವೋ ಗಂಡನ ಮನೇಲಿರ್ಬೇಕಾದದ್ದು ನಿನ್ನ ಧರ್ಮ ಎಂದು ಉಪದೇಶ ಮಾಡಿದ್ದಳು.

"ನೀನು ಬಲವಂತ ಮಾಡಿದ್ರೆ ನಾನು ಸುಟ್ಕೊಂಡು ಸತ್ಹೋಗ್ತೀನಿ" ಅಂತ ಇವಳೂ ಹೆದರಿಸಿದ್ದಳು. ರಾಮನಾಥನಿಗೆ ಈ ವಿಷಯಗಳನ್ನೂ ತಾಯಮ್ಮ ಹೇಳಿದ್ದಳು.

"ನಾನೇನ್ಮಾಡ್ಲಿ ಸಾರ್ .... ಮಗಳಿಗೆ ಒಂಥರಾ ಭಯ .... ಅಹಲ್ಯಾ ಚಿಕ್ಕೋಳು

ವಿವೇಕ ಸಾಲದು. ನೀವಾದ್ರೂ ತಿಳುವಳಿಕೆ ಹೇಳಿ. ಇಲ್ಲಿ ಎಷ್ಟು ದಿನಾಂತ ಇರೋಕೆ ಆಗುತ್ತೆ?"

"ಎಷ್ಟು ದಿನಗಳಾದ್ರೂ ಇಲ್ಲಿ ಇರ್ಲಿ ಬಿಡಿ .... ಮೊದಲು ಆರೋಗ್ಯ ಮುಖ್ಯ .... ಹಣ್ಣು ಹಾಲು ಟಾನಿಕ್ ಕೊಟ್ಟು ಉಪಚಾರ ಮಾಡಿ .... ಅವಳ ಗಂಡನ ಹತ್ರ ಡಾಕ್ಟರು ಮಾತನಾಡ್ತೀನಿ ಅಂದಿದಾರೆ .... ಅವರುಗಳು ಯಾವಾಗ ಬರ್ತಾರೆ?"

"ಏನೂ ಗೊತ್ತಿಲ್ಲ. ಅವರುಗಳು ಗಲಾಟೆ ಮಾಡ್ದೇ ಇರ್ತಾರಾ ಸಾರ್ .... ಮೂರನೇ ಸಾರಿಯೂ ಹೀಗಾಗಿದೆ. ಸರಿಯಾಗಿ ನೋಡ್ಕೊಳ್ಳೋಕೆ ಆಗ್ದಿದ್ಮೇಲೆ ಯಾಕೆ ಕರ್ಕೊಂಡು ಹೋದ್ರಿ ಅಂತ ಬೈಯಲ್ವಾ?"

"ಅದರಲ್ಲಿ ನಿಮ್ಮ ತಪ್ಪೇನಿದೆ? .... ಹೀಗಾಗುಕ್ಕೆ ಏನು ಕಾರಣ ಅಂತ ಡಾಕ್ಟರಿಗೆ ಗೊತ್ತಿರುತ್ತೆ. ನೀವ್ಯಾಕೆ ಹೆದರ್ತೀರಿ?"

"ಇಲ್ಲಾ ಸಾರ್.... ಎಷ್ಟಾಗಲೀ ಈಗ ಇವಳು ಅವರ ವಸ್ತು .... ಅವರಿಗೆ ಅನ್ನೋಕೆ ಅಧಿಕಾರ ಇರುತ್ತೆ"

"ಹಾಗಾದ್ರೆ ನಿಮಗೆ ಏನೂ ಅಧಿಕಾರವಿಲ್ಲದಿದ್ರೆ ಇಲ್ಲಿಗ್ಯಾಕೆ ಕಳ್ಸಿದ್ರು? .... ಡಾಕ್ಟರು ಏನಂದ್ರು ಗೊತ್ತಾ? .... ಅಹಲ್ಯಾಳ ಆರೋಗ್ಯ ತುಂಬಾ ಸೂಕ್ಷ್ಮವಾಗಿದೆ. ಸಧ್ಯಕ್ಕೆ ಗಂಡನ ಮನೆಗೆ ಕಳಿಸ್ದೇ ಇರೋದೆ ವಾಸಿ ಅಂತಾಂದ್ರು"

"ಹಾಗೇನಾದ್ರೂ ಹೇಳಿದ್ರೆ, ಎಳ್ಕೊಂಡು ಹೋಗ್ತಾನೆ .... ಮದ್ವೆ ಆದ್ಮೇಲೆ ಅವರು ಹೇಳಿದ್ಹಾಗೆ ಕೇಳ್ದಿದ್ರೆ ತಪ್ಪಾಗುಲ್ವಾ?"

"ಏನೂ ತಪ್ಪಾಗುಲ್ಲ .... ಅವರಿಗೆ ತಿಳುವಳಿಕೆ ಬೇಡ್ವಾ? ....ಅಹಲ್ಯಾ ಹೆದರಿದಾಳೆ ಅಂತೀರಿ. ಹೆದರಿಕೆಯಿಂದ ಏನಾದ್ರೂ ಮಾಡ್ಕೊಂಡ್ರೆ ಏನ್ಮಾಡ್ತೀರಿ!"

"ಹಾಗಾದ್ರೆ, ಅಹಲ್ಯಾಳ ಅತ್ತೆ ಮನೆಯವರ ಹತ್ರ ನೀವು ಮಾತಾಡ್ತೀರಾ ಸಾರ್ ....!"

"ನಾನು ಹೇಗೆ ಮಾತಾಡ್ಲೀ .... ನನಗೂ ಇದಕ್ಕೂ ಏನು ಸಂಬಂಧ?"

"ಹಾಗೆನ್ಬೇಡಿ ಸಾರ್ .... ನೀವು ತಿಳುವಳಿಕಸ್ಥರು .... ಹೇಳಿ ನೋಡಿ ...."

"ಹೂಂ. ಸರಿ, ಅವರು ಬಂದ್ಮೇಲೆ ನಂಗೆ ತಿಳಿಸಿ." ಎಂದಿದ್ದ.

* * *

"ನನ್ನ ಮೊಮ್ಮಗಳ ಗಂಡ ಬಂದಿದಾರೆ, ಅಹಲ್ಯಾನ್ನ ಕರ್ಕೊಂಡು ಹೋಗೋಕೆ. ಇವಳು ಹೋಗುಲ್ಲ ಅಂತ ಹಠ ಮಾಡ್ತಿದಾಳೆ. ನೀವು ಸ್ವಲ್ಪ ತಿಳುವಳಿಕೆ ಹೇಳಿ ಸಾರ್" ತಾಯಮ್ಮ ರಾಮನಾಥನನ್ನು ಕೇಳಿಕೊಂಡಳು. ರಾಮನಾಥ ಅವರ ಮನೆಗೆ ಬಂದ. ಅಹಲ್ಯಾ ಅಳುತ್ತಾ ಕುಳಿತಿದ್ದಳು. ಅವಳ ಗಂಡ ದುರುದುರು ಅವಳನ್ನೇ ನೋಡುತ್ತಿದ್ದ. ಅವನ ವರ್ತನೆಯಲ್ಲೇ ಅವನು ಕ್ರೂರಿ ಎಂದು ಅರಿವಾಗುತಿತ್ತು.

"ಅವರು ಈಗಲೇ ಬರುಲ್ಲ ಅಂತಿದ್ದಾರಲ್ಲ. ಸುಮ್ಮನೇ ಯಾಕೆ ಬಲವಂತ ಮಾಡ್ತೀರಿ? ಈಗಿನ್ನೂ ಹುಷಾರಾಗ್ತಿದಾರೆ" ಎಂದ ಅವನನ್ನು ಕುರಿತು,

"ಅವಳು ನನ್ನ ಹೆಂಡ್ತಿ .... ಆಗುಲ್ಲ ಅಂತಂದ್ರೆ ಎತ್ಕೊಂಡು ಹೋಗ್ತೀನಿ. ಇದು ನಮ್ಮ ಮನೆ ವಿಷಯ ನೀವು ಬಾಯಿ ಹಾಕ್ಬೇಡಿ" ಅಂತಂದ.

"ಇರಬಹುದು, ಆದರೂ, ಡಾಕ್ಟರು ಹೇಳಿದ್ದನ್ನು ಕೇಳಿ. ಇವರ ಆರೋಗ್ಯ ಮೊದಲು ಸುಧಾರಿಸಲಿ"

"ಅವಳ ಆರೋಗ್ಯಾನ ನೋಡ್ಕೊಳ್ಳೋಕೆ ನಾನಿದೀನಿ, ನೀವ್ಯಾರು?"

"ನಾನು ಎಲ್ಲಿಗೂ ಹೋಗುಲ್ಲ. ಇಲ್ಲೇ ಇರ್ತೀನಿ, ಹಾಗಂತ ಹೇಳ್ಬಿಡಿ ಸಾರ್" ಅಹಲ್ಯಾ ಗೋಗರೆದಳು.

"ಏನೇ ನನಗಿಂತ ಇವನೇ ಹೆಚ್ಚಾದ್ನ .... ಇಲ್ಲಿಯ ಸುಖ ಹೆಚ್ಚಾಯ್ತಾ? .... ಅಜ್ಜಿ ಮನೆ ಅಂತ ಬಂದು ಇಲ್ಲಿ ಇವನ ಹತ್ರ ಚಕ್ಕಂದ ಆಡ್ತಿದೀಯಾ ...."

"ನೋಡಿ, ಹೀಗೆಲ್ಲಾ ಮಾತಾಡ್ಬೇಡಿ. ನಾನು ಸುಮ್ಮನಿರಲ್ಲ"

"ಏನು ಮಾಡ್ತೀಯಯ್ಯಾ .... ಇವಳು ನನ್ನ ಹೆಂಡ್ತಿ. ನಿನ್ನ ಸೂಳೆಯಲ್ಲ ...." ರಾಮನಾಥ ಕೋಪದಿಂದ ಅವನ ಕೆನ್ನೆಗೆ ಹೊಡೆದ.

"ಮರ್ಯಾದೆಯಾಗಿ ಮಾತಾಡಿದ್ರೆ ನಿಂಗೆ ಅಹಂಕಾರ. ಅವಳು ಬರುಲ್ಲ ಹೋಗು .... ಬಲವಂತ ಮಾಡಿದ್ರೆ ಪೋಲೀಸರನ್ನ ಕರೆಸ್ತೀನಿ"

"ಏನಯ್ಯಾ ಹೆದರಿಸ್ತೀಯಾ .... ನನ್ನ ಹೆಂಡ್ತೀನ ಮರಳು ಮಾಡಿದೀಯ ಅಂತ ನಾನೂ ಕೇಸ್ ಹಾಕ್ತೀನಿ"

"ಏನ್ಬೇಕಾದ್ರೂ ಮಾಡ್ಕೋ .... ಇದು ನನ್ನ ಮನೆ. ಇಲ್ಲಿ ನಿಂಗೆ ಯಾವ ಅಧಿಕಾರವೂ ಇಲ್ಲ. ಯಾವ ಬಲವಂತವೂ ನಡೆಯುಲ್ಲ" ಅವನು ಸಿಟ್ಟಿನಿಂದ ಅಹಲ್ಯೆಯನ್ನು ಎಳೆದ. ಅವಳು ಕಿರುಚಿಕೊಂಡು ರಾಮನಾಥನ ಕಡೆ ದೈನ್ಯದಿಂದ ನೋಡಿದಳು. ರಾಮನಾಥ ಅವಳನ್ನು ಎಳೆದು ಅವನಿಂದ ಬಿಡಿಸಿ ಅವನನ್ನು ಕತ್ತು ಹಿಡಿದು ಆಚೆ ತಳ್ಳಿದ.

ಸ್ವಲ್ಪ ಹೊತ್ತಿನಲ್ಲಿ ಅವನು ಪೋಲೀಸರನ್ನು ಕರೆತಂದ. ರಾಮನಾಥ ನಡೆದ ವಿಷಯವನ್ನು ತಿಳಿಸಿದ. ಡಾಕ್ಟರು ಹೇಳಿದುದನ್ನು ಹೇಳಿದ. ಅಹಲ್ಯಾ ತಾನು ಹೋಗುವುದಿಲ್ಲವೆಂದು ಹಠ ಹಿಡಿದಳು. ಪೋಲೀಸರು ಅವಳ ಗಂಡನನ್ನು ಬೆದರಿಸಿ ಕಳಿಸಿದ್ದರು. ತಾಯಮ್ಮ ಕಂಗೆಟ್ಟಿದ್ದಳು. ಮೊಮ್ಮಗಳನ್ನು ದೂಷಿಸಿದ್ದಳು.

ಅಹಲ್ಯಾ ತಾಯಿಯೊಡನೆ ಅವಳ ಮನೆಗೆ ಹೊರಟಳು. ರಾಮನಾಥ ಸಾಕಷ್ಟು ಹಣವನ್ನು ಕೊಟ್ಟ. ನಿಮ್ಮ ಅಳಿಯ ಮತ್ತೆ ಬಂದು ತಗಾದೆ ತೆಗೆಯಬಹುದು. ಅಹಲ್ಯಾಗೆ ಇಷ್ಟವಿಲ್ಲದಿದ್ದರೆ ಅವರ ಮನೆಗೆ ಬಲವಂತವಾಗಿ ಕಳಿಸಬೇಡಿ. ಅಲ್ಲಿ

ಅವಳ ಜೀವನ ನರಕವಾಗುತ್ತದೆ" ಎಂದಿದ್ದ.

* * *

ಒಂದೇ ವಾರಕ್ಕೆ ಅಹಲ್ಯಾ ಅಜ್ಜಿಯ ಮನೆಗೆ ಬಂದಿದ್ದಳು. ಡಾಕ್ಟರನ್ನು ನೋಡಲು ಬಂದಿದ್ದೇನೆಂದು ಹೇಳಿದ್ದಳು. ರಾಮನಾಥ ಒಳಗೊಳಗೆ ಖುಷಿಗೊಂಡ..... ತಾನೇ ಅವಳನ್ನು ಡಾಕ್ಟರರ ಬಳಿಗೆ ಕರೆದೊಯ್ದು ಚೆಕಪ್ ಮಾಡಿಸಿದ.

"ನೀವು ತುಂಬಾ ಒಳ್ಳೆಯವರು ಸಾರ್. ನಿಮ್ಮಲ್ಲಿರುವ ಗುಣಗಳಲ್ಲಿ ಒಂದು ಗುಣವೂ ನನ್ನ ಗಂಡನಲ್ಲಿಲ್ಲ" ಎಂದಿದ್ದಳು.

"ಮದುವೆಯಾಗಿ ಎಷ್ಟು ವರ್ಷಗಳಾಯ್ತು?"

"ಒಂದು ವರ್ಷದ ಮೇಲೆ ಎರಡು ತಿಂಗಳಾಯ್ತು .... ನನ್ನ ಗಂಡ ಕ್ರೂರಿ ಸಾರ್. ಹೊಡೆದು ಬಡಿದು ಸತಾಯಿಸ್ತಾರೆ."

"ಡೈವೋರ್ಸ್ ಯಾಕೆ ತಗೋಬಾರ್ದು?"

"ನಾನೂ ಅದನ್ನೇ ಯೋಚಿಸ್ತಿದೀನಿ. ಆದರೆ ಅಮ್ಮ, ಅಜ್ಜಿ ಇಬ್ಬರೂ ಒಪ್ಪೊಲ್ಲ .... ಗಂಡನನ್ನು ಬಿಟ್ಟು ಬಂದರೆ, ಮನೇಲಿ ಇಟ್ಕೊಳುಲ್ಲ. ನಾನು ಎಲ್ಲಿ ಇರಲಿ! ...."

"ನೀವು ಇಲ್ಲಿ ಅಜ್ಜಿ ಜತೇಲಿ ಇರಬಹುದು. ನಾನು ತಾಯಮ್ಮನ ಹತ್ರ ಮಾತಾಡ್ತೀನಿ" ಅವಳು ಸಂತಸಗೊಂಡು ಮುಗುಳ್ನಕ್ಕಳು. ಅವನ ಹೃದಯ ಅರಳಿತ್ತು. ಅವನೂ ಪ್ರತಿಯಾಗಿ ಮುಗುಳ್ನಕ್ಕಿದ್ದ. ತನಗೆ ಪರಿಚಯವಿದ್ದ ಲಾಯರ್ರ ಬಳಿ ಮಾತನ್ನಾಡಿ, ಡೈವೋರ್ಸ್‌ಗೆ ನೋಟೀಸ್ ಕೊಡಿಸಿದ್ದ. ಈ ಸಮಯದಲ್ಲಿ ಇಬ್ಬರೂ ಪರಸ್ಪರ ಪ್ರೀತಿಸಲಾರಂಭಿಸಿದ್ದರು. ತಾಯಮ್ಮನ ಗಮನಕ್ಕೆ ಬಂದಾಗ, ಅವಳು ಬೇಸರಗೊಂಡಿದ್ದಳು. ಮೊಮ್ಮಗಳಿಗೆ ಛೀಮಾರಿ ಹಾಕಿದ್ದಳು.

"ನಿನ್ನಿಂದ ನಮಗೆ ಮರ್ಯಾದೆ ಇಲ್ಲ" ಎಂದು ಬೈದಿದ್ದಳು,

"ಅಂಥದ್ದೇನೂ ಇಲ್ಲ ಅಜ್ಜಿ.... ನಿಮಗ್ಗೊತ್ತಿಲ್ವ? ಸಾರ್ ಒಳ್ಳೆಯವರು ಅಂತ. ಅವರು ನಮಗೆ ಎಲ್ಲಾ ರೀತಿಯಿಂದಲೂ ಸಹಾಯ ಮಾಡ್ತಿದಾರೆ.... ನಿಂಗ್ಯಾಕೆ ಕೋಪ?"

"ಕೋಪ ಏನಿಲ್ಲ. ಮುಂದೆ ನಿನ್ನ ಗತಿ ಏನು ಅಂತ ಚಿಂತೆ?.... ನಮಗೆ ತಕ್ಕ ನಾದ ವರನನ್ನು ನೋಡಿದ್ದೆವು. .... ಈಗ ಗಂಡನನ್ನು ಬಿಟ್ಟವಳು ಎಂಬ ಬಿರುದು ಬೇರೆ .... ಕಾಮುಕರ ಕಣ್ಣಿನಿಂದ ನಿನ್ನನ್ನ ಮುಚ್ಚಿಡೋಕೆ ಆಗುತ್ತಾ? ಜನರ ಬಾಯಿಯನ್ನು ಮುಚ್ಚಿಸೋಕೆ ಆಗುತ್ತಾ? ...."

ಅಜ್ಜಿ ಬೈದುದನ್ನು ಅಹಲ್ಯಾ ರಾಮನಾಥನಿಗೆ ಹೇಳಿದ್ದಳು. ನೀವು ನಂಗೆ ಇಷ್ಟು ಸಹಾಯ ಮಾಡ್ತಿದೀರಲ್ಲ .... ನಿಮ್ಮ ಮನಸ್ನಲ್ಲಿ ಏನಿದೆ ಅಂತ ಹೇಳಿ? ...."

"ನಿಂಗೆ ಇನ್ನೊಂದು ಮದುವೆ ಮಾಡ್ತೀನಿ ...."

"ನಾನು ಮತ್ತೆ ಮದುವೆಯಾಗಿ ಎಲ್ಲಿಗೂ ಹೋಗುಲ್ಲ. ಇಲ್ಲೇ ಇರ್ತೀನಿ"

"ಹೀಗೆ .... ಹೀಗೆ ಎಷ್ಟು ವರ್ಷ ಅಂತ ಇರ್ತೀಯಾ?"

"ಈಗ ನೀವು ಇಲ್ವಾ?.... ಗಂಡಸರು ಒಂಟಿಯಾಗಿ ಇರಬಹುದಂತೆ, ಹೆಂಗಸರು ಯಾಕೆ ಇರುಕ್ಕಾಗುಲ್ಲ? ...."

"ಇರುಕ್ಕೆ ಆಗೋದಾದ್ರೆ ಇರು. ಜೀವಮಾನವೆಲ್ಲಾ ನಾನು ನೋಡ್ಕೋಳ್ತೀನಿ."

"ಅವಳನ್ನೇ ಪ್ರೀತಿಯಿಂದ ಮೆಚ್ಚುಗೆಯಿಂದ ನೋಡಿದ, ಅವಳ ಆರೋಗ್ಯ ಚೆನ್ನಾಗಿ ಸುಧಾರಿಸಿತ್ತು. ಕೆನ್ನೆಗಳು ಫಳ ಫಳ ಹೊಳೆಯುತ್ತಿತ್ತು. ಅವಳ ಕೆನ್ನೆಗಳನ್ನು ಚುಂಬಿಸಬೇಕೆಂಬ ಬಯಕೆಯನ್ನು ಅದುಮಿಟ್ಟುಕೊಂಡ.

* * *

ಅವಳಿಗೆ ಡೈವೋರ್ಸು ಸಿಕ್ಕ ದಿನ, ರಾಮನಾಥನಿಗೆ ಏನೋ ಒಂದು ಥರದ ಖುಷಿಯಾಗಿತ್ತು. ಅವಳೂ ಚಪ್ಪಾಳೆ ತಟ್ಟಿ ತನ್ನ ಸಂತಸವನ್ನು ವ್ಯಕ್ತ ಪಡಿಸಿದ್ದಳು. ತಾಯಮ್ಮ ಮಾತ್ರ ಅತ್ತಿದ್ದಳು.

"ಸಾರ್ .... ನೀವು ಹೀಗೆ ವಿಚ್ಛೇದನಕ್ಕೆ ಬೆಂಬಲ ಕೊಡುವ ಬದಲು ಅವಳಿಗೆ ತಿಳುವಳಿಕೆ ಹೇಳಿದ್ದರೆ ಚೆನ್ನಾಗಿತ್ತು. ನಾವು ಬಡವರು ಸಾರ್ .... ಇವಳಿನ್ನು ಚಿಕ್ಕವಳು ....ಯೌವನವಿದೆ. ಮೈತುಂಬಾ ಆಸೆಗಳನ್ನಿಟ್ಟುಕೊಂಡು ಹೇಗೆ ಜೀವನ ನಡೆಸ್ತಾಳೆ. ನಂಗೆ ಇವಳದ್ದೇ ಚಿಂತೆ ಆಗಿದೆ ...."

"ಚಿಂತೆ ಯಾಕೆ ತಾಯಮ್ಮ? .... ಹೀಗೆ ಇರ್ತಾಳೆ ಬಿಡಿ. ಬೇಕಾದರೆ ಕಾಲೇಜಿಗೆ ಸೇರ್ಕೊಂಡು ಓದಲಿ ....ಕೆಲಸಕ್ಕೆ ಸೇರ್ಕೊಳ್ಳಲಿ ...."

"ನೀವು ಹೇಳುವಷ್ಟು ಸುಲಭವಲ್ಲ. ನೆಂಟರಿಷ್ಟರು ಆಡ್ಕೋತಾರೆ."

"ಹಾಗಾದ್ರೆ ಮತ್ತೆ ಮದುವೆಯನ್ನು ಮಾಡಿ, ಒಳ್ಳೇ ವರನನ್ನು ಹುಡುಕಿ, ನಾನು ಸಹಾಯ ಮಾಡ್ತೀನಿ ...."

"ಎಷ್ಟೂಂತ ಸಹಾಯ ಮಾಡ್ತೀರಾ? ಈಗಾಗ್ಲೆ ಸಾಕಷ್ಟು ಋಣ ನನ್ನ ಮೇಲೆ ಭಾರವಾಗಿದೆ."

"ಚಿಂತೆ ಮಾಡ್ಬೇಡಿ .... ತಾಯಮ್ಮ. ಏನೋ ಒಂದು ಪರಿಹಾರ ಸಿಕ್ಕೇ ಸಿಗುತ್ತೇ ....ಹಾಗೆ ಹೇಳಿದರೂ, ಮನದ ಮೂಲೆಯಲ್ಲಿ ಏನೋ ನೋವು. ತಾನು ಅವಳನ್ನು ಇಷ್ಟ ಪಟ್ಟಿದೀನಿ ....ಮದುವೆಯಾಗ್ತೀನಿ ಎಂದು ಹೇಳಲಾಗದ ಹಿಂಜರಿಕೆ.

"ಸ್ವಲ್ಪ ಹೊತ್ತಿನಲ್ಲಿ ಅಹಲ್ಯಾ ಅವನ್ನು ಹುಡುಕಿಕೊಂಡು ಬಂದಳು. ಅಜ್ಜಿ ಹತ್ರ ಏನು ಹೇಳಿದ್ರಿ?.... ಅಜ್ಜಿ ನಂಗೆ ಮರು ಮದುವೆ ಮಾಡ್ತಾರಂತೆ ನೀವು ಯಾರು ಆ ಮಾತನ್ನು ಹೇಳೋಕೆ? ...."

"ತಪ್ಪೇನು ಅದರಲ್ಲಿ! ನನಗೆ ಅನ್ನಿಸಿದ್ದನ್ನು ಹೇಳಿದೆ ...."

"ನಿಜ ಹೇಳಿ .... ನನ್ನನ್ನು ಬೇರೊಬ್ಬನಿಗೆ ಮದುವೆ ಮಾಡಿ ಕಳಿಸಿಕೊಟ್ಟು

ನೀವು ಹಾಯಾಗಿರ್ತೀರಾ"

"ಹೀಗಾಕೆ ಕೇಳ್ತಿದೀಯಾ? ...."

"ನೀವು ನನ್ನನ್ನ ಪ್ರೀತಿಸ್ತಿದೀರಿ ಅಂತ ನಂಗೊತ್ತು.... ನನಗೋಸ್ಕರವೇ ಇಷ್ಟನ್ನೆಲ್ಲಾ ಮಾಡಿರೋದು .... ನಂಗೆ ಗೊತ್ತು ...."

"ಅಂದರೇ! ನಿನಗೆ ನನ್ಮೇಲೆ ಅನುಮಾನ ಅಲ್ವಾ!"

"ಅನುಮಾನವಲ್ಲ, ನಿಜ ಅಂತ ಗೊತ್ತು, ನಿಮ್ಮ ಕಣ್ಣಿನಲ್ಲಿ ತುಳುಕುವ ಪ್ರೀತಿ ಮುಖಗಳಲ್ಲಿ ಸುರಿಯುವ ಅಮೃತ .... ಎಲ್ಲಾ ನನಗಾಗಿ ಅಂತ ನಂಗೆ ಗೊತ್ತು. ನಾವು ಆದಷ್ಟು ಬೇಗ ಮದುವೆಯಾಗಿ ಬಿಡೋಣ"

"ಮದುವೆ ಸಾಧ್ಯವಿಲ್ಲ ಅಹಲ್ಯಾ! ನಂಗೂ ನಿಂಗೂ ವಯಸ್ಸಿನ ಅಂತರ ಜಾಸ್ತಿ ...."

"ಪ್ರೀತಿಗೆ ವಯಸ್ಸಿನ ಅಂತರವಿಲ್ಲ .... ಅಲ್ಲದೇ ಆ ಅಂತರವಿರುವುದರಿಂದಲೇ ನೀವು ನನ್ನನ್ನು ಹೆಚ್ಚು ಪ್ರೀತಿಸ್ತೀರಿ. ನಾನು ತುಂಬಾ ಗೌರವಿಸ್ತೀನಿ"

"ಬಹಳ ಜಾಣೆ ಥರ ಮಾತಾಡ್ತೀಯಲ್ಲಾ"

"ಸಹವಾಸ ದೋಷ. ನಿಮ್ಮಿಂದ ನಾನು ಸಾಕಷ್ಟು ತಿಳುವಳಿಕೆಯನ್ನು ಪಡೆದಿದೀನಿ"

"ಏನೇ ಇರಲಿ, ನನ್ನನ್ನು ಮದುವೆಯಾದರೆ ನೀನು ಸುಖವಾಗಿರೋಲ್ಲ"

"ಖಂಡಿತಾ ಸುಖವಾಗಿರ್ತೀನಿ. ಕಷ್ಟ ಅಂಥ ಅಂದ್ರೆ ಏನೂಂತ ನಂಗೆ ಚೆನ್ನಾಗಿ ಅರಿವಿಗೆ ಬಂದಿದೆ ...."

"ಒಳ್ಳೇ ಹುಡುಗಿ ನೀನು...." ವಯಸ್ಸಿಗೆ ಮೀರಿದ ಮಾತುಗಳನ್ನಾಡ್ತೀಯಲ್ಲ."

"ಹೌದು, ಅನುಭವ ನನ್ನನ್ನು ಬೆಳೆಸಿದೆ. ಜ್ವರ ಬಂದು ಮಲಗಿದ್ದಾಗ, ಆಸ್ಪತ್ರೆಯಲ್ಲಿದ್ದಾಗ, ನೀವೇ ನನ್ನ ಪತಿಯಾಗಿದ್ದಿದ್ದರೆ ಅಂತ ಹಂಬಲಿಸಿದ್ದೆ. ಆ ಮಾತು ಈಗ ನಿಜವಾಗ್ತಿದೆ. ಅಹಲ್ಯಾ ಅಂತ ಹೆಸರನ್ನಿಟ್ಟಿದ್ದರು ....ಇದುವರೆಗೂ ಶಾಪಗ್ರಸ್ಥಳಾಗಿದ್ದೆ, ಈಗ ಶಾಪ ವಿಮೋಚನೆಯ ಕಾಲ ಬಂದಿದೆ."

"ಒಳ್ಳೆಯ ಅಹಲ್ಯಾ ನೀನು .... ನಾನು ನಿನಗೆ ತಕ್ಕವನಲ್ಲ ...."

"ಹಾಗೆನ್ಬೇಡಿ .... ನೀವು ನನ್ನ ಪಾಲಿನ ಶ್ರೀರಾಮ ಚಂದ್ರ, ...ನನ್ನ ದೇವರು" ಎನ್ನುತ್ತಾ ಅವನ ಕಾಲಿಗೆ ನಮಸ್ಕರಿಸಿದಳು.

"ಛೆ. ಛೇ. . ಹಾಗೆಲ್ಲಾ ಮಾಡ್ಬೇಡ .... ನಾನು ದೇವರೂ ಅಲ್ಲ, ನೀನು ಶಾಪ ಗ್ರಸ್ಥೆಯೂ ಅಲ್ಲ. ನಾವು ಮನುಷ್ಯರು.... ಮನುಷ್ಯರಂತೆಯೇ ಇರೋಣ .... ನಾನು ತಾಯಮ್ಮನ ಹತ್ರ ಮಾತಾಡ್ತೀನಿ."

"ಬೇಡ, ಅಜ್ಜಿ ಖಂಡಿತಾ ಒಪ್ಗೆ ಕೊಡುಲ್ಲ, ಅವರಿಗೆ ತಿಳಿಯದಂತೆ ಮದುವೆ

ಯಾಗೋಣ. ಅಮೇಲೆ ಅವರಿಗೆ ಹೇಳೋಣ ...."

"ತಾಯಮ್ಮ ನನಗೆ ತಾಯಿಯ ಸಮಾನ. ನಾನು ಅವರನ್ನು ಒಪ್ಪಿಸ್ತೀನಿ. ನನ್ನನ್ನ ಅವರು ಕೆಟ್ಟವರು ಅಂತ ಅಂದ್ಕೋಬಾರ್ದು."

"ನಿಮ್ಮಿಷ್ಟ" ಎಂದಿದ್ದಳು, ಅವಳ ಎದೆ ಹೊಡೆದುಕೊಂಡಿತ್ತು.

* * *

"ತಾಯಮ್ಮ, ಇವತ್ತೇನಾದ್ರೂ ಸಿಹಿ ತಿಂಡಿ ಮಾಡಿ, ನಾನು ನಿಮಗೊಂದು ಸಿಹಿ ಸುದ್ದಿ ತಿಳಿಸ್ಬೇಕು .... ನಾನು ಮದುವೆಯಾಗೋಣ ಅಂತಿದೀನಿ"

"ಸಂತೋಷ ..." ಅವಳು ನಿರ್ಭಾವದಿಂದ ನುಡಿದಳು.

"ಹುಡುಗಿ ಯಾರು ಅಂತ ಕೇಳುಲ್ವಾ?"

"ಅಂದ್ರೇ .... ಹುಡ್ಗೀನಾ ನೋಡಿಟ್ಟು ಕೊಂಡಿದೀರಾ?" ಅವಳ ಮಾತಿನಲ್ಲಿ ನಿರಾಶೆ ತುಂಬಿತ್ತು.

"ಹೂಂ, ನೀವು ಒಪ್ಗೆ ಕೊಟ್ರೆ .... ಇವತ್ತೇ ಮದುವೆ .... ನಾನು ಅಹಲ್ಯಾಳನ್ನು ಮದುವೆಯಾಗ್ಬೇಕು ಅಂತಿದೀನಿ. ನೀವು ಒಪ್ಪಿಗೆ ಕೊಡಿ" ಅವಳು ಮೂಕಳಾದಳು.

"ಒಂದು ಘಳಿಗೆ ನನ್ನ ಎದೆ ಗುಂಡಿಗೆ ನಿಂತು ಹೋಗಿತ್ತು .... ಅಹಲ್ಯಾಳಿಗೋಸ್ಕರ ನೀವು ಎಷ್ಟು ಸಹಾಯ ಮಾಡಿದೀರಿ .... ಅವಳ ಕೈ ಬಿಡೋಲ್ಲ ಅಂತ ನಂಗೊತ್ತಿತ್ತು."

"ಅಂದ್ರೆ ....! ಬೇರೆ ಯಾರೋ, ನನ್ನ ಹೆಂಡ್ತಿಯಾಗಿ ಬಂದಿದ್ರೆ .... ಅಹಲ್ಯಾನ್ನ ದ್ವೇಷಿಸ್ತಿದ್ರೋ ಏನೋ ... ಅಂತ ತಾನೇ ನಿಮ್ಮ ಸಂಶಯ ...."

"ಹೌದು .... ಅಹಲ್ಯಾ ನಿಮಗಾಗಿ ಒದ್ದಾಡೋದನ್ನ ಕಂಡಿದ್ದೆ .... ಆದರೆ ನೀವೂ ಅವಳನ್ನು ಪ್ರೀತಿಸ್ತಿದೀರಿ ಅಂತ ನಂಗೆ ಗೊತ್ತಿರಲಿಲ್ಲ"

"ಅಹಲ್ಯಾಳ ಮೇಲೆ ನನ್ನ ದೃಷ್ಟಿ ಬಿತ್ತು .... ಅವಳ ಬಾಳು ಹಾಳಾಯ್ತು .... ಅವಳನ್ನು ಉದ್ಧರಿಸಬೇಕಾದದ್ದು ನನ್ನ ಹೊಣೆ ಎಂದು ಹೇಳಬೇಕೆಂದು ಕೊಂಡರೂ, ಹೇಳಲಾಗದೇ ಸುಮ್ಮನಿದ್ದ.

* * *

ಕೆಲವೇ ದಿನಗಳಲ್ಲಿ ಅಹಲ್ಯಾ ರಾಮನಾಥರ ಮದುವೆ ಸರಳವಾಗಿ ದೇವ ಸ್ಥಾನದಲ್ಲಿ ನೆರವೇರಿತು. ರಾಮನಾಥ ತಾಯಮ್ಮನಿಗೆ ಹೇಳಿದ. ಮನೆಗೆ ಹೋದ್ಮೇಲೆ ಮರೀದೆ ನಿಮ್ಮ ಮೊಮ್ಮಗಳಿಗೆ ದೃಷ್ಟಿ ತೆಗೆಯಿರಿ ತಾಯಮ್ಮ.... ಇನ್ಮುಂದೆ ಯಾರ ದೃಷ್ಟಿಯೂ ಅವಳ ಮೇಲೆ ಬೀಳ್ಬಾರ್ದು" ಎಂದ. ಅಹಲ್ಯಾ ನಕ್ಕಿದ್ದಳು.

"ಇವಳ ಜೀವನ ಎಲ್ಲಿ ಮುದುಡಿ ಹೋಗುತ್ತೋ ಅಂತ ಆತಂಕವಾಗಿತ್ತು. ನೀವು ಇವಳ ಪಾಲಿಗೆ ದೇವರಾಗಿ ಬಂದಿರಿ" ಆಕೆ ಹೊಗಳಿದಳು.

"ನಾನು ದೇವರಲ್ಲ .... ನನ್ನಲ್ಲೂ ಕಾಮಕ್ರೋಧಗಳಿವೆ. ಆಸೆ ಆಕಾಂಕ್ಷೆಗಳಿವೆ.

.... ನನ್ನ ಗತ ಜೀವನದ ಬಗ್ಗೆ ನಿಮಗೆ ಗೊತ್ತಿಲ್ಲ. ನನ್ನ ಮನಸ್ನಲ್ಲಿ ಏನು ನಡೀತಿತ್ತು ಅಂತ ಯಾರಿಗೂ ತಿಳಿದಿಲ್ಲ. ನಾನೊಬ್ಬ ಮುಖವಾಡವನ್ನು ಹಾಕಿಕೊಂಡಿರುವ ಮನುಷ್ಯ ಎಂದು ತನ್ನಲ್ಲೇ ಹೇಳಿಕೊಂಡ.

ಎಲ್ಲರೂ ಮನೆಗೆ ಬಂದಿದ್ದರು. ಅಹಲ್ಯಾ ರಾಮನಾಥನ ಮನೆಯನ್ನು ತುಂಬಿದಳು. ಮನದಲ್ಲಿ ಎಂದೋ ತುಂಬಿ ಹೋಗಿದ್ದಳು. ತನ್ನ ಜೀವನದ ಶಾಪಗ್ರಸ್ಥ ದಿನಗಳು ಕಳೆದುಹೋದವು ಎಂದು ಸಂತಸಗೊಂಡ. ಅವಳನ್ನು ತನ್ನ ರೂಮಿಗೆ ಕರೆದೊಯ್ದ .... ತಾನು ಅವಳಿಗೆಂದು ಈ ಮೊದಲೇ ಕೊಯ್ದು ಇಟ್ಟಿದ್ದ ಮಲ್ಲಿಗೆ ಹೂವನ್ನು ಅವಳ ತಲೆಯ ಮೇಲೆ ಹಾಕಿದ.

"ಮಲ್ಲಿಗೆ ಹೂಗಳನ್ನು ಕದ್ದು ಕೊಯ್ದುದ್ದು ಸಾಲದು ಅಂತ ನನ್ನ ಹೃದಯವನ್ನು ಕದ್ದು ಬಿಟ್ಟೆ" ಎಂದ. ಅವಳು ನಗುತ್ತಾ ಅವನೆದೆಗೊರಗಿದಳು. ಮಲ್ಲಿಗೆ ಹೂಗಳ ಸುವಾಸನೆ ರೂಮಿನ ತುಂಬಾ ಪಸರಿಸಿತ್ತು. ಮನದ ಮಲ್ಲಿಗೆ ಅರಳಿತ್ತು.

o o o o o

* * * * *

* * *

*



‘ಬರೀ ನಾಟಕ ಅಲ್ಲ...’ ಕಥಾ ಸಂಕಲನದ ಹೆಸರು. ನಾಟಕದ ರೀತಿಯಲ್ಲಿ ಪಾತ್ರಗಳಿವೆ, ದೃಶ್ಯಗಳಿವೆ, ಸಂಭಾಷಣೆಗಳಿವೆ.. ಓದುಗರನ್ನು ಓದುವುದರ ಮೂಲಕ ತಲುಪುತ್ತವೆ.

ಈ ಕಥಾ ಸಂಕಲನದಲ್ಲಿ ಹಲವಾರು ಸಣ್ಣ ಕತೆಗಳಿವೆ; ವಿಚಿತ್ರ ಎನಿಸುವ ಪಾತ್ರಗಳಿವೆ; ಅಪರೂಪದ ವಸ್ತುಗಳಿವೆ. ಆದರೂ, ಎಲ್ಲೋ ಕಾಡಿರಬಹುದಾದ, ಕೇಳಿರುವಂಥ ಅನುಭವಗಳಾಗುತ್ತವೆ. ಜನಸಾಮಾನ್ಯರಲ್ಲಿ ಆಗಬಹುದಾದ ಕಥಾ ವಸ್ತುಗಳಾದ್ದರಿಂದ, ಅತಿ ಸಮೀಪದ್ದು ಎನಿಸಬಹುದು. ದಿನನಿತ್ಯದ ಆಗುಹೋಗುಗಳಲ್ಲಿ ಚಟುವಟಿಕೆಗಳಲ್ಲಿ ಕಾಣಬಹುದಾದ ಸಂಗತಿಗಳನ್ನು ಆಯ್ದುಕೊಂಡು ಬರೆದಿರುವ ಕತೆಗಳಿವು; ಓದುಗರ ಹೃದಯವನ್ನು ತಟ್ಟುತ್ತವೆ ಎಂಬ ಭಾವನೆ ನನ್ನದು. ಕಲ್ಪನೆಯ ಪರದೆಯ ಮೇಲೆ ಮೂಡಿ ಬಂದ ಪಾತ್ರಗಳನ್ನು ಶಾಯಿಯಲ್ಲಿ ಅದ್ದಿ, ಹಾಳೆಗಳ ಮೇಲೆ ಬರೆದು, ಕತೆಯಂತೆ ಬರೆದಿರುವ ಪರಿಶ್ರಮ ನನ್ನದು. ನನ್ನ ಪರಿಶ್ರಮಕ್ಕೆ ಎಂದಿನಂತೆ ಪ್ರೋತ್ಸಾಹವನ್ನು ಅಭಿಮಾನಿ ಓದುಗರಿಂದ ಬಯಸುತ್ತೇನೆ.

– ಪದ್ಮಾಶ್ರೀಧರ್